"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

26ನೇ ಸೆಪ್ಟೆಂಬರ್ 2020
ಶನಿವಾರ

## ವಿಷಯಾನುಕ್ರಮಣಿಕೆ


1. **ಸಂತಾಪ ಸೂಚನೆ**
   ವಿಷಯ:- ಭಾರತ ಚಿತ್ರರಂಗ ಕಂಡ ಅದ್ಭುತ ಕಲಾರತ್ನ, ಗಾನ ಗಂಧರ್ವ ಡಾ:ಎಸ್.ಪಿ.ಬಾಲಸುಬ್ರಮಣ್ಯಂ ಅವರ ನಿಧನದ ಬಗ್ಗೆ.
   - ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
   - ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

2. **ಕಾರ್ಯದರ್ಶಿಯವರ ವರದಿ**

3. **ಅಜೆಂಡಾ ಪ್ರಕಾರ ಸದನದ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ**
   - ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
   - ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
   - ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
   - ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
   - ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)

4. **ವಿಧೇಯಕವನ್ನು ಹಿಂಪಡೆಯುವ ಬಗ್ಗೆ**
   **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ 2017**
   - ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
   - ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

   (ವಿಧೇಯಕವನ್ನು ಹಿಂಪಡೆಯಲಾಯಿತು)

5. **ಶಾಸನ ರಚನೆ**
   **ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**
   **ಕರ್ನಾಟಕ ಧನವಿನಿಯೋಗ (ಸಂಖ್ಯೆ 3)ವಿಧೇಯಕ, 2020**
   - ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
     (ಮುಖ್ಯಮಂತ್ರಿಗಳ ಪರವಾಗಿ)
   - ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
   - ಶ್ರೀ ಕೆ.ಎ.ತಿಪ್ಪೇಸ್ವಾಮಿ
   - ಶ್ರೀ ಮರಿತಿಬ್ಬೇಗೌಡ
   - ಶ್ರೀ ಎಸ್.ಆರ್.ಪಾಟೀಲ್(ವಿರೋದ ಪಕ್ಷದ ನಾಯಕರು)


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಪ್ರಕಾಶ್ ಕೆ.ರಾಥೋಡ್
– ಡಾ:ವೈ.ಎ.ನಾರಾಯಣಸ್ವಾಮಿ
– ಶ್ರೀ ಪಿ.ಆರ್.ರಮೇಶ್
– ಶ್ರೀ ಹೆಚ್.ಎಂ.ರಮೇಶ್‌ಗೌಡ
– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
– ಶ್ರೀ ಸಿ.ಎಂ.ಇಬ್ರಾಹಿಂ
– ಶ್ರೀ ಆರ್.ವಿ.ತಿಮ್ಮಾಪೂರ
– ಶ್ರೀ ಕೆ.ಗೋವಿಂದರಾಜು

(ವಿಧೇಯಕ ಅಂಗೀಕರಿಸಲ್ಪಟ್ಟಿತು)

6. ಪ್ರಕಟಣೆ
7. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಕರ್ನಾಟಕ ಸಾದಿಲ್ವಾರು ನಿಧಿ(ತಿದ್ದುಪಡಿ)ವಿಧೇಯಕ, 2020

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೆ.ಎ.ತಿಪ್ಪೇಸ್ವಾಮಿ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಆ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ 2020

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳುಸಚಿವರು)

(ಮುಖ್ಯಮಂತ್ರಿಗಳ ಪರವಾಗಿ)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2020

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

(ಮುಖ್ಯಮಂತ್ರಿಗಳ ಪರವಾಗಿ)

– ಶ್ರೀ ಸಿ.ಎಂ.ಇಬ್ರಾಹಿಂ
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ನಸೀರ್ ಅಹ್ಮದ್
– ಶ್ರೀ ಪಿ.ಆರ್.ರಮೇಶ್
– ಶ್ರೀ ಪ್ರಕಾಶ್ ಕೆ.ರಾಥೋಡ್
– ಶ್ರೀ ಬಿ.ಕೆ.ಹರಿಪ್ರಸಾದ್
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಎಸ್.ರವಿ
- ಶ್ರೀ ಮಾನೆ ಶ್ರೀನಿವಾಸ
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

(ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**8.** ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ

ವಿಷಯ:- ಉತ್ತರ ಕರ್ನಾಟಕದ ಮಹತ್ವದ ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗೆ ಚಾಲನೆ ನೀಡಿ ಉತ್ತರ ಕರ್ನಾಟಕ ಭಾಗದ ಸುಮಾರು 7 ಜಿಲ್ಲೆಗಳ 14.67ಲಕ್ಷ ಎಕರೆ ಪ್ರದೇಶಗಳಿಗೆ 130 ಟಿಎಂಸಿ ನೀರನ್ನೊದಗಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸುವ ಹಾಗೂ ಮಹದಾಯಿ ಯೋಜನೆಗೆ ಹೊರಡಿಸಿರುವ ಗೆಜೆಟ್ ನೋಟಿಫಿಕೇಶನ್ ರೀತ್ಯ ಈ ಯೋಜನೆಗೂ ಗೆಜೆಟ್ ನೋಟಿಫಿಕೇಷನ್ ಹೊರಡಿಸುವ ಬಗ್ಗೆ.

- ಶ್ರೀ ರಮೇಶ್ ಲ.ಜಾರಕಿಹೊಳಿ(ಜಲ ಸಂಪನ್ಮೂಲ ಸಚಿವರು)
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಆರ್.ವಿ.ತಿಮ್ಮಾಪುರ
- ಶ್ರೀ ಕೆ.ಟಿ.ತಿಪ್ಪೇಸ್ವಾಮಿ

**9.** ಶಾಸನ ರಚನೆ
ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ
ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2020

- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)
- ಶ್ರೀ ಪಿ.ಆರ್.ರಮೇಶ್
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎನ್.ಅಪ್ಪಾಜಿಗೌಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ನಸೀರ್ ಅಹ್ಮದ್
– ಶ್ರೀ ಕೆ.ಎ.ತಿಪ್ಪೇಸ್ವಾಮಿ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಆ) ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020
– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)
– ಶ್ರೀ ಪಿ.ಆರ್.ರಮೇಶ್
– ಶ್ರೀ ಬಿ.ಕೆ.ಹರಿಪ್ರಸಾದ್
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಕೆ.ಎ.ತಿಪ್ಪೇಸ್ವಾಮಿ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ಮೂರನೇ ತಿದ್ದುಪಡಿ) ವಿಧೇಯಕ 2020
– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)
– ಶ್ರೀ ಆರ್.ಪ್ರಸನ್ನ ಕುಮಾರ್
– ಶ್ರೀ ಪಿ.ಆರ್.ರಮೇಶ್
– ಶ್ರೀ ಮರಿತಿಬ್ಬೇಗೌಡ
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಕೆ.ಎ.ತಿಪ್ಪೇಸ್ವಾಮಿ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

10. ಕಾರ್ಯದರ್ಶಿಯವರ ವರದಿ

11. ಶಾಸನ ರಚನೆ
ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ
ಅ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2020
– ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
– ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
– ಶ್ರೀ ಆರ್.ಬಿ.ತಿಮ್ಮಾಪೂರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಬಸವರಾಜ ಪಾಟೀಲ್ ಇಟಗಿ
– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಮರಿತಿಬ್ಬೇಗೌಡ
– ಶ್ರೀ ಎಸ್.ರವಿ
– ಶ್ರೀ ಪಿ.ಆರ್.ರಮೇಶ್

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಆ) ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2020
– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವ ಸಬಲೀಕರಣ ಮತ್ತು ಕ್ರೀಡೆ ಸಚಿವರ ಪರವಾಗಿ)
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ )(ನಿರಸನಗೊಳಿಸುವ) ವಿಧೇಯಕ, 2020
– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
(ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರ ಪರವಾಗಿ)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಈ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿ ವರ್ಗಾವಣೆ ನಿಯಂತ್ರಣ)(ನಿರಸನಗೊಳಿಸುವ) ವಿಧೇಯಕ, 2020
ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಉಪ ಮುಖ್ಯ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರ ಪರವಾಗಿ)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಉ) ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯನಿರ್ಣಯ (ತಿದ್ದುಪಡಿ) ವಿಧೇಯಕ, 2020
– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**12. ಪ್ರಕಟಣೆ**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

13. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆಗೆ ಅವಕಾಶ ಕೋರಿ ಹಕ್ಕೊತ್ತಾಯ

ವಿಷಯ: ಬೆಂಗಳೂರು ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಮತ್ತು ಕಾವಲ್ ಬೈರಸಂಧ್ರದಲ್ಲಿ ನಡೆದಿರುವ ಗೋಲಿಬಾರ್ ಬಗ್ಗೆ

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

14. ಪ್ರಕಟಣೆ

15. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2020

– ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)
– ಶ್ರೀ ಮಾನೆ ಶ್ರೀನಿವಾಸ್
– ಶ್ರೀ ಪಿ.ಆರ್.ರಮೇಶ್
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಎನ್.ಅಪ್ಪಾಜಿಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಆ) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2020

– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
– ಶ್ರೀ ಮಾನೆ ಶ್ರೀನಿವಾಸ್
– ಶ್ರೀ ಪಿ.ಆರ್.ರಮೇಶ್
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಎನ್.ಅಪ್ಪಾಜಿಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

16. ಕಾರ್ಯದರ್ಶಿಯವರ ವರದಿ

17. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೆಯ ತಿದ್ದುಪಡಿ) ವಿಧೇಯಕ, 2020

– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)
– ಶ್ರೀ ಮಾನೆ ಶ್ರೀನಿವಾಸ್
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2020
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
– ಶ್ರೀ ಎಸ್.ರವಿ
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀಹೆಚ್.ಎಂ.ರಮೇಶ್ ಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ, 2020
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
– ಶ್ರೀ ಆರ್.ಪ್ರಸನ್ನ ಕುಮಾರ್
– ಶ್ರೀ ಪಿ.ಆರ್.ರಮೇಶ್

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಈ) ಕೈಗಾರಿಕಾ ವಿವಾದಗಳು ಮತ್ತು ಇತರ ಕೆಲವು ಕಾನೂನುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2020
– ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್(ಕಾರ್ಮಿಕ ಮತ್ತು ಸಕ್ಕರೆ ಸಚಿವರು)
– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಆಯನೂರು ಮಂಜುನಾಥ್
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಪಿ.ಆರ್.ರಮೇಶ್
– ಶ್ರೀ ಹೆಚ್.ಎಂ.ರಮೇಶ್‌ಗೌಡ
– ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಬಿ.ಕೆ.ಹರಿಪ್ರಸಾದ್
– ಶ್ರೀ ಆರ್.ಬಿ.ತಿಮ್ಮಾಪೂರ್

(ವಿಧೇಯಕ ತಿರಸ್ಕರಿಸಲ್ಪಟ್ಟಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೇ ತಿದ್ದುಪಡಿ) ವಿಧೇಯಕ, 2020
– ಶ್ರೀ ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)
– ಶ್ರೀ ಮಾನೆ ಶ್ರೀನಿವಾಸ್
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಪಿ.ಆರ್.ರಮೇಶ್
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಕಾಂತರಾಜ್(ಬಿಎಂಎಲ್)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**18.** ನಿಯಮ **330**ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ

ಅ) ವಿಷಯ:– ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿಗೆ ಎಂ.ಸಿ.ಐ.ನವರು ಅನುಮತಿ ನೀಡಿದ್ದು, ಸದರಿ ಕೋರ್ಸುಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ಬೋಧಕ ಸಿಬ್ಬಂದಿಗಳ ಕೊರತೆ ಇರುತ್ತದೆ. ಸರ್ಕಾರ ಪ್ರಸ್ತುತ ಬೋಧಕ ಹುದ್ದೆಗಳನ್ನು ಸೃಜಿಸಲು ಸಾಧ್ಯವಿಲ್ಲವೆಂದೂ ಕೋರ್ಸುಗಳನ್ನು ಪ್ರಾರಂಭಿಸುವುದನ್ನು ಕೈಬಿಡಲು ತಿಳಿಸಿರುವುದರಿಂದ ಉಂಟಾಗಿರುವ ಸಮಸ್ಯೆ ಬಗ್ಗೆ.

- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಬಿ.ಕೆ.ಹರಿಪ್ರಸಾದ್

ಆ) ವಿಷಯ:– ಬೆಂಗಳೂರಿನ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಮತ್ತು ಕಾವಲ್ ಬೈರಸಂದ್ರದಲ್ಲಿ ದಿನಾಂಕ **11–08–2020** ರಂದು ನಡೆದ ಗೋಲಿಬಾರ್ ಬಗ್ಗೆ

- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ನಸೀರ್ ಅಹ್ಮದ್
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಆರ್.ಬಿ.ತಿಮ್ಮಾಪೂರ್
- ಡಾ:ವೈ.ಎ.ನಾರಾಯಣಸ್ವಾಮಿ
- ಶ್ರೀ ಆಯನೂರು ಮಂಜುನಾಥ್
- ಶ್ರೀ ಹೆಚ್.ಎಂ.ರಮೇಶ್ ಗೌಡ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**19.** ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ, **2020**

- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಮರಿತಿಬ್ಬೇಗೌಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)
- ಡಾ:ವೈ.ಎ.ನಾರಾಯಣಸ್ವಾಮಿ

**20. ಸಾರಾಂಶ**

– – –

(890)/26-9-2020/ಎಲ್‌ಎಂ/ಆರ್‌ಎನ್/11-10

**ಕರ್ನಾಟಕ ವಿಧಾನ ಪರಿಷತ್ತು**

**ಶನಿವಾರ, 26ನೇ ಸೆಪ್ಟಂಬರ್ 2020**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಪೂರ್ವಾಹ್ನ: 11 ಗಂಟೆ 11 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಯವರು**
**ಪೀಠದಲ್ಲಿ ಉಪಸ್ಥಿತರಿದ್ದರು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1.ಸಂತಾಪ ಸೂಚನೆ**

**ವಿಷಯ: ಭಾರತ ಚಿತ್ರರಂಗ ಕಂಡ ಅದ್ಭುತ ಕಲಾರತ್ನ, ಗಾನ ಗಂಧರ್ವ ಡಾ:ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ನಿಧನದ ಬಗ್ಗೆ.**

-----

**ಸಭಾಪತಿಯವರು:-**

(ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಡಾ:ಎಸ್.ಪಿ.ಬಾಲಸುಬ್ರಹ್ಮಣ್ಯಂ ರವರ ನಿಧನ ಇಡೀ ರಾಜ್ಯಕ್ಕೆ ಮಾತ್ರವಲ್ಲ ಇಡೀ ದೇಶಕ್ಕೆ ಸಂಕಟವನ್ನು ಉಂಟು ಮಾಡಿದೆ. ಇಂದಿನ ಅನೇಕ ಪತ್ರಿಕೆಗಳಲ್ಲಿ "ಗಾಯನ ನಿಲ್ಲಿಸಿದ ಗಾನ ಗಾರುಡಿಗ" ಎನ್ನುವ ಶಿರೋನಾಮೆಯಿಂದ ಅವರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಪದ್ಮಭೂಷಣ ಪ್ರಶಸ್ತಿ ಪಡೆದಂತಹ ಡಾ: ಎಸ್.ಪಿ.ಬಾಲಸುಬ್ರಹ್ಮಣ್ಯಂರವರು ನಮ್ಮನ್ನೆಲ್ಲಾ ಬಿಟ್ಟು ಅಗಲಿದ್ದಾರೆ. ಅವರು ಜುಲೈ ತಿಂಗಳಿನಲ್ಲಿ ಕೊರೋನಾ ವಿರುದ್ಧ ಜಾಗೃತಿ ಮೂಡಿಸಲು ಬೇರೆ–ಬೇರೆ ವೇದಿಕೆಗಳಲ್ಲಿ ಅವರೇ ರಚಿಸಿದಂತಹ, ಹಾಡಿ ಜಾಗೃತಿ ಮೂಡಿಸುವಂತಹ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. 2011ನೇ ಸಾಲಿನಲ್ಲಿ ಇವರಿಗೆ ಪದ್ಮಭೂಷಣ ಪ್ರಶಸಿಯನ್ನು ಕೊಟ್ಟು ಗೌರವಿಸಲಾಯಿತು. ಅತ್ಯಂತ ಹಿರಿಯ ಮಹಾನ್ ವ್ಯಕ್ತಿಯಾಗಿ, ತಮ್ಮ ಗಾಯನದ ಮೂಲಕ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ದೇಶ–ವಿದೇಶಗಳಲ್ಲಿಯು ತಮ್ಮ ಅಭಿಮಾನಿಗಳನ್ನು ಹೊಂದಿದ್ದಾರೆ. "ನನ್ನ ಮುಂದಿನ ಜನುಮ ಕರುನಾಡಲ್ಲಿ ಬರೆದಿರಲಿ ಆ ಬ್ರಹ್ಮ" ಎಂದು ಹೇಳುತ್ತಿದ್ದರು. ಇದರ ಅರ್ಥ ಅವರು ಬಹಳ ಭಾವನಾತ್ಮಕವಾಗಿ ಕನ್ನಡವನ್ನು, ಕನ್ನಡ ಭಾಷೆಯನ್ನು ಮನಸ್ಸಿನಲ್ಲಿ ಅಳವಡಿಸಿಕೊಂಡಿದ್ದರು ಎನ್ನುವುದಕ್ಕೆ ಇದೊಂದು ಸಣ್ಣ ಉದಾಹರಣೆ. ನೀವು 40 ಸಾವಿರ ಹಾಡುಗಳನ್ನು ಹಾಡಿದ್ದೀರಿ ಇದರಲ್ಲಿ ಅತ್ಯಂತ ಕಷ್ಟಕರವಾದ ಹಾಡು ಯಾವುದು ಎಂದು ಯಾರು ಕೇಳುತ್ತಾರೆ, ಬಹಳ ಸುಲಲಿತವಾಗಿ ಹಾಡನ್ನು ಹಾಡುವಂತಹ ಡಾ: ಎಸ್.ಪಿ.ಬಾಲಸುಬ್ರಹ್ಮಣ್ಯಂರವರು ಸುದೀರ್ಘವಾಗಿ ಆಲೋಚನೆ ಮಾಡಿ ಹೇಳುತ್ತಾರೆ, ಕನ್ನಡದಲ್ಲಿ ಒಂದು 'ದೇವರ ದುಡ್ಡು' ಎನ್ನುವ ಸಿನಿಮಾ ಇದೆ, ಅದರಲ್ಲಿ 'ತರಿ ಕೆರೆ ಏರಿ ಮೇಲೆ ಮೂರು ಕರಿ ಕುರಿಮರಿ ಮೇಯ್ತಿತ್ತು' ಎನ್ನುವ ಹಾಡು ಇದೆ, ಆ ಹಾಡನ್ನು ಅತ್ಯಂತ ವೇಗವಾಗಿ ಹಾಡಿದೆ ಮಾತ್ರ ಆ ಹಾಡಿಗೆ ಮತ್ತು ದೃಶ್ಯಕ್ಕೆ ಹೊಂದಣಿಕೆಯಾಗುತ್ತಿತ್ತು. ನಾನು ಬಹಳ ತಪಸ್ಸು ಮಾಡಿ ಮಾಡಿದ್ದರಿಂದ ಆ ಹಾಡು ಯಶಸ್ವಿಯಾಯಿತು ನನ್ನ ಜೀವನದಲ್ಲಿ ಅತ್ಯಂತ ಖುಷಿ ಕೊಟ್ಟ ಹಾಡು ಎಂದು ಹೇಳಿದ್ದಾರೆ. ಅವರಲ್ಲಿರುವ ವೈವಿಧ್ಯತೆ ಏನು ಎಂದರೆ, ಯಾವುದೇ ಕಲಾತ್ಮಕ ಚಲನಚಿತ್ರಗಳಿಗೂ ಹಾಡುಗಳನ್ನು ಭಾವನಾತ್ಮಕವಾಗಿ ಹಾಡುತ್ತಿದರು. ಕಮರ್ಷಿಯಲ್ ಸಿನಿಮಾಗಳ ಹಾಡಿಗೂ ಅದೇ ರೀತಿ ನ್ಯಾಯ ಕೊಡುವ ರೀತಿಯಲ್ಲಿ ಹಾಡುತ್ತಿದರು. ದಿ: ವಿಷ್ಣುವರ್ಧನ್‌ರವರು ನಾಯಕ ನಟರಾಗಿ ಅಭಿನಯಿಸಿದ ಚಿತ್ರ ನಾಗರಹಾವು. ಅದರಲ್ಲಿ ನಾಯಕನದು ದ್ವೇಷ, ಆಕ್ರೋಶ ಬಿಂಬಿಸುವಂತಹ ಪಾತ್ರ. ಅದರಲ್ಲಿ " ಹಾವಿನ ದ್ವೇಷ ಹನ್ನೆರಡು ವರ್ಷ" ಎನ್ನುವ ಹಾಡು ಬರುತ್ತದೆ. ಆ ಹಾಡಿನ ಮೂಲಕ ನಾಯಕ ನಟನಿಗೆ ಸ್ಫೂರ್ತಿ ತುಂಬುವಂತಹ ಮತ್ತು ಇಡೀ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಿನಿಮಾವನ್ನು ಆ ಹಾಡಿನಲ್ಲಿಯೇ ಉಲ್ಲೇಖ ಮಾಡುವಂತಹ ಹಾಡು. ಅದು ಇಡೀ ಚಿತ್ರಕ್ಕೆ ಸ್ಫೂರ್ತಿ ತುಂಬುವಂತಹ ಹಾಡು ಅದು. ಅದು ತುಂಬಾ ಜನಪ್ರಿಯವಾದ ಹಾಡಾಯಿತು. ಅದೇ ಕಮರ್ಷಿಯಲ್ ಹಾಗೂ ತುಂಬಾ ಸರಳವಾದ 'ಅಮೃತವರ್ಷಿಣಿ' ಈ ಚಿತ್ರದಲ್ಲಿ ನಾಯಕಿಯ ಜೊತೆಯಲ್ಲಿ ಸಲ್ಲಾಪ ದೃಶ್ಯಕ್ಕೆ 'ಈ ಸುಂದರ ಬೆಳದಿಂಗಳ' ಎನ್ನುವ ಹಾಡನ್ನು ಹಾಡಿ ಅದಕ್ಕೆ ಯಾವ ರೀತಿ ನ್ಯಾಯವನ್ನು ಕೊಟ್ಟಿದ್ದರು, ಹೀಗೆ ಕಲಾತ್ಮಕ ಚಿತ್ರಗಳಿಗೂ ದಾಖಲೆಮಟ್ಟದಲ್ಲಿ ಹಾಡುಗಳನ್ನು ಹಾಡಿದ್ದಾರೆ. ಇವರು ಹಾಡಿರುವ ಹಾಡುಗಳಿಗೆ ವಿಶಿಷ್ಟವಾದ ಗೌರವ ಇಡೀ ಪ್ರಪಂಚಾದ್ಯಂತ ಇತ್ತು ಮತ್ತು ಯಾವುದೇ ಸಿನಿಮಾದ ಭಾಷೆ, ಪಾತ್ರಗಳು, ಆ ಚಿತ್ರದ ಒಟ್ಟು ಕಥೆಯನ್ನು ಅರ್ಥ ಮಾಡಿಕೊಂಡು ಹಾಡಬಲ್ಲಂತ ಏಕೈಕ ಹಾಡುಗಾರ ಎಂದರೆ ಅದು ಡಾ: ಎಸ್.ಪಿ.ಬಾಲಸುಬ್ರಹ್ಮಣ್ಯಂರವರು ಎಂದು ವಿಮರ್ಶಕರು ಬರೆಯುತ್ತಿದ್ದರು. ಬಹಳ ಸರಳ ಮತ್ತು ಹೂವಿನಂತಹ ಮನಸ್ಸನ್ನು ಹೊಂದಿದಂತಹ ವ್ಯಕ್ತಿ ಇವರು. ಎರಡು ವರ್ಷಗಳ ಹಿಂದೆ ನನ್ನ ಊರಿನ ಒಂದು ಸಮಾರಂಭಕ್ಕೆ ಬಂದು ಭಾಗವಹಿಸಿದ್ದರು, ಅವರಿಗೆ ಒಂದು ನೆನಪಿನ ಕಾಣಿಕೆ ಕೊಡುವಂತಹ ಯೋಗ ನನಗೆ ಕೂಡಿಬಂದಿತ್ತು ಎನ್ನುವುದನ್ನು ಅತ್ಯಂತ ಭಾವುಕತನದಿಂದ ನೆನಪು ಮಾಡಿಕೊಳ್ಳುತ್ತೇನೆ.

**(ಮುಂದು)**

**(891)26-09-2020(11-20)ಬಿಎಸ್‌ಡಿ-ವಿಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು)**

ಶ್ರೀ ಎಸ್.ಪಿ. ಬಾಲಸುಬ್ರಮಣ್ಯಂ ರವರು ಪದ್ಮಶ್ರೀ, ಪದ್ಮವಿಭೂಷಣ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದರು. ಇಟಿರುಟಿಯಾಗಿ ಆಗಲು ಹೊರಟು ಹಾಡುಗಾರರಾಗಿದ್ದು ಒಂದು ರೀತಿ ನಮಗೆ ರೋಮಾಂಚನ ಎನಿಸಿಬಿಡುತ್ತದೆ. ಅವರು 21 ಕನ್ನಡ ಹಾಡುಗಳನ್ನು ಒಂದೇ ದಿವಸ ಹಾಡಿದರು ಎಂದು ಸಂತಾಪ ಸೂಚನೆಯಲ್ಲಿ ಉಲ್ಲೇಖ ಮಾಡಲಾಗಿದ್ದು, ಇದೂ ಕೂಡ ದಾಖಲೆ ಎನಿಸುತ್ತದೆ. ಅನೇಕರು ಅವರ ಬಗ್ಗೆ ಮಾತುಗಳನ್ನು ಹೇಳುವಾಗ, ಅವರ ಒಟ್ಟು ವ್ಯಕ್ತಿತ್ವವನ್ನು ಉಲ್ಲೇಖ ಮಾಡುತ್ತಾ, ಅವರ ಅರ್ಥಪೂರ್ಣ ಬದುಕಿನ ಬಗ್ಗೆ ಉಲ್ಲೇಖ ಮಾಡುತ್ತಾರೆ. ಡಾ: ರಾಜ್‌ಕುಮಾರ್‌ರವರು ಒಂದು ಕಡೆ ' ಅವರು ಧ್ವನಿಯಾಗಿದ್ದು, ನಾನು ಆತ್ಮವಾಗಿದ್ದೆ' ಎಂದು ಹೇಳುತ್ತಾರೆ. ಶ್ರೀ ಬಾಲಸುಬ್ರಮಣ್ಯಂ ರವರು ಧ್ವನಿಯಾಗಿದ್ದು, ಡಾ: ರಾಜ್‌ಕುಮಾರ್ ರವರು ಆತ್ಮವಾಗಿದ್ದರು ಎನ್ನುವಂತಹ ಮಾತನ್ನು ಹೇಳಿದ್ದಾರೆ. ಒಟ್ಟಾರೆ ಇಡೀ ಬದುಕನ್ನು ಕಲಾಸೇವೆಗೋಸ್ಕರ ಮೀಸಲಿಟ್ಟ ಹಿರಿಯ ಹಾಡುಗಾರ ಮತ್ತು ಹಿರಿಯ ವ್ಯಕ್ತಿಯನ್ನು ಕಳೆದುಕೊಂಡಿದ್ದು ಅತ್ಯಂತ ನೋವಿನ ಸಂಗತಿಯಾಗಿದೆ. ಇಡೀ ಭಾರತ ದೇಶ ಅವರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಧನಕ್ಕೆ ಕಂಬನಿ ಮಿಡಿಯುವಂತಹ ಸಂದರ್ಭದಲ್ಲಿ ತಾವು ಸಂತಾಪ ಸೂಚನೆಯನ್ನು ತಂದಿದ್ದೀರಿ. ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ. ಸರ್ಕಾರ ಅವರ ಮುಂದಿನ ಯೋಜನೆಗಳ ಬಗ್ಗೆ ಯೋಚನೆ ಮಾಡುವಂತಹ ಕಾಲಘಟ್ಟದಲ್ಲಿ ಇದೆ ಎಂಬುದನ್ನು ನೆನಪು ಮಾಡುತ್ತಾ, ಆಕಾಶ ದೀಪವು ಅವರೆಂದು ಹೇಳಿ, ಕನ್ನಡಿಗರ ಮನ ತುಂಬಿದಂತಹ ಶ್ರೀ ಬಾಲಸುಬ್ರಮಣ್ಯಂ ರವರು ನಮ್ಮನ್ನೆಲ್ಲಾ ಬಿಟ್ಟು ಹೋಗಿದ್ದಾರೆ. ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎಂದು ಮತ್ತೊಮ್ಮೆ ಹೇಳುತ್ತಾ, ಅವರ ಕುಟುಂಬಕ್ಕೆ ಮತ್ತು ಅವರ ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ಕೊಡಲೆಂದು ಹೇಳಿ, ಅವರಿಗೆ ಈ ಸದನದ ಮೂಲಕ ಸಂತಾಪವನ್ನು ಸಲ್ಲಿಸುತ್ತಿದ್ದೇನೆ. ಧನ್ಯವಾದಗಳು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿವರ ಸಂತಾಪ ಸೂಚಕ ಗೊತ್ತುವಳಿಯನ್ನು ಬೆಂಬಲಿಸುತ್ತಾ, ವಿಶ್ವವಿಖ್ಯಾತ ಗಾಯಕರೆಂದು ಪ್ರಸಿದ್ದರಾದ ಗಾನಗಂಧರ್ವ ಶ್ರೀ ಬಾಲಸುಬ್ರಮಣ್ಯಂ ರವರ ಬಗ್ಗೆ ನಾಲ್ಕಾರು ಮಾತುಗಳನ್ನು ಹೇಳಲು ಬಯಸುತ್ತೇನೆ.

ಕಳೆದ ತಿಂಗಳು ಆಗಸ್ಟ್ 5 ರಂದು ಕೊರೊನಾ ವೈರಸ್ ಮತ್ತು ಶ್ವಾಸಕೋಸದ ಸಮಸ್ಯೆಯಿಂದ ಚೆನ್ನೈನ MGM ಆಸ್ಪತ್ರೆಯಲ್ಲಿ ದಾಖಲಾದಾಗ ಬಹುತೇಕ ಭಾಷೆಗಳ ಚಲನಚಿತ್ರ ದಿಗ್ಗಜರು ರಾಷ್ಟ್ರದ ಉದ್ದಗಲಕ್ಕೂ ಬೇಗನೆ ಗುಣಮುಖರಾಗಲಿ ಎಂದು ಪ್ರಾರ್ಥನೆ ಮಾಡಿದರು. ಬಹುತೇಕ ಅವರ ಪ್ರಾರ್ಥನೆ ಫಲಿಸಲಿಲ್ಲ ಎಂದು ನಾನು ಭಾವಿಸುತ್ತೇನೆ. ಭಾರತ ದೇಶದ ಶ್ರೇಷ್ಠ ಗಾಯಕ ಗಾನ ಗಂಧರ್ವ, ಸರಸ್ವತಿ ಪುತ್ರ ಶ್ರೀ ಬಾಲಸುಬ್ರಮಣ್ಯಂ ರವರು ನಿನ್ನೆ ನಮ್ಮನ್ನು ಆಗಲಿದ್ದಾರೆ. ಇದರಿಂದ ಭಾರತದ ಸಂಗೀತ ಕ್ಷೇತ್ರ ಸ್ತಂಭ್ಧವಾಗಿದೆ ಮತ್ತು ಉಸಿರು ನಿಂತಿದೆ ಎನ್ನುವಂತಹ ಭಾವನೆ ನನ್ನದಾಗಿದೆ. ಶ್ರೀ ಬಾಲಸುಬ್ರಮಣ್ಯಂ ರವರು ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ ಭಾಷೆ ಸೇರಿದಂತೆ ಒಟ್ಟು 16 ಭಾಷೆಗಳಲ್ಲಿ 50 ವರ್ಷಗಳ ಅವಧಿಯಲ್ಲಿ 40 ಸಾವಿರಕ್ಕಿಂತಲೂ ಹೆಚ್ಚು ಹಾಡುಗಳಿಗೆ ಧ್ವನಿಯಾಗಿದ್ದಾರೆ. 40 ಸಾವಿರ ಹಾಡುಗಳಲ್ಲಿ 15 ಸಾವಿರ ಹಾಡುಗಳು ಕನ್ನಡ ಭಾಷೆಯಲ್ಲಿವೆ ಎಂದು ಹೇಳುವುದಕ್ಕೆ ನನಗೆ ಬಹಳ ಹೆಮ್ಮೆ ಎನಿಸುತ್ತಿದೆ. ಶ್ರೀ ಬಾಲಸುಬ್ರಮಣ್ಯಂ ರವರು ಪದ್ಮಭೂಷಣ, ಪದ್ಮಶ್ರೀ, Doctorate ಪುರಸ್ಕಾರಗಳು ಅವರನ್ನೇ ಹುಡುಕಿಕೊಂಡು ಬಂದಿವೆ. ನಾಲ್ಕು ಭಾಷೆಗಳಲ್ಲಿ 6 ಬಾರಿ ಗಾಯನಕ್ಕಾಗಿ ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದ ಏಕೈಕ ವ್ಯಕ್ತಿ ಎನಿಸಿಕೊಂಡಿದ್ದಾರೆ. ಆಂಧ್ರ ಪ್ರದೇಶದ ಸರ್ಕಾರ 25 ಬಾರಿ ಸಂಗೀತಕ್ಕಾಗಿ ನೀಡುವ ಪ್ರಶಸ್ತಿಯನ್ನು ಮಹಾನ್ ಸಾಧಕರಿಗೆ ನೀಡಿದ ದೊಡ್ಡ ಗೌರವ ಎಂದು ಭಾವಿಸುತ್ತಿದ್ದೇನೆ. ಶ್ರೀ ಬಾಲಸುಬ್ರಮಣ್ಯಂ ರವರು ಗಾಯಕರಾಗಿ, ಸಂಗೀತ ಸಂಯೋಜಕರಾಗಿ, ಕಂಠದಾನ ಕಲಾವಿದರಾಗಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರೂಪಕರು ಮತ್ತು ನಿರ್ಮಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ಕನ್ನಡದ ಅತ್ಯಂತ ಜನಪ್ರಿಯವಾದ ಎದೆ ತುಂಬಿ ಹಾಡುವೆನು ಕಾರ್ಯಕ್ರಮವು ಇಡೀ ಕನ್ನಡ ನಾಡಿನ ಮನೆ ಮಾತಾಗಿದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. 1981ನೇ ಫೆಬ್ರವರಿ 8 ರಂದು ಬೆಂಗಳೂರಿನಲ್ಲಿ ಶ್ರೀಯುತ ಉಪೇಂದ್ರ ಕುಮಾರ್ ರವರ ಸಂಗೀತ ಸಂಯೋಜನೆಯಲ್ಲಿ ಬೆಳಗ್ಗೆ 9 ರಿಂದ ರಾತ್ರಿ 9 ಗಂಟೆಯವರೆಗೆ 21 ಹಾಡುಗಳನ್ನು ಹಾಡಿದ್ದಾರೆ. ನನಗನಿಸಿದ ಮಟ್ಟಿಗೆ ಬಹುತೇಕ ಇದೊಂದು ದಾಖಲೆಯಾಗಿದೆ ಎಂದು ಹೇಳಬಯಸುತ್ತೇನೆ. ಅವರು ಅತ್ಯಂತ ಸರಳ ವ್ಯಕ್ತಿಯಾಗಿದ್ದು, ಯಾವುದೇ ಹಮ್ಮು-ಬಿಮ್ಮು ಗರ್ವ ಇಲ್ಲದೇ ಮನತುಂಬಿ ಹಾಡುತ್ತಿದ್ದ ಗಾನಕೋಗಿಲೆ ಸಂಗೀತ ಕ್ಷೇತ್ರದಲ್ಲಿ ಅಜರಾಮರವಾಗಿ ಉಳಿದಿದ್ದಾರೆ. ನಮ್ಮೆಲ್ಲರ ವಿಶೇಷವಾಗಿ ಕನ್ನಡ ನಾಡಿನ ಸಮಸ್ತ ಜನತೆಯ ಹೃದಯದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದ್ದಾರೆ. ಹಿಂದಿ ಚಿತ್ರರಂಗದಲ್ಲಿಯೂ ಗಾಯನದಿಂದ ಛಾಪನ್ನು ಮೂಡಿಸಿದ್ದಾರೆ. ಹಿಂದಿ ಗಾಯನಕ್ಕೂ ರಾಷ್ಟ್ರ ಪ್ರಶಸ್ತಿ ಪಡೆದಿದ್ದು ಅವರ ಪ್ರತಿಭೆಗೆ ಹಿಡಿದ ಸಾಕ್ಷಿ ಎಂದು ಹೇಳುತ್ತೇನೆ. ಭಾರತ ದೇಶ ಮಾತ್ರವಲ್ಲದೇ ಪ್ರಪಂಚದ ಹಲವಾರು ದೇಶಗಳಲ್ಲಿ ಸಂಗೀತ ಕಛೇರಿ ನಡೆಸಿದ್ದಾರೆ. ನಮ್ಮ ದೇಶದಲ್ಲಿ ಮಾತ್ರವಲ್ಲದೇ ಇಡೀ ಪ್ರಪಂಚದಾದ್ಯಂತ ಅವರು ಅಭಿಮಾನಿಗಳನ್ನು ಹೊಂದಿದ್ದಾರೆ. ಎಸ್‌ಪಿಬಿ ರವರ ಪ್ರತಿಭೆಯನ್ನು ಭಾರತದ ಅಪ್ರತಿಮ ಗಾಯಕರಾದ ಶ್ರೀ ಎಸ್. ಜಾನಕಿ ರವರು ಗುರುತಿಸಿದ್ದರು ಎಂಬುದು ಹೆಮ್ಮೆಯ ವಿಷಯ. ಶ್ರೀ ಬಾಲಸುಬ್ರಮಣ್ಯಂ ರವರು ಹಲವಾರು ಬಾರಿ ವೇದಿಕೆಗಳಲ್ಲಿ ಮುಂದಿನ ಜನ್ಮ ಎನ್ನುವುದಿದ್ದರೆ ಕನ್ನಡ ನಾಡಿನಲ್ಲಿ ಹುಟ್ಟುವ ಬಗ್ಗೆ ಹೇಳಿರುವುದು ನಮ್ಮೆಲ್ಲರಿಗೂ ಅಭಿಮಾನದ ಮಾತಾಗಿದೆ. ಈ ಪವಿತ್ರವಾದ ಕನ್ನಡನಾಡಿನಲ್ಲಿ ಮತ್ತೊಮ್ಮೆ ಅವರು ಹುಟ್ಟಿಬರಲಿ ಎಂದು ಆಸೆ ಮಾಡುತ್ತೇನೆ. ಅವರು ಅತ್ಯಂತ ಸರಳ, ಸಜ್ಜನರು, ಗುರು ಹಿರಿಯರಲ್ಲಿ ಭಕ್ತಿ ಹೊಂದಿದವರಾಗಿದ್ದರು. ಅವರ ಗಾಯನದ 50ನೇ ವರ್ಷದ ಕಾರ್ಯಕ್ರಮದಲ್ಲಿ ಮತ್ತೊಬ್ಬ ಪ್ರಮುಖ ಗಾಯಕರಾದ ಶ್ರೀ ಜೆಸುದಾಸ್ ರವರಿಗೆ ಪಾದಪೂಜೆ ಮಾಡಿದರು. ಇದು ಶ್ರೀ ಬಾಲಸುಬ್ರಮಣ್ಯಂ ರವರ ನಮ್ರತೆಗೆ ಹಿಡಿದ ಕನ್ನಡಿಯಾಗಿದೆ. 5 ದಶಕಗಳಲ್ಲಿ ಅದ್ಭುತವಾದ ಗಾಯನದಿಂದ ನಮ್ಮೆಲ್ಲರನ್ನು ರಂಜಿಸಿದರು. ಅಂತಹ ವ್ಯಕ್ತಿಯ ಕಣ್ಮರೆ ಎಲ್ಲಾ ಭಾಷೆಗಳನ್ನು ಹೊಂದಿರುವ ರಾಜ್ಯಗಳು ಮಾತ್ರವಲ್ಲದೇ ನಮ್ಮ ಕನ್ನಡ ನಾಡಿನ ಜನ ತಬ್ಬಲಿಯಾದಂತಹ, ಅನಾಥರಾದಂತಹ ಭಾವನೆಯನ್ನು ಅನುಭವಿಸುತ್ತಿದ್ದಾರೆ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ. ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಮಾತ್ರವಲ್ಲದೇ ಪ್ರಪಂಚದಾದ್ಯಂತ ಇರುವ ಎಲ್ಲಾ ಅಭಿಮಾನಿಗಳಿಗೂ ನೋವನ್ನು ಸಹಿಸುವ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸಿ, ಮತ್ತೊಮ್ಮೆ ಅಗಲಿದ ದಿವ್ಯಚೇತನಕ್ಕೆ ಗೌರವವನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುಃ–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರುಃ–** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡುತ್ತೇನೆ.

**(ಸದನವು 11 ಗಂಟೆ 30 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನ: 10 ನಿಮಿಷಗಳ ತರುವಾಯ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**(892) 11.40 26.09.2020 ಎಸ್‌ವಿ–ಜಿಆರ್**

**(ಬೆಳಿಗ್ಗೆ 11 ಗಂಟೆ 30 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ಬೆಳಿಗ್ಗೆ 11 ಗಂಟೆ 49 ನಿಮಿಷಗಳಿಗೆ ಸಮಾವೇಶಗೊಂಡಿತು.)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**2.ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು:–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

01. ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2020
02. ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ವಿಧೇಯಕ, 2020
03. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2020
04. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2020
05. ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2020

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

06. ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020

07. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ವಿಧೇಯಕ, 2020

08. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕ, 2020

09. ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2020

(...**ಮುಂದು**)

**(893) 26-09-2020 (11-50) ಕೆಜಿ ಜಿಆರ್**

**3. ಅಜೆಂಡಾ ಪ್ರಕಾರ ಸದನದ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ.**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಈ ಸದನ ಪ್ರಾರಂಭವಾದ ದಿವಸಗಳಿಂದ ಎರಡು ವಿಷಯಗಳ ಬಗ್ಗೆ ಮನವಿ ಮಾಡಿದ್ದೇವು. ಅವು ನಿಯಮ 330 ರಡಿ ಕೆಳಗೆ ಬರುತ್ತವೆ. ಅವು ಚರ್ಚೆಯಾದ ನಂತರ ವಿಧೇಯಕಗಳನ್ನು ತೆಗೆದುಕೊಳ್ಳಬಹುದು. ನಾವು ವಿಧೇಯಕಗಳನ್ನು ಪಾಸ್ ಮಾಡಿಕೊಡುತ್ತೇವೆ. ಇಲ್ಲವೆಂದರೆ, ಪ್ರಮುಖವಾದಂತಹ ವಿಚಾರಗಳು ಬಿಟ್ಟು ಹೋಗುತ್ತವೆ. ಅದಕ್ಕೆ ನಮಗೆ ದೊಡ್ಡ ಸಮಸ್ಯೆಯಾಗಿ ಬಿಟ್ಟಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲು ವಿಧೇಯಕವನ್ನು ತೆಗೆದುಕೊಳ್ಳಿ. ಆ ನಂತರ ಅವರು ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ವಿಧೇಯಕಗಳಿಗೆ ಯಾವತ್ತು ತಡೆ ಮಾಡಿಲ್ಲ. ವಿಧೇಯಕಗಳಿಗೆ ಪ್ರಾಧಾನ್ಯತೆ ಇದೆ. ಅಧಿವೇಶನ ಸೇರುವುದೇ ಶಾಸನಗಳನ್ನು ರಚನೆ ಮಾಡುವುದಕ್ಕೆ. ಅದು ನಮಗೆ ಗೊತ್ತಿದೆ. ಇಂದು ಅಧಿವೇಶನದ ಕೊನೆಯ ದಿವಸವಾಗಿರುವುದರಿಂದ, ಅವು ಬಹಳಷ್ಟು ಪ್ರಮುಖವಾದಂತಹ ವಿಷಯಗಳಾಗಿರುವುದರಿಂದ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಪ್ರಾರಂಭದಲ್ಲಿಯೇ ವಿಧೇಯಕಗಳನ್ನು ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ವಿಧೇಯಕಗಳನ್ನು ಕೊನೆಗೆ ತೆಗೆದುಕೊಳ್ಳಿ. ಮೊದಲು ಚರ್ಚೆಗೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ವಿಷಯಗಳನ್ನು ತೆಗೆದುಕೊಂಡ ನಂತರ, ನಾವು ಕಡೆಗೆ ಎಲ್ಲಾ ವಿಧೇಯಕಗಳನ್ನು ಪಾಸು ಮಾಡಿಕೊಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ 4-5 ದಿವಸಗಳಿಂದ ಕೆಲವೊಂದು ವಿಷಯಗಳು ಚರ್ಚೆಗೆ ಬಾರದೆ ಹಾಗೆಯೇ ಉಳಿದಿವೆ. ನಾವು ಇವತ್ತು ರಾತ್ರಿ ಎಷ್ಟು ಹೊತ್ತಾದರೂ ಸಹ ಇದ್ದು ವಿಧೇಯಕಗಳನ್ನು ಪಾಸ್ ಮಾಡಿ ಕೊಡುತ್ತೇವೆ. ಈಗ ಮೊದಲು ವಿಷಯಗಳನ್ನು ಮುಗಿಸಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ, (ವಿರೋಧ ಪಕ್ಷದ ಮುಖ್ಯ ಸಚೇತಕಕರು):-** ಮಾನ್ಯ ಸಭಾಪತಿಯವರೇ, ನಾವು ವಿಧೇಯಕಗಳನ್ನು ಪಾಸು ಮಾಡಿಕೊಡುತ್ತೇವೆ. ಮೊದಲು ವಿಷಯಗಳನ್ನು ತೆಗೆದುಕೊಳ್ಳಿ. ನಾವು ಆ ವಿಷಯಗಳ ಬಗ್ಗೆ ಮೂರು ದಿವಸಗಳಿಂದ ಮನವಿ ಮಾಡುತ್ತಿದ್ದೇವೆ. ನಾವು ಇವತ್ತಿನ agenda ಮುಗಿಸುವವರೆಗೂ ಕುಳಿತುಕೊಳ್ಳುತ್ತೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತಿನ agenda ಏನಿದೆ, ಅದರ ಪ್ರಕಾರ ತೆಗೆದುಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದಂತಹ ವಿಷಯಗಳು ಮುಂದೆ ಹೋಗುತ್ತಿವೆ. ದಯವಿಟ್ಟು ಅವುಗಳನ್ನು ಮೊದಲು ತೆಗೆದುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಅವರ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ಈ ಅಧಿವೇಶನ ಪ್ರಾರಂಭವಾದಾಗಿನಿಂದ ಬಹಳಷ್ಟು ಸಾರ್ವಜನಿಕವಾದ ಮಹತ್ವವುಳ್ಳ ವಿಷಯಗಳು ಚರ್ಚೆಗೆ ಬಾರದೆ ಹಾಗೆಯೇ ಇವೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ದಯಮಾಡಿ ಕ್ಷಮಿಸಬೇಕು. ಮೊದಲು ಬಿಲ್ಲನ್ನು ತೆಗೆದುಕೊಳ್ಳಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮಗೆ ವಿಧೇಯಕಗಳ ಬಗ್ಗೆ ಎರಡು ಮಾತಿಲ್ಲ. ನಿನ್ನೆ ಸುಧೀರ್ಘವಾಗಿ U.K.P., ಬಗ್ಗೆ ಚರ್ಚೆ ಮಾಡಿದ್ದೇವೆ. ಅದಕ್ಕೆ ಸರ್ಕಾರದಿಂದ ಉತ್ತರ ಇಲ್ಲ. ನಿಯಮ 330ರಡಿ ವಿಷಯಗಳು ಹಾಗೆಯೇ ಉಳಿದಿವೆ. ಡಿ.ಜೆ ಹಳ್ಳಿ ಮತ್ತು ಕೆ.ಜಿ ಹಳ್ಳಿಯ ವಿಷಯವನ್ನು Rule 59 of the Rules of Procedure and Conduct of Business in the Karnataka Legislative Council ಅಡಿಯಲ್ಲಿ ಹಾಕಿದ್ದೇವು, ತಾವು ಅದನ್ನು ನಿಯಮ 330ಕ್ಕೆ convert ಮಾಡಿದ್ದೀರಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ಧನವಿನಿಯೋಗದ ವಿಧೇಯಕಗಳು ವಾಪಸ್ಸು ಹೋಗಬೇಕು. It has to go back to the Legislative Assembly. This is the procedure.

**(ಗೊಂದಲ)**

**Sri S.R.PATIL**:- Mr.Chairman Sir, it's a routine procedure.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ಇವತ್ತು ಆ ಸದನವೂ ಸಹ adjourn ಆಗುತ್ತದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಏಕೆ ಆತಂಕದಲ್ಲಿವೆಂದರೆ, ಇವತ್ತು ಅಧಿವೇಶನದ ಕೊನೆಯ ದಿವಸ ಅದಕ್ಕೆ ಮಾನ್ಯ ಸಭಾಪತಿಯವರು ವಿಧೇಯಕಗಳಿಗೆ ಮೊದಲ ಆದ್ಯತೆ ಕೊಟ್ಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೂ ಗೊತ್ತಿದೆ ಮನಿ ಬಿಲ್ಲು ಬಹಳ ಮುಖ್ಯವಾದದು. ಅದಕ್ಕೆ ಈಗ ಮೊದಲು ಆ ಎರಡು ವಿಧೇಯಕಗಳನ್ನು ತೆಗೆದುಕೊಳ್ಳಿ. ಉಳಿದ ಬಿಲ್ಲುಗಳನ್ನು ಕೊನೆಗೆ ತೆಗೆದುಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ಮೊದಲು ಎರಡು ವಿಧೇಯಕಗಳನ್ನು ಮಾತ್ರ ತೆಗೆದುಕೊಳ್ಳಿ.

**4. ವಿಧೇಯಕವನ್ನು ಹಿಂಪಡೆಯುವ ಬಗ್ಗೆ**

**ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017, ಹಿಂದಕ್ಕೆ ಪಡೆಯುವ ಪ್ರಸ್ತಾವನೆ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017 ಹಿಂದಕ್ಕೆ ತೆಗೆದುಕೊಳ್ಳುವ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ. ಆದಕಾರಣ, ದಯಮಾಡಿ ಈ ಪ್ರಸ್ತಾವಕ್ಕೆ ಸದನ ಒಪ್ಪಿಗೆಯನ್ನು ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ ;

"ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ವಿಧೇಯಕ, 2017 ಅನ್ನು ಹಿಂದಕ್ಕೆ ಪಡೆಯಲು ಸದನದ ಅನುಮತಿಯನ್ನು ಕೋರುವುದು.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು):–** ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ವಿಧೇಯಕ, 2017 ಅನ್ನು ಹಿಂದಕ್ಕೆ ಪಡೆದುಕೊಂಡಿದ್ದೇವೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಹಿಂದಕ್ಕೆ ಪಡೆಯಲಾಯಿತು.**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**5.ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ Financial year ನಲ್ಲಿ Appropriation Bill ಒಂದು/ಎರಡು ಅಥವಾ ಮೂರು ಇರುತ್ತವೆ. ನಮಗೆ ಯಾವುದೋ ಗೊತ್ತಿಲ್ಲದಂತಹ ಖರ್ಚುಗಳು ಬಂದರೆ, ಅದಕ್ಕೆ ಅನಿವಾರ್ಯವಾಗಿ ಖರ್ಚು ಮಾಡಬೇಕಾದರೆ, ಅಂತಹ ಖರ್ಚುಗಳನ್ನು ಮಾಡಿ ಎರಡು ಸದನಗಳ ಒಪ್ಪಿಗೆ ತೆಗೆದುಕೊಳ್ಳುವುದು ನಮಗೆ statutory obligation ಇದೆ. ನಮಗೆ ಆ ರೀತಿ ಈ ಬಾರಿ 4,008.5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದಕ್ಕೆ appropriation ಮಾಡಬೇಕೆಂದು ಕೇಳುತ್ತೇನೆ. ಇದರಲ್ಲಿ ಪ್ರಮುಖವಾಗಿ major expenditures ಗಳನ್ನು ಇಲ್ಲಿ ಓದುತ್ತೇನೆ. ನಮಗೆ ಕೋವಿಡ್–19 ಗಾಗಿ ಸರ್ಕಾರಿ ಆಸ್ಪತ್ರೆಗಳ ಸಲಕರಣೆಯ ಯಂತ್ರೋಪಕರಣಗಳಿಗೆ ರೂ.1,090 ಕೋಟಿ ರೂಪಾಯಿಗಳು ಖರ್ಚಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆ, ಈ ಬಾರಿ ನಮಗೆ ಸ್ವಲ್ಪ ಜಾಸ್ತಿ ಬರುತ್ತದೆ, ಹಾಗಾಗಿ, ನಮಗೆ 579.56 ಕೋಟಿ ರೂಪಾಯಿಗಳು ಖರ್ಚಾಗಿದೆ. ಇದರಲ್ಲಿ ಆ ಕಡೆಯಿಂದ 400 ಕೋಟಿ ರೂಪಾಯಿಗಳು ಬರುತ್ತದೆ. KSRTC, NWKRTC, NEKRTC ಹಾಗೂ BMTC ಯ ಸಿಬ್ಬಂದಿಗಳಿಗೆ, ಚಾಲಕರಿಗೆ, ನಿರ್ವಾಹಕರುಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಾಕ್‌ಡೌನ್‌ನಿಂದಾಗಿ ವೇತನ ಕೊಡಲಿಲ್ಲ. ಅವರಿಗೆ ವೇತನ ಕೊಡುವುದಕ್ಕಾಗಿ 543.91 ಕೋಟಿ ರೂಪಾಯಿಗಳನ್ನು Government Exchequer ನಿಂದ ಕೊಟ್ಟಿದೆ. ಕೋವಿಡ್-19 ಕ್ಕೆ ಸಂಬಂಧಿಸಿದಂತೆ, ಮೆಡಿಕಲ್ ಕಾಲೇಜುಗಳಿಗೆ ಹೆಚ್ಚುವರಿಯಾಗಿ ಸಲಕರಣೆಗಳನ್ನು ಕೊಡುವುದಕ್ಕೆ ಮತ್ತು ಸಿವಿಲ್ ಕೆಲಸಗಳಿಗೆ 165.7 ಕೋಟಿ ರೂಪಾಯಿಗಳನ್ನು ಕೊಟ್ಟಿದೇವೆ. ಜಿಲ್ಲಾ ವಲಯದಲ್ಲಿ ವೇತನ ಅನುದಾನ ಕೊಡುವುದಕ್ಕೆ 151 ಕೋಟಿ ರೂಪಾಯಿಗಳನ್ನು, ಕರಾವಳಿ ಸಂರಕ್ಷಣೆ ಮತ್ತು ನಿರ್ವಹಣೆಗೆ portಗೆ 108 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇಲ್ಲಿ 108 ಕೋಟಿ ರೂಪಾಯಿಗಳು ಏಕೆ ಬರುತ್ತದೆ ಎಂದರೆ, ಇದು ಮೊದಲು ಲೋಕೋಪಯೋಗಿ ಇಲಾಖೆಯ ಜೊತೆಗೆ ಇತ್ತು. ಈಗ Infrastructure Development Department ಗೆ ತಂದಿರುವುದರಿಂದ ಇಲ್ಲಿ ಖರ್ಚು ತೋರಿಸುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ಈ ವರ್ಷ ನಮಗೆ ಬಹಳ ಒಳ್ಳೆಯ ಮಳೆಯಾಗಿದೆ. ನಾವು ನಿರೀಕ್ಷೆ ಮಾಡಿದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದೆ. ಹಾಗಾಗಿ, ರಾಜ್ಯದ ಎಲ್ಲಾ ಕಡೆಯಿಂದಲೂ ಬಿತ್ತನೆ ಬೀಜಗಳಿಗೆ ಬಹಳ ಬೇಡಿಕೆ ಬಂದಿದ್ದರಿಂದ, ಅದನ್ನು ಖರೀದಿ ಮಾಡುವುದಕ್ಕೆ ಮತ್ತು subsidise ಮಾಡುವುದಕ್ಕೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದೇವೆ. ಕೋವಿಡ್-19 ರ ಹಿನ್ನೆಲೆಯಲ್ಲಿ ಆಟೋ ಚಾಲಕರಿಗೆ ಒಂದು ಬಾರಿ ಐದು ಸಾವಿರ ರೂಪಾಯಿಗಳ ಸಹಾಯಧನ ಕೊಡಬೇಕೆಂದು ಹೇಳಿ 97.5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಂಗನವಾಡಿ ಕಟ್ಟಡಗಳು ಬಹಳ ಶಿಥಿಲವಾಗಿತ್ತು. ಅಂತಹ ಕಟ್ಟಡಗಳಲ್ಲಿ ಮಕ್ಕಳು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಇತ್ತು. ಅಂತಹವುಗಳಿಗೆ 87.75 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕೃಷ್ಣ ಮೇಲ್ದಂಡೆ ಯೋಜನೆಗೆ AIBP ಗೆ 84.87 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಮಾನ್ಯ ಸಭಾಪತಿಯವರೇ, ವಾರ್ತಾ ಇಲಾಖೆಯ ಜಾಹಿರಾತು ವೆಚ್ಚದ ಬಿಲ್ಲು ಸುಮಾರು ವರ್ಷಗಳಿಂದ ಬಾಕಿ ಇತ್ತು. ಅವರು ಪದೇ ಪದೇ ಸರ್ಕಾರಕ್ಕೆ ಜಾಹಿರಾತಿನ ಕಾಸ್ಟ್‌ನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದರು ಅದಕ್ಕೆ 56 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಗ್ರಾಮೀಣ ನೀರು ಸರಬರಾಜು ಯೋಜನೆಯಲ್ಲಿ 54.85 ಮತ್ತು ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ 53.23 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

(ಮುಂದು...)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(894)26-09-2020(12-00)ಎಂವಿ-ಎಂಡಿ(ವಿಕೆ)**

**ಶ್ರೀ ಜೆ.ಸಿ. ಮಾಧುಸ್ವಾಮಿ(ಮುಂದು):-**

ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನಕ್ಕೆ ಐವತ್ತು ಕೋಟಿ ರೂಪಾಯಿಗಳನ್ನು ನೀಡಿದ್ದೇವೆ. ಈ ವರ್ಷ ಬಜೆಟ್‌ನಲ್ಲಿ ತೋರಿಸದೇ ಇರುವಂತಹ ಖರ್ಚು ಬಂದಿರುವುದರಿಂದ ಸುಮಾರು 4008/- ಕೋಟಿ ರೂಪಾಯಿಗಳು ಏನು ಹೆಚ್ಚುವರಿಯಾಗಿ ಖರ್ಚಾಗಿದೆ, ಅದನ್ನು appropriate ಮಾಡಿ ಕೊಡಬೇಕು. ಇದು ನಮ್ಮ ಬಜೆಟ್ ಗಾತ್ರದಲ್ಲಿ 1.63 ಮಾತ್ರ ಇದೆ. ಇದು ಒಂದೇ ಒಂದು ವರ್ಷ 1.38ರ ಒಳಗೆ appropriation ಇತ್ತು. ಆದರೆ, ಈ ವರ್ಷ 1.63 ಇದೆ. 2017-18ನಲ್ಲಿ ಮಾತ್ರ 0.89 ಇತ್ತು. ಬೇರೆಯೆಲ್ಲಾ ಕಾಲದಲ್ಲೂ 2.6, 1.69 ಮತ್ತು 3.11 ಯಲ್ಲಿ ಇದ್ದದ್ದು, ಈ ವರ್ಷ *extraneous circumstances* ಬಂದಿದ್ದರಿಂದ, 4008 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದೇವೆ. ಅದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರದವರು ಎಲ್ಲರಿಗೂ ಸಹ ಹಣ ಕೊಟ್ಟಿದ್ದಾರೆ. ಆದರೆ, ರಿಕ್ಷಾದವರು ಮತ್ತು ಇತರರಿಗೆ. ಆದರೆ, ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುವಂತಹ ಶಿಕ್ಷಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಾವು ಸರ್ಕಾರಕ್ಕೆ ಒಂದು ನೂರು ಬಾರಿ ಹೇಳಿದ್ದೇವೆ ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಸಹ ಭೇಟಿಯಾಗಿದ್ದೇವೆ. ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುವಂತಹ ಶಿಕ್ಷಕರಿಗೆ ಸ್ವಲ್ಪವಾದರೂ ಪರಿಹಾರ ಕೊಡಬೇಕು. ಈಗ ಎಷ್ಟೆಲ್ಲಾ ಜನ ಸಾಯುತ್ತಿದ್ದಾರೆ, ಆರು ತಿಂಗಳಿಂದ ಅವರಿಗೆ ಏನೂ ಆದಾಯ ಇಲ್ಲ. ಅವರ ಕುಟುಂಬಗಳು ಬೀದಿಗೆ ಬಂದಿವೆ. ಈ ವಿಧೇಯಕದಲ್ಲಿ ಅವರಿಗೆ ಸ್ವಲ್ಪವಾದರೂ ಅವಕಾಶ ಮಾಡಬೇಕಲ್ಲವೇ? ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಪತ್ರಿಕೆಗಳಲ್ಲಿ ನೋಡಿದ್ದೇವೆ. ಸರ್ಕಾರದವರು ಬೇರೆ ಎಲ್ಲರಿಗೂ ಸಹ ಪರಿಹಾರ ನೀಡಿದ್ದಾರೆ. ನಾವು ಸುಮಾರು ಹತ್ತು ಬಾರಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇವೆ ಮತ್ತು ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಇವತ್ತು ಇಡೀ ರಾಜ್ಯದಲ್ಲಿ ಅನುದಾನರಹಿತ ಶಿಕ್ಷಕರಿಗೆ ಭಿಕ್ಷೆ ಬೇಡುವಂತಹ ಪರಿಸ್ಥಿತಿ ಬಂದಿದೆ ಮತ್ತು ಮಾನ ಮರ್ಯಾದೆ ಬಿಟ್ಟು ಅವರು ಕಾಯಿಪಲ್ಯಗಳನ್ನು ಮಾರಾಟ ಮಾಡುತ್ತಿದ್ದಾರೆ. ಅವರ ಬಗ್ಗೆ ಒಬ್ಬರಿಗೂ ಸಹ ಕರುಣೆ ಇಲ್ಲವೇ? ಸರ್ಕಾರದವರು ಎಲ್ಲರಿಗೂ ಸಹ ಪರಿಹಾರ ನೀಡಿದ್ದಾರೆ. ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಸಹಾಯ ಮಾಡುವುದಕ್ಕೆ ಆಗುವುದಿಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಕರುಣೆ ತೋರಿಸುವುದಕ್ಕೆ ಸದಸ್ಯರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಯಾರಿಗೂ ಸಹ ಅವಕಾಶ ನೀಡಿಲ್ಲ. ಎಲ್ಲಾ ಕರುಣೆಯನ್ನು ಅವರೇ ಇಟ್ಟುಕೊಂಡಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ದಯಮಾಡಿ ಅದರ ಬಗ್ಗೆ ಹೇಳಲಿ. ಈ ತರಹ ಅವರು ನಮ್ಮನ್ನು ಮರುಳು ಮಾಡುವುದು ಬೇಡ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಅವರು ಎಷ್ಟು ಕೊಟ್ಟಿದ್ದಾರೆ. ಅದು include ಆಗಿಲ್ಲವೆಂದರೆ, ಈ ಧನ ವಿಧೇಯಕ ಹೇಗೆ approval ಆಗುತ್ತದೆ. ಮಾನ್ಯ ಸದಸ್ಯರು ಹೇಳಿರುವುದಕ್ಕಾದರೂ ನೋಡೋಣ, ವಿಚಾರ ಮಾಡೋಣ ಎಂದು ಮಾನ್ಯ ಕಾನೂನು ಸಚಿವರು ಹೇಳಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಖರ್ಚು ಮಾಡಿರುವುದಕ್ಕೆ appropriation ಕೇಳುತ್ತಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ನಾವು ಇದರ ಬಗ್ಗೆ ಹೇಳುತ್ತಿದ್ದೇವೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರು ಹೇಳಿರುವುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ಎಲ್ಲದಕ್ಕೂ ಸಹ ಹೇಳುತ್ತಾರೆ. ಆದರೆ ಅವರು ಇದಕ್ಕೆ ಏಕೆ ಹೇಳುವುದಿಲ್ಲ. ಈ ವಿಷಯ ಬಂದ ಕೂಡಲೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆಂದು ಹೇಳುತ್ತಾರೆ. ಆದರೆ ಬೇರೆ ಉಳಿದಿದ್ದನ್ನು ಅವರು ಮಾಡುತ್ತಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಲ್ಲವನ್ನು ಸಹ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಹೇಳುತ್ತಿದ್ದೇನೆ. ನನಗೆ ಅಷ್ಟೊಂದು ಜವಾಬ್ದಾರಿ ಇಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಇಷ್ಟು ಹೇಳಿ, ಅವರ ಸ್ನೇಹಿತರಾಗಿ ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆಂದರೂ ಸಹ ವಿಶ್ವಾಸವಿಲ್ಲವೆಂದರೆ, ನಾನು ಏನು ಮಾಡುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರ ಮೇಲೆ ವಿಶ್ವಾಸವಿದೆ. ಆದರೆ, ಇದು ಆಗಬೇಕೆಂದು ಕೇಳುತ್ತೇವೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆಂದು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತಾರೆಂದು ನಾವು ನಂಬುವುದೆ?

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ನಂಬದೇ ಇದ್ದರೆ ಪರವಾಗಿಲ್ಲ. ಅವರು ನಮ್ಮನ್ನು ನಂಬುವುದೇ ಬೇಡ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಖರ್ಚು ಮಾಡಿರುವುದಕ್ಕೆ ನಮ್ಮ ಬಳಿ approval ತೆಗೆದುಕೊಳ್ಳುತ್ತಿದ್ದಾರೆ. ಈಗ ಹೇಳುತ್ತಿರುವ ವಿಷಯದ ಬಗ್ಗೆ ಇನ್ನು ಖರ್ಚು ಮಾಡಿಲ್ಲ. I know that you are not holding the Finance Portfolio.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೆ, ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. Appropriation Bill ಅನ್ನು ಪಾಸ್ ಮಾಡಿಸುವುದಕ್ಕೆ ಬಂದಿದ್ದೇನೆ. ನಮಗೆ ಏನನ್ನು ಕೊಟ್ಟಿದ್ದಾರೆ ಅಷ್ಟನ್ನು ಮಾತ್ರ ಮಾಡಬಹುದು. ಮಾನ್ಯ ಸದಸ್ಯರು ಹೇಳಿರುವುದರಲ್ಲಿ ನಿಜವಾದ ಸಂಗತಿ ಮತ್ತೆ ಕಾರಣವಿದೆ. ಪ್ರಾಮಾಣಿಕವಾಗಿ ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಚೆನ್ನಾಗಿ ಟೋಪಿ ಹಾಕುತ್ತಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದವರು ಚೆನ್ನಾಗಿ ಟೋಪಿ ಹಾಕಿಕೊಂಡು ಜ್ಞಾನಾರ್ಜನೆ ಮಾಡುತ್ತಾರೆ. ನಾವು ಆ ರೀತಿಯಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈ ರೀತಿ ಹೇಳುತ್ತೇವೆಂದು ಅಲ್ಲ. ನಮಗೆ ಇಷ್ಟೆಲ್ಲಾ feelings ಇದೆ. ಅದನ್ನು ನೋಡಿ, ಮಾಡಿಕೊಡಿ ಎಂದು ಕೇಳುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರದು genuine demand ಇದೆ. ಈಗ ಏನು ಹೇಳಿದ್ದಾರೆ, ಅಂದರೆ ಅನಿರೀಕ್ಷಿತವಾಗಿ ಬಂದಿರುವುದಕ್ಕೆ ನಾವು ಎಲ್ಲಾ ಖರ್ಚುಗಳನ್ನು ಮಾಡಿದ್ದೇವೆ ಎಂದು. You can take the approval and we do not have any objection for that. ಅದಕ್ಕೆ ಇದನ್ನು incorporate ಮಾಡಿ. ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಜನೆ ಮಾಡುವ ಬದಲು ಕಾಯಿಪಲ್ಯ ಮಾರುವುದು ಮತ್ತು ಯಾರದೋ ಮನೆಯಲ್ಲಿ ಆಳುಗಳಾಗಿ ದುಡಿದು ಕೆಲಸ ಮಾಡುವುದು ಎಂದರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಲೆಕ್ಚರರ್ಸ್‌ಗಳನ್ನು ಮಧ್ಯಾಹ್ನದ ಒಳಗೆ ಕರೆದುಕೊಂಡು ಬಂದು ಅವರ ಕೈಯಲ್ಲಿ ಹೇಳಿಕೆ ಕೊಡಿಸಿದ್ದೇನೆ. ನನ್ನನ್ನು ನಂಬುವುದಿಲ್ಲವೆಂದರೆ ನಾನು ಇಲ್ಲಿ ಏನನ್ನು ಹೇಳಬೇಕು. ನಂಬಬೇಕು, 'ಆಡದೇ ಮಾಡುವವನು ರೂಢಿಯೊಳಗೆ ಉತ್ತಮನ್ನು, ಆಡಿ ಮಾಡುವವನು ಮಧ್ಯಮನು' ಎಂದು ಧರ್ಮ ಹೇಳಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಕಾನೂನು ಸಚಿವರಿಗೆ ನಮಸ್ಕಾರ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪ್ರಸ್ತಾಪ ಮಾಡುವಾಗ ಆಟೋರಿಕ್ಷಾದವರಿಗೆ, ಮಡಿವಾಳರಿಗೆ, ಕ್ಷೌರಿಕರಿಗೆ, ಟ್ಯಾಕ್ಸಿ ಡ್ರೈವರ್‌ಗಳಿಗೆ, ದಿನಕೂಲಿ ಇಲ್ಲದೇ ಇರತಕ್ಕಂಥ ಕಾರ್ಮಿಕರಿಗೆ, ಯಾವ್ಯಾವ ಊರಿನಲ್ಲಿ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬ ಲೆಕ್ಕವನ್ನು ಸದನದ ಮುಂದೆ ಇಡುವುದಕ್ಕೆ ಅವರಿಗೆ ಸಾಧ್ಯವೇ? ಬೆಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಹುಬ್ಬಳ್ಳಿ ಮತ್ತು ಧಾರವಾಡಗಳಿಗೆ ಸಂಬಂಧಪಟ್ಟಂತೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನು ತಿಳಿಸುತ್ತೇನೆ. Its a right question.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಇವತ್ತು ಕೇಂದ್ರ ಸರ್ಕಾರದಿಂದ ಕೋವಿಡ್‌ಗೆ ಸಂಬಂಧಪಟ್ಟಂತೆ ಅನುದಾನ ಮತ್ತು ಮಾನ್ಯ ಪ್ರಧಾನ ಮಂತ್ರಿಯವರು ಮಾಡಿರುವ PM CARES

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಧಿಯಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಏನು ಬಂದಿದೆ. ಇದನ್ನು ಅವರು ದಯವಿಟ್ಟು ಸದನದ ಮುಂದೆ ಇಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿರುವುದಕ್ಕಾಗಿ ತಮಗೆ ಅನಂತ ಧನ್ಯವಾದಗಳು. ಕರ್ನಾಟಕ ಧನ ವಿನಿಯೋಗ ವಿಧೇಯಕ, 2020ರಲ್ಲಿ ಏನಿದೆ, ಅವರು Debt Services ನಲ್ಲಿ ಮುಂಚೆ ಅದನ್ನು provision ಮಾಡಿಕೊಳ್ಳಲಿಲ್ಲ ಏಕೆ? ಅವರು 265.09 ಅನ್ನು ಏಕೆ ಮಾಡಿಕೊಳ್ಳಲಿಲ್ಲ ಎಂದು ಸ್ಪಷ್ಟೀಕರಣ ಮಾಡಬೇಕು. Original Bill ನಲ್ಲಿ ಇದಕ್ಕೆ provisions ಇರಲಿಲ್ಲ. ಈಗ ಅದನ್ನು ಮಾಡಿಕೊಂಡಿದ್ದಾರೆ ಮತ್ತೆ ಲಾಭಕ್ಕೆ ಸಂಬಂಧಪಟ್ಟಂತೆ 12.53 ಕೋಟಿಗಳನ್ನು ಹೆಚ್ಚುವರಿಯಾಗಿ ಕೇಳಿಕೊಂಡಿದ್ದಾರೆ. ಬಹುಶಃ ಅದು Judges Salaries, New Buildings and Additional Judges Appointment ಗೆ ಸಂಬಂಧಪಟ್ಟಂತೆ ಒಂದು estimation ಬಂದಿದೆ. ಅದೇ ರೀತಿ ಸದಸ್ಯರಾದ ಮಾನ್ಯ ಸಿ.ಎಂ.ಇಬ್ರಾಹಿಂರವರು ಹೇಳಿದ ಹಾಗೆ, COVID-19 relief package ನಲ್ಲಿ ಪ್ರತಿ ಆಟೋ ಚಾಲಕರು, ಟ್ಯಾಕ್ಸಿ ಚಾಲಕರು ಮತ್ತು ದೋಬಿಯವರಿಗೆ ಐದು ಸಾವಿರ ರೂಪಾಯಿಗಳು, ಹೂವು ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ 25 ಸಾವಿರ ರೂಪಾಯಿಗಳು ಹಾಗೂ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ 15 ಸಾವಿರ ರೂಪಾಯಿಗಳನ್ನು ಪಾವತಿಸಲು, ಪ್ರಸ್ತಾವನೆ ಇರುವುದರಿಂದ, ಈ ಕೋವಿಡ್ ಕಾರಣದಿಂದ, ಘೋಷಿಸಲಾದ ಅನೇಕ ಪ್ಯಾಕೇಜ್‌ಗಳಿಗೆ 2020–21 ಸಾಲಿನ ಆಯವ್ಯಯದಲ್ಲಿ ಅವಕಾಶ ಇಲ್ಲದೇ ಇರುವುದರಿಂದ ಅದನ್ನು ಭರಿಸುವುದಕ್ಕೋಸ್ಕರ ಎಂದು ಹೇಳಿದ್ದಾರೆ. ಅವರು ಎಷ್ಟು ಜನ ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ಪರಿಹಾರವನ್ನು ನೀಡಿದ್ದಾರೆ ಮತ್ತು ಪರಿಹಾರ ನೀಡಿದ ಮೊತ್ತವೆಷ್ಟು ಅದಕ್ಕೆ ಸ್ಪಷ್ಟೀಕರಣ ನೀಡಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಸಿ.ಎಂ.ಇಬ್ರಾಹಿಂರವರು ಸಹ ಅದನ್ನೇ ಕೇಳಿದ್ದಾರೆ. ಪದೇಪದೇ ಅದೇ ಪ್ರಶ್ನೆಯನ್ನು ಎಷ್ಟು ಬಾರಿ ಕೇಳುತ್ತಾರೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ, ನಾನು ಇನ್ನು ವಿಷಯವನ್ನು ಮುಗಿಸಿಲ್ಲ. ಅವರು ಎಷ್ಟು ಜನ ಹೂವು ಬೆಳೆಗಾರರಿಗೆ ಪರಿಹಾರ ನೀಡಿದ್ದಾರೆ ಅವರಿಗೆ ಪರಿಹಾರ ನೀಡಿದ ಮೊತ್ತ ಮತ್ತು ವಿಸ್ತೀರ್ಣವೆಷ್ಟು? ಕನಿಷ್ಟ ಜಿಲ್ಲಾವಾರು ಮಾಹಿತಿಯನ್ನು ನೀಡುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೇ ರೀತಿ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಎಷ್ಟು ಪರಿಹಾರ ನೀಡಿದ್ದಾರೆ, ಪರಿಹಾರ ನೀಡಿದ ಮೊತ್ತ ಮತ್ತು ವಿಸ್ತೀರ್ಣವೆಷ್ಟು? ಅವುಗಳ ಜಿಲ್ಲಾವಾರು ಮಾಹಿತಿಯನ್ನು ನೀಡಬೇಕೆಂದು ತಮ್ಮ ಮೂಲಕ ಕೋರಿಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಸದಸ್ಯರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ವಿಸ್ತೃತವಾಗಿ ಹೇಳಿದ್ದಾರೆ. ಮಾನ್ಯ ಕಾನೂನು ಸಚಿವರು ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟ ಹಾಗೆ ಭರವಸೆ ಕೊಡುತ್ತಿದ್ದಾರೆ. ಇವತ್ತಿನ ದಿವಸ ಕೋವಿಡ್‌ನ ಸಂಕಷ್ಟ ಪರಿಸ್ಥಿತಿಯಲ್ಲಿ ಶಿಕ್ಷಕರು ವಾರಿಯರ್ಸ್‌ಗಳಾಗಿ ಕೆಲಸ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿಯೂ ಸಹ ಶಿಕ್ಷಕರು ಪರೀಕ್ಷೆಗಳನ್ನು ನಡೆಸಿ, ಮೌಲ್ಯಮಾಪನ ಮಾಡಿ, ಅವುಗಳ ಫಲಿತಾಂಶವನ್ನು ಸಹ ನೀಡಿದ್ದಾರೆ. ಇಡೀ ಭಾರತ ದೇಶದಲ್ಲೆ ನಮ್ಮ ಕರ್ನಾಟಕದ ಶಿಕ್ಷಕರು ಬಹಳ ಮಾದರಿಯಾಗಿ, ಸಮಾಜದ ಒಳಿತಿಗಾಗಿ ತಮ್ಮ ಜೀವದ ಹಂಗನ್ನು ತೊರೆದು ಕೆಲಸ ಮಾಡಿದ್ದಾರೆ. ಅದರಲ್ಲೂ ಅನುದಾನ ರಹಿತ ಶಾಲೆಗಳಲ್ಲಿ ಇರತಕ್ಕಂಥ ಎಷ್ಟೋ ಮಂದಿ, ಪುಕ್ಕಟೆಯಾಗಿ ಕೆಲಸ ಮಾಡುತ್ತಿದ್ದಾರೆ. ಏಕೆಂದರೆ, ಇಂದಲ್ಲ ನಾಳೆ ಅನುದಾನ ದೊರೆಯುತ್ತದೆ ಎಂದು. ಕೆಲವರು ಹತ್ತಾರು ವರ್ಷಗಳಿಂದ ತಿಂಗಳಿಗೆ ಎರಡು ಸಾವಿರ ರೂಪಾಯಿಗಳಿಗೆ ದುಡಿಯುತ್ತಿದ್ದಾರೆ. ಅಂತಹವರೆಲ್ಲರೂ ಕೂಡ ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಮಾಜಕ್ಕೋಸ್ಕರ ಇಲಾಖೆಯ ನಿರ್ದೇಶನದಂತೆ ಸ್ವ-ಇಚ್ಛೆಯಿಂದ ವಾರಿಯರ್ಸ್‌ಗಳಾಗಿ ಕೆಲಸ ಮಾಡಿರುವಂತಹುದು ದೊಡ್ಡ ನಿದರ್ಶನವಿದೆ. ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ಎರಡು ಬಾರಿ ನಾವುಗಳೆಲ್ಲ ಶಾಸಕರ ನಿಯೋಗ ಹೋಗಿ, ಈ ಅನುದಾನ ರಹಿತ ಶಿಕ್ಷಕರಿಗೆ ಏನಾದರೂ ಕೂಡ ಧನ ಸಹಾಯ ಮಾಡಬೇಕೆಂದು ಅವರನ್ನು ಬಹಳ ಬೇಡಿಕೊಂಡಿದ್ದೆವು. ಅದು ಕೇವಲ ಭರವಸೆಯಾಗಿ ಉಳಿದಿದೆ. ಇವತ್ತು ಅವರು ಈ ವಿಧೇಯಕವನ್ನು ಪಾಸ್ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಈ ಒಂದು ಸಂದರ್ಭದಲ್ಲಿ ನಾವೆಲ್ಲರೂ ಕೂಡ, ದಯವಿಟ್ಟು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಅವರು ಸಾಕಷ್ಟು ಸಂದರ್ಭದಲ್ಲಿ ಕೈಲಾದ ಮಟ್ಟಿಗೆ ಎಲ್ಲಾ ಬಡವರಿಗೆ ಪರಿಹಾರವನ್ನು ನೀಡಿದ್ದಾರೆ. ಆದರೆ, ಅವರು ಶಿಕ್ಷಕ ವರ್ಗವನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ನಾವೆಲ್ಲರೂ ಕೂಡ ಶಿಕ್ಷಕರ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನು ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಇವತ್ತು ಶಿಕ್ಷಕರ ಬದುಕು ಕೂಲಿ ಕಾರ್ಮಿಕರಿಗಿಂತ ತ್ರಾಸವಾಗಿದೆ.

**(ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(895) 26.09.2020 12.10 LL-MD(VK)**

**ಶ್ರೀ ಮರಿತಿಬ್ಬೇಗೌಡ(ಮುಂದು)**

ಆ ದಿಸೆಯಲ್ಲಿ ದಯಮಾಡಿ, ನಮ್ಮ ಅನುದಾನರಹಿತ ಶಾಲೆಗಳಲ್ಲಿ ಕೆಲಸ ಮಾಡಿದವರಿಗೆ ಮತ್ತು ಕೊರೊನಾ ವಾರಿಯರ್ಸ್ ಆಗಿ ಮುಖ್ಯ ವಾಹಿನಿಯಲ್ಲಿ ಕೆಲಸ ಮಾಡಿದ್ದಾರೆ. ಆ ಶಿಕ್ಷಕರಿಗೆ ಸರ್ಕಾರ ಯಾವುದೇ ವಿಮಾ ಯೋಜನೆಯನ್ನು ನೀಡಿರುವುದಿಲ್ಲ. ದಯವಿಟ್ಟು, ಕೊರೊನಾ ವಾರಿಯರ್ಸ್ ಮುಖ್ಯ ವಾಹಿನಿಯಲ್ಲಿ ಕೆಲಸ ಮಾಡಿರುವಂತಹ ಶಿಕ್ಷಕರಿಗೆ, ಒಂದು ಆರೋಗ್ಯ ವಿಮಾ ಯೋಜನೆಯನ್ನು ಕೊಡಬೇಕು. ಜೊತೆಗೆ, ನಮ್ಮ ಶಿಕ್ಷಕ ಸಮುದಾಯಕ್ಕೆ ಅಂದರೆ, ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೂ ಕೂಡ ದಯವಿಟ್ಟು ಸರ್ಕಾರ ಧನಸಹಾಯ ಕೊಡಲೇಬೇಕು ಮತ್ತು ಶಿಕ್ಷಕರ ನೆರವಿಗೆ ಬರಲೇಬೇಕೆಂದು ನಾನು ತಮ್ಮಲ್ಲಿ ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶಿಕ್ಷಕರ ಪರಿಸ್ಥಿತಿ ಯಾವ ರೀತಿ ಆಗಿದೆಯೆಂದು ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಯಾವ ಶಿಕ್ಷಕ engagement ಮಾಡಿಕೊಂಡಿದ್ದಾರೆ, ಅವರಿಗೆ ಮದುವೆ ಆಗಿರುವುದಿಲ್ಲ. ಯಾರು ಮದುವೆ ಮಾಡಿಕೊಂಡಿದ್ದಾರೆ ಅವರು ತನ್ನ ಹೆಂಡತಿಯನ್ನು ಕರೆದುಕೊಂಡು ಮನೆ ಮಾಡಿರುವುದಿಲ್ಲ. ಅವರ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂಬ ಬಗ್ಗೆ ನಾನು ನೈಜ ಸ್ಥಿತಿಯನ್ನು ಹೇಳುತ್ತಿದ್ದೇನೆ. ಶಿಕ್ಷಕರು ರಾಷ್ಟ್ರದ ರೂವಾರಿಗಳು ಹಾಗೂ ರಾಷ್ಟ್ರ ನಿರ್ಮಾಣ ಮಾಡುವವರು ಎಂದು ಬಹಳ ಸುಂದರವಾದಂತಹ ಹಾಗೂ ಕಲಾತ್ಮಕವಾದ ಶಬ್ದಗಳಲ್ಲಿ ಸೆಪ್ಟೆಂಬರ್ 5ರಂದು ಹೇಳಿದ್ದೇ ಹೇಳಿ, ಹೊಟ್ಟೆ ತುಂಬಿಸುತ್ತಾರೆ. ಆದುದರಿಂದ, ದಯಮಾಡಿ ಅಕ್ಷರ ಜ್ಞಾನ ಕೊಡುವಂತಹ ಗುರುಗಳ ಬಗ್ಗೆ ಕಾಳಜಿ ವಹಿಸಬೇಕೆಂದು ಕೋರುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಏನು ಮಂಡಿಸಿದ್ದಾರೆ ಅದಕ್ಕೆ ನಾವು ಒಪ್ಪಿಗೆ ಕೊಡುತ್ತೇವೆ. ಆದರೆ, ಮಾನ್ಯ ಸಚಿವರು ವಿಧೇಯಕದ ಬಗ್ಗೆ ಓದುತ್ತಿರುವಾಗ ಕೆಲವು ವಿಷಯಗಳನ್ನು ಹೇಳಿದರು. ಅದೇನೆಂದರೆ, "ಯಾರು ವಿವಿಧ ಗುಡಿ ಕೈಗಾರಿಕೆಗಳನ್ನು ಮಾಡುವವರು, ಬೇರೆ ಬೇರೆ ಕಸಬುಗಳನ್ನು ಮಾಡುವವರು, ಆಟೋರಿಕ್ಷಾ ಡ್ರೈವರ್ ಇರಬಹುದು, ಟ್ಯಾಕ್ಸಿ ಚಾಲಕರು ಇರಬಹುದು, ಕಮ್ಮಾರರು, ಕುಂಬಾರರು ಇವರೆಲ್ಲರಿಗೂ ಪ್ರತಿ ತಿಂಗಳಿಗೆ 5 ಸಾವಿರ ರೂಪಾಯಿ ಪರಿಹಾರ ಕೊಡುತ್ತೇವೆಂದು ಸರ್ಕಾರ ಘೋಷಣೆ ಮಾಡಿತ್ತು ಹಾಗೂ ಇದಕ್ಕಾಗಿ 97 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು" ಹೇಳಿದರು. ನಾನು ಕೂಡ ಅದನ್ನು check ಮಾಡಿದೆನು. **(ಗೊಂದಲ)** ಹೌದು. ಅವರೆಲ್ಲರಿಗೂ ಒಂದು

ಬಾರಿಗೆ 5 ಸಾವಿರ ರೂಪಾಯಿ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಆ ಪ್ರಕಾರ 97 ಕೋಟಿ ರೂಪಾಯಿಗಳನ್ನು 5 ಸಾವಿರ ರೂಪಾಯಿಯಂತೆ, 1 ಲಕ್ಷ 94 ಸಾವಿರ ಜನರಿಗೆ ಪರಿಹಾರ ಕೊಡುವುದಕ್ಕಾಗುತ್ತದೆ. ಆದರೆ, ಫಲಾನುಭವಿಗಳು ನಮಗೆ ತಿಳಿದ ಮಟ್ಟಿಗೆ ಸುಮಾರು 27 ಲಕ್ಷ ಜನ ಇರುತ್ತಾರೆ. 5 ಸಾವಿರ ರೂಪಾಯಿ ಪಡೆಯುವುದಕ್ಕೆ ಅರ್ಹರಿರುವ ಆಟೋರಿಕ್ಷಾ ಡ್ರೈವರ್‌ಗಳು ಅಥವಾ ಬೇರೆಯವರು ಸುಮಾರು 27 ಲಕ್ಷ ಜನ ಇದ್ದಾರೆ. ಆದರೆ, ಸರ್ಕಾರ ಕೊಟ್ಟಿರುವಂತಹ ಮಾಹಿತಿ ಪ್ರಕಾರ 1 ಲಕ್ಷ 94 ಸಾವಿರ ಜನ ಎಂದು ಬರುತ್ತಿದೆ. ಅಂದರೆ, ಯಾರಿಗೆ ಪರಿಹಾರ ನೀಡಿದ್ದಾರೆ, ಯಾವ ಜಿಲ್ಲೆಯಲ್ಲಿ ನೀಡಿದ್ದಾರೆ, ಈ ಯೋಜನೆ ನಿಜವಾದ ಫಲಾನುಭವಿಗಳಿಗೆ ತಲುಪಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಮಾನ್ಯ ಸಚಿವರು ದಯಮಾಡಿ ತಿಳಿಸಬೇಕು. 4008 ಕೋಟಿ ರೂಪಾಯಿಗಳು ಖರ್ಚಾಗಿದೆ. ದಯಮಾಡಿ, ಅನುಮೋದನೆ ಮಾಡಿಕೊಡಬೇಕೆಂದು ಕೇಳಿದ್ದಾರೆ. ಖಂಡಿತ ನಾವು ಅದಕ್ಕೆ ಅನುಮೋದನೆ ಮಾಡಿಕೊಡಬೇಕು. ಆದರೆ, ಸರ್ಕಾರದ ಆರ್ಥಿಕ ಪರಿಸ್ಥಿತಿ ಇವೊತ್ತಿನ ದಿವಸ ಏನಾಗಿದೆ? ಸರ್ಕಾರ ಬಜೆಟ್ ಘೋಷಣೆ ಮಾಡಿದಂತಹ ಸಂದರ್ಭದಲ್ಲಿ ಸುಮಾರು 53 ಸಾವಿರ ಕೋಟಿ ರೂಪಾಯಿಗಳ ಸಾಲ ಎಂದು ತೋರಿಸಿದ್ದಾರೆ.

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮತ್ತೊಂದು ವಿಧೇಯಕದಲ್ಲಿ ಮಾತನಾಡಬಹುದಾಗಿದೆ.

**ಸಭಾಪತಿಯವರು:–** ಈ ಬಗ್ಗೆ ತಾವು ಮುಂದಿನ ವಿಧೇಯಕದಲ್ಲಿ ಮಾತನಾಡಿ. ಈಗ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ಮಾತನಾಡಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ...

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದರ ಜೊತೆಯಲ್ಲಿ ರೈತರಿಗೆ 5 ಸಾವಿರ ರೂಪಾಯಿ ಏನು ಘೋಷಣೆ ಮಾಡಿದ್ದಾರೆ. ರೈತರಿಗೂ ಕೂಡ...

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಈಗ ಉತ್ತರ ನೀಡಬಹುದೇ?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗ ಉತ್ತರ ನೀಡಬಹುದು ಅಥವಾ ನಾನು ಮಾತನಾಡಿದ ನಂತರ ಬೇಕಾದರೂ ಉತ್ತರ ನೀಡಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ರೈತರಿಗೆ ಅಂದರೆ, ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುವಂತಹ ತೋಟಗಾರಿಕೆ ಮಾಡಿದಂತಹವರು, ಜಾನುವಾರುಗಳನ್ನು ಸಾಕುವಂತಹವರು, ಹೂ ಮತ್ತು ತರಕಾರಿಗಳನ್ನು ಬೆಳೆದಂತಹ ರೈತರಿಗೆ ಒಂದು ಹೆಕ್ಟೇರ್‌ಗೆ 25 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಸರ್ಕಾರದವರು ಘೋಷಣೆ ಮಾಡಿದರು. **(ಗೊಂದಲ)** ಆದರೆ, ಯಾವುದೇ ರೈತರನ್ನು ಕೇಳಿದರೂ ಕೂಡ ನಮಗೆ ಏನು ಬಂದಿದೆಯೆಂಬ ಉತ್ತರ ಬರುತ್ತಿದೆ. ದಯಮಾಡಿ, ಮಾನ್ಯ ಸಚಿವರು ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಹಾಗೇ ಮಾನ್ಯ ಸಚಿವರು ಮಾತನಾಡುತ್ತಾ, 97 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಮೀಸಲಿಟ್ಟು ಖರ್ಚು ಮಾಡಿದ್ದೇವೆಂದು ಉತ್ತರ ನೀಡಿರುತ್ತಾರೆ. ಆದರೆ, ಫಲಾನುಭವಿಗಳು 1 ಲಕ್ಷ 94 ಸಾವಿರ ಜನ ಬರುತ್ತಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, Government runs on documents. ನಾವು ಈ ಸದನಕ್ಕೆ ಉತ್ತರ ಕೊಡುವುದಕ್ಕಾಗಿಯೇ ಬಂದಿದ್ದೇವೆ. ಆದರೆ, ನಮಗೆ ಉತ್ತರ ನೀಡುವುದಕ್ಕೆ ಬಿಡುತ್ತಿಲ್ಲವೆಂದು ನಾನು ನಗುತ್ತಿದ್ದೇನೆಯೇ ಹೊರತು ಬೇರೆ ಕಾರಣವಿಲ್ಲ. ಬಹಳಷ್ಟು ಸದಸ್ಯರು ಪ್ರಶ್ನೆ ಕೇಳಿದ್ದು, ಅದಕ್ಕೆ ಉತ್ತರ ನೀಡುತ್ತೇನೆಂದು ನಾನು 3 ಬಾರಿ ಮೇಲೆ ಎದ್ದು ನಿಂತರೂ ನನಗೆ ಉತ್ತರ ನೀಡುವುದಕ್ಕೆ ಅವಕಾಶ ನೀಡುತ್ತಿಲ್ಲ. ಅಲ್ಲದೇ, ಶ್ರೀ ಸಿ.ಎಂ. ಇಬ್ರಾಹಿಂ ರವರು ಕೇಳಿದ ವಿಷಯಗಳೇ ಮತ್ತೆ ಪುನರಾವರ್ತನೆಯಾಗುತ್ತಿವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಜಲ ಸಂಪನ್ಮೂಲ ಇಲಾಖೆಗೆ 84 ಕೋಟಿ ರೂಪಾಯಿಗಳನ್ನು ಅಧಿಕವಾಗಿ ಖರ್ಚು ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದರು. ಆಯವ್ಯಯದಲ್ಲಿ ವಿಶೇಷವಾಗಿ ನೀರಾವರಿ ಯೋಜನೆಯಲ್ಲಿ ಆಲಮಟ್ಟಿ ಜಲಾಶಯ 3ನೇ ಹಂತವನ್ನು ಪೂರ್ಣಗೊಳಿಸುವುದಕ್ಕೆ 10 ಸಾವಿರ ಕೋಟಿ ರೂಪಾಯಿಗಳ ಹಣ ಕೊಡುತ್ತೇವೆಂದು ಹೇಳಿದರು. ಆದರೆ, ಅದು ಬಜೆಟ್‌ನಲ್ಲಿ ಇರಲಿಲ್ಲ. ತದನಂತರ, ಸರ್ಕಾರದಿಂದ ಆಶ್ವಾಸನೆ ನೀಡಲಾಗಿತ್ತು. ಪ್ರಸ್ತುತ ನಾವು ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿದ್ದು, ಕೇವಲ 84 ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಖರ್ಚು ಮಾಡಲಾಗಿರುತ್ತದೆ. ಹಾಗಾಗಿ, ನೀರಾವರಿ ಯೋಜನೆಗಾಗಿ 10 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆಯೇ, ಅದಕ್ಕಾಗಿ ಹಣ ಮೀಸಲಿಡಲಾಗಿದೆಯೇ ಹಾಗೂ ಅದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ. 2020-21 ನೇ ಸಾಲಿನಲ್ಲಿ 6 ತಿಂಗಳು ಮುಗಿದಿದ್ದು, ಇನ್ನೂ 6 ತಿಂಗಳು ಉಳಿದಿರುತ್ತದೆ. ಈ 6 ತಿಂಗಳ ಅವಧಿಯಲ್ಲಿ ಉಳಿದಿರುವಂತಹ 9916 ಕೋಟಿ ರೂಪಾಯಿಗಳನ್ನು ಕೊಡುತ್ತಾರೆಯೇ; ಅದಕ್ಕೆ ಏನಾದರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆ ಮಾಡಲಾಗಿದೆಯೇ ಅಥವಾ ಸರ್ಕಾರ ಕೋವಿಡ್–19 ವಿಚಾರದಲ್ಲಿ ಸಾಕಷ್ಟು ಸಂಕಟದಲ್ಲಿರುವುದರಿಂದ ಅನುದಾನವನ್ನು ಕಡಿಮೆ ಮಾಡುತ್ತಾರೆಯೇ; ಒಂದು ವೇಳೆ ಕಡಿಮೆ ಮಾಡುವುದಾದರೆ ಎಷ್ಟು ಹಣ ಕಡಿಮೆ ಮಾಡುತ್ತಾರೆಂಬ ಎನ್ನುವುದನ್ನು ದಯಮಾಡಿ ಹೇಳಬೇಕೆಂದು ಕೋರುತ್ತೇನೆ.

**ಡಾ॥ ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಸರ್ಕಾರದಿಂದ additional ಆಗಿ 4 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅದರಲ್ಲಿಯೂ ವಿಶೇಷವಾಗಿ, ಹಳೆಯ ಬಿಲ್ಲನ್ನು clear ಮಾಡುವುದಕ್ಕಾಗಿ Department of Informationಗೆ 56 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮಾನ್ಯ ಹೊರಟ್ಟಿಯವರು ಹಾಗೂ ಶ್ರೀ ಮರಿತಿಬ್ಬೇಗೌಡರವರು ಹೇಳಿದ ಹಾಗೆ, ಈ ರಾಜ್ಯದಲ್ಲಿ ಎಲ್ಲಾ ವರ್ಗಗಳಿಗೂ ನಮ್ಮ ಸರ್ಕಾರ ಸಹಾಯ ಮಾಡಿದೆ. ಆಟೋರಿಕ್ಷಾದಿಂದ ಹಿಡಿದು ಹೂ ಮಾರುವವರು, ಹಣ್ಣು ಮಾರುವವರು, ತರಕಾರಿ ಬೆಳೆಯುವವರು, **(ಗೊಂದಲ)** ಸವಿತಾ ಸಮಾಜದವರು ಮತ್ತು ಮಡಿವಾಳರು ಎಲ್ಲರಿಗೂ ಸಹಾಯ ಮಾಡಿದ್ದಾರೆ. ನಾವು ಅದನ್ನು ಸ್ವಾಗತ ಮಾಡುತ್ತಿದ್ದೇವೆ. ಕೊರೊನಾದಂತಹ pandemic ಕಾಲಘಟ್ಟದಲ್ಲಿ ಬಡವರ ಮತ್ತು ಪೀಡಿತರ ವರ್ಗಕ್ಕೆ ಸಹಾಯ ಮಾಡಬೇಕಾಗಿರುವುದು ಯಾವುದೇ ನಾಗರಿಕ ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಆ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡಿದೆ. ಹಾಗಾಗಿ, ಸರ್ಕಾರಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ.

ಆದರೆ, ದೇಶ ಕಟ್ಟುವ ಶಿಕ್ಷಕ ಸಮುದಾಯ ಇವೊತ್ತಿನ ದಿವಸ ಸಂಕಷ್ಟದಲ್ಲಿದೆ. ವಿಶೇಷವಾಗಿ, ಈ ರಾಜ್ಯದಲ್ಲಿ ಖಾಸಗಿ ಅನುದಾನ ರಹಿತ ಶಾಲಾ ಶಿಕ್ಷಕರು ಸುಮಾರು 3 ಲಕ್ಷ ಜನರಿದ್ದಾರೆ. ಇಡೀ ರಾಜ್ಯದಲ್ಲಿರುವ ನೌಕರರ ಸಂಖ್ಯೆ 6 ಲಕ್ಷ. ಅದರಲ್ಲಿ, ಶಿಕ್ಷಕರ ಸಂಖ್ಯೆಯೇ 3 ಲಕ್ಷದ 50 ಸಾವಿರ ಜನರಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಸಂಖ್ಯೆ ಸುಮಾರು 2 ಲಕ್ಷದಷ್ಟಿದೆ. ಸರ್ಕಾರಿ ಶಿಕ್ಷಕರು ಮತ್ತು ಅನುದಾನಿತ ಶಿಕ್ಷಕರು 1 ಲಕ್ಷ 65 ಸಾವಿರ ಮಾತ್ರ ಇದ್ದಾರೆ. 2 ಲಕ್ಷದಷ್ಟು ಶಿಕ್ಷಕರಿದ್ದಾರೆ. ಈ ರಾಜ್ಯದಲ್ಲಿ 1 ರಿಂದ 10ನೇ ತರಗತಿಯವರೆಗೆ ಓದುತ್ತಿರುವ ಮಕ್ಕಳ ಸಂಖ್ಯೆ 1 ಕೋಟಿ ಇದೆ. 10 ನೇ ತರಗತಿಯಿಂದ ಡಿಗ್ರಿ ಹಂತದವರೆಗೆ ಬೇರೆ ಬೇರೆ ಕಡೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ಸುಮಾರು 40 ಲಕ್ಷ. ಅಂದರೆ, 1 ಕೋಟಿ 40 ಲಕ್ಷ ಮಕ್ಕಳ ಭವಿಷ್ಯವನ್ನು ರೂಪಿಸುವುದಕ್ಕೆ ತಯಾರಾಗಿ ನಿಂತಿರುವಂತಹ ಶಿಕ್ಷಕರ ಸಂಖ್ಯೆ 2 ಲಕ್ಷದಷ್ಟಿದೆ. ಆ ಸಮುದಾಯ ಇವೊತ್ತಿನ ದಿವಸ ಬಹಳ ಆತಂಕದಲಿದ್ದು, ಸ್ವಾಭಿಮಾನ, ಗೌರವ, ಪ್ರತಿಷ್ಠೆ ಎಲ್ಲವನ್ನೂ ಬಿಟ್ಟು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಹಳ ಸಂಕಷ್ಟದಲ್ಲಿ ಹಾಗೂ ದುರ್ಭಿಕ್ಷೆಯಲ್ಲಿ ಬದುಕುವಂತಹ ಕಾಲಘಟ್ಟದಲ್ಲಿ ಅವರು ಇದ್ದಾರೆ. ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಶ್ರೀ ಸುರೇಶ್ ಕುಮಾರ್‌ರವರು ನಮ್ಮನ್ನೆಲ್ಲಾ ಕರೆದು ಈ ವಿಷಯದ ಬಗ್ಗೆ ಸಭೆ ನಡೆಸಿ, ಸಹಾಯ ಮಾಡುತ್ತೇವೆಂದು ಭರವಸೆ ನೀಡಿದ್ದರು. ಮಾನ್ಯ ಕಾನೂನು ಸಚಿವರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದೇನೆಂದರೆ, ದಯಮಾಡಿ, ಆ ಶಿಕ್ಷಕರಿಗೆ ಕನಿಷ್ಠ ಒಂದು ಪ್ಯಾಕೇಜ್‌ನಲ್ಲಿ ತಲಾ ಒಬ್ಬ ಶಿಕ್ಷಕರಿಗೆ 10 ಸಾವಿರ ರೂಪಾಯಿ ಆದರೂ ಕೊಟ್ಟರೆ, ಅವರು ಗೌರವದಿಂದ ಬದುಕುವ ವ್ಯವಸ್ಥೆಯಾಗುತ್ತದೆ. ಆ ರೀತಿ ಅವರಿಗೆ 10 ಸಾವಿರ ರೂಪಾಯಿ ಕೊಟ್ಟರೆ ಬರೀ 200 ಕೋಟಿ ರೂಪಾಯಿ ಆಗುತ್ತದೆ. ಆದರೆ, ಇಲಾಖಾಧಿಕಾರಿಗಳು ಸರ್ಕಾರಕ್ಕೆ ತಪ್ಪು ಮಾಹಿತಿ ಕೊಟ್ಟು 500-600 ಕೋಟಿ ಎಂದು ಹೇಳುತ್ತಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರಿಗೆ 200 ಕೋಟಿ ರೂಪಾಯಿ 'ಬರೀ' ಎಂದಾದರೆ, 'ಭಾರೀ' ಎಂದರೆ ಎಷ್ಟು ಹಣ ಎಂದು figure ಹೇಳಬೇಕು.

**ಡಾ|| ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಶಿಕ್ಷಕರಿಗೆ 200 ಕೋಟಿ ರೂಪಾಯಿಗಳನ್ನು ದಯಮಾಡಿ ನೀಡಿ, ಅವರಿಗೆ ಅನುಕೂಲ ಮಾಡಬೇಕೆನ್ನುವ ಮನವಿಯನ್ನು ಮಾನ್ಯ ಸಚಿವರ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತಿದ್ದೇವೆ. ಇದು ನಮ್ಮೆಲ್ಲಾ ಶಿಕ್ಷಕ ಮತ್ತು ಪದವೀಧರರ ಕ್ಷೇತ್ರದ ಸದಸ್ಯರ ಅಭಿಪ್ರಾಯ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪಿ.ಆರ್. ರಮೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ನಮ್ಮ ಮುಂದೆ ಇರತಕ್ಕಂತಹ ಬಿಲ್ *Karnataka Contingency Fund.* ಆ ಆಕ್ಟ್‌ಗೆ amendment ತರತಕ್ಕಂತಹ proposal ಇದರಲ್ಲಿದೆ. ಈ ಹಿಂದೆ 35 ವರ್ಷಗಳಿಂದ maximum limits ಸುಮಾರು 80 ಕೋಟಿ ರೂಪಾಯಿ ಎಂದು ಹೇಳಿ...

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ ತಾವು ಯಾವ ಬಿಲ್ ಬಗ್ಗೆ ಮಾತನಾಡುತ್ತಿದ್ದೀರಿ? ತಾವು ಓದುತ್ತಿರುವುದು ಮುಂದಿನ ಬಿಲ್.

**(ಗೊಂದಲ)**

**ಶ್ರೀ ಹೆಚ್.ಎಂ. ರಮೇಶ್‌ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ಪ್ಯಾಕೇಜ್‌ನಲ್ಲಿ 4800 ಕೋಟಿ ರೂಪಾಯಿಗಳ ಘೋಷಣೆ ಏನು ಮಾಡಿದ್ದಾರೆ, ಅದರಲ್ಲಿ ಇಲಾಖಾವಾರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿಯೇ ಇಲ್ಲ. ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಹಣ ಬಿಡುಗಡೆ ಆಗಿದೆ ಎಂಬ ಬಗ್ಗೆ ಇದರಲ್ಲಿ ಮಾಹಿತಿ ಇಲ್ಲ. ಆದರೆ, ಸರ್ಕಾರದವರು ಇಲಾಖಾವಾರು, ಜಿಲ್ಲಾವಾರು ಮಾಹಿತಿಯನ್ನು ಸದಸ್ಯರಿಗೆ ಕೊಡಬೇಕಾಗುತ್ತದೆ. **(ಮುಂದು)**

**(896)26.09.2020/12.20/ವೈಎಲ್-ಎಕೆ**

**ಶ್ರೀ ಹೆಚ್.ಎಂ.ರಮೇಶ್ ಗೌಡ (ಮುಂದು):-**

ಮಾನ್ಯ ಸಭಾಪತಿಯವರೇ, blind ಆಗಿ ರೂ.4800 ಕೋಟಿ ಪ್ಯಾಕೇಜ್ ಹೊಂದಿರುವ ವಿಧೇಯಕವನ್ನು ತಂದರೆ ಯಾರಿಗೂ ಸಹ ಏನೂ ಅರ್ಥವಾಗುವುದಿಲ್ಲ. ಅದರ ಜೊತೆಗೆ ಸರ್ಕಾರ ಘೋಷಣೆ ಮಾಡಿರುವ ಕುರಿತು ಹಿರಿಯ ಸದಸ್ಯರೆಲ್ಲರೂ ಮಾತನಾಡಿದ ಹಾಗೆ ಆಟೋ ಚಾಲಕರು, ಸವಿತಾ ಸಮಾಜದವರಿಗೆ, ದೋಬಿ ಜನಾಂಗದವರಿಗೆ ರೂ.5000 ಗಳನ್ನು ಘೋಷಣೆ ಮಾಡಿದ್ದು, ಆ ಹಣವನ್ನು ತೆಗೆದುಕೊಳ್ಳಲು ಹಾಕಿರುವಂಥ ಯೋಜನೆ ಏನಿದೆ,... ನಂತರ ಆರ್ಥಿಕ ಇಲಾಖೆಯವರಿಗೆ ಯಾರೂ ಸಲಹೆಯನ್ನು ನೀಡುತ್ತಾರೆಯೋ ಗೊತ್ತಿಲ್ಲ. ಆಟೋ ಚಾಲಕರು ಎಂದ ಮೇಲೆ ಅವರಿಗೆ ಆದ ಒಂದು ಬ್ಯಾಡ್ಜ್ ವಿತರಿಸಲಾಗಿರುತ್ತದೆ. ಅದೇ ರೀತಿ ದೋಬಿ ಎಂದಾಕ್ಷಣ ಯಾರ್‍ಯಾರೋ ದೋಬಿ ಕೆಲಸ ಮಾಡುವುದಿಲ್ಲ. ಸವಿತಾ ಸಮಾಜ ಎಂದಾಕ್ಷಣ ಯಾರ್‍ಯಾರೋ ಬರಲು ಸಾಧ್ಯವಿಲ್ಲ. ಹಾಗಾಗಿ ಅವರನೆಲ್ಲಾ ನೋಡಿಕೊಂಡು ಅವರ ಭಾವಚಿತ್ರ ತೆಗೆದುಕೊಂಡು, ಆ ಭಾವಚಿತ್ರದ ಆಧಾರದ ಮೇಲೆ ರೂ.5000 ಗಳನ್ನು ವಿತರಿಸಿದರೆ ಸರಿಹೋಗುತ್ತದೆ. ಅದನ್ನು ಸಹ ಸರ್ಕಾರ ಮಾಡುತ್ತಿಲ್ಲ. ಕೇವಲ ಘೋಷಣೆ ಮಾಡುತ್ತಿದ್ದಾರೆ ವಿನಹ ಕಾರ್ಯರೂಪಕ್ಕೆ ತಂದಿಲ್ಲ. ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ತಮ್ಮ ಮೂಲಕ ಮಾನ್ಯ ಕಾನೂನು ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ನಿರಾಣಿ ಹನುಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2020ರ ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕವನ್ನು ಸ್ವಾಗತಿಸುತ್ತೇನೆ. ಈಗಾಗಲೇ ಹಿರಿಯ ಸದಸ್ಯರೆಲ್ಲರೂ ಅನುದಾನರಹಿತ ಶಿಕ್ಷಕರಿಗೆ ಏನಾದರೂ ಧನಸಹಾಯ ಮಾಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾನು ಸಹ ಸದನದ ಮೂಲಕ ಅಗ್ರಹ ಮಾಡುತ್ತಿದ್ದೇನೆ. ಅನುದಾನರಹಿತ ಶಿಕ್ಷಕರಿಗೆ ವಿಶೇಷ ಪ್ಯಾಕೇಜನ್ನು ನೀಡಬೇಕು. ಈಗಾಗಲೇ ಅನುದಾನ ಶಿಕ್ಷಕರಿಗೆ ಸರ್ಕಾರ ಘೋಷಣೆ ಮಾಡಿರುವಂಥ ಪ್ಯಾಕೇಜನ್ನು ನಾವೆಲ್ಲರೂ ಸಹ ನೋಡುತ್ತಿದ್ದೇವೆ. ಅದರ ಜೊತೆಗೆ ಕಳೆದ 2 ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸಹ ಅತಿಥಿ ಉಪನ್ಯಾಸಕರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಳಿದಿರುವಂತಹ ಬಾಕಿ ವೇತನವನ್ನು ನೀಡುವಂಥ ಘೋಷಣೆಯನ್ನು ಮಾಡಿದ್ದಾರೆ. ಅದರ ಜೊತೆಗೆ ಅನುದಾನ ರಹಿತ ಶಿಕ್ಷಕರಿಗೂ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, 'ಪೂರಕ ಅಂದಾಜು' ಪುಸ್ತಕವನ್ನು ಬಿಡುಗಡೆ ಮಾಡಲಾಗಿದ್ದು, ಆ ಪುಸ್ತಕವನ್ನು ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ.ರಮೇಶ್ ಗೌಡರವರು ದಯವಿಟ್ಟು ಓದಿಕೊಳ್ಳಬೇಕು.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ನಮಗೆ ಆ ಪುಸ್ತಕ ತಲುಪಿಲ್ಲ. ನಾವೂ ಸಹ ಪದೇ ಪದೇ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದು, ನಾವು ಕೇಳುವ ಪ್ರಶ್ನೆಗೆ ಉತ್ತರವೇ ಬಂದಿರುವುದಿಲ್ಲ. ಹಾಗಾಗಿ ಸಂಬಂಧಪಟ್ಟವರು ಯಾರು ಇರುತ್ತಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಹೇಳಿದ ಹಾಗೆ ಅವರು ಹೇಳಿದ ವಿಷಯಗಳೆಲ್ಲವೂ 'ಪೂರಕ ಅಂದಾಜು ಪುಸ್ತಕ' ದಲ್ಲಿದೆ ಎಂದು ಹೇಳಲಿಲ್ಲ. ನಿನ್ನೆ ದಿವಸ ಸಹ ವಿಧೇಯಕವನ್ನು ಮಾತ್ರ ತಂದಿದ್ದಾರೆ...

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಪುಸ್ತಕವನ್ನು ಒಂದು ಸಲ ಓದಲಿ.

**(ಗೊಂದಲ)**

**ಶ್ರೀ ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಮಾನ್ಯ ಸಚಿವರು ಮೊದಲೇ ಹೇಳಬೇಕಾಗಿತ್ತು ಅಲ್ಲವೇ?

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಕೇಳಿದ ತಕ್ಷಣ circulate ಆಗಿದೆ ಎಂದು ಅದರ ಪ್ರತಿಯನ್ನು ನೀಡಿದ್ದೆವು. ಅದಕ್ಕೂ ಮೀರಿ ನಾನು ಏನು ಮಾಡುವುದಕ್ಕೆ ಸಾಧ್ಯ? ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರ ಕೈಯಲ್ಲಿಯೇ ಪೂರಕ ಅಂದಾಜು ಪುಸ್ತಕ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿಧೇಯಕದಲ್ಲಿ ಮಾನ್ಯ ಸದಸ್ಯರಿಗೆ ಅಂಕಿ-ಅಂಶಗಳ ಬಗ್ಗೆ educate ಮಾಡಬಹುದಾಗಿತ್ತಲ್ಲವೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಪುಸ್ತಕವನ್ನು ಇಲ್ಲಿ ನಿಂತುಕೊಂಡು ಓದಲು ಸಾಧ್ಯವೇ ಹೇಳಿ. ಮುಸುಕಿನ ಜೋಳದ 7,19,519 ಪಲಾನುಭವಿ ರೈತರಿಗೆ ಒಂದು ಹೆಕ್ಟೇರ್‌ಗೆ ರೂ.500 ರಂತೆ 359.76 ಕೋಟಿ ನೀಡಲಾಗಿದೆ. ಹೂವು ಬೇಡಿಕೆ ಇಲ್ಲದೇ ಹಾಳಾಗಿದೆ ಎನ್ನುವವರಿಗೆ 12,735 ಹೆಕ್ಟೇರ್ ವಿಸ್ತೀರ್ಣ ಹೊಂದಿದವರಿಗೆ 20,292 ಫಲಾನುಭವಿಗಳಿಗೆ 31.83 ಕೋಟಿ ಅನುದಾನ ಭರಿಸಿದ್ದು, ಈಗಾಗಲೇ 14.49 ಕೋಟಿ ಅನುದಾನ ನೀಡಲಾಗಿದೆ. ಹಣ್ಣು, ತರಕಾರಿ ಬೆಳೆಗಾರರಿಗೆ ಪ್ರತಿ ಹೆಕ್ಟೇರಿಗೆ ರೂ.15,000 ರಂತೆ 75.16 ಕೋಟಿ ಅನುದಾನದಲ್ಲಿ 71,778 ಫಲಾನುಭವಿಗಳಿಗೆ ರೂ.57.59 ಕೋಟಿ ನೀಡಲಾಗಿದೆ. ಬೆಲೆ ಸ್ಥಿರೀಕರಣ ನಿಧಿಯಡಿ ಕೆ.ಎಸ್.ಎಂ.ಬಿ. ವತಿಯಿಂದ 2181 ಫಲಾನುಭವಿಗಳಿಗೆ ರೂ.20.00 ಕೋಟಿ ನೀಡಲಾಗಿದೆ. ರೇಷ್ಮೆ ಬೆಳೆಗಾರರಿಗೆ 35 ಕೋಟಿ ಅನುದಾನ ಒದಗಿಸಲಾಗಿದ್ದು, ಸುಮಾರು 70,000 ಫಲಾನುಭವಿಗಳಿದ್ದು, ಪೇಮೆಂಟ್ ಮಾಡಬೇಕು. ಕ್ಷೌರಿಕರು ಮತ್ತು ಅಗಸರಿಗೆ ತಲಾ ರೂ.5000 ದಂತೆ 1,14,388 ಫಲಾನುಭವಿಗಳಿಗೆ 60 ಕೋಟಿ ಅನುದಾನ ಮೀಸಲಿರಿಸಿದ್ದು, ರೂ.58.00 ಕೋಟಿ ನೀಡಲಾಗಿದೆ. ಅತೀ ಸಣ್ಣ, ಸಣ್ಣ ಹಾಗೂ ಮಧ್ಯಮ ಉದ್ದಿಮೆದಾರರು ಉದ್ದಿಮೆಗಳನ್ನು ತೆರೆಯಲಾಗದೇ ಹಾಗೂ ತಮ್ಮ ಉತ್ಪನ್ನಗಳನ್ನು ಸಾಗಿಸಿ ಮಾರಾಟ ಮಾಡಲಾಗದೇ ನಷ್ಟವನ್ನು ಅನುಭವಿಸಿದ್ದಾರೆ. ಆದ್ದರಿಂದ ಈ ಉದ್ದಿಮೆಗಳ ವಿದ್ಯುತ್ ಬಿಲ್ಲಿನಲ್ಲಿ ಫಿಕ್ಸ್ಡ್ ಚಾರ್ಜನ್ನು ಎರಡು ತಿಂಗಳ ಅವಧಿಗೆ ಪೂರ್ತಿಯಾಗಿ ಮನ್ನಾ ಮಾಡಲು ರೂ.174 ಕೋಟಿ ಅನುದಾನದಲ್ಲಿ 24,549 ಫಲಾನುಭವಿಗಳಲ್ಲಿ ರೂ.52.75 ಕೋಟಿ ರಿಯಾಯಿತಿ ನೀಡಲಾಗಿದೆ. ನೇಕಾರರಿಗೆ ನೆರವಾಗಲು, "ನೇಕಾರರ ಸಾಲಮನ್ನಾ ಯೋಜನೆ" ಯನ್ನು ಘೋಷಿಸಿ ರೂ.109.00 ಕೋಟಿ ಅನುದಾನ ಮೀಸಲಿರಿಸಿದ್ದು, 20,488 ಫಲಾನುಭವಿಗಳಿದ್ದು ರೂ.75.30 ಕೋಟಿ ವೆಚ್ಚವಾಗಿದೆ.

"ನೇಕಾರ್ ಸಮ್ಮಾನ್ ಯೋಜನೆ" ಯಲ್ಲಿ ಪ್ರತಿ ನೇಕಾರರಿಗೆ 2,000 ರೂ.ಗಳನ್ನು ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲು ರೂ.10.96 ಕೋಟಿ ಅನುದಾನ ಮೀಸರಿಸಿದ್ದು, 44,515 ಫಲಾನುಭವಿಗಳಿಗೆ ರೂ.8.90 ಕೋಟಿ ವೆಚ್ಚವಾಗಿದೆ. ವಿದ್ಯುತ್ ಚಾಲಿತ ಘಟಕಗಳ ಪ್ರತಿ ನೇಕಾರರಿಗೆ ರೂ.2,000 ರಂತೆ ರೂ.25 ಕೋಟಿ ಅನುದಾನ ಮೀಸರಿಸಿದ್ದು, 44,021 ಫಲಾನುಭವಿಗಳಿಗೆ ರೂ.8.80 ಕೋಟಿ ವೆಚ್ಚವಾಗಿದೆ. ಆಟೋ ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ತಲಾ ರೂ.5,000 ದಂತೆ ರೂ.175 ಕೋಟಿ ಅನುದಾನ ಮೀಸಲಿರಿಸಿದ್ದು, ರೂ.107.06 ಕೋಟಿ ನೀಡಲಾಗಿದೆ. ಅದರ ಜೊತೆಗೆ ಬೇರೆ ಫಂಡ್‌ನಿಂದ ರೂ.10.00

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಿ ವೆಚ್ಚವಾಗಿದ್ದು, ಇದರಲ್ಲಿ ರೂ.90 ಕೋಟಿಗಳನ್ನು ತೋರಿಸಲಾಗಿದೆ, 2,14,119 ಫಲಾನುಭವಿಗಳಿಗೆ ನೀಡಿದ್ದು, ಸುಮಾರು 2,45,000 ಅರ್ಜಿ ಬಂದಿತ್ತು. ಹಾಗೆಯೇ ಕೋವಿಡ್-19 ಸೊಂಕು ಕಾರಾಗೃಹದಲ್ಲಿ ಹರಡದಂತೆ ತಡೆಯಲು ಕಾರಾಗೃಹ ಇಲಾಖೆಯಲ್ಲಿ ರೂ.3.23 ಕೋಟಿ ವೆಚ್ಚವಾಗಿದೆ. ಆಹಾರ subsidized ಎಲ್ಲ ಸೇರಿ ರೂ.572.00 ಕೋಟಿ ವೆಚ್ಚವಾಗುತ್ತದೆ. ಎನ್.ಪಿ.ಹೆಚ್. ಕಾರ್ಡ್‌ದಾರರಿಗೆ 2 ತಿಂಗಳಿಗೆ 10 ಕೆ.ಜಿ. ಅಕ್ಕಿ ನೀಡಲು ರೂ.18.00 ಕೋಟಿ ಖರ್ಚಾಗಿದೆ. ಅದರ ಸಂಪೂರ್ಣ ವಿವರವನ್ನು ನೀಡಲಾಗಿದೆ. ಈಗ ನಮ್ಮ ಮುಂದೆ ಇರುವ issue ಏನೆಂದರೆ, ಮಾನ್ಯ ಎಂ.ನಾರಾಯಣಸ್ವಾಮಿಯವರಿಗೆ ಬಂದಿರುವಂತಹ ಅಂಕಿ-ಅಂಶ ಹೇಗೆ ಬಂತೋ ಗೊತ್ತಿಲ್ಲ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೆಲ್ಲಾ ನಿನ್ನೆ ದಿವಸ ಮಾತನಾಡುವಾಗ 7 ಲಕ್ಷಗಳಷ್ಟು registered ಟ್ಯಾಕ್ಸಿ ಡ್ರೈವರ್, ಆಟೋ ಚಾಲಕರಿದ್ದು ಕೇವಲ 2 ಲಕ್ಷದ 14 ಜನರಿಗೆ ಮಾತ್ರ ಏತಕ್ಕೆ ನೀಡಿದ್ದೀರಿ ಎಂದು ಕೇಳಿದರು. ಆದರೆ, 7 ಲಕ್ಷ ಜನರಿಗೆ ನೀಡಲಾಗಿದೆ. 7 ಲಕ್ಷಕ್ಕೆ arrive ಆಗಿದ್ದು ಏತಕ್ಕೆಂದರೆ, ಯಾವ್ಯಾವ ಆರ್.ಟಿ.ಓ. ನಲ್ಲಿ ಆಟೋ ಮತ್ತು ಟ್ಯಾಕ್ಸಿ ನೋಂದಣಿ ಮಾಡಿಸಿರುವ ಸುಮಾರು 7 ಲಕ್ಷ ಜನರಿಗೆ ನೀಡಬೇಕೆಂದು ಹೇಳಿಕೆ ನೀಡಿರುವುದು ನಿಜ. ಅಷ್ಟು ಜನರಿಗೆ ಕೊಟ್ಟಾದ ಮೇಲೆ 2 ಲಕ್ಷದ 45 ಸಾವಿರ ಅರ್ಜಿ ಬಂದಿತ್ತು. 35 ಸಾವಿರ ಅರ್ಜಿ ಪರಿಶೀಲನೆಯಲ್ಲಿದ್ದು, ಉಳಿದ 2 ಲಕ್ಷದ 15 ಸಾವಿರ ಜನರಿಗೆ ವಿತರಣೆ ಮಾಡಲಾಗಿದೆ. It is not 27 lakhs. It is only 7 lakhs. ಈ ಸಂಬಂಧವಾಗಿ ನಿನ್ನೆ ದಿವಸ ವಿಧಾನಸಭೆಯಲ್ಲಿ ಮಾತನಾಡುವಾಗ ಉತ್ತರ ನೀಡಿದ್ದೇನೆ. ಇನ್ನೊಂದು ಅವಕಾಶ ನೀಡುವುದೇನೆಂದರೆ, ಒಂದು ವೇಳೆ ಯಾರಿಗಾದರೂ ಮಿಸ್ ಆಗಿದ್ದರೆ, ಅಂಥವರು ಈ ಯೋಜನೆಯಡಿ ಬಂದರೆ, ಅವರಿಗೂ ಸಹ ನೀಡಲಾಗುವುದು. ನಾವು ಈ ಯೋಜನೆಯನ್ನು launch ಮಾಡಿದ್ದಾಗ, ಅರ್ಜಿ ಹಾಕಬೇಕಾಗಿತ್ತು. ಅವರು ಅರ್ಜಿ ನಮೂದಿಸದೇ ಬೇಕಾಗಿತ್ತು. ಅರ್ಜಿ ಬಂದಿರುವುದೇ 2 ಲಕ್ಷದ 45 ಸಾವಿರ ಮಾತ್ರ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇನ್ನೂ ಸ್ವಲ್ಪ ದಿವಸ ಸಮಯವನ್ನು ಎಕ್ಸ್‌ಟೆಂಡ್ ಮಾಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನು ಸಹ ಮಾಡಲಾಗಿದೆ. 'We will give one more opportunity' ಎಂದು ನಿನ್ನೆ ಸಹ ಹೇಳಿದ್ದೇವೆ. If they come forward, we will examine.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):–** ಅದಕ್ಕೋಸ್ಕರ ಸರ್ಕಾರ proper advertisement ಕೊಡಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ತಾವೂ ನಮೂದಿಸಿರುವ ಷರತ್ತುಗಳೇನಿದೆ, ದಯವಿಟ್ಟು ಅದು ಪ್ರಾಯೋಗಿಕವಾಗಿದೆಯೇ ಎಂಬುದನ್ನು ನೋಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ವಿಧಾನಸಭೆಯಲ್ಲಿಯೂ ಸಹ assure ಮಾಡಿದ್ದೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಯೋಜನಾ ಆಯೋಗದ ಉಪಾಧ್ಯಾಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಒಳ್ಳೆಯ ಆರ್ಥಿಕ ಕಾರ್ಯದರ್ಶಿಗಳಾಗಿದ್ದು, ಅವರು ಹಣವನ್ನು ಹಿಡಿಯುವ ಕಾರಣದಿಂದಾಗಿ ಯಾವಾಗಲೂ ಏನಾದರೂ ಷರತ್ತನ್ನು ವಿಧಿಸಿ, ಡಿಲೀಟ್ ಮಾಡುತ್ತಾರೆ. ಆದ್ದರಿಂದ ದಯವಿಟ್ಟು ಆಟೋ ಚಾಲಕರು ಎಂದು ಗುರುತಿಸಿಕೊಳ್ಳಲು ಅವರ ಹತ್ತಿರು ಇರುವ ಬ್ಯಾಡ್ಜ್ ಸಾಕು. ಇಲ್ಲಿ ಏನಾಗುತ್ತಿದೆ ಎಂದರೆ, ಮಾಲೀಕನ ಹತ್ತಿರ ಆಟೋ ತಂದು ಓಡಿಸುವುದರಿಂದ ಆ ಚಾಲಕ ದುಡಿದ ಹಣದಲ್ಲಿ ಅರ್ಧ ಬಾಡಿಗೆಯನ್ನು ಮಾಲೀಕನಿಗೆ ನೀಡಿ, ಉಳಿದ ಹಣದಲ್ಲಿ ಜೀವನ ನಡೆಸುತ್ತಿದ್ದಾರೆ. ಆದರೆ, ಸರ್ಕಾರ ವಿಧಿಸಿರುವ ಷರತ್ತಿನ ಆಧಾರದ ಮೇಲೆ ಹೋದರೆ, ಮಾಲೀಕನಿಗೆ ಇದರ ಸೌಲಭ್ಯ ಸಿಗುತ್ತದೆ ವಿನಃ ಚಾಲಕನಿಗೆ ಸಿಗುವುದಿಲ್ಲ. ಅದಕ್ಕಾಗಿ ಯಾವ ಆಟೋ ಚಾಲಕ ಬ್ಯಾಡ್ಜ್ ಹೊಂದಿರುತ್ತಾನೆ ಆತನಿಗೆ ಇದರ ಸೌಲಭ್ಯ ಸಿಗುವ ರೀತಿ ಮಾಡಿ. ಹಾಗೆಯೇ ಕ್ಷೌರಿಕರಿಗೆ ಸಂಬಂಧಿಸದಂತೆ, ನನಗೆ ಕ್ಷೌರ ಮಾಡಿದನಿಗೆ ಈ ಸವಲತ್ತು ಸಿಗಲಿಲ್ಲ. ಆ ಕ್ಷೌರಿಕನಿಗೆ ಪ್ರಮಾಣಪತ್ರ ತೋರಿಸಬೇಕೆಂದರೆ ಏನನ್ನು ತಂದು ತೋರಿಸಬೇಕು?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ಅವರೇ ನೀಡುತ್ತಾರೆ ಎಂದು ಸುಮ್ಮನೆ ಇದ್ದೀವಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಹೌದು 'ಇವನು ನನ್ನ ಕ್ಷೌರಿಕ' ಎಂದು ನಾನೇ ಒಂದು ಪ್ರಮಾಣಪತ್ರ ನೀಡಿ ಕಳುಹಿಸಲೇ ಎಂದು ಯೋಚನೆ ಮಾಡುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ನೀವು ಕಳುಹಿಸಿ. We will examine it.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri C.M. IBRAHIM:** Please.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಒಬ್ಬ ಆಟೋ ಮಾಲೀಕನ ಹತ್ತಿರ ಸುಮಾರು 20 ರಿಂದ 30 ಆಟೋ ಇರುತ್ತದೆ. ಇದರಿಂದಾಗಿ ಸರ್ಕಾರ ನೀಡುವ ಹಣ ಮಾಲೀಕನಿಗೆ ಹೋಗುತ್ತದೆ ವಿನಃ ಚಾಲಕನಿಗೆ ಹೋಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ವ್ಯಾಪಕವಾಗಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಮತ್ತೊಂದು ಸಲ examine ಮಾಡುತ್ತೇವೆ ಎಂದು ಭರವಸೆ ನೀಡಿದ್ದೇವೆ. Let us do it. ಅವರಿಗೆಲ್ಲಾ ನೀಡಬೇಕೆಂಬ ಭಾವನೆ ಇದ್ದಾಗ ನಾನು ಏತಕ್ಕೆ ಬೇಡ ಎಂದು ಹೇಳುವುದು, ಈಗಾಗಲೇ ನೀಡಿರುವುದಕ್ಕೆ ಅವರ ಅನುಮತಿ ಕೇಳುತ್ತಿದ್ದೇವೆ. ಮತ್ತೊಮ್ಮೆ ನೀಡಿ ಎಂದರೂ ಅವರ ದುಡ್ಡು ನೀಡುವುದಕ್ಕೆ ನಮ್ಮ ಅಭ್ಯಂತರವೇನಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮತ್ತೊಮ್ಮೆ ಸರಳೀಕರಣ ಮಾಡಿ, ಏಕೆಂದರೆ ಬಹಳ ಜನರಿಗೆ ಇದು ಅನ್ವಯಿಸಿರುವುದಿಲ್ಲ. The government should make it easy.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಈಗಾಗಲೇ ಕೇಂದ್ರ ಸರ್ಕಾರದಿಂದ ಎಷ್ಟು ಬಂದಿದೆ ಎಂಬ ವಿವರ ಮಾಹಿತಿಯನ್ನು ಸಹ ಸರ್ಕಾರ ನೀಡಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೇಂದ್ರದಿಂದ ನಮಗೆ, in kind, ಅಂದರೆ ಮೆಷಿನರಿ, ಮೆಟೀರಿಯಲ್ಸ್ ಬಹಳ ಬಂದಿದೆ. ಸುಮಾರು 2 ಸಾವಿರಗಳಷ್ಟು ventilators ಬಂದಿದೆ. ಇಡೀ ದೇಶಕ್ಕೆ ಹಂಚಿಕೆ ಮಾಡಿರುವ materials, equipments ಬಹಳ ಬಂದಿದ್ದು, ಅದರ ಆಧಾರದ ಮೇಲೆಯೇ ರೂ.900 ಕೋಟಿಗಳನ್ನು ಎಸ್.ಡಿ.ಆರ್.ಎಫ್. ನಲ್ಲಿ ಶೇಕಡಾ 35 ರಷ್ಟು ಉಪಯೋಗ ಮಾಡಿಕೊಳ್ಳಲು ಅನುಮತಿ ಕಲ್ಪಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಹೆಚ್ಚಾಗಿ in kind ಬಂದಿದ್ದು, ಹಣ ಬಂದಿರುವುದು ಬಹಳ ಕಡಿಮೆಯಾಗಿದೆ.

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ಗುಡಿ ಕೈಗಾರಿಕೆಯಿಂದ ಚರ್ಮಗಾರಿಕೆ,...

**ಸಭಾಪತಿಯವರು:-** ಒಂದು ನಿಮಿಷ ಸಚಿವರು ಮಾತನ್ನು ಮುಗಿಸಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

**(897)26.09.2020 12.30 ಟಿಸಿಹೆಚ್-ಎಕೆ**

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಚರ್ಮಗಾರಿಕೆಯಲ್ಲಿ ಕುಳಿತುಕೊಂಡು, ರೋಗರುಜಿನಗಳನ್ನು ತಂದುಕೊಳ್ಳುತ್ತಿರುವಂಥ ಚಪ್ಪಲಿ ಹೊಲೆಯುವಂಥ ಕೆಲಸವನ್ನು ಮಾಡುತ್ತಾರೆ. ಅಂತಹವರನ್ನು ಇದರಲ್ಲಿ ಸೇರ್ಪಡೆ ಮಾಡದಿರುವುದು ದುರದುಷ್ಟಕರ ಸಂಗತಿ. ಹಮಾಲರು ಮತ್ತು ಚರ್ಮಗಾರಿಕೆ ವೃತ್ತಿಯಲ್ಲಿ ತೊಡಗಿಸಿಕೊಂಡಿರತಕ್ಕಂಥವರನ್ನು ಕೂಡ ಇದರಲ್ಲಿ ಸೇರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು, ಚಪ್ಪಲಿ ಹೊಲಿಯುವವರ ಬಗ್ಗೆ ತಾವು ಹೇಳಲಿಲ್ಲ.

**ಸಭಾಪತಿಯವರು:-** ಆಯಿತು.

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಇದನ್ನು ಅಪ್ರೂವಲ್ ಕೊಟ್ಟಿದ್ದಾರೆ, ಈ ಬಿಲ್ ಮೇಲೆ ಸಹೋದ್ಯೋಗಿ ಮಿತ್ರರೆಲ್ಲಾ ಮಾತನಾಡಿದರು. ಇದರಲ್ಲಿ ಬಹಳ ಮುಖ್ಯವಾಗಿ ಕಳೆದ ತಿಂಗಳು ಕೋಲಾರ ಜಿಲ್ಲೆಗೆ ನಮ್ಮ ಕಾರ್ಮಿಕ ಸಚಿವರು ಬಂದಂಥ ಸಂದರ್ಭದಲ್ಲಿ ಕೋಲಾರದ ಚಿತ್ರ ಮಂದಿರಲ್ಲಿ ಕೆಲಸ ಮಾಡುವಂತಹ ಕಾರ್ಮಿಕರೆಲ್ಲಾ ಬಂದು ಅವರಿಗೊಂದು ಅರ್ಜಿಯನ್ನು ಕೊಟ್ಟರು. ಈ ಕೋವಿಡ್-19ರ ಸಂದರ್ಭದಲ್ಲಿ ಮಾರ್ಚ್ 25ನೇ ತಾರೀಖಿನಿಂದಲೇ ಇಡೀ ರಾಜ್ಯದ ಎಲ್ಲಾ ಚಿತ್ರಮಂದಿರಗಳೆಲ್ಲಾ ಬಂದ್ ಮಾಡಿದ್ದಾರೆ. ಆ ಚಿತ್ರಮಂದಿರದ ಮಾಲೀಕರಿಗೂ ಕೂಡ ಚಿತ್ರಮಂದಿರದಿಂದ ಆದಾಯವಿಲ್ಲ. ಅಲ್ಲಿ ಕೆಲಸ ಮಾಡತಕ್ಕಂಥವರಿಗೆ ಸಂಬಳ ಕೊಡುವುದಕ್ಕೂ ಕೂಡ ಆಗದೇ, ಅವರೆಲ್ಲಾ ಅತಂತ್ರ ಸ್ಥಿತಿಯಲ್ಲಿ ಇದ್ದಾರೆ. ಅವರನ್ನೂ ಸಹ ಈ ಯೋಜನೆಯಲ್ಲಿ ತಂದು, ಚಿತ್ರಮಂದಿರಲ್ಲಿ ಮತ್ತು ಚಿತ್ರರಂಗ್ರದಲ್ಲಿ ಕೆಲಸ ಮಾಡತಕ್ಕಂಥವರಿಗೆ ಆಥಿಕ ಸಹಾಯ ಮಾಡಬೇಕೆಂದು ಅವರ ಪರವಾಗಿ ನಾನು ತಮ್ಮಲ್ಲಿ ವಿನಂತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇನೆ. ಈ ವಿನಂತಿಯನ್ನು ತಾವು ಕಂಡಿತ ಪೂರೈಸುತ್ತೀರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಚಪ್ಪಲಿ ಹೊಲಿಯುವವರ ಬಗ್ಗೆ ನಿಷ್ಕಾಳಜಿ ತೋರಿಸಿದ್ದಾರೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2020ನ್ನು ಪರ್ಯಾಲೋಚಿಸುವುದು"

**<u>ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು</u>**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**

**<u>ಖಂಡ 2 ರಿಂದ 3 ರವರೆಗೆ</u>**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ
ಈ ವಿಧೇಯಕದ ಅಂಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಖಂಡ 2 ರಿಂದ 3ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**<u>ಖಂಡ–1 ಇತ್ಯಾದಿ</u>**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ
ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ
ವಿಧೇಯಕದ ಭಾಗವಾಗಿರುತ್ತದೆ"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ):–** ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2020ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2020ನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**6.ಪ್ರಕಟಣೆ**

**ಸಭಾಪತಿಯವರು:–** ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

(ಅ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳು 104 ರಮೇರೆಗೆ ವಿಧಾನಸಭೆಯು ದಿನಾಂಕ 25.09.2020ರಂದು ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಮತ್ತು ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಯೊಂದಿಗೆ ಅಂಗೀಕಾರವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಪುನರ್ ಪರ್ಯಾಲೋಚಿಸಬೇಕೆಂದು ಮತ್ತು ಅಂಗೀಕರಿಸಬೇಕೆಂದು ತಿಳಿಸಿರುತ್ತಾರೆ.

1) ಕರ್ನಾಟಕದ ಕೆಲವು ಅಧಿನಿಯಮಗಳು ಮತ್ತು ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳು ನಿರಸನಗೊಳಿಸುವ ವಿಧೇಯಕ 2020,

2) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ ಮತ್ತು ಅಭಿವೃದ್ಧಿ ತಿದ್ದುಪಡಿ ವಿಧೇಯಕ 2020.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳು 104 ರಮೇರೆಗೆ ವಿಧಾನಸಭೆಯು ದಿನಾಂಕ 25.09.2020ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್‌ನಲ್ಲಿ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕೈಗಾರಿಕೆ ವಿವಾದಗಳು ಮತ್ತು ಇತರೆ ಕಾನೂನುಗಳು ಕರ್ನಾಟಕ ತಿದ್ದುಪಡಿ ವಿಧೇಯಕ 2020.

2) ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ 2020

3) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕ 2020

**7. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ)ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು, ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ):–** ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ)ವಿಧೇಯಕ, 2020ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು.</u>

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ಏನಾದರೂ emergency, exigencies ಬಂದರೆ, if something unforeseen happens, ಅದಕ್ಕೆ ತಕ್ಷಣವೇ ಖರ್ಚು ಮಾಡುವುದಕ್ಕೆ ಸಾದಿಲ್ವಾರು ನಿಧಿಯನ್ನು ಇಟ್ಟುಕೊಂಡಿದ್ದೇವೆ. 80 ಕೋಟಿ ರೂಪಾಯಿಗಳು ಏನಿತ್ತು, ಇದನ್ನು 1985ರಲ್ಲಿ ನಿಗದಿಪಡಿಸಲಾಗಿತ್ತು. ಆಗ ಬಜೆಟ್ ಗಾತ್ರ 2380 ಕೋಟಿ ರೂಪಾಯಿಗಳು ಮಾತ್ರ ಇತ್ತು. ಈಗಲೂ ಅದೇ 80 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡು ಹೋಗುತ್ತಿದ್ದೇವೆ. ಇವತ್ತು ತಕ್ಷಣದ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅದರ ಗಾತ್ರ ಎಷ್ಟಿದೆ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಆಗ ಬಜೆಟ್ ಗಾತ್ರ 2380 ಕೋಟಿ ರೂಪಾಯಿಗಳು ಇತ್ತು. ಆದರೆ ಈಗ ಎರಡು ಲಕ್ಷದ ನಲವತ್ತಾ ನಾಲ್ಕು ಸಾವಿರ ಕೋಟಿ ರೂಪಾಯಿಗಳು ಇದೆ. ಹಾಗಾಗಿ, ನಾವು 80 ಕೋಟಿ ರೂಪಾಯಿಗಳನ್ನೇ ನಾವು Contingency Fund ನಲ್ಲಿ ಅವಕಾಶಗಳನ್ನು ಇಟ್ಟುಕೊಂಡು ಬಂದಿದ್ದೇವೆ. ಈ ಒಂದು ಅವಕಾಶವನ್ನು ಇಲಾಖೆಗಳಿಗೆ ಕೊಟ್ಟಿರುತ್ತೇವೆ. ಅವರಿಗೆ ತಕ್ಷಣಕ್ಕೆ ಏನಾದರೂ ಬೇಕಾದರೆ ಖರ್ಚು ಮಾಡಿಕೊಳ್ಳಬಹುದು. ತಮಗೆಲ್ಲಾ ಗೊತ್ತಿರುವಂತೆ, ಇವತ್ತಿನ ಕಾಲದಲ್ಲಿ 80 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡು unforeseen activities ಗೆ ನಾವು expenditure ಮಾಡುವುದಕ್ಕಾಗುವುದಿಲ್ಲ. ಈ ಲಿಮಿಟ್‌ನ್ನು 500 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅನಂತ ಧನ್ಯವಾದಗಳು. ನೀವು ಏನು 500 ಕೋಟಿ ರೂಪಾಯಿಗಳಿಗೆ ಹೆಚ್ಚಿಗೆ ಮಾಡಿಕೊಂಡಿದ್ದೀರಿ, ಆ ವರ್ಷದಲ್ಲಿ ಏನಾದರೂ ಆ ಹಣವನ್ನು ಉಪಯೋಗಿಸದಿದ್ದರೆ ಆ ಹಣ lapse ಆಗುತ್ತದೆಯೇ? ಆಮೇಲೆ ಆ ನಿಧಿಯಲ್ಲಿ ಹಣ ಇದೆಯೆಂದು ಬೇರೆ ರೀತಿಯ ನಿಧಿಗಳಲ್ಲಿ ಉಪಯೋಗಿಸಿಕೊಳ್ಳಲು ಒತ್ತಾಯ ತಂದು, ಈ ಹಣ ದುರುಪಯೋಗ ಆಗಬಾರದು ಅದರ ಬಗ್ಗೆ ತಾವು ಕಾಳಜಿ ವಹಿಸಬೇಕೆಂದು ತಮ್ಮಲ್ಲಿ ಕೋರುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, there is a code. ಯಾವ್ಯಾವುದಕ್ಕೆ ಎಷ್ಟು ಹಣ ಖರ್ಚು ಮಾಡಬೇಕೆಂದು ಸರ್ಕಾರದಲ್ಲಿ ನಿರ್ದಿಷ್ಟವಾದ ನಿಯಮಗಳಿವೆ. ಸಾಧಿಲ್ವಾರು ನಿಧಿಯಿಂದ ನಾವು ಕೇಳಿದ್ದಕ್ಕೆಲ್ಲಾ ಆರ್ಥಿಕ ಇಲಾಖೆಯವರು ಅಪ್ರೂವಲ್ ಕೊಡುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆಯವರು ಅಪ್ರೂವಲ್ ಕೊಡುವುದಿಲ್ಲ. ಕೆಲವೊಮ್ಮೆ ಹಣ ಇದೆಯೆಂದು ಬೇರೆ ನಿಧಿಗೆ ಬಳಸಿಕೊಳ್ಳಬಹುದಲ್ಲವೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, transaction change ಆದಂತೆ, ಕಾಲ ಬದಲಾವಣೆಯಾದಂತೆ ಅವರಿಗೆ ಇರುವಂತಹ ಲಿಮಿಟ್‌ಗೆ ಪರ್ಮಿಟ್ ಮಾಡಿ ಎಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಬಹುದೇ ಹೊರತು, this will not be a regular expenditure. ಇವತ್ತು ನಾವು ಎರಡು ಲಕ್ಷದ ನಲವತ್ತಾ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆ. ಒಂದು ರಾಜ್ಯಕ್ಕೆ ಎಮರ್ಜೆನ್ಸಿಗೆ 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಅಧಿಕಾರವಿಲ್ಲವೆಂದರೆ ಹೇಗೆ? ಒಂದು ಪುರಸಭೆಯಲ್ಲಿಯೇ 5–10 ಕೋಟಿ ರೂಪಾಯಿಗಳು ಇಟ್ಟುಕೊಳ್ಳುವಂತಹ ಸ್ಥಿತಿಗೆ ತಲುಪಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎರಡು ಲಕ್ಷದ ನಲವತ್ತಾ ನಾಲ್ಕು ಸಾವಿರ ಕೋಟಿ ರೂಪಾಯಿಗಳ ಬಜೆಟ್ ಇರುವುದರಿಂದ, ಎಮರ್ಜೆನ್ಸಿಗೆ ಆ ನಿಧಿಗೆ 500 ಕೋಟಿ ರೂಪಾಯಿಗಳು ಇರಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಎಮರ್ಜೆನ್ಸಿಗೆ 500 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಏನೋ unexpected exigency, ಪ್ರಕೃತಿ ವಿಕೋಪದ ಕಾರಣಕ್ಕಾಗಿ ನೀವೇನು ಲಿಮಿಟ್‌ನ್ನು ಹೆಚ್ಚಿಗೆ ಮಾಡಿಕೊಳ್ಳುತ್ತೀರಿ, ಅದಕ್ಕೆ ನಾವು ಸ್ವಾಗತ ಮಾಡುತ್ತೇವೆ. 1985ರಲ್ಲಿ ಕೇವಲ ಎರಡು ಸಾವಿರ ಕೋಟಿ ರೂಪಾಯಿಗಳು ಇತ್ತೋ ಅಥವಾ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳು ಇತ್ತೋ ಎಂಬುದನ್ನು ಸ್ವಲ್ಪ verify ಮಾಡಿ ತಿಳಿಸಬೇಕು. I am doubtful about it.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನನಗೆ ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ 1985ರಲ್ಲಿ ಬಜೆಟ್ ಗಾತ್ರ 2380 ಕೋಟಿ ರೂಪಾಯಿಗಳು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, I am really surprised at this figure.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನನಗೂ ಕೂಡ ಆಶ್ಚರ್ಯವಾಗುತ್ತದೆ. ಆ ಬಜೆಟ್ ಇರಬಹುದು. ಪಾಪ, ಮಾನ್ಯ ರಾಮಕೃಷ್ಣ ಹೆಗಡೆಯವರು ಆ ಕಷ್ಟದಲ್ಲೇ ಅಧಿಕಾರ ಮಾಡಿದ್ದಾರೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸಾಕಷ್ಟು ಮಾನ್ಯ ಸದಸ್ಯರು ಚರ್ಚೆ ಮಾಡಿದರು. ಆಟೋ ರಿಕ್ಷಾ ಚಾಲಕರು, ಟ್ಯಾಕ್ಸಿ ಡ್ರೈವರ್ಸ್ barbers, washermen ಗಳಿಗೆಲ್ಲಾ ಐದೈದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದಾರೆ. ಅದನ್ನು Contingency Fund ನಿಂದ ಕೊಡಬೇಕೆಂದು ಬರೆದಿದ್ದೀರಿ. ಹಾಗಾದರೆ, ಈ ದುಡ್ಡನ್ನು Contingency Fund ನಿಂದ ಕೊಡುತ್ತೀದ್ದೀರಾ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು Contingency Fund ನಲ್ಲೂ ಕೂಡ ಕೆಲವು expenditure meet ಮಾಡುತ್ತೇವೆ. ನಮಗೆ ನಾಲ್ಕು ಸಾವಿರ ಕೋಟಿಯವರೆಗೆ ಕೊಡುವುದಕ್ಕೆ ಆಗದಿದ್ದಕ್ಕೆ 80 ಕೋಟಿ ರೂಪಾಯಿಗಳಲ್ಲಿ ಆಟೋ ರಿಕ್ಷಾ ಚಾಲಕರು ಮತ್ತು ಟ್ಯಾಕ್ಸಿ ಡ್ರೈವರ್ಸ್ ಮತ್ತು washermen ಗಳಿಗೆಲ್ಲಾ ಕೊಟ್ಟಿದ್ದೇವೆ. ಇಲ್ಲಿಂದ ಅವರಿಗೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತೇವೆ, ಇನ್ನೂ 97 ಕೋಟಿ ರೂಪಾಯಿಗಳ appropriation ಅನ್ನು ಕೇಳಿದ್ದೇವೆಂದು ಹೇಳಿದ್ದೇನೆ. ಹಾಗಾಗಿ, ಲಿಮಿಟ್ ಏನು 80 ಕೋಟಿ ಇದ್ದು ಅದನ್ನು ಹೆಚ್ಚಿಸಬೇಕಿದೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಆಯ್ಕೆಯಾದವರು):–** ನೀವು ಅದನ್ನು 500 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿ. ಆದರೆ, ನೀವು ಒಂದು ಕಡೆ ಆ bill ನಲ್ಲಿ ಇವರಿಗೆಲ್ಲಾ ಕೊಡಬೇಕೆಂದು mention ಮಾಡಿರುತ್ತೀರಿ.

**Sri J.C. MADHUSWAMY:** No, I was clear.

**(ಮುಂದು)**

**(898)26–9–2020/12.40/ಎಂಎಂ–ಆರ್.ಎನ್**

**ಶ್ರೀ ಜೆ.ಸಿ. ಮಾಧುಸ್ವಾಮಿ (ಮುಂದು):–**

ಮಾನ್ಯ ಸಭಾಪತಿಯವರೇ, it is very clear ಅದಕ್ಕೆ 107 ಕೋಟಿ ರೂಪಾಯಿಗಳು ಖರ್ಚಾಗಿದೆ. 97 ಕೋಟಿ ರೂಪಾಯಿಗಳು ಕೇಳಿದ್ದೇವೆ, 10 ಇಲ್ಲಿ ಕೊಟ್ಟಿದ್ದೇವೆ ಎಂದು ನಾನು ಆಗಲೇ ಹೇಳಿದೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ "ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3 ರವರೆಗೆ**

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

ಶ್ರೀ ಜೆ.ಸಿ.ಮಾಧುಸ್ವಾಮಿ **(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ ಸಾಲಿನ "ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ವಿಧೇಯಕ"ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ ಸಾಲಿನ "ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ವಿಧೇಯಕ"ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ನೋಡುತ್ತಲೇ ಇದ್ದೇನೆ ಒಬ್ಬ ಮಂತ್ರಿಯಾದರೂ ಇದ್ದು ಬಿಲ್ ಪಾಸ್ ಮಾಡಿದ್ದನ್ನು ನೋಡಲೇ ಇಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಬಸವರಾಜ ಹೊರಟ್ಟಿಯವರೇ, ಮುಖ್ಯಮಂತ್ರಿಯವರು ಕೆಳಮನೆಯಲ್ಲಿದ್ದಾರೆ, ಅವರ ಪರವಾಗಿ ಮಾತ್ರ ನಾನು ಕೊಡುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಹಾಗಾದರೆ ಎಲ್ಲರ ಪರವಾಗಿ ನೀವೇ ವಿಧೇಯಕಗಳನ್ನು ಕೊಡುತ್ತಿದ್ದೀರಿ ಬೇರೆ ಯಾರೂ . . .

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಒಳ್ಳೆಯದಾಯಿತು, ಕೊರೋನಾ ಸಮಯದಲ್ಲಿ ಅಧಿವೇಶನವನ್ನು ಕರೆದುಬಿಟ್ಟು;

**ಸಭಾಪತಿಯವರು:-** ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2020.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದಕ್ಕೂ ಮೊದಲು ಇರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2020 ಅನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಇಲ್ಲ, ಈಗ ಇದನ್ನೇ ತೆಗೆದುಕೊಳ್ಳುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಚಿವರೆ, . . .

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಒಂದು ನಿಮಿಷ ಕೇಳಿ, ಇದು ನೀವೆಲ್ಲರೂ ಇಷ್ಟ ಪಡುವ ವಿಧೇಯಕವಾಗಿದೆ.

**ಸಭಾಪತಿಯವರು:-** ಮೊದಲು Finance Bills ಎಲ್ಲಾ ಆಗಲಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ದಯವಿಟ್ಟು ಒಂದು ನಿಮಿಷ ಕೇಳಿ, ಇಷ್ಟವಾಗದಿದ್ದರೆ hold ಮಾಡಿ. ನಾನು ಎರಡು ಮಾತನ್ನು ಹೇಳುತ್ತೇನೆ, ಬಿಲ್ ಬಂದು ಬಿಟ್ಟಿದೆ. ಮಾನ್ಯ ಮುಖ್ಯಮಂತ್ರಿಯವರು ಮತ್ತೆ ಇಲ್ಲಿಗೆ ಬರುವುದಕ್ಕೆ ಕಷ್ಟವಾಗುತ್ತದೆ ಎಂದು ಕೇಳಿಕೊಳ್ಳುತ್ತಿದ್ದೇನೆ. ಇದು ನಮ್ಮಲ್ಲಿ ಎಲ್ಲರೂ ಬಹಳ ಖುಷಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಟ್ಟು ಪಾಸ್ ಮಾಡಿರುವ ಬಿಲ್ ಆಗಿದೆ. ನಿಮಗೂ ಸಂತೋಷವಾದರೆ ಆಗಲಿ if you need discussion ಮುಂದಕ್ಕೆ ಹಾಕಿ ಆಮೇಲೆ ಮಾತನಾಡೋಣ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಚಿವರೇ, ಅದು ಸಾಧ್ಯವಿಲ್ಲ. ಬರೀ ಬಿಲ್ಲುಗಳು ಬಂದರೆ; ಕಳೆದ ಸಲ 'ಕೊರೊನಾ' ಸಮಯದಲ್ಲಿ ಅಧಿವೇಶನ ಕರೆದಿರಿ 'ಘಂ' ಎಂದು ಹೇಳಿ ಎರಡು ದಿನ ಮೊದಲೇ ಕಳುಹಿಸಿಬಿಟ್ಟಿರಿ. ಈಗ ಅಧಿವೇಶನ ಕರೆದಿರುವಾಗ ಕೊರೊನಾ ಇಲ್ಲವೇ?

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಕಳೆದ ಸಲ ಕೊರೊನಾ ಆಗುವಾಗ ನಮಗೆ ಗೊತ್ತಿರಲಿಲ್ಲ.

**ಶ್ರೀ ಯು.ಬಿ. ವೆಂಕಟೇಶ್:–** ಅಲ್ಲಾ ಸ್ವಾಮಿ ಈಗ ಕೊರೊನಾ ಇದೆ ಎಂದು ಗೊತ್ತಿತ್ತಲ್ಲವೇ, ಈಗ ಹೇಗೆ ಅಧಿವೇಶನ ಕರೆದಿರಿ?

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಸಂವಿಧಾನವು ಆರು ತಿಂಗಳೊಳಗೆ ಅಧಿವೇಶನ ಕರೆಯದೇ ಹೋದರೆ ನಮ್ಮ ಮೇಲೆ ಕಠಿಣವಾದ. . .

**ಶ್ರೀ ಯು.ಬಿ. ವೆಂಕಟೇಶ್:–** ಹೌದು ಹಾಗಾದರೆ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಬರೀ ಬಿಲ್ ಪಾಸ್ ಮಾಡಿಸುವುದೇ ನಿಮ್ಮ ಕೆಲಸವೇ ಹೇಳಿ. ನಮ್ಮ ವಿಷಯ ಐದು ದಿವಸಗಳಿಂದ ಇದೆ. ನಿನ್ನೆ ನಾನೊಂದು Private Member Bill ಮಾಡುವುದಕ್ಕೆ ಕೊಟ್ಟಿದ್ದೆ. ಶುಕ್ರವಾರ ಮಾತ್ರ ಬರುತ್ತದೆ. ಇಲ್ಲಿ ಶುಕ್ರವಾರ ಆ ವಿಧೇಯಕ ಬರಲೇ ಇಲ್ಲ. ಹೀಗಾದರೆ ಹೇಗೆ?

**ಶ್ರೀ ಜೆ.ಸಿ. ಮಾಧುಸ್ವಾಮಿ:–** ದಯಮಾಡಿ ಮಾನ್ಯ ಸದಸ್ಯರು ಸಹಕರಿಸಬೇಕು.

**ಶ್ರೀ ಯು.ಬಿ. ವೆಂಕಟೇಶ್:–** ನಾವು ಸಹಕರಿಸುತ್ತಿದ್ದೇವೆ. ಯಾವುದಾದರೂ ವಿಧೇಯಕವನ್ನು ವಾಪಸ್ ಕಳುಹಿಸಿದ್ದೇವಾ ಹೇಳಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಪರಿಸ್ಥಿತಿ ಗಂಭೀರವಾಗಿದ್ದರೂ ಸಹಿತ ನಾವು ಸದನ ಕರೆಯುವ ಸ್ಥಿತಿ ನಿರ್ಮಾಣವಾಗಿರುವುದು, ನಮಗೆ ಸಂವಿಧಾನಾತ್ಮಕವಾದ ಜವಾಬ್ದಾರಿ ಇದೆ.

**ಶ್ರೀ ಮರಿತಿಬ್ಬೇಗೌಡರು:–** ಮಾನ್ಯ ಸಭಾಪತಿಯವರೇ, . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಮರಿತಿಬ್ಬೇಗೌಡರೇ, ಸ್ವಲ್ಪ ಇರಿ. ಅದಕ್ಕೆ ಪೂರಕವಾಗಿ ಹೇಳುತ್ತೇನೆ. ನಾವು ಈ Finance Bill ಅನ್ನು ವಿಧಾನಸಭೆಗೆ ತೆಗೆದುಕೊಂಡು ಹೋಗಬೇಕು ಅದು ಇವತ್ತು adjourn ಆಗುತ್ತದೆ ಎಂದು ವಿನಂತಿ ಮಾಡುತ್ತಿದ್ದೇನೆ. ಪ್ರತಿ ಸಲ ಹೀಗೆ hold ಮಾಡುತ್ತೇವೆಂದರೆ, ಎರಡು ಸದನಗಳ ಮಧ್ಯೆ ಸಂಪರ್ಕವನ್ನು ಏನಾದರೂ ಕೊರತೆ ಮಾಡುತ್ತೀರಾ?

**ಶ್ರೀ ಮಾನೆ ಶ್ರೀನಿವಾಸ:–** ಮಾನ್ಯ ಸಭಾಪತಿಯವರೇ, Finance ಗೆ ಸಂಬಂಧಪಟ್ಟ ಬಿಲ್ ಅನ್ನು ತೆಗೆದುಕೊಳ್ಳಿ, ಬಿ.ಡಿ.ಎ ವಿಧೇಯಕವನ್ನು ಆಮೇಲೆ ತೆಗೆದುಕೊಳ್ಳಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮೊದಲು ಮುಖ್ಯಮಂತ್ರಿಯವರ ಹೆಸರಿನಲ್ಲಿ ಒಂದು ಬಿ.ಡಿ.ಎ ವಿಧೇಯಕವಿದೆ, ಅದನ್ನು ಇಲ್ಲಿ ಒಪ್ಪಬಹುದು ಅದಕ್ಕೆ ಒಂದು ಮಾತು ಕೇಳಿ, ಮಾಡುವುದಕ್ಕಾಗದಿದ್ದರೆ hold ಮಾಡಿ ಎಂದು ಕೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, hold ಮಾಡಿದನ್ನು His Excellency, Governor ಹತ್ತಿರ ಹೋಗುವುದು ಇದೆ. Ordinance ಬರುವುದು ಇದೆ. Replace ಮಾಡಿದ್ದೇವೆ.

**ಆ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಇದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯವಾಗಿ ಜಿ.ಎಸ್.ಟಿ ಬಿಲ್ ಆಗಿದೆ. ಕೌನ್ಸಿಲ್‌ನಲ್ಲಿ ಏನೇನು ತಿದ್ದುಪಡಿಗಳನ್ನು ತರುತ್ತಾರೆ ಅದನ್ನು ನಾವು ಇಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಪ್ರಮುಖವಾಗಿ area expand ತೆಗೆದುಕೊಂಡಿದ್ದಾರೆ, Daman and Diu, ಆ ಭಾಗಗಳೆಲ್ಲಾ ಏನು ನಮ್ಮ ಭಾಗಕ್ಕೆ ಬಂತು ಅದನ್ನು ಸೇರಿಸಿಕೊಳ್ಳುವುದಕ್ಕೆ, goods ಪದದ ಜೊತೆಗೆ services ಎಂದು ಸೇರಿಸಿಕೊಂಡಿದ್ದೇವೆ. Invoice relating to such ಎನ್ನುವುದನ್ನು omit ಮಾಡಿ ಎಂದು ಕೇಳಿದ್ದೇವೆ. Taxable person is no longer liable to be register under Section ನಲ್ಲಿ amendment ಕೇಳಿದ್ದೇವೆ. ಅಧಿಕಾರಿಗಳು ಯಾರು ಕೋವಿಡ್ ಇದ್ದ ಪರಿಸ್ಥಿತಿಗೆ ಯಾರು ಬಿಲ್ raise ಮಾಡಿದವರಿಗೆ tax invoice ಮಾಡುವುದಕ್ಕೆ ಆಗಲಿಲ್ಲ ಎನ್ನುವವರಿಗೆ ಟೈಂ ಕೊಡಬಹುದು ಎಂದು ಎರಡು ಹಂತದಲ್ಲಿ time extension ಕೊಡುವುದಕ್ಕೆ ಕೇಳಿಕೊಂಡಿದ್ದೇವೆ. ಆಯುಕ್ತರು ಮತ್ತು ಜಂಟಿ ಆಯುಕ್ತರಿಗೆ ಮತ್ತು Additional Commissioner ಗೆ 30 ದಿನಗಳು ಕೊಡಬಹುದು. ಹಾಗೂ ಮೀರಿದರೆ ಜಂಟಿ ಆಯುಕ್ತರು ಕೊಡಬಹುದು ಎಂದು. Whole thing is for ratification. ಕೇಂದ್ರ ಸರ್ಕಾರ ಜಿ.ಎಸ್.ಟಿ ಬಿಲ್ ತಂದಿರುವುದನ್ನು ನಾವು ಅಳವಡಿಸಿಕೊಂಡು ಅದನ್ನು ತಮ್ಮ ಮುಂದೆ ಇಟ್ಟಿದ್ದೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,
ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ "ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 16 ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 16 ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 16ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ ಸಾಲಿನ "ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ"ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ ಸಾಲಿನ "ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ"ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ **ಒಪ್ಪಿಗೆ** ನೀಡಲಾಯಿತು

**ಇ) ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ನಮಗೆ ನಮ್ಮ revenue and fiscal activities ಕೆಳಗಡೆ deficit maintain ಮಾಡುವುದಕ್ಕೆ, borrow ಮಾಡುವುದಕ್ಕೆ ನಮಗೆ ಅವಕಾಶವಿತ್ತು. Fiscal Deficit ಅನ್ನು ಶೇ.3ರಷ್ಟು ಜಾಸ್ತಿ ಇಡಬಾರದು ಎಂದು Fiscal Responsibility Act ಇದೆ. ಇದನ್ನು ಕೇಂದ್ರ ಸರ್ಕಾರವೇ ನಿಗದಿ ಮಾಡಿ ರಾಜ್ಯಗಳು ಕೊರತೆ ಸರಿದೂಗಿಸುವುದಕ್ಕೆ ಶೇ.3ಕ್ಕಿಂತ ಹೆಚ್ಚಿಗೆ borrow ಮಾಡಬಾರದು ಎಂದು ಹೇಳಿ ತೀರ್ಮಾನ ಮಾಡಿದೆ. ಈಗ ಕೇಂದ್ರ ಸರ್ಕಾರವು ಈ ವರ್ಷ ಕೋವಿಡ್‌ನಿಂದಾಗಿ ಎಲ್ಲಾ ರಾಜ್ಯಗಳಿಗೆ ಮತ್ತು ಇಡೀ ರಾಷ್ಟ್ರಕ್ಕೆ ಸುಮಾರು ಶೇ.23ರಷ್ಟು revenue loss ಆಗಿದೆ ಇದನ್ನು maintain ಮಾಡಿ. State's day-to-day affairs ತೊಂದರೆಯಾಗಬಾರದು ಎಂದು ಶೇ.3 ರಷ್ಟು ಇರುವುದನ್ನು ಶೇ.5 ವರೆಗೂ borrowings ಮಾಡಬಹುದು ಎಂದು ಅವಕಾಶ ಕೊಟ್ಟು borrow ಮಾಡಿಕೊಂಡು ಸರ್ಕಾರ ನಡೆಸಬೇಕು ಎನ್ನುವ ಉದ್ದೇಶದಿಂದ ಈ ಬಿಲ್ ತಂದಿದ್ದೇವೆ.

**(ಮುಂದು)**

**(899) 26–09–2020/ 12–50/ ಕೆಹೆಚ್–ಆರ್‌ಎನ್**

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):–**

ಈಗ ನಾವು ಶೇಕಡಾ 5 ರಷ್ಟಕ್ಕೆ ಹೋದರೆ ಇನ್ನೊಂದು 36,000 ಕೋಟಿ ರೂಪಾಯಿಗಳ ಸಾಲವನ್ನು ಡ್ರಾ ಮಾಡುವುದಕ್ಕೆ ನಮಗೆ ಅವಕಾಶವಾಗುತ್ತದೆ ನಮ್ಮ ಪೂರ್ತಿ ಸಾಲದ ಮೊತ್ತ ಎಷ್ಟಾಗುತ್ತದೆ ಎಂದರೆ... ನಾನು ಮೊದಲೇ ಒಂದು ಮಾತನ್ನು ಹೇಳುತ್ತೇನೆ. ಈ ಬಾರಿ ಕಂದಾಯ ಇಲಾಖೆಯವರಿಗೆ 1,79,920 ರೂಪಾಯಿಗಳಷ್ಟು ನಿರೀಕ್ಷೆ ಇತ್ತು. ಆದರೆ, 1,14,658 ಕೋಟಿ ರೂಪಾಯಿಗಳಷ್ಟು ಮಾತ್ರ ಕಂದಾಯ ಇಲಾಖೆಗೆ ಆಗಿರುವುದು. ಇನ್ನು 65,252 ಕೋಟಿ ರೂಪಾಯಿಗಳು shortfall ಇದೆ. ಇದರಲ್ಲಿ ನಮ್ಮ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

committed expenditure ಎಂದರೆ, repayment of loans, subsidies, pensions, salaries, social security pension ಎಲ್ಲಾ ಸೇರಿದರೆ 1,50,240 ಕೋಟಿ ರೂಪಾಯಿಗಳ ವೆಚ್ಚ ಬರುತ್ತದೆ. ಮತ್ತೆ remaining 87,650 ಕೋಟಿ ರೂಪಾಯಿಗಳ ಸ್ಕೀಮ್ ಅನ್ನು ಇಟ್ಟುಕೊಂಡಿದ್ದೇವೆ. ಈಗ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ಒಂದು ಕಡೆ ರಾಜ್ಯದಲ್ಲಿ 4–5 ತಿಂಗಳಿನಿಂದ ವರಮಾನ ಶೂನ್ಯವಾಗಿದೆ. ಆ ಸಮಯದಲ್ಲಿ ಈಗಾಗಲೇ excess expenditure ಆಗಿದೆ. ಇದೆಲ್ಲವನ್ನೂ ಸರಿದೂಗಿಸುವುದಕ್ಕೆ ಶೇಕಡಾ 3 ರಷ್ಟು ಇರುವುದನ್ನು, ಶೇಕಡಾ 5 ರಷ್ಟರವರೆಗೂ ಕೇಂದ್ರ ಸರ್ಕಾರ Fiscal Responsibility Act ನಲ್ಲಿ ನಮಗೆ ಅನುವು ಮಾಡಿಕೊಟ್ಟಿದ್ದಾರೆ. ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕಾಗುತ್ತದೆ. ಜಿಎಸ್‌ಟಿ ದುಡ್ಡು ತೆಗೆದುಕೊಂಡಿಲ್ಲ ಎಂದು ಇದರಲ್ಲಿ ಒಂದು ಗೊಂದಲ ಇದೆ. ಇದರಲ್ಲಿ ಒಂದು ಅಂಶವೇನೆಂದರೆ, GSDP (Gross State Domestic Product) ಮೊತ್ತ 11,324 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬರಬೇಕಾಗಿದೆ. ಇದರ ಜವಾಬ್ದಾರಿಯನ್ನು ಅವರು ತೆಗೆದುಕೊಂಡಿದ್ದಾರೆ. ಅದನ್ನು ಅವರು ಕ್ಲಿಯರ್ ಮಾಡಿಕೊಳ್ಳುತ್ತಾರೆ. Principal and interest ಈ ಎರಡನ್ನೂ ಕೇಂದ್ರ ಸರ್ಕಾರದಲ್ಲಿ ತೆಗೆದುಕೊಂಡಿರುವುದರಿಂದ, ಅಷ್ಟು ಹೊರೆ ನಮಗೆ ಕಡಿಮೆಯಾಗುತ್ತದೆ. ನಮಗೆ ಜಿಎಸ್‌ಟಿ ಮೊತ್ತ ಏನು ಬರಬೇಕಾಗಿತ್ತು. ಕಳೆದ ವರ್ಷ ಮಾರ್ಚ್‌ವರೆಗೆ ತಿಂಗಳವರೆಗೆ Cess ಮೇಲೆ ನಮಗೆ ಜಿಎಸ್‌ಟಿ ಕೊಡಬೇಕಾಗಿತ್ತು. ಆ ಜಿಎಸ್‌ಟಿಯನ್ನು ಕೊಟ್ಟಿದ್ದಾರೆ. ಈಗ 2,000 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಇನ್ನು 11,000 ಚಿಲ್ಲರೆ ಕೋಟಿ ರೂಪಾಯಿಗಳು ನಮಗೆ ಬಂದರೆ another seven crore we are entitled for GST compensation. ಅದನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾ, ಆದರೆ ಇದ್ದರಿಂದ ರಾಜ್ಯಕ್ಕೆ ಕಷ್ಟ ಆಗುತ್ತದೆ. ನಾವು ಶೇಕಡಾ 5 ರಷ್ಟು ಸಾಲವನ್ನು avail ಮಾಡಿದರೆ, 3,00,000 ಚಿಲ್ಲರೆ ಕೋಟಿ ರೂಪಾಯಿಗಳ total liability ಇರುವಂತಹ ನಮ್ಮ ರಾಜ್ಯ ಒಟ್ಟಾರೆಯಾಗಿ 4,19,606 ಕೋಟಿ ರೂಪಾಯಿಗಳಿಗೆ ಹೋಗುತ್ತದೆ. ಹಾಗಾಗಿ 93,000 ಕೋಟಿ ರೂಪಾಯಿಗಳಷ್ಟು ನಾವು ಈ ವರ್ಷ ಬಜೆಟ್‌ನಲ್ಲಿ ಹೇಳಿರುವಂತಹ ಸಾಲ ಮತ್ತು ಹೊಸದಾಗಿ ತೆಗೆದುಕೊಳ್ಳುವಂತಹ ಸಾಲ ಈ ಎರಡು ಸೇರಿದರೆ 93,682 ಕೋಟಿ ರೂಪಾಯಿಗಳಾಗುತ್ತದೆ. ಇದರಲ್ಲಿ 11,000 ಚಿಲ್ಲರೆ ಕೋಟಿ ರೂಪಾಯಿಗಳನ್ನು ಅವರು ಕಟ್ಟುವುದರಿಂದ, ಅಷ್ಟು ಕಡಿಮೆ ಆಗುತ್ತದೆ. ನಾವು ಇದಕ್ಕೆ ಆಲೋಚನೆ ಮಾಡಿದ್ದೇವೆ. This is a staggered

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

repayment for ten years. ಕೆಲವು ಕಡೆ moratorium ಕೊಟ್ಟಿದ್ದಾರೆ. ಕೇವಲ ಬಡ್ಡಿಯನ್ನು ಕಟ್ಟಿ ಎಂದು ಹೇಳಿದ್ದಾರೆ. ಇನ್ನು ಕೆಲವು ಕಡೆ along with interest ಮಾಡಬೇಕಾಗುತ್ತದೆ. ಇನ್ನು 10 ವರ್ಷದೊಳಗೆ ನಮ್ಮ ಸಂಪನ್ಮೂಲಗಳನ್ನು ಇಟ್ಟುಕೊಂಡು ಇದನ್ನು ವಾಪಸ್ಸು ಮಾಡಬೇಕಾಗುತ್ತದೆ. ಇವತ್ತಿನ ದಿವಸ ಇದು ಅನಿವಾರ್ಯವಾಗಿಬಿಟ್ಟಿದೆ. ಸಾಲ ತೆಗೆದುಕೊಳ್ಳದೆ ರಾಜ್ಯ ಸರ್ಕಾರ ಮುಂದೆ ನಡೆಯುವುದು ಬಹಳ ಕಷ್ಟವಾಗಿದೆ. 65,000 ಕೋಟಿ ರೂಪಾಯಿಗಳು shortfall ಇರುವುದರಿಂದ, ಸರ್ಕಾರಕ್ಕೆ ಇವತ್ತು ಶೇಕಡಾ 5 ರಷ್ಟು ಎಂದರೂ, ನಮಗೆ GSDP ಮೊತ್ತ ಯಾವತ್ತೂ 25 ರಷ್ಟು ದಾಟಬಾರದು ಎಂದು ನಮಗೆ ಏನು ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ನಾವು 18 ಸಾವಿರ ಕೋಟಿ ರೂಪಾಯಿಗಳಷ್ಟು ಜಿಎಸ್‌ಟಿಪಿ ಅನ್ನು ಇಟ್ಟುಕೊಂಡಿದ್ದೇವೆ. ಅದರಲ್ಲಿ ಶೇಕಡಾ 23.28 ರಷ್ಟು GSDP ಯಲ್ಲಿ, well within the limit of GSDP ನಲ್ಲಿ ನಾವು ಇರುತ್ತೇವೆ. ದಯಮಾಡಿ, ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಜಿಎಸ್.ಟಿ ನಮ್ಮ ದುಡ್ಡು. **'ಕೊಟ್ಟವನು ಕೋಡಂಗಿ, ಸಿಕ್ಕಿಕೊಂಡವನು ವೀರಭದ್ರ'** ಎಂದು ಹೇಳುತ್ತಾರೆ. ಇವರು ದುಡ್ಡು ಇಟ್ಟುಕೊಂಡು ಕೊಡುವುದಕ್ಕೆ ಇಷ್ಟು ಮೀನ-ಮೇಷ ಮಾಡುತ್ತಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಕುವುದಕ್ಕೆ ವಿಫಲವಾಗಿದೆ ಎಂಬುದು ಮುನ್ನೋಟಕ್ಕೆ ಕಾಣುತ್ತಿಲ್ಲವೇ? ಇವತ್ತಿನ ದಿವಸ ಇದರಲ್ಲಿ ಪ್ರಬಲವಾಗಿ ಏನಿದೆ ಎಂದರೆ, ಒತ್ತಡ ಹಾಕಿ, ನಾವು ಸಂಗ್ರಹ ಮಾಡಿ ಕೊಟ್ಟಿರುವಂತಹ ದುಡ್ಡು, ಇವತ್ತು ಕೋವಿಡ್-19 ಬಂದು ಸಂಕಟದಲ್ಲಿ ಇದ್ದಾಗಲೂ ಕೂಡ, ತಾವು ಇದಕ್ಕೆ adjust ಮಾಡಿಕೊಳ್ಳಿ ಎಂದು ಕೇಂದ್ರ ಸರ್ಕಾರ ರಿಸರ್ವ್ ಬ್ಯಾಂಕ್ ಅನ್ನು ಇಟ್ಟುಕೊಂಡು ನೋಟ್ ಅನ್ನು ಪ್ರಿಂಟ್ ಮಾಡುವಂತಹವರೇ ಈ ಮಾತನ್ನು ಹೇಳಿದರೆ ರಾಜ್ಯ ಸರ್ಕಾರದ ಪರಿಸ್ಥಿತಿ ಏನಾಗಬೇಕು. ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು ಒಂದು ಬಾರಿ ಸದನಕ್ಕೆ ಬಂದು ಈ ಬಗ್ಗೆ ವಿವರವಾದಂತಹ ಹೇಳಿಕೆ ಕೊಡುವಂತಹದ್ದು ಅಗತ್ಯ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಸಚಿವರಾದ ಮಾಧುಸ್ವಾಮಿಯವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಚಿವರಾದ ಮಾಧುಸ್ವಾಮಿಯವರು, ಅವರ ಹೆಸರೇ ಮಾಧವಸ್ವಾಮಿ ಎಲ್ಲರಿಗೂ ಮಧು, ಮಧುವಾಗಿ ಇವರು ಕೆಲಸ ಮಾಡಿಸುವುದರಲ್ಲಿ ಬಾರಿ ನಿಸ್ಸೀಮರು. ಇದ್ದಕ್ಕಿದ್ದ ಹಾಗೆ 3-4 ವಿಧೇಯಕಗಳನ್ನು ಪಾಸ್ ಮಾಡಿಕೊಂಡು ತೆಗೆದುಕೊಂಡು ಹೋಗಿಬಿಟ್ಟರು. ದಯವಿಟ್ಟು, ಸದನ ಪ್ರಾರಂಭವಾದಾಗಿನಿಂದ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಹಾಜರಾಗಿಲ್ಲ. ಒಂದು ಬಾರಿ ಮಾತ್ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನಕ್ಕೆ ಬಂದಿದ್ದರು. ಇದರ ಬಗ್ಗೆ ನಾನು ಏನು ಹೇಳುತ್ತೇನೆ ಎಂದರೆ, ಈ ಬಗ್ಗೆ ಅವರೇ ಸದನಕ್ಕೆ ಬಂದು, ಅವರು ಈ ರಾಜ್ಯದ ನಾಯಕರಾಗಿದ್ದಾರೆ. ಅವರು ಒಂದು ಆಶ್ವಾಸನೆಯನ್ನು ಸದನಕ್ಕೆ ಮತ್ತು ರಾಜ್ಯದ ಜನತೆಗೆ ಕೊಟ್ಟರೆ, ರಾಜ್ಯದ ಜನತೆಯ ಮನಸ್ಸಿನಲ್ಲಿ ಇರುವಂತಹ ನೋವು ದೂರವಾಗುತ್ತದೆ ಎಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. Karnataka Medium Term Fiscal Plan ಪ್ರಕಾರವಾಗಿ ಕಳೆದ ಅನೇಕ ವರ್ಷಗಳಿಂದಲೂ ಕೂಡ ನಮ್ಮ ರಾಜ್ಯ ಸರ್ಕಾರ ನಮ್ಮ ಆಂತರಿಕ ಉತ್ಪನ್ನದ ಶೇಕಡಾ 3 ರಷ್ಟು ಒಟ್ಟಾಗಿ deficit ಅನ್ನು ಇಟ್ಟುಕೊಂಡಿದೆ. ಕಳೆದ 2019-20 ಮತ್ತು 2020-21ರಲ್ಲಿ ನೋಡಿದರೆ revenue surplus ಶೇಕಡಾ 0.02 ರಷ್ಟು ಇತ್ತು. 2020-21 ರಲ್ಲಿ ಶೇಕಡಾ 2.65 ಇತ್ತು. ಅದೇ ರೀತಿ fiscal deposit ಶೇಕಡಾ 0.06 ಇತ್ತು. 2020-21ರಲ್ಲಿ ಶೇಕಡಾ 2.90 ರಷ್ಟು ಇದೆ. ಶೇಕಡಾಕ್ಕೆ ಅಂದಾಜು ಮಾಡಿದ್ದಾರೆ. ಕೆಲವೊಂದು ರಾಜ್ಯಗಳಲ್ಲಿ ಉತ್ತಮವಾಗಿ financial manage ಮಾಡುವಂತಹ ರಾಜ್ಯಗಳು ಎಂದರೆ, ಗುಜರಾತ್, ಮಹಾರಾಷ್ಟ್ರ, ತೆಲಂಗಾಣದಂತೆಯೂ ಕರ್ನಾಟಕ ಮುಂಚೂಣಿಯಲ್ಲಿ ಇರುವಂತಹ ರಾಜ್ಯವಾಗಿದೆ. ಆದರೆ ಇವತ್ತಿನ ಸಂಕಷ್ಟ ಪರಿಸ್ಥಿತಿಯಲ್ಲಿ ಬಹುಶಃ ನಾವು ಕೂಡ ಎಲ್ಲೋ ಶೇಕಡಾ 3 ರಷ್ಟಕ್ಕಿಂತ ಜಾಸ್ತಿ ಶೇಕಡಾ 5 ರಷ್ಟು GSDP ಸಾಲ ತರಬೇಕಾಗಿದೆ. ಈ fiscal management principal ಸಲುವಾಗಿ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ರಿವ್ಯೂ ಸಮಿತಿ ಕೂಡ ಇದೆ. ಪ್ರತಿ 3 ತಿಂಗಳಿಗೊಮ್ಮೆ ಸೇರಿಕೊಂಡು revenue tax collections; motor vehicle tax ಇರಬಹುದು, commercial tax ಇರಬಹುದು, Excise revenue ಇರಬಹುದು, Stamps & Registration ಇರಬಹುದು, ಇದನ್ನೆಲ್ಲವನ್ನೂ ಕೂಡ ರಿವ್ಯೂ ಮಾಡುತ್ತಿದ್ದಾರೆ. ಆದರೆ ಇಲ್ಲಿ ಏನಾಗಿದೆ ಎಂದರೆ, ನಮಗೆ ಒಟ್ಟಾರೆ ನಮ್ಮ ರಾಜ್ಯಕ್ಕೆ 2018-19ರಲ್ಲಿ GST compensation ಕೆಳಗೆ 18,628 ಕೋಟಿ ರೂಪಾಯಿಗಳು ಬರಬೇಕಾಗಿತ್ತು ಮತ್ತು 2019-20ರಲ್ಲಿ ಏಪ್ರಿಲ್ ನಿಂದ ಜುಲೈ ತಿಂಗಳ ಕೊನೆಯವರೆಗೆ ಒಟ್ಟು 4 ತಿಂಗಳಲ್ಲಿ 13,763 ಕೋಟಿ ರೂಪಾಯಿಗಳು ಬರಬೇಕಾಗಿತ್ತು. ಅದರ ಸಲುವಾಗಿ ಇತ್ತೀಚಿನ ಕೇಂದ್ರ ಸರ್ಕಾರದ ಮಾರ್ಗಸೂಚಿ ಮತ್ತು ನಿರ್ದೇಶನದ ಪ್ರಕಾರವಾಗಿ 2 ಆಯ್ಕೆಗಳನ್ನು ಕೊಟ್ಟಿದ್ದಾರೆ. ರಿಸರ್ವ್ ಬ್ಯಾಂಕಿನಿಂದ ಹೋಗಿ ಸಾಲವನ್ನು raise ಮಾಡಿಕೊಂಡು ತೆಗೆದುಕೊಳ್ಳಿ ಎಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದಾರೆ. In the first option, States can borrow in 2020-21 only to meet the shortfall related GST implementation. ಎಲ್ಲಾ ಸೇರಿ ಸುಮಾರು 97,000 ಕೋಟಿ ರೂಪಾಯಿಗಳು ಇದೆಯಲ್ಲವೇ, with the rest payable after 2020-22 from the surplus Cess collection, after the 2.3 lakhs crore shortfall, the Centre attributed rupees 97 crores shortfall, to implement in GST which has been calculated, assume that 10% growth in the State's GST revenue in 2020-21 with shortfall due to COVID-19 pandemic. In the Second option; States can borrow in 2020-21 to meet the entire shortfall which the Centre would not be able to pay the Cess collection. ಇದರಲ್ಲಿ ತಾವು ಆರ್.ಬಿ.ಐ. ಗೆ ಹೋದರೆ ಇದನ್ನು ಬಡ್ಡಿಯಾಗಲಿ, ಮತ್ತೊಂದಾಗಲಿ ಯಾರು ಪೇಮೆಂಟ್ ಮಾಡುತ್ತಾರೆ? ತಾವು ಒಂದನೇ ಆಯ್ಕೆಗೆ ಹೋಗಿದ್ದೀರೋ, ಎರಡನೇ ಆಯ್ಕೆಗೆ ಹೋಗಿದ್ದೀರೋ, ಮತ್ತು ತಾವು ಏನಾದರೂ borrow ಮಾಡುತ್ತೇವೆ ಎಂದರೆ, Karnataka Ceiling on Government Guarantees Actಗೆ effect ಆಗುತ್ತದೆಯೇ ಎಂಬ ಬಗ್ಗೆ ದಯವಿಟ್ಟು ಸರ್ಕಾರ ನನಗೆ ಸ್ಪಷ್ಟೀಕರಣ ಕೊಡಬೇಕು. ಅದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಆಮೇಲೆ repayment ಅಷ್ಟೇ. Under both the options borrowings done by the States will be repaid from the future Cess collection that to allow the GST Council can recommend to Centre. That compound Cess levied for a period beyond five years. That is post June-2022. In option-1, partial borrowing. The interest payable on the borrowing will also to be paid from future Cess collection. However, in option-2, the States need to pay that interest at the market rate using their own resources. ಇದು ಎಂತಹ ಒಂದು ಆಯ್ಕೆಯಾಗಿದೆ. ಏಕೆಂದರೆ, ಕೇಂದ್ರ ಸರ್ಕಾರದಲ್ಲಿ Cess Collection ಮಾಡುವಂತಹ ಒಂದು Act ಇದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(900)/26-9-2020/ಎಲ್‌ಎಂ/ವಿಕೆ/1-00**

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):-**

ಮುಂದಿನ ದಿನಗಳಲ್ಲಿ ಪೇಮೆಂಟ್ ಮಾಡಬಹುದು, ಆದರೆ ಏಕೆ interest burden ನನ್ನು ರಾಜ್ಯದ ಮೇಲೆ ಹಾಕಲಾಗುತ್ತಿದೆ ಎನ್ನವುದಕ್ಕೆ ಉತ್ತರ ಕೊಡಬೇಕು. Prime Minister's Citizen Assistance and Relief in Emergency Situations Fund. ಇದರಲ್ಲಿ ಕೇವಲ equipment's, ventilators ಅಥವ ಬೇರೆ ಇರಬಹುದು ಸಹಾಯ ಬಂದಿದೆ, ಆದರೆ assistance ಬಂದಿರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನಾವು ನೋಡಿದ ಹಾಗೆ ಬೇರೆ ರಾಜ್ಯಗಳಾದ ಬಿಹಾರ, ಯುಪಿ, ಗುಜರಾತ್‌ಗಳಿಂತ ನಮಗೆ ಬಹಳ ಕಡಿಮೆ ಬಂದಿದೆ. ಇದರ ಬಗ್ಗೆ clarification ನನ್ನು ಮಾನ್ಯ ಮಂತ್ರಿಗಳು ಕೊಡಬೇಕು.

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಗಳೆ, ಮಾನ್ಯ ತಿಪ್ಪೇಸ್ವಾಮಿಯವರು ಈಗಾಗಲೆ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯ Fiscal Management ನಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ಲೋಕಸಭೆಯಲ್ಲಿ 25ಜನ ನಮ್ಮ ಸಂಸದರು ಇದ್ದಾರೆ. ಅವರು ನಮಗೆ ಬರಬೇಕಾದ ಹಣವನ್ನು ಪಡೆದರೆ ತಾವು ಇದನ್ನು increase ಮಾಡುವ ಅವಶ್ಯಕತೆಯೇ ಇಲ್ಲ. 15th Finance Commission ನಲ್ಲಿ special fund ಎಂದು ಸುಮಾರು 5,495 crores ಬರಬೇಕಾಗಿತ್ತು. ಅದಕ್ಕೆ recommend ಮಾಡಿದ್ದಾರೆ. ಅದನ್ನು ತರಲು ಏಕೆ ತಾವು ಪ್ರಯತ್ನ ಮಾಡಲಿಲ್ಲ. 15th and 14th Finance Commission ನಲ್ಲಿ ಇರುವ ಸುಮಾರು 39,000 crores ಗಳಿಂದ ಇಳಿಕೆ ಮಾಡಿ 27 ಸಾವಿರ ಕೋಟಿ ರೂ.ಗಳು ಮಾಡಿದ್ದಾರೆ. ಇಲ್ಲಿಯೇ ಹನ್ನೊಂದು ಹನ್ನೊಂದುವರೆ ಸಾವಿರ ಕೋಟಿ ರೂ.ಗಳು ಕಡಿಮೆಯಾಗಿದೆ. ಅದರ ಜೊತೆಯಲ್ಲಿ ಜಿಎಸ್‌ಟಿ ಕಲೆಕ್ಷನ್ 13 ಸಾವಿರ ಕೋಟಿ ರೂ.ಗಳಷ್ಟು ಆಗಿದೆ ಎಂದು ಮಾನ್ಯ ತಿಪ್ಪೇಸ್ವಾಮಿಯವರು ಈಗಾಗಲೇ ಹೇಳಿದರು. ಈ Financial Year complete ಆಗುವಷ್ಟರಲ್ಲಿ ಅದು 25 ಸಾವಿರ ಕೋಟಿ ರೂ.ಗಳವರೆಗೆ ಆಗುತ್ತದೆ. ಅದರಲ್ಲಿಯು 14 ಸಾವಿರ ಕೋಟಿ ರೂ.ಗಳು ಕಡಿಮೆಯಾಗುತ್ತದೆ. 14,000 ಕೋಟಿ ರೂ.ಗಳು, 12,000 ಕೋಟಿ ರೂ.ಗಳು ಮತ್ತು 500 ಕೋಟಿ ರೂ.ಗಳು ಒಟ್ಟು 40,000 ಕೋಟಿ ರೂ.ಗಳಾಗುತ್ತದೆ. ಇದೆಲ್ಲವನ್ನು ಲೆಕ್ಕ ಹಾಕಿದರೆ ಇಲ್ಲಿಯೇ ನಮಗೆ 40000 ಕೋಟಿ ರೂ.ಗಳು ಬರಲು ಅವಕಾಶವಿದೆ. ಮತ್ತೆ ಏಕೆ 5% ಜಾಸ್ತಿ ಮಾಡಿ ರಾಜ್ಯಕ್ಕೆ borrow ಮಾಡಬೇಕು? ಇವತ್ತು borrow ಮಾಡಿದರೂ ನಾಳೆ ಅದನ್ನು ಕಟ್ಟಲೇ ಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವಂತಹ ಮುಂದಿನ ವರ್ಷದ ಬಜೆಟ್ ಮಂಡನೆ ಮಾಡುವಾಗ welfare programmes ಗೆ ಎಲ್ಲಿಂದ ಹಣ ತರುತ್ತೀರಿ, development programmes ಗೆ ಎಲ್ಲಿಂದ ಹಣ ಬರುತ್ತದೆ. ಅದರ ಬಗ್ಗೆಯು ಯೋಚನೆ ಮಾಡಬೇಕು. ರಾಜ್ಯದಲ್ಲಿ ವಾಸಮಾಡುವಂತಹ ಪ್ರತಿಯೊಬ್ಬ ನಾಗರೀಕರ ಮೇಲೆ ಇದೊಂದು ಜವಾಬ್ದಾರಿ ಹೊರೆಸಿದ ಹಾಗೆ ಆಗುತ್ತದೆ. ಅದಕ್ಕಾಗಿ ಕೇಂದ್ರದಿಂದ ಬರಬೇಕಾದ ಫಂಡನ್ನು ತಂದರೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

**ಶ್ರೀ ಶ್ರೀನಿವಾಸ್ ಮಾನೆ:-** ಮಾನ್ಯ ಸಭಾಪತಿಗಳೆ, ನಿನ್ನೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಸರ್ಕಾರದಿಂದ ಕೇಂದ್ರದಿಂದ ಬರುವಂತಹ ಯಾವುದೇ ಜಿಎಸ್‌ಟಿ ಬಾಕಿ ಇಲ್ಲ ಎಂದು ಉತ್ತರ ಬಂದಿದೆ. ಅದನ್ನು ಪತ್ರದ ಮುಖಾಂತರ ತಮಗೆ ಕಳುಹಿಸುತ್ತೇನೆ. ಅದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಸರ್ಕಾರದವರು ಸುಳ್ಳು ಉತ್ತರವನ್ನು ಕೊಟ್ಟಿದ್ದಾರೆ. ಇದರ ಜೊತೆಗೆ Social Security Schemes ನಲ್ಲಿ ಎಷ್ಟು ತಿಂಗಳಿಂದ beneficiaries ರಿಗೆ amount release ಮಾಡಿರುವುದಿಲ್ಲ ಎನ್ನುವ ಮಾಹಿತಿಯನ್ನು ಸರ್ಕಾರ ಕೊಡಬೇಕೆಂದು ತಮ್ಮ ಮುಖಾಂತರ ಕೋರುತ್ತೇನೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನಗೊಂಡವರು):-** ಮಾನ್ಯ ಸಭಾಪತಿಗಳೆ, The *Karnataka Fiscal* Responsibility (*Amendment*) *Bill,* 2020 ತಂದಿದ್ದಾರೆ. ಇದರ ಮೂಲ ಉದ್ದೇಶ *Financial discipline* ತರುವಂತಹ *responsible fix* ಮಾಡಲು ಈ ವಿಧೇಯಕವನ್ನು ತಂದಿರುವುದು. ಶೇಕಡ 3 ರಷ್ಟು ಮಾಡಿರುವುದರ ಉದ್ದೇಶ ಎಂದರೆ *Fiscal* Responsibility ನಲ್ಲಿ ಏನು ಇದೆ, ಆ ಒಂದು baseline ನಿಂದ ಮೇಲೆ ಹೋಗಬಾರದು ಎನ್ನುವ ಉದ್ದೇಶಕ್ಕಾಗಿಯೇ ಈ 3% ಇರುವುದು. ಈಗ 5 % ಮಾಡಲು ಕಾರಣ, ಕೇಂದ್ರ ಸರ್ಕಾರದ ತಪ್ಪುಗಳಿಂದ *federal system* ನಲ್ಲಿ *pressure* ಹಾಕುವಂತಹ ಕೆಲಸ ದೇಶದಲ್ಲಿ ನಡೆಯುತ್ತಿದೆ. ನೋಟ್‌ಬ್ಯಾನ್ ಆಗುವಂತಹ ಸಂದರ್ಭದಲ್ಲಿ ಯಾವ-ಯಾವ ಸ್ಕೀಮ್‌ಗಳು ಕೇಂದ್ರದಲ್ಲಿ ಬಂದವು ಅದರ ಬಗ್ಗೆ ಜಗಜ್ಜಾಹೀರು ಆಗಿದೆ. ಮಧ್ಯೆ ರಾತ್ರಿಯಲ್ಲಿ ಸ್ವಾತಂತ್ರ ಬಂದ ರೀತಿಯಲ್ಲಿ ಜಿಎಸ್‌ಟಿ ಯನ್ನು ತಂದಿರುವುದನ್ನು ನಾವೆಲ್ಲ ನೋಡಿದ್ದೇವೆ. ಅವತ್ತಿನ ಕೇಂದ್ರ ಸರ್ಕಾರದ ಹೇಳಿಕೆಗಳನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ, ಜಿಎಸ್‌ಟಿ ತರುವುದರಿಂದ ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಬಹಳ ಹತ್ತಿರವಾಗುತ್ತದೆ ಮತ್ತು ಪುಷ್ಟಿಕರವಾಗುತ್ತದೆ, ಒಕ್ಕೂಟದ ವ್ಯವಸ್ಥೆಯಲ್ಲಿ ಹಣಕಾಸಿನ ಪರಿಸ್ಥಿತಿ ಬಹಳ ಗಂಭೀರವಾಗಿ ಆಗುತ್ತದೆ ಎಂದು ನಾಲ್ಕೈದು ವರ್ಷಗಳಿಂದ ಈ ಮಾತುಗಳನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕೇಳಿರುವುದನ್ನು ನೆನೆಪಿಸಿಕೊಳ್ಳಿ. ಇವತ್ತು 3% ನಿಂದ 5% ಮಾಡುವುದಕ್ಕೆ ಈ ತಿದ್ದುಪಡಿಯನ್ನು ತಂದಿರುವುದು, ನಾಳೆ 5% ನಿಂದ 10% ಗೆ ಏರಿಸುವಂತಹ ತಿದ್ದುಪಡಿಯನ್ನು ತರಲು ಅವಕಾಶವಾಗುತ್ತದೆ. ಇಲ್ಲಿ *flood gate open* ಆಗುತ್ತಿದೆ. *Flood gate open* ಆದಾಗ ನಿಮ್ಮಲ್ಲಿ *financial discipline totally collapse* ಆಗುತ್ತದೆ. *Collapse* ಆಗುವುದಕ್ಕೆ ಒಪ್ಪಿಗೆ ಕೊಡಲು ನಾವೆಲ್ಲರೂ ಈಗ ಭಾಗಿಗಳಾಗುತ್ತೇವೆ. ರಾಜ್ಯದ, ದೇಶದ ಜನತೆ ನೋಡುತ್ತಿದ್ದಾರೆ. ಯಾರೋ ಮಾಡಿದ ತಪ್ಪಿಗೆ ನಾವು ಕಟ್ಟಿರುವ ತೆರಿಗೆಯನ್ನು ತೆಗೆದುಕೊಳ್ಳಲು ಆಗದೆ ಅದಕ್ಕೆ ಬದಲಾಗಿ ಬ್ಯಾಂಕಿಗೆ ಹೋಗಿ ಸಾಲ ತೆಗೆದುಕೊಳ್ಳಲು *discipline responsibility relax* ಮಾಡುವಂತಹ ಕೆಟ್ಟ ಕೆಲಸಕ್ಕೆ ನಾವು ಇವತ್ತು ಇಲ್ಲಿ ಕುಳಿತ್ತಿದ್ದೇವೆ. ಇವತ್ತು ರಾಜ್ಯದ ಬೊಕ್ಕಸವನ್ನು ಪೂರ್ತಿಯಾಗಿ ಬರಿದು ಮಾಡಲಾಗುತ್ತಿದೆ. ಇದರಿಂದ ರಾಜ್ಯದ ಜನತೆ ಮೇಲೆ ಮುಂದಿನ ದಿನಗಳಲ್ಲಿ ತೆರಿಗೆ ಹೆಚ್ಚಾಗುತ್ತದೆ. *That is very important.* ಇವತ್ತು ಪೆಟ್ರೋಲ್ *International Market* ನಲ್ಲಿ ಏಕೆ ಕಡಿಮೆಯಾಗುತ್ತಿದೆ ಎಂದರೆ, ಕೇಂದ್ರ ಸರ್ಕಾರ ಪ್ರತಿದಿನ ಅದರ ಮೇಲೆ ತೆರಿಗೆ ಹೆಚ್ಚು ಮಾಡುತ್ತಿರುವುದು ಏಕೆ ಎಂದರೆ ಕೇಂದ್ರದವರ ಹತ್ತಿರ ಹಣವಿಲ್ಲ, ಪ್ರತಿದಿನ ಹಣ ಬರುವುದು ಡಿಸೆಲ್ ಮತ್ತು ಪೆಟ್ರೋಲ್‌ನಿಂದ ಮಾತ್ರ ಪ್ರತಿದಿನ ಹಣಬರುವುದು. ಆದ್ದರಿಂದ ಪೆಟ್ರೋಲ್ ಮತ್ತು ಡಿಸೆಲ್ ಮೇಲಿನ *Tax, Excise Duty* ನ್ನು ಹಾಕುತ್ತಿದ್ದಾರೆ. *International Market* ನಲ್ಲಿ ಪೆಟ್ರೋಲ್, ಡಿಸೆಲ್, *fuel* ಕಡಿಮೆಯಾಗುತ್ತಿದೆ, ಇವರ *tax and cess* ಎಲ್ಲವು ಮೇಲಕ್ಕೆ ಹೋಗುತ್ತಿವೆ. ನಿಮಗೆ ಕೊಟ್ಟಿರುವ *responsibility* ಯ ಮೂಲ ಉದ್ದೇಶವನ್ನೆ ಇವತ್ತು *defeat* ಮಾಡುತ್ತಿದ್ದೇವೆ. *It is defeated.* ನಾವು ಇಲ್ಲಿ ಹೆಚ್ಚು ಮಾಡಲು ಬರುವುದೇ ಇಲ್ಲ. ಈಗ ಶೇಕಡ 5 ರಷ್ಟು ಮಾಡಿರುವುದು *it is a mistake done by the Government of India.* ಅವರು ಮಾಡಿರುವ ತಪ್ಪನ್ನು ನಮ್ಮ ತಲೆಮೇಲೆ ಹಾಕಿಕೊಳ್ಳುವಂತಹ ಕೆಲಸವನ್ನು ಮಾಡಲಾಗುತ್ತಿದೆ. ಇದು ಉತ್ತಮವಾದ ಬೆಳವಣಿಗೆಯಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, *it is very important subject. Because the State has gone under debt trap.* ಕರ್ನಾಟಕ ರಾಜ್ಯ ದಿವಾಳಿಯ ಕಡೆಗೆ ಹೋಗುತ್ತಿದೆ. ಅದಕ್ಕಾಗಿ ಎಲ್ಲ ಸದಸ್ಯರಿಗೂ ಮಾತನಾಡಲು ಅವಕಾಶವನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ.ರಾಠೋಡ್(ನಾಮನಿರ್ದೇಶನಹೊಂದಿದವರು):-** ಮಾನ್ಯ ಸಭಾಪತಿಗಳೆ, ಇದರ ಬಗ್ಗೆ ಇವತ್ತು ಏಕೆ ಈ ಬಿಲ್‌ನ್ನು ತರಲಾಗಿದೆ ಎನ್ನುವುದನ್ನು ಮಾನ್ಯ ಸ್ನೇಹಿತರಾದ ಪಿ.ಆರ್.ರಮೇಶ್‌ರವರು ಹೇಳಿದ್ದಾರೆ. ಈ ಬಿಲ್‌ನ್ನು ತರಲು ಕಾರಣ ಏನು ಎಂದರೆ, ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದ *GST share* ಏಕೆ ಬರುತ್ತಿಲ್ಲ? ಒಕ್ಕೂಟ ರಚನೆಯಲ್ಲಿ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಪಾಲು ಬರುತ್ತಿಲ್ಲ. ಕೇಂದ್ರ ಸರ್ಕಾರ ವಚನ ಭ್ರಷ್ಟವಾಗಿದೆ. 5ವರ್ಷಗಳಿಂದ ಜಿಎಸ್‌ಟಿ ಮುಖಾಂತರ ನಮ್ಮ ರಾಜ್ಯಕ್ಕೆ ಬರಬೇಕಾದ ಷೇರ್ ಹಣಕ್ಕೆ ಕೇಂದ್ರ ಸರ್ಕಾರ *guarantee* ಆಗಿ ನಿಂತಿದ್ದರು. ಈಗ ಅವರು ಹೇಳುವುದು ಈ ವರ್ಷ ರಾಜ್ಯಸರ್ಕಾರಗಳಿಗೆ *GST share* ಕೊಡಲು ಆಗುವುದಿಲ್ಲ, ಅದಕ್ಕೆ ಬದಲಾಗಿ ಸಾಲ ತೆಗೆದುಕೊಂಡು ನೀವು ರಾಜ್ಯವನ್ನು ನಡೆಸಿ ಎಂದು ಹೇಳುತ್ತಿದ್ದಾರೆ. ಇವತ್ತು ಇಲ್ಲಿ ಒಂದು *resolution* ನ್ನು ಮಾಡಬೇಕಾಗಿದೆ. ಏನು ಎಂದರೆ ಈ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬಂದಿದೆ. ಜಿಎಸ್‌ಟಿ ಕೊಡುವಲ್ಲಿ ಕೇಂದ್ರ ಸರ್ಕಾರ ವಚನ ಭ್ರಷ್ಟವಾಗಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಹೊರೆಯಾಗುತ್ತಿದೆ, ಮಾನ್ಯ ರಮೇಶ್ ಇತರರು ಹೇಳಿದ ಹಾಗೆ ಮುಂದೆ ಇದರಿಂದ ನಮಗೆ ದೊಡ್ಡ ಆಘಾತವನ್ನು ನಿರ್ಮಾಣ ಮಾಡಲು ಅವಕಾಶವಾಗುತ್ತದೆ. ಇದಕ್ಕೆ ಕೇಂದ್ರ ಸರ್ಕಾರವೇ ಕಾರಣ ಎಂದು ಈ ಸದನದಿಂದ ಒಂದು ಸಂದೇಶವನ್ನು ಕೇಂದ್ರಕ್ಕೆ ಕಳುಹಿಸಬೇಕು. ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುವುದರಿಂದ ಈ ವಿಧೇಯಕವನ್ನು ನಾವು ಪಾಸ್ ಮಾಡಲು ಬಿಡಬಾರದು.

**(ಮುಂದು)**

(901)26-09-2020(01-10)ಬಿಎಸ್‌ಡಿ-ವಿಕೆ

**ಶ್ರೀ ಪ್ರಕಾಶ್ ರಾಥೋಡ್ (ಮುಂದು)**

ಇವತ್ತು 5 percent ಸಾಲ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡುತ್ತಿದ್ದಾರೆ. Karnataka is known for its Fiscal Management. We were the No.1 State in Fiscal Management. But today we are going down from 3rd place, 4th place to 17th place. Fiscal Management has totally failed. Now they are telling to take another 5 per cent. ಏನು ಬೇಕಾದರೂ ಎಂದರೆ ಏನು? This is not correct. ಈ Bill ಅನ್ನು ನಾವು oppose ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ವ್ಯಾಪಕ ಚರ್ಚೆ ಆಗಲಿ. ಮಾನ್ಯ ರಮೇಶ್‌ರವರು, ಮಾನ್ಯ ಪ್ರಕಾಶ್ ರಾಥೋಡ್ ರವರು, ಮಾನ್ಯ ಇಬ್ರಾಹಿಂ ರವರು ಮತ್ತು ಮಾನ್ಯ ತಿಪ್ಪೇಸ್ವಾಮಿ ರವರು ಬಹಳ ಅರ್ಥಪೂರ್ಣವಾಗಿ ಮಾತನಾಡಿದರು. ಈ ರಾಜ್ಯದ, ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಬಗ್ಗೆ ಮಾನ್ಯ ರಮೇಶ್ ರವರು ಹೇಳಿದಂತೆ ಒಕ್ಕೂಟ ವ್ಯವಸ್ಥೆಯಲ್ಲಿ ಭಾರತ ಸರ್ಕಾರ GST (Goods and Services Tax) ಪದ್ಧತಿಯನ್ನು ಹೊಸದಾಗಿ ತಂದು ಇದರಲ್ಲಿ..........

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಅವರಿಗೆ ಸ್ಪಷ್ಟಪಡಿಸಿರುವಂತೆ ನಮಗೆ ಈ ಬಾರಿ ಸುಮಾರು ರೂ.25 ಸಾವಿರ ಕೋಟಿ GST ಬರಬೇಕು. Rs. 7,000 crores ಬಂದಿದೆ. Rs. 11,000 crores and odd ಗೆ ಅವರು ಜವಾಬ್ದಾರರು. ಅವರು loan ತೆಗೆದುಕೊಂಡು Principal and Interest ಅವರು ಕಟ್ಟಿಕೊಳ್ಳುತ್ತಾರೆ. ಇನ್ನು ರೂ.7 ಸಾವಿರ ಕೋಟಿಗಳನ್ನು ಬರುವ ದಿವಸಗಳಲ್ಲಿ ತೀರಿಸುತ್ತಾರೆ. ನಮಗೆ ಮಾರ್ಚ್ end ವರೆಗೆ ಬರಬೇಕಾದ GST ಬಂದಿದೆ. This is Government reply. GST ಯಿಂದ ಈ ಸ್ಥಿತಿ ನಿರ್ಮಾಣವಾಗಿಲ್ಲ. ಉಖಖಿ ಯಿಂದ ನಿರ್ಮಾಣವಾದ ನಮಗೆ ಕೊಡಬೇಕಾದ ಸುಮಾರು ರೂ.11 ಸಾವಿರ ಕೋಟಿಯನ್ನು ಕೊಡಬೇಕಾದ ಕಂತಿಗೆ ಅವರು ಜವಾಬ್ದಾರರು. ಆ ಜವಾಬ್ದಾರಿ ತೆಗೆದುಕೊಂಡು ಆ ಸಾಲ ಅವರು ತೀರಿಸಿಕೊಳ್ಳುತ್ತಾರೆ. ಆ ಬಡ್ಡಿ ತೀರಿಸಿಕೊಳ್ಳುತ್ತಾರೆ. Government ನಲ್ಲಿ ಇದ್ದುಕೊಂಡು ಹೇಳುತ್ತಿದ್ದೇನೆ. ನಮಗೆ revenue collection loss is Rs. 65,000 crores. Because of Covid-19 ಎಲ್ಲಾ Manufacturing Unit ಬಂದ್ ಆಯಿತು, ಎಲ್ಲಾ services ಬಂದ್ ಆಯಿತು. ಯಾವುದೇ ಕಾಮಗಾರಿ ಅಥವಾ ಯಾವುದೇ ರೀತಿ ಚಟುವಟಿಕೆ ಮೂರ್ನಾಲ್ಕು ತಿಂಗಳು ಸರ್ಕಾರದಲ್ಲಿ ಮಾಡುವುದಕ್ಕೆ ಆಗಲಿಲ್ಲ. ಯಾವುದೇ ರೀತಿ ನಮಗೆ revenue generate ಆಗಲಿಲ್ಲ. Instead of that, expenditure ನಮಗೆ ಜಾಸ್ತಿ ಆಯಿತು. ಅದು ಗೊತ್ತಿದೆ. ನಾವು ಏನೇನು benefits ಕೊಟ್ಟುಕೊಂಡು ಹೋಗಿದ್ದೇವೆ ಎಂಬುದನ್ನು ಕೇಳಿದ್ದಾರೆ ಮತ್ತು ಇನ್ನೂ ಕೊಡುವ ಬಗ್ಗೆ ಕೇಳಿದ್ದಾರೆ. ಇದೆಲ್ಲವೂ ಇದ್ದಾಗ ಒಂದು ರಾಜ್ಯ ಪೂರ್ತಿ normal ಆಗಿ ಆಡಳಿತ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ distress ಅನ್ನುತ್ತಾರೆ. ಇದು ಯಾವತ್ತೂ ನಡೆದುಕೊಂಡು ಬಂದಿದೆ. ಅಕಸ್ಮಾತ್ ಒಂದು ಕಾಲದಲ್ಲಿ ಭೀಕರ ಬರಗಾಲ ಬಂದು ನಮ್ಮ discipline ಏರುಪೇರಾಗುತ್ತದೆ. Floods

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದು ಏರುಪೇರಾಗುತ್ತದೆ. ಈ ರೀತಿ ಕೋವಿಡ್ ರೀತಿ ಪ್ರಾಸಂಗಿಕವಾದ ಪ್ರಸಂಗಗಳು ಬಂದು ಏರುಪೇರಾಗುತ್ತದೆ. ನಾವು ಈ ರಾಜ್ಯದಲ್ಲಿ 3 ವರ್ಷಗಳಿಂದ ಸತತವಾಗಿ ಯಾವುದಾದರೊಂದು ಸಂಕಷ್ಟಕ್ಕೆ ಸಿಕ್ಕಿಹಾಕಿಕೊಂಡು ಬಂದಿದ್ದೇವೆ. Flood ಆಯಿತು, ಕೋವಿಡ್ ಬಂತು, ನಾವು ಇಷ್ಟೆಲ್ಲಾ ಆಸೆ ಇಟ್ಟುಕೊಂಡು ಸರ್ಕಾರದಲ್ಲಿ ಒಂದೇ ಒಂದು ಹೊಸ programme launch ಮಾಡಲಿಲ್ಲ. ಒಂದು ಹೊಸ project launch ಮಾಡುವುದಕ್ಕೆ ಆಗಲಿಲ್ಲ. ನಮ್ಮ ಆರ್ಥಿಕ ಸ್ಥಿತಿ ಕಷ್ಟದಲ್ಲಿರುವುದರಿಂದ ಮಾಡುವುದಕ್ಕೆ ಆಗಲಿಲ್ಲ. Our Revenue Collection Loss is Rs. 65,000 crores. This is not just because of GST. ಅವರು ಹೇಳುತ್ತಾರೆ ಎಂದು ನಾವು ಕುಳಿತುಕೊಂಡು ಕೇಳಿ ಎದ್ದು ಹೋಗುವುದಕ್ಕೆ ಆಗುತ್ತದೆಯೇ? ನಮ್ಮ GST compensation is Rs. 25 crores. We are not going to leave it. ನಮಗೆ ರೂ.2 ಸಾವಿರ ಕೋಟಿ ಬಂದಿದೆ. ಇನ್ನು ರೂ.11 ಸಾವಿರ ಕೋಟಿ ಕೊಡಲು ಅವರೇ loan ಅನ್ನು ತೀರಿಸಿಕೊಳ್ಳುವ ಬಗ್ಗೆ ಹೇಳಿದ್ದಾರೆ. ಮತ್ತೆ 15th Finance Commission ಏನಾಗಿದೆ, ಅದರಲ್ಲಿ ರೂ.5 ಸಾವಿರ ಕೋಟಿ ನಮಗೆ ಬರಲು ಒಂದೇ ಸಮ ಒತ್ತಡ ಹಾಕುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಒಂದು ತಿಂಗಳ ಹಿಂದೆ ಹೋಗಿದ್ದರು, ನಮ್ಮವರೇ Finance Minister ಇದ್ದಾರೆ, ಎಲ್ಲಾ ರೀತಿ ಪ್ರಯತ್ನ ಮಾಡುತ್ತಿದ್ದೇವೆ, ನಾವು ಸರ್ಕಾರವನ್ನು ನಡೆಸಬೇಕು. ಇಷ್ಟೆಲ್ಲಾ ಆಸೆ ಪಟ್ಟುಕೊಂಡು ಬಂದು ದುಡ್ಡಿಲ್ಲದೇ ಸರ್ಕಾರವನ್ನು ನಡೆಸುವುದಕ್ಕೆ ಆಗುತ್ತದೆಯೇ? We are pushing all our efforts. ಆದರೆ ಈ ವರ್ಷ ಸೃಷ್ಟಿಯಾಗಿರುವ ಪರಿಸ್ಥಿತಿ ಬೇರೆಯಾಗಿದೆ. ನಾವು SDRF (State Disaster Response Fund) ನಲ್ಲಿ ಒಂದು ಮನೆಗೆ ರೂ.90 ಅಥವಾ 95 ಸಾವಿರ ಕೊಡಬಹುದು, permanent ಆಗಿ ಹಾಳಾಗಿರುವ ಎರಡು ಮನೆಗಳಿಗೆ ರೂ.5 ಲಕ್ಷ ಕೊಡಬಹುದು ಎಂದು ಒಪ್ಪಿಕೊಳ್ಳಬಹುದು, ಒಂದು ಎಕರೆ ಕೊಡಬೇಕಾಗಿರುವುದಕ್ಕೆ ರೂ.10 ಸಾವಿರ extra ಪರಿಹಾರ ಕೊಟ್ಟು.......... Continuous distress ನಲ್ಲಿ ರಾಜ್ಯವು ಒಂದು ಒಂದೂವರೆ ವರ್ಷದಿಂದ ಸಿಕ್ಕಿರುವುದರಿಂದ ಈ ಸ್ಥಿತಿಗೆ ಬಂದಿದೆ. ರಾಜ್ಯವನ್ನು ನಡೆಸಬೇಕಲ್ಲವೇ? ನಾನು ಕೆಳಮನೆಯಲ್ಲಿಯೂ ಹೇಳಿದ್ದೇನೆ. ಈ ರೀತಿ ಆಗಿರುವಾಗ ಏನು ಮಾಡಬೇಕೆಂದು ಹೇಳಲಿ. What to do? ಎಲ್ಲರೂ share ಮಾಡಬೇಕಲ್ಲವೇ? ಹಾಗಾದರೆ progress ಮಾಡಬಾರದೇ? Loan ಇದೆ, ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ತಿಪ್ಪೇಸ್ವಾಮಿಯವರು ಚೆನ್ನಾಗಿ ಮಾತನಾಡಿದರು. Go back, normal time ನಲ್ಲಿ ಏಕೆ liability ರೂ. 3 ಲಕ್ಷಕ್ಕೆ ಹೋಗಿತ್ತು? Normal time ನಲ್ಲಿ ರಾಜ್ಯದ liability ಏಕೆ ರೂ.2.5 ಲಕ್ಷಕ್ಕೆ ಹೋಗಿತ್ತು? When everything was normal liability was 3 lakhs and odd. Abnormal time ಇದೆ. distress ಇದೆ. ಇಷ್ಟು ಚರ್ಚೆಯಾಗುತ್ತದೆ. ಮೊದಲು liability ಸುಮಾರು ರೂ.3 ಲಕ್ಷ ಇತ್ತು. ರೂ. 93 ಸಾವಿರ ಹೋದರೆ.......... (ಗೊಂದಲ) ಸುಮಾರು ರೂ. 3 ಲಕ್ಷ liability ಕರ್ನಾಟಕದ ಮೇಲೆ ಇತ್ತು. ನಾನು ತೀಕ್ಷ್ಣವಾಗಿ ಟೀಕೆ ಮಾಡಿದ್ದೇನೆ. ನಾವು Assembly ಯಲ್ಲಿ ರೈತರ ಸಾಲ ತೀರಿಸುವ ಬಗ್ಗೆ ಕೇಳಿದ್ದೇವೆ, ಆವತ್ತು ಮಾನ್ಯ ಮುಖ್ಯಮಂತ್ರಿಗಳು 'ನಾನು ಮಾಡುವುದನ್ನು ಮಾಡಿ ಹೋಗುತ್ತೇನೆ, ಮುಂದೆ ಬರುವವರು ತೀರಿಸಿಕೊಳ್ಳಬೇಕಾಗುತ್ತದೆ' ಎಂದು ಹೇಳಿದರು. ಪ್ರಶ್ನೆ ಏನೆಂದರೆ, ಸರ್ಕಾರ ನಡೆಯಬೇಕಾಗಿದೆ, ಇದರಲ್ಲಿ ಯಾವ ಮಾತನ್ನು ಅಲ್ಲಗಳೆಯುವುದಿಲ್ಲ. ಇದರಲ್ಲಿ ನಮ್ಮ ಪಾತ್ರ ಇದ್ದರೆ please explore. ಆಡಳಿತದಲ್ಲಿ ಇಂತಹ ತಪ್ಪು ಮಾಡಿ ಈ ರೀತಿಯಾಗಿದೆ ಎಂದು ಹೇಳಲಿ. ಪ್ರಾಕೃತಿಕವಾಗಿ ಆಗಿರುವ ನಷ್ಟದಿಂದ revenue ಬರದೇ ಇರುವುದಕ್ಕೆ, ಪ್ರಾಕೃತಿಕವಾಗಿ ಪರಿಹಾರಗಳು, ಖರ್ಚುಗಳು ಮತ್ತು ಏನೇನು ಮಾಡಬೇಕಾಗಿದೆಯೋ ಅವುಗಳಿಗೆ ಹಾಗೂ ಯಥೇಚ್ಛವಾಗಿ ಕೋವಿಡ್ ನಿಭಾಯಿಸಲು ಖರ್ಚು ಮಾಡಬೇಕೆಂದರೆ ಬಹಳ ಕಷ್ಟ ಆಗಿದೆ. ನಮಗ್ಯಾರಿಗೂ ಖುಷಿ ಇಲ್ಲ, ಸಾಲ ತೆಗೆದುಕೊಳ್ಳಬೇಕು ಎಂದು ಯಾರಾದರೂ ಖುಷಿ ಪಡುತ್ತಾರೆಯೇ? ಅಂತಹ ಸ್ಥಿತಿ ಬಂದಿದ್ದಕ್ಕೆ ನಮಗೂ ಕಷ್ಟ ಇದೆ. ಎರಡು ವರ್ಷಗಳು ಕಳೆದರೂ ಶಾಸಕರಿಗೆ ಒಂದು ಕೆಲಸ ಮಾಡಿಕೊಡುವ stage ನಲ್ಲಿ ಇರಲಿಲ್ಲ. But ಸರ್ಕಾರವನ್ನು run ಮಾಡಬೇಕಲ್ಲವೇ? ಕರ್ನಾಟಕ ಯಾವತ್ತೂ committed expenditure ಗಾಗಿ loan ಗೆ ಹೋಗಿರಲಿಲ್ಲ. Capital investment ಗೆ ಹೋಗಿದ್ದೆವು. ಆದರೂ ಸಾಲ ತೆಗೆದುಕೊಂಡಿರುವುದು ನಿಜವಲ್ಲವೇ? ಸತತವಾಗಿ ಸಾಲ ತೆಗದುಕೊಂಡಿರುವುದು ನಿಜ. ಈ ಬಾರಿ ಸ್ವಲ್ಪ ಭಾಗ ಅಲ್ಲಿಗೆ ಹೋಗಬಹುದು, ಅದನ್ನು ಬಿಟ್ಟರೆ we are not doing anything more than what was earlier. ಪರಿಸ್ಥಿತಿ ಈ ರೀತಿ ಇದೆ, ರಾಜ್ಯ ಮುನ್ನಡೆಯಬೇಕು, Ongoing projects ಗಳು ಆಗದಿದ್ದರೆ cost escalation ಎರಡು-ಮೂರರಷ್ಟು ಹೆಚ್ಚಾಗುತ್ತದೆ. ಎಲ್ಲಾ sector ಗಳು ಕೆಲಸ ಮಾಡುವುದಕ್ಕೆ ಪ್ರಾರಂಭವಾದ ಮೇಲೆ ಸ್ವಲ್ಪ revenue collection ಆದರೆ ease out ಆಗಬಹುದು ಎನ್ನುವ ಭಾವನೆ ಇದೆ. ನಾವು ಏನಾದರೂ push ಮಾಡದಿದ್ದರೆ, investment

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡದಿದ್ದರೆ, expenditure ಮಾಡದಿದ್ದರೆ ಸ್ಥಗಿತ ಆಗಿ ಹೋಗುತ್ತವೆ. ಸ್ಥಗಿತ ಆದರೆ ಯಾವ income ಬರುತ್ತದೆ? ಚಾಲೂ ಮಾಡಬೇಕಲ್ಲವೇ? Work ಚಾಲೂ ಮಾಡದಿದ್ದರೆ ವರಮಾನ ಹೇಗೆ ಬರುತ್ತದೆ? ಮಾಡಬೇಡಿ, ತೆಗೆದುಕೊಳ್ಳಬೇಡಿ ಎಂದು ಹೇಳುವುದು ನಿಜ. ಆದರೆ ರಾಜ್ಯವನ್ನು ಹೇಗೆ ನಡೆಸೋಣ? ಇದು discipline ಅಲ್ಲ, ಹೌದು, discipline ಇರುವುದಕ್ಕೆ ಆಗುವುದಿಲ್ಲ. National disaster ನಲ್ಲಿ, ಮಳೆಯಲ್ಲಿ ಕೊಚ್ಚಿಕೊಂಡು ಹೋಗುವಾಗ ಯಾರನ್ನು ಎಳೆದುಕೊಳ್ಳಬೇಕೋ, ಅವರನ್ನು ಎಳೆದುಕೊಳ್ಳಬೇಕಾಗುತ್ತದೆ. ಮಾನ್ಯ ಹರಿಪ್ರಸಾದ್ ರವರೇ, ಬೇರೆ ಸಮಯದಲ್ಲಿ ಹೆಣ್ಣು ಮಕ್ಕಳನ್ನು ಮುಟ್ಟಿದರೆ ಬಿಡುತ್ತಾರೆಯೇ? ಮುಳುಗುವವರನ್ನು ಎಳೆದುಕೊಳ್ಳಬಾರದೇ? This is the situation. You are the Learned Members of a House, which is a Seniors' House. ಇದನ್ನು ಅರ್ಥಮಾಡಿಕೊಳ್ಳಬೇಕು. ದಯಮಾಡಿ ಈ ವಿಧೇಯಕವನ್ನು pass ಮಾಡಿಕೊಡಬೇಕು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮಾಧುಸ್ವಾಮಿರವರು ಕೆಟ್ಟ case ಗೆ ಅಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಯಾವ ಕೆಟ್ಟ case, ಕೆಟ್ಟ ಪರಿಸ್ಥಿತಿಗೆ ಒಳ್ಳೆಯ ವಕೀಲರು, case ಗಲ್ಲ.

**ಶ್ರೀ ಮರಿತಿಬ್ಬೇಗೌಡರು:–** ಅವರು ವಾದ ಚೆನ್ನಾಗಿ ಮಾಡುತ್ತಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಕೆಟ್ಟ ಪರಿಸ್ಥಿತಿಗೆ ನಾನು Advocate ಆಗಿದ್ದೇನೆ.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ಕೊಟ್ಟಿಲ್ಲ, Finance Commission ನಿಂದ ಬರಬೇಕಾದುದ್ದನ್ನು ಕೊಟ್ಟಿಲ್ಲ. ನಾವೆಲ್ಲರೂ ಸೇರಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಬೇಕು ಎನ್ನುವ ಒಂದು ಮಾತು ಅವರ ಬಾಯಿಂದ ಬರಬೇಕು. ಅವರು ಚೆನ್ನಾಗಿ ನಡೆಸಿದ್ದಾರೆ. You have got a good Finance Department. ಆದರೆ ಬರುವುದು ಬರದಿದ್ದರೆ ಯಾರು ಏನು ಮಾಡುವುದಕ್ಕೆ ಸಾಧ್ಯ? ಸರಿಯಾಗಿ ಲೆಕ್ಕ ನೋಡಿದರೆ ರೂ.25 ಸಾವಿರ ಕೋಟಿ ಬರಬೇಕಾಗುತ್ತದೆ. ಈ ರೂ.25 ಸಾವಿರ ಕೋಟಿ ಬಂದಿದ್ದರೆ ಇವತ್ತು ಈ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಸ್ಥಿತಿ ಬರುತ್ತಿರಲಿಲ್ಲ. ಅವರು ಗುಜರಾತ್‌ಗೆ ಎಷ್ಟು ಹಣವನ್ನು ಕೊಟ್ಟರು? ಬಿಹಾರ್‌ಗೆ ಎಷ್ಟು ಹಣ ಕೊಟ್ಟರು? ಕರ್ನಾಟಕಕ್ಕೆ ಏಕೆ ತಾರತಮ್ಯ ಮಾಡುತ್ತಿದ್ದಾರೆ? ಇದನ್ನು ಕೇಳುವುದರಲ್ಲಿ ಏಕೆ ವಿಫಲರಾಗಿದ್ದೇವೆ? ಆ ಪ್ರಶ್ನೆ ನಮ್ಮ ಮುಂದೆ ಇದೆ. ಅವರು ಮಾಡಲಿಲ್ಲ ಎಂದು ನಾವು ಹೇಳಲಿಲ್ಲ. ಅವರು ಚೆನ್ನಾಗಿ argument ಮಾಡಿದರು, ಕಷ್ಟ ಕಾಲದಲ್ಲಿ ಇದ್ದಾರೆ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. But ಅವರು ಆ ಜಾಗದಲ್ಲಿರುವುದರಿಂದ ನಾವು ಅವರು ಸೇರಿ ಕೇಂದ್ರದ ಮೇಲೆ ಹೇಗೆ ಒತ್ತಡ ಹಾಕಬೇಕು ಎಂಬ ಮಾರ್ಗವನ್ನು ಸೂಚಿಸಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿಃ–** ಅವರು ಕದ ತಿನ್ನುತ್ತಿದ್ದಾರೆ, ನಾವು ಹಪ್ಪಳ ಕೇಳುವುದಕ್ಕೆ ಹೊರಟಿದ್ದೇವೆ! Where revenue loss is taken....

**ಶ್ರೀ ಸಿ.ಎಂ. ಇಬ್ರಾಹಿಂ:–** ಅವರು ಎಲ್ಲವನ್ನೂ ಮಾರುತ್ತಿದ್ದು, ನಮ್ಮ ಹತ್ತಿರ ಮಾರುವುದಕ್ಕೆ ಏನೂ ಇಲ್ಲ. BDA site ಗಳನ್ನು ಮಾರಿ ಏನಾದರೂ ದುಡ್ಡು ಮಾಡಬೇಕಷ್ಟೇ. ಅವರಿಗೆ LIC ಇದೆ, BPCL (Bharat Petroleum Corporation Limited) ಇದೆ, Railway ಇದೆ, ನಮ್ಮ ಹತ್ತಿರ ಏನೂ ಇಲ್ಲ, ಧೋತಿ, ಪಂಚೆ, ಜುಬ್ಬಾ ಬಿಟ್ಟರೆ ಏನೂ ಇಲ್ಲ, ಮಾರುವುದಕ್ಕೆ ವಿಧಾನಸೌಧ ಅಷ್ಟೇ ಉಳಿದಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿಃ–** ಮಾನ್ಯ ಸಭಾಪತಿಯವರೇ, ಅವರು ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿದ್ದವರು. Except China the entire World is facing this phenomenon. Including America entire World is in distress. Entire World is in revenue loss. ಮಾನ್ಯ ಸಿದ್ದರಾಮಯ್ಯನವರು ಯಾವ ಯಾವ ರಾಷ್ಟ್ರಗಳು ಎಷ್ಟೆಷ್ಟು revenue loss ನಲ್ಲಿ ಇವೆ ಎಂದು ನಿನ್ನೆ Assembly ಯಲ್ಲಿ ಹೇಳಿದರು. ನಾನು ಹೇಳುವುದೇನೆಂದರೆ, the Government of India, twenty-three and odd percent revenue loss ನಲ್ಲಿ ಇದೆ. With all that ನಮ್ಮ efforts ಅನ್ನು ಬಿಡುವುದಿಲ್ಲ. ನಮಗೆ ನಿಜವಾಗಿ ಎಲ್ಲಾದರೂ ಹೋಗಬೇಕಾದ ಕಾಲ ಬಂದರೆ ಎಲ್ಲರೂ ಒಟ್ಟಿಗೆ ಹೋಗೋಣ.

**(ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(902) 26.9.2020 1.20 ಪಿಕೆ:ಜಿಆರ್**

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಆದರೆ ಇದುವರೆಗೂ ಆ ಪ್ರಯತ್ನ ಆಗಲೇ ಇಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಪ್ರಯತ್ನ ಮಾಡಿದ್ದೇವೆ. ನಮಗೊಂದು ಆಸೆ ಇದೆ. Hon'ble Finance Minister of the country ಈ ರಾಜ್ಯದಿಂದ ಆಯ್ಕೆಯಾಗಿ ಹೋದವರೇ ಆಗಿದ್ದಾರೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಆದರೆ, ಒಂದು ನಯಾ ಪೈಸೆಯ ಅನುಕೂಲ ಆಗಿಲ್ಲ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ದಯವಿಟ್ಟು ಹಾಗೆ ಹೇಳುವುದಕ್ಕೆ ಹೋಗಬೇಡಿ. ನಮ್ಮ ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. (ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:–** ಅರ್ಥ ಮಂತ್ರಿಗಳಾಗಿ ರಾಜ್ಯಕ್ಕೆ ಏನು ಮಾಡಬೇಕಾಗಿತ್ತೋ ಅದನ್ನು ಮಾಡುತ್ತಿಲ್ಲ. ರಾಜ್ಯಕ್ಕೆ ನೆರವು ಕೊಡಿಸುವುದರಲ್ಲಿ ಅವರು ಫೇಲ್ ಆಗಿದ್ದಾರೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, 15 ದಿವಸಗಳ ಮುಂಚೆ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಹ್ಲಾದ್‌ಜೋಷಿಯವರ ಜೊತೆ ಹೋಗಿ ಪ್ರಧಾನ ಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳ ಜೊತೆ ಭೇಟಿ ಮಾಡಿ ವಿಷಯವನ್ನು ಹೇಳಿದ್ದಾರೆ. ಸಂಕಷ್ಟ ಪರಿಸ್ಥಿತಿ ಎಲ್ಲಾ ಕಡೆ ಇದೆ. ನಮಗೆ ಬರಬೇಕಾದ ಹಣವನ್ನು ಕೊಡಲು ಸ್ವಲ್ಪ ಕಾಲಾವಕಾಶ ತೆಗೆದುಕೊಂಡು, ನಂತರ ಕೊಡುತ್ತಾರೆ ಎನ್ನುವ ವಿಶ್ವಾಸ ನಮಗಿದೆ. Fifteenth Finance Commission ವತಿಯಿಂದ Rupees five thousand and odd ಏನು due ಇದೆಯೋ ಅದಕ್ಕೆ ನಾವು ಬೇಡಿಕೆ ಇಡುತ್ತಿದ್ದೇವೆ. There will be no compromise, ಇಬ್ರಾಹಿಂ ಸಾಹೇಬರೇ.

ಇದಕ್ಕೂ ಜಿ.ಎಸ್.ಟಿ.ಗೂ ಸಂಬಂಧ ಇಲ್ಲ. ಮಾನ್ಯ ಸದಸ್ಯರಾದ ಪ್ರಕಾಶ್ ರಾಥೋಡ್‌ರವರು ಏಕೆ ಈ ರೀತಿ ಮಾತನಾಡುತ್ತಿದ್ದಾರೋ ಗೊತ್ತಿಲ್ಲ. We will certainly claim.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಜಿ.ಎಸ್.ಟಿ., ಗೆ ಸಂಬಂಧಪಟ್ಟಂತೆ ನಮದೊಂದು ಪ್ರಶ್ನೆ ಇದೆ. ಕೇಂದ್ರ ಸರ್ಕಾರದಿಂದ ಬರಬೇಕದ ಮೊತ್ತದಲ್ಲಿ ಏಕೆ ಕಡಿಮೆಯಾಯಿತು?

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ನಮಗೆ ಬರಬೇಕಾದ ಹಣದ ಬಗ್ಗೆ ನಾವು ಕೇಳುತ್ತಿದ್ದೇವೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನ್ನ ಮಾತು ಕೇಳಿ. ಮಾನ್ಯ ತಿಪ್ಪೇಸ್ವಾಮಿಯವರು ಹೇಳಿದ ಹಾಗೆ option-1 ಗೆ ನಾವು ಒಪ್ಪಿಕೊಂಡಿದ್ದೇವೆ. ಅವರು ಯಾವತ್ತು ಕೊಟ್ಟರೂ principle and interest amount ಅವರೇ ಕ್ಲಿಯರ್ ಮಾಡಬೇಕಾಗುತ್ತದೆ. That is the agreement. ಬರೆದುಕೊಳ್ಳುವವರಿದ್ದಾರೆ ಎಂದು ಎಲ್ಲದಕ್ಕೂ ರೆಸಲ್ಯೂಷನ್ ಮಾಡಿದರೆ ನಾವೇನು ಮಾಡುವುದಕ್ಕಾಗುತ್ತದೆ?

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, if there is an agreement, it is not in the knowledge of any one. All the States that are not with the N.D.A., have already objected to it. All the parties and all the Governments have objected for not giving the G.S.T., from the centre. Its not only Karnataka. ಕೇಂದ್ರ ಸರ್ಕಾರದಿಂದ ನಿಮಗೆ ಬರಬೇಕಾದ ಹಣವನ್ನು ಕರ್ನಾಟಕದ ವತಿಯಿಂದ ಕೇಳಿ ಎಂದಷ್ಟೇ ನಾವು ಹೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು Treasury Bench ನಿಂದ ಕೊಡುವ ಮಾತಿಗೆ ಜವಾಬ್ದಾರಿ ಇದೆ ಎಂದು ತಾವು ಭಾವಿಸುವುದಾದರೆ, ಅಕಸ್ಮಾತ್ ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಸಾಲ ಮತ್ತು ಸಾಲದ ಬಡ್ಡಿಯನ್ನು ತೀರಿಸುತ್ತಾರೆಂದು ಅಗ್ರಿಮೆಂಟ್ ಆಗಿದೆ. ಸುಮಾರು ರೂ. 93 ಸಾವಿರ ಕೋಟಿ ಮೊತ್ತದಲ್ಲಿ ರೂ. 11 ಸಾವಿರ ಕೋಟಿಯಷ್ಟು ಲೆಸ್ ಆಗುತ್ತದೆ ಎಂದು ನಾನು ಆರಂಭದಲ್ಲೇ ಹೇಳಿದ್ದೇನೆ. ಜಿ.ಎಸ್.ಟಿ ಗೂ ಇದಕ್ಕೆ ಖಂಡಿತಾ ಸಂಬಂಧ ಇಲ್ಲ. 2022ನೇ ಸಾಲಿನವರೆಗೆ ಏನು ಜಿ.ಎಸ್.ಟಿ., ಮೇಲೆ ಸೆಸ್ ಕೊಡಬೇಕಾಗಿದೆಯೋ ಆ due ಅನ್ನು ಕೊಟ್ಟೇ ಕೊಡುತ್ತಾರೆ. ಆನಂತರ ನಾವು 10 ವರ್ಷ staggered repayment ಹಾಕಿಕೊಂಡಿದ್ದೇವೆ. ಮುಂಬರುವ ಕಾಲ ನಮಗೆ ಸ್ವಲ್ಪ ಕಷ್ಟವಾಗುತ್ತದೆ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಸಾಲ ತೆಗೆದುಕೊಂಡ ಮೇಲೆ ಸರ್ಕಾರ ನಡೆಸುವುದು ಸುಲಭವಲ್ಲ. ಆದರೆ ನಮಗೆ ಅದರ ಅನಿವಾರ್ಯತೆ ಇದೆ ಎನ್ನುವುದನ್ನು ತಾವೆಲ್ಲ ಮನಗಾಣಬೇಕು ಮತ್ತು ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಒಂದು ಕ್ಲಾರಿಫಿಕೇಷನ್ ಇದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಎಷ್ಟು ಕ್ಲಾರಿಫಿಕೇಷನ್ ಕೇಳುತ್ತೀರಿ? Are you in a debate? In the off Session, this cannot happen for a Bill.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, Hon'ble Minister has made a statement.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕ್ಲಾರಿಫಿಕೇಷನ್ ಕೊಡುವುದಕ್ಕೆ ಬಂದಿದ್ದೇನೆ, ವಾದ ಮಾಡುವುದಕ್ಕೆ ಬಂದಿಲ್ಲ. I have clarified my stand. Please pass the Bill.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಚಿವರು, ಪ್ರತಿ ರಾಜ್ಯಗಳಿಗೂ ಮತ್ತು ಪ್ರತಿ ದೇಶಗಳಲ್ಲೂ ರೆವಿನ್ಯೂ ಲಾಸ್ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ, ಬೇರೆ ಬೇರೆ ದೇಶಗಳಲ್ಲಿ ತಮ್ಮ ನಾಗರಿಕರಿಗೆ ಏನೇನು ಸೌಲಭ್ಯಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ನಾವು ತಮ್ಮಷ್ಟು ಬುದ್ಧಿವಂತರಲ್ಲ. ತಮಗೆ ತಲ್ಲಾ ರೀತಿಯ ಕ್ಲಾರಿಫಿಕೇಷನ್ ಕೊಟ್ಟಿದ್ದೇನೆ ಎಂದು ನಾನು ಭಾವಿಸುತ್ತೇನೆ. ನೀವು ಏನಾದರೂ ಮಾತನಾಡಿಕೊಳ್ಳಿ I am not as much intelligent as you.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್**:- ಅಮೆರಿಕಾದಲ್ಲಿ ತಮ್ಮ ನಾಗರಿಕರಿಗೆ 2700 ಡಾಲರ್‌ಗಳನ್ನು ಕೊಟ್ಟಿದ್ದಾರೆ, ಯು.ಕೆ., ಯಲ್ಲಿ 2500 ಪೌಂಡ್‌ಗಳನ್ನು ಕೊಟ್ಟಿದ್ದಾರೆ, ಇದೇ ರೀತಿ ಸ್ಪೇನ್ ಹಾಗೂ ಇತರೇ ದೇಶಗಳಲ್ಲಿ ನಾಗರಿಕರಿಗೆ ಸೌಲಭ್ಯಗಳನ್ನು ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವರು ಏನು ಬೇಕಾದರೂ ಮಾತನಾಡಬಹುದೇ?

**ಶ್ರೀ ಪ್ರಕಾಶ್ ಕೆ.ರಾಥೋಡ್**:- ಮಾನ್ಯ ಸಭಾಪತಿಯವರೇ, ಏನು ಬೇಕಾದರೂ ಮಾತನಾಡುತ್ತಿಲ್ಲ. ಕೆಳಮನೆಯಲ್ಲಿ ಮಾನ್ಯ ಸಿದ್ಧರಾಮಯ್ಯನವರ ಪ್ರಶ್ನೆ what is the revenue loss for every country ಎಂದು ಕೇಳಿದಾಗ They have also told what is given by every country, which you have not given. The Government of Karnataka has not given. ಬೇರೆ ಬೇರೆ ದೇಶಗಳಲ್ಲಿ ತಮ್ಮ ನಾಗರಿಕರಿಗೆ ಅನೇಕ ಸೌಲಭ್ಯಗಳನ್ನು ಕೊಟ್ಟರು. ಆದರೆ ನಮ್ಮ ದೇಶದಲ್ಲಿ ಕೊಟ್ಟಿದ್ದಾರೆಯೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು)**:-ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದು, **"ಕೋಣಕ್ಕೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು"** ಎನ್ನುವ ಹಾಗಿದೆ. ಮಾನ್ಯ ಸಚಿವರು ಸಿ.ಎ.ಜಿ ವರದಿಯನ್ನು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದರಲ್ಲಿ ಕೇಂದ್ರ ಸರ್ಕಾರದ ಬಗ್ಗೆ, ಜಿ.ಎಸ್.ಟಿ ಜಾರಿಯಿಂದ ರಾಜ್ಯಗಳಿಗೆ ಆಗುವ ನಷ್ಟವನ್ನು ಭರಿಸಲು ಸಂಗ್ರಹಿಸಲಾಗಿದ್ದ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಹಾರ ಮೊತ್ತವನ್ನು ಬೇರೆಡೆ ಬಳಸಿದೆ" ಎಂದು ಹೇಳಿದೆ. ಜಿ.ಎಸ್.ಟಿ ಜಾರಿಯಿಂದ ರಾಜ್ಯಗಳಿಗೆ ಆಗುವ ನಷ್ಟವನ್ನು ಭರಿಸಲು ಸಂಗ್ರಹಿಸಿದ್ದ ಸೆಸ್ ಬಾಕಿ ರೂ. 47,272.00 ಕೋಟಿಗಳು. ಕೇಂದ್ರ ಸರ್ಕಾರ ಮಾಡಿರುವ ತಪ್ಪಿಗೆ ನಾವೇಕೆ ಹೊಣೆ ಹೊರಬೇಕು? ಜಿ.ಎಸ್.ಟಿ ತೆರಿಗೆಯನ್ನು ಪ್ರತಿಯೊಬ್ಬ ನಾಗರಿಕನು ಕಟ್ಟುತ್ತಾನೆ. ಆದಾಯ ತೆರಿಗೆಯನ್ನು ಕೇವಲ 8–9 ಪರ್ಸೆಂಟ್ ಜನ ಮಾತ್ರ ಕಟ್ಟುತ್ತಾರೆ, ಹಾಗಾಗಿ ಅವರಿಗೆ ಮಾತ್ರ ಎಫೆಕ್ಟ್ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇಡ್ಲಿ–ದೋಸೆ ತಿಂದವನು ಅಥವಾ ಬೆಂಕಿಪೊಟ್ಟಣ ತೆಗೆದುಕೊಂಡರೂ ಆತ ಜಿ.ಎಸ್.ಟಿ. ಕಟ್ಟಿರುತ್ತಾನೆ. ಈ ದೇಶದ ಪ್ರತಿಯೊಬ್ಬ ನಾಗರಿಕನ ಹಣ ಇದರಲ್ಲಿರುತ್ತದೆ. ಕೇಂದ್ರ ಸರ್ಕಾರ ಮಾಡಿರುವ ತಪ್ಪಿಗೆ ಎಲ್ಲಾ ಜನ ಅದರ ಹೊರೆಯನ್ನು ಏಕೆ ಹೊರಬೇಕು? ಈ ಸಾಲದ ಭಾರ ಶ್ರೀಮಂತರ ಮೇಲೂ ಬೀಳುತ್ತದೆ ಆದರೆ ಜನ ಸಾಮಾನ್ಯನ ಮೇಲೆ ಅದು ಭಾರವಾಗುತ್ತದೆ. ಈ ತಪ್ಪು ಸರಿ ಮಾಡಬೇಕು. ನೀವು ವಿತ್ತ ಮಂತ್ರಿಯ ಹೆಸರನ್ನು ಹೇಳಿದಿರಿ, act of God ಎಂದು ಹೇಳಿದ್ದಾರೆ. ನೆಹರು ಅವರ ಮೇಲೆ ಹೇಳಿದ್ದಾರೆ, 70 ವರ್ಷ ಎಂದು ಹೇಳಿದ್ದಾರೆ. ನಂತರ act of God ಎಂದು ಹೇಳಿದಿರಿ. ಅಂದರೆ ನಾವೇನು ಮಾಡುವುದಕ್ಕಾಗುವುದಿಲ್ಲ, ದೇವರು ಮಾಡಬೇಕು ಎಂದು ಹೇಳಿದಿರಿ. ಮುಂದೆ ಏನು ಹೇಳುತ್ತೀರೋ ಗೊತ್ತಿಲ್ಲ. ಜನ ಸಾಮಾನ್ಯರ ಮೇಲೆ ಹೊರೆ ಬರದ ಹಾಗೆ ನೋಡಿಕೊಳ್ಳಿ. ಇಲ್ಲಿ ಕೇಂದ್ರ ಸರ್ಕಾರದ ತಪ್ಪಿದೆ. ಆ ಭಾರವನ್ನು ನಮ್ಮ ಮೇಲೆ ಹಾಕಬೇಡಿ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಇಲ್ಲಿ adjustment of interest ನಲ್ಲಿ ವ್ಯತ್ಯಾಸವಾಗಿದೆ, we are due for Rs.25,000 Crore.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸಿ.ಎ.ಜಿ. ವರದಿಗಿಂತ ನಿಮಗೆ ಇನ್ನೇನು ಬೇಕು.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ನಮಗೆ ರೂ. 7 ಸಾವಿರ ಕೋಟಿ ಅಡ್ಜೆಸ್ಟ್ ಆಗಿದೆ. ನೀವು ಹೇಳಿದ್ದು ನಿಜ. Rs.11,000 and odd Crore, which was in due for us, ಆ ಮೊತ್ತಕ್ಕೆ ಅವರೇ ಜವಾಬ್ದಾರರಾಗಿರುತ್ತಾರೆ. It is in option-1. They have to clear off that

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

debt. ಅದು ನಮಗೆ ಸಂಬಂಧ ಇಲ್ಲ. ನಿಧಾನವಾಗಿ ಕಟ್ಟಿದರೆ ಅದಕ್ಕೆ ಬಡ್ಡಿ ಕಟ್ಟುತ್ತಾರೆ. We will put all our efforts to get back another sum of Rs.7,000 Crore.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಜಿ.ಎಸ್.ಟಿ.ಗೆ ಸಂಬಂಧಪಟ್ಟಂತೆ ಎಲ್ಲಾ ಮೊತ್ತ ಬಂದಿದೆ ಎಂದು ಮಾನ್ಯ ಸಚಿವರು ಹೇಳಿದರು. ಆದರೆ ಸಿ.ಎ.ಜಿ ವರದಿಯ ಪ್ರಸ್ತಾಪ ಮಾಡಿದ ತಕ್ಷಣ, ಬಂದಿಲ್ಲ ಎಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಎಲ್ಲಾ ಬಂದಿದೆ ಎಂದು ನಾನು ಯಾವಾಗ ಹೇಳಿದ್ದೆ?

**(ಗೊಂದಲ)**

**ಶ್ರೀ ಸುರೇಶ್ ಕುಮಾರ್:-** "ಬರುತ್ತದೆ", "ಬಂದಿದೆ" ಎನ್ನುವುದರ ಮಧ್ಯೆ ವ್ಯತ್ಯಾಸ ಇಲ್ಲವೇ?

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಇಂಟರೆಸ್ಟ್ ಕೊಡುತ್ತಾರೆ ... (ಗೊಂದಲ) ಎಂದು ಹೇಳಿದರು. ಆದರೆ ಅದು ಬಂದಿಲ್ಲ. ಸಿ.ಎ.ಜಿ. ವರದಿಯಲ್ಲಿರುವುದನ್ನು ನೋಡಿ ಬೇರೆ ರೀತಿ ಹೇಳುತ್ತಾರೆ. ಒಂದೊಂದು ಸಲ ಒಂದೊಂದು ರೀತಿಯಲ್ಲಿ ಮಾತನಾಡುತ್ತಾರೆ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪನ್ನು ಒಪ್ಪಿಕೊಂಡಿದ್ದಾರೆ. ಕಷ್ಟ ಇದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದರ ಹೊಡೆತ ಬೀಳುವುದು ಜನ ಸಾಮಾನ್ಯರ ಮೇಲೆ ಎನ್ನುವುದನ್ನು ಮರೆಯಬಾರದು. ಕೇಂದ್ರ ಸರ್ಕಾರ ದುಡ್ಡು ಕೊಡುತ್ತದೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ ಅವರು ಕೊಡುವವರೆಗೆ ಆಗುವಂತಹ ನಷ್ಟವನ್ನು ಯಾರು ಭರಿಸುತ್ತಾರೆ ಎನ್ನುವುದು ಮುಖ್ಯ. ಜನ ಈಗಾಗಲೇ ತತ್ತರಿಸಿ ಹೋಗಿದ್ದಾರೆ. ಜಿ.ಎಸ್.ಟಿ ಕೂಡ it is down by 23%. ಇದನ್ನು ಯೋಚನೆ ಮಾಡಬೇಕು.

**ಶ್ರೀ ಎಂ.ನಾರಾಯಯಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)-** ಮಾನ್ಯ ಸಚಿವರು ಜಿ.ಎಸ್.ಟಿ ಬಗ್ಗೆಯೇ ಮಾತನಾಡುತ್ತಿದ್ದಾರೆ. ಆ ಮೊತ್ತವನ್ನು ಕೊಡುವುದು ಕೇಂದ್ರ ಸರ್ಕಾರದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ತವ್ಯ, ಇವತ್ತಲ್ಲ ನಾಳೆ ಕೊಡುತ್ತದೆ, ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಬೇರೆ ಕಾರ್ಯಕ್ರಮಗಳಿಗೆ ಹಣ ಬರಬೇಕಿದೆ. ಅಡಿಯಲ್ಲಿ ದುಡ್ಡು ಕೊಡುವುದನ್ನು ಏಕೆ ಕಡಿಮೆ ಮಾಡಿದ್ದಾರೆ? ಈ ದೇಶದಲ್ಲಿ ಜಿ.ಎಸ್.ಟಿ ಸಂಗ್ರಹದಲ್ಲಿ ಕರ್ನಾಟಕ ರಾಜ್ಯ 4ನೇ ಸ್ಥಾನದಲ್ಲಿದೆ. ನಮ್ಮಿಂದ ಸಂಗ್ರಹಿಸುವಂತಹ ಜಿ.ಎಸ್.ಟಿ ಹಣವನ್ನು ಚುನಾವಣೆ ಬರುತ್ತಿರುವ ಬಿಹಾರ ರಾಜ್ಯಕ್ಕೆ ಜಾಸ್ತಿ ಕೊಡುವಂಥದ್ದು, ಉತ್ತರಪ್ರದೇಶ ಮತ್ತು ಗುಜರಾತ್ ರಾಜ್ಯಗಳಿಗೂ ಕೊಟ್ಟಿದ್ದಾರೆ. ಕರ್ನಾಟಕಕ್ಕೆ ಏಕೆ ಮಲತಾಯಿ ಧೋರಣೆ ತೋರಿಸುತ್ತಿದ್ದಾರೆ. ನೀವುಗಳು ಏಕೆ ಈ ಕುರಿತು ಕೇಂದ್ರ ಸರ್ಕಾರವನ್ನು ಅಪ್ರೋಚ್ ಮಾಡುತ್ತಿಲ್ಲ? ಸರ್ಕಾರ ಬೇಕಾದರೆ ಸರ್ವಪಕ್ಷಗಳ ನಿಯೋಗ ಕರೆದುಕೊಂಡು ಹೋದರೆ ನಾವು ಮಾತನಾಡುತ್ತೇವೆ. ಕರ್ನಾಟಕ ರಾಜ್ಯಕ್ಕೆ ಏನು ಬರಬೇಕೋ ಆ ಕುರಿತು ನಾವು ಮಾತನಾಡುತ್ತೇವೆ.

**(ಮುಂದು)**

**(903) 01.30 26.09.2020 ಎಸ್‌ವಿ-ಜಿಆರ್**

**ಶ್ರೀ ಆರ್.ಬಿ.ತಿಮ್ಮಾಪುರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ಶೇ.3 ರಿಂದ ಶೇ.5ಕ್ಕೆ ಹೆಚ್ಚಳ ಮಾಡಿ ಸಾಲ ಮಾಡಲು ನಮಗೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇಲ್ಲಿ ಕೇಂದ್ರ ಸರ್ಕಾರದ ಮೇಲೆ ನಮ್ಮ ಆಪಾದನೆ ಏನೆಂದರೆ ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದ ಮೇಲೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಮಾನ್ಯ ಸಚಿವರು ಇದರ ಕುರಿತು ಸ್ಪಷ್ಟೀಕರಣ ನೀಡಬೇಕು. ಎರಡನೆಯದಾಗಿ ನಮ್ಮ ರಾಜ್ಯಕ್ಕೆ ಇಂತಹ ತೊಂದರೆ ಎದುರಾಗಿದೆ. ಕೇಂದ್ರ ಸರ್ಕಾರದವರು ಏನು ಸಹಾಯ ಮಾಡಿದ್ದಾರೆ? ಎಷ್ಟು ಹಣ ಕೊಟ್ಟಿದ್ದಾರೆ? ಕೇಂದ್ರ ಸರ್ಕಾರದಲ್ಲಿ ತೊಂದರೆ ಬಂದಾಗ ಖರ್ಚು ಮಾಡಲಿಕ್ಕಾಗಿ ಆಪತ್ಕಾಲೀನ ನಿಧಿಯೆಂದು ಪ್ರತಿವರ್ಷವೂ ಹಣವನ್ನು ತೆಗೆದಿರಿಸಲಾಗುತ್ತದೆ. ಅದರಲ್ಲಿ ಏನಿದೆ? ರಾಜ್ಯಸರ್ಕಾರದವರು ಇದನ್ನು ನಿಭಾಯಿಸಲಿಕ್ಕೆ ಏನೇನು ಕ್ರಮವನ್ನು ಕೈಗೊಳ್ಳಲಾಗಿದೆ? ಯಾವ ಯಾವ ಅನವಶ್ಯಕ ಖರ್ಚುಗಳಿಗೆ ಕಡಿವಾಣವನ್ನು ಹಾಕಲಾಗಿದೆ ಎಂಬುದನ್ನು ಹೇಳಬೇಕು.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಮ್ಮ ಪರಿಸ್ಥಿತಿ ಸಾಲ ಮಾಡಿಯಾದರೂ ಹೋಳಿಗೆ ತಿನ್ನು ಎಂಬಂತಾಗಿದೆ. ಆದರೆ ಈ ಸಾಲ ಮಾಡುವುದರಿಂದ ಸರ್ಕಾರ ಆಯವ್ಯಯದಲ್ಲಿ ಮಂಡಿಸಲಾದ ಖರ್ಚುಗಳನ್ನು ಮಾಡುತ್ತದೆಯೇ? ಆರ್ಥಿಕ ಇಲಾಖೆಯು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ಕೆಲಸವನ್ನು ಕೇಳಿದರೂ ಕೋವಿಡ್ ಎಂದು ಎಲ್ಲವನ್ನೂ ನಿಲ್ಲಿಸಿದೆ. ಯಾವ ಕೆಲಸಗಳೂ ನಡೆಯುತ್ತಿಲ್ಲ. Atleast ಈಗ ನೀವು ಸಾಲಕ್ಕೆ permission ತೆಗೆದುಕೊಂಡರೆ ಅನುಷ್ಠಾನ ಮಾಡಬೇಕೆಂದುಕೊಂಡಿರುವ ಕೆಲಸಗಳಿಗೆ ಚಾಲನೆ ದೊರೆಯುತ್ತದೆಯೇ? ಈ ಅಂಶಗಳನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ತಮ್ಮಲ್ಲಿ ಒಂದು ವಿನಂತಿ. ಇಂತಹ ಒಂದು ಪ್ರಮುಖವಾದ ವಿಧೇಯಕದ ಬಗ್ಗೆ ವಿರೋಧಪಕ್ಷದ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶವನ್ನು ನೀಡದೆ ಕಾನೂನು ಸಚಿವರು ಇಷ್ಟೊಂದು......

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಮರಿತಿಬ್ಬೇಗೌಡರೇ, ಎಲ್ಲರೂ ಮಾತನಾಡುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಸಾಲ ಮಾಡುವವನು ಅಪ್ಪ; ತೀರಿಸುವವರು ಮಕ್ಕಳು.

**ಡಾ: ವೈ.ಎ.ನಾರಾಯಣಸ್ವಾಮಿ:–** ಯಾವಾಗಲೂ ಇದು ಹಾಗೆಯೇ. ನೀವಿದ್ದಾಗಲೂ ಹಾಗೆ. ಈಗಲೂ ಹಾಗೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಹರಿಪ್ರಸಾದ್ ಅವರು ಹೇಳಿದಂತೆ ಪ್ರತಿಯೊಬ್ಬ ಬಡವನೂ, ಜನ ಸಾಮಾನ್ಯನೂ ತೆರಿಗೆಯನ್ನು ಪಾವತಿಸಬೇಕಿದೆ. ಇಂದು ಕೇಂದ್ರ ಸರ್ಕಾರ ಈ ಫೆಡರಲ್ ವ್ಯವಸ್ಥೆಯಲ್ಲಿ.....

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಪುನಃ ಅಲ್ಲಿಗೆ ಯಾಕೆ ಹೋಗುತ್ತೀರಿ?

**ಶ್ರೀ ಮರಿತಿಬ್ಬೇಗೌಡ:–** ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ನಮ್ಮನ್ನು ಮಲತಾಯಿ ಧೋರಣೆಯ ರೀತಿಯಲ್ಲಿ ನೋಡುತ್ತಿದೆ. ಇದು ನಮ್ಮೆಲ್ಲರ ಕಳಕಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಮರಿತಿಬ್ಬೇಗೌಡರೇ, ನೀವು ರಾಜಕೀಯವಾಗಿ ಆ ಮಾತನ್ನು ಆಡಲೇ ಬೇಕೆನ್ನುವುದಾದರೆ ಮಾತನಾಡಿ. I am moving the Finance Bill. Political debate ಆಗಬೇಕೆಂದರೆ ಮಾಡಿ. ಯಾರು ಬೇಡವೆಂದವರು? ಮಾತು ಮಾತಿಗೂ ಮಲತಾಯಿ ಧೋರಣೆ ಎಂದು ಹೇಳಿದರೆ ಹೇಗೆ? ಏನು ಮಲತಾಯಿ ಧೋರಣೆ? Be on record.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ನೀವು ಆಮೇಲೆ ಮಾತನಾಡಿ. ನಾನು ಎರಡು ಬಾರಿ ಎದ್ದೆ. ಇದು political debate ಅಲ್ಲ. ಸರ್ಕಾರ ಮಾಡುತ್ತಿರುವ ಸಾಲ ಬಡಜನರ ಮೇಲೆ ಹೊರೆಯಾಗುತ್ತಿದೆ. ಅದರ ಬಗ್ಗೆ ಚರ್ಚೆಯಾಗಲಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮೂರು ಲಕ್ಷ ಕೋಟಿಗಳ ಸಾಲವನ್ನು ನಿಮ್ಮ ಅಪ್ಪಂದಿರು ಮಾಡಿ ಬಿಟ್ಟು ಹೋಗಿದ್ದಿರಲ್ಲ, ಅದನ್ನು ಯಾರು ತೀರಿಸುತ್ತಾರೆ? ಅಂದು ಹೀಗೆಯೇ ಕೇಳಿದಿರಾ? ಅಂದು ನಿಮಗೆ ಯಾರಾದರೂ ಕೇಳಿದ್ರಾ ಹೀಗೆ ನಿಂತುಕೊಂಡು? ಮೊದಲೇ ಮೂರು ಲಕ್ಷ ಕೋಟಿ ಹೊಣೆಗಾರಿಕೆ ಇತ್ತು. ಆಗಲೂ ಹೀಗೆ ಕೇಳಿದ್ರಾ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ನೀವು ಇಂದು ಈ ಜಾಗದಲ್ಲಿದ್ದಿದ್ದರೆ ಈ ವಿಧೇಯಕವನ್ನು ಪಾಸ್ ಮಾಡಲಿಕ್ಕೆ ಬಿಡುತ್ತಿರಲಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ.

ಇಂದು ಇಡೀ ಪ್ರಪಂಚಕ್ಕೆ ಸಂಕಷ್ಟ ಬಂದಿದೆ ಎಂಬುದನ್ನು ನಾವು ಒಪ್ಪುತ್ತೇವೆ. ಹಾಗೆಂದು ಹೇಳಿ ಕೇಂದ್ರ ಸರ್ಕಾರ ಒಂದೊಂದು ರಾಜ್ಯಕ್ಕೆ ಒಂದೊಂದು ತರಹ ತೆರಿಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದು, ಕರ್ನಾಟಕ ರಾಜ್ಯಕ್ಕೆ ಮಲತಾಯಿ ಧೋರಣೆ ಮಾಡುತ್ತಿದ್ದೆ ಎನ್ನುವುದು ನಮ್ಮ ಚರ್ಚೆ. ಈಗಾಗಲೇ ಮಾನ್ಯ ತಿಮ್ಮಾಪುರ ಅವರು ಹೇಳಿದರು. ಈಗಾಗಲೇ ಈ ಸಂಕಷ್ಟದ ಸ್ಥಿತಿ ಬಂದು ಆರೇಳು ತಿಂಗಳಾಯಿತು. ಆರ್ಥಿಕ ಇಲಾಖೆಯಿಂದ ಯಾವುದಕ್ಕೂ ಹಣ ಬಿಡುಗಡೆಯಾಗದೆ ಪೂರ್ಣ ನಿರ್ಬಂಧವನ್ನು ವಿಧಿಸಲಾಗಿದೆ. ಎಲ್ಲಾ ರಾಜ್ಯಗಳಲ್ಲಿಯೂ ತೆರಿಗೆ ಕಡಿಮೆಯಾಗುತ್ತಿದೆ, ಸರಿಯಾಗಿ ತೆರಿಗೆ ಬರುತ್ತಿಲ್ಲ ಎನ್ನುವುದು ಸರಿಯಷ್ಟೆ. ಫೆಡರಲ್ ಸಿಸ್ಟಂನಲ್ಲಿ ನಮ್ಮ ತೆರಿಗೆ ಹಣವನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡು ಅವರು ಆ ಹಣವನ್ನು ಪುನಃ ವಾಪಸ್ ಎಲ್ಲಾ ರಾಜ್ಯಗಳಿಗೂ ಹಂಚಿಕೆ ಮಾಡುತ್ತಾರೆ. ಕಳೆದ ವರ್ಷದ್ದೇ ರೂ.11,000 ಕೋಟಿ ತೆರಿಗೆ ನಮಗೆ ಬರಬೇಕಾಗಿದೆ. ಈ ವರ್ಷದ್ದು ಬಿಟ್ಟುಬಿಡೋಣ. ಮಾತನಾಡುವುದು ಬೇಡ. ಏನೇನೋ ಹೇಳಿದ್ದೀರಿ. ಕೋವಿಡ್‌ಗೂ ಮೊದಲು ರೂ.11,000 ಕೋಟಿ ತೆರಿಗೆ ಈ ರಾಜ್ಯಕ್ಕೆ ಬರಬೇಕಿತ್ತು. ಅದರ ಬಗ್ಗೆ ಇಂದಿನವರೆವಿಗೂ ಕೇಂದ್ರ ಸರ್ಕಾರ ಮಾತನಾಡುತ್ತಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, I am on record. ಮಾರ್ಚ್‌ವರೆಗೆ ನಮಗೆ ಬರಬೇಕಾದ್ದು ಬಂದಿತ್ತು. ಹೋದ ವರ್ಷದ್ದು ಯಾವುದೂ ಇರಲಿಲ್ಲ. ಮಾರ್ಚ್‌ವರೆವಿಗೆ ನಮಗೆ Cess compensation ಬಂದಿತ್ತು. ಈ ವರ್ಷದ ರೂ. 25,000 ಕೋಟಿಗಳಲ್ಲಿ ಒಂದು instalment ಅಂದರೆ ರೂ.7000 ಕೋಟಿ ಬಂದಿದೆ. ಇನ್ನು ಸುಮಾರು ರೂ.11,000 ಕೋಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರಬೇಕಾಗಿದ್ದು, ಅದು ಬಂದಿರುವುದಿಲ್ಲ. ಆ ಹಣದ ಮೇಲೆ ಅಸಲು ಮತ್ತು ಬಡ್ಡಿ ಎರಡೂ ಅವರ ಜವಾಬ್ದಾರಿ ಎಂದು option-1 ನಲ್ಲಿ ಮೊದಲೇ ನಾನು ಹೇಳಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಹಾಗಾದರೆ ಮಾನ್ಯ ಸದಸ್ಯರಾದ ಮಾನೆ ಶ್ರೀನಿವಾಸ ಅವರಿಗೆ ಯಾವುದೇ ತೆರಿಗೆ ಕೇಂದ್ರ ಸರ್ಕಾರದಿಂದ ಬಾಕಿ ಇರುವುದಿಲ್ಲ ಎಂದು ಕೊಟ್ಟಿದ್ದಾರೆ. ಈಗ ಅಧಿಕೃತವಾಗಿ ನಿಮ್ಮ ಇಲಾಖಾ ಅಧಿಕಾರಿಗಳು ಕೊಟ್ಟಿರುವುದನ್ನು ನಂಬೋಣವೇ ಅಥವಾ ನಿಮ್ಮ ಹೇಳಿಕೆಯನ್ನು ನಂಬೋಣವೇ?

**(ಈ ಹಂತದಲ್ಲಿ ಮಾನ್ಯ ಸಭಾನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ತಮ್ಮ ಸ್ಥಾನದಿಂದ ಎದ್ದು ಇತರ ಮಾನ್ಯ ಸದಸ್ಯರೊಂದಿಗೆ ಮಾತನಾಡುತ್ತಿದ್ದರು.)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾನಾಯಕರೇ, ಎರಡು ನಿಮಿಷ ನನ್ನ ಮಾತನ್ನು ಕೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಚರ್ಚೆಯನ್ನು ಮುಕ್ತಾಯ ಮಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಚರ್ಚೆಯನ್ನುಮುಕ್ತಾಯ ಮಾಡಿ ಎಂದರೆ ಏನರ್ಥ? ಇದು ಬಹಳ ಉದ್ಧಟತನವಾಯಿತು. ಮತ್ತೆ, ಮುಕ್ತಾಯ ಮಾಡಿ ಎಂದರೆ ಏನು?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಯಾರದ್ದು ಉದ್ಧಟತನ? ನಮ್ಮದೋ ನಿಮ್ಮದೋ? ಮಾತನಾಡಿದ್ದೇ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಹಿಂದೆ ನೀವು ಏಕೆ ಸಾಲ ಮಾಡಿದ್ದಿರಿ?

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಚಿವರೇ, ಈ ಹಿಂದೆ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಸಮ್ಮಿಶ್ರ ಸರ್ಕಾರ ಇದ್ದಾಗ ನೀವು ವಿರೋಧಪಕ್ಷದಲ್ಲಿದ್ದಿರಿ. ಆಗ ನೀವು ಮಾತನಾಡಿದ್ದನ್ನು ಈಗ ಹೇಳುತ್ತೇನೆ. ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರವಿದ್ದಾಗ ವಿಧಾನ ಸಭೆಯಲ್ಲಿ ನಿಮ್ಮ ಮುಖ್ಯಮಂತ್ರಿಗಳಾದಿಯಾಗಿ ಎಲ್ಲರೂ ರೈತರ ಸಾಲ ಮನ್ನಾ ಮಾಡಬೇಕೆಂದು ಒತ್ತಾಯ ಮಾಡಿದ್ದಿರಿ. ಅದರಂತೆ ರೈತರ ಸಾಲ ಮನ್ನಾ ಮಾಡಲಾಯಿತು. ಪದೇ ಪದೇ ನಾನು ಹೇಳುತ್ತೇನೆ. ಅಂದು ವಿಧಾನಸಭೆಯಲ್ಲಿ ನಿಮ್ಮ ಮಾತನ್ನು ಕೇಳಬೇಕಾದಂತಹ ಪರಿಸ್ಥಿತಿಯನ್ನು ನೀವು ನಿರ್ಮಾಣ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದಿರಿ. ನಂತರ ಇಷ್ಟು ಕೋಟಿ ರೈತರ ಸಾಲ ಮನ್ನಾ ಮಾಡಿದ ಜವಾಬ್ದಾರಿ ಎಲ್ಲರ ತಲೆಯ ಮೇಲೆ ಬಂದಿತು. ಅಂದು ನಾನು ಅಲ್ಲಿ ಇದ್ದೆನು. ಅಂದು ನೀವು ವಿಧಾನಸಭೆಯಲ್ಲಿ ಉಸಿರು ಬಿಡುವುದಕ್ಕೆ ಬಿಡಲಿಲ್ಲ. ಮಾನ್ಯ ಕುಮಾರಸ್ವಾಮಿಯವರಿಗೆ "ಮಾತು ಕೊಟ್ಟಿದ್ದೀರಿ, ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಅದರಂತೆ ಮಾಡಬೇಕು" ಎಂದು ಹೇಳಿದಿರಿ. ಇನ್ನೊಬ್ಬರನ್ನೂ ನಾವು ಕೇಳುತ್ತೇವೆಂದು ಹೇಳಿದೆವು. ಅದಕ್ಕೆ ನೀವು ಬಿಡಲಿಲ್ಲ. ನಿಮ್ಮ ಮುಖ್ಯಮಂತ್ರಿಯವರೂ ಸೇರಿ ಎಲ್ಲರೂ ಈ ರೀತಿ ಮಾತನಾಡಿದ್ದಿರಿ. ಅದಕ್ಕಾಗಿ ರೈತರ ಸಾಲ ಮನ್ನಾ ಮಾಡಲು ಒಪ್ಪಿಕೊಂಡು ಸರ್ಕಾರ ಇಷ್ಟು ದೊಡ್ಡ ಹೊರೆಯನ್ನು ಹೊರಬೇಕಾದಂತಹ ಪರಿಸ್ಥಿತಿ ಬಂದಿತು. ಅದಕ್ಕಾಗಿ ಸಾಲ ಮಾಡಲಾಯಿತು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಹೊರಟ್ಟಿಯವರೇ, ಅದೇ ರೀತಿ ಒಂದು distress ಹೊರೆ. ನೀವು ರೈತರ ಸಾಲ ತೀರಿಸಲು ಹೊತ್ತಿದ್ದು. ನಾವು ಈಗಿರುವ ಪರಿಸ್ಥಿತಿಗಾಗಿ ಸಾಲ ಮಾಡಬೇಕಾಗಿದೆ. ಕೋವಿಡ್ ಬರುತ್ತದೆ ಎಂದು ಯಾರಿಗಾದರೂ ತಿಳಿದಿತ್ತಾ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ದೇಶದ ಆರ್ಥಿಕ ಪರಿಸ್ಥಿತಿ ಈ ರೀತಿ ಕುಸಿಯಲು ಯಾರು ಕಾರಣ? ಅಮೆರಿಕಾದ ಆರ್ಥಿಕ ಪರಿಸ್ಥಿತಿ ಹಾಳಾಗುವುದಕ್ಕೆ ಯಾರು ಕಾರಣ? ಇಡೀ ವಿಶ್ವದ ಆರ್ಥಿಕ ಪರಿಸ್ಥಿತಿ ಕುಸಿಯಲು ಕೋವಿಡ್ ಕಾರಣ. ವಿಶ್ವದ ಯಾವುದೇ ದೇಶಗಳು ಇದಕ್ಕೆ ಹೊರತಾಗಿರುವುದಿಲ್ಲ. ದಯಮಾಡಿ ಇದನ್ನು ಎಲ್ಲಾ ಮಾನ್ಯ ಸದಸ್ಯರು ಅರಿತುಕೊಳ್ಳಬೇಕಾದ ಅವಶ್ಯಕತೆ ಇದೆ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಲ್ಲದಕ್ಕೂ ಸಮರ್ಥವಾಗಿ ಉತ್ತರವನ್ನು ಹೇಳಿದ್ದಾರೆ. ಮಂತ್ರಿಗಳು ಎಲ್ಲ ಸ್ಪಷ್ಟೀಕರಣ ನೀಡಿದ್ದಾರೆ. ಆದರೂ ಪದೇ ಪದೇ ಅದೇ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ದಯವಿಟ್ಟು ಬಿಲ್ ಪಾಸ್ ಮಾಡಿ.

**ಶ್ರೀ ಎಂ.ಟಿ.ಬಿ.ನಾಗರಾಜ್:-** ಮಾನ್ಯ ಸಭಾಪತಿಯವರೇ, ಚುನಾವಣೆ ಪ್ರಣಾಳಿಕೆಯಲ್ಲಿ ಮಾನ್ಯ ಕುಮಾರ ಸ್ವಾಮಿಯವರು ಈ ರಾಜ್ಯದ ಜನರಿಗೆ ಭರವಸೆಯನ್ನು ಕೊಟ್ಟಿದ್ದರು. ಆ ಭರವಸೆಯನ್ನು ಈಡೇರಿಸಿದ್ದಾರೆ. ಹಿಂದಿನ ಎರಡೂ ಸರ್ಕಾರಗಳು ಸಾಲ ಮಾಡಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾನಾಯಕರೇ, ರೈತರ ಸಾಲ ಮನ್ನಾ ಮಾಡುವುದನ್ನು ನೀವು ಒಪ್ಪುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಕುಮಾರಸ್ವಾಮಿಯವರು ನಾವು ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದರು. ಅದಕ್ಕೆ ನಾವು ಸಾಲ ಮನ್ನಾ ಮಾಡಿ ಎಂದು ಕೇಳಿದ್ದೆವು. ಅದರಲ್ಲಿ ತಪ್ಪೇನಿದೆ?

**(904) 1.40 26.09.2020 KG MD**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಈಗ ವಿಧೇಯಕಗಳನ್ನು ತೆಗೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬಿ.ಜೆ.ಪಿ., ಸರ್ಕಾರ ಇದೆ. ಇಂತಹ ಪರಿಸ್ಥಿತಿಯಲ್ಲೂ ಸಹ, ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಕೊಡಬೇಕಾದಂತಹ ತೆರಿಗೆ ಹಣವನ್ನು ಸರಿಯಾದ ಪ್ರಮಾಣದಲ್ಲಿ ಕೊಡದೇ, ಒಂದೊಂದು ರಾಜ್ಯಕ್ಕೆ ಒಂದೊಂದು ರೀತಿಯಲ್ಲಿ ಅಂದರೆ, ಬಿಹಾರಕ್ಕೆ, ಗುಜರಾತ್, ಉತ್ತರ ಪ್ರದೇಶಕ್ಕೆ ಕೊಡುತ್ತಾರೆ. ಆದರೆ, ನಮ್ಮ ರಾಜ್ಯಕ್ಕೆ ಕೊಡುತ್ತಿಲ್ಲ. ಒಂದು ವೇಳೆ ಏನಾದರೂ, ರಾಜ್ಯದಲ್ಲಿ ಒಂದು ಪಕ್ಷ ಮತ್ತು ಕೇಂದ್ರದಲ್ಲಿ ಇನ್ನೊಂದು ಪಕ್ಷ ಅಧಿಕಾರದಲ್ಲಿ ಇದ್ದಿದರೆ, ಈ ಸದನದಲ್ಲಿ ಎಷ್ಟು ಗಲಾಟೆಯಾಗುತ್ತಿತ್ತು. ನಾವು ಮಾಡುವಂತಹ ಸಾಲದ ಹೊರೆಯನ್ನು ಬಡವರು ತೀರಿಸಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ನಾವೆಲ್ಲರೂ ಮತ್ತು ವಿರೋಧ ಪಕ್ಷದ ನಾಯಕರನ್ನು ಕರೆದುಕೊಂಡು ಕೇಂದ್ರಕ್ಕೆ ಹೋಗಲಿ. ನಮ್ಮ ರಾಜ್ಯದಲ್ಲಿ 26 ಸಂಸದರು ಇದ್ದಾರೆ. ಎಲ್ಲರೂ ಒಟ್ಟಾಗಿ ಮಾನ್ಯ ಪ್ರಧಾನ ಮಂತ್ರಿಗಳ ಬಳಿ ಹೋಗಿ ಬಾಕಿ ಉಳಿಸಿಕೊಂಡಿರುವಂತಹ ನಮ್ಮ ರಾಜ್ಯದ ಪಾಲನ್ನು ಕೊಡಿ ಎಂದು ಕೇಳೋಣ. ಅವರು ನಮಗೆ ಬೇರೆ ಏನು ಕೊಡುವುದು ಬೇಡ. ನಾವು ಅದನ್ನು ತರುವಂತಹ ಪ್ರಯತ್ನಗಳನು ಮಾಡೋಣ. ಈಗ ಕೋವೀಡ್ ಪರಿಸ್ಥಿತಿಯನ್ನೇ ನೆಪ ಮಾಡಿಕೊಂಡು,.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹೋಗೋಣ, ಹೋಗೋಣ.

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಹಾಗಾದರೆ, ಇಡೀ ಪ್ರಪಂಚ ಕೋವಿಡ್ ಪರಿಸ್ಥಿತಿಯನ್ನು ನೆಪ ಮಾಡಿದೆಯೇ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಸಾಲ ಸಿಗುತ್ತದೆ ಎಂದು ಅಧಿಕವಾದಂತಹ ಸಾಲವನ್ನು ಮಾಡುವುದಾದರೆ, ಆ ಸಾಲವನ್ನು ಬಡವರು ತೆರಿಗೆ ಕೊಟ್ಟು ತೀರಿಸಬೇಕಾಗುತ್ತದೆ. ಮುಂದೆ ಯಾವುದೇ ಸರ್ಕಾರಗಳು ಬರಲಿ. ಅದರ ಬಗ್ಗೆ ಚಿಂತೆ ಬೇಡ. ದಯವಿಟ್ಟು ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಬರುವಂತಹ ಬಾಕಿಯನ್ನು ತರುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಂದ ಆಗಲಿಲ್ಲವೆಂದರೆ, ಅವರು ಸರ್ವಪಕ್ಷದ ನಿಯೋಗವನ್ನು ತೆಗೆದುಕೊಂಡು ಹೋಗಲಿ. ನಾವೆಲ್ಲರೂ ಬರುತ್ತೇವೆ. ಸಂಸದರನ್ನು ಕರೆದುಕೊಳ್ಳಲಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರು ಮಾತನಾಡಿ ಮುಗಿಸುತ್ತಾರೆ. ದಯವಿಟ್ಟು ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಇರುವಂತಹ ಪರಿಸ್ಥಿತಿಯಲ್ಲಿ ಸ್ವಲ್ಪ ಸಾಲ ಮಾಡಿರಬಹುದು. ಅವರ ಜಂಟಿ ಸರ್ಕಾರ ಇದ್ದಾಗ, ಅವರು ಏನು ಮಾಡಿದರು? ಇದು ಯಾವ ನ್ಯಾಯ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಭಾನಾಯಕರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಜನರ ಹಿತದೃಷ್ಟಿಯಿಂದ ಎಲ್ಲಾ ಪಕ್ಷಗಳು ಹೋಗೋಣವೆಂದು ಹೇಳಿದರೆ ಅವರಿಗೆ ಧೈರ್ಯವಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರಿಗೆ ಗೌರವ ಇಲ್ಲವೇ, ಮಾನ್ಯ ಸಭಾನಾಯಕರು ಮಾತನಾಡುವಂತಹ ವೇಳೆ ಕುಳಿತುಕೊಳ್ಳಿ ಎಂದು ಹೇಳಿದರೆ ಏನು ಅರ್ಥ? ಮಾನ್ಯ ಸಭಾನಾಯಕರ ಬಗ್ಗೆ ಮಾತನಾಡುವಂತಹ ರೀತಿಯೇ ಇದು? ಈ ಸದನದಲ್ಲಿ ಸಭಾನಾಯಕರಿಗೆ ಗೌರವ ಇದೆ, ವಿರೋಧ ಪಕ್ಷದ ನಾಯಕರಿಗೆ ಗೌರವ ಇದೆ. ದಯಮಾಡಿ, ಸಭಾನಾಯಕರಿಗೆ ಅವರು ಕ್ಷಮೆ ಕೇಳಬೇಕು.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ನಾವು ಅವರಿಗೆ ಗೌರವ ಕೊಟ್ಟಿಲ್ಲವೇ?

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಎಲ್ಲರೂ ಆ ರೀತಿ ಮಾತನಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸಭಾಪತಿಯವರಿಗೆ, ಸಭಾನಾಯಕರಿಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಗೌರವ ಇದೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅವರಿಬ್ಬರನ್ನು ಬಿಟ್ಟು ಬೇರೆ ಯಾರಿಗೂ ಗೌರವ ಇಲ್ಲವೇ;

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾನಾಯಕರು ಎದ್ದು ನಿಂತು ಮಾತನಾಡುವಾಗ ಒಬ್ಬ ಸದಸ್ಯರು ಆ ರೀತಿ ಮಾತನಾಡುವುದು ಸಮಂಜಸವಲ್ಲ. ಅದು ತಪ್ಪು. ದಯವಿಟ್ಟು, ಆ ರೀತಿ ಮಾತನಾಡಬಾರದು. ದಯವಿಟ್ಟು, ಇದರ ಮೇಲೆ ruling ಕೊಡಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಎಷ್ಟೇ ಮಸ್ಕಾ ಹೊಡೆದರೂ ಸಹ ಅವರನ್ನು ಆ ಪಕ್ಷದಲ್ಲಿ ಏನು ಮಾಡುವುದಿಲ್ಲ. ಇದನ್ನು ಅವರು ಅರ್ಥ ಮಾಡಿಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಮರಿತಿಬ್ಬೇಗೌಡರ ಪ್ರಶ್ನೆ ಅಲ್ಲ. ಅವರನ್ನು ಅವರ ಪಕ್ಷದಲ್ಲಿಯೂ ಏನು ಮಾಡಲಿಲ್ಲ. ಅದು ನನಗೆ ಗೊತ್ತಿದೆ. ನಾನು ಅವರ ಬಗ್ಗೆ ಮಾತನಾಡಲಿಲ್ಲ. ನಾನು ತಮ್ಮ ಬಳಿ ಮಾತನಾಡುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಕುಳಿತುಕೊಳ್ಳಬೇಕು.

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಯಾರು ನನ್ನನ್ನು ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ? Who are you? You are also a member like me. You can talk to the Chairman, not to me. You can speak to the Chairman; you address to the Chairman. You don't address to me and mind your language.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ :–** ಮಾನ್ಯ ಸಭಾಪತಿಯವರೇ, ನಾನು 20 ವರ್ಷಗಳಿಂದ ಸದನದಲ್ಲಿನ ಎಲ್ಲಾ ಸನ್ನಿವೇಶಗಳನ್ನು ನೋಡಿಕೊಂಡು ಬಂದಿದ್ದೇನೆ. ನಾನು ಏನು ಆಗುವುದು ಬೇಡ. ನಾನೀಗ ಇರುವುದಲ್ಲಿಯೇ ಸಂತೋಷವಾಗಿ ಇರುತ್ತೇನೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಮರಿತಿಬ್ಬೇಗೌಡರವರನ್ನು 20 ವರ್ಷಗಳಿಂದ ನೋಡುತ್ತಿದ್ದೇನೆ. ಅವರು ಏನು ಏನು ಆಗಿಲ್ಲ. University ಬಿಟ್ಟರೆ, ಅವರು ಇಲ್ಲಿಗೆ ಬಂದಿದ್ದಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಮಗೆ ಸಾಕು. ಆದರೆ, ಮಾನ್ಯ ನಾರಾಯಣಸ್ವಾಮಿಯವರಿಗೆ ಸಾಕಾಗಿಲ್ಲ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನಗೆ ಮರಿತಿಬ್ಬೇಗೌಡರ ಬಗ್ಗೆ ಗೌರವ ಇದೆ. ನಾನು ಅವರ ಬಗ್ಗೆ ಮಾತನಾಡಲಿಲ್ಲ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ನಾರಾಯಣಸ್ವಾಮಿಯವರಿಗೆ ಅವರ ಪಕ್ಷದಲ್ಲಿ ಏನಾದರೂ ಕೊಡಿ ಎಂದು ಹೇಳಿದ್ದೇವೆ. ಅದರಲ್ಲಿ ತಪ್ಪು ಏನಿದೆ? ಅವರಿಗೆ ಏನಾದರೂ ಕೊಡಲಿ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮೂರು ಲಕ್ಷದ liability, Fiscal Responsibility Act ನಲ್ಲಿ 3 percent ಇದೆ ಎಂದು describe ಮಾಡಿಬಿಟ್ಟು, distress ನಲ್ಲಿರುವಾಗ ಈ ರೀತಿ ಹಠ ಮಾಡಿದರೆ ಹೇಗೆ, what warranted for 3 lakh and odd liability? ಅವಕಾಶವಿದೆ ಎಂದು ಮಾಡಿಬಿಡುವುದು, ಆ ಮೂರು ಲಕ್ಷ ಸೇರುವಷ್ಟರಲ್ಲಿ ನಾವು ಇಷ್ಟಕ್ಕೆ ಬಂದಿದ್ದೇವೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಮಾತನಾಡಿ. ಇಲ್ಲವೆಂದರೆ, ಈ ವಿಷಯವನ್ನು ಮುಗಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗ ಹೋಗಿ ನಮಗೆ ಬರಬೇಕಾದ ಹಣಕ್ಕೆ ಒತ್ತಾಯ ಮಾಡೋಣ. ಮಾನ್ಯ ಸಚಿವರು ಅವರು ಯಾವತ್ತು ಕೊಟ್ಟರೂ ಬಡ್ಡಿ ಕೊಡುತ್ತಾರೆಂದು ಹೇಳಿದರು. ಈಗ ಜೀವಗಳನ್ನು ಉಳಿಸಿಕೊಳ್ಳುವುದೇ ಬಹಳ ಕಷ್ಟವಾಗಿದೆ. ಅವರು ಯಾವಾಗ ಕೊಟ್ಟರೂ ಸಹ ಬಡ್ಡಿ ಕೊಡುವುದಿರಲಿ, ಈಗ ಜೀವಗಳನ್ನು ಉಳಿಸಿಕೊಳ್ಳಬೇಕಾಗಿದೆ. ನಮಗೆ ಅವರ ಬಡ್ಡಿ ಬೇಡ. ದಯವಿಟ್ಟು ನಮ್ಮ ರಾಜ್ಯಕ್ಕೆ ಬರಬೇಕಾದ ಬಾಕಿಯನ್ನು ತರುವುದಕ್ಕೆ ಒಂದು ಪ್ರಯತ್ನವನ್ನು ಮಾಡಬೇಕು. ಸಾಲ ಮಾಡುವುದರಲ್ಲಿ ಒಂದು ಇತಿಮಿತಿ ಇರಬೇಕು.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ. ಎಲ್ಲಾ ವಿಷಯಗಳನ್ನು ಬೇರೆ ಬೇರೆ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಮ್ಮ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಬಗ್ಗೆ ನಾನು ಎರಡು ಮಾತುಗಳನ್ನು ಮಾತನಾಡುತ್ತೇನೆ. ಎಲ್ಲರೂ ಲಕ್ಷ, ಕೋಟಿ ರೂಪಾಯಿ, ಸಾವಿರ ಕೋಟಿ ರೂಪಾಯಿಗಳ ಬಗ್ಗೆ ಮಾತನಾಡಿದರು. ಆದರೆ, ನಾನು ಲಕ್ಷ್ಯಾಂತರ ಕೋಟಿ ರೂಪಾಯಿಗಳ ಬಗ್ಗೆ ಮತ್ತು ಸಾವಿರಾರು ಕೋಟಿ ರೂಪಾಯಿಗಳ ಬಗ್ಗೆ ಹೇಳುವುದಿಲ್ಲ. ನಮಗೆ ಕಳೆದ ವರ್ಷದ್ದು ಒಂದೂವರೆ ಕೋಟಿ ರೂಪಾಯಿಗಳು ಬರಲಿಲ್ಲ. ಈ ವರ್ಷದ್ದು ಐವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ದಿನ ಪತ್ರಿಕೆಯಲ್ಲಿ ಬಂದಿರುತ್ತವೆ. ನಾವು ಕೊಟ್ಟಿರುವಂತಹ ಹಣದ commitment ಕಳೆದ ವರ್ಷದ್ದು ಪತ್ರ ಕೊಟ್ಟಿರುವಂಥದ್ದು, ಮುಜರಾಯಿ ದೇವಸ್ಥಾನದವರಿಗೆ ಕೊಡತಕ್ಕಂತಹ ಶ್ರೀ ಆದಿನಾರಾಯಣ, ಶ್ರೀ ಲಕ್ಷೀ ನಾರಾಯಣ ಮತ್ತು ಶ್ರೀ ವೆಂಕಟೇಶ್ವರ ದೇವಸ್ಥಾನಗಳಿಗೆ ಕೊಟ್ಟಿಲ್ಲ. ನಾವು ಕೊಟ್ಟಿರುವುದು ಶ್ರೀ ಮುಳ್ಳುಕಟಮ್ಮ, ಶ್ರೀ ಕಬ್ಬಾಳಮ್ಮ, ಶ್ರೀ ಮುನೇಶ್ವರ ಮತ್ತು ಶ್ರೀ ಮಾರಮ್ಮ ಅಂತಹ ದೇವಸ್ಥಾನಗಳಿಗೆ ಮೂರ ರಿಂದ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಎಲ್ಲಾ ಶೂದ್ರರು, ಪರಿಶಿಷ್ಠ ಜಾತಿ ಜಾನಾಂಗದವರು ಮುಜರಾಯಿ ದೇವಸ್ಥಾನವನ್ನು ಯಾರು ಕಟ್ಟಲಿಕ್ಕೆ ಆಗುವುದಿಲ್ಲವೋ ಅಂತಹವರಿಗೆ ಕೊಟ್ಟಿದ್ದೇವೆ. ಅವರು ಸಾಲವನ್ನು ಬಡ್ಡಿಗೆ ತಂದು ದೇವಸ್ಥಾನಗಳನ್ನು ಕಟ್ಟಿಬಿಟ್ಟಿದ್ದಾರೆ. ಸೂಸೈಟಿಯವರು ಎರಡು ಲಕ್ಷ ರೂಪಾಯಿಗಳಿಂದ ಮೂರು ಲಕ್ಷ ರೂಪಾಯಿಗಳು, MPCS (Milk Producers Cooperative Societies) ರವರು, ಹಾಲು ಉತ್ಪಾದಕರ ಸಹಾಕರ ಸಂಘ VSSN (Vyavasaya Seva Sahakara Shangha Niyamitha) ದವರು ಗೋದಾಮು ಕಟ್ಟುವುದಕ್ಕೆ 5 ಲಕ್ಷ ರೂಪಾಯಿಗಳು, Aided and Unaided ಅಂತಹ ಶಾಲೆಯವರಿಗೆ ಕೊಟ್ಟಿದ್ದೇವೆ.

ಮಾನ್ಯ ಸಭಾಪತಿಯವರೇ, ಜನರು ನಮಗೆ ಬೆಳಗಾದರೆ ಪೋನ್ ಮಾಡಿ ನಿಮಗೆ ಏಕೆ ಎಂ.ಎಲ್.ಸಿ., ಗಿರಿ ಎಂದು ಬೈಯುತ್ತಾರೆ. ಲೇಟರ್ ಕೊಟ್ಟಿದ್ದೀಯಾ, ಡಿ.ಸಿಯಿಂದ commitment ಆಗುತ್ತಿಲ್ಲ, ಬಿಲ್ಡಿಂಗ್ ಕಟ್ಟಿಬಿಟ್ಟಿದ್ದೇವೆ ಎಂದು ಕೇಳುತ್ತಾರೆ. ಇದಕ್ಕೆ ನಮ್ಮ ಮನೆಯ ಹತ್ತಿರ ಟಾಟಾ ಸುಮಾ ಕಾರಿನಲ್ಲಿ ಪ್ರತಿ ದಿವಸ 10 ರಿಂದ 20 ಜನರು ಬರುತ್ತಾರೆ. ನಮಗೆ ಊರು ಬಿಟ್ಟು ಹೋಗುವಂತಹ ಸ್ಥಿತಿ ಬಂದಿದೆ. ಮಾನ್ಯ ಮಾಧುಸ್ವಾಮಿ ಯವರು 5% ಬಗ್ಗೆ ಹೇಳುವಾಗ, ಮಾನ್ಯ ನಿರ್ಮಲ ಸೀತಾರಾಮ್ ಬಗ್ಗೆ ಎಲ್ಲಾ ಹೇಳಿಬಿಟ್ಟರು. ಆದರೆ, ನಮಗೆ ಕೊಡುವುದಕ್ಕೆ ಏನು ತೊಂದರೆ? ನಮಗೆ ಒಂದು ಕೋಟಿ ರೂಪಾಯಿ ಕೊಡುವುದಕ್ಕೆ ಇವರಿಗೆ ಏನು ಕಷ್ಟ? ನಮ್ಮದು ಒಂದು ಜೀವನವೇ ಸ್ವಾಮಿ. ಕೊಡದಿರುವುದು ಅವರದ್ದು ಒಂದು ಬಾಳೆ ಸ್ವಾಮಿ. ಶಾಸಕರು commit ಆಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ದೇಶವೇ ಈ ಸ್ಥಿತಿಗೆ ಬಂದಿದೆ. ಇಂತಹ ಸಂದರ್ಭದಲ್ಲಿ ನಮ್ದು ನಮಗೆ ಕೊಡಿ ಎಂದು ಕೇಳುತ್ತಾರೆ, ಇದು ಹೇಗೆ ಸ್ವಾಮಿ?

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಮಾಧುಸ್ವಾಮಿಯವರು ನಗುತ್ತಿದ್ದಾರೆ. ಅವರು ವಿರೋಧ ಪಕ್ಷದ ಶಾಸಕರು ಆಗಿದ್ದವರು. ನಮ್ಮದು ಎರಡು ಕೋಟಿ ರೂಪಾಯಿಗಳಿಂದ ಮೂರು ಕೋಟಿ ರೂಪಾಯಿಗಳು. ಈಗ ನಾವು ಜನರಿಂದ ತಪ್ಪಿಸಿಕೊಂಡು ಓಡಾಡಬೇಕಾಗಿದೆ. ನಮ್ಮನ್ನು ಈ ಸರ್ಕಾರ ಇಂತಹ ಪರಿಸ್ಥಿತಿಗೆ ತಂದಿದೆ. ಮಾನ್ಯ ಸಭಾಪತಿಯವರೇ, ತಾವು ಸಹ ಸರ್ಕಾರಕ್ಕೆ ಇದರ ಬಗ್ಗೆ ಪತ್ರವನ್ನು ಕೊಟ್ಟಿರುತ್ತೀರಿ. ತಾವು ಇದರ ಬಗ್ಗೆ ಒಂದು ಭರವಸೆಯನ್ನು ಕೊಡಿಸಿ. ಹಳೆಯ ಬಾಕಿ ಒಂದೂವರೆ ಕೋಟಿ ರೂಪಾಯಿಗಳು ಮತ್ತು present ದ್ದು ಎರಡು ಕೋಟಿ ರೂಪಾಯಿಗಳು, ಇದರ ಬಗ್ಗೆ ಹೇಳಿಸಿ. ತಾವು ನಮ್ಮ ರಕ್ಷಣೆಗೆ ಬರಬೇಕು. ದಯವಿಟ್ಟು, ಇದರ ಬಗ್ಗೆ ಒಂದು commitment ಮಾಡಿಸಿ.

**(ಮುಂದು)**

**(905)26-09-2020(1-50)ಎಂವಿ-ಎಂಡಿ**

**ಶ್ರೀ ಮಾನೆ ಶ್ರೀನಿವಾಸ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲಿನಿಂದಲೂ ಏನು ಶಾಸಕರ ನಿಧಿ ಬರುತ್ತಿತ್ತು. ಅದಕ್ಕೆ ನಾವು ಯಾವಾಗ ಪತ್ರ ನೀಡುತ್ತಿದ್ದೆವು ಎಂದರೆ, ಹಣ ಬಿಡುಗಡೆಯಾದ ತಕ್ಷಣ ನಾವು ಪತ್ರ ಕೊಡುತ್ತಿದ್ದೆವು. ಈ ಹಿಂದಿನ ಹತ್ತು ವರ್ಷದಿಂದ ಇದನ್ನೇ ಮಾಡಿಕೊಂಡು ಬರುತ್ತಿದ್ದೇವೆ. ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ಅವರು ಎಲ್ಲಾ ಶಾಸಕರಿಗೆ ಒಂದು ಪತ್ರ ಬರೆದು. ಒಂದು ತಿಂಗಳ ಒಳಗೆ ನೀವು ಇಡೀ ವರ್ಷದ ಎರಡು ಕೋಟಿ ರೂಪಾಯಿಗಳಿಗೆ ಕ್ರಿಯಾ ಯೋಜನೆಯನ್ನು ಕೊಡಬೇಕು ಎಂದರು. ಅದಕ್ಕೆ ಆಡಳಿತ ಅನುಮೋದನೆ ತೆಗೆದುಕೊಳ್ಳಬೇಕೆಂದು ಮೂರು ಬಾರಿ ಸುತ್ತೋಲೆಗಳನ್ನು ಕಳುಹಿಸಿದ್ದಾರೆ. ಅವರು ಆ ರೀತಿ ಕಳಿಸಿದ್ದರಿಂದ, ನಮ್ಮ ಗ್ರ್ಯಾಂಟ್ ಬರುತ್ತದೆಯೋ ಇಲ್ಲವೋ ಎಂಬ ಹೆದರಿಕೆಯಿಂದ ನಾವು 2019-2020 ಮತ್ತು 2020-2021ರ ಎರಡು ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಯನ್ನು ನೀಡಿದ್ದೇವೆ. ಅದಕ್ಕೆ ಆಡಳಿತಾತ್ಮಕ ಅನುಮೋದನೆಯೂ ಆಗಿದೆ. ಈಗ ಕೆಲಸಗಳು ಸಹ ಪ್ರಾರಂಭವಾಗಿದೆ. ಆದರೆ, ಹಣ ಬರಲಿಲ್ಲವೆಂದರೆ ಅದನ್ನು ಯಾರು ಕೊಡುತ್ತಾರೆ. ಆಮೇಲೆ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣವಿದ್ದರೆ ಬಿಡುಗಡೆ ಮಾಡಿ ಎಂದು ಹೇಳುತ್ತಾರೆ. ಆದರೆ, ಅಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಹಾಗಾಗಿ ಮೊದಲಿನಿಂದ ಈ ಪರಂಪರೆ ಇಟ್ಟುಕೊಂಡಿದ್ದೆವು, ಹಣ ಬಿಡುಗಡೆಯಾದ ಮೇಲೆ ಪತ್ರ ಕೊಡುತ್ತಿದ್ದೆವು. ಯಾರು ಬಂದು ನಮ್ಮನ್ನು ಕೇಳುವ ಪ್ರಶ್ನೆಯೇ ಬರುತ್ತಿರಲಿಲ್ಲ. ಇವರು ಸುತ್ತೋಲೆ ಹೊರಡಿಸಿ ಒತ್ತಾಯ ಮಾಡಿ, ನಮ್ಮ ಕಡೆಯಿಂದ ಕ್ರಿಯಾ ಯೋಜನೆ ತೆಗೆದುಕೊಂಡು, ಹಣವನ್ನು ಕೊಡುವುದಿಲ್ಲವೆಂದರೆ ನಮ್ಮ ಪರಿಸ್ಥಿತಿ ಏನಾಗಬೇಕು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರಾದ ಶ್ರೀ ಎಸ್.ರವಿ ಮತ್ತು ಶ್ರೀ ಮಾನೆ ಶ್ರೀನಿವಾಸ ಹೇಳಿದ್ದಾರೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಎಂ.ಎಲ್.ಸಿ.ಗಳ ರೋದನೆಯ ವಿಷಯ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಸದಸ್ಯರಾದ ಮಾನ್ಯ ಮಾನೆ ಶ್ರೀನಿವಾಸರವರು ಕ್ರಿಯಾ ಯೋಜನೆಯ ಬಗ್ಗೆ ಕೇಳಿದರು.

**(ಗೊಂದಲ)**

**ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ:–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರಾದ ಡಾ॥ವೈ.ಎ.ನಾರಾಯಣಸ್ವಾಮಿಯವರು ಮಾತನಾಡಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರೆಲ್ಲರೂ ಮಾತನಾಡಲಿ. ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ ಮತ್ತು ಕೊನೆಗೆ ಮಾತನಾಡುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಸ್ಥಳೀಯ ಸಂಸ್ಥೆ ಕ್ಷೇತ್ರದವರ ಸ್ಥಿತಿ ಇನ್ನು ಅಸಹ್ಯ ಪರಿಸ್ಥಿತಿ ಇದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರಾದ ಶ್ರೀ ಎಸ್.ರವಿ ಮತ್ತು ಶ್ರೀ ಮಾನೆ ಶ್ರೀನಿವಾಸ್‌ರವರು ಏನನ್ನು ಹೇಳಿದ್ದಾರೆ. ಅದು ಅಕ್ಷರಶಃ ನಿಜ. ಹಿಂದೆ ಹಣ ಬಿಡುಗಡೆಯಾದ ಮೇಲೆ ಪತ್ರವನ್ನು ಕೊಡುತ್ತಿದ್ದೆವು. ಅಂದರೆ, ಐವತ್ತು ಲಕ್ಷ ಬಂದಿದ್ದರೆ, ಐವತ್ತು ಲಕ್ಷಕ್ಕೆ ಸೀಮಿತವಾಗಿ ಪತ್ರವನ್ನು ಕೊಡುತ್ತಿದ್ದೆವು. ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ತಕ್ಷಣ ಏನು ಹೇಳಿದರು ಎಂದರೆ, ಕ್ರಿಯಾ ಯೋಜನೆ ಮಾಡಬೇಕು ಅದಕ್ಕೆ ಎರಡು ಕೋಟಿಗಳಿಗೆ ಸಂಬಂಧಪಟ್ಟಂತೆ ಕ್ರಿಯಾ ಯೋಜನೆ ಕೊಟ್ಟುಬಿಡಿ ಎಂದು ಹೇಳಿದರು. ನಾವು ಅದಕ್ಕೆ ಕ್ರಿಯಾಯೋಜನೆಯನ್ನು ನೀಡಿದ್ದೆವು. ಪತ್ರ ಕೊಟ್ಟಿದ್ದೇವೆ. ಆದರೆ ನಮಗೆ ಹಣ ಬರುತ್ತಿಲ್ಲವೆಂದರೂ ಎಷ್ಟೋ ಜನರು ಶಾಸಕರ ಕತ್ತು ಹಿಸುಕುವುದಕ್ಕೆ ಬಂದಿದ್ದಾರೆ. ನೀವು ಏನೋ ನಾಟಕ ಮಾಡುತ್ತಿದ್ದೀರಿ ಮತ್ತು ಸುಮ್ಮನೆ ಪತ್ರ ಕೊಡುತ್ತೀರಿ ಎಂದು. ನಾವು ಈ ರೀತಿಯಾದಂತಹ ಬಹಳಷ್ಟು ಆಪಾಧನೆಗಳನ್ನು ಎದುರಿಸುವಂತಹ ದುಸ್ಥಿತಿ ನಮಗೆ ಬಂದಿದೆ. ಅದಕ್ಕೆ ತಮ್ಮ ಮುಖಾಂತರ ಈ ಸರ್ಕಾರವನ್ನು ಕೇಳುತ್ತೇವೆ. ಹೋದ ವರ್ಷದ ಬಾಕಿ ಮತ್ತು ಈ ವರ್ಷದ ಬಾಕಿಯಾದ ಪ್ರದೇಶಾಭಿವೃದ್ಧಿ ನಿಧಿಯನ್ನು ತಕ್ಷಣ ಬಿಡುಗಡೆ ಮಾಡಬೇಕು. ಆಡಳಿತ ಪಕ್ಷದ ಸದಸ್ಯರಿಗೂ ಸಹ ಅದು ಬೇಕು, ಪಾಪ ಅವರು ಮಾತನಾಡುವುದಕ್ಕೆ ಆಗುವುದಿಲ್ಲ ಅವರಿಗೆ ಮುಜುಗರವಾಗಿದೆ. ಅದಕ್ಕೆ ಅವರು ಸುಮ್ಮನೆ ಇದ್ದಾರೆ. ಅವರು ಹಾಗೆ ಇರಲಿ. I request on behalf of all members of this House.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಎಲ್ಲರಿಗೂ ಸಹ ಬೇಕಾಗಿದೆ. ಅದಕ್ಕೆ ನಾವು ಸಹಾ ಆಗ್ರಹ ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೇಕಾಗಿದ್ದರೆ ಒಳ್ಳೆಯದು we welcome, well done. ಅದರ ಬಗ್ಗೆ ತಮ್ಮ ಮುಖಾಂತರ ಸರ್ಕಾರಕ್ಕೆ ನಿವೇದನೆ ಮಾಡಿಕೊಳ್ಳುತ್ತೇನೆ. It's a very serious matter. ಏಕೆಂದರೆ, ಈ ವರ್ಷ ಮತ್ತು ಹೋದ ವರ್ಷಕ್ಕೆ ಎರಡು ವರ್ಷಗಳ ನಾಲ್ಕು ಕೋಟಿ ರೂಪಾಯಿಗಳಿಗೆ ನಾವೆಲ್ಲರೂ ಸಹ ಈಗಾಗಲೇ ಪತ್ರವನ್ನು ನೀಡಿದ್ದೇವೆ. ಆದರೆ, ಒಂದು ರೂಪಾಯಿ ಸಹ ಬಂದಿಲ್ಲ. ಪ್ರತಿಯೊಬ್ಬ ಶಾಸಕರಿಗೂ ಇದು ಕೆಳಮನೆಯವರಿಗೂ ಆಗಿದೆ ಮತ್ತು ಮೇಲ್ಮನೆಯವರಿಗೂ ಸಹ ಆಗಿದೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಕೆಳಮನೆಯವರಿಗೆ ಏನೂ ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ಉತ್ತರ ನೀಡುತ್ತೀರಾ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ನಾವು ಸಾಕಷ್ಟು ಉತ್ತರ ಕೊಟ್ಟಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ನಾನು ಮಾತನಾಡುವುದು ಬೇಡವೆ? ನಾನು ಇಲ್ಲಿಯವರೆಗೆ ಏನನ್ನು ಸಹ ಮಾತನಾಡಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನನಗೆ ಅವರು ಡೈರೆಕ್ಟ್ ಮಾಡಿರುವುದು. ನಾನು ಡೈರೆಕ್ಟ್ ಮಾಡಿಲ್ಲ. ಬೇಡವೆಂದರೆ ಬಿಟ್ಟು ಬಿಡಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾತನಾಡಬಾರದೆ ಎಂದು ಹೇಳಿ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ನಾನು ಹೇಳುವುದನ್ನು ಕೇಳಿ. ನೀವು ಪ್ರದೇಶಾಭಿವೃದ್ಧಿಗೆ ಹಣ ಕೊಟ್ಟಿಲ್ಲವೆಂದು. ಅದಕ್ಕೆ ನಾನು ಮಾನ್ಯ ಸಚಿವರು ಉತ್ತರ ಕೊಡುತ್ತೀರಾ ಎಂದು ಕೇಳಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ಈ ಬಾರಿ ಎಲ್ಲರಿಗೂ ರಾಷ್ಟ್ರದಲ್ಲಿ MPLAD (Members of Parliament Local Area Development) fund ಕೂಡ ರದ್ದಾಗಿತ್ತು. ಕೇಂದ್ರ ಸರ್ಕಾರ ಐದು ಕೋಟಿ ರೂಪಾಯಿಗಳನ್ನು ಏನು ಕೊಡುತ್ತಿದ್ದರು ಅದನ್ನು ನಿಲ್ಲಿಸಿದ್ದರು. ಈಗಾಗಲೇ ಜಿಲ್ಲಾಧಿಕಾರಿಗಳ ಪಿ.ಡಿ. ಅಕೌಂಟ್‌ನಲ್ಲಿ ಹಣವನ್ನು ಹಾಕಲಾಗಿತ್ತು. ಅದು ಹೊಂದಾಣಿಕೆಯಾಗಿತ್ತು, ಅದು ಯಾವುದನ್ನು ಸಹ withdraw ಮಾಡಲಿಲ್ಲ. ಈಗ ಸದ್ಯಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿ, ಸುಮಾರು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಐವತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಆರ್ಥಿಕ ಪರಿಸ್ಥಿತಿ ಸುಧಾರಿಸಿದರೆ ಈ ವರ್ಷ ಕೂಡ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, ಹೋದ ವರ್ಷದ್ದು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಗೊತ್ತಿಲ್ಲ. ಅದರ ಬಗ್ಗೆ ಕೇಳಿ ತಿಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ತಾವು ಆ portfolio handle ಮಾಡುವುದಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೋದ ವರ್ಷದ ಬಗ್ಗೆ ಎಂದು ಹೇಳಿದಾಗ. ಆರ್ಥಿಕ ಇಲಾಖೆಯ ಕಾರ್ಯದರ್ಶಿಯವರು ಆ ಕಡೆಗೆ ಮುಖ ತಿರುಗಿಸಿಕೊಳ್ಳುತ್ತಾರೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ :-** ಮಾನ್ಯ ಸಭಾಪತಿಯವರೇ, ಹೋದ ವರ್ಷ ಕೇವಲ 61 ಲಕ್ಷ ಮಾತ್ರ ಬಿಡುಗಡೆಯಾಗಿದೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರ ನಿಮ್ಮದು ಎಂದು ನೀವು ಸರ್ಕಾರಕ್ಕೆ ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೋದ ವರ್ಷ ಮತ್ತು ಈ ವರ್ಷ ಕೂಡ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಬಂದಿಲ್ಲ. ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಸಂಜೆಯೊಳಗೆ ಉತ್ತರ ನೀಡಲಿ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಇನ್ನು ಒಂದು ಕೋಟಿ ರೂಪಾಯಿ ಬಿಡುಗಡೆಯಾಗಿಲ್ಲ. ಮಾನ್ಯ ಸಚಿವರು ಇದಕ್ಕೆ ಭರವಸೆ ನೀಡಲಿ.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮಾತನಾಡಿ ದಯವಿಟ್ಟು ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಕೊಡಿಸಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, Fiscal deficit 5% increase ಮಾಡಲಿಕ್ಕೆ ಇಲ್ಲಿಗೆ ಬಂದಿದೆ. The Karnataka Fiscal Responsibility Act 2002 ದಲ್ಲಿ enforcement ಆಯಿತು. ಸೆಕ್ಷನ್.4 ಪ್ರಕಾರ ಮೊದಲು ಏನಿತ್ತು ಎಂದರೆ, ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 3ರವರೆಗೆ ಅವಕಾಶವಿತ್ತು. ಈಗ ಶೇಕಡಾ 3 ರಿಂದ 5ರವರೆಗೆ increase ಆಗಿದೆ. ಇದು abnormal increase ಎಂದು ನನಗೆ ಅನಿಸುತ್ತದೆ. ಈಗ ಇದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚಾಯಿತು. ಶೇಕಡಾ 3 ರಿಂದ 5ರವರೆಗೆ increase ಮಾಡಿದರು. ಅಂದರೆ, ಕಡೆಗೆ ಶೇಕಡ 3.5 ಹೆಚ್ಚು ಮಾಡಲಿ. ಇಡೀ ದೇಶದಲ್ಲಿ fiscal responsibility ಯಲ್ಲಿ, financial disciplinary ಯಲ್ಲಿ ಕರ್ನಾಟಕ ನಂಬರ್-1. ನಮಗೆ ಅಷ್ಟು ಒಳ್ಳೆಯ reputation ಇದೆ. ಈಗ ನಮಗೆ ಕೇಂದ್ರದಿಂದ ಬರಲಾರದಂತಹ GST (Goods and Services Tax) ಮತ್ತು 15ನೇ ಹಣಕಾಸು ಆಯೋಗದಿಂದ ಬರುವಂತಹ ಹಣ. ಅದರ ಜೊತೆಗೆ GST compensation ಕೂಡ ಬಂದಿಲ್ಲ. ಆದರೆ, ಅದು ಇಲ್ಲಿಯವರೆಗೆ ಚರ್ಚೆಗೆ ಬಂದಿಲ್ಲ. ಇನ್ನೂ GST compensation ಕೂಡ ಉಳಿದಿದೆ. ಏಕೆಂದರೆ, ಹಿಂದೆ ಒಂದು ವರ್ಷದಿಂದ ಐದು ವರ್ಷದವರೆಗೆ ನಮಗೆ ರೆವಿನ್ಯೂ ನಷ್ಟವಾಗುತ್ತದೆ. GST ಯನ್ನು ತಂದಿರುವುದರಿಂದ ತೆರಿಗೆ ಬರುವುದಿಲ್ಲ. ಆದುದರಿಂದ ಐದು ವರ್ಷದವರೆಗೆ ಪರಿಹಾರ ಕೊಡುವಂತಹ ಒಂದು ಕಾನೂನು ಇದೆ. ಅದರ ಪ್ರಕಾರ GST compensation ಹಣ ಬಂದಿಲ್ಲ. ಈ ವರ್ಷ ಮತ್ತು ಮುಂದಿನ ವರ್ಷ ಕೂಡ ನಮಗೆ GST compensation ಬರಬೇಕು. ಆದರೆ, ಈ ವರ್ಷ ಬಂದಿಲ್ಲ. ಈಗ ನೋಡಿ, 15ನೇ ಹಣಕಾಸಿನದು ಆಯಿತು. ನಮಗೆ Rs. 11,000 crore and odd ಬರತಕ್ಕಂಥದ್ದು GST ಸಂಗ್ರಹ ಮಾಡಿರುವುದರಲ್ಲಿ ಬರಬೇಕಾಗಿರುವುದು ಅದು ನಮ್ಮ ಪಾಲು. ಅದು ಸಹ ಬಂದಿಲ್ಲ. ಸದಸ್ಯರಾದ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಹೇಳಿದ ಹಾಗೆ, No.1 option ಪ್ರಕಾರ ಇವತ್ತು ಏನು ಸಾಲ ಮಾಡುತ್ತಾರೆ, ಆ ಹನ್ನೊಂದು ಸಾವಿರ ಕೋಟಿ ಬಾಕಿ ಇದೆಯೆಲ್ಲಾ, principal and interest will be borne by the Central Government ಅದನ್ನು ಸ್ವಾಗತ ಮಾಡುತ್ತೇನೆ. ಅಂದರೆ ನಮ್ಮ ರಾಜ್ಯದ ಮೇಲೆ ಭಾರವಾಗುವುದಿಲ್ಲ. ಅದರ ಬಗ್ಗೆ ಸಂತೋಷವಾಗಿದೆ. ಇದನ್ನು ಸದನದಲ್ಲೇ commit ಮಾಡಿ. ಆ ಹನ್ನೊಂದು ಸಾವಿರ ಕೋಟಿಗೆ ನಮ್ಮ ರಾಜ್ಯದ ಬೊಕ್ಕಸದಿಂದ debt services ಗೆ ಒಂದು ರೂಪಾಯಿ ಹೋಗಬಾರದು. It should be directly borne by the Central Government. ಆಮೇಲೆ ಅವರು ಈ ಸ್ಥಿತಿ ಬರುವುದಕ್ಕೆ ನಾವು ಕಾರಣವೆಂದು ಹೇಳುತ್ತಾರೆ. ಕೋವಿಡ್-19 ಅನ್ನು ನಾವೇ ತಂದ ಹಾಗೆ ಮಾತನಾಡುತ್ತಾರೆ. ಈ ದೇಶದ ಆರ್ಥಿಕ ಸ್ಥಿತಿಗತಿ ಇಷ್ಟರ ಮಟ್ಟಿಗೆ ಕೆಡುವುದಕ್ಕೆ ಕಾರಣವೇನೆಂದು ನಾವು ಸ್ವಲ್ಪ ಹಿಂದಕ್ಕೆ ಹೋಗಿ ನೋಡಬೇಕು. ನಾನು ನಾಲ್ಕು ಮಾತುಗಳನ್ನು ಹೇಳುತ್ತೇನೆ. Let it go on

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

record. ನೋಟು ರದ್ಧತಿ ಮಾಡಿ ಎಂದು ನಾವು ಹೇಳಿದ್ದೇವೆಯೇ? ಆದರೆ, ನೋಟು ರದ್ದು ಆಯಿತು. ಆಮೇಲೆ unscientific ಆಗಿ GST apply ಮಾಡಿದರು. ಆಗ ಈ ಎರಡು ಕಾರಣಗಳಿಂದ ಏನು ಆಯಿತು. ನೋಟು ರದ್ದು ಮತ್ತು GST ಯನ್ನು ಜಾರಿಗೆ ತಂದ ಕೂಡಲೇ ಎಲ್ಲಾ ವ್ಯಾಪಾರ ಮತ್ತು ವಹಿವಾಟುಗಳು ಮತ್ತು ಉದ್ಯಮಗಳು ನಿಂತು ಹೋದವು. ಈಗ ಕೋವಿಡ್-19 ಆದಾಗ ಪರಿಸ್ಥಿತಿ ಹೇಗೆ ಇತ್ತೋ ಆಗ ಕೂಡ ಅದೇ ಪರಿಸ್ಥಿತಿ ಇತ್ತು. ಅವರು ಇಲ್ಲವೆಂದು ಹೇಳಬೇಕಾಗುತ್ತದೆ. ಅದನ್ನು ಇಲ್ಲವೆಂದು ಹೇಳಲಿ. ಆಗ ನಮ್ಮ ದೇಶದ GDP (Gross Domestic Product) ಸ್ವಲ್ಪ ಕೆಳಗೆ ಬಂತು. ನೋಟು ರದ್ದಾಗಿ unscientific ಆಗಿ GST apply ಮಾಡಿದ ಕೂಡಲೇ ನಮ್ಮ ದೇಶದ GDP ಬಹಳಷ್ಟು ಕೆಳಗೆ ಬರುವುದಕ್ಕೆ ಶುರುವಾಯಿತು. ಆಮೇಲೆ ಈ ಕೋವಿಡ್-19, ಈ ಕೋವಿಡ್-19ಗೆ ನಾವು ಕಾರಣರಾಗಿದ್ದೇವೆಯೇ? ಅದು ಎಲ್ಲಿಂದ ಬಂತು? ಚೀನಾ ದೇಶದ ವುಹಾನ್‌ನಲ್ಲಿ ಹುಟ್ಟಿದ್ದು, ವಿದೇಶದಿಂದ ಬಂದಂತಹವರು ಅದನ್ನು ನಮ್ಮ ದೇಶಕ್ಕೆ ತೆಗೆದುಕೊಂಡು ಬಂದಿದ್ದಾರೆ. ನಾವು ಅದನ್ನು ಕರೆದುಕೊಂಡು ಬಂದಿದ್ದೇವೆಯೇ? ನಾವು ಅದನ್ನು invite ಮಾಡಿದ್ದೇವೆಯೇ? ಅದು by Air ಬಂದಿದೆ. ಕೇಂದ್ರದಲ್ಲಿ ಒಕ್ಕೂಟ ವ್ಯವಸ್ಥೆಯ ಮುಖ್ಯಸ್ಥರು ಒಂದು ನಿರ್ಣಯ ಕೈಗೊಳ್ಳಬೇಕು. ನಮ್ಮ ದೇಶದಲ್ಲಿ ಜನವರಿ, 30ರಂದು ಮೊದಲ ಕೋವಿಡ್-19 ಪ್ರಕರಣ ಪತ್ತೆಯಾಯಿತು. ಆಗ ವಿದೇಶದಿಂದ ಬರತಕ್ಕಂಥ ಎಲ್ಲರನ್ನು, institutional quarantine ಮಾಡಿಬಿಟ್ಟಿದ್ದರೆ, ಅದು ನಮ್ಮ ದೇಶಕ್ಕೆ ಬರುತ್ತಿರಲಿಲ್ಲ ಮತ್ತು ವ್ಯಾಪಾರ ಹಾಗೂ ವಹಿವಾಟು ನಿಲ್ಲುತ್ತಿರಲಿಲ್ಲ, ಏನೂ ಸಹ ನಿಲ್ಲುತ್ತಿರಲಿಲ್ಲ ಮತ್ತು ಉದ್ಯಮಗಳು ಸಲೀಸಾಗಿ ನಡೆಯುತ್ತಿದ್ದವು. ಇಡೀ ದೇಶದಲ್ಲಿ ಮತ್ತು ರಾಜ್ಯದಲ್ಲಿ ಜನರು ಆರ್ಥಿಕವಾಗಿ ನೆಮ್ಮದಿಯಿಂದ ಇರುವಂತಹ ಪರಿಸ್ಥಿತಿ ಬರುತಿತ್ತು. ಎಲ್ಲರೂ ವಿದೇಶದಿಂದ ಬಂದರು. ನಮ್ಮ ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳುವುದಾದರೆ, ಜನವರಿ ತಿಂಗಳಿನಲ್ಲೇ ಸುಮಾರು ನಾಲ್ಕುವರೆ ಲಕ್ಷ ಜನರು ನಮ್ಮ ರಾಜ್ಯಕ್ಕೆ ಬಂದರು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಮಾತನಾಡುವುದಕ್ಕೆ ಶುರು ಮಾಡಿ ಒಂದು ಗಂಟೆ ಹದಿನೈದು ನಿಮಿಷವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಶುರು ಮಾಡಿ ಎರಡು ನಿಮಿಷವಾಗಿದೆ. ಮಾನ್ಯ ಸದಸ್ಯರೆಲ್ಲರೂ ಒಂದು ಗಂಟೆ ಹದಿನೈದು ನಿಮಿಷ ಮಾತನಾಡಿದ್ದಾರೆ. ಆ ಕೋವಿಡ್-19 ಅನ್ನು ಆಮಂತ್ರಣ ಮಾಡಿ ಅದನ್ನು ನಾವೇ ತಂದ ಹಾಗೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏಕೆಂದರೆ, ವಿದೇಶದಿಂದ ಬಂದಂತಹವರು ಯಾರೇ ಇರಲಿ. ನಮ್ಮ ಸಂಬಂಧಿಕರು ಯಾರೇ ಇರಲಿ ಮತ್ತು ಈ ದೇಶಕ್ಕೆ ಯಾರ್‍ಯಾರು ಬರುತ್ತಾರೆ. ಅವರೆಲ್ಲರನ್ನೂ institutional quarantine ಮಾಡಿ, ಅವರು ಆರೋಗ್ಯವಾಗಿದ್ದಾರೆಂದು ಕಂಡು ಬಂದರೆ, symptoms ಇತ್ತು ಎಂದರೆ ಅವರನ್ನು ಆಸ್ಪತ್ರೆಗೆ ಸೇರಿಸಿ ಅವರನ್ನು ಶುದ್ಧ ಮಾಡಿದ್ದರೆ. ಇವತ್ತು ಈ ದೇಶದ ಆರ್ಥಿಕ ಸ್ಥಿತಿ ಅಧೋಗತಿಗೆ ಹೋಗುತ್ತಿರಲಿಲ್ಲ.

**(ಮುಂದು)**

**(906) 26.09.2020 02.00 LL-AK**

**ಶ್ರೀ ಎಸ್.ಆರ್. ಪಾಟೀಲ್(ಮುಂದು)**

ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಏನಾಗಿದೆಯೆಂದರೆ, the Non-Performing Assets of banks is to the tune of more than five lakh crore rupees. ಇದೆ. ಸಾಲ ತೆಗೆದುಕೊಂಡು ಎಷ್ಟೋ ಮಂದಿ ವಿದೇಶಕ್ಕೆ ಓಡಿ ಹೋಗಿದ್ದಾರೆ. ಕೋವಿಡ್-19 ನಿಂದ ಜಿ.ಎಸ್.ಟಿ. ಕಡಿಮೆಯಾಗಿದೆಯೆಂದು ಹೇಳುತ್ತಾರೆ. ಆದರೆ, ಎಲ್ಲಾ ದೇಶದ ಜಿ.ಎಸ್.ಟಿ. ಗಮನಿಸಿದರೆ, ನಮ್ಮಲ್ಲಿ ಶೇಕಡ 23ರಷ್ಟು ಕಡಿಮೆಯಾಗಿದೆ. ಇತರೆ ರಾಷ್ಟ್ರದಲ್ಲಿ ಹೋಲಿಸಿದರೆ ಅಲ್ಲಿ ಶೇಕಡ 10-15 ರಷ್ಟಿದ್ದು, ನಮ್ಮ ರಾಷ್ಟ್ರ ಜಾಸ್ತಿಯಾಗಿದೆ. ಇದಕ್ಕೆ ಯಾರು ಹೊಣೆಗಾರರು? ಇದನ್ನು ನೋಡಿದರೆ ನನಗೆ ಒಂದು ಘಟನೆ ನೆನಪಾಗುತ್ತದೆ. ಅದೇನೆಂದರೆ, ಶ್ರೀಮಾನ್ ಚಂದ್ರಶೇಖರ್‌ರವರು ಈ ದೇಶದ ಪ್ರಧಾನ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಈ ದೇಶದ ಬೊಕ್ಕಸ ಖಾಲಿಯಾಯಿತು. ಆಗ ಪರಿಸ್ಥಿತಿ ಯಾವ ರೀತಿ ಬಂತೆಂದರೆ, tonnes of gold of this country was airlifted and pledged in London Bank. ತದನಂತರ, ಶ್ರೀ ಪಿ.ವಿ. ನರಸಿಂಹರಾವ್‌ರವರು ಈ ದೇಶದ ಪ್ರಧಾನ ಮಂತ್ರಿಯಾದರು. ಅವರು ಬಹಳ ಜಾಣ ಪ್ರಧಾನ ಮಂತ್ರಿಯಾಗಿದ್ದರು. ಆಗ ಜಗತ್ಪ್ರಸಿದ್ಧವಾದಂಥ ಆರ್ಥಿಕ ತಜ್ಞರು ಹಾಗೂ ನಮ್ಮ ಹಿಂದಿನ ಪ್ರಧಾನ ಮಂತ್ರಿಯವರಾದ ಡಾ॥ ಮನಮೋಹನ್ ಸಿಂಗ್‌ರವರನ್ನು ಕರೆದುಕೊಂಡು ಬಂದು, ಅವರಿಗೆ finance portfolio ಕೊಟ್ಟರು. ಒಂದು ವೇಳೆ, ನಮ್ಮ ಮನೆಯ ಬಂಗಾರ ಒತ್ತೆ ಇಡಬೇಕಾದರೆ ನಮಗೆ ಎಷ್ಟು ನೋವಾಗುತ್ತದೆ. ಆದರೆ, ಆ ಸಂದರ್ಭದಲ್ಲಿ ದೇಶದ ಬಂಗಾರ ಒತ್ತೆ ಇಟ್ಟಿದ್ದರು. ದೇಶದ ಆರ್ಥಿಕ ಪರಿಸ್ಥಿತಿ ಅಷ್ಟೊಂದು ಹದಗೆಟ್ಟಿತ್ತು. ಆಗ ಒಬ್ಬ ಜಾಣ ಡಾ॥ ಮನಮೋಹನ್ ಸಿಂಗ್‌ರವರು ಆರ್ಥಿಕ ಮಂತ್ರಿಯಾದ ಕೂಡಲೇ foreign

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

exchange earn ಮಾಡಿ, ರಾಷ್ಟ್ರದ ಬೊಕ್ಕಸ ತುಂಬಿಸಿದರು ಮತ್ತು ಲಂಡನ್ ಬ್ಯಾಂಕಿನಲ್ಲಿದ್ದಂತಹ ಗೋಲ್ಡ್ ಅನ್ನು ಸಹ ವಾಪಸ್ಸು ತಂದು ದೇಶದ ಆರ್ಥಿಕ ಸ್ಥಿತಿ ಸುಧಾರಣೆ ಮಾಡಿದರು. ದೇಶದ ಆಡಳಿತ ಸೂತ್ರ ಹಿಡಿದಂತಹವರು ಆರ್ಥಿಕವಾಗಿ ಸಮರ್ಥವಾಗಿರಬೇಕು ಮತ್ತು ಸರಿಯಾದ ದಾರಿಯಲ್ಲಿ ಮುನ್ನೆಡೆಯುವುದರ ಮುಖಾಂತರ ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಬೇಕು. ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು. ನಮಗೆ ದೇಶ ಮುಖ್ಯ. ಯಾವುದೇ ಪಕ್ಷದ ಆಡಳಿತವಿರಲಿ, ನೀವು ಏತಕ್ಕೆ ಮಾಡುತ್ತಾರೆ, ನಾವು ಆಡಳಿತಕ್ಕೆ ಬರಬೇಕೆಂದು ನಮ್ಮದೇನಿಲ್ಲ. ಈ ದೇಶವನ್ನು ಸುಸ್ಥಿತಿಯಲ್ಲಿಡಬೇಕು. ನಮ್ಮ ದೇಶ ಇಡೀ ಜಗತ್ತಿನಲ್ಲಿಯೇ ಪ್ರಚಂಡವಾದ ಶಕ್ತಿಶಾಲಿಯಾಗಿ ರಾಷ್ಟ್ರವಾಗಿ ಹೊರಹೊಮ್ಮಬೇಕೆಂಬ ಬಗ್ಗೆ ನಮ್ಮೆಲ್ಲರ ಕನಸಿದೆ. ಪ್ರತಿಯೊಬ್ಬ ಭಾರತೀಯ ಅತ್ಯಂತ ಹೆಮ್ಮೆಯಿಂದ, ಗರ್ವದಿಂದ 'ನಾನು ಭಾರತೀಯ' ಎಂದು ಹೇಳುವಂತಹ ಎದೆಯುಬ್ಬಿಸಿ ಮಾತನಾಡುವಂತಹ ಚಾಕಚಕ್ಯತೆ ನಮಗೆ ಬೇಕಾಗುತ್ತದೆ. ಆದರೆ, ನಮ್ಮ ದೇಶ ನೋಟು ಪದ್ಧತಿಯಿಂದ ಹಾಳಾಯಿತು. **(ಗೊಂದಲ)** ನಾನು ಮಾತನಾಡುವಾಗ ಮಾನ್ಯ ಸಭಾ ನಾಯಕರು ದಯಮಾಡಿ ಮಧ್ಯ ಮಾತನಾಡಬಾರದು. ಇದು ಸಿಸ್ಟಮ್ ಅಲ್ಲ. I will not yield. Please, don't mistake me.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಅವಕಾಶ ಕೊಟ್ಟಿದ್ದರೆ ನನ್ನ ಮಾತನ್ನು ಮುಗಿಸುತ್ತಿದ್ದೆ. ಅದೇನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರ ಕನಸು ಏನಿದೆ ಅದೆಲ್ಲವೂ ನನಸಾಗುವ ಕಾಲ ಇವೊತ್ತೇ ಬಂದಿದೆಯೆಂದು ನಾನು ಹೇಳುತ್ತಿದ್ದೆನು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಡಾ॥ ಮನಮೋಹನ್ ಸಿಂಗ್‌ರವರನ್ನು ಹೊಗಳುವುದಕ್ಕೆ ನಾನು ಆ ರೀತಿ ಹೇಳಿರುವುದಿಲ್ಲ. ಆದರೆ, ದೇಶದ ಬಂಗಾರವನ್ನು ಒತ್ತೆ ಇಟ್ಟು ಸಾಲ ತೆಗೆದುಕೊಂಡಿದ್ದಂತಹ ಸಂದರ್ಭದಲ್ಲಿ, ಅವರು ಈ ರಾಷ್ಟ್ರದ ಸಾಲವನ್ನು ತೀರಿಸಿ, ರಾಷ್ಟ್ರದ ಬೊಕ್ಕಸ ತುಂಬಿಸಿ ಮತ್ತೆ ನಮ್ಮ ದೇಶವನ್ನು ಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡಿದರು. ಇವೊತ್ತಿನ ದಿವಸ ಇಂತಹ ಒಂದು ದುಸ್ಥಿತಿಯ ಸಂದರ್ಭದಲ್ಲಿ ಜಾಣತನದಿಂದ ಕೆಲಸ ಮಾಡಿದರೆ ರಾಷ್ಟ್ರದ ಜಿ.ಡಿ.ಪಿ. ಮತ್ತು ರಾಜ್ಯದ ಜಿ.ಡಿ.ಪಿ. ಕೂಡ ಹೆಚ್ಚು ಆಗುತ್ತದೆ. ಆ ರೀತಿ ಆರ್ಥಿಕವಾಗಿ ಸರಿಯಾಗಿ ನಿರ್ವಹಣೆ ಮಾಡುವಂತಹ ಕೆಲಸ ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಆಗಿರುವುದಿಲ್ಲ. ಹಾಗಾಗಿ, ನಾನು ಹಳೆಯ ಘಟನೆಯನ್ನು ಹೇಳುವುದಕ್ಕೆ ಇದು ಕಾರಣ. Covid-19 has been brought by us only. ಅದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತನ್ನಷ್ಟಕ್ಕೆ ತಾನೇ ಹಾರಿ ಬಂದಿರುವುದಿಲ್ಲ. ಅದಕ್ಕೆ ನಾವು ಮುಂಜಾಗ್ರತೆಯಾಗಿ ಮಾಡತಕ್ಕಂತಹ ಕ್ರಮಗಳನ್ನು ಕೈಗೊಳ್ಳದೇ ಇದ್ದುದರಿಂದ ಆಗಿದೆ ಮತ್ತು ನಿಯಂತ್ರಣ ಮಾಡುವುದರಲ್ಲಿಯೇ ಸಹ ವಿಫಲವಾಗಿದೆ. ಈಗ ಅದು ಬೇಡ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ.

ಇವೊತ್ತಿನ ದಿವಸ ಏನಾಗಿದೆಯೆಂದರೆ, ಶೇಕಡ 5 ರಷ್ಟು ಹೆಚ್ಚಿಗೆ ಮಾಡುವುದು it is an abnormal increase. Rs.11,000 and odd crores ಏನು ನ್ಯಾಯಸಮ್ಮತವಾಗಿ ಬರತಕ್ಕಂತಹ ಹಣಕ್ಕೆ ಕೇಂದ್ರ ಸರ್ಕಾರದವರು ಬಡ್ಡಿಸಮೇತ ತುಂಬುತ್ತೇವೆಂದು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. It will not be a burden on the State Exchequer. The State's financial position will not be affected. ಉಳಿದ ಹಣಕ್ಕೆ ನಾವು ಬಾಧ್ಯಸ್ತರಾಗುತ್ತೇವೆ. ಈ ಬಗ್ಗೆ ಮಾನ್ಯ ಯು.ಬಿ. ವೆಂಕಟೇಶ್‌ರವರು ಮಾತನಾಡಿದಂತೆ, 'ಸಾಲ ಮಾಡಿ ಹೋಳಿಗೆ ತುಪ್ಪ ತಿನ್ನುವ ರೀತಿ ಆಗಿದೆ' ನಮ್ಮ ಪರಿಸ್ಥಿತಿ. ಇವೊತ್ತಿನ ದಿವಸ your committed expenditure is 90%. Committed expenditure ಅನ್ನು ನಾವು ಮಾಡಲೇಬೇಕು. ಸಾಲ ತೆಗೆದುಕೊಂಡು committed expenditure ಮಾಡುವಂತಹ ದುಸ್ಥಿತಿಯನ್ನು ಬಂದಿರುವುದನ್ನು ನೋಡಿದರೆ ನನಗೆ ಏನು ಅನ್ನಿಸುತ್ತದೆಯೆಂದರೆ, definitely Karnataka State is caught in a debt trap. ಆರ್ಥಿಕ ದಿವಾಳಿಯತ್ತ ಮುನ್ನಡೆಯುವ ಪರಿಸ್ಥಿತಿ ಬಂದಿದೆ. ಅದಕ್ಕೆ ಕಾರಣಗಳು ಏನೇ ಇರಬಹುದು. ನಮ್ಮಲ್ಲಿ ಮೈನಸ್ 23 ಜಿ.ಡಿ.ಪಿ. ಇದೆ. ಈ ರಾಜ್ಯದ ಆಂತರಿಕ ಒಟ್ಟು ಉತ್ಪನ್ನದ ಶೇಕಡ 3 ಕ್ಕಿಂತಲೂ ಹೆಚ್ಚು ಹೋದರೆ, ನಾವು financially ಸರಿಯಾಗಿ ನಿರ್ವಹಣೆ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಕಾನೂನು ಸಚಿವರು, ಕಾನೂನು ಅಧ್ಯಯನ ಮಾಡಿದವರಾಗಿದ್ದು, ನ್ಯಾಯವಾದಿಗಳು ಸಹ ಆಗಿದ್ದಾರೆ. ಇವೊತ್ತಿನ ದಿವಸ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನಾವು ಗಮನಿಸಬೇಕು. ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದವರೇ ಆರ್ಥಿಕ ಮಂತ್ರಿಯಾಗಿದ್ದಾರೆ. ಆ ಸಂದರ್ಭದಲ್ಲಿ ನನಗೆ ಬಹಳ ಖುಷಿಯಾಗಿತ್ತು. ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ನಮ್ಮ ದೇಶದ ಆರ್ಥಿಕ ಮಂತ್ರಿಯಾದಾಗ ನಮ್ಮ ರಾಜ್ಯದ ಭಾಗ್ಯದ ಬಾಗಿಲು ತೆಗೆಯಿತು, ಆರ್ಥಿಕವಾಗಿ ನಾವು ಮುನ್ನಡೆಯುತ್ತೇವೆಂದು ನಾನು ಭಾವಿಸಿದ್ದೆ. 15ನೇ ಆರ್ಥಿಕ ವರ್ಷದಲ್ಲಿ ನಮಗೆ ಕಡಿಮೆ ಮಾಡಿದರು, ಕೊಡಬೇಕಾಗಿದ್ದನ್ನು ಕೊಡಲಿಲ್ಲ. ಆ ನಂತರ ಜಿಎಸ್‌ಟಿ ಪರಿಹಾರ ನೀಡಲಿಲ್ಲ. ಈ ರೀತಿಯಾದರೆ ನಾವು ಹೇಗೆ ಉಳಿಯಬೇಕು? ಕೇಂದ್ರ ಸರ್ಕಾರದವರು ಕರ್ನಾಟಕ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಕ್ಕೆ ನ್ಯಾಯಸಮ್ಮತವಾಗಿ ಕೊಡಲಾರದಂತಹ ಹಣವನ್ನು ಶೇಕಡ 3ರಷ್ಟು, 4 ರಷ್ಟು Fiscal Responsibility Act ನ Section 4 ಕ್ಕೆ ಅಮೆಂಡ್‌ಮೆಂಟ್ ಮಾಡಿ ಶೇಕಡ 3 ರಿಂದ 5 ಮಾಡಬೇಕೆಂದು ಹೇಳುತ್ತಿದ್ದಾರೆ. Is it a right way? Is it fair? I am talking impartially. I don't have any political motive. ನಮ್ಮ ದೇಶದಲ್ಲಿ ನಂಬರ್ ಓನ್ ಇರುವಂತಹ ಹಾಗೂ ಇದುವರೆವಿಗೂ ಆರ್ಥಿಕತೆಯಲ್ಲಿ ಒಂದು discipline maintain ಮಾಡಿದ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಯಾವ ಹಂತಕ್ಕೆ ತಲುಪಿದೆ ಎಂಬುದನ್ನು ಗಮನಿಸಬೇಕು. I am very proud of the Principal Finance Secretary. He is known for his honesty and integrity. He is quite capable. ನಾನು 3 ವರ್ಷ ಐ.ಟಿ. & ಬಿ.ಟಿ. ಮಂತ್ರಿಯಾಗಿದ್ದಾಗ, ಪ್ಲಾನಿಂಗ್ ಮಿನಿಸ್ಟರ್ ಆಗಿದ್ದೆನು, ಸತತವಾಗಿ ಸುಮಾರು 10 ಬಜೆಟ್‌ನಲ್ಲಿ, 8 ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಇದ್ದೆನು. ಆ ಸಂದರ್ಭದಲ್ಲಿ ನಾವು ಸರ್ಕಾರದಲ್ಲಿ ಆ ಕೆಲಸ ಮಾಡೋಣ, ಈ ಕೆಲಸ ಮಾಡೋಣವೆಂದು ಹೇಳಿದಾಗ, ಅದಕ್ಕೆ ಅವರು, 'ನೋಡಿ ಸರ್, ಇದು ಪರ್ಮಿಟ್ ಆಗುವುದಿಲ್ಲವೆಂದು" ಹೇಳುತ್ತಿದ್ದರು. ಅಂತಹ ಒಬ್ಬ ಸಮರ್ಥ ಅಧಿಕಾರಿ ಇದ್ದರೂ ಕೂಡ ಈಗ ಏನು ಮಾಡುವುದಕ್ಕಾಗುತ್ತದೆ? ಈಗ ರಾಜ್ಯದ ಆರ್ಥಿಕ ಪರಿಸ್ಥಿತಿ ಎಲ್ಲರ ಕೈ ಮೀರಿದೆ. ಇಡೀ ದೇಶದ ಆರ್ಥಿಕ ಪರಿಸ್ಥಿತಿಯೇ ಅಧೋಗತಿಗೆ ಬಂದಿದೆ. ಈ ರೀತಿ ಅಧೋಗತಿಗೆ ಹೋಗಲಿಕ್ಕೆ ನಾವು ಹೊಣೆಗಾರಿಕೆ ಅಲ್ಲ. ನಾವು foresight ಇಟ್ಟುಕೊಂಡು, ಭವಿಷ್ಯತ್ತಿನ ವಿಚಾರವನ್ನು ಇಟ್ಟುಕೊಂಡು ಜಾಣತನದಿಂದ ಆರ್ಥಿಕ ನಿರ್ವಹಣೆ ಮಾಡುವುದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ವಿಫಲವಾಗಿದೆ. ಹಾಗಾಗಿ, ಸಾಲ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಇವೊತ್ತಿನ ದಿವಸ ಸಾಲ ತೆಗೆದುಕೊಳ್ಳದಿದ್ದರೆಂದರೆ, you can't run the government. I know it. I know the practical difficulty. ಆದರೆ, ನನ್ನ ಒಂದು ಸಲಹೆ ಏನೆಂದರೆ, ಇದು ಶೇಕಡ 3 ರಷ್ಟು ಇದ್ದದ್ದು, ಶೇಕಡ 3.5ರಷ್ಟು ಅಷ್ಟನ್ನು ಮಾತ್ರ ಹೆಚ್ಚು ಮಾಡಬೇಕು. ಪ್ರಸ್ತುತ ಇರುವ ಪರಿಸ್ಥಿತಿಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ಅದನ್ನು ಶೇಕಡ 5 ಕ್ಕೆ ಹೆಚ್ಚು ಮಾಡಿಕೊಳ್ಳುವುದಕ್ಕೆ ನಾವಂತೂ ಒಪ್ಪಿಕೊಳ್ಳುವುದಿಲ್ಲ. ಇದರಿಂದಾಗಿ, ಸುಮಾರು 4 ಲಕ್ಷ ಕೋಟಿ ರೂಪಾಯಿಯಷ್ಟು ಸಾಲ ಆಗುತ್ತದೆ. ಅದಕ್ಕೆ ಸರ್ಕಾರ ಇದನ್ನು ಇತಿ–ಮಿತಿಯೊಳಗೆ ಹೆಚ್ಚು ಮಾಡಿಕೊಳ್ಳಬೇಕು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ, 1.36 ಲಕ್ಷ ಕೋಟಿ ರೂಪಾಯಿ ಸಾಲ ಇತ್ತು, ನಂತರ ಅದು 3.68 ಲಕ್ಷ ಕೋಟಿ ರೂಪಾಯಿ ಹೆಚ್ಚಾಯಿತು. ಪ್ರಸ್ತುತ ಸರ್ಕಾರ 33 ಸಾವಿರ ಕೋಟಿ ರೂಪಾಯಿ ಹೆಚ್ಚು ಮಾಡಿದರೆ, 4 ಲಕ್ಷ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಿ ರೂಪಾಯಿ ಸಮೀಪ ಹೋಗುತ್ತದೆ. ಅದನ್ನು debt service ಮಾಡುವುದು ಹೇಗೆ? ಏಕೆಂದರೆ, 10 ವರ್ಷ ಹೇಳಿದರು, 1 ವರ್ಷ ಅಥವಾ 2 ವರ್ಷ moratorium ಕೊಡಬಹುದು. ಆದರೆ, moratorium ಕೊಟ್ಟಾಗಲೂ ಕೂಡ ಬಡ್ಡಿ ತುಂಬಬೇಕಾಗುತ್ತದೆ. ಆ ಬಡ್ಡಿಯನ್ನು ಎಲ್ಲಿಂದ ತುಂಬುತ್ತಾರೆ? Moratorium ಇಲ್ಲವೆಂದರೆ, ಅಸಲು ಮತ್ತು ಬಡ್ಡಿ ಎರಡನ್ನು ಸೇರಿಸಿ ತುಂಬಬೇಕು. From where will you service the debt? Debt ಹೇಗೆ ಕ್ಲಿಯರ್ ಮಾಡುತ್ತೀರಿ? ಸಂಪನ್ಮೂಲ ಕ್ರೋಢೀಕರಣ ಮಾಡುವುದಕ್ಕೆ ಏನು ಸಾಧ್ಯವಿಲ್ಲದ ಸ್ಥಿತಿ ಆಗಿದೆ. ಇವೊತ್ತಿನ ದಿವಸ committed expenditure ಶೇಕಡ 90 ರಷ್ಟಾಗಿದೆ. ಈ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ 10 ರಷ್ಟು ಮಾತ್ರ ಅಭಿವೃದ್ಧಿಗೆ ಮೀಸಲಿಡಬಹುದು. ಈಗ ಏನು ಆಗಿದೆಯೆಂದರೆ, committed expenditure ಗೆ ಸಾಲ ಮಾಡುವಂತಹ ಪರಿಸ್ಥಿತಿ ಬಂದಿದೆ. ಈಗ ಸರ್ಕಾರಿ ಅಧಿಕಾರಿಗಳ ಸಂಬಳ, ಸಾರಿಗೆ, ಪಿಂಚಣಿ ಭತ್ಯೆ ಕೊಡುವುದಕ್ಕೆ ಸಾಲ ಮಾಡುವಂತಹ ಸ್ಥಿತಿ ಬಂದರೆ ಹೇಗೆ? ನಿಜವಾಗಿಯೂ ನಾನು ಎಂದೆಂದಿಗೂ ಈ ಸ್ಥಿತಿಯನ್ನು ಊಹಿಸಿರಲಿಲ್ಲ. ಇದನ್ನು ನೋಡಿದರೆ ನನಗೆ ಬಹಳ ನೋವಾಗುತ್ತಿದೆ. ಅದಕ್ಕಾಗಿ, ಸರ್ಕಾರ ಏನಾದರೂ ಮಾಡಿ you find out some source of income. ಇದನ್ನು ಹೆಚ್ಚಿಗೆ ಮಾಡಿ ರಾಜ್ಯವನ್ನು ಸಾಲದ ಶೂಲಕ್ಕೆ ಹೋಗಿ ತಿರುಗಿಸಲಿಕ್ಕೆ ಪ್ರಯತ್ನ ಮಾಡಬೇಕು. ದಯಮಾಡಿ, ಶೇಕಡ 3 ರಷ್ಟು ಇದ್ದದ್ದನ್ನು 3.5 ರಷ್ಟು ಮಾಡಿ. At the most, you make it 4% finally, not up to 5%. (**ಗೊಂದಲ**) ನಾಳೆ ದಿವಸ ಇದಕ್ಕೆ ನಾವು ಕೂಡ ಜವಾಬ್ದಾರರು. ಏಕೆಂದರೆ, ನಾವು ಕೂಡ ಈ ಸದನದಲ್ಲಿದ್ದೇವೆ. ಸಾಲ ಮಾಡುವುದಕ್ಕೆ ಈ ಸರ್ಕಾರ ಅಷ್ಟೇ ಅಲ್ಲವೇ, ಪ್ರತಿಪಕ್ಷ ಸಹಕಾರ ಮಾಡಿದರೆ ನಾವು ಕೂಡ ಅದರಲ್ಲಿ ಭಾಗಿಯಾಗುತ್ತೇವೆ. 'ನಮ್ಮ ರಾಜ್ಯ ಸಾಲ ಮಾಡುವುದಕ್ಕೆ ಇಂತಿಂತಹವರು ಈ ಕಾಲದಲ್ಲಿ ಇದ್ದರು, ಇವರೇ ಈ ರೀತಿ ಸಾಲ ಮಾಡಿ ರಾಜ್ಯವನ್ನು ಆರ್ಥಿಕ ದಿವಾಳಿಯತ್ತ ಮುನ್ನೆಡಿಸಿದರೆಂದು' ನಮಗೂ ಅಪಾದನೆ ಬರುತ್ತದೆ. ಅದಕ್ಕೆ ನನ್ನ ಬೇಡಿಕೆ ಏನೆಂದರೆ, ಉತ್ತರದಲ್ಲಿ ಹೇಳಿರುವ ರೀತಿ the amendment which you have brought to Section 4 of the Karnataka Fiscal Responsibility Act to raise the fiscal deficit from 3 to 5 percent, ಇದನ್ನು ಶೇಕಡ 3 ರಿಂದ 5 ರವರೆಗೆ ಹೆಚ್ಚಿಸುವ ಬದಲಾಗಿ ಶೇಕಡ 4 ಕ್ಕೆ ಹೆಚ್ಚು ಮಾಡಬಹುದಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಮನೆಯ ಸದಸ್ಯರು ರಾಜ್ಯದ ಬಗ್ಗೆ ಇಟ್ಟುಕೊಂಡಿರುವ ಕಳಕಳಿಗೆ ಅಭಿನಂದಿಸುತ್ತೇನೆ. ನಾನು ಮತ್ತೊಮ್ಮೆ ಹೇಳುವುದೇನೆಂದರೆ, ನಾನು ಕೂಡ ಗ್ರಾಮೀಣ ಬದುಕಿನಿಂದ ಬಂದಂತಹವನು.

**(ಮುಂದು)**

**(907)26.09.2020/2.10/ವೈಎಲ್–ಎಕೆ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಮುಂದು):–**

ಸಾಲ ಮಾಡಿ ಖುಷಿಪಡುವಂಥ ಕುಟುಂಬದಿಂದ ಬಂದವನಲ್ಲ. ಹಾಗೆಯೇ ಅನಿವಾರ್ಯದ ಪರಿಸ್ಥಿತಿಯಲ್ಲಿ ಸಾಲ ಮಾಡದೇ ಬದುಕು ನಡೆಸುವುದಕ್ಕೆ ಸಾಧ್ಯವಾಗದ ಕಾರಣ ಸಾಲ ಮಾಡುವುದು ಅನಿವಾರ್ಯವಾಗುತ್ತದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಹೇಳಿದ ಹಾಗೆ ಸುಮಾರು ರೂ.3 ಲಕ್ಷ ಕೋಟಿಗಳಷ್ಟು ಸಾಲ ಈ ರಾಜ್ಯದಲ್ಲಿತ್ತು. ನಾನೇ ಮೊದಲು 'why so much liability' ಎಂದು ಟೀಕೆ ಮಾಡಿದ್ದೆನು. ಆದರೆ, ಸರ್ಕಾರ ನಡೆಸುವಾಗ capital investment ಮಾಡಿ, ಏನಾದರೂ ಕಾರ್ಯಕ್ರಮ ನಡೆಸಲು ಸಾಲ ಮಾಡಬೇಕಾಗುತ್ತದೆ. ಏಕೆಂದರೆ ಅದನ್ನು ಮುಂದಕ್ಕೆ ಹಾಕಿಕೊಂಡು ಹೋದರೂ cost, escalation ಜಾಸ್ತಿಯಾಗುತ್ತದೆ. ಸಾಲ ಮಾಡಿ ಅಭಿವೃದ್ಧಿಯಾಗಿರುವ ಕುಟುಂಬಗಳಲ್ಲಿ ನಾವೂ ಇದ್ದೀವಿ. ಅದೇ ರೀತಿ ಕರ್ನಾಟಕ ರಾಜ್ಯವು ಸಾಲ ಮಾಡಿ ಅಭಿವೃದ್ಧಿಯಾಗಿದೆ. ಅದನ್ನು ಅಷ್ಟೊಂದು ತೀಕ್ಷ್ಣವಾಗಿ ಟೀಕೆ ಮಾಡುತ್ತಿರಲಿಲ್ಲ. ಆದರೆ, ನಮ್ಮ ದುರಾದೃಷ್ಟವಶಾತ್ ಈಗಿನ ಸ್ಥಿತಿಯಲ್ಲಿ ನಮಗೆ revenue loss ರೂ.65 ಸಾವಿರ ಕೋಟಿಗಳಾಗಿದ್ದು, ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಹೌದು ನನಗೂ ಅರ್ಥವಾಗುತ್ತದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಆದರೆ, ನಾವೂ ರೂ.65 ಸಾವಿರ ಕೋಟಿಗಳಷ್ಟು ಸಾಲ ಕೇಳಲಿಲ್ಲ. ಇಡೀ ರಾಷ್ಟ್ರಕ್ಕೆ ಕೇಂದ್ರ ಸರ್ಕಾರ ಇವತ್ತು fiscal deficit 3% to 5% ಮಾಡಿ, ರಾಜ್ಯವನ್ನು ನಿಭಾಯಿಸಿ ಎಂದು Fiscal Responsibility Act relax

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದು, ಅದರ ಅರ್ಧ ಎಲ್ಲರೂ ಅದರ ಹಂಚಿನಲ್ಲಿಯೇ ಇದ್ದೀವಿ. ಸಾಲ ಮಾಡುವುದರಿಂದ ನಮಗೇನು ಖುಷಿ ಇಲ್ಲ. ಮೂರು ಸಾವಿರಕ್ಕೆ ಮೂವತ್ತಾರು ಸಾವಿರ ಕೋಟಿ ಡ್ರಾ ಮಾಡಬಹುದು. ಹಾಗೆಯೇ ಸ್ಪಷ್ಟವಾಗಿ ತಿಳಿಯಪಡಿಸುವುದೇನೆಂದರೆ, ಇದು ಈ ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ. It's not for future. ಒಂದು ವರ್ಷಕ್ಕೆ ಅನಿವಾರ್ಯವಾಗಿ ತರಲಾಗುತ್ತಿದೆ. ನಾವೂ ಸಹ 2-3 ಬಾಬ್ತಿನಲ್ಲಿ ಏನಾದರೂ regain ಮಾಡಬಹುದೆಂದು ತೆಗೆದುಕೊಂಡಿದ್ದೇವೆ. ಈ ವರ್ಷ agriculture GDP improve ಆಗುತ್ತದೆ ಎಂದು ಭಾವಿಸಿದ್ದೇವೆ. ಬಹಳ ಒಳ್ಳೆಯ ಋತುಮಾನ ಇದ್ದು, sowing ಇತ್ತು. Manufacturing, Service, Transport sector ಎಲ್ಲವೂ ನಿಂತು ಹೋಗಿದೆ. ಇವುಗಳೆಲ್ಲಾ ಚೇತರಿಸಿಕೊಂಡರೆ we can collect some revenue ಎಂಬ ಆಸೆ ಇದೆ. If the situation improves, unnecessary ಸಾಲ ಮಾಡಲು ನಮಗೂ ಇಷ್ಟವಿಲ್ಲ. But a provision has to be made. Fiscal deficit ಶೇಕಡಾ 3.5 ಅಥವಾ ಶೇಕಡಾ 4 ಎಂದು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಆದಾಯದ ನಷ್ಟ ರೂ. 65 ಸಾವಿರ ಕೋಟಿಗಳಾಗಿದ್ದು, ಅದರಲ್ಲಿ ಅರ್ಧ ಹಣವನ್ನು ಕೇಳಿದ್ದೇವೆ. ಅದಕ್ಕಿಂತ ಕಡಿಮೆ ಮಟ್ಟದಲ್ಲಿ ಸಾಲ ಮಾಡಿದರೆ ಸರ್ಕಾರ ನಡೆಸಲು ಬಹಳ ಕಷ್ಟವಾಗುತ್ತದೆ. ಅವರೇ ಹೇಳಿದ ಹಾಗೆ ಎಂ.ಎಲ್.ಎ. Local Area Development funds ಸಹ ನೀಡದ ಪರಿಸ್ಥಿತಿಗೆ ಸರ್ಕಾರ ಬಂದು ನಿಂತಿರುವುದಕ್ಕೆ ಕಾರಣವೇನೆಂದರೆ, ನಮ್ಮ ಪರಿಸ್ಥಿತಿ ಆ ರೀತಿ ಇದೆ. ಯಾವುದೇ ಹೊಸ ಕಾರ್ಯಕ್ರಮವನ್ನು launch ಮಾಡುವುದಾಗಲಿ, ಪ್ರಾಜೆಕ್ಟ್ ಮಾಡುವುದಕ್ಕೆ ಹೋಗಿಲ್ಲ. ಇರುವುದನ್ನು ಮುಂದುವರೆಸಿಕೊಂಡು ಹೋದರೆ ಸಾಕು ಎಂಬ ಪರಿಸ್ಥಿತಿ ನಿರ್ಮಾಣವಾಗಿದ್ದು, ಎಲ್ಲಿಯೋ ಒಂದು ಕಡೆ ನಮ್ಮ ಸರ್ಕಾರ ಸಹ ಅಧಿಕಾರಕ್ಕೆ ಬಂದು ಏನು ಮಾಡಿದೇ ಎಂಬ ಭಾವನೆ ಇದೆ. ನಾವು ಸಹ ಏನೂ ಮಾಡುವುದಕ್ಕೆ ಆಗುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರ ಸರ್ಕಾರವೇ ದೀರ್ಘಕಾಲ ಅಧಿಕಾರಿದಲ್ಲಿದೆ. Committed expenditure ಗೆ ಸಾಲ ಮಾಡಿರುವುದು ಅವರ ಅವಧಿಯಲ್ಲಿಯೇ ಎಂದು ಭಾವಿಸಿಕೊಂಡಿದ್ದೆ. ಇತಿಹಾಸದಲ್ಲಿಯೇ ಮೊದಲ ಬಾರಿ ಕರ್ನಾಟಕ ರಾಜ್ಯ ಈ ಸ್ಥಿತಿಗೆ ಬಂದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, committed expenditure ಒಂದು ಲಕ್ಷದ ಐವತ್ತಾರು ಸಾವಿರ ಕೋಟಿಗಳಾಗುತ್ತದೆ. Our revenue recovery till now is Rs.1,14,000 crores only. ನಾವು ಏನು ಮಾಡುವುದು? ನಾವು ಅವರ ಮುಂದೆ ಸತ್ಯವನ್ನು ಹೇಳಬೇಕಲ್ಲವೇ? It is the revenue collection which we are meaning. Some percentage will go for committed expenditure. ಅವರ ಅಂಕಿ-ಅಂಶದ ಪ್ರಕಾರ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಶೇಕಡಾ 77 ರಿಂದ 90 ರಷ್ಟು ಎಂದು ಹೇಳಿದರು. As per the estimates, our committed expenditure is 62%. ಎಲ್ಲಿಂದ ಹಣವನ್ನು ತಂದು ಸಾಲ ಬಗೆಹರಿಸಲು ಸಾಧ್ಯ ಅವೆಲ್ಲಾ ಪ್ರಯತ್ನವನ್ನು ಮಾಡುತ್ತೇವೆ. ಏನಾದರೂ ಮಾಡಿ ಹಣವನ್ನು ಸ್ವಲ್ಪ ಉಳಿಸಬೇಕು. ನಾವೂ ಸಹ programmes, projects ಕಡೆ ಕೇಂದ್ರಿಕರಣ ಮಾಡಬೇಕು. ಖಂಡಿತವಾಗಿ ಆ ದಿಕ್ಕಿನಲ್ಲಿ ಏನೇನು ಮಾಡಲು ಸಾಧ್ಯ ಅದೆಲ್ಲವನ್ನು ಸರ್ಕಾರ ಮಾಡುತ್ತದೆ. ಅನಿವಾರ್ಯ ಪರಿಸ್ಥಿತಿಯಿಂದ,...

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅನವಶ್ಯಕ ವೆಚ್ಚಗಳನ್ನು ಕಡಿಮೆ ಮಾಡಿ, ಅದು ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುತ್ತದೆ. ಅದೆಲ್ಲವನ್ನು ಬಂದ್ ಮಾಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ದಿವಸ ಸಭೆಯಲ್ಲಿ ಎಲ್ಲರನ್ನೂ ಕರೆಸಿ, ಏನು ಮಾಡಬೇಕೆಂಬುದನ್ನು ಯೋಚನೆ ಮಾಡೋಣ. ಇದರಲ್ಲಿ ಮರ್ಯಾದೆ ಹೋಗುವಂತಹದು ಏನೂ ಇಲ್ಲ ಎಂದು ಹೇಳಿದ್ದಾರೆ. But we have to run the government and the state administration. ದಯವಿಟ್ಟು ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, fiscal deficit ಶೇಕಡಾ 3 ರಿಂದ ಶೇಕಡಾ 4 ರಷ್ಟು ಮಾಡಲು ಕೇಳಿದ್ದೆವು. ಆದರೆ, ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿರುವುದರಿಂದ ನಾವು ಈ ವಿಧೇಯಕದಲ್ಲಿ ಭಾಗಿಯಾಗುವುದಕ್ಕೆ ತಯಾರಿಲ್ಲ. We will boycott the House. ನಾವು ಸದನದಿಂದ ಹೊರಗೆ ಹೋಗುತ್ತೇವೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರುಃ–** "ಖಂಡ 2 ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಅಂಗೀಕೃತವಾದ ರೂಪಲ್ಲಿರುವ 2020ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

. **ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ **ಒಪ್ಪಿಗೆ** ನೀಡಲಾಯಿತು</u>

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿರುವ ಇನ್ನೂ 3 ವಿಧೇಯಕವನ್ನು ತೆಗೆದುಕೊಳ್ಳಿ.

**ಸಭಾಪತಿಯವರು:–** ವಿರೋಧ ಪಕ್ಷದ ಸದಸ್ಯರು ಯಾರು ಸದನದಲ್ಲಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿಧೇಯಕ ಅಂಗೀಕರಿಸಿದ ಮೇಲೆ ಬರುತ್ತಾರೆ. ಬಿ.ಡಿ.ಎ. ಗೆ ಸಂಬಂಧಿಸಿದ ವಿಧೇಯಕವನ್ನು ತೆಗೆದುಕೊಳ್ಳಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಸದನದ ಒಳಗೆ ಪ್ರವೇಶಿಸಿದರು)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಊಟದ ಸಮಯ ಮುಗಿಯಲಿ.

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸದಸ್ಯರಾದ ಶ್ರೀ ಹರಿಪ್ರಸಾದ್‌ರವರೇ 3 ವಿಧೇಯಕವನ್ನು ಅಂಗೀಕರಿಸಿದರೆ, ಊಟದ ಸಮಯ ಮುಗಿದ ಮೇಲೆ ಆರಾಮವಾಗಿ ಚರ್ಚೆ ಮಾಡಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, 3 ವಿಧೇಯಕ ಮಾತ್ರ ಇದೆ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮೂರು ವಿಧೇಯಕವಾಗಲಿ, ಮೂನ್ನೂರು ವಿಧೇಯಕವಾಗಲಿ ಊಟದ ಸಮಯ ಮುಗಿದ ನಂತರ ತೆಗೆದುಕೊಳ್ಳೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:–** 15 ನಿಮಿಷಗಳಂತೆ 3 ವಿಧೇಯಕವನ್ನು ಪಾಸ್ ಮಾಡಿಕೊಡಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆರ್ಥಿಕ ಹೊಣೆಗಾರಿಕೆ ವಿಧೇಯಕ ಮುಗಿದಿದೆ. ಸದನವನ್ನು adjourn ಮಾಡಿಬಿಡಿ. ನೀವು commit ಮಾಡಿದ್ದೀರಿ. ಆರ್ಥಿಕ ಹೊಣೆಗಾರಿಕೆ ವಿಧೇಯಕವನ್ನು ಪಾಸ್ ಮಾಡಿದ್ದು, ನಮ್ಮ ಸದಸ್ಯರಿಗೆ ನಾನು ಏನೆಂದು ಉತ್ತರ ನೀಡಬೇಕು ಎಂಬುದನ್ನು ತಾವೇ ಹೇಳಿ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:–** ತಮ್ಮ ಆಶ್ವಾಸನೆ ಮೇಲೆ ಈಗಾಗಲೇ ನಮ್ಮ ಸದಸ್ಯರೆಲ್ಲರೂ ಹೊರಗೆ ಹೋಗಿದ್ದರು.

(ಗೊಂದಲ)

**ಸಭಾಪತಿಯವರು:–** ಈಗ ಸದನವನ್ನು ಭೋಜನಕ್ಕಾಗಿ 3 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(908)/26–9–2020/ಎಲ್‌ಎಂ/ವಿಕೆ/3–30**

**(ಮಧ್ಯಾಹ್ನ 2 ಗಂಟೆ 17 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 32 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಗಳೆ, ನಾನು ನಿಯಮ 330ರಲ್ಲಿ ಒಂದು ನೋಟಿಸ್ ಕೊಟ್ಟಿದ್ದೇನೆ.

**ಸಭಾಪತಿಗಳು:–** ಬಿಲ್‌ಗಳಾದ ಮೇಲೆ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಯು.ಬಿ.ವೆಂಕಟೇಶ್:–** ಬೆಳಗ್ಗೆ ಹಣಕಾಸು ವಿಧೇಯಕ ಪಾಸ್ ಆಗಿದೆ. ನಮ್ಮ ವಿಷಯಗಳನ್ನು ತೆಗೆದುಕೊಳ್ಳಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಗಳು:–** ಇನ್ನು ವಿಧೇಯಕಗಳಿವೆ, ಆದಮೇಲೆ ಉಳಿದ ವಿಷಯಗಳನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಜಲಸಂಪನ್ಮೂಲ ಸಚಿವರು ಬಂದಿದ್ದಾರೆ. ಯುಕೆಪಿ ಬಗ್ಗೆ ಉತ್ತರ ಕೊಡಿಸಬೇಕು.

**<u>8.ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ</u>**

**ವಿಷಯ:– ಉತ್ತರ ಕರ್ನಾಟಕದ ಮಹತ್ವದ ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗೆ ಚಾಲನೆ ನೀಡಿ ಉತ್ತರ ಕರ್ನಾಟಕ ಭಾಗದ ಸುಮಾರು 7 ಜಿಲ್ಲೆಗಳ 14.67ಲಕ್ಷ ಎಕರೆ ಪ್ರದೇಶಗಳಿಗೆ 130 ಟಿಎಂಸಿ ನೀರನ್ನೊದಗಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸುವ ಹಾಗೂ ಮಹದಾಯಿ ಯೋಜನೆಗೆ ಹೊರಡಿಸಿರುವ ಗೆಜೆಟ್ ನೋಟಿಫಿಕೇಶನ್ ರೀತ್ಯ ಈ ಯೋಜನೆಗೂ ಗೆಜೆಟ್ ನೋಟಿಫಿಕೇಷನ್ ಹೊರಡಿಸುವ ಬಗ್ಗೆ.**

– – –

**ಶ್ರೀ ರಮೇಶ್ ಲ.ಜಾರಕಿಹೊಳಿ(ಜಲಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಬಸವರಾಜ ಪಾಟೀಲ್ ಇಟಗಿಯವರು, ಶ್ರೀ ಪ್ರಕಾಶ್ ರಾಠೋಡ್‌ರವರು, ಶ್ರೀ ಬಸವರಾಜ ಹೊರಟ್ಟಿಯವರು ಇನ್ನುಳಿದ ಎಲ್ಲಾ ಸದಸ್ಯರು ಬಹಳ ಕಳಕಳಿಯಿಂದ ಯುಕೆಪಿ ಬಗ್ಗೆ ಮಾತನಾಡಿದ್ದಾರೆ. ನಿನ್ನೆಯೇ ನಾನು ಉತ್ತರ ಕೊಡಬೇಕಾಗಿತ್ತು, ಆದರೆ ಶ್ರೀ ಸುರೇಶ್ ಅಂಗಡಿಯವರು ನಿಧನ ಹೊಂದಿದ್ದರಿಂದ ದೆಹಲಿಗೆ ಹೋಗಿದ್ದೆ. ಅದಕ್ಕಾಗಿ ಇಂದು ಉತ್ತರವನ್ನು ಕೊಡುತ್ತೇನೆ.

**(ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪನ್ನು ದಿನಾಂಕ:30-12-2010ರ ಹಾಗೂ ಮುಂದುವರೆದ ತೀರ್ಪು ದಿನಾಂಕ:29-11-2013 ರಂದು ನೀಡಲಾಗಿರುತ್ತದೆ. ದಿನಾಂಕ: 16-9-2011ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪನ್ನು ಗೆಜೆಟ್ ಪ್ರಕಟಣೆ ಮಾಡದಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲಾಗಿದೆ. ಆದ್ದರಿಂದ ನ್ಯಾಯಾಧೀಕರಣದ ತೀರ್ಪನ್ನು ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸಿರುವುದಿಲ್ಲ. ಏಕೆಂದರೆ ಆಂಧ್ರ ಮತ್ತು ತೆಲಂಗಾಣ ಎರಡು ರಾಜ್ಯಗಳ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ವಿಶೇಷ ಅನುಮತಿ ಅರ್ಜಿಗಳು ಇತ್ಯರ್ಥವಾಗಬೇಕಾಗಿರುತ್ತದೆ. ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟ 524.256 ಮೀ.ವರೆಗೆ ಎತ್ತರಿಸುವುದು ಕೇಂದ್ರ ಸರ್ಕಾರದಿಂದ ಹೊರಡಿಸುವ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನ ಅಧಿಸೂಚನೆಗೆ ಒಳಪಟ್ಟಿರುತ್ತದೆ. ಕೇಂದ್ರ ಸರ್ಕಾರದ ಜಲಸಂಪನ್ಮೂಲ ಸಚಿವರಾದ ಶ್ರೀ ಶೇಖಾವತ್‌ರವರನ್ನು ಹಲವಾರು ಬಾರಿ ಭೇಟಿಯಾಗಿ ಮನವಿ ಮಾಡಿಕೊಳ್ಳಲಾಗಿದೆ. ಕಾವೇರಿ ಮತ್ತು ಮಹಾದಾಯಿ ಯೋಜನೆಗಳಿಗೆ ಮಾಡಿದ ರೀತಿಯಲ್ಲಿ ಗೆಜೆಟ್ ಮಾಡಲು ಹಲವಾರು ಬಾರಿ ಮನವಿ ಮಾಡಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು ಕೇಂದ್ರಕ್ಕೆ ಹೋದಾಗ ಈ ವಿಚಾರವಾಗಿ ಕೇಂದ್ರ ಸರ್ಕಾರದ ಜಲಸಂಪನ್ಮೂಲ ಸಚಿವರಿಗೆ ಭೇಟಿಯಾಗಿ ಮನವಿ ಮಾಡಿಕೊಂಡಿದ್ದಾರೆ. ಆದಷ್ಟು ಶೀಘ್ರ ಈ ಕೆಲಸವಾಗುವ ಆಶಾಭಾವನೆ ಇದೆ. ಕೋವಿಡ್-19 ಇರುವುದರಿಂದ ಇನ್ನು ಸುಪ್ರೀಮ್ ಕೋರ್ಟ್‌ನಲ್ಲಿ ಕಾರ್ಯಕಲಾಪಗಳು ನಡೆದಿರುವುದಿಲ್ಲ. ನ್ಯಾಯಾಲಯ ಕಾರ್ಯ ಪ್ರಾರಂಭವಾದ ಮೇಲೆ ನಮ್ಮ ವಿಚಾರವನ್ನು ತೆಗೆದುಕೊಳ್ಳುತ್ತಾರೆ. ಈಗಾಗಲೆ ನಮ್ಮ ಕಾನೂನು ತಂಡದವರು ಇದಕ್ಕಾಗಿ ಎಲ್ಲಾ ತಯಾರಿ ಮಾಡಿಕೊಂಡಿದ್ದಾರೆ. ಆದಷ್ಟು ಬೇಗ ನ್ಯಾಯಾಧೀಕರಣದಲ್ಲಿ ತೀರ್ಪು ಬರುವಂತೆ ಪ್ರಯತ್ನ ಮಾಡುತ್ತೇವೆ. ಈ ಕೆಲಸ 10 ವರ್ಷಗಳಿಂದ ಪೆಂಡಿಂಗ್ ಇದೆ. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಬಸವರಾಜ ಪಾಟೀಲ್ ಇಟಗಿಯವರು, ಶ್ರೀ ಪ್ರಕಾಶ್ ರಾಠೋಡ್‌ರವರು, ಶ್ರೀ ಬಸವರಾಜ ಹೊರಟ್ಟಿಯವರು ಬಹಳಷ್ಟು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ ಹಣಕಾಸಿನ ಎಷ್ಟೇ ತೊಂದರೆ ಇದ್ದರು ನಮ್ಮ ರಾಜ್ಯದ ಪ್ರತಿಷ್ಠಿತ ಯೋಜನೆ ಇದ್ದಾಗಿರುವುದರಿಂದ ಈ ಕೆಲಸವನ್ನು ಮಾಡುತ್ತೇವೆ. ಈ ಯೋಜನೆಯಿಂದ ಬಿಜಾಪುರ, ಬಾಗಲಕೋಟೆ, ಯಾದಗಿರಿ, ರಾಯಚೂರ, ಗದಗ, ಕೊಪ್ಪಳ ಈ ಜಿಲ್ಲೆಗಳಡಿ 14.67 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿದೆ. ಆದ್ದರಿಂದ ಎಲ್ಲರೂ ಸೇರಿ ಕೇಂದ್ರದ ಮೇಲೆ ಒತ್ತಡ ಹಾಕಿ, ಎಲ್ಲರೂ ಸೇರಿ ಈ ಕೆಲಸವನ್ನು ಮಾಡಬೇಕಾಗಿದೆ. ಈ ಯೋಜನೆ ಎಲ್ಲಾ ಬರಗಾಲ ಪೀಡಿತ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರದೇಶಗಳಿಗೆ ಅನುಕೂಲವಾಗುತ್ತದೆ. ಆ ಪ್ರದೇಶಗಳಿಗೆ ಕುಡಿಯುವ ನೀರಿಗಾಗಿ ಮತ್ತು ನೀರಾವರಿ ಯೋಜನೆಗಳಿಗೂ ಅನುಕೂಲವಾಗುತ್ತದೆ. ಈ ಕೊರೋನಾ ಸಮಸ್ಯೆಯಿಂದ ಹಣಕಾಸಿನ ಸಮಸ್ಯೆ ತುಂಬಾ ಇದೆ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಪಕ್ಷಾತೀತವಾಗಿ ಎಲ್ಲರೂ ಸೇರಿ ಕೇಂದ್ರದ ಮೇಲೆ ಒತ್ತಾಯ ತಂದು ಈ ಯೋಜನೆಯನ್ನು ಮಾಡಬೇಕಾಗಿದೆ. ಕಳೆದ ಬಜೆಟ್‌ನಲ್ಲಿ 10,000 ಕೋಟಿ ರೂ.ಗಳನ್ನು ಈ ಯೋಜನೆಗಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇಟ್ಟಿದ್ದಾರೆ. ಇನ್ನೊಂದು ಸಾರಿ ಕೇಂದ್ರಕ್ಕೆ ಹೋಗಿ ಕೇಂದ್ರ ಮಂತ್ರಿಗಳನ್ನು ಭೇಟಿ ಮಾಡಿ ಆಲಮಟ್ಟಿ ಡ್ಯಾಂ ನ ಎತ್ತರವನ್ನು ಹೆಚ್ಚಿಸಲು ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ಕನಾಲೆ ಕೆಲಸದಲ್ಲಿಯ ಅವ್ಯವಹಾರಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದು ಲೋಕಾಯುಕ್ತದಲ್ಲಿ ಪೆಂಡಿಂಗ್ ಇದೆ. ಅಲ್ಲಿಂದ ವರದಿ ಬಂದಮೇಲೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮೊನ್ನೆ ಆಲಮಟ್ಟಿಗೆ ಮಾನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟಾಗ ಆ ಭಾಗದ ಎಲ್ಲ ಶಾಸಕರು ಹೋಗಿ ಅವರನ್ನು ಭೇಟಿ ಒತ್ತಾಯ ಮಾಡಿದ್ದೇವೆ. ಎಷ್ಟೇ ಹಣಕಾಸಿನ ತೊಂದರೆ ಬಂದರು ಸಹ ಈ ಯೋಜನೆ ಪೂರ್ಣ ಮಾಡಿ ರೈತರಿಗೆ ಅರ್ಪಿಸುತ್ತೇವೆ ಎಂದು ತಮ್ಮ ಮುಖಾಂತರ ಸದಸ್ಯರಿಗೆ ಹೇಳಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಗೆಜೆಟ್ ಪ್ರಕಟಣೆ ಆಗುವ ಅವಶ್ಯಕತೆ ಬಹಳ ಇದೆ. ಕಾವೇರಿ ಮತ್ತು ಮಹಾದಾಯಿ ಎರಡು ವ್ಯಾಜ್ಯಗಳು ಸುಪ್ರಿಂ ಕೋರ್ಟ್‌ನಲ್ಲಿದ್ದಾಗಲೂ subject to the decision ಎಂದು Notification ಆಗಿದೆ. ಈಗ ಸರ್ಕಾರಕ್ಕೆ ಬಹಳ ಒಳ್ಳೆಯ ಅವಕಾಶವಿದೆ. ಏಕೆಂದರೆ ಕೇಂದ್ರದಲ್ಲಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಭಾಜಪ ಸರ್ಕಾರವಿದೆ, ರಾಜ್ಯದಲ್ಲಿ ಭಾರತೀಯ ಜನತಾ ಪಾರ್ಟಿ ಸರ್ಕಾರವಿದೆ. ಎರಡು ಕಡೆಗಳಲ್ಲಿ ಒಂದೇ ಪಕ್ಷದ ಸರ್ಕಾರವಿರುವುದರಿಂದ ಇದೊಂದು ಸುವರ್ಣವಕಾಶ. Notification ಮಾಡಲು ತೊಂದರೆಯಿಲ್ಲ. ಕಾವೇರಿ ಮತ್ತು ಮಹದಾಯಿ ವ್ಯಾಜ್ಯಗಳು ಕೋರ್ಟ್ ಮುಂದೆ ಇದ್ದಾಗಲೂ pending ಮಾಡಲಾಗಿದೆ. ಒಕ್ಕೂಟದ ಮುಖ್ಯಸ್ಥರು ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು Federal Structure ಮುಖ್ಯಸ್ಥರು. ಅವರು ಆಂಧ್ರ, ತೆಲಂಗಾಣ, ಮಹಾರಾಷ್ಟ್ರ, ಕರ್ನಾಟಕ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಯಿಸಿ convince ಮಾಡುವಂತಹ capacity ಅವರಿಗೆ ಇದೆ. ಅದರ ಜೊತೆಗೆ ಮಹಾದಾಯಿ ಬಗ್ಗೆ ಹೇಗೆ Notification ಮಾಡಲಾಯಿತು, ಕಾವೇರಿ ಮಾಡಲಾಯಿತು Notification ಮಾಡಲಾಗಿದೆ. Litigation

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

pending before the Supreme Court, subject to the decision ಎಂದು Notification ಮಾಡುತ್ತೀರಿ. Notification ಆದರೆ ನಮಗೆ clearance ಆಗುತ್ತದೆ. ಭೂ ಸ್ವಾಧೀನ ಮಾಡಿಕೊಳ್ಳಲು ನಿಮಗೆ ಯಾವುದೆ ತೊಂದರೆಯು ಇರುವುದಿಲ್ಲ. 1,33,876 ಎಕರೆ ಭೂಮಿಯನ್ನು ನೀರಾವರಿ ಮಾಡುವುದಾಗಲಿ, 25,000ಕ್ಕಿಂತ ಹೆಚ್ಚು ಮನೆಗಳನ್ನು ಸ್ವಾಧೀನಪಡಿಸಿಕೊಳ್ಳುವುದಾಗಲಿ. ಇವು ಎರಡು ಮಹತ್ವದ ಕೆಲಸಗಳು. 22 ಹಳ್ಳಿಗಳಿಗೆ ಪುನರ್ವಸತಿ ನಿರ್ಮಿಸುವಂತಹ ಕೆಲಸ ತಮ್ಮಿಂದ ಆಗಬೇಕಾಗಿದೆ. 1ನೇ ಮತ್ತು 2ನೇ ಹಂತದ ಯೋಜನೆಗಳು ಬಹಳ ದೊಡ್ಡ ಯೋಜನೆಗಳು ಅವು.

(ಮುಂದು)

(909)26-09-2020(03-40) ಬಿಎಸ್‌ಡಿ-ಜಿಆರ್

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ಇದು ಬಹಳ ದೊಡ್ಡ ಯೋಜನೆಯಾಗಿದ್ದು, 1 ಮತ್ತು 2ನೇ ಹಂತದಲ್ಲಿ 15 ಲಕ್ಷ ಎಕರೆ ನೀರಾವರಿಯಾಗಿದೆ. 1 ಮತ್ತು 2ನೇ ಹಂತದಲ್ಲಿ 2,70,000 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, 176 ಹಳ್ಳಿಗಳನ್ನು, 136 ಪುನರ್ವಸತಿ ಕೇಂದ್ರಗಳನ್ನು ರಚಿಸಿ ಕೆಲಸ ಮಾಡಿದ್ದಾರೆ. ರಾಜ್ಯ ತನ್ನ ಸಂಪನ್ಮೂಲದಿಂದ ಖರ್ಚು ಮಾಡಿದೆ. 78 ಸಾವಿರ structure ಗಳನ್ನು acquisition ಮಾಡಿದ್ದಾರೆ. ಈಗ 25 ಸಾವಿರ structure ಉಳಿದಿದೆ. One-third structure ಉಳಿದಿದೆ. ನಂತರ 1 ಮತ್ತು 2ನೇ ಹಂತದಲ್ಲಿ 176 ಹಳ್ಳಿಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಅದು ಯಾವುದೇ ಸರ್ಕಾರ ಇರಬಹುದು. ಆದರೆ ಈಗ 22 ಹಳ್ಳಿಗಳು ಮಾತ್ರ ಉಳಿದಿವೆ. 2,70,000 ಎಕರೆಗಿಂತ ಹೆಚ್ಚು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು, ಈಗ 1,30,000 ಎಕರೆ ಉಳಿದಿದೆ. Say about, ಈಗ 25 ರಷ್ಟು ಕೆಲಸ ಮಾತ್ರ ಉಳಿದಿದೆ. 75% of the work has already been done. 25ರಷ್ಟು ಕೆಲಸ ಮಾಡಲು ಇವತ್ತಿನ ಇತಿಮಿತಿಗೆ ಬಹಳ ಎನಿಸಬಹುದು. ಇವತ್ತು ರೂ.51 ಸಾವಿರ ಕೋಟಿ ಎಂದು ಹೇಳಿದ್ದು, ಇವತ್ತಿನ budget ಗಾತ್ರ ಏನಿದೆ, ರೂ.2.44 ಲಕ್ಷ ಕೋಟಿ ಬಜೆಟ್ ಇದೆ. ಹಿಂದೆ ಇದು ಪ್ರಾರಂಭವಾದಾಗ ರೂ.10 ಸಾವಿರ ಕೋಟಿ budget ಇದ್ದಾಗ ten percent ಅಂದರೆ ರೂ. 1 ಸಾವಿರ ಕೋಟಿಯನ್ನು ಇಡುತ್ತಿದ್ದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, 1 ಮತ್ತು 2ನೇ ಹಂತದಲ್ಲಿ 75% work ಆಗಿದ್ದು, 25% work ಮಾತ್ರ ಉಳಿದಿದೆ. ಈಗ ರೂ.50 ಸಾವಿರ ಕೋಟಿಯನ್ನು ಎಲ್ಲಿಂದ ತರೋಣ ಎಂದು ಹೇಳುತ್ತಾರೆ. Budget ಗಾತ್ರ ರೂ.2.44 ಲಕ್ಷ ಕೋಟಿಯಾಗಿದ್ದು, ಇದು ಪ್ರಾರಂಭವಾದಾಗ ನಮ್ಮ ರಾಜ್ಯದ budget ಕೇವಲ ರೂ.10 ಸಾವಿರ ಕೋಟಿಯಾಗಿತ್ತು. Ten percent ಅದರೆ ರೂ.1 ಸಾವಿರ ಕೋಟಿ ಆಗುತ್ತದೆ. ರೂ.10 ಸಾವಿರ ಕೋಟಿ budge ಇದ್ದಾಗ ಇದು ಪ್ರಾರಂಭವಾಗಿದೆ. ಈಗ budget ಗಾತ್ರ ರೂ.10 ಸಾವಿರ ಕೋಟಿಯಿಂದ ರೂ.2.44 ಲಕ್ಷ ಕೋಟಿಗಳಾಗಿದ್ದು, proportionate increase ಆಗಿದೆ. ಇವತ್ತು ರೂ.50 ಸಾವಿರ ಕೋಟಿ ಹಣ ಹೆಚ್ಚು ಅನಿಸಬಹುದು. ಆದರೆ budget ಗಾತ್ರವು ದೊಡ್ಡದಾಗಿದೆಯಲ್ಲವೇ? ನೀವು 10% ಅಂದರೂ ರೂ.25 ಸಾವಿರ ಕೋಟಿ ಆಗುತ್ತದೆ. ಇದನ್ನು ಎರಡು ವರ್ಷಗಳಲ್ಲಿ ಮುಗಿಸಬಹುದು. ರೂ.50 ಸಾವಿರ ಕೋಟಿ ಅಂದರೆ ಎರಡು ವರ್ಷದ ಬಜೆಟ್‌ನಲ್ಲಿ 10% ಇಟ್ಟರೂ ಮುಗಿಯುತ್ತದೆ. ಇಂತಹ ಪ್ರತಿಷ್ಠಿತ ಯೋಜನೆಯಿಂದ 7 ಜಿಲ್ಲೆಗಳಿಗೆ ಲಾಭವಾಗುತ್ತದೆ. ಉತ್ತರ ಕರ್ನಾಟಕದ ಬಾಗಲಕೋಟೆ, ಬಿಜಾಪುರ, ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಗದಗ್ ಜಿಲ್ಲೆಗಳಲ್ಲಿ 15 ಎಕರೆ ನೀರಾವರಿಯಾಗುತ್ತದೆ. ಇದನ್ನೇ drip irrigation ಅಳವಡಿಸಿದರೆ 30 ಲಕ್ಷ ಎಕರೆ ನೀರಾವರಿಯಾಗುತ್ತದೆ. ಇದರಿಂದ ಕೇವಲ ಕರ್ನಾಟಕ ರಾಜ್ಯದ ವರಮಾನವಲ್ಲದೇ ಇಡೀ ಭಾರತ ದೇಶದ ವರಮಾನ ಹೆಚ್ಚಾಗುವಂತಹ ಪ್ರತಿಷ್ಠಿತ ಯೋಜನೆಯಾಗಿದೆ. ಉತ್ತರ ಕರ್ನಾಟಕ ಹಿಂದುಳಿದೆ, ಹಾಗೆ-ಹೀಗೆ, ಬಡತನ, ನೋವು, ದುಃಖ, ದುಮ್ಮಾನ ಇವೆಲ್ಲವುಗಳನ್ನು ಪರಿಹಾರ ಮಾಡಬೇಕೆಂದರೆ ಕೃಷ್ಣ ಮೇಲ್ದಂಡೆ ಯೋಜನೆಗೆ ಆದ್ಯತೆ ಕೊಡಬೇಕು. ಇದರ ಬಗ್ಗೆ ಯಾವುದೇ ವಿಚಾರ ಮಾಡದೇ ಏನಾದರೂ ಮಾಡಿ ಕಾರ್ಯಗತ ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು ಪ್ರಥಮ ಬಾರಿಗೆ ಈ ಸದನಕ್ಕೆ ಬಂದಾಗ ಅವರನ್ನು ಅಭಿನಂದಿಸಿ ಏನನ್ನೂ ಕೇಳದೇ ಕೃಷ್ಣ ಮೇಲ್ದಂಡೆ ಯೋಜನೆಯ 3 ನೇ ಹಂತದ ಕಾಮಗಾರಿ ಮುಗಿಸಿಕೊಡಬೇಕು, ಹಣ ಇಲ್ಲ ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ. You can beg, borrow or steal and you get the III stage of U.K.P., completed ಎಂದು ಅವರಿಗೆ request ಮಾಡಿಕೊಂಡಿದ್ದೇನೆ. ಅದರಂತೆ ಅವರು ಸಕಾರಾತ್ಮಕವಾಗಿ ಉತ್ತರವನ್ನು ನೀಡಿದ್ದರು. ಈಗ ಕೋವಿಡ್ ಇರುವುದು ಅರ್ಥವಾಗುತ್ತದೆ. ನಾವೇ ಅಧಿಕಾರದಲ್ಲಿದ್ದರೂ ತೊಂದರೆ ಇರುತ್ತಿತ್ತು. I am a practical man. ಸುಮ್ಮನೆ ಹಾಗೆ ಮಾತನಾಡಿ ಕಂಠ ಶೋಷಣೆ ಮಾಡಿದರೆ ಪ್ರಯೋಜನವಾಗುವುದಿಲ್ಲ. ಉತ್ತರ ಕರ್ನಾಟಕದ 7 ಜಿಲ್ಲೆಗಳ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರವಾಗಿ ಮಾನ್ಯ ಸಭಾಪತಿಯವರ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವುದೇ ಸ್ಥಿತಿಯಲ್ಲಿ ಎಲ್ಲಾ ಕೆಲಸಗಳನ್ನು ಬದಿಗಿಟ್ಟು .......... ಏಕೆಂದರೆ ಅವರು Treasury Bench ಕುಳಿತುಕೊಳ್ಳಲು ಆ ಭಾಗದ ಜನ ಹೆಚ್ಚು ಮತ ಹಾಕಿ ಶಾಸಕರನ್ನು ಆಯ್ಕೆ ಮಾಡಿರುವುದೇ ಕಾರಣ. 28 ಸಂಸತ್ ಸದಸ್ಯರಲ್ಲಿ 26 ಮಂದಿ ಆಯ್ಕೆಯಾಗಿದ್ದು, ಉತ್ತರ ಕರ್ನಾಟದಕ ಋಣ ಬಹಳ ಇದ್ದು, ಜನರು ಇಲ್ಲಿಯೂ ಸಂಪೂರ್ಣವಾಗಿ ಆಶೀರ್ವಾದ ಮಾಡಿ ಅಧಿಕಾರಕ್ಕೆ ತಂದಿದ್ದಾರೆ. ಉತ್ತರ ಕರ್ನಾಟಕದ ಜನ ಮಾನ್ಯ ನರೇಂದ್ರ ಮೋದಿಯವರನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದ್ದಾರೆ. ಅದಕ್ಕೆ ನನ್ನ ಕಳಕಳಿ ಏನೆಂದರೆ, ಯಾವುದೇ ಸ್ಥಿತಿಯಲ್ಲಿ, by hook or crook, you can beg, borrow or steal, you have to complete that project. ಇದರಿಂದ ಉತ್ತರ ಕರ್ನಾಟಕ ಅಥವಾ ರಾಜ್ಯದ ವರಮಾನ ಮಾತ್ರ ಹೆಚ್ಚಾಗುವುದಿಲ್ಲ, ಇಡೀ ರಾಷ್ಟ್ರದ ವರಮಾನ ಹೆಚ್ಚಾಗುತ್ತದೆ. ಇದನ್ನು ಮಾಡುವುದರಿಂದ ಇಡೀ ಇತಿಹಾಸ ಪುಟದಲ್ಲಿ ಅವರು ಅಜರಾಮರವಾಗಿ ಉಳಿಯುತ್ತಾರೆ. ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಿದ ಮೈಸೂರು ಮಹಾರಾಜರು ಮತ್ತು ಸರ್. ಎಂ. ವಿಶ್ವೇಶ್ವರಯ್ಯನವರ photo ಗಳನ್ನು ಮನೆ ಮನೆಗಳಲ್ಲಿ ಹಾಕಿದ್ದಾರೆ. ಬೆಳಗ್ಗೆ ಎದ್ದ ಕೂಡಲೇ ಯಾವ ದೇವರಿಗೂ ನಮಸ್ಕಾರ ಮಾಡುವುದಿಲ್ಲ, ಇವರಿಬ್ಬರ joint photo ಗೆ ಊದುಗಡ್ಡಿ ಹಚ್ಚಿ, ವಿಭೂತಿ ಹಚ್ಚಿ, ಕುಂಕುಮ ಹಚ್ಚಿ ನಮಸ್ಕಾರ ಮಾಡುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಅದಕ್ಕೆ ಬಹಳ ಮಹತ್ವದ, ಪ್ರತಿಷ್ಠಿತ ಹಾಗೂ ಬದುಕಿನ ಯೋಜನೆಯಾಗಿದೆ. ಕೃಷ್ಣೆ ನಮ್ಮ ಜೀವನದಿಯಾಗಿದೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಈ ಕೆಲಸ ಆದರೆ ಮಾನ್ಯ ಸತೀಶ್ ಸಾಹುಕಾರರ photo ಹಾಕಬೇಕೆಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಮಂತ್ರಿಗಳು ನಮ್ಮ ಭಾಗದವರಾಗಿದ್ದು, ನಾನು ಹಿಂದೆ ಮಾತನಾಡಿದಾಗ ಅವರು ಇರಲಿಲ್ಲ, ಅವರ ಬಾಯಿಯಿಂದ ನುಡಿಮುತ್ತುಗಳು ಬರಲಿ ಎಂದು ನಾನು ಇಲ್ಲಿಯವರೆಗೂ ತಡೆದಿದ್ದೇನೆ. ಮಾನ್ಯ ಕೇಂದ್ರ ಸಚಿವರು ಹಠಾತ್ ಆಗಿ ನಿಧನ ಹೊಂದಿದ್ದಕ್ಕೆ ಹೋಗಿದ್ದರು. ನಾವು ಆ ದುಃಖದಲ್ಲಿ ಭಾಗಿಯಾಗಿದ್ದೇವೆ. ಮಾನ್ಯ ಸಚಿವರು ಇದರ ಬಗ್ಗೆ ವಿಶೇಷ ಆಸಕ್ತಿ ವಹಿಸಬೇಕು. ಇದು ಅವರ ಭಾಗದ ಯೋಜನೆ. ಅವರು ಇತಿಹಾಸ ಪುಟದಲ್ಲಿ ಅಜರಾಮರವಾಗಿ ಉಳಿಯುತ್ತಾರೆ. ಇದು ಬಹಳ ಮಹತ್ವದ ಯೋಜನೆ. ಜನರು ಕಾಲಕಾಲಕ್ಕೆ ಅನೇಕ ಶತಮಾನಗಳವರೆಗೆ ಅವರನ್ನು ನೆನೆಸುತ್ತಾರೆ. ಆ ದೃಷ್ಟಿಯಿಂದ ತಮ್ಮ ಮೂಲಕ ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Notification ಮಾಡಿಸುವ ಕೆಲಸವನ್ನು ಮಾಡಬೇಕು. Notification ಮಾಡುವುದರ ಜೊತೆಗೆ ಈ ಯೋಜನೆಗೆ ಏನಾದರೂ ಮಾಡಿ ಹಣ ತರಬೇಕು. ಈ ಯೋಜನೆಯನ್ನು ಎರಡು ವರ್ಷಗಳಲ್ಲಿ ಅಂದರೆ ಅವರ ಅವಧಿಯಲ್ಲಿ ಮುಗಿಸಬೇಕು. ಈ ಕೆಲಸವನ್ನು ಮುಗಿಸುತ್ತಾರೆ ಎಂಬ ವಿಶ್ವಾಸದಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನದಲ್ಲಿ ಇರುವುದು ಬಹಳ ಒಳ್ಳೆಯದ್ದಾಗಿದೆ. ಮಾನ್ಯ ಸಚಿವರಲ್ಲಿ ಮನವಿ ಏನೆಂದರೆ ಇದು ಜ್ವಲಂತ ಸಮಸ್ಯೆಯಾಗಿದ್ದು, ಅವರ ಲಿಖಿತ ಉತ್ತರದಲ್ಲಿ ಮುಳವಾಡ, ಚಿಮ್ಮಲಗಿ, ಇಂಡಿ, ನಾರಾಯಣಪುರ, ರಾಂಪುರ್ ಸೇರಿದಂತೆ 9 ಏತ ನೀರಾವರಿಗಳಿದ್ದು, ಈಗಾಗಲೇ N.R.B.C., 0 to 138 k.m., N.L.B.C., - ಆ ಕಾಲುವೆಗಳೆಲ್ಲವನ್ನು complete ಮಾಡಿದ್ದಾರೆ. ನಂತರ ನಮ್ಮ ಸರ್ಕಾರ ಇದ್ದಾಗ ಮಾನ್ಯ ಎಂ.ಬಿ. ಪಾಟೀಲ್ ರವರು ಇಡೀ ಬಿಜಾಪುರ ಜಿಲ್ಲೆಯ complete ಕೆರೆಗಳಿಗೆ ನೀರು ಕಾರ್ಯಕ್ರಮ ಮಾಡಿ, ಕಾಲುವೆ complete ಮಾಡಿದರು. 123 T.M.C., ನೀರು ಯಾರಿಗೂ ಸಾಕಾಗುವುದಿಲ್ಲ. ಇದನ್ನು 519 meter to 524 meter ಮಾಡಿದಾಗ ಮಾತ್ರ ನೀರು ಬರುತ್ತದೆ. ಯಾರು ಮೊದಲು ಇರುತ್ತಾರೋ, ಅವರು ನೀರು ತೆಗೆದುಕೊಳ್ಳುತ್ತಾರೆ. 25, 30, 40 ವರ್ಷಗಳಿಂದ ಕಾಲುವೆ ಆಗಿದೆ. N.R.B.C., N.L.B.C., ಇದರಲ್ಲಿ ಬರುವುದೇ ಇಲ್ಲ. ಏಕೆಂದರೆ A.L.B.C., A.R.B.C., ಮತ್ತು tank filling ಅಲ್ಲಿಯೇ ನೀರು ಹೋಗುತ್ತದೆ. So, ಇದೆಲ್ಲಾ projects almost 90% completion stage ನಲ್ಲಿಯೇ ಇವೆ. ಇನ್ನೇನು lateral ಮಾಡಿ ನೀರು ಹರಿಸುವ ಕೆಲಸ ಎಲ್ಲಾ project ಗಳಲ್ಲಿ ಇದೆ. ಈಗಾಗಲೇ finish ಆದ project ಗಳಲ್ಲಿ ನೀರು ತೆಗೆದುಕೊಳ್ಳುತ್ತಿದ್ದಾರೆ. But, allotment ಏನಿದೆ, N.L.B.C., ಗೆ ಇಷ್ಟಿದೆ, N.R.B.C., ಗೆ ಇಷ್ಟಿದೆ, I.B.C, ಗೆ ಇಷ್ಟಿದೆ, A.R.B.C., ಗೆ ಇಷ್ಟಿದೆ, A.L.B.C., ಗೆ ಇಷ್ಟಿದೆ ಎಂದಿದ್ದರೂ ಯಾವುದಕ್ಕೂ ಸರಿಯಾಗಿ ನೀರು ಮುಟ್ಟುವುದಿಲ್ಲ. ಅದರ ಗಂಭೀರತೆಯನ್ನು ಅರಿತು immediately start ಮಾಡುವ ಕೆಲಸ ಮಾಡಬೇಕು. Court ನಲ್ಲಿ pending ಇರುವುದನ್ನು ಮಾಡಬೇಕು. ಏಕೆಂದರೆ ಅವರು ಸಾಕಷ್ಟು ನಮ್ಮ ಭಾಗದಲ್ಲಿ ತಿರುಗಾಡಿದ್ದು, ಅವರಿಗೆ ನೀರಾವರಿ ಬಗ್ಗೆ ಎಲ್ಲವೂ ಗೊತ್ತಿದೆ. ಅದಕ್ಕಿಂತ ಮೊದಲು immediately start ಮಾಡುವುದೇನೆಂದರೆ, land acquisition ಅನ್ನು start ಮಾಡಬೇಕು. Land

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

acquisition proceedings start ಮಾಡಬೇಕು. ಅಲ್ಲಿಗೆ co-ordinate ಆಗುತ್ತದೆ ಎಂದು ಹೇಳಿ, ಅವರು ಮುಂದಿನ ದಿನಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಾರೆ ಎಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ, ನಿನ್ನೆ ಸವಿಸ್ತಾರವಾಗಿ ಮಾತನಾಡಿದ್ದೇನೆ. ಆಲಮಟ್ಟಿ ಜಲಾಶಯಕ್ಕೆ ಈಗಾಗಲೇ 5 distributaries ಇದೆ. ಆ 5 distributaries ನಿಡಗುಂದಿ, ಮುದ್ದಾಪುರ, ಹುಲ್ಲೂರು, ಹುಲ್ಲೂರು ತಾಂಡ ಈ ರೀತಿ 5 distributaries ಇದೆ. ಇವುಗಳನ್ನು ಪುನಶ್ಚೇತನ ಮಾಡಬೇಕಾಗಿದೆ. ಅದಕ್ಕೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ? ಏಕೆಂದರೆ ಅವುಗಳನ್ನು ಪುನಶ್ಚೇತನ ಮಾಡದಿದ್ದರೆ.......... ಇನ್ನೊಂದು ನಾರಾಯಣಪುರ dam ನಲ್ಲಿ 13 T.M.C., ನೀರು ಹರಿಯುವುದು ಕಡಿಮೆಯಾಗಿದ್ದು, ಅಲ್ಲಿ ಹೂಳೆತ್ತುವ programme ಸರ್ಕಾರದ ಮುಂದೆ ಇದೆಯೇ? ಮೂರನೆಯದಾಗಿ ಇದನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆಯೇ ಎಂದು ಉತ್ತರ ಕೊಡಬೇಕು.

**(ಮುಂದು)**

**(910) 26.9.2020 3.50 ಪಿಕೆ:ಜಿಆರ್**

**ಶ್ರೀ ಆರ್.ಬಿ.ತಿಮ್ಮಾಪುರ:–**ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಇದ್ದಾಗ, ಹೊಸ ಬಜೆಟ್‌ನಲ್ಲಿ ಮಂಟ್ರು ಕುಡಿಯುವ ನೀರಿನ ಯೋಜನೆ ಸಂಬಂಧ 100 ಕೆರೆಗಳನ್ನು ತುಂಬುವ ಯೋಜನೆಯನ್ನು ಘೋಷಣೆ ಮಾಡಿದ್ದರು. ದಯವಿಟ್ಟು ಇದಕ್ಕೆ ಮಂಜೂರಾತಿ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–**ಮಾನ್ಯ ಸಭಾಪತಿಯವರೇ, ಸದರಿ ಯೋಜನೆಗೆ ರಿವೈಸ್ಡ್ ಕಾಸ್ಟ್ 70 ಸಾವಿರ ಕೋಟಿ ರೂಪಾಯಿಗಳು ಆಗಬಹುದು ಎಂಬ ಅನುಮಾನ ಇದೆ. ಇದರಲ್ಲಿ ಶೇಕಡ 50 ರಷ್ಟು ಭೂಸ್ವಾಧೀನ ಪ್ರಕ್ರಿಯೆಗೆ ಹೋಗುತ್ತದೆ. ಭೂಸ್ವಾಧೀನ ಪ್ರಕ್ರಿಯೆಯನ್ನು ತಾವು ಪೂರ್ವಭಾವಿಯಾಗಿ ಮಾಡಬೇಕಿತ್ತು. ಆದರೆ ಆ ಕೆಲಸ ಆಗಲಿಲ್ಲ. ಮತ್ತೆ ರಿವೈಸ್ ಮಾಡುತ್ತಾ ಹೋದರೆ ರೂ. 1 ಲಕ್ಷ ಕೋಟಿ ಆಗಬಹುದು. ಎಸ್.ಎಲ್.ಪಿ., ಯನ್ನು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಹಾಕಿದ ಹಿನ್ನೆಲೆಯಲ್ಲಿ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

as a matter of abundant precaution, ನಮ್ಮ ಅಡ್ವೋಕೇಟ್‌ಗಳ ಸಲಹೆಯನ್ನು ತೆಗೆದುಕೊಂಡು ನಾವೂ ಕೂಡ ಫೈಲ್ ಮಾಡಿದ್ದೇವೆ, ಫೈನಲ್ ಹಿಯರಿಂಗ್ ಆಗಿದೆ. ಆಂಧ್ರಪ್ರದೇಶದವರು ಮಧ್ಯಲ್ಲಿ ಐ.ಎ., ಹಾಕಿರುವುದರಿಂದ ಅದು ಹಾಗೆ ನಿಂತಿದೆ. ಈ ನಿಟ್ಟಿನಲ್ಲಿ ತಾವು ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ತಿಪ್ಪೇಸ್ವಾಮಿಯವರೇ, you are a learned member. ನಾವು ಮೊದಲನೆಯ ಪ್ಯಾರಾದಲ್ಲಿ 'matter is seized of the Supreme Court' ಎಂದು ಹೇಳಿದ್ದೇವೆ. ನಮ್ಮ ಪ್ಯಾರಾಗ್ರಾಫ್‌ನಲ್ಲಿ ಕ್ಲಿಯರ್ ಕಟ್ ಆಗಿ, ಎಸ್.ಎಲ್.ಪಿ., ಹಾಕಿದ್ದಾರೆ, ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಷನ್ ಮಾಡಕೂಡದು ಎಂದು ಸುಪ್ರೀಂ ಕೋರ್ಟ್‌ನ ನಿರ್ದೇಶನವಿದೆ' ಎಂಬುದನ್ನು ಹೇಳಿದ್ದೇವೆ. What else we have to do unless that is clear? ಮಾನ್ಯ ನಾರೀಮನ್‌ನಂತಹ ಅಡ್ವೋಕೇಟನ್ನು ವಾದ ಮಾಡಲು ಇಟ್ಟಿದ್ದೇವೆ. ಒಂದು ವಾರದಿಂದ ನಾವು ಈ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಕೋರ್ಟ್ ಏನು ತೀರ್ಮಾನ ಮಾಡುತ್ತದೆಯೋ ಅದರಂತೆ ಆಗುತ್ತದೆ. ತಾವು 130 T.M.C., ಗೆ ಮಾಡಬಹುದಾ ಅಥವಾ 173 T.M.C., ಗೆ ಮಾಡಬಹುದಾ ಎಂಬುದನ್ನು ಹೇಳಬೇಕು , because you have worked with the P.W.D., Minister for so many years.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಆ ಅನುಭವದ ಹಿನ್ನೆಲೆಯಲ್ಲಿಯೇ ಹೇಳುತ್ತಿದ್ದೇನೆ. Mahadayi water dispute ನಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣವು ಪೆಂಡಿಂಗ್ ಇದೆ, ಅದು ಇನ್ನೂ judgment ಆಗಿಲ್ಲ. ನೋಟಿಫಿಕೇಷನ್ ಇಶ್ಯೂ ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಕೇಳಿದ್ದೀರಿ. ಈಗ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ನಿಮ್ಮದೇ ಪಕ್ಷದ ಸರ್ಕಾರ ಇದೆ. ಈ ವಿಷಯದಲ್ಲೂ ಅದೇರೀತಿ ಮಾಡಿ ಎಂದು ಕೇಳಬೇಕು. ಈಗಾಗಲೇ 16 irrigation project ಗಳನ್ನು ಕೇಂದ್ರ ಸರ್ಕಾರವು 'ನ್ಯಾಷನಲ್ ಪ್ರಾಜೆಕ್ಟ್' ಎಂದು ಡಿಕ್ಲೇರ್ ಮಾಡಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಈ ಪ್ರಾಜೆಕ್ಟನ್ನು 'ನ್ಯಾಷನಲ್ ಪ್ರಾಜೆಕ್ಟ್' ಎಂದು ಡಿಕ್ಲೇರ್ ಮಾಡಿದರೆ ಶೇಕಡ 90 ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರ ಕೊಡುತ್ತದೆ. ನ್ಯಾಷನಲ್ ಪ್ರಾಜೆಕ್ಟ್ ಎಂದು ಡಿಕ್ಲೇರ್ ಆದರೂ ಅದರಿಂದ ನಮಗೆ ಬಾಧಕವೇನೂ ಆಗುವುದಿಲ್ಲ. ನಮ್ಮ ನೀರನ್ನು ಬೇರೆಯವರಿಗೆ ಹಂಚಿಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕಾಗುತ್ತದೆ ಎನ್ನುವ ಪ್ರಶ್ನೆ ಇಲ್ಲಿಲ್ಲ. ತಾವುಗಳು ಮೊನ್ನೆ ಕೇಂದ್ರ ನೀರಾವರಿ ಸಚಿವರ ಜೊತೆ ಹೋಗಿ ಮಾತನಾಡಿದ್ದನ್ನು ನೋಡಿದೆ. ತಾವು ಅವರ ಜೊತೆ ಒಳ್ಳೆಯ ಸಂಬಂಧ ಇಟ್ಟುಕೊಂಡಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ನೀವು ಏನಾದರೂ ಮಾಡಿ, ನಮ್ಮ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಿ. ನ್ಯಾಷನಲ್ ಪ್ರಾಜೆಕ್ಟ್ ಆಗಬೇಕೆಂದು ನೀವು ಇಲ್ಲಿ ಡಿಲೇ ಮಾಡಬಾರದು. ಇದರ ಹಿನ್ನೆಲೆ ಏನು ಎನ್ನುವುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಸದನದಲ್ಲಿ ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಆಗುವುದಿಲ್ಲ, ಅದಕ್ಕೆ ಕೆಲವು ಅಡೆ-ತಡೆಗಳಿವೆ. 1 ಮತ್ತು 2 ನೇ ಹಂತದ ಪ್ರಾಜೆಕ್ಟ್‌ಗಳನ್ನು ರಾಜ್ಯ ತನ್ನ ಸಂಪನ್ಮೂಲಗಳಿಂದ ಪೂರ್ಣಗೊಳಿಸಿದೆ, ಇನ್ನೂ ಶೇಕಡ 20ರಷ್ಟು ಮಾತ್ರ ಬಾಕಿ ಉಳಿದಿದೆ. ಈ ಹಿಂದೆ ನಾನು 'beg, borrow or steal' ಎಂದು ಹೇಳಿದ್ದೆ, ಹೇಗಾದರೂ ಆದಷ್ಟು ಶೀಘ್ರವಾಗಿ ಈ ಯೋಜನೆ ಮುಗಿಸಬೇಕು. ನೀವು ಎಲ್ಲಿಂದಾದರೂ ಹಣ ತೆಗೆದುಕೊಂಡು ಬನ್ನಿ, ಎರಡು ವರ್ಷದ ಒಳಗೆ, ನಿಮ್ಮ ಅವಧಿ ಮುಗಿಯುವುದರ ಒಳಗೆ ಇದು ಪೂರ್ಣವಾಗಲಿ.

**ಶ್ರೀ ರಮೇಶ ಜಾರಕಿಹೊಳಿ:-**ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲರು ಮತ್ತು ಇತರ ಸದಸ್ಯರು ಹೇಳಿದ ಹಾಗೆ, ಮಹದಾಯಿ ಮತ್ತು ಕಾವೇರಿ ನದಿ ವಿಚಾರ ಬೇರೆಯೇ ಆಗಿತ್ತು. ಅದಕ್ಕೆ ಸ್ಟೇ ಇರಲಿಲ್ಲ. ಇದಕ್ಕೆ ಕ್ಲಿಯರ್ ಕಟ್ ಸ್ಟೇ ಇದೆ. ಸುಪ್ರೀಂ ಕೋರ್ಟ್‌ನ ಅದೇಶ ಬರುವವರೆಗೂ ನಾವು ಇದನ್ನು ಟಚ್ ಮಾಡುವ ಹಾಗಿಲ್ಲ. ಮಹದಾಯಿಯಲ್ಲಿ ಜಲಸಂಪನ್ಮೂಲ ಇಲಾಖೆಯಿಂದ ನೇರವಾಗಿ ಮಾಡಿದ್ದರು. ಆದರೆ, ಇದರಲ್ಲಿ ಕೇಂದ್ರ ಸರ್ಕಾರದಿಂದ ನಿರ್ದೇಶನ ಬರಲೇ ಬೇಕು. ಈ ಕುರಿತು ನಾವು ನಮ್ಮ legal team ಜೊತೆಯಲ್ಲಿ ಮಾತನಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ದಯವಿಟ್ಟು ಒಂದು ಮಾತು ಕೇಳಿ. ನಾನು ಅದನ್ನು ನೋಡಿದ್ದೇನೆ Sorry for the interruption. Basically, I am also an Advocate. ಒಕ್ಕೂಟದ ಮುಖ್ಯಸ್ಥರು ಮಾನ್ಯ ನರೇಂದ್ರ ಮೋದಿ ಅವರಾಗಿರುವುದರಿಂದ 4 ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಚರ್ಚೆ ಮಾಡಿ amicably settle ಮಾಡಬಹುದು. ಇದು ದೊಡ್ಡ ವಿಷಯವಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ, ತಮಿಳುನಾಡು ಕೃಷ್ಣಾ ಕಣಿವೆಯ ವ್ಯಾಪ್ತಿಯಲ್ಲಿ ಬರುತ್ತಿರಲಿಲ್ಲವಾದರೂ, ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರದವರು ಒಪ್ಪಿದ ಕಾರಣ ಚೆನ್ನೈಗೆ 15 ಟಿ.ಎಂ.ಸಿ ನೀರು ಕೊಡಲಾಗುತ್ತಿದೆ. ಮಾನ್ಯ ಸಚಿವರೇ ಇದು ಅನುಕೂಲಕರವಾದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾತಾವರಣವಾಗಿದೆ. ಇಂತಹ ಸಮಯ ನಮಗೆ ಸಿಗುವುದಿಲ್ಲ. ಇಲ್ಲೂ ಬಿ.ಜೆ.ಪಿ ಸರ್ಕಾರ ಇದೆ, ಅಲ್ಲೂ ಬಿ.ಜೆ.ಪಿ ಸರ್ಕಾರ ಇದೆ. ಮಾನ್ಯ ನರೇಂದ್ರಮೋದಿಯವರ ಮೇಲೆ ಒತ್ತಡ ತನ್ನಿ, ಅವರು persuasion ಮಾಡಿದರೆ ಇದು ಸಾಧ್ಯವಾಗುತ್ತದೆ. ಈ ನೋವಿನ ಕಾರಣಕ್ಕಾಗಿಯೇ ನಿನ್ನೆ ನನ್ನ ಕಣ್ಣಿನಲ್ಲಿ ನೀರು ಬಂದಿತ್ತು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸರ್ವ ಪಕ್ಷ ಸದಸ್ಯರ ನಿಯೋಗವನ್ನು ತೆಗೆದುಕೊಂಡು ಹೋಗಬೇಕು. ಇದಕ್ಕೆ ಯಾರೂ ಬೇಡ ಎನ್ನುವುದಿಲ್ಲ.

**ಶ್ರೀ ರಮೇಶ ಜಾರಕಿಹೊಳಿ:–** ಈ ಯೋಜನೆ ಪೂರ್ಣಗೊಳ್ಳಬೇಕು ಎನ್ನುವುದು ಎಲ್ಲರ ಆಶಯವಾಗಿದೆ. ಪಕ್ಷಾತೀತವಾಗಿ ನಾವು ಹೋರಾಟ ಮಾಡೋಣ. ಎಲ್ಲರಿಗೂ ಗೊತ್ತಿರುವ ಹಾಗೆ ಸ್ಟೇ ಇದೆ. ಕೋವಿಡ್‌ನ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಕಾರ್ಯಕಲಾಪಗಳು ಆಗುತ್ತಿಲ್ಲ. ಈ ಕುರಿತು ನಮ್ಮ legal team ಜೊತೆಯಲ್ಲಿ ಮಾತನಾಡಿ, ಆದಷ್ಟು ಶೀಘ್ರದಲ್ಲಿ ಸೂಕ್ತ ರೀತಿಯಲ್ಲಿ ಸ್ಪಂದಿಸುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರು ಭೂಸ್ವಾಧೀನದ ಬಗ್ಗೆ ಹೇಳಿದರು. ಏಕರೂಪ ದರ ನಿಗದಿ ಸಂಬಂಧ ಇದು ಪೆಂಡಿಂಗ್ ಇದೆ. ಹಿಂದಿನ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರದಲ್ಲಿ, ಮಾನ್ಯ ಕಾಗೋಡು ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಇದು ಫೈನಲ್ ಆಗಿಲ್ಲ. ಸಮ್ಮಿಶ್ರ ಸರ್ಕಾರವಿದ್ದಾಗ ಮಾನ್ಯ ಪರಮೇಶ್ವರ್‌ರವರ ಅಧ್ಯಕ್ಷತೆಯಲ್ಲೂ ಇದು ಫೈನಲ್ ಆಗಲಿಲ್ಲ. ಮೊನ್ನೆ ನಾನು, ಮಾನ್ಯ ಕಾರಜೋಳರವರು ಮತ್ತು ಕಾನೂನು ಸಚಿವರು ಕುಳಿತು ಸಭೆ ಮಾಡಿದ್ದೇವೆ. ಅತಿ ಶೀಘ್ರದಲ್ಲೇ ಈ ಕುರಿತು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ದರ ನಿಗದಿ ಮಾಡಿ, ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ. ಭೂಸ್ವಾಧೀನ ಪ್ರಕ್ರಿಯೆ ಮತ್ತು ಪುನರ್ವಸತಿ ಮುಖ್ಯವಾಗಿದ್ದು ಅದರ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳುತ್ತೇವೆ. ಇದಾದ ನಂತರ ಆಲಮಟ್ಟಿ ಭಾಗದ ಶಾಸಕರ ಮೀಟಿಂಗ್ ಕರೆದು, ಅವರ ಸಲಹೆ–ಸೂಚನೆಗಳನ್ನು ತೆಗೆದುಕೊಳ್ಳುತ್ತೇವೆ. ಈ ಕೆಲಸ ಪೂರ್ಣಗೊಳಿಸಲು ಆದಷ್ಟು ಒತ್ತಡ ಹಾಕೋಣ. ಎಷ್ಟೇ ಹಣಕಾಸು ತೊಂದರೆ ಬಂದರೂ ಈ ಯೋಜನೆ ಮುಗಿಸುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡೋಣ. ಈ ಯೋಜನೆ ನ್ಯಾಷನಲ್ ಪ್ರಾಜೆಕ್ಟ್ ಆಗುವ ನಿಟ್ಟಿನಲ್ಲಿ ಪ್ರಯತ್ನ ಕೂಡ ಮಾಡುತ್ತೇವೆ. ಆದರೆ ಆ ಒಂದು ಕಾರಣದಿಂದ ಸುಮ್ಮನೆ ಕುಳಿತುಕೊಳ್ಳುವುದೂ ಇಲ್ಲ. ರಾಜ್ಯ ಸರ್ಕಾರದ ಮೂಲಕ ಹಣಕಾಸಿನ ವ್ಯವಸ್ಥೆ ಮಾಡಿ ಈ ಯೋಜನೆ ಪೂರ್ಣಗೊಳಿಸುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡೋಣ. 5–6 ಜಿಲ್ಲೆಗಳ ಕೊನೆಯ ಭಾಗದಲ್ಲಿರುವ ರೈತರಿಗೂ ನೀರು ಮುಟ್ಟಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ **ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಕೋರ್ಟ್‌ನಲ್ಲಿ ಈ ವಿಷಯ ಇರಬಹುದು. ಆದರೆ ಭೂಸ್ವಾಧೀನ ಪ್ರಕ್ರಿಯೆಯನ್ನು ಮಾಡಬಹುದು. ಅದಕ್ಕೆ ಸಮಸ್ಯೆ ಇಲ್ಲ.

ಶ್ರೀ **ಎಸ್.ಆರ್.ಪಾಟೀಲ್:-** ಮಾನ್ಯ ಹೊರಟ್ಟಿಯವರು ಹೇಳಿದ ಹಾಗೆ ಭೂಸ್ವಾಧೀನ ಪ್ರಕ್ರಿಯೆಗೆ ಯಾವುದೇ ಸಮಸ್ಯೆ ಇಲ್ಲ. ಭೂಸ್ವಾಧೀನ ಪ್ರಕ್ರಿಯೆ ಒಂದೇ ದಿವಸ ಮಾಡುವಂಥದ್ದಲ್ಲ, ಹಂತ ಹಂತವಾಗಿ ಮಾಡಬೇಕಾಗುತ್ತದೆ. ನೋಟಿಫಿಕೇಷನ್ ಮಾಡಿ, ಅವಾರ್ಡ್ ಮಾಡುವಾಗ ಏಕರೂಪದ ದರ ನಿಗದಿ ಮಾಡಬಹುದು. ಇದು ರಾಷ್ಟ್ರೀಯ ಯೋಜನೆಗೆ ಒಳಪಡಬೇಕು ಎಂಬುದಕ್ಕೆ ಕಾಯದೇ, ನಾವೇ ಇದನ್ನು ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ **ಆರ್.ಬಿ.ತಿಮ್ಮಾಪೂರ:-**ಮುಧೋಳ್ ಕೆರೆ ತುಂಬುವ ಯೋಜನೆ ಕಡೆಗೂ ಗಮನ ಕೊಡಬೇಕು.

ಶ್ರೀ **ರಮೇಶ್ ಜಾರಕಿಹೊಳಿ:-** ಮಾನ್ಯ ತಿಮ್ಮಾಪೂರ ಅವರನ್ನು ಕರೆಸಿ ಸಲಹೆ-ಸೂಚನೆಗಳನ್ನು ಪಡೆದುಕೊಂಡು ಸೂಕ್ತ ಕ್ರಮ ಕೈಗೊಳ್ಳುವ ವ್ಯವಸ್ಥೆ ಮಾಡುತ್ತೇನೆ.

**9.ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

ಶ್ರೀ **ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)**ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**<u>ಪ್ರಸ್ತಾವವನ್ನು ಮಂಡಿಸಲಾಯಿತು</u>**

ಶ್ರೀ **ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಬಿಡಿಎ ಭೂಸ್ವಾಧೀನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕ್ರಿಯೆ ಮಾಡುವುದಕ್ಕೆ ಮುಂಚೆ ಮತ್ತು ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭ ಮಾಡುವ ಸಂದರ್ಭದಲ್ಲಿ ಅನೇಕ ಜನ ಮನೆಗಳನ್ನು ಕಟ್ಟಿಕೊಂಡಿದ್ದರು. ನಿವೇಶನಗಳನ್ನು ಮಾರಿ ಇನ್ಯಾರೋ ಮನೆಗಳನ್ನು ಕಟ್ಟಿಕೊಂಡಿದ್ದರು. G.P.A., ಆಧಾರದ ಮೇಲೆ ಮನೆಗಳನ್ನು ಕಟ್ಟಿದ್ದರು. ಇಂತಹ ಸುಮಾರು 70,000 ಮನೆಗಳಿವೆ ಎನ್ನುವ ಅಂದಾಜು ಸಿಕ್ಕಿತು. B.D.A., is trying to evict. ಕೆಲವು ಕಡೆ ಬಿ.ಡಿ.ಎ., ಯವರು ಪ್ಲಾನ್ ಮಾಡುವುದಕ್ಕೆ ಮೊದಲೇ ಮನೆಗಳಿತ್ತು. ಮೊದಲು ಈ ಕುರಿತು ಕೇವಲ ಚರ್ಚೆಗಳಾಗುತ್ತಿತ್ತು. ನಾವೀಗ ಒಂದು ತೀರ್ಮಾನ ತೆಗೆದುಕೊಂಡು, ಬಿ.ಡಿ.ಎ ಭೂಸ್ವಾಧೀನ ಮಾಡಬೇಕೆಂದಿರುವ ಅಥವಾ ಭೂಸ್ವಾಧೀನಪಡಿಸಿಕೊಂಡಿರುವ ನಿವೇಶನಗಳಲ್ಲಿ, no the Government land, ಅಲ್ಲಿ ಯಾರಾದರೂ ಮನೆ ಕಟ್ಟಿಕೊಂಡಿದ್ದರೆ ಅದನ್ನು measure ಮಾಡಿ ರೆಗ್ಯುಲರೈಸ್ ಮಾಡಬೇಕೆಂದು ಈ ವಿಧೇಯಕವನ್ನು ತಂದಿದ್ದೇವೆ. ಈ ವಿಧೇಯಕದಲ್ಲಿ, 20 feet x 30 feet ಸೈಟಲ್ಲಿ ಮನೆಯನ್ನು ಕಟ್ಟಿಕೊಂಡಿರುವವರಿಗೆ 10% of the guidance value, 30 feet x 40 feet ಸೈಟಲ್ಲಿ ಮನೆಯನ್ನು ಕಟ್ಟಿಕೊಂಡಿರುವವರಿಗೆ 20% of the guidance value, 40 feet x 60 feet ಸೈಟಲ್ಲಿ ಮನೆಯನ್ನು ಕಟ್ಟಿಕೊಂಡಿರುವವರಿಗೆ 40% of the guidance value, 50 feet x 80 feet ಸೈಟಲ್ಲಿ ಮನೆಯನ್ನು ಕಟ್ಟಿಕೊಂಡಿರುವವರಿಗೆ 50% of the guidance value ಈ ರೀತಿಯಾಗಿ penalty ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದು ಮನೆಯನ್ನು ಕಟ್ಟಿರುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಖಾಲಿ ನಿವೇಶನವನ್ನು ನಾವು ವಿಲೇವಾರಿ ಮಾಡುತ್ತಿಲ್ಲ, ಅದರ ಬಗ್ಗೆ confusion ಬೇಕಿಲ್ಲ. ಅದನ್ನು public auction ಮೂಲಕ ತೆಗೆದುಕೊಳ್ಳುತ್ತೇವೆ. ಈ ಕಾಯಿದೆ ಬಂದಮೇಲೆ, ಒಂದು ವರ್ಷದ ನಂತರ ಯಾರಾದರೂ ರೆಗ್ಯುಲರೈಸೇಷನ್‌ಗೆ ಕೇಳಲಿಲ್ಲ ಎಂದರೆ ಅವುಗಳನ್ನು ಡೆಮಾಲಿಷ್ ಮಾಡುವುದಕ್ಕೆ ಅಥವಾ ಬಿ.ಡಿ.ಎ ತನ್ನ ವಶಕ್ಕೆ ತೆಗೆದುಕೊಳ್ಳುವ ಪ್ರಾವಿಷನ್ ಮಾಡಿದ್ದೇವೆ. ಈ ನಿಯಮಗಳನ್ನು ಅನುಸರಿಸದ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಏಕೆಂದರೆ ಯಾರೇ ಕೋರ್ಟ್‌ಗೆ ಹೋದರು ಅವರಿಗೆ ಸ್ಟೇ ಸಿಗುತ್ತಿದೆ. ಈ ಪೈಕಿ ಕೆಲವರಿಗೆ ಕಾರ್ಪೋರೇಷನ್ 'ಬಿ' ಖಾತಾ ಕೊಟ್ಟಿದೆ. ವಿದ್ಯುತ್ ಹಾಗೂ ನೀರಿನ ಸರಬರಾಜನ್ನು ಕೊಡಲಾಗಿದೆ. ಇಂಥದ್ದೆಲ್ಲಾ litigation mount ಆಗಿ ಅದನ್ನು ಖುಲ್ಲಾಪಡಿಸುವುದಕ್ಕೆ ಆಗಿಲ್ಲ. ಯಾರು ಮನೆ ಕಟ್ಟಿಕೊಂಡು 12 ವರ್ಷದಿಂದ ವಾಸ ಮಾಡುತ್ತಿದ್ದಾರೋ ಅಥವಾ ಯಾರಾದರೂ ಅಮಾಯಕರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿವೇಶನ ತೆಗೆದುಕೊಂಡು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದರೆ, as one time measure, ಇದನ್ನು ರೆಗ್ಯುಲರೈಸ್ ಮಾಡಬೇಕೆಂದು ವಿಧೇಯಕವನ್ನು ತಂದಿದ್ದೇವೆ. ಸದನ ಇದಕ್ಕೆ ಒಪ್ಪಿಗೆ ಕೊಡಬೇಕು.

**(ಮುಂದು)**

**(911) 04.00 26.09.2020 ಎಸ್‌ವಿ-ಎಂಡಿ**

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಬಿ.ಡಿ.ಎ. ಕಾಯಿದೆಗೆ 38(ಡಿ)ಯನ್ನು ಸೇರಿಸಲು ಸರ್ಕಾರವು ಹೊರಟಿದ್ದು, ಸರ್ಕಾರದ ಉದ್ದೇಶ ಸರಿಯಿದೆ. ಸರ್ಕಾರದ ಉದ್ದೇಶದ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ಕಾನೂನಾತ್ಮಕವಾಗಿ ರೆವಿನ್ಯೂ ಕಾಯಿದೆಯ ಪ್ರಕಾರ, ಕರ್ನಾಟಕ ಮುನಿಸಿಪಲ್ ಕಾಯಿದೆಯ ಪ್ರಕಾರ ಮತ್ತು BDA (Bangalore Development Authority) functions and powers ಇದರ ಪ್ರಕಾರ ಇದನ್ನು ಮಾಡಲು ಬರುತ್ತದೆಯೇ? ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಿಸುತ್ತೇನೆ. ಇಂದು ಬಿ.ಡಿ.ಎ. ಎನ್ನುವುದು ಒಂದು Planning Authority. ಈ ನಗರವನ್ನು planned manner ನಲ್ಲಿ ಬೆಳೆಸುವಂಥದ್ದು, ಅಭಿವೃದ್ಧಿ ಪಡಿಸುವಂಥದ್ದು ಅದರ ಮೂಲ ಉದ್ದೇಶ. ಅದಕ್ಕಾಗಿಯೇ CDP (Comprehensive Development *Plan)* ಮಾಡಿದೆ. ಅದಕ್ಕಿಂತ ಹಿಂದೆ *ODP* (Outline Development *Plan*) ಮಾಡಿದೆ. ಅದಾದ ನಂತರ ಇಂದು *Master Plan* ಮಾಡಲಾಗಿದೆ. ಎಲ್ಲವೂ ಯೋಜನಾಬದ್ಧವಾದ ರೀತಿಯಲ್ಲಿ ಅಭಿವೃದ್ಧಿಯಾಗಬೇಕೆನ್ನುವುದು ಇದರ ಉದ್ದೇಶ. ಭೂಸ್ವಾಧೀನ ಪಡಿಸಿಕೊಳ್ಳಲು ಸೆಕ್ಷನ್ 17ರ ಅಡಿಯಲ್ಲಿ ಬಿಡಿಎಗೆ ತನ್ನದೇ ಆದ ಅಧಿಕಾರವಿದೆ. ಆದರೆ ಆ ಅಧಿಕಾರವನ್ನು ಬಳಸಿಕೊಂಡು ಭೂಸ್ವಾಧೀನ ಪಡಿಸಿಕೊಂಡು ಏನು ಮಾಡಬಹುದು? ಒಂದು *scheme draw* ಮಾಡಿ, ಅದರ ಮೂಲಕ ಒಂದು ಬಡಾವಣೆಯನ್ನು ನಿರ್ಮಿಸಬಹುದು. ಇಂತಹ ಕೆಲಸ ಕಾರ್ಯಗಳ ನಿರ್ವಹಣೆಗೆ ಅವಕಾಶವಿದೆ. ಒಂದು *layout formation* ಆದಾಗ ಅದರ *haphazard growth* ಆಗಬಾರದು. ಇದು ಬಹಳ ಮುಖ್ಯವಾದುದು. ಸರಿಯಾದಂತಹ *Planned Manner* ನಲ್ಲಿ ಆಗಬೇಕು ಎನ್ನುವುದು ಇದ್ದಾಗ ಮಾತ್ರ ಬಿಡಿಎ ಗೆ *Layout* ಮಾಡಿ *distribute* ಮಾಡುವ ಕೆಲಸವು ಆಗುತ್ತದೆ. ಈಗ ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದಿರುವ *Land Acquisition Act section 4(1)* ನಲ್ಲಿ ಅಥವಾ *section 6(1)* ನಲ್ಲಿ ಇರಬಹುದು ಅಥವಾ ಅಂತಿಮವಾಗಿ *payment ಆಗಿರುವ* ಕೆಲವು ಪ್ರಕರಣಗಳಿರಬಹುದು. ಇಲ್ಲಿ ಹಂತ ಹಂತವಾಗಿದೆ. ಆದರೆ ಅಲ್ಲಿ ಎಲ್ಲಾ ಅಭಿವೃದ್ಧಿಯಾಗಿ ಮನೆಗಳು ಕಟ್ಟಿ ಪಾಲಿಕೆಯವರು ರಸ್ತೆಯನ್ನೂ ಮಾಡಿ, *drain facility, sanitary, water* ಎಲ್ಲ ಸೌಲಭ್ಯಗಳನ್ನೂ ಮಾಡಲಾಗಿದೆ. ಈ ರೀತಿ ಬೇಕಾದಷ್ಟಿದೆ, no doubt. ಇಲ್ಲಿ Haphazard and Unplanned Layouts ಇರುವಾಗ ಹಂಚಿಕೆ ಮಾಡುವುದಕ್ಕೆ ಬಿ.ಡಿ.ಎಗೆ ಅಧಿಕಾರವೇ ಇರುವುದಿಲ್ಲ. ಸರ್ವೋಚ್ಚ ನ್ಯಾಯಾಲಯದ ಆದೇಶವಿದ್ದು, ಅದು ಹೀಗೆ ಹೇಳುತ್ತದೆ: "BDA is meant for the planned growth of Bangalore City." ಸರ್ಕಾರ ಇಂದು 15 ಅಡಿಯ ರಸ್ತೆಗೆ ಇರುವ ಮನೆ, ಒಂದು ನಿವೇಶನ ಹಂಚಿಕೆ ಮಾಡುತ್ತಿದೆ. How can you allot it? ಬಿಡಿಎ ಕಾಯಿದೆಯ ಮೂಲವನ್ನೇ ತಿರುಚುವುದಕ್ಕೆ ಸರ್ಕಾರ ಹೊರಟಿದೆ. ನಂತರ still the status of the land is Agricultural Land. Do the BDA have right to convert the land? ಸರ್ಕಾರಕ್ಕೆ ಆ ಅಧಿಕಾರ ಎಲ್ಲಿದೆ? ರೆವಿನ್ಯೂ ಕಾಯಿದೆಯಲ್ಲಿ ಸೆಕ್ಷನ್ 95ರ ಪ್ರಕಾರ Agriculture Land ನಿಂದ non-Agriculture ಗೆ convert ಮಾಡುವುದಕ್ಕೆ ಇರುವ ಅಧಿಕಾರವು ಆಯಾ ಜಿಲ್ಲಾಧಿಕಾರಿಗಳಿಗಿರುತ್ತದೆ. ಆದರೆ ಆ ಜಿಲ್ಲಾಧಿಕಾರಿಗಳಿಗೆ ಇರುವ ಅಧಿಕಾರವನ್ನು ಬಿಡಿಎಗೆ ಯಾವಾಗ ವರ್ಗಾವಣೆ ಮಾಡಲಾಯಿತು? Still the status of the land is Agricultural Land. Agricultural Land ಅನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡು scheme draw ಮಾಡಿಕೊಳ್ಳದೆ ಯೋಜನಾಬದ್ಧವಾದಂತಹ ಅಭಿವೃದ್ಧಿಯನ್ನು ಪಡಿಸದೆ, ಹಾಲಿ ಇರುವ ಅನಧಿಕೃತ ಬಡಾವಣೆಯಲ್ಲಿ ಯಾರೋ ಮನೆ ಕಟ್ಟಿದ್ದಾರೆಂದು ಹೇಳಿ ಅವರಿಗೆ ಹಂಚಿಕೆ ಮಾಡಲಾಗುವುದು ಮತ್ತು guidance value ಮೇಲೆ ಶೇ.10, ಶೇ.50 ಪಡೆದುಕೊಳ್ಳಲಾಗುವುದು ಎಂದರೆ how can it be possible? ಇದು ನನಗೆ ವಿಚಿತ್ರವಾಗಿ ಕಾಣುತ್ತಿದೆ. It cannot be possible. ಇದನ್ನು ತಕ್ಷಣವೇ ಯಾರಾದರೂ ಪ್ರಶ್ನೆ ಮಾಡಿದರೆ ಹೋಗಿ ಬಿಡುತ್ತದೆ.

ಮಾನ್ಯ ಸಚಿವರೇ, ನೀವು ಪ್ರಾವಿಷನ್ ಅನ್ನು ಎರಡು ಬಾರಿ ಅಲ್ಲ, ಮೂರು ಬಾರಿ ನೋಡಿ. You cannot do it. ಬಿಡಿಎ ಮೂಲ ಉದ್ದೇಶವೇನು? It is planned growth of

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

the city. Planned schemes ಮಾಡಬೇಕು. Planned development of the City and Town Planning ಆಗಬೇಕು. ಆದರೆ ಈ ಉದ್ದೇಶ defeat ಆಗುತ್ತಿದೆಯಲ್ಲ? ಸೆಕ್ಷನ್ 38(ಡಿ)ಯನ್ನು ಯಾವ ಕಾನೂನಿನಡಿಯಲ್ಲಿ ಮಾಡುತ್ತಿದ್ದೀರಿ? Of course, State Legislature ಗೆ ಇರುವ ಅಧಿಕಾರದ ಮೇಲೆ BDA form ಆಗಿದೆ. ಹಾಗೆಂದು Legislature ಏನು ಬೇಕಾದರೂ ಸೇರಿಸುವುದಕ್ಕಾಗುವುದಿಲ್ಲ. Then what is the duty as per the Revenue Act. ಕೆಎಂಸಿ ಕಾಯಿದೆಯಲ್ಲಿ regularize ಮಾಡುವುದಕ್ಕೆ ಕೆಲವು ಪ್ರಾವಿಷನ್ಸ್ ಇದೆ, Streets ಮಾಡುವುದಕ್ಕೆ ಅವಕಾಶವಿದೆ. ಆದರೆ ನಿಮಗೆ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರತಕ್ಕಂತಹ ಭೂಮಿ as per the Government order already it is transferred to Bengaluru Mahanagara Palike. ಒಂದು ಗೆಜೆಟ್ ನೋಟಿಫಿಕೇಷನ್ ಆಗಿ ಬಿಬಿಎಂಪಿ ಕಾಯಿದೆಯಡಿಯಲ್ಲಿ ಅದಕ್ಕೆ administratively and physically ಎಲ್ಲವೂ ಬಂದಿದೆ. ಬಿಬಿಎಂಪಿ ಕಾಯಿದೆಯಡಿಯಲ್ಲಿ ಬಂದಿರುವುದನ್ನು ಅಲ್ಲಿ ಹೋಗಿ regularize ಮಾಡುತ್ತೇವೆನ್ನುವುದಕ್ಕೆ ನಿಮಗೆ power ಹೇಗೆ ಬರುತ್ತದೆ? Of course, BDA is the Planning Authority.

**Sri J.C.MADHUSWAMY:-** No, you are diverting the issue.

**Sri P.R.RAMESH:-** I am quoting the examples.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ರಮೇಶ್ ಅವರೇ, ದಯಮಾಡಿ ಬಿಲ್ ಅನ್ನು ಒಮ್ಮೆ ಓದಿ. (1) ಈ ಅಧಿನಿಯಮದಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಅಭಿವೃದ್ಧಿ ಸ್ಕೀಮ್‌ನಲ್ಲಿ ಏನೇ ಒಳಗೊಂಡಿದ್ದರೂ, ಆದರೆ, 38-ಸಿ ಪ್ರಕರಣದಲ್ಲಿರುವುದಕ್ಕೆ ಬಾಧಕವಾಗದಂತೆ, ಪ್ರಾಧಿಕಾರವು ತಾನು ಸೂಕ್ತವೆಂದು ಭಾವಿಸುವ ಅಂತಹ ವಿಚಾರಣೆಯನ್ನು ನಡೆಸಿದ ತರುವಾಯ ತನ್ನಲ್ಲಿ ನಿಹಿತವಾದ ಅಥವಾ ತಾನು ಅರ್ಜಿಸಿದ... whatever is vested with BDA and whatever is acquired or proposed to be acquired by, which is BDA property. Don't get confused.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರೇ, 100 ಪ್ರತಿಶತ ಸರಿ. 4(1) ನೋಟಿಫಿಕೇಶನ್ ಸಹ ಇರಬಹುದು. ನಾನು ಅದನ್ನೇ ಹೇಳುತ್ತಿದ್ದೇನೆ. ನನ್ನ expression ಅರ್ಥ ಮಾಡಿಕೊಳ್ಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ರಮೇಶ್ ಅವರೇ, divert ಮಾಡಬೇಡಿ. ಇದರ ಮೇಲೆ ನಿಮಗೆ ಹೇಗೆ ಬೇಕೋ ಹಾಗೆ ವ್ಯಾಖ್ಯಾನ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:-** ಹೇಗೆ ಬೇಕೋ ಹಾಗೆ ಅಲ್ಲ. ಅಲ್ಲಿರುವ ರೀತಿಯಲ್ಲಿಯೇ ಮಾಡಬೇಕು. ಈಗಾಗಲೇ acquire ಮಾಡಿರುವುದಕ್ಕೆ ಕೊಡಲಾಗುವುದು ಎಂದು ನೀವು ಹೇಳುತ್ತಿದ್ದೀರಿ. Ownership shift ಆಗಿರುವುದಕ್ಕೆ...

**Sri J.C.MADHUSWAMY:-** Which is already a BDA property, ಅಂತಹದ್ದನ್ನು ಕೊಡುವುದಕ್ಕೆ ನಾವು ಮಾತ್ರ ನಾವು ಈ ವಿಧೇಯಕವನ್ನು ತಂದಿದೇವೆ. Neither the Agricultural Land nor the Government Land nor the BBMP property. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

**Sri P.R.RAMESH:-** Sir, Well clarified. Thank you. ನಾನು ಅದನ್ನೇ ಹೇಳುತ್ತಿದ್ದೇನೆ. ನಿಮ್ಮ ವಿಷಯಕ್ಕೆ ನಾನು ಬರುತ್ತೇನೆ. When that is the case, ಭೂಮಿಯನ್ನು ಬಿಡಿಎ ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ you should form the Layout according to your plan.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಆಗಿರುವುದಿಲ್ಲವಲ್ಲ ಏನು ಮಾಡುವುದು?

**ಶ್ರೀ ಪಿ.ಆರ್.ರಮೇಶ್:-** ಹಾಗಾದರೆ ನೀವು ಹಂಚಿಕೆ ಮಾಡುತ್ತೇವೆನ್ನುವುದು, it is unplanned. 10 ಅಡಿ ರಸ್ತೆಯಿರುವ ಕಡೆ ಹಂಚಿಕೆ ಮಾಡಲು ಸಾಧ್ಯವೇ? Is it possible?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ರಮೇಶ್ ಅವರೇ, ಒಂದು ನಿಮಿಷ ಕುಳಿತುಕೊಳ್ಳಿ. We have accepted in the Bill. "ಅದರಲ್ಲಿ ಅಸ್ತಿತ್ವದಲ್ಲಿರುವ ಕಟ್ಟಡದ ಕಾರಣದಿಂದಾಗಿ ತಾನು ಅದನ್ನು ಉಪಯೋಗಿಸಲು ಸಾಧ್ಯವಿಲ್ಲವೆಂದು ಅಥವಾ ಅಭಿವೃದ್ಧಿ ಸ್ಕೀಮ್ ಅಥವಾ ನಿವೇಶನಗಳನ್ನು ರಚಿಸುವ ಉದ್ದೇಶಕ್ಕಾಗಿ ಅಂತಹ ಭೂಮಿಯನ್ನು ಸೇರಿಸುವುದು ಕಾರ್ಯಸಾಧ್ಯವಲ್ಲವೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿಪ್ರಾಯಪಟ್ಟರೆ, ... We have accepted it. ಈಗ ಅಲ್ಲಿ ನಾವು ಪ್ಲಾನ್ ಮಾಡುವುದಕ್ಕಾಗುವುದಿಲ್ಲ. ಯಾರೋ ಮನೆಯನ್ನು ಕಟ್ಟಿಬಿಟ್ಟಿದ್ದಾರೆ. ಯಾವುದೋ ಒಂದು ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗಿದೆ. ತಾವು ದೊಡ್ಡವರು, ಕಾರ್ಪೊರೇಷನ್‌ನಿಂದ ಬಿ-ಖಾತಾ ಮಾಡಿಬಿಟ್ಟಿದ್ದೀರಿ. Now, the BDA accepts, the Government accepts under the Bill. We are unable to form Layouts. We are unable to plan. Allotted ಅಲ್ಲ ಇದು. ನಾವು ಈ ವಿಧೇಯಕವನ್ನು one-time regularization ಮಾಡಬೇಕೆಂದು ತಂದಿದ್ದೇವೆ. ಬಿಡಿಎ ಪ್ಲಾನ್ ಮಾಡುವುದಕ್ಕೆ, ಬಡಾವಣೆ ಮಾಡುವುದಕ್ಕೆ ಅವಕಾಶವಿದ್ದಿದ್ದರೆ ಈ ತಿದ್ದುಪಡಿ ವಿಧೇಯಕವನ್ನು ತರುವ ಅಗತ್ಯವೇನಿತ್ತು?

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರೇ, ನಾನು ಒಂದು ಬಾರಿ ನೀವು ತಂದಿರುವ ಬಿಲ್ ಅನ್ನು ಓದಲೇ? 38(d) **"Allotment of Bangalore Development Authority land in favour of original owner or purchaser or unauthorized occupant etc:"** Allotment ಎಂದರೇನು? ನೀವು ಇದನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ತನ್ನಿ. ಅಲ್ಲಿ ನೀವು provision, unauthorized construction on the Agricultural Land ಇದ್ದಾಗ that can be regularized. ಸಣ್ಣಪುಟ್ಟ ರಸ್ತೆಗಳಲ್ಲಿ ಯಾವುದೇ ಒಂದು ಯೋಜನಾಬದ್ಧವಾಗಿ ಆಗದೆ ಇರತಕ್ಕಂತಹ ಬಡಾವಣೆಗಳಲ್ಲಿ ಇದನ್ನು one-time regularize ಮಾಡುವುದಕ್ಕೂ ಬರುವುದಿಲ್ಲ. You cannot even allot the site, or you cannot recognize. Because you are not claiming the ownership. ನಿಮಗೆ ಇನ್ನೂ ownership ಬಂದಿರುವುದಿಲ್ಲ. ಸ್ಕೀಮ್ ಬಂದಾಗ ಮಾತ್ರ ಬರುತ್ತದೆ. ಸ್ಕೀಮ್ ಬಂದಾಗ ಎಂದರೆ ಸ್ವಾಧೀನ ಆಗಬೇಕು.

**(ಮುಂದು)**

**(912) 26-09-2020 (4-10) ಕೆಜಿ ಎಂಡಿ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, Site issue ನಮ್ಮ ಮುಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲ. ನಮ್ಮ ಮುಂದೆ ಇರುವಂತಹದ್ದು ಏನೆಂದರೆ, ಯಾರು 12 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ಅಲ್ಲಿ ವಾಸವಿದ್ದಾರೆ ಅವರಿಗೆ ಅಷ್ಟೇ. Please bear with me. ನಾವು ಯಾವುದೇ ಸೈಟ್‌ನ್ನು ಕೊಡುವುದಕ್ಕೆ ಈ ಕಾನೂನಿನಲ್ಲಿ ಅವಕಾಶ ಮಾಡಿಲ್ಲ. Let us be clear and let it be clear on record. ಸೈಟ್ ಇದ್ದರೆ, ನಾವು ಅದನ್ನು auction ಗೆ ತೆಗೆದುಕೊಂಡು ಹೋಗುತ್ತೇವೆ, ಸೈಟ್ ಇದ್ದರೆ ಅದನ್ನು ನಾವು ಬೇರೆ ಮಾಡಿಕೊಳ್ಳುತ್ತೇವೆ. ಮನೆಗಳನ್ನು ಕಟ್ಟಿಬಿಟ್ಟಿದ್ದಾರೆ, ಮೂವತ್ತು ವರ್ಷಗಳಿಂದ ಇದ್ದಾರೆ, ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, ಯಾರು ಕನಿಷ್ಠ 12 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅಂತಹ ಮನೆಗಳು ಬೆಂಗಳೂರು ನಗರದಲ್ಲಿ ಸುಮಾರು 70 ಸಾವಿರ ಮನೆಗಳಿವೆ ಎಂದು ನಾವು ಅಂದಾಜು ಮಾಡಿದ್ದೇವೆ. ಅವುಗಳನ್ನು ನಾವು demolition ಮಾಡಲಿಕ್ಕೆ ಆಗಲಿಲ್ಲ. ಏನಾದರೂ ಒಂದು ಕಡೆ ಒಂದು ಕಾನೂನು ತಂದು, ಅದನ್ನು regularize ಮಾಡಬೇಕೆಂದು ಪ್ರಯತ್ನ ಮಾಡಿದರೆ, ಅದಕ್ಕೆ ರಸ್ತೆ ಯಾವ ರೀತಿ ಕೊಡುತ್ತೀರಿ, ಅದಕ್ಕೆ ನೀರು ಯಾವ ರೀತಿ ಕೊಡುತ್ತೀರಿ ಎಂದರೆ, ಮಾಡುವುದಕ್ಕೆ ಆಗುವುದಿಲ್ಲ. We accept it. But we are regularizing. ಅವರ ಹಣೆ ಬರಹ, ನಾವು ಏನು ಮಾಡೋಣ ಹೇಳಿ? ಕೊನೆಯ ಪಕ್ಷ owner of the house ಎಂದು title ಕೊಡಬೇಕಲ್ಲವೇ, ಅವರು ಇಷ್ಟೆಲ್ಲಾ ಮಾತನಾಡುವವರು, you were the Mayor of the Bangalore City. ಹಾಗಾದರೆ, ನಾನು I will be handed over 20 cases here, ಅಂತಹ ಮನೆಗಳಿಗೆ ಅವರು 'ಬಿ' ಖಾತೆ ಮಾಡಿದ್ದಾರೆ. ಅದನ್ನು ನೀವು ಯಾರನ್ನು ಕೇಳಿ power ಕೊಟ್ಟಿದ್ದೀರಿ, ಯಾರನ್ನು ಕೇಳಿ ನೀರು ಕೊಟ್ಟಿದ್ದೀರಿ ಎಂದು ಚರ್ಚೆ ಮಾಡುವುದಕ್ಕೆ ಆಗುತ್ತದೆಯೇ?

**ಶ್ರೀ ಎಸ್.ಸುರೇಶ್ ಕುಮಾರ್ (ಪ್ರಾಥಮಿಕ, ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಕಾನೂನ್ಮಾತಕವಾಗಿ ಕೆಲವು ಸಂಗತಿಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಬಹಳಷ್ಟು ಬಡಾವಣೆ ಇವೆ. ಬಿ.ಡಿ.ಎ., ದವರು preliminary notification ಅನ್ನು ಮಾಡಿದರು. Final notification ಮಾಡುವುದಕ್ಕೆ they took 6 years to 8 years. ಆಯಿತು. ಈ ಮಧ್ಯೆ ಅಲ್ಲಿ ಮನೆಗಳನ್ನು ಕಟ್ಟಿಬಿಟ್ಟಿದ್ದಾರೆ. Classic example ಹೇಳಬೇಕೆಂದರೆ, ನಂದಿನಿ ಬಡಾವಣೆ. ಬಡಾವಣೆಯಲ್ಲಿ ನನ್ನ ಅಂದಾಜಿನ ಪ್ರಕಾರ, 5 ರಿಂದ 6 ಸಾವಿರ ಮನೆಗಳು ಬಂದಿವೆ. ಅದಕ್ಕೆ ರಸ್ತೆಗಳನ್ನು ಕೊಟ್ಟಿದ್ದೇವೆ. Electricity

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

connection ಅನ್ನು ತೆಗೆದುಕೊಂಡಿದ್ದಾರೆ. Water supply connection ಇದೆ. ಈಗ ಏನೇ ಮಾಡಿದರೂ ಸಹ, ಈ allottees ಗೆ original order ಕೊಡುವುದಕ್ಕೆ ಆಗುವುದಿಲ್ಲ. 1986 ನೇ ಸಾಲಿನಿಂದ ಪ್ರತಿ ಬಾರಿಯೂ ಅಲ್ಲಿಗೆ bulldozer ಬರುತ್ತದೆ, protest ಆಗುತ್ತದೆ, ವಾಪಸ್ಸು ಹೋಗುತ್ತದೆ. I fully agree that it is a failure of... ಆ Institution ಏನು within time authority ಮಾಡಬೇಕಾಗಿತ್ತು, ಅದನ್ನು ಮಾಡದಿರುವುದರಿಂದ ಇವೆಲ್ಲವೂ ಆಗಿವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಹೇಳಿದಂತೆ, ಇದು purely ಮಾನವಿಯ ದೃಷ್ಟಿಯಿಂದ ಆ ಮನೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಈಗ ಅವರನ್ನು ಎಲ್ಲಿಗೆ ಕಳುಹಿಸುವುದಕ್ಕೆ ಆಗುತ್ತದೆ? ಮಾನ್ಯ ಸಚಿವರು ಹೇಳಿದಂತೆ ಸುಮಾರು ಲಕ್ಷಾಂತರ ಮನೆಗಳು ಆ ರೀತಿ ಇವೆ. ಅದಕೋಸ್ಕರ to bring some less ಒಂದು ಏನಾದರೂ title ಅನ್ನು ಕೊಟ್ಟು, ಅದರಿಂದ ನಮ್ಮ ಕಾರ್ಪೊರೋಷನಿಗೂ ಸಹ ಆದಾಯ ಬರುವಂತೆ ಮಾಡಿ ಅದನ್ನು one-time settlement ತರಹ ಮಾಡುವಂತೆ ಮಾಡಬೇಕು. ನಾನು 1986 ನಿಂದಲೂ ನಂದಿನಿ ಬಡಾವಣೆಯನ್ನು ನೋಡಿಕೊಂಡು ಬರುತ್ತಿದ್ದೇನೆ. ನಾನು ಸಹ ಪ್ರತಿ ಸಲ ಅಲ್ಲಿಗೆ ಹೋಗಿದ್ದೇನೆ. ಆ ದೃಷ್ಟಿಯಿಂದ ಇದನ್ನು ಅನೇಕರ ಜೊತೆಗೆ ಚರ್ಚೆ ಮಾಡಿ it's the only possible way ಅನ್ನುವ ರೀತಿಯಲ್ಲಿ ಈ ಬಿಲ್ಲನ್ನು ತಂದಿದ್ದೇವೆ. ಇಲ್ಲಿಯೂ ಸರಿಯಾದಂತಹ ಷರತ್ತುಗಳನ್ನು ಹಾಕಿದ್ದೇವೆ. 12 ವರ್ಷಗಳ ಹಿಂದೆಯೇ ಕಟ್ಟಿರಬೇಕು. ನಾವು ಸೈಟ್‌ನ್ನು ಮಾತ್ರ ಕೊಡುವುದಿಲ್ಲ. ಸೈಟ್ ಇದ್ದರೆ, ಅದನ್ನು ಬಿ.ಡಿ.ಎ., ದವರು ತೆಗೆದುಕೊಳ್ಳುತ್ತಾರೆ, ಅವರು ಅದನ್ನು auction ಹಾಕುತ್ತಾರೆ. ಈ ರೀತಿಯ ಕೆಲವು ಷರತ್ತುಗಳನ್ನು ಹಾಕಿದ್ದೇವೆ.

**(ಈ ಹಂತದಲ್ಲಿ ವೈಸ್‌ಛೇರ್ಮನ್‌ರವರಾದ ಡಾ।।ವೈ.ಎ.ನಾರಾಯಣಸ್ವಾಮಿರವರು ಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಈ ದೃಷ್ಟಿಯಿಂದ ಬೆಂಗಳೂರಿನ ಅನೇಕ ಬಡಾವಣೆಗಳಲ್ಲಿ ವಾಸ ಮಾಡುತ್ತಿರುವಂತಹ ಲಕ್ಷಾಂತರ ಕುಟುಂಬಗಳ ದೃಷ್ಟಿಯಿಂದ ನಾವು ಯೋಚನೆ ಮಾಡಿ ಈ ಬಿಲ್ಲನ್ನು ತಂದಿದ್ದೇವೆ. ಅದಕ್ಕೆ ದಯವಿಟ್ಟು ಈ ಬಿಲ್ಲಿಗೆ ಒಂದು purely at the risk of the

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

petitioner ಹೇಳುತ್ತೇನೆ. ಮಾನವಿಯತೆಯ ದೃಷ್ಟಿಯಿಂದ ತಂದಿರುವಂತಹ ಈ ಬಿಲ್ಲಿಗೆ ದಯವಿಟ್ಟು ಸಹಕಾರ ಕೊಡಬೇಕೆಂದು ಕೇಳುತ್ತೇನೆ.

**ವೈಸ್‌ಛೇರ್ಮನ್:-** ಮಾನ್ಯ ಸಚಿವರೇ, ಮಾನ್ಯ ಸುರೇಶ್‌ಕುಮಾರ್‌ರವರು ಬೆಂಗಳೂರಿನ ನಂದಿನಿ ಬಡಾವಣೆಯನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಹೆಬ್ಬಾಳ ಕ್ಷೇತ್ರದಲ್ಲಿ ಚಿಕ್ಕಮಾರನಹಳ್ಳಿ, ನಾಗಶೆಟ್ಟಿಹಳ್ಳಿ, ಭೂಪಸಂದ್ರದಲ್ಲಿ ಸುಮಾರು 35 ವರ್ಷಗಳಿಂದ ಬಹಳ ಜಲ್ವಂತವಾದ ಸಮಸ್ಯೆಗಳು ಇವೆ. ಮಾನ್ಯ ಸಚಿವರಾದ ಸುರೇಶ್‌ಕುಮಾರ್‌ರವರು ಹೇಳಿದ್ದು ಸರಿ ಇದೆ. ಇದಕ್ಕೆ ನನ್ನ ವಿನಂತಿಯನ್ನು ಜೋಡಿಸಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ವೈಸ್‌ಛೇಮ್ಮನ್‌ರವರೇ, ತಾವೀಗ ಪೀಠದಲ್ಲಿ ಕುಳಿತಿದ್ದೀರಿ, ಹಾಗಾಗಿ, ಮಾನ್ಯ ಸದಸ್ಯರುಗಳು ಮಾತನಾಡಿದ ನಂತರ ತಾವು ಕೊನೆಯಲ್ಲಿ ಮಾತನಾಡಿ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಸುರೇಶ್‌ಕುಮಾರ್‌ರವರು ಹೇಳಿದ್ದು ಸರಿ ಇದೆ. ನಾವು ಅದಕ್ಕೆ I totally agree. BDA Planning Authority ಎಂದು recognize ಆಗಿದೆ. ಬಿಡಿಎನಲ್ಲಿ planned manner development ಮಾಡಬೇಕೆಂದು ಹೇಳಿದಾಗ, ತಾವು ಈ ಒಂದು property ಗಳನ್ನು one-time regularize ಮಾಡುತ್ತೀರೋ, allotment ಮಾಡುತ್ತೀರೋ, ಏನೂ ಮಾಡುತ್ತೀರೋ, ಒಂದು ಬಾರಿ ಬಿಡಿಎಗೆ violate ಆದಾಗ, ಈ ತರಹದ್ದು ಮಾಡಿದಾಗ unauthorized construction ಗೆ ತಾವು authorize ಮಾಡಿದಾಗ ರಸ್ತೆ 15 ಅಡಿ ಇರುತ್ತದೆ, 20 ಅಡಿ ಇರುತ್ತದೆ, 25 ಅಡಿ ಇರುತ್ತದೆ, 30 ಅಡಿಗಳ ಮೇಲೆ ಇರುವುದಿಲ್ಲ. ಇಂತಹ ಬಡಾವಣೆಗಳಲ್ಲಿ ಅವರನ್ನು regularize ಮಾಡಿದಾಗ, ಅವರು the Karnataka Town and Country Planning Act ಮೂಲವನ್ನು defeat ಮಾಡಿದಂತೆ ಆಗುತ್ತದೆ.

**ಶ್ರೀ ಎಸ್.ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, Sri P.R.Ramesh was the worshipful mayor of Bangalore City. ಈಗ ನನ್ನ ಸಣ್ಣದೊಂದು ಪ್ರಶ್ನೆ. ನಾನು ಅವರೆಲ್ಲರೂ ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ಅವರು ಸಹ ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ. What's the solution for this? ಇದಕ್ಕೆ ಏನು solution ಹೇಳಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri P.R.RAMESH:-** You can denotify everything. ಅದನ್ನು ಈಗಾಗಲೇ ಬಿ.ಬಿ.ಎಂ.ಪಿ.,ಯವರಿಗೆ ಕೊಟ್ಟಿದ್ದೀರಿ. ಅದನ್ನು ಬಿ.ಬಿ.ಎಂ.ಪಿ.,ಯವರಿಗೆ ಕೊಟ್ಟುಬಿಡಿ. ಅವರು ಅಲ್ಲಿ regularize ಮಾಡಲಿ.

**ಶ್ರೀ ಎಸ್.ಸುರೇಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಬಿ.ಬಿ.ಎಂ.ಪಿ.,ಯವರಿಗೆ ಕೊಟ್ಟಿಲ್ಲ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಅದು ಈಗಾಗಲೇ administrative limits ನಲ್ಲಿ ಬಂದಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ರಮೇಶ್‌ರವರ contradiction ನನಗೆ ಅರ್ಥವಾಗುತ್ತಿಲ್ಲ. ನಿನ್ನೆ ದಿವಸ ಬಿ.ಬಿ.ಎಂ.ಪಿ.,ಗೆ ಕೊಡುತ್ತೇವೆಂದರೆ, ಅದನ್ನು ಬಿ.ಡಿ.ಎ., ಗೆ ಕೊಡಿ ಎಂದು ಹೇಳಿದರು. ಈಗ ಬಿಡಿಎ ಕೊಡುತ್ತೇವೆಂದರೆ, ಬಿ.ಬಿ.ಎಂ.ಪಿ., ಕೊಡಿ ಎಂದು ಹೇಳುತ್ತಾರೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಅದು ಆರೋಗ್ಯ ಇಲಾಖೆಯದ್ದು, ಮಾನ್ಯ ಸಚಿವರು planning ಮತ್ತು health ನ್ನೂ ಒಂದೇ ಮಾಡಿಬಿಡುತ್ತಾರೆ.

**Sri J.C.MADHUSWAMY:-** It is BDA property. BDA has invested in it. ಅದನ್ನು BDA ಸ್ವಾಧೀನ ಮಾಡಿದೆ. ಅದನ್ನು ಬಿ.ಬಿ.ಎಂ.ಪಿಗೆ ಕೊಡುವುದಕ್ಕೆ ಆಗುವುದಿಲ್ಲ. ಇದಾದ ಮೇಲೆ entire Bangalore area will be yours. ಆದರೆ, regularization ಅನ್ನು ಅವರೇ ಮಾಡಬೇಕು.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇಲ್ಲಿ 20 x 30 ಕ್ಕೆ ಒಂದು ಬೆಲೆ, 30 x 40 ಕ್ಕೆ ಒಂದು ಬೆಲೆ, 40 x 60 ಕ್ಕೆ ಒಂದು ಬೆಲೆ ಮತ್ತು 50 x 80 ಕ್ಕೆ ಒಂದು ಬೆಲೆಯನ್ನು ಹಾಕಿದ್ದಾರೆ. ಇದು ಸ್ವಾಗರ್ತಾಹ. ಆದರೆ, "ನಿಯಮಿಸಬಹುದಾದ ದಂಡ" ಎಂದರೇನು? ಮತ್ತೆ ಏನಾದರೂ ಅಧಿಕಾರಿಗಳು ಇದರಲ್ಲಿ ವ್ಯಾಪಾರ ಮಾಡಿಕೊಳ್ಳಬೇಕೇ? ಇದರಿಂದ ಅಧಿಕಾರಿಗಳನ್ನು ಬದುಕಿಸಬೇಕೇ? ಅದಕ್ಕೂ ನಿಗದಿ ಮಾಡಿ. ಪುಟ ಸಂಖ್ಯೆ 2 ರ ಕ್ರಮ ಸಂಖ್ಯೆ 4ರಲ್ಲಿ "ಪ್ರಸ್ತುತ ಮಾರ್ಗಸೂಚಿ ಮೌಲ್ಯದ ಶೇಕಡಾ ಐವತ್ತು ಮತ್ತು ನಿಯಮಿಸಬಹುದಾದ ದಂಡ" ಎಂದು ತಿಳಿಸಿದ್ದಾರೆ. ಹಾಗಾದಾರೆ, "ನಿಯಮಿಸಬಹುದಾದ ದಂಡ" ಎಂದರೆ ಏನು?

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಲ್ಲಿ confuse ಮಾಡಿಕೊಂಡಿದ್ದಾರೆ. ನಾವು ಲ್ಯಾಂಡ್‌ಗೆ guidance value ನಲ್ಲಿ ಹಾಕಿದ್ದೇವೆ. ಆ ಬಿಲ್ಡಿಂಗ್ ಏನಿರುತ್ತೇ, ಅದರ life ಮೇಲೆ, ಅದರ status ಮೇಲೆ, ನಾವು calculation ಮಾಡಬೇಕಾಗುತ್ತದೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಇದು ಒಂದು ರೀತಿಯಲ್ಲಿ ವ್ಯಾಪಾರಕ್ಕೆ ದಾರಿ ಮಾಡಿಕೊಟ್ಟಂತೆ ಆಗುವುದಿಲ್ಲವೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದು ಗೊತ್ತಿರುವುದಿಲ್ಲ. ಅವರು ಕಚ್ಚಾ ವಸ್ತುವಿನಲ್ಲಿ ಕಟ್ಟಿರುತ್ತಾರೆ, ಪಕ್ಕಾ ವಸ್ತುವಿನಲ್ಲಿ ಕಟ್ಟಿರುತ್ತೀರಿ. ಅದಕ್ಕೆ ಅದು ಒಂದು valuation ಆಗಬೇಕಲ್ಲವೇ,

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಜಮೀನು ಬೆಲೆಯೇ ಮುಖ್ಯವಾದದು. ಇಲ್ಲಿ ಮನೆ ಬೆಲೆ ಮುಖ್ಯವಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, 20 x 30 ರಲ್ಲಿ ಬಹಳ ಹಳೆಯ ಕಟ್ಟಡಗಳು ಇವೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾವು 40 x 60 ಮತ್ತು 50 x 80 ನಲ್ಲಿದ್ದು ಮಾತ್ರ ಹೇಳುತ್ತಿದ್ದೇವೆ. 20 x 30 ದ್ದು ಹೇಳುತ್ತಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಸೈಟ್‌ಗೆ guidance value ಹೇಳಬಹುದು. ಬಿಲ್ಡಿಂಗ್‌ಗೆ ದಂಡ ಹಾಕಲೇಬೇಕು. ಇಲ್ಲದಿದ್ದರೆ ಅದು law ಆಗುವುದಿಲ್ಲವೆಂದು ಆ ಬಿಲ್ಡಿಂಗ್‌ಗೆ ಸ್ವಲ್ಪ ದಂಡ ಹಾಕುವುದಕ್ಕೆ ಅವರು calculate ಮಾಡಲಿ ಎಂದು ಹೇಳಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಎಲ್ಲರಿಗೂ ವ್ಯಾಪಾರಕ್ಕೆ ಜಾಗ ಮಾಡಿಕೊಟ್ಟಂತೆ ಆಗಿದೆ. ಈಗಲೇ ಬಿಡಿಎ ಅದ್ವಾನ ಆಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಬಿ.ಡಿ.ಎ ನೌಕರರ ಎಷ್ಟು ನಿವೇಶನಗಳು ಮತ್ತು ಎಷ್ಟು ಮನೆಗಳು ಇವೆ ಎಂದು ಅಂದಾಜು ಮಾಡಿಸಿ ಸ್ವಾಮಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಗೊತ್ತಿರುವಂತೆ ಬಿಡಿಎ ನಲ್ಲಿ ಯಾವುದೇ ಕೆಲಸಗಳು ಆಗುವುದಿಲ್ಲ. ಇದೊಂದು ವ್ಯಾಪಾರಕ್ಕೆ ಅನುಕೂಲ ಮಾಡಿಕೊಟ್ಟಂತೆ ಆಯಿತು. ಅದಕ್ಕೆ ಇದಕ್ಕೂ ಏನಾದರೊಂದು ದರ ನಿಗದಿ ಮಾಡಿ. ಇದರಿಂದ ಜನರಿಗೆ ಅನುಕೂಲವಾಗುತ್ತದೆ.

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಿಡಿಎ ದಿಂದ ಯಾರಾದರೂ ಅಧಿಕಾರಿಗಳು ಸದನಕ್ಕೆ ಬಂದಿದ್ದಾರೆಯೇ? ಶ್ರೀ ರಾಕೇಶ್‌ಸಿಂಗ್ ಹೋದರು. ಈಗ ಯಾರು ಇಲ್ಲ. ಬಿಡಿಎಗೆ ಕನಿಷ್ಠಪಕ್ಷ permanent ಆಗಿ ಎರಡು ವರ್ಷಗಳಿಗಾದರೂ ಅಧ್ಯಕ್ಷರನ್ನು ಮತ್ತು ಆಯುಕ್ತರನ್ನು ಇಡಿ. ಎರಡು/ಎರಡು ತಿಂಗಳಿಗೆ ಇವರನ್ನು ಬದಲಾವಣೆ ಮಾಡುತ್ತಿದ್ದರೆ, ಇದು 'ಅತಿಕೂಲ ಪ್ರತಿಕೂಲ" ಎಂದಂತೆ ಆಗುತ್ತದೆ. ಅವರು ಬಂದು ಅಲ್ಲಿಗೆ ಕುಳಿತುಕೊಳ್ಳುವಷ್ಟರಲ್ಲಿಯೇ, it will take six months. ಈಗ ಮಾನ್ಯ ಸಚಿವರು ತಂದಿರುವಂತಹ ಬಿಲ್ಲು ಬಹಳ ಒಳ್ಳೆಯದು. ಅದು ನ್ಯಾಯಾಲಯದಲ್ಲಿ ನಿಲ್ಲುತ್ತೋ ಅಥವಾ ಬಿದ್ದುತ್ತೋ ಅದು ಬೇರೆ ಪ್ರಶ್ನೆ. ನಮ್ಮ ಕೆಲಸವನ್ನು ನಾವು ಮಾಡಿಕೊಳ್ಳೋಣ. ನಾವು ಇದನ್ನು ಸ್ವಾಗತಿಸುತ್ತೇವೆ. ಅನೇಕ ಜನರು ತೊಂದರೆಯಿಂದ ಪಾರಾಗುತ್ತಾರೆ. ಬೆಂಗಳೂರಿನಲ್ಲಿ ಒಂದು ಸ್ವಂತ ಮನೆ ಕಟ್ಟಿಕೊಂಡು ಅದಕ್ಕೆ ಒಂದು ಪತ್ರ ಇದ್ದರೆ, ಸ್ವರ್ಗದಲ್ಲಿ ಜಾಗ ಸಿಕ್ಕಿದಂತೆ ಆಗುತ್ತದೆ. ಅದನ್ನು ಮಾಡಿದರೆ, ಅವರಿಗೆ ಪುಣ್ಯ ಬರುತ್ತದೆ.

ಮಾನ್ಯ ಸಭಾಪತಿಯವರೇ, ಬಿಡಿಎದವರು ಅವರಿಗೆ ಸಂಬಂಧ ಪಡದ ಜಾಗದಲ್ಲಿಯೂ ಸಹ plan ಗಳನ್ನು sanction ಮಾಡುತ್ತಿದ್ದಾರೆ. ಈ ರೀತಿ ಸಿಕ್ಕಾಪಟ್ಟೆ ಮಾಡಿದ್ದಾರೆ. ಅದು ನ್ಯಾಯಾಲಯಕ್ಕೂ ಸಹ ಹೋಗಿದೆ. ಬಿಡಿಎಗೆ ಸಂಬಂಧಪಡದ ಜಾಗದಲ್ಲಿ ಆ ಜಾಗದ ಮಾಲೀಕ ಇಲ್ಲವೆಂದು ನಿಶ್ಚಿತವಾದ ಮೇಲೆ ಅಂತಹ ಕಡೆಗೆ plan sanction ಮಾಡಬಾರದು ಎನ್ನುವಂತಹ ಒಂದು ಆದೇಶವನ್ನು ಬಿಡಿಎಗೆ ಕೊಡುವಂತಹದ್ದು ಉತ್ತಮ.

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೇ, ಆಯಿತು. ಮಾನ್ಯ ಹರಿಪ್ರಸಾದ್‌ರವರೇ, ತಾವೀಗ ಮಾತನಾಡಿ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(913)26-09-2020(4-20)ಎಂವಿ-ಎಕೆ**

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರಾದ ಜೆ.ಸಿ.ಮಾಧುಸ್ವಾಮಿಯವರು ಸರ್ಕಾರದ encyclopedia ಬಿಡಿ. ಸ್ವಲ್ಪ deviation ಮಾಡುತ್ತೇವೆಂದು ಈಗ ಬೆಂಗಳೂರು ನಗರದಲ್ಲಿ ಮೂರು ಏಜೆನ್ಸಿಗಳಿವೆ, ಬಿ.ಡಿ.ಎ., ಕಾರ್ಪೊರೇಷನ್, ಕರ್ನಾಟಕ ಹೌಸಿಂಗ್ ಬೋರ್ಡ್ ಅವುಗಳ ಜೊತೆಗೆ ಕೊಳಚೆ ನಿರ್ಮೂಲನಾ ಮಂಡಳಿ ಕೂಡ ಇದೆ. ಇವುಗಳೆಲ್ಲವೂ ಸಹ ಜನರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡುವಂತಹ ಕಾರ್ಯಕ್ರಮಗಳನ್ನು ಮಾಡುತ್ತವೆ. ಈಗ ಏನಾಗಿದೆ ಎಂದರೆ, ಎಲ್ಲಾ ಅಕ್ರಮಗಳನ್ನು ಸಕ್ರಮ ಮಾಡುವಂಥದ್ದು ಬಹಳ ವರ್ಷಗಳಿಂದ ಫ್ಯಾಷನ್ ಆಗಿಬಿಟ್ಟಿದೆ. ಅದು ಯಾವುದೇ ಸರ್ಕಾರವಿರಲಿ, ಆ ಒಂದು ಸ್ಕೀಮ್ ಬಂದೇ ಬರುತ್ತದೆ. ಆ ಒಂದು ಸ್ಕೀಮ್ ಇದರಲ್ಲೂ ಸಹ ಇದೆ. ಮಾನ್ಯ ಸಿ.ಎಂ.ಇಬ್ರಾಹಿಂರವರು ಹೇಳಿದ ಹಾಗೆ ನಾವು ವಿಧೇಯಕಕ್ಕೆ ವಿರೋಧವಿಲ್ಲ. ಪಾಪ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅವರಿಗೆ ಏನು ಸಹಾಯ ಮಾಡಬೇಕೋ ಅದನ್ನು ಮಾಡಿ. ಆದರೆ, ಸರ್ಕಾರದಲ್ಲಿ ಕುಳಿತುಕೊಂಡಿರುವವರು ಏನು ಮಾಡುತ್ತಿದ್ದೇವೆಂದು ಯೋಚನೆ ಮಾಡಬೇಕಾಗುತ್ತದೆ. ನಿನ್ನೆಯ ಪ್ರಜಾವಾಣಿ ಪೇಪರ್‌ನಲ್ಲಿ ನೋಡಿದರೆ, ಬಿ.ಡಿ.ಎ.ನವರು ಒಂದೇ ನಿವೇಶನವನ್ನು ಎರಡು ಮತ್ತು ಮೂರು ಜನರಿಗೆ ಹಂಚಿಕೆ ಮಾಡಿರುತ್ತಾರೆ. ನಾನು ಬಿ.ಡಿ.ಎ. ಎಂದರೆ, Bengaluru Development Authority ಎಂದು ತಿಳಿದುಕೊಂಡಿದ್ದೆ. ಈಗ ಅದನ್ನು ನೋಡಿದರೆ, ಅದು Bengaluru Demolition Authority ಎಂದು ಕಾಣುತ್ತಿದೆ. ದಯವಿಟ್ಟು ಇದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ. ಏಕೆಂದರೆ, ಬಡವರು 20x30 ಮತ್ತು 30x40 ಅಳತೆಯ ನಿವೇಶನಗಳನ್ನು ಐದೈದು ಮತ್ತು ಹತ್ತತ್ತು ವರ್ಷ ಅರ್ಜಿ ಸಲ್ಲಿಸಿ ತೆಗೆದುಕೊಂಡಿರುತ್ತಾರೆ. ಒಂದೇ ನಿವೇಶನ ಇಬ್ಬರಿಗೆ ಹಂಚಿಕೆಯಾದಾಗ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಎರಡು ವರ್ಷ ಆಗುವಷ್ಟರಲ್ಲಿ ಅವರು ಮನೆಯಲ್ಲಿ ಕೂಡಿಟ್ಟಿರುವ ಹಣ ಪೂರ್ತಿ ನಾಶವಾಗಿ ಹೋಗುತ್ತದೆ. ಅದರ ಜೊತೆಗೆ ಇದರ ಬಗ್ಗೆ ಬಹಳಷ್ಟು ಸದಸ್ಯರು ಮಾತನಾಡಿದರು ಮತ್ತು ಇದನ್ನು ಬಹಳಷ್ಟು ಸದಸ್ಯರು ಒಪ್ಪುವುದಿಲ್ಲ. ಈಗ ಪ್ರೈವೇಟ್ ಲೇಔಟ್‌ಗಳು ಆಗುತ್ತವೆ. ಇವತ್ತು ಬಿ.ಎಂ.ಆರ್.ಡಿ.ಎ.ಯಲ್ಲಿ 30 ಅಥವಾ 40 ಅಡಿ ರಸ್ತೆ ಬಿಡಬೇಕು ಎಂದು ನಿಯಮ ಇದೆ. ಈಗ ಕೆಲವು extensions ನಲ್ಲಿ ಹೋಗಿ ನೋಡಿದರೆ ಅಲ್ಲಿ ಕೇವಲ ಹತ್ತು ಅಡಿ ರಸ್ತೆ ಇರುತ್ತದೆ. ಅಲ್ಲಿ ಸುಮಾರು 100 ಫ್ಲ್ಯಾಟ್‌ಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಅಲ್ಲಿರುವಂತಹ ಜನರು ಎಲ್ಲಿಗೆ ಹೋಗುತ್ತಾರೆ. ನಾವೆಲ್ಲರೂ ಬೆಂಗಳೂರು ನಗರದಲ್ಲಿ ಓದುತ್ತಿರುವಾಗ ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ಎಲ್ಲಾ ಸೇರಿ ಇಡೀ public sector ನಲ್ಲಿ ಒಂದು ಲಕ್ಷ ಜನಸಂಖ್ಯೆ ಇತ್ತು. ಈಗ ಒಂದೊಂದು techno parks ಬರುತ್ತಿದೆ. ಒಂದೊಂದರಲ್ಲಿ 60 ರಿಂದ 70 ಸಾವಿರ ಜನ ಇರುತ್ತಾರೆ. ಅವುಗಳೆಲ್ಲಾ ಗ್ರಾಮಪಂಚಾಯಿತಿಯಲ್ಲಿ ಬರುವಂತಹ ಜಾಗ. ಇವತ್ತು ಅಕ್ರಮವನ್ನು ಸಕ್ರಮ ಮಾಡುವಾಗ ಇದನ್ನೆಲ್ಲಾ ಸ್ವಲ್ಪ ಗಮನದಲ್ಲಿಟ್ಟುಕೊಳ್ಳಲಿ. ಬಿ.ಡಿ.ಎ. ಒಂದು ಜವಾಬ್ದಾರಿಯುತವಾದ ಸಂಘಟನೆ. ಅದು 'no profit, no loss' basis ನಲ್ಲಿ ನಡೆಯುತ್ತಿರುವಂಥದ್ದು. ಜನರಿಗೆ ಅನುಕೂಲವಾಗುವಂತೆ, ಮಾನ್ಯ ಸಿ.ಎಂ.ಇಬ್ರಾಹಿಂ ಅವರು ಹೇಳಿದ ಹಾಗೆ ಎರಡು ಅಥವಾ ಮೂರು ವರ್ಷಗಳಿಗೆ ಒಬ್ಬರು ಆಯುಕ್ತರನ್ನು ನೇಮಿಸಿ, ಯಾವುದೇ ಒಬ್ಬ ಅಧಿಕಾರಿಯನ್ನು ಬದಲಾವಣೆ ಮಾಡುವುದಿಲ್ಲ ಎಂಬುದಕ್ಕೆ ಸರ್ಕಾರಗಳೇ ಬಿದ್ದು ಹೋಗಿವೆ. ಆದ್ದರಿಂದ ಅವರು ಸ್ವಲ್ಪ ಗಮನಹರಿಸಬೇಕು. ಎಲ್ಲಾ ವಸತಿ ಯೋಜನೆಗಳನ್ನು ಮಾಡುವಂತಹ ಸಂಘಟನೆಗಳನ್ನು ಒಟ್ಟಿಗೆ ಕೂರಿಸಿಕೊಂಡು, ಬೆಂಗಳೂರನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕಾದರೆ, ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಲಿ. ಅವರು 12 ವರ್ಷ ವಾಸ ಇರುವಂತಹವರಿಗೆ ಸಕ್ರಮ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಈ 12 ವರ್ಷಗಳಿಗೆ parameter ಏನು? ನಾಳೆ ಯಾರೋ ಒಬ್ಬ ಎಲ್ಲೋ ಒಂದು ಮನೆಯನ್ನು ಕಟ್ಟಿ 12 ವರ್ಷದಿಂದ ಇದ್ದೇನೆ ಎಂದು ಹೇಳುತ್ತಾನೆ. ಅದಕ್ಕೆ ಅವನು ಕಂದಾಯ ಕಟ್ಟಿ ಮತ್ತು ಎಲೆಕ್ಟ್ರಿಸಿಟಿ ಬಿಲ್ ಪಾವತಿ ಮಾಡಿದ್ದರೆ ಬಹಳ ಸಂತೋಷ. Because there should be parameters. ಬೆಂಗಳೂರಿನಲ್ಲಿ ಎಲ್ಲಾ ರೀತಿಯ ಮಾಫಿಯಾಗಳಿವೆ. ಹೌಸಿಂಗ್ ಮಾಫಿಯಾ ಇದೆ. ಸ್ಲಮ್ ಮಾಫಿಯಾ ಇದೆ. ಲ್ಯಾಂಡ್ ಮಾಫಿಯಾ ಇದೆ. ಇವರುಗಳು ಸೀಲ್ ಹಾಕಿ ಎರಡೆರಡು ಕೊಟ್ಟುಬಿಡುತ್ತಾರೆ. ಆದ್ದರಿಂದ ಇದನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕು. ಈ ವಿಧೇಯಕಕ್ಕೆ ನಮ್ಮ ವಿರೋಧ ಪಕ್ಷದ ನಾಯಕರ ಮತ್ತು ನಮ್ಮ ಪಕ್ಷದ ಸಂಪೂರ್ಣವಾದ ಬೆಂಬಲವಿದೆ. ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಅದನ್ನು ಮಾಡಲಿ.

**ವೈಸ್ ಛೇರ್ಮನ್:-** ಇವತ್ತು business ಜಾಸ್ತಿ ಇದೆ. ದಯವಿಟ್ಟು ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ಮಾತನಾಡಿ, ಏಕೆಂದರೆ, ಬೇಗ ಮುಗಿಸಬೇಕು.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ, 2020 ಅನ್ನು ಸ್ವಾಗತ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈಗಾಗಲೇ ಸುಮಾರು ಜನ ಹಿರಿಯರು ಮಾತನಾಡಿದ ಹಾಗೆ, ಬಿ.ಡಿ.ಎ.ನವರು ಭೂ ಸ್ವಾಧೀನ ಕಾಯ್ದೆ ಅಡಿಯಲ್ಲಿ ಸ್ವಾಧೀನಪಡಿಸಿಕೊಂಡ ಜಮೀನಿಗೆ ಸಂಬಂಧಿಸಿದಂತೆ 4(1) ಮತ್ತು 6(1) ಅಧಿಸೂಚನೆಯಾಗಿ ಕೆಲವು ಜಾಗವನ್ನು ಬೇರೆ ಬೇರೆ ಕಾರಣಗಳಿಗೋಸ್ಕರ ವಶಪಡಿಸಿಕೊಂಡರೂ, ಬಿ.ಡಿ.ಎ. ಕಾಯ್ದೆಯ ಸೆಕ್ಷನ್ 15(3) ಅಡಿಯಲ್ಲಿ ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಆಗಿರುವುದಿಲ್ಲ. ಆಗ ಅಮಾಯಕ ಜನರು, ಆ ಜಾಗದಲ್ಲಿ ಸುಮಾರು 30 ರಿಂದ 40 ವರ್ಷಗಳ ಕಾಲ ವಾಸ ಮಾಡಿಕೊಂಡಿರುತ್ತಾರೆ. ಅಂತಹ ಜನರಿಗೆ ಮಾನವೀಯ ನೆಲೆಯಲ್ಲಿ ಒಂದು regularize ಮಾಡುವುದಕ್ಕೆ ಈ ವಿಧೇಯಕವನ್ನು ತಂದಿರುವುದು ಬಹಳ ಸ್ವಾಗತಾರ್ಹ. ಇದರ ಜೊತೆಯಲ್ಲಿ, ಸದಸ್ಯರಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಬಹಳ valid ಪ್ರಶ್ನೆಯನ್ನು ಎತ್ತಿದ್ದಾರೆ. ಈಗ 12 ವರ್ಷ ಎನ್ನುವುದಕ್ಕೆ ಅವರ ಬಳಿ ಏನು ದಾಖಲೆಗಳಿವೆ. ಅದನ್ನು ಸರ್ಕಾರದವರು clear cut ಆಗಿ ಹೇಳಬೇಕು. ಅದಕ್ಕೆ ಎಲೆಕ್ಟ್ರಿಸಿಟಿ ಬಿಲ್ ತೆಗೆದುಕೊಳ್ಳುತ್ತಾರೋ ಅಥವಾ ಇನ್ಯಾವುದಾದರೂ ಮಾನದಂಡವನ್ನು ತೆಗೆದುಕೊಳ್ಳುತ್ತಾರೊ. ಆ ಆಧಾರದ ಮೇಲೆ ಯಾವ ಮನೆಯಾಗಿದೆ ಅದಕ್ಕೆ ಇದನ್ನು ತೆಗೆದುಕೊಳ್ಳಬೇಕೆಂದು ಹೇಳಿ. ಮಾನ್ಯ ಎಸ್.ಸುರೇಶ್ ಕುಮಾರ್ ಮತ್ತು ಡಾ॥ ವೈ.ಎ.ನಾರಾಯಣಸ್ವಾಮಿಯವರು ಹೇಳಿದ ಹಾಗೆ ನಂದಿನಿ ಬಡಾವಣೆ, ಭೂಪಸಂದ್ರ ಮತ್ತು ಬೇರೆ ಬೇರೆ ಬಡಾವಣೆಗಳಲ್ಲಿ ಜನರಿಗೆ ಈಗ ಏನಾಗಿದೆ ಎಂದರೆ, ವಶಪಡಿಸಿಕೊಂಡ ಜಮೀನುಗಳಿಗೆ ಆರ್.ಟಿ.ಸಿ.ಯಲ್ಲಿ ಈಗಲೂ ಬಿ.ಡಿ.ಎ. ಎಂದು ಬರುತ್ತಿದೆ. ಹಾಗಾಗಿ ರೈತರಿಗೆ ಯಾವುದೇ ರೀತಿಯ ಸಾಲ ಅಥವಾ ಸರ್ಕಾರದ ಸೌಲಭ್ಯಗಳು ಮತ್ತು ಅವರು ಅದನ್ನು ಮಾರಾಟ ಮಾಡುವುದಕ್ಕೂ ಸಹ ಕಷ್ಟವಾಗುತ್ತಿದೆ. ಬೇಕಾದರೆ ಅನಧಿಕೃತವಾಗಿ ಮಾಡಬಹುದು. ಆದರೆ, ಸರ್ಕಾರದ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಳ್ಳುವುದಕ್ಕೆ ಮತ್ತು ಅದನ್ನು ಮಾರಾಟ ಮಾಡುವುದಕ್ಕೆ ಆಗುತ್ತಿಲ್ಲ. ಇಂತಹ ಒಂದು ದಿಸೆಯಲ್ಲಿ, ಇದು ಒಂದು ಕ್ರಾಂತಿಕಾರಕ ತಿದ್ದುಪಡಿಯೆಂದು ಹೇಳಿ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ನಮ್ಮ ಪಕ್ಷದ ವತಿಯಿಂದ ಈ ವಿಧೇಯಕಕ್ಕೆ ಸಂಪೂರ್ಣ ಬೆಂಬಲವಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, sub-section (4) ರಲ್ಲಿ clear cut ಆಗಿ ಹೇಳಿದ್ದೇವೆ. ಅವುಗಳನ್ನು ಅವನ ಇತ್ಯರ್ಥಗೊಳಿಸಿದ ಸ್ವಾಧೀನತೆಯನ್ನು ಸ್ಥಾಪಿಸುವ ಮತ್ತು ಅಲ್ಲಿ ಕಟ್ಟಡವನ್ನು ಕಟ್ಟಿರುವ ಈ ಮುಂದಿನ ಕ್ರಯ ಪತ್ರ, ಅನುಮೋದಿತ ನಕ್ಷೆ ಮತ್ತು ಕಟ್ಟಡವನ್ನು ಕಟ್ಟುವುದಕ್ಕಾಗಿ ಅನುಮತಿ, ಖಾಯಂ ವಿದ್ಯುಚ್ಛಕ್ತಿ ಸರಬರಾಜಿನ ಆದೇಶ, ನೀರು ಸರಬರಾಜು ಮತ್ತು ಅಂಥ ಕಟ್ಟಡದ ಆ ಭೂಮಿಯೊಳಗಿನ ಒಳಚರಂಡಿ ಸಂಪರ್ಕಕ್ಕಾಗಿ ಮಂಜೂರಾತಿ, ಅಂಥ ಕಟ್ಟಡಕ್ಕಾಗಿ ತೆರಿಗೆಯನ್ನು ಸಂದಾಯ ಮಾಡಿರುವುದಕ್ಕಾಗಿ ಸಕ್ಷಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಧಿಕಾರವು ನೀಡಿರುವ ಅಥವಾ ಕೊಟ್ಟಿರುವ ಆಸ್ತಿ ತೆರಿಗೆ ರಸೀದಿಯಂತಹ ಸಮರ್ಥಿಸುವ ದಸ್ತಾವೇಜುಗಳ ಪ್ರತಿಯನ್ನು ಒದಗಿಸುವುದು. ಅವರು 12 ವರ್ಷದಿಂದ ಇದ್ದಾರೆ ಎನ್ನುವುದಕ್ಕೆ ಇವುಗಳಲ್ಲಿ ಯಾವುದಾದರೂ ದಾಖಲೆಯನ್ನು ನೀಡಿ ಅದನ್ನು prove ಮಾಡಿದರೆ ಆಯಿತು.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಆದುದರಿಂದ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಬಿ.ಡಿ.ಎ. ಮತ್ತು ಇತರೆ ಇಲಾಖೆಗಳ ನಡುವೆ ಒಂದಕ್ಕೊಂದು ಹೊಂದಾಣಿಕೆ ಇಲ್ಲ. ನಾನು ಒಂದು ಘಟನೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. Public Auction ನಲ್ಲಿ ಒಂದು site auction ಆಯಿತು. ಒಂದು ಕಂಪನಿಯವರು ಸುಮಾರು 10 ರಿಂದ 11 ಕೋಟಿ ರೂಪಾಯಿಗಳನ್ನು ಕೊಟ್ಟು ನಿವೇಶನವನ್ನು ಖರೀದಿ ಮಾಡಿದ್ದರು. ಅದರ Sale Deed execute ಆಯಿತು. ಅದನ್ನು ಅವರ ಸ್ವಾಧೀನಕ್ಕೆ ನೀಡಿದರು. ಅದೆಲ್ಲಾ ಆದಮೇಲೆ, ಬಿ.ಡಿ.ಎ.ಯವರು ಯಾರೋ ಒಬ್ಬನಿಗೆ ಎಲ್ಲೋ ಒಂದು ಕಾಲದಲ್ಲಿ ಅವನು ಜಮೀನು ಕಳೆದುಕೊಂಡ ಎಂದು, ಅದೇ ನಿವೇಶನವನ್ನು ಹಂಚಿಕೆ ಮಾಡಿದರು. ಈಗ 12 ಕೋಟಿ ರೂಪಾಯಿ ಕೊಟ್ಟಿರುವವನು ಎಲ್ಲಿಗೆ ಹೋಗಬೇಕು?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಕೊನೆಗೆ ಅವರು ಕೆಳಹಂತದ ನ್ಯಾಯಾಲಯಕ್ಕೆ ಹೋಗಿ, ಹೈಕೋರ್ಟ್‌ಗೆ ಹೋಗಿ ಈಗ ಆ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಲೇವಾರಿಗೆ ಬಾಕಿ ಇದೆ. ಇಂತಹ ಘಟನೆ ನಡೆದರೆ ಯಾರಿಗೆ ಬಿ.ಡಿ.ಎ. ಮೇಲೆ ನಂಬಿಕೆ ಇರುತ್ತದೆ. ದಯವಿಟ್ಟು ಇಲ್ಲಿ ಹೊಂದಾಣಿಕೆ ಬರಬೇಕು. ಒಂದು ಬಾರಿ ಬೋರ್ಡ್‌ನಲ್ಲಿ ತೀರ್ಮಾನ ಆದಮೇಲೆ ಕಮೀಷನರ್‌ರವರಿಂದ ಕಡತ ಹೊರಟುಹೋದರೆ, ಆ ಕಡತವನ್ನು ಇಂಜಿನಿಯರ್‌ಗಳು execute ಮಾಡುತ್ತಾರೆ. ಆ ಇಂಜಿನಿಯರ್ಸ್‌ಗಳು ಎಲ್ಲಾ ವ್ಯವಹಾರಗಳನ್ನು ಮಾಡುತ್ತಾರೆ. ದಯವಿಟ್ಟು ಅದಕ್ಕೆ ಯಾವುದಾದರು ಕಡಿವಾಣ ಹಾಕಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿರುವುದಕ್ಕೆ ಧನ್ಯವಾದಗಳು. ಮಾಜಿ ಮೇಯರ್, ಹಿರಿಯ ಸದಸ್ಯರು ಹಾಗೂ ಮಾನ್ಯ ಸಿ.ಎಂ.ಇಬ್ರಾಹಿಂರವರು ಹೇಳಿರುವ ಕೆಲವೊಂದು ವಿಚಾರದಲ್ಲಿ legal

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

impediments ಇದೆ. ದಯಮಾಡಿ ಮಾನ್ಯ ಕಾನೂನು ಸಚಿವರು revisit ಮಾಡಬೇಕಾಗುತ್ತದೆ. ಏಕೆಂದರೆ, ಇದನ್ನು ನಾವು ಪಾಸ್ ಮಾಡಿಕೊಡುತ್ತೇವೆ. ನಾವು 12 ವರ್ಷಗಳ ಹಿಂದಕ್ಕೆ ಹೋದಾಗ, ಇದು ಯಾವ stage ನಲ್ಲಿ ಅಂದರೆ 4(1) ಅಥವಾ 6(1) notification stage ನಲ್ಲಿ ಅಥವಾ final award stage ನಲ್ಲಿ ಇರತಕ್ಕಂಥದ್ದನ್ನು ಮಾಡುತ್ತಿದ್ದರೋ? ಅಥವಾ possession ತೆಗೆದುಕೊಂಡಾಗಿನಿಂದ ಮಾಡುತ್ತಿದ್ದರೋ? ಏಕೆಂದರೆ, ಇವುಗಳೆಲ್ಲಾ revenue sites, ಅದನ್ನು reconvey ಮಾಡುತ್ತೀರಾ ಎಂದು ನನ್ನ ಅಭಿಪ್ರಾಯ. ಏಕೆಂದರೆ, ಮಾನ್ಯ ಸಿ.ಎಂ.ಇಬ್ರಾಹಿಂರವರು ಹೇಳಿದ ಹಾಗೆ ಇದನ್ನು ಪ್ರಶ್ನೆ ಮಾಡಬಹುದು. ಒಂದು ವೇಳೆ ಇದನ್ನು ಪಾಸ್ ಮಾಡಿಕೊಟ್ಟರು, ರೂಲ್ಸ್ ಮಾಡಬೇಕಾದರೆ ಯಾವುದು ಮತ್ತು ಏನು ಎಂದು ಇದಕ್ಕೆ clarity ಕೊಡಬೇಕಾಗುತ್ತದೆ. ಏಕೆಂದರೆ, ಕೋರ್ಟ್‌ಗೆ ಹೋಗಿ ಸುಮ್ಮನೆ ಹೊಡೆದಾಡುತ್ತಾರೆ. ಬಹುಶಃ ಮಾನ್ಯ ಪಿ.ಆರ್.ರಮೇಶ್‌ರವರು ಹೇಳಿದ ಹಾಗೆ, BDA ಗೆ reconvey ಮಾಡುವುದಾಗಲಿ, regularize ಮಾಡುವುದಕ್ಕೆ ಬರುವುದಿಲ್ಲ. ಈಗ ಎರಡು ಆ್ಯಕ್ಟ್ ಇದೆ. ಒಂದು Karnataka Land Revenue Act ಮತ್ತೊಂದು Karnataka Municipal Corporations Act. ಅದು ಈ ಎರಡು ಆ್ಯಕ್ಟ್‌ಗಳಲ್ಲಿ ಮಾತ್ರ ಬರುತ್ತದೆ ಎಂಬುದು ನನ್ನ ಭಾವನೆ. ಇದನ್ನು ನನ್ನ ಇತಿಮಿತಿಯಲ್ಲಿ ಮಾತನಾಡುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೆ, ನಾವು ಒಂದು ಒಳ್ಳೆಯ ಉದ್ದೇಶದಿಂದ ಮಾಡುತ್ತೇವೆ. ಯಾವುದು question ಆಗುತ್ತದೆ. ಯಾವುದೇ question ಆಗುವುದಿಲ್ಲ. ಯಾವುದು ನಿಲ್ಲುತ್ತದೆ, ಯಾವುದು ಹೋಗುತ್ತದೆ ಎಂದು. ಈಗ ಮಾನವೀಯತೆಯ ದೃಷ್ಟಿಯಿಂದ ಮಾಡುವಾಗ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಈಗ 25-30 ವರ್ಷದ ಹಿಂದೆಯೇ ಸುಪ್ರೀಂ ಕೋರ್ಟ್‌ನವರು reconvey ಮಾಡಬಾರದು ಎಂದು ಹೇಳಿದ್ದಾರೆ. 'No land can be reconveyed. Once it is acquired, it will not lie in the mouth of the acquiring authority to reconvey' ಎಂದು ಹೇಳಿದೆ. ಅದು ಆದಮೇಲೆ ನಾವು ವಿಧೇಯಕವನ್ನು ಪಾಸ್ ಮಾಡಿ, President assent ಕೂಡ ಸಿಕ್ಕಿತ್ತು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗುವವರೆಗೂ ಅದು ಚಾಲ್ತಿಯಲ್ಲಿತ್ತು. ಮಾನ್ಯ ಎಸ್.ಎಂ.ಕೃಷ್ಣರವರು ಬಂದು ಆ ವಿಧೇಯಕವನ್ನು repeal ಮಾಡಿಕೊಂಡು ಬಿಟ್ಟಿದ್ದರು. ಈ ರೀತಿಯ ಸರ್ಕಸ್ ಎಲ್ಲಾ ನಡೆದಿದೆ. ಕರ್ನಾಟಕ ರಾಜ್ಯದಲ್ಲಿ ಕೋರ್ಟ್ ಆರ್ಡರ್‌ಗಳು ನಡೆದಿವೆ. ಈಗ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾಗಿದೆ ಎಂದರೆ, we have no other alternative. ನಾವು ಒಪ್ಪಿಕೊಳ್ಳುತ್ತೇವೆ. ಇದನ್ನು ಭಾರಿ ಕ್ರಮಬದ್ಧವಾಗಿ ಮಾಡುವುದಕ್ಕೆ ಹೊರಟಿರುವುದಿಲ್ಲ. We will do it. ಹಾಗಾಗಿ ಈ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಮತ್ತೊಮ್ಮೆ ಕೋರಿಕೊಳ್ಳುತ್ತೇನೆ.

**(ಮುಂದು)**

**(914) 26.09.2020 04.30 LL-AK** **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2020 ಅನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 3 ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ವಿಧೇಯಕ್ಕೆ ಸೇರಿಸಲಾಯಿತು)**

**ಖಂಡ–1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ, 2020ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020 ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, ಅನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, 2020ರ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ವೇಸ್ಟ್ ಮ್ಯಾನೇಜ್‌ಮೆಂಟ್ ಬಗ್ಗೆ ಅನೇಕ ಕೇಸ್‌ಗಳು ಮತ್ತು ರಿಟ್ ಅರ್ಜಿಗಳು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಹೋಗಿ, even now hearings are going on. ಅದರಲ್ಲಿ ಮುಖ್ಯವಾಗಿ ಮಾನ್ಯ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:24739–40/2012ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಈ ಬಗ್ಗೆ strict action ತೆಗೆದುಕೊಳ್ಳಬೇಕೆಂದು ನಿರ್ದೇಶನ ನೀಡಿತ್ತು ಮತ್ತು N.G.T. (National Green Tribunal) ನಲ್ಲಿಯೂ ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಮಾಡಬೇಕೆಂದು ನಮಗೆ ಮಾರ್ಗದರ್ಶನ ನೀಡಿರುತ್ತದೆ. ಇದರಲ್ಲಿ ಕಸ ವಿಂಗಡಣೆ ಬಗ್ಗೆ ಅಂದರೆ, ಹಸಿ ಕಸ ಮತ್ತು ಒಣ ಕಸ ಬೇರೆ ಮಾಡುವುದಕ್ಕೆ ವಿಫಲರಾಗಿರುವುದು ಮತ್ತು ಖಾಲಿ ನಿವೇಶನಗಳಲ್ಲಿ ಕಸವನ್ನು ರಾಶಿ ಮಾಡುವುದು ಮತ್ತು ಹಸಿ ಕಸವನ್ನು ಎಲ್ಲಿ ಬೇಕೆಂದರಲ್ಲಿ ಬಿಸಾಡುವುದಕ್ಕೆ ಬಿಡುವುದು, ಇವೆಲ್ಲಾ ಮಾಡುತ್ತಿರುವವರೆಗೆ ಇದ್ದಂತಹ 1 ಸಾವಿರ ದಂಡವನ್ನು, ಕೇಂದ್ರ ಸರ್ಕಾರ ಒಂದು ಗೈಡ್‌ಲೈನ್ ಕೊಟ್ಟು ಈ ದಂಡವನ್ನು up to two lakh rupees ತೆಗೆದುಕೊಂಡು ಹೋಗಲೇಬೇಕೆಂದು ಹೇಳಿದ್ದರಿಂದ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿರುತ್ತೇವೆ. ನಾವು ಕೇವಲ 1 ಸಾವಿರ ಅಥವಾ 2 ಸಾವಿರ ದಂಡ ಎಂದು ಹೇಳಿದರೆ, ಬೆಂಗಳೂರು ಸಿಟಿ ಅಥವಾ ಬೇರೆ ಪಟ್ಟಣಗಳಲ್ಲಿ ಈ ಕಸ ವಿಲೇವಾರಿ ಮಾಡುವುದಕ್ಕೆ ಆಗುವುದಿಲ್ಲ. ಯಾವ individual, ಅಲ್ಲಿ ಯಾರು ಜಮೀನು ಮಾಲೀಕರು ಇರುತ್ತಾರೆ, ಅದು ಅವರ ರಿಸ್ಕ್. ಒಂದು ವೇಳೆ ಅವರು ಕಸ ವಿಲೇವಾರಿ ಮಾಡದೇ ಹೋದರೆ, ನಗರಪಾಲಿಕೆಗಳಿಗೆ ನಾವು ಅನುಮತಿ ಮಾಡುತ್ತಿದ್ದೇವೆ, maximum ceiling of two lakh rupees ವರೆಗೆ ದಂಡ ಹಾಕುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿದ್ದೇವೆ ಹಾಗೂ ಇದಕ್ಕೆ ಮಾನ್ಯ ಉಚ್ಛ ನ್ಯಾಯಾಲಯದ ಅನುಮತಿ ಸಹ ಇದೆ. ಆದುದರಿಂದ, ಈ ವಿಧೇಯಕಕ್ಕೆ ಸದನ ಅನುಮತಿ ನೀಡಬೇಕು.

**ಶ್ರೀ ಪಿ.ಆರ್. ರಮೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ನಗರಪಾಲಿಕೆಗಳಿಗೆ ತಂದಿರುವಂತಹ ವಿಧೇಯಕ, ಇದನ್ನು K.M.C. (Karnataka Municipal Corporations) Act ಎಂದು ಹೇಳುತ್ತೇವೆ. ಅದಕ್ಕೆ ಕೆಲವೊಂದು ಪ್ರಾವಿಷನ್ ತರುತ್ತಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಇಲ್ಲಿ ಪ್ರಮುಖವಾಗಿರುವಂಥದ್ದು segregation of waste. Dry and wet waste ನ ವಿಂಗಡಣೆ ಮಾಡಿ ಜನ ಇಟ್ಟುಕೊಳ್ಳುತ್ತಾರೆ. ಅವರು ಕಸವನ್ನು ವಿಂಗಡಣೆ ಮಾಡದೇ ಇದ್ದರೆ ಅವರಿಗೆ ದಂಡ ಆಗುತ್ತದೆ. ಅಂದರೆ, ಎಲ್ಲಾ ಕಸವನ್ನು ಒಟ್ಟಿಗೆ ಹಾಕಿದರೆ ಅವರಿಗೆ ದಂಡ ಹಾಕಬಹುದು. ಆದರೆ, ಆ ರೀತಿ ವಿಂಗಡಣೆ ಮಾಡಿದಂತಹ ಕಸವನ್ನು ತೆಗೆದುಕೊಳ್ಳುವುದಕ್ಕೆ ಇವೊತ್ತಿನ ದಿವಸ ಪಾಲಿಕೆಯಲ್ಲಿ ಹಸಿ ಕಸ ತೆಗೆದುಕೊಳ್ಳುವುದಕ್ಕೆ ಒಬ್ಬ ಕಂಟ್ರಾಕ್ಟರ್ ಅನ್ನು ಫಿಕ್ಸ್ ಮಾಡಿದ್ದಾರೆ. ಒಂದು ಏಜೆನ್ಸಿಗೆ ಹಸಿ ಕಸ ಸಂಗ್ರಹ ಮಾಡುವುದು, ಇನ್ನೊಂದು ಏಜೆನ್ಸಿಗೆ ಒಣ ಕಸ ಸಂಗ್ರಹ ಮಾಡುವುದಕ್ಕೆ ಫಿಕ್ಸ್ ಮಾಡಿದ್ದಾರೆ. ಬಹುಶಃ ಒಣ ಕಸ ಸಂಗ್ರಹ ಮಾಡುವುದಕ್ಕೆ ಏಜೆನ್ಸಿ ಫಿಕ್ಸ್ ಮಾಡಿರುವ ಮಾಹಿತಿ ಇಲ್ಲ. ಆದರೆ, ಹಸಿ ಕಸ ಸಂಗ್ರಹ ಮಾಡುವುದಕ್ಕೆ ಏಜೆನ್ಸಿ ಫಿಕ್ಸ್ ಮಾಡಿದ್ದಾರೆಂದು ಹೇಳಿದ್ದಾರೆ. ಉದಾಹರಣೆಗೆ, ನನ್ನ ಮನೆಗೆ ಒಬ್ಬ ವ್ಯಕ್ತಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸುಮಾರು 6 ಗಂಟೆಗೆ ಬಂದು ಹಸಿ ಕಸ ತೆಗೆದುಕೊಂಡು ಹೋಗುತ್ತಾನೆ. ನಾನು ಯಾವುದೇ ಕೆಲಸಕ್ಕೆ ಹೋಗದೇ, ಒಣ ಕಸ ತೆಗೆದುಕೊಳ್ಳುವವನು ಬರುತ್ತಾನೆಂದು ಕಾಯುತ್ತಾ ಇರಬೇಕು. ಆದುದರಿಂದ, ನಾನು ಹೇಳುವುದೇನೆಂದರೆ, ಎರಡೂ ಕಸವನ್ನು ಒಬ್ಬರೇ ತೆಗೆದುಕೊಳ್ಳಬೇಕು. ಆ ವ್ಯಕ್ತಿ ಅದನ್ನು ವಿಂಗಡಣೆ ಮಾಡಿಕೊಳ್ಳಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ನಾವು ನಗರಪಾಲಿಕೆಗಳಿಗೆ empowering clause ಕೊಡುತ್ತಿದ್ದೇವೆ. ಬದಲಾಗಿ, ನಾವೇ direct law ಮಾಡುತ್ತಿಲ್ಲ. ಅವರಿಗೆ 2 ಲಕ್ಷ ರೂಪಾಯಿಗಳವರೆಗೆ ದಂಡ ಹಾಕುವುದಕ್ಕೆ ಅಧಿಕಾರ ಕೊಡುತ್ತಿದ್ದೇವಷ್ಟೇ. ಹಾಗಾಗಿ, ನಗರಪಾಲಿಕೆಗಳು ಅವುಗಳನ್ನು ಕಾರ್ಪೋರೇಷನ್ ರೂಲ್ಸ್‌ನಲ್ಲಿ ಮಾಡಿಕೊಳ್ಳಬಹುದು. ಅದಕ್ಕೆ ನಮ್ಮ ತಕರಾರು ಇರುವುದಿಲ್ಲ. ಆದರೆ, ನಾವು ಈಗಿರುವಂತಹ 1 ಸಾವಿರ ದಂಡವನ್ನು 2 ಲಕ್ಷದವರೆಗೂ ಹಾಕಬಹುದೆಂದು ಮಾತ್ರ ಅಧಿಕಾರ ಕೊಡುತ್ತಿದ್ದೇವೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆ ಒಂದು ಮಾಡೆಲ್ ಸಿಟಿಯಾಗಿತ್ತು. ಈ ಬಗ್ಗೆ ಮಾನ್ಯ ಸುರೇಶ್ ಕುಮಾರ್‌ರವರಿಗೆ ಚೆನ್ನಾಗಿ ಗೊತ್ತಿದೆ. 1999ರಲ್ಲಿ ಈ ನಗರವನ್ನು ಮಾನ್ಯ ಸುಪ್ರೀಂ ಕೋರ್ಟ್ ಬೆಂಗಳೂರು ನಗರ ಮಾಡೆಲ್ ರೀತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಮಾಡಿ, ವಿಲೇವಾರಿ ಮಾಡಬೇಕೆಂದು ದೇಶದಲ್ಲಿರುವ ಎಲ್ಲಾ ನಗರ ಪಾಲಿಕೆಗಳಿಗೆ ನಿರ್ದೇಶನ ನೀಡಿತ್ತು. ಪ್ರಪ್ರಥಮವಾಗಿ ಮನೆಗಳಿಂದ ಕಸ ತೆಗೆಯುವುದು ಬೆಂಗಳೂರಿನಲ್ಲಿ 1990ರಲ್ಲಿ ಪ್ರಾರಂಭವಾಯಿತು. ಈ ಬಗ್ಗೆ ಶ್ರೀ ಸುರೇಶ್ ಕುಮಾರ್‌ರವರಿಗೆ ಗೊತ್ತಿದೆ. ಇವೊತ್ತಿನ ದಿವಸ ವೆಬ್‌ಸೈಟ್‌ನಲ್ಲಿ ಬೆಂಗಳೂರು ಬಗ್ಗೆ ಅಷ್ಟು ಒತ್ತು ಕೊಡುತ್ತಿಲ್ಲ. ನಾನು ಹೇಳುವುದೇನೆಂದರೆ, ಯಾವುದೋ ಬೇರೆ ನಗರ 1995 ಅಥವಾ 1996 ನಲ್ಲಿ ಸ್ವಚ್ಛತೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆಂದು ಇದೆ. ಈ ಬಗ್ಗೆ ಗಮನಹರಿಸಬೇಕೆಂದು ಶ್ರೀ ಎಸ್. ಸುರೇಶ್ ಕುಮಾರ್‌ರವರಲ್ಲಿ ನಾನು ವಿನಂತಿ ಮಾಡುತ್ತೇನೆ. ಬೆಂಗಳೂರಿನಲ್ಲಿ ಮೊದಲ ಬಾರಿಗೆ ಬೆಲ್ ಸಿಸ್ಟಮ್ ಅನ್ನು ನಮ್ಮ ವಾರ್ಡ್‌ನಲ್ಲಿ ಇಂಟ್ರಡ್ಯೂಸ್ ಮಾಡಿದೆವು. ಅಂದರೆ, ಬೆಲ್ ಬಾರಿಸುತ್ತಾ, ಮನೆ ಮನೆಗೆ ಹೋಗಿ ಕಸ ಸಂಗ್ರಹ ಮಾಡುವುದನ್ನು 1990ನೇ ಸೆಪ್ಟೆಂಬರ್ 16ನೇ ತಾರೀಖಿನಂದು ಪ್ರಾರಂಭ ಮಾಡಿದೆವು. ಬೆಲ್ ಸಿಸ್ಟಮ್ ವ್ಯವಸ್ಥೆಯನ್ನು ಯಾವ ರೀತಿ ನಡೆಸುತ್ತಿದ್ದಾರೆಂದು ನಮ್ಮ ವಾರ್ಡ್‌ಗೆ, ಕಲ್ಕತ್ತಾದಿಂದ, ಹೈದರಾಬಾದ್‌ದಿಂದ, ಮತ್ತು ಗೋವಾದಿಂದ administrators ಬಂದಿದ್ದರು. ನಮ್ಮ ವಾರ್ಡ್‌ನಲ್ಲಿ 280 ಡಸ್ಟ್‌ಬಿನ್‌ಗಳಿದ್ದವು. One fine morning ಅದು 28 ಕ್ಕೆ ಇಳಿದವು. ಇವೊತ್ತಿನ ದಿವಸ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಇದು accountability, responsibility ಇರುತ್ತದೆ. ಆದರೆ, ಈ ವಿಧೇಯಕದ ಕೊನೆಯಲ್ಲಿ 'Dumping of building waste irregularly' ಎಂದು ತಿದ್ದುಪಡಿ ತಂದಿರುತ್ತಾರೆ. ಈ debris ಎನ್ನುವುದು ದೊಡ್ಡ menace. ಅದನ್ನು ಅವನು ಎಲ್ಲೆಂದರಲ್ಲಿ ಹಾಕುತ್ತಾನೆ. ಅದಕ್ಕೆ 1 ಸಾವಿರದಿಂದ 5 ಸಾವಿರ ದಂಡ ಹಾಕಿರುತ್ತಾರೆ. ಆದರೆ, ಅದನ್ನು ಹಾಕುವವನು ಖಂಡಿತವಾಗಿ ಆ ದಂಡವನ್ನು ಕಟ್ಟಿ ರಸ್ತೆ ಪಕ್ಕದಲ್ಲಿಯೇ ಹಾಕಿ ಹೋಗುತ್ತಾನೆ. ಕಾರಣ ಏನೆಂದರೆ, ಅದನ್ನು ತಾವು ಎಲ್ಲಿಯೋ ದೂರದಲ್ಲಿ designated place ನಲ್ಲಿ ಹಾಕಬೇಕೆಂದು ಸೂಚಿಸಿದರೆ, 1 ಸಾವಿರ ರೂಪಾಯಿಗೆ ಆ ವಿಳಾಸವನ್ನು ಹುಡುಕಿಕೊಂಡು ಅಲ್ಲಿಯವರೆಗೂ ಹೋಗುವುದಕ್ಕಾಗುವುದಿಲ್ಲವೆಂದು ಆತ ಅಲ್ಲಿಯೇ ಹಾಕಿ, 1 ಸಾವಿರ ರೂಪಾಯಿ ದಂಡ ಕೊಟ್ಟು ಹೋಗುತ್ತಾನೆ. ಹಾಗಾಗಿ, ದಯಮಾಡಿ 'Dumping of building waste irregularly' ಎಂದು ಏನು ತಿದ್ದುಪಡಿ ಮಾಡಿದ್ದಾರೆ, ಅದನ್ನು ಕನಿಷ್ಠ 10 ಸಾವಿರ ರೂಪಾಯಿ ಹೆಚ್ಚು ಮಾಡಬೇಕು. ಇದರಲ್ಲಿ 1 ಸಾವಿರ ದಂಡ ಹಾಕಿರುತ್ತಾರೆ.

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, 1 ಸಾವಿರ ರೂಪಾಯಿ ದಂಡ ಎಂದು ನಾವು ತಿದ್ದುಪಡಿ ಮಾಡಿರುವುದಿಲ್ಲ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಆದರೆ ಈ ವಿಧೇಯಕದಲ್ಲಿ 5 ಸಾವಿರ ರೂಪಾಯಿ ಎಂದು ಬರೆದಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಹೇಳಿದಂತೆ, ಇದುವರೆವಿಗೂ 1 ಸಾವಿರ ರೂಪಾಯಿ ದಂಡವನ್ನು ಹಾಕುವುದಕ್ಕೆ ಇದ್ದಂತಹ ಅಧಿಕಾರವನ್ನು, ಮಾನ್ಯ ನ್ಯಾಯಾಲಯಗಳು ಅಭಿಪ್ರಾಯ ಪಟ್ಟಿರುವುದರಿಂದ, 2 ಲಕ್ಷ ರೂಪಾಯಿಗಳವರೆಗೆ ಹೆಚ್ಚು ಮಾಡುವುದಕ್ಕೆ ಇದೊಂದು empowering clause ಎಂದು ನಾನು ಹೇಳಿರುತ್ತೇನೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಈ ವಿಧೇಯಕದಲ್ಲಿ ಏನು ತಿದ್ದುಪಡಿ ಮಾಡುತ್ತಿದ್ದಾರೆಂಬ ಬಗ್ಗೆ ಮಾಹಿತಿ ಇರುವುದಿಲ್ಲ. And that depends on the rules.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, that depends on the respective corporations.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ನಾವು ನಗರಪಾಲಿಕೆಗಳಿಗೆ ಪ್ರಾವಿಷನ್ ಮಾಡುತ್ತಿದ್ದೇವೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಈ debris ಎನ್ನುವುದು ಬೆಂಗಳೂರು ನಗರದಲ್ಲಿ ಒಂದು ದೊಡ್ಡ ದಂಧೆಯಾಗಿದೆ. ಆದುದರಿಂದ, ಈ ವಿಧೇಯಕದಲ್ಲಿ ಏನು ತಿದ್ದುಪಡಿ ತಂದಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಇನ್ನಷ್ಟು ಮಾರ್ಗದರ್ಶನಗಳನ್ನು ಸರ್ಕಾರದಿಂದ ಕೊಡಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ, ಕಾರ್ಪೋರೇಷನ್‌ನಲ್ಲಿ ಇವೆಲ್ಲವನ್ನೂ ಎನ್‌ಫೋರ್ಸ್ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಇವುಗಳನ್ನು ನಾವು 20–30 ವರ್ಷಗಳಿಂದ ನೋಡುತ್ತಲೇ ಇದ್ದೇವೆ. ಮೊದಲು 4 ದಿವಸ ಮಾಡಿ ನಂತರ ಬಿಟ್ಟು ಬಿಡುತ್ತಾರೆ. I welcome this bill.

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ತಂದಿರುವಂತಹ ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020 ಅನ್ನು ನಾನು ಸ್ವಾಗತ ಮಾಡುತ್ತೇನೆ. ಬೆಂಗಳೂರು ನಗರದಲ್ಲಿ ಹಸಿ ಮತ್ತು ಒಣ ಕಸವನ್ನು ವಿಂಗಡಣೆ ಮಾಡುವ ವಿಚಾರದ ಬಗ್ಗೆ ಬಹಳಷ್ಟು ಚರ್ಚೆಗಳಲ್ಲಿ ಮಾಫಿಯಾ ಇದೆಯೆಂಬುದನ್ನು ಕೇಳುತ್ತಿದ್ದೆನು. ಬೆಂಗಳೂರು ನಗರದಲ್ಲಿರುವ ಕಸ ಬೇರೆ, ಹಳ್ಳಿಗಳಲ್ಲಿರುವ ಕಸ ಬೇರೆ. ಹಳ್ಳಿಗಳಲ್ಲಿರುವ ಕಸ ಗೊಬ್ಬರ ಅದನ್ನು ಉಪಯೋಗ ಮಾಡುತ್ತಾರೆ. ಏಕೆಂದರೆ, ಅದರಲ್ಲಿ ಹುಲ್ಲು, ಸಗಣಿ ಹಾಕಿರುತ್ತಾರೆ. ಆದರೆ, ಬೆಂಗಳೂರಿನಲ್ಲಿ ರಾತ್ರಿ ವೇಳೆಯಲ್ಲಿ ಉಳಿದಿರುವಂತಹ ಅನ್ನವನ್ನು ಸಹ ಹಾಕಿರುತ್ತಾರೆ. ಅದಕ್ಕೋಸ್ಕರ ಇದರಲ್ಲಿ ಮಾಫಿಯಾ ಕೂಡ ಇದೆ. ಕಸ ವಿಲೇವಾರಿ ಮಾಡತಕ್ಕಂತಹ ಮಾಫಿಯಾ ಅನ್ನು ಕಾರ್ಪೋರೇಷನ್ ನಲ್ಲಿ ಯಾರು ಕೂಡ ಟಚ್ ಮಾಡುವುದಕ್ಕೆ ಆಗುತ್ತಿಲ್ಲ. ಎರಡನೆಯದಾಗಿ, ಮೊನ್ನೆಯ ದಿವಸ ತಾವು ನನಗೆ ತ್ಯಾಜ್ಯ ವಿಲೇವಾರಿ ಮಾಡುವ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುತ್ತೀರಿ. ಅದರಲ್ಲಿ ನಾನು ಇ–ತ್ಯಾಜ್ಯ ವಿಲೇವಾರಿ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳುತ್ತಾರೆಂದು ಕೇಳಿದ್ದೇನೆ? ಇಡೀ ಭಾರತ ದೇಶದಲ್ಲಿಯೇ ಅತಿ ಹೆಚ್ಚು ಇ–ತ್ಯಾಜ್ಯ, ಬೆಂಗಳೂರು ನಗರದಲ್ಲಿದೆ. It is more hazardous than other wastes collected by the corporation. ಇದನ್ನು ವಿಲೇವಾರಿ ಮಾಡುವುದಕ್ಕೆ ಯಾವ ರೀತಿ ಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ದಯಮಾಡಿ ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು)**

**(915)26.09.2020/4.40/ವೈಎಲ್-ಆರ್‌ಎನ್**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವಂಥ 2020ರ, ಕರ್ನಾಟಕ ನಗರಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಒಳ್ಳೆಯ ಉದ್ದೇಶದಿಂದ ತಂದಿದ್ದಾರೆ ಎಂದು ಸ್ವಾಗತಿಸುತ್ತೇನೆ. ಆದರೆ, ಈ ವಿಧೇಯಕದಲ್ಲಿ ಭಾರತ ಸರ್ಕಾರ ಸೂಚನೆ ನೀಡಿದರೆ ಅದರಡಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಮನೆಯಲ್ಲಿ ಒಣ ತ್ಯಾಜ್ಯ, ಹಸಿ ತ್ಯಾಜ್ಯವನ್ನು ವಿಂಗಡನೆ ಮಾಡದೇ ಹೋದರೆ, ಜಾಸ್ತಿ ದಂಡವನ್ನು ವಿಧಿಸಲಾಗುತ್ತದೆ ಎಂದು ಹೇಳಿದ್ದು, ಅದನ್ನು ಸ್ವಾಗತಿಸುತ್ತೇವೆ. ಬೆಂಗಳೂರಿನಲ್ಲಿಯೇ ವಾಸ ಮಾಡುವಂಥ ಸಾಕಷ್ಟು ಶಾಸಕರು ಸದನದಲ್ಲಿದ್ದು ವೈಯಕ್ತಿಕವಾಗಿ ಯೋಚನೆ ಮಾಡಬೇಕಾಗುತ್ತದೆ.

ತ್ಯಾಜ್ಯವನ್ನು ತೆಗೆದುಕೊಂಡು ಹೋಗಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬಡಾವಣೆಗಳಿಗೆ ಆಟೋರಿಕ್ಷಾ ಬರುತ್ತದೆ. ಆಟೋರಿಕ್ಷಾ ಮುಖಾಂತರ ಎಲ್ಲಾ ತ್ಯಾಜ್ಯವನ್ನು ತೆಗೆದುಕೊಂಡು ಹೋಗಿ, ಲಾರಿ ಒಳಗೆ ತುಂಬುತ್ತಾರೆ. ಮನೆಯ ಹತ್ತಿರ ಬಂದು ತ್ಯಾಜ್ಯವನ್ನು ತೆಗೆದುಕೊಂಡು ಹೋಗುವಾಗ ಒಣ ತ್ಯಾಜ್ಯ, ಹಸಿ ತ್ಯಾಜ್ಯ ಎಂದು ಬೇರೆ-ಬೇರೆ ಕವರ್‌ನಲ್ಲಿ ವಿಲೇವಾರಿ ಮಾಡಿರುವುದನ್ನು ಆಟೋರಿಕ್ಷಾದವನ್ನು ಕೈಗೆ ಕೊಟ್ಟ ತಕ್ಷಣ ಎರಡೂ ಕವರನ್ನು ಆಟೋರಿಕ್ಷಾದೊಳಗೆ ಒಟ್ಟಿಗೆ ಸುರಿದುಕೊಳ್ಳುತ್ತಾರೆ. ನಾವು ತ್ಯಾಜ್ಯವನ್ನು ವಿಲೇವಾರಿ ಮಾಡಿರುತ್ತೇವೆ. ಆದರೆ, ತ್ಯಾಜ್ಯವನ್ನು ತೆಗೆದುಕೊಂಡು ಹೋಗಲು ಬರುವಂಥ ಕಾರ್ಪೊರೇಷನ್‌ರವರು ಒಟ್ಟಿಗೆ ಸುರಿದುಕೊಳ್ಳುತ್ತಾರೆ. ನಂತರ 2-3 ಆಟೋರಿಕ್ಷಾಗಳು ತ್ಯಾಜ್ಯವನ್ನು ತೆಗೆದುಕೊಂಡು ಹೋಗಿ, ಒಂದು ಕಡೆ ಸುರಿಯುತ್ತಾರೆ. ಅಲ್ಲಿಗೆ ಲಾರಿ ಬರುತ್ತದೆ, ಆ ಲಾರಿಗೆ ತ್ಯಾಜ್ಯವನ್ನು ಸುರಿದುಕೊಂಡ ಸಂಪೂರ್ಣವಾಗಿ ಟಾರ್ಪಲ್ ಹಾಕಿ ಕವರ್ ಮಾಡಿ, ತೆಗೆದುಕೊಂಡು ಹೋಗಬೇಕೆಂದು ಹೇಳಿದರೂ ಸಹ ತ್ಯಾಜ್ಯವನ್ನು ರಸ್ತೆ ಉದ್ದಕ್ಕೂ ಚೆಲ್ಲಿಕೊಂಡು ಹೋಗುತ್ತಾನೆ. ಮಾನ್ಯ ಸದಸ್ಯರಾದ ಶ್ರೀ ಹರಿಪ್ರಸಾದ್‌ರವರು ಹೇಳಿದ ಹಾಗೆ ಇದೊಂದು ದೊಡ್ಡ ಮಾಫಿಯಾ ಆಗಿದೆ. ಬೆಂಗಳೂರಿನ ಎಂ.ಎಲ್.ಎ. ಗಳ ಸಂಬಂಧಿಕರೇ ಎಷ್ಟೋ ಜನರು ಇದರ ಗುತ್ತಿಗೆದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎಷ್ಟೋ ಜನ ಬಿ.ಬಿ.ಎಂ.ಪಿ. ಸದಸ್ಯರ ಸಂಬಂಧಿಕರೇ ಗುತ್ತಿಗೆದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಿಂದಾಗಿ ಯಾರಿಗೂ ಸಹ ಅವರನ್ನು ಮಾತನಾಡಿಸುವ ಶಕ್ತಿ ಇಲ್ಲದಂತಾಗಿದೆ. ಜನರು ನಮ್ಮ ಮನೆ, ಬೀದಿ ಸ್ವಚ್ಛವಾಗಿರಬೇಕೆಂದು ಪ್ರಾಮಾಣಿಕವಾಗಿ ವಿಲೇವಾರಿ ಮಾಡಿದರೂ ಸಹ ಅವೈಜ್ಞಾನಿಕವಾಗಿ ಕಾರ್ಪೊರೇಷನ್‌ರವರು ಲಾರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಟ್ಟಾಗಿ ತ್ಯಾಜ್ಯವನ್ನು ತುಂಬಿಕೊಳ್ಳುತ್ತಾರೆ. ಬಿ.ಬಿ.ಎಂ.ಪಿ. ಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡಲು ಎಷ್ಟು plant ಗಳಿವೆ. 198 ವಾರ್ಡ್‌ಗಳಲ್ಲಿ 170 ಚದರ ಅಡಿ ತ್ಯಾಜ್ಯವನ್ನು ವಿಲೇವಾರಿ ಮಾಡಿ, waste management ಮಾಡಿ treatment ಮಾಡಲು ಸಾಧ್ಯವಾಗಲಿಲ್ಲ. ಬೆಂಗಳೂರು ನಗರದ ತ್ಯಾಜ್ಯವನ್ನು ಶೇಖರಣೆ ಮಾಡಿಕೊಂಡು, ಗ್ರಾಮ ಪಂಚಾಯಿತಿ ರಸ್ತೆಗಳ ಹತ್ತಿರ ತೆಗೆದುಕೊಂಡು ಹೋಗಿ ಸುರಿಯುತ್ತಿದ್ದು, ಅಲ್ಲಿನ ಜನ ಏನು ಪಾಪ ಮಾಡಿದ್ದಾರೆ? ಬೆಂಗಳೂರು ನಗರದ ತ್ಯಾಜ್ಯದ ವಾಸನೆಯನ್ನು ಅವರು ಕುಡಿಯುತ್ತಿದ್ದಾರೆ. ಇಲ್ಲಿ ಶುದ್ಧವಾಗಿರುವ ತ್ಯಾಜ್ಯವನ್ನು ತೆಗೆದುಕೊಂಡು ಹೋಗಿ ಗ್ರಾಮ ಪಂಚಾಯಿತಿ ರಸ್ತೆಯಲ್ಲಿ ಸುರಿದು ಅಲ್ಲಿನ ಪರಿಸರ ಹಾಳು ಮಾಡುತ್ತಿದ್ದಾರೆ. ಹಳ್ಳಿಗಳಿಗೆ ಲಾರಿ ಹೋದರೆ ಸಾಕು ಅಲ್ಲಿನ ಜನರು ಲಾರಿಯನ್ನು ಓಡಿಸಿಕೊಂಡು ಬಂದು ಹೊಡೆಯುತ್ತಿದ್ದಾರೆ. ನಾನು ಒಬ್ಬ ಸ್ಥಳೀಯ ಸಂಸ್ಥೆಯ ಸದಸ್ಯನಾಗಿ ಆಯ್ಕೆಯಾಗಿರುವುದರಿಂದ ಕಾರ್ಪೊರೇಷನ್ ಸಹ ಬರುತ್ತದೆ, ಪಂಚಾಯಿತಿ ಸಹ ಬರುತ್ತದೆ. ಗ್ರಾಮ ಪಂಚಾಯಿತಿಯ ಜನರು ತ್ಯಾಜ್ಯವನ್ನು ತಂದು ಸುರಿದು ಏತಕ್ಕೆ ನಮ್ಮನ್ನು ಹಾಳು ಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದಾರೆ. ತ್ಯಾಜ್ಯವನ್ನು ಗ್ರಾಮ ಪಂಚಾಯಿತಿಯಲ್ಲಿ ಸುರಿಯುವುದರಿಂದ ಭೂಮಿಯ ಒಳಗೆ ಅದರ ರಸ ಹೋಗುವುದರಿಂದ ಕುಡಿಯುವ ನೀರಿನ ಉಪಯೋಗ ಮಾಡಿಕೊಳ್ಳುತ್ತಿದ್ದ ಬೋರ್‌ವೆಲ್ ಸಹ ಕಲುಷಿತವಾಗಿದೆ. ಇದಕ್ಕೆ ಏನು ಮಾಡಬೇಕು? ಮನೆಗಳಿಗೆ ಮಾತ್ರ ಹೆಚ್ಚು ದಂಡ ವಿಧಿಸುತ್ತೇವೆ ಎಂದು ಹೇಳುತ್ತಾರೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನ್ನ ಒಂದು ಸಲಹೆ ಏನೆಂದರೆ, ಮಾನ್ಯ ಸದಸ್ಯರಾದ ಶ್ರೀ ಹರಿಪ್ರಸಾದ್‌ರವರು e-waste ಕುರಿತು Ministry of Ecology and Environment of India ರವರಿಂದ ಎಂದು ಸುತ್ತೋಲೆ ಹೊರಡಿಸಲಾಗಿದೆ. e-waste ಎಂದರೆ recyclable waste and e-waste path ಮಾಡಬೇಕೆಂದು ಬೆಂಗಳೂರು, ಮೈಸೂರು, ಕೋರಮಂಗಲ, ಹೊಸೂರು ಈ ರೀತಿಯಾಗಿ 7-8 ನಗರಗಳಿದ್ದು, ಅದನ್ನು ಸಹ ಸೇರಿಸಬಹುದಾಗಿತ್ತಲ್ಲವೇ ಎಂಬುದು ನನ್ನ ಉದ್ದೇಶ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಹೇಳಿದ ಹಾಗೆ ನಗರ ಪಾಲಿಕೆಯವರು ಅವರ ನಿಯಮದ ಕೆಳಗೆ ಮಾಡಿಕೊಳ್ಳುವುದು. ನಾವು ನ್ಯಾಯಾಲಯ, National Green Tribunal, Government of India ನಿರ್ದೇಶನದನ್ವಯ penalty ಬಹಳ meagre ಇದ್ದು, ಜಾಸ್ತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲು ಕಾನೂನಿನಲ್ಲಿ ಅವಕಾಶ ಕಲ್ಪಿಸುವಂತೆ ಅನುಮತಿಸಿದ್ದೇವೆ. ಕಾರ್ಪೊರೇಷನ್‌ರವರು ಸಂಕ್ಷಿಪ್ತವಾಗಿ ನಿಯಮಗಳನ್ನು ಮಾಡಿಕೊಂಡು dispose ಮಾಡಬೇಕಾಗಿದ್ದು, ಅವರಿಗೆ ಬಿಟ್ಟ ಜವಾಬ್ದಾರಿಯಾಗಿದೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 3ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ..

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**“ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.”**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ಮೂರನೇ ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮದ ಕೆಳಗೆ ಕಾಯ್ದೆಯನ್ನು ಮಾಡಿ, ಖಾಸಗಿಯವರು ಬಡಾವಣೆಗಳನ್ನು ನಿರ್ಮಿಸುತ್ತಿದ್ದರು, ಅದು ಒಂದು ಕಾಲದಲ್ಲಿ liberal ಆಗಿತ್ತು. ಯೋಜನಾ ಪ್ರಾಧಿಕಾರವನ್ನು ಅನುಮೋದನೆ ಮಾಡಿ, ಶೇಕಡಾ 40 ರಷ್ಟು, ಶೇಕಡಾ 30 ರಷ್ಟು dispose ಮಾಡಬಹುದೆಂದು ಮಾಡಲಾಗಿತ್ತು. ನಂತರ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2015ನೇ ಸಾಲಿನಲ್ಲಿ ಈ ಕಾಯ್ದೆಯನ್ನು ಜಾರಿಗೆ ತಂದು, ಎಲ್ಲಾ ಪ್ರದೇಶಗಳಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸದೇ ನಿವೇಶನಗಳನ್ನು ವಿತರಿಸಲು ಅವಕಾಶ ಇರುವುದಿಲ್ಲವೆಂಬ ನಿರ್ಬಂಧವನ್ನು ಮಾಡಲಾಗಿತ್ತು. ಮೂಲಸೌಕರ್ಯವನ್ನು ಕಲ್ಪಿಸದೇ ಹೊಸದಾಗಿ ಬಡಾವಣೆ ಮಾಡಿ, ನಿವೇಶನ ಹಂಚಿಕೆ ಮಾಡುವುದರಿಂದ ಕಷ್ಟವಾಗುತ್ತಿದ್ದು ಮೂಲಸೌಕರ್ಯವನ್ನು ಕಲ್ಪಿಸಿ ನಿವೇಶನ ಹಂಚಿಕೆ ಮಾಡಬೇಕೆಂದು ಬಹಳ ಕಡೆಯಿಂದ ಮನವಿ ಬಂದಿದರಿಂದ ಸ್ವಲ್ಪ ಸಡಿಲಗೊಳಿಸಿ ಈ ವಿಧೇಯಕವನ್ನು ತರಲಾಗಿದೆ. ಈ ವಿಧೇಯಕದ ಪ್ರಕಾರ 40:30:30 ರ ಅನುಪಾತದಲ್ಲಿ ನಿವೇಶನ ಹಂಚಿಕೆ ಮಾಡಬಹುದು. ಆದರೆ, ಶೇಕಡಾ 40ರಷ್ಟು ಯಾವ ಭಾಗದಲ್ಲಿ ನಿವೇಶನ ಮಾರಬೇಕೆಂದು ಮಾಡಿರುತ್ತಾರೆ, ಅಷ್ಟು ಭಾಗದಲ್ಲಿನ ಮೂಲಸೌಕರ್ಯವನ್ನು ಸ್ಪಷ್ಟೀಕರಿಸಿರಬೇಕು. ಆದಾದ ನಂತರ ಎರಡನೇ ಭಾಗ, ಅನಂತರ ಮೂರನೇ ಭಾಗವನ್ನು ಕೈಗೊಳ್ಳಬಹುದು. ಮೂರನೇ ಭಾಗ ಕೈಗೊಳ್ಳುವಷ್ಟರಲ್ಲಿ ಎಲ್ಲಾ ಭಾಗದ ಮೂಲಸೌಕರ್ಯವನ್ನು ಅಭಿವೃದ್ಧಿಗೊಳಿಸಿರಬೇಕು. ಅಲ್ಲಿಗೆ ಅವಶ್ಯಕವಾಗಿರುವ ವಿದ್ಯುಚ್ಛಕ್ತಿ, ನೀರಿನ ಸೌಕರ್ಯ, ರಸ್ತೆ ಸೌಕರ್ಯ, sewage transportation ಎಲ್ಲಾವನ್ನು ಕಲ್ಪಿಸಬೇಕೆಂದು ಶೇಕಡಾ 40 ರಷ್ಟು ಮೂಲಸೌಕರ್ಯವನ್ನಾದರೂ ಕಲ್ಪಿಸಿ, ಎರಡನೇ ಹಂತಕ್ಕೆ ಬರಬೇಕು. ನಂತರ ಎರಡನೇ ಹಂತವೂ ಪೂರ್ಣಗೊಂಡ ಮೇಲೆ ಮೂರನೇ ಹಂತಕ್ಕೆ ಬಂದು ಅದನ್ನು ಪೂರ್ಣಗೊಳಿಸಿ ನಿವೇಶನ ಹಂಚಿಕೆ ಮಾಡಬಹುದೆಂದು ಈ ವಿಧೇಯಕವನ್ನು ತರಲಾಗಿದೆ.

**ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 2020ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಂದಿದ್ದು, ಶೇಕಡಾ 40 ರಷ್ಟು, ಶೇಕಡಾ 30 ರಷ್ಟು ಮೂಲಸೌಕರ್ಯ ಕಲ್ಪಿಸಿದ ನಂತರ ನಿವೇಶನ ಹಂಚಿಕೆ ಮಾಡಬಹುದೆಂದು ಈ ವಿಧೇಯಕ ಮಾಡಲಾಗಿದೆ. ಆದರೆ, RERA (Real Estate Regulatory Authority) ಬರುವುದಕ್ಕೂ ಮೊದಲು ಶೇಕಡಾ 40 ರಷ್ಟು draft plan ಅನುಮೋದನೆ ಆದ ತಕ್ಷಣವೇ ಅವರಿಗೆ ಬಿಡುಗಡೆ ಮಾಡಲಾಗುತ್ತಿತ್ತು. ಸುಮಾರು 100 ಎಕರೆ ಬಡಾವಣೆ ಮಾಡುವುದಾದರೆ 40 ಎಕರೆ ಜಾಗವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ನಿವೇಶನ ಹಂಚಿಕೆ ಮಾಡಬೇಕೆಂದು ಹೇಳುತ್ತಿದ್ದಾರೆ. ನಗರಾಭಿವೃದ್ಧಿ ಪ್ರಾಧಿಕಾರದ ಪ್ರತಿ ಸಭೆಗೆ ಹೋದಂಥ ಸಂದರ್ಭದಲ್ಲಿ ಗಮನಿಸಿದ್ದೇವೆ. ಸುಮಾರು 10 ಎಕರೆ, 20 ಎಕರೆ ಜಾಗವನ್ನು ಅಭಿವೃದ್ದಿಡಿಸುವಾಗ ಅದರಲ್ಲಿ ಶೇಕಡಾ 40 ರಷ್ಟು ಅಭಿವೃದ್ಧಿ ಮಾಡಬೇಕೆಂದರೆ, ಸಂಪೂರ್ಣವಾಗಿ ಅಭಿವೃದ್ಧಿಗೊಂಡ ಮೇಲಷ್ಟೆ ಶೇಕಡಾ 40 ರಷ್ಟು ಹಂಚಿಕೆ ಮಾಡಲು ಅವಕಾಶ ನೀಡಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, 2015ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ತಿದ್ದುಪಡಿ ಮಾಡಿ, entire area ವನ್ನು ಮೂಲಸೌಕರ್ಯವನ್ನು ಅಭಿವೃದ್ಧಿಗೊಳಿಸಿ ನಿವೇಶನ ಹಂಚಿಕೆ ಮಾಡಬೇಕೆಂದು ಹೇಳಿರುವುದಕ್ಕೆ ನಾವು ಈ ವಿಧೇಯಕವನ್ನು ತಂದಿರುವುದು. ಶೇಕಡಾ 40 ರಷ್ಟೇ ಇದ್ದಿದ್ದರೆ ನಾವು ಏತಕ್ಕೆ ವಿಧೇಯಕವನ್ನು ತರುತ್ತಿದ್ದೆವು. ಮಾನ್ಯ ಸದಸ್ಯರು ಹೇಳಿದ ಹಾಗೆ 2015ನೇ ಸಾಲಿನಲ್ಲಿ ತಿದ್ದುಪಡಿ ಮಾಡಲಾಗಿತ್ತು. 2015ನೇ ಸಾಲಿನಿಂದ ಇಲ್ಲಿಯವರೆಗೂ ನಿವೇಶನ ಹಂಚಿಕೆ ಮಾಡಲು ಸಾಧ್ಯವಾಗಲಿಲ್ಲವೆಂದು ನಮಗೆ ಮನವಿ ಬಂದ ಮೇಲೆ 40:30:30 ratio system ಗೆ ವಾಪಸ್ಸು ಹೋಗಿದ್ದೇವೆ.

**(ಮುಂದು)**

**(916)26.09.2020 4.50 ಟಿಸಿಹೆಚ್-ಎಕೆ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):-**

ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಈಗ ಏನೇನಾದರೂ ಸುಮಾರು 50 ಎಕರೆ ಜಮೀನು ಅಭಿವೃದ್ಧಿಪಡಿಸಿದ್ದರೆ, ಅದರಲ್ಲಿ ಎಲ್ಲೆಲ್ಲೀ ಬೇಕೋ ಅಲ್ಲಿ ಒಂದೊಂದು ನಿವೇಶನಗಳನ್ನು ಕೊಟ್ಟಿರುತ್ತಾರೆ. ಆ ನಿವೇಶನಗಳನ್ನು ಮಾರಾಟ ಮಾಡಿ ಸುಮಾರು 5-8 ವರ್ಷಗಳಾಗಿರುತ್ತದೆ. ಆ ಸಂದರ್ಭದಲ್ಲಿ ಅವರಿಗೆ Infrastructure ಕೊಡದಿದ್ದರೆ, ಆ ಸೈಟ್ ತೆಗೆದುಕೊಂಡವನ ಗತಿ ಏನಾಗಬೇಕು. ಅವರಿಗೆ ನೀರು ಮತ್ತು ವಿದ್ಯುಚ್ಛಕ್ತಿ ಕೊಡುವವರು ಯಾರು? ಏಕೆಂದರೆ, ಪ್ಲಾನ್ ಆದ ತಕ್ಷಣವೇ, ಮೊದಲನೇ ಹಂತದಲ್ಲಿ ಆ ಲೇಔಟ್‌ನಲ್ಲಿ ವಿದ್ಯುತ್ ಕಂಬಗಳನ್ನು ಮತ್ತು road formation ಮಾಡಿಸಿದರೆ ಸಾಕೆಂದು ಹಿಂದಿನ ಸರ್ಕಾರದಲ್ಲಿ ಷರತ್ತುಗಳನ್ನು ವಿಧಿಸಿದ್ದರು. ಬರೀ ಜೆ.ಸಿ.ಬಿ.,ಯನ್ನು ತೆಗೆದುಕೊಂಡು ಬಂದು ರಸ್ತೆ formation ಮಾಡಿ, ವಿದ್ಯುಚ್ಛಕ್ತಿ ಕಂಬಗಳನ್ನು ಕೊಟ್ಟು, ಬರೀ ವಿದ್ಯುತ್ ಲೈನ್‌ನ್ನು ಹಾಕಿಸಿದರೆ not even connection of electricity, ಅಲ್ಲಿಗೆ ಅದು clear ಆಗುವುದಿಲ್ಲ. ಇದೇನು ಗತಿ ರೀ. ಇನ್ನೊಂದು ಹಂತಕ್ಕೆ ಬರಲು ಸುಮಾರು 2-3 ವರ್ಷಗಳನ್ನು ತೆಗೆದುಕೊಂಡಿದ್ದಲ್ಲಿ, ಒಂದು ವೇಳೆ ಏನಾದರೂ ಟೌನ್ ಪ್ಲಾನಿಂಗ್ ಅಪ್ರೂವಲ್ ಆಗಿರುವ ನಿವೇಶನಗಳೆಂದು ಯಾರಾದರೂ ಬಂದು ಖರೀದಿಸಿದರೆ, ಅವರಿಗೆ ನೀರು ಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿ ಸರಿಯಾದ ರಸ್ತೆ ಇರುವುದಿಲ್ಲ. Sewage ಹೋಗುವುದಿಲ್ಲ. ಹಿಂದಿನ ಸರ್ಕಾರ scatter ಆಗಿ ಇಡೀ area ದಲ್ಲಿ ಸೈಟ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದನ್ನೂ ಇಟ್ಟುಕೊಂಡಿದ್ದರು. ಅವೊತ್ತಿನ ಪ್ಲಾನ್‌ನಲ್ಲಿ ಎಲ್ಲಿ ಬೇಕಾದರೂ ಮಾರಬಹುದಿತ್ತು. 50 ಎಕರೆ ಜಮೀನಿನಲ್ಲಿ ಲೇಔಟ್ ಮಾಡಿ, ಆ 50 ಎಕರೆಯಲ್ಲಿ ಅವನು ಎಲ್ಲಿ ಬೇಕಾದರೂ ಶೇ.40 ನಿವೇಶನ ಕೊಡಬಹುದೆಂದು ಹೇಳಿದಾಗ, ಖರೀದಿಸಿದವರಿಗೆ ಬಹಳ hardship ಪ್ರಾರಂಭವಾಯಿತು. ಸುಮಾರು 5–8 ವರ್ಷಗಳಲ್ಲಿ ಮೂಲಭೂತ ಸೌಲಭ್ಯಗಳು ಸೃಷ್ಟಿಯಾಗಲೇ ಇಲ್ಲ. ಅದಕ್ಕೆ ಮಾನ್ಯ ಸಿದ್ದರಾಮಯ್ಯನವರು right decision ತೆಗೆದುಕೊಂಡು, entire planned area ವನ್ನು ಅಭಿವೃದ್ಧಿಪಡಿಸದೇ, entire planned area ವನ್ನು infrastructure ಮಾಡದಿದ್ದರೆ, ಯಾವುದೇ ನಿವೇಶನವನ್ನು ಕೊಡಬೇಡಿ ಎಂದು ಮಾಡಿದರು. His decision is right decision. ಅದನ್ನು ನಾವು ಪ್ರಶ್ನಿಸಲಿಲ್ಲ. ಆದರೆ, ಈಗ ಏನಾಗಿದೆಯೆಂದರೆ entire transcaction standstill ಆಗಿಬಿಟ್ಟಿದೆ. ಅಷ್ಟೊಂದು ಏರಿಯಾ ಡೆವಲಪ್ ಮಾಡಿ, ಆಮೇಲೆ realize ಮಾಡಿಕೊಳ್ಳುವಂಥ ಸ್ಥಿತಿಯಲ್ಲಿ ಲೇಔಟ್ ಮಾಡತಕ್ಕಂಥವರು ಇರುವುದಿಲ್ಲ. ಇತ್ತೀಚೆಗೆ ಕೋವಿಡ್–19 ಬಂದಿದ್ದರಿಂದ ಆರ್ಥಿಕ ಸ್ಥಗಿತ ಆಯಿತು. ನಾವೇನೆಂದರೆ, ನೀವು 2015ರಲ್ಲಿ ಜಾರಿಗೆ ತಂದಿದ್ದಂತಹ ಅದೇ ಕಾಯ್ದೆಗೆ Phase-I ಏನು ಮಾಡಿರುತ್ತಾರೆ, ಅದು ಒಂದೇ ಕಡೆ ಇರಬೇಕು. ಅಷ್ಟು ಏರಿಯಾಗೂ ಕೂಡ ಮೂಲಭೂತ ಸೌಲಭ್ಯಗಳು ಡೆವಲಪ್ ಆಗಿರಲೇಬೇಕು ಇದರ ಜೊತೆಗೆ ನಿಮ್ಮ sewage ಹೋಗುವಂತಹ ಪೈಪ್ ಲೈನ್‌ನ್ನು ಅಂತಿಮವಾಗಿ ಎಸ್.ಟಿ.ಪಿಯನ್ನು ಎಲ್ಲಿ ಇಟ್ಟಿರುತ್ತೀರೊ ಅಲ್ಲಿಯವರೆಗೂ ಅದು ಮಾಡಲೇಬೇಕು ಎನ್ನುವಂತಹ ಒಂದು ಷರತ್ತು ವಿಧಿಸಿ, ಮೊದಲನೇ ಹಂತದಲ್ಲಿ ಶೇ.40 ಡೆವಲಪ್ ಮಾಡಿಕೊಂಡು ಮಾರಾಟ ಮಾಡಬಹುದು. ಅದಾದ ನಂತರ, 2ನೇ ಹಂತದಲ್ಲಿ ಮಾಡಬೇಕೆಂದರೆ, Phase-II ಮಾಡಿಕೊಳ್ಳಬಹುದು. ಆಮೇಲೆ ಫೈನಲ್ ಮಾಡಿಕೊಳ್ಳಬಹುದು. ಅಂತಿಮವಾಗಿ ಆಗಬೇಕಾಗಿರುವ ಕೆಲಸವೇನೆಂದರೆ, sewage has to moved to Sewage Treatment Plant ಎನ್ನುವಂಥ ಷರತ್ತು ಹಾಕಿದ್ದೇವೆ. ಅದು ಮಧ್ಯೆ ಬಂದು ನಿಲ್ಲುವುದಕಾಗುವುದಿಲ್ಲ. ಅದು ತಿದ್ದುಪಡಿಯಲ್ಲಿರುವುದು. 2015ರ ಕಾಯ್ದೆಯಲ್ಲಿ ಶೇ.100 infrastructure ಕೊಡಬೇಕು ಎಂದು ಇತ್ತು. ಆ ರೀತಿ ಮಾಡಿದರೆ ಲೇಔಟ್‌ಗಳನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಈ ಬಿಲ್‌ನ್ನು ತಂದಿದ್ದೇವೆ.

**ಶ್ರೀ ಪಿ.ಆರ್.ರಮೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಏನು ಈ ಬಿಲ್‌ನ್ನು ತಂದಿದ್ದಾರೆ, ಇದು ಒಳ್ಳೆಯದೆ. ಆದರೆ, ನಿಜವಾಗಲೂ ಈ ರೀತಿ ನಡೆಯುತ್ತಿರುವುದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನಿಟರ್ ಮಾಡುವುದು ಯಾರು. ಅದನ್ನು Supervision ಮಾಡುವುದು ಯಾರು? ಇವತ್ತಿನ ದಿವಸ ಏನಾಗಿದೆಯೆಂದರೆ, ಬೆಂಗಳೂರು ಸುತ್ತಮುತ್ತಲೂ ಬಿ.ಎಂ.ಆರ್.ಡಿ.ಎ. ಏರಿಯಾ ಎಂದು ಏನಿದೆ, ಇದರಲ್ಲಿ ಸಾಕಷ್ಟು town plannings ಇವೆ. ಇದನ್ನು ನಾವು satellite town plannings ಎಂದು ಹೇಳಬಹುದು. ಮಾಗಡಿ, ಕೋಲಾರ, ಕನಕಪುರ, ನೆಲಮಂಗಲ, ಹೊಸಕೋಟೆ ಮತ್ತು ರಾಮನಗರ ಈ ರೀತಿಯ ಸಾಕಷ್ಟು ಟೌನ್ ಪ್ಲಾನಿಂಗ್‌ಗಳಿವೆ. ಇವತ್ತು ಇಂತಹ ಒಂದು ಪ್ಲಾನಿಂಗ್ ಅಥಾರಿಟೀಸ್‌ನಲ್ಲಿ ಪರ್ಮಿಷನ್ ತೆಗೆದುಕೊಂಡು downstream ನಲ್ಲಿ ಎಲ್ಲೆಲ್ಲಿ ನೀವು ಎಸ್.ಟಿ.ಪಿಗಳನ್ನು ಮಾಡಬೇಕಿತ್ತೊ ಆ ಯಾವ ಎಸ್.ಟಿ.ಪಿ.ಗಳನ್ನೂ ಮಾಡಿಲ್ಲ. ಇದನ್ನು ಕೇಳುವವರು ಯಾರು? ಅವರು ಎಸ್.ಟಿ.ಪಿಗಳನ್ನೇ ಮಾಡದೇ ಕೆಲವು ಪೈಪ್‌ಲೈನ್‌ಗಳನ್ನು ಹಾಕಿಬಿಟ್ಟಿದ್ದಾರೆ. ಇದು ಕೊನೆಗೆ ಯಾವುದೋ ಒಂದು ಕೆರೆ-ಕುಂಟೆಗಳಿಗೆ ಹೋಗಿ ಸೇರುತ್ತಿದೆ. ಸುಮಾರು 100 ವರ್ಷಗಳ ಹಿಂದೆ ವೃಷಭಾವತಿ ನದಿ ಎಂದು ಇತ್ತಂತೆ. ಅದನ್ನು ನಾನು ನೋಡಿಲ್ಲ, ಕೇಳಿದ್ದೇನೆ. ಆ ರೀತಿ ಇದ್ದಂತಹ ವೃಷಭಾವತಿ ನದಿ ಇವತ್ತು ಯಾವ ರೀತಿ ಇದೆ? ಬೆಂಗಳೂರು ಸುತ್ತಮುತ್ತಲೂ ಇರತಕ್ಕಂಥ ಕೆರೆ-ಕುಂಟೆಗಳೆಲ್ಲಾ ಸಂಪೂರ್ಣವಾಗಿ ಕಲುಷಿತವಾಗುತ್ತಿದ್ದು, ಗ್ರೌಂಡ್ ವಾಟರ್ ಕೂಡ ಕಲುಷಿತವಾಗುತ್ತಿದೆ. ಈ ಬಿಲ್‌ಗೆ ಇನ್ನೂ ಸ್ವಲ್ಪ ಸೇರಿಸುವುದು ಇದೆ. ನೀವು ಗ್ರಾಮ ಪಂಚಾಯತ್‌ಗಳಿಗೆ ಪಾರ್ಕ್, ರಸ್ತೆ, ಇವೆಲ್ಲಾ relinquish ಮಾಡಿಕೊಡುತ್ತೀರಿ. ಗ್ರಾಮ ಪಂಚಾಯ್ತಿಗಳಿಗೆ ಇರುವ ಅಧಿಕಾರವೇನೆಂದರೆ, ಬರೀ ಆ ಗ್ರಾಮದ ಒಂದು ಸುತ್ತಳತೆಯಲ್ಲಿರತಕ್ಕಂಥ ಕಾಮಗಾರಿಗಳು ಮತ್ತು ಅಲ್ಲಿರತಕ್ಕಂಥ ಕೆಲಸಗಳನ್ನು ನೋಡಿಕೊಳ್ಳುವುದು. ಆದರೆ, ಲೇಔಟ್ ಮಾಡುವುದಕ್ಕೆ ಅವರ ಬಳಿ ಏನಾದರೂ specialization ಇದೆಯೇ, ಅದು ಎಲ್ಲಿದೆ? ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಮಾನ್ಯ ಕೆ.ಎಸ್. ಈಶ್ವರಪ್ಪನವರು ನಗುತ್ತಿದ್ದಾರೆ. ಇವತ್ತು ಲೇಔಟ್ ಫಾರ್ಮೇಷನ್ ಮಾಡಿದನಂತರ ಅದನ್ನು ಮೈನ್‌ಟೈನ್ ಮತ್ತು ಮ್ಯಾನೇಜ್ ಮಾಡುವುದಕ್ಕೆ ನಿಮ್ಮಲ್ಲಿ ಏನಾದರೂ specialization ಇದೆಯೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಬಿಲ್ ಪುಟ ಸಂಖ್ಯೆ.2ರಲ್ಲಿ ಪಾಯಿಂಟ್-3ರಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಿತ ಪ್ರಾಧಿಕಾರ/ಏಜೆನ್ಸಿ/ಇಲಾಖೆ/ನಿಗಮಗಳಿಂದ ಅಪ್ಪೂ ಸಂಪೂರ್ಣಗೊಂಡ ಸರ್ಟಿಫಿಕೇಟ್ ತಂದುಕೊಟ್ಟರೆ, ಸೈಟ್‌ಗಳನ್ನು ರಿಲೀಜ್ ಮಾಡುವುದಕ್ಕೆ permit ಮಾಡುತ್ತೇವೆಂದು ಕ್ಲಿಯರ್ ಆಗಿ ಹೇಳಿದ್ದೇವೆ. ನಾವು ಇನ್ನೇನು ಮಾಡಬಹುದು ಹೇಳಿ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನೇರವಾಗಿ ಹೇಳಿಬಿಡುತ್ತೇನೆ. ಇದಕ್ಕೆ ನೀವು ಏನು ಮಾಡಬಹುದೆಂದರೆ, ಬೆಂಗಳೂರು ಮಟ್ಟಿಗೆ ನೀವು ಒಂದು ಹೊಸದಾಗಿ ಅಥಾರಿಟಿಯನ್ನು ಕ್ರಿಯೇಟ್ ಮಾಡಬೇಕು. ಏಕೆಂದರೆ, ಇವತ್ತು ಸುಮಾರು 50 ಸಾವಿರ ಸೈಟ್‌ಗಳು ಬರುತ್ತಿವೆ. ಇವತ್ತು ನಾನು ಹೆಸರು ಹೇಳುವುದಿಲ್ಲ. ಇವೆಲ್ಲವನ್ನೂ ಇಲ್ಲಿರತಕ್ಕಂಥವರು ಮತ್ತು ಅಲ್ಲಿರತಕ್ಕಂಥವರು ಮಾಡುತ್ತಿರುವ ಕೆಲಸವಾಗಿದೆ. ನನ್ನ ಪ್ರಕಾರ ಸುಮಾರು 2 ಲಕ್ಷ ಸೈಟ್‌ಗಳು ಬರುತ್ತಿರಬಹುದು. ಈ ರೀತಿ ಎರಡು ಲಕ್ಷ ಸೈಟ್‌ಗಳು ಬರುತ್ತಿರುವುದು, ಇವತ್ತು ಏನೂ ಸಮಸ್ಯೆ ಬರುವುದಿಲ್ಲ. ಸುಮಾರು 10-15 ವರ್ಷಗಳಲ್ಲಿ ಇದರಿಂದ ಬಹಳ ದೊಡ್ಡ ಸಮಸ್ಯೆಯಾಗುತ್ತದೆ. ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ ಅವಕಾಶ ಕೊಡಿ ನನ್ನ ಮಾತುಗಳನ್ನು ಹೇಳಿಬಿಡುತ್ತೇನೆ. ನೀವು ಈ ಬಿಲ್‌ನಲ್ಲಿ Pollution Control Board ದ್ದು ತೆಗೆದುಕೊಂಡು ಬಂದಿಲ್ಲ.

**ಸಭಾಪತಿಯವರು:-** ಇಲ್ಲ, ಆಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ಬಹಳ ಒಳ್ಳೆಯ ಸುಧಾರಣಾ ಅಂಶಗಳನ್ನು ತಂದಿದ್ದಾರೆ. ಈ ಹಿಂದೆ ಒಟ್ಟಾರೆಯಾಗಿ ಬಡಾವಣೆಯನ್ನು ಡೆವಲಪ್ ಮಾಡಿ ಹಂಚುತ್ತಿರಲಿಲ್ಲ. ನಿವೇಶನಗಳನ್ನು ಹಾಗೆಯೇ ಹಂಚಿಕೆ ಮಾಡುತ್ತಿದ್ದರು. ಆ ನಂತರ ನಿವೇಶನಗಳನ್ನು ಖರೀದಿಸಿದವರ ಪಾಡಂತೂ ಹೇಳತೀರದು. ಹಿಂದೆ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾದಂತಹ ಸಂದರ್ಭದಲ್ಲಿ ಅದಕ್ಕೊಂದು ಸುಧಾರಣೆಯನ್ನು ಜಾರಿಗೆ ತಂದಿದ್ದರು. ಅದಕ್ಕಿಂತಲೂ ಉತ್ತಮವಾದಂತಹ ಸುಧಾರಣೆಯನ್ನು ಈ ಸರ್ಕಾರ ತಂದಿದೆ, ನಾವು ಅದನ್ನು ಸ್ವಾಗತಿಸಬಹುದು. ಆದರೆ, ಬಿಲ್‌ನಲ್ಲಿ ಒಂದು ಉದ್ಯಾನ ಹಾಗೂ ಆಟದ ಮೈದಾನವೆಂದು ಹೇಳಿದ್ದಾರೆ, ಇದು ಬಹಳ danger. ಯಾವುದೇ ನಗರದಲ್ಲಿ ಪಾರ್ಕ್‌ಗಳು ಇರುತ್ತವೆ, ಆ ಪಾರ್ಕ್‌ನಲ್ಲಿ ಈಗಲೂ ಕೂಡ ದೇವಸ್ಥಾನಗಳನ್ನು ಕಟ್ಟಿರುತ್ತಾರೆ. ಆ ಪಾರ್ಕ್‌ನ ಪಕ್ಕದಲ್ಲೇ ಯಾವುದೋ ಒಂದು ಶಾಲೆ ಇದ್ದರೆ, ಆ ಶಾಲೆಯವರು ಆ ಪಾರ್ಕ್‌ನಲ್ಲಿಯೇ ಆಟದ ಮೈದಾನಗಳನ್ನು ಮಾಡಿಕೊಂಡಿರುತ್ತಾರೆ. ಉದ್ಯಾನವನ್ನು, ಉದ್ಯಾನವನ್ನಾಗಿ ಇರಲು ಬಿಡಲೇ ಇಲ್ಲ. ಅದು ಬೆಂಗಳೂರು ನಗರದಲ್ಲೇ ಆಗಲಿ, ಮೈಸೂರು ನಗರದಲ್ಲೇ ಆಗಲಿ ಉದ್ಯಾನವನ್ನು, ಉದ್ಯಾನವಾಗಿ ಇರುವುದಕ್ಕೆ ಬಿಡುತ್ತಿಲ್ಲ. ಈ ಆಟದ ಮೈದಾನ ಎನ್ನುವುದು ಇದೆಯಲ್ಲಾ, ಇದು ಉದ್ಯಾನವನ್ನು ಸಂಪೂರ್ಣವಾಗಿ ನಾಶಮಾಡಿಬಿಡುತ್ತದೆ. ವಿವಿಧ ಕಾರ್ಯಕ್ರಮಗಳಿಗೆ ಆ ಜಾಗವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸ್ವಲ್ಪ ಹೆಚ್ಚು ಗಮನವನ್ನು ಕೊಡಬೇಕು. ಹಾಗಾಗಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ಯಾನವನ್ನು, ಉದ್ಯಾನವನ್ನಾಗಿಯೇ ಇರುವಂತೆ ಮಾಡುವುದಕ್ಕೆ ಏನಾದರೂ ಮಾಡಬೇಕೆಂದು ಹೇಳುತ್ತಿದ್ದೇನೆ. ದಯವಿಟ್ಟು ನಾವು ಈ ಬಿಲ್‌ನ್ನು ಸ್ವಾಗತಿಸುತ್ತೇವೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ವಿಧೇಯಕ, 2020ನ್ನು ನಾನು ಸ್ವಾಗತ ಮಾಡುತ್ತೇನೆ. 2006-07ರಲ್ಲಿ Planning Authority ಏನಿತ್ತು ಎಂದರೆ, ಮೊದಲು ಶೇ.60 ನಿವೇಶನಗಳನ್ನು release ಮಾಡಬೇಕಾಗಿತ್ತು. ಆನಂತರ ಶೇ.40 ಇತ್ತು. ನಂತರ, 2012-13ರಲ್ಲಿ ಶೇ.40, ಶೇ.30, ಶೇ.30 ನಿವೇಶನಗಳನ್ನು release ಮಾಡಬೇಕೆಂದು ಮಾಡಿದ್ದರು. 2015ರ ನಂತರ ಶೇ.100 ಅಭಿವೃದ್ಧಿಪಡಿಸಿ, ಖಾತೆ ಎಲ್ಲಾ ಆದ ನಂತರ ನಿವೇಶನಗಳನ್ನು ಬಿಡುಗಡೆ ಮಾಡುತ್ತಿದ್ದರು. ಈಗ ಮಾನ್ಯ ಸಚಿವರು ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಏನು, ಈ ಒಂದು ಉದ್ಯಮದಲ್ಲಿ ಯಾರ್‍ಯಾರು ತೊಡಗಿದ್ದಾರೆ ಅವರು ನಿಜವಾಗಲೂ ಕೂಡ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ರಾಜಕಾರಣ ಮತ್ತು ರಿಯಲ್ ಎಸ್ಟೇಟ್ ವ್ಯವಹಾರವೆಂದರೆ, ಏನೋ ಒಂದು ರೀತಿ ಹಂಗಾಮಿಯಾಗಿ ದುಡ್ಡು ಬಂದುಬಿಡುತ್ತದೆಂದು ಸಮಾಜದ ಹೊರಗಡೆಗೆ ಒಂದು ಭ್ರಮೆ ಇದೆ. ಆದರೆ, ನಿಜವಾಗಲೂ ಸತ್ಯ ಇರುವುದೇನೆಂದರೆ, ಯಾರ್‍ಯಾರು approved ಲೇಔಟ್‌ಗಳನ್ನು ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ನಿಜವಾಗಲೂ ಅವರು ಪಡುತ್ತಿರುವಂಥ ಕಷ್ಟ ಯಾರಿಗೂ ಅರ್ಥವಾಗುವುದಿಲ್ಲ. ಮಾನ್ಯ ಸಚಿವರೇ, ಇದರಲ್ಲಿ ನನ್ನದೊಂದು ಮೂಲಭೂತವಾದ ಪ್ರಶ್ನೆ ಏನೆಂದರೆ, ಶೇ.40, ಶೇ.30, ಶೇ.30 ಏನಿದೆ, ಈ ಶೇ.40ರಲ್ಲಿ completion ಆಗಿ ಮಾಡಬೇಕೆಂದು ಹೇಳಿದ್ದೀರಲ್ಲಾ, ಮುಖ್ಯವಾಗಿ ನಾವು ವಾಟರ್ ಟ್ಯಾಂಕ್ ಅಥವಾ ಎಸ್.ಟಿ.ಪಿ.,ಯನ್ನು ಎಲ್ಲಿ ಮಾಡುವುದು? ಅದರಲ್ಲಿ ಕೊನೆಪಕ್ಷ ನೀವು ಶೇ.100 release ಆಗುವುದಕ್ಕೆ ಮೊದಲು, atleast water tankಗೆ exceptional ನ್ನು ಕೊಡಬೇಕು. ಈಗ ನಮ್ಮ ಸ್ನೇಹಿತರು ಏನು ಹೇಳಿದರೆಂದರೆ, ಈಗಿನ ಒಂದು Town and Country Planning Act ಏನಿದೆ, ಅಧಿಕಾರಿಗಳು ಬಹಳ strict ಇದ್ದಾರೆ. ಶೇ.100ರಲ್ಲಿ ಶೇ.53 ಶೇ.52, ಅಷ್ಟೇ saleable area. ಇನ್ನು ಶೇ.47, ಶೇ.48 ಎಲ್ಲಾ ರಸ್ತೆ, ವಾಟರ್, ಒಳಚರಂಡಿ ಎಲ್ಲಾ ಬರುತ್ತದೆ. ಹಾಗಾಗಿ . . .

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರಲ್ಲಿ Club House ಇದ್ದರೆ ಒಳ್ಳೆಯದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಲೇ ಅವರು ಕಷ್ಟದಲ್ಲಿದ್ದಾರೆ. ಅದನ್ನು saleable area ದಲ್ಲಿ ಮಾಡುವುದಕ್ಕಾಗುವುದಿಲ್ಲ. ಅದನ್ನು ಬಿಟ್ಟು ಆ ಶೇ.45ರಲ್ಲಿ, ಶೇ.30ರಷ್ಟು ರಸ್ತೆ, ಶೇ.10ರಷ್ಟು ಪಾರ್ಕ್ ಮತ್ತು ಶೇ.5ರಷ್ಟು civic amenity ಜಾಗ ಇರುತ್ತದೆ. ಆ ಜಾಗದಲ್ಲಿ ಏನಾದರೂ ಮಾಡಬಹುದು. ಇದುಬಿಟ್ಟರೆ, ಮಾನ್ಯ ಸಚಿವರೇ, ಈ ವಾಟರ್ ಟ್ಯಾಂಕ್ ಬಗ್ಗೆ ನೀವು ಹೇಳಬೇಕು. ಈಗ ಶೇ.40ರಲ್ಲಿ ಸುಮಾರು 10 ಎಕರೆ ಅಭಿವೃದ್ಧಿಪಡಿಸಿದರೆ, . . ."

**(ಮುಂದು)**

**(917)26–9–2020/5.00/ಎಂ.ಎಂ–ವಿ.ಕೆ**

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈಗ ತಂದಿರುವ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಆದರೆ ಪ್ರಾಯೋಗಿಕವಾಗಿ ಇರುವ ಕಷ್ಟಗಳನ್ನು ತಮ್ಮ ಹತ್ತಿರ ಹೇಳುತ್ತೇವೆ. ದಯಮಾಡಿ ಇದರ ಬಗ್ಗೆ ತಾವು ಸ್ವಲ್ಪ ಆಲೋಚನೆ ಮಾಡಬೇಕು. 40:30:30 ಅನುಪಾತದಲ್ಲಿ ತರಬೇಕೆಂದು ಸರ್ಕಾರದವರು ಹೇಳುತ್ತಾರೆ. ನಾನು ಒಬ್ಬ ಬಿಲ್ಡರ್ ಆಗಿ ನನ್ನ ಕಷ್ಟವನ್ನು ಹೇಳಿಕೊಳ್ಳುತ್ತೇನೆ. ಉದಾಹರಣೆಗೆ ಸುಮಾರು 50 ಎಕರೆ ಪ್ರದೇಶದಲ್ಲಿ ಒಂದು ಲೇಔಟ್ ಮಾಡುತ್ತೇವೆ. ಶೇ.40ರಷ್ಟು ಸಂಪೂರ್ಣವಾಗಿ develop ಆಗಿರಬೇಕು, ಅದಾದ ಮೇಲೆ ಅನುಮತಿ ಕೊಡುತ್ತೇವೆ, ಅದಕ್ಕೆ ಸಂಬಂಧಪಟ್ಟ ಇಲಾಖೆಯಿಂದ No Objection Certificate ತರಬೇಕೆಂದು ಹೇಳುತ್ತಾರೆ. 50 ಎಕರೆಗೆ ಯೋಜನೆ ಮಾಡಿದಾಗ ಆ 50 ಎಕರೆ ಪ್ರದೇಶ ಎಲ್ಲೆಲ್ಲಿ ಎತ್ತರ ಇರುತ್ತದೆ, ಎಲ್ಲಿ ತಗ್ಗು ಇರುತ್ತದೆ ಅವೆಲ್ಲವನ್ನೂ ನೋಡಿಕೊಂಡು sump tank and overhead tank ಮಾಡಬೇಕಾಗುತ್ತದೆ. ಎಲ್ಲಿ lowest point ಇರುತ್ತದೆ ಅಲ್ಲಿಗೆ sewage treatment plant ತೆಗೆದುಕೊಂಡು ಹೋಗಬೇಕಾಗುತ್ತದೆ. ಪಾರ್ಕ್‌ಗಳನ್ನು ಮಾಡಬೇಕೆಂದು ಹೇಳುತ್ತೀರಿ. ಶೇ.40 ರೊಳಗೇ ಪಾರ್ಕುಗಳನ್ನು ಮಾಡುವುದಕ್ಕೆ ಬರುವುದಿಲ್ಲ. 50 ಎಕರೆಯಲ್ಲಿ ಶೇ.40ರಷ್ಟು ಎಂದರೆ 20 ಎಕರೆಯಲ್ಲಿ ಎಲ್ಲವನ್ನೂ ನಾವು infrastructure ಕೊಡುವುದಕ್ಕೆ ಆಗುವುದಿಲ್ಲ. ಸಂಪೂರ್ಣವಾಗಿ 50 ಎಕರೆಯಲ್ಲಿ ಎಲ್ಲಿ ಪಾರ್ಕ್‌ಗೆ ಜಾಗ ಬಿಡಬೇಕು, ಎಲ್ಲಿ ರಸ್ತೆಗಳು ಬರಬೇಕು, ಎಲ್ಲಿ overhead tank ಬರಬೇಕು, ಎಲ್ಲಿ sewage treatment plant ಮಾಡಬೇಕು ಮತ್ತು ಎಲ್ಲಿ treatment plant ಮಾಡಬೇಕು ಎಂದು ನಾವು ತೀರ್ಮಾನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಕೊಳ್ಳಬೇಕಾಗುತ್ತದೆ. ಇದೆಲ್ಲವನ್ನೂ ಮಾಡಿ ಎನ್.ಓ.ಸಿ ಕೊಟ್ಟಾಗ ಮಾತ್ರ ಅನುಮತಿ ಕೊಡುತ್ತೇವೆ ಎಂದರೆ ತಪ್ಪಾಗುತ್ತದೆ. ಆದ್ದರಿಂದ ಶೇ.40ರಷ್ಟು ಎಲ್ಲಾದರೂ develop ಮಾಡುವುದಕ್ಕೆ ಆಗುತ್ತದೆಯೇ ಹೇಳಿ. ಸೈಟುಗಳನ್ನು ಮಾಡುವುದು ಎಷ್ಟು ಕಷ್ಟ ಎಂಬುದು ನಮಗೆ ಗೊತ್ತಿದೆ. ಇವತ್ತು ಎಲ್ಲರೂ ಕೊಡುವ ಮೊದಲ ಆದ್ಯತೆ ಏನೆಂದರೆ ಸೈಟ್‌ಗಳು ಪೂರ್ವಾಭಿಮುಖ ಅಥವಾ ಉತ್ತರಾಭಿಮುಖವಾಗಿರಬೇಕೆಂದು ಕೇಳುತ್ತಾರೆ. ಶೇ.40ರೊಳಗೆ ಇಷ್ಟೆಲ್ಲಾ ಮೂಲಸೌಕರ್ಯಗಳನ್ನು ಕೊಟ್ಟು ಅರ್ಧ ಜಾಗವನ್ನು ಮಾರದಿದ್ದರೆ ನಾವು ಹಾಕಿದ ಬಂಡವಾಳ ಕೂಡ ವಾಪಸ್ಸು ಬರುವುದಿಲ್ಲ. Practically ಇದು ಬಹಳ ಕಷ್ಟವಾಗಿದೆ. ದಯಮಾಡಿ ಶೇ.40ರಷ್ಟು entire layout ನಲ್ಲಿ ಎಲ್ಲಾದರೂ develop ಮಾಡಲು ಅನುಮತಿ ಕೊಡುತ್ತೇವೆ ಎನ್ನುವ ತಿದ್ದುಪಡಿ ಮಾಡಿಕೊಳ್ಳಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಆ ವಿಧೇಯಕವು ಶ್ರೀ ಸಿದ್ದರಾಮಯ್ಯನವರ ಕಾಲದಲ್ಲಿ ತಿದ್ದುಪಡಿಯಾಗಿತ್ತು. ತಾವು ಈಗ ಏನನ್ನು ಹೇಳುತ್ತಿದ್ದೀರಿ ಆ ಬಿಲ್ಲು ಆಗ ಇತ್ತು. ಎಲ್ಲೆಲ್ಲಿ ಬೇಕೋ ಅಲ್ಲಿ ಸೈಟ್ ಕೊಟ್ಟು infrastructure ಕೊಡಲೇ ಇಲ್ಲವೆಂದು ಹೇಳಿ ಅವತ್ತಿನ ಸರ್ಕಾರ ನಿರ್ಧಾರ ತೆಗೆದುಕೊಂಡು 5, 6, 7 ವರ್ಷ ಅಲ್ಲಿಯೇ ಒಂದೊಂದು ಮನೆ ಕಟ್ಟಿಕೊಂಡವರಿಗೆ ದಾರಿ ಇಲ್ಲ, ದೀಪ ಇಲ್ಲ, ನೀರಿಲ್ಲ ಎನ್ನುವ ಸ್ಥಿತಿ ನೋಡಿ ಅವರೇನು ಮಾಡಿದರು ಎಂದರೆ ಇಡೀ ಪ್ರದೇಶವನ್ನು, ಲೇಔಟನ್ನು ಶೇ.100ರಷ್ಟು develop ಮಾಡಿ ಎಂದು amendment ಮಾಡಿದರು. ಅದು ಬಹಳ rigid ಆಯಿತು, ಅದನ್ನು ಸ್ವಲ್ಪ liberal ಮಾಡೋಣ ಎಂದು ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದು ಬಿಟ್ಟರೆ ಒಂದು ಕಡೆ ನೀವು ಮುಖ್ಯ, ಇನ್ನೊಂದು ಕಡೆ ಅಲ್ಲಿಗೆ ವಾಸ ಮಾಡಲು ಬರುವವರೂ ನಮಗೆ ಮುಖ್ಯವಲ್ಲವೇ. ಬರುತ್ತಾನೆ, ಬಂಡವಾಳ ಹಾಕುತ್ತಾನೆ, ಮನೆ ಕಟ್ಟುತ್ತಾನೆ, ನಾವು ಟ್ಯಾಂಕ್ ಎಲ್ಲಿ ಕಟ್ಟೋಣ, sewage ಎಲ್ಲಿಗೆ ತೆಗೆದುಕೊಂಡು ಹೋಗೋಣ; ಮನೆ ಕಟ್ಟಿದ ಮೇಲೆ ಅವನ ಪರಿಸ್ಥಿತಿ ಏನು ಎಂತಲೂ Developers ಆದ ತಾವು ಯೋಚನೆ ಮಾಡಬೇಕಲ್ಲವೇ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದನ್ನು ಒಪ್ಪಿಕೊಂಡಿದ್ದೇನೆ. ನೀವು ಈ ತಿದ್ದುಪಡಿ ವಿಧೇಯಕವನ್ನು ತಂದಿರುವುದು ಸರಿ. ಎಲ್ಲಾ infrastructure develop ಮಾಡಿದ ಮೇಲೆ ಅನುಮತಿ ಕೊಡಿ. ಆದರೆ ಶೇ.40ರಷ್ಟು ಒಂದೇ ಕಡೆ ಮಾಡಬೇಕೆಂದು ಹೇಳಿರುವುದನ್ನು ಸ್ವಲ್ಪ ಬದಲಾವಣೆ ಮಾಡಿಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ಕಡೆ ಇಲ್ಲಿ develop ಮಾಡಿರುತ್ತಾರೆ, ಶೇ.40ರೊಳಗಡೆ ಇದ್ದೀನಿ ಎಂದು ಸೈಟ್ ತೆಗೆದುಕೊಂಡು ಅಲ್ಲಿ ಕೊಟ್ಟರೆ ಅವನ ಗತಿ ಏನು? ಈ ಮೂಲೆಯಲ್ಲಿ development ಮಾಡಿ ಇನ್ನೊಂದು ಮೂಲೆಯಲ್ಲಿ ಸೈಟ್ ಕೊಟ್ಟರೆ ಅದರಿಂದ ಅವನಿಗೇನು ಪ್ರಯೋಜನವಾಗುತ್ತದೆ ಎನ್ನುವುದನ್ನು ಚರ್ಚೆ ಮಾಡಿದೆವು. ಕನಿಷ್ಠ ರಸ್ತೆ, ನೀರು, ಲೈಟುಗಳನ್ನು ಕೊಟ್ಟು sewage ಅನ್ನು ultimate ಆಗಿ STP (Sewage Treatment Plant) ಎಲ್ಲಿ ಇಟ್ಟುಕೊಳ್ಳುತ್ತೀರೋ ಅಲ್ಲಿ draw ಮಾಡಿ ಎಂದು ಹೇಳಿದ್ದೇವೆ. Basic infrastructure, ಟ್ಯಾಂಕ್ ಕಟ್ಟುವುದು STP ಕಟ್ಟುವುದನ್ನು developers invest ಮಾಡುವುದಕ್ಕೆ ಆಗುವುದಿಲ್ಲ ಎಂದರೆ site formation ಹೇಗೆ ಮಾಡುವುದಕ್ಕಾಗುತ್ತದೆ? ಹಂಚಬೇಕಾದರೆ ಒಂದು ರಸ್ತೆ ಮಾಡಿ ಆ ರಸ್ತೆಯಲ್ಲಿ ಕೊಡಿ ಇನ್ನೊಂದು ರಸ್ತೆಯಲ್ಲಿ ಮಾಡಿದರೆ ಆ ರಸ್ತೆಯಲ್ಲಿ ಕೊಡಿ. ಕ್ಲಿಯರ್ ಆಗಿ ಒಂದು ರಸ್ತೆ ಇರಲಿ ಆ ರಸ್ತೆಯಲ್ಲಿ ಒಂದು ಪೈಪ್‌ಲೈನ್ ಎಳೆಯಿರಿ, ನೀರು, ವಿದ್ಯುಚ್ಛಕ್ತಿ ಕೊಡಿ. ಹಂತ ಹಂತವಾಗಿ ನಿಮಗೆ ಎಷ್ಟು ಆಗುತ್ತದೆ ಅಷ್ಟನ್ನು ಡೆವಲಪ್ ಮಾಡಿ ಎಂದು ಹೇಳುತ್ತಿದ್ದೇವೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದೊಂದು ರಸ್ತೆಯನ್ನು ನಾವು water line, sewage line, electricity, ಆ ರೀತಿ ಮಾಡುವುದಕ್ಕಾಗುವುದಿಲ್ಲ. ಅದನ್ನು practically ಯೋಚನೆ ಮಾಡಬೇಕು. ತಾವು ಹೇಳಿದ ಹಾಗೆ ಒಂದೇ ರಸ್ತೆಯಲ್ಲಿ ಮಾಡಬೇಕೆಂದರೆ ಅದು ಆಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ 2015ನೇ ಇಸವಿಯ ಆಕ್ಟ್ Developers ಗೆ ಬಹಳ ಕಷ್ಟವಾಗಿ ಎಂದು ಸ್ವಲ್ಪ relaxation ಕೊಡುತ್ತಿದ್ದೇವೆ. ಅವತ್ತು ಯಾರು ಖರೀದಿದಾರ ಇರುತ್ತಾನೆ ಅವನ interest ನಲ್ಲಿಯೇ ಕಾಯಿದೆಗಳನ್ನು ನೋಡಬೇಕಾಗುತ್ತದೆ. ಸ್ವಲ್ಪ ಸಡಿಲಿಕೆಯನ್ನು ಶೇ.100 ಮಾಡುವ ಬದಲು ಶೇ.40 ಮಾಡಿಕೊಂಡು ಸ್ವಲ್ಪ ಡೆವಲಪರ್‌ಗಳಿಗೆ receipts ಆಗಲಿ ಆದಾಯ ಬಂದು, next phase develop ಮಾಡಲಿ ಎಂದು ಕೊಟ್ಟಿರುವುದು ಬಿಟ್ಟರೆ, scatter ಮಾಡಿ ಕೊಟ್ಟರೆ ಹಿಂದಿನ ಕಾನೂನಿಗೆ ನಾವು ವಾಪಸ್ಸು ಹೋಗಬೇಕಾಗುತ್ತದೆ. ಅದು ಆಗುವುದಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀವು ಎಲ್ಲಿ ಯಾವ ಪ್ರದೇಶದಲ್ಲಿ ಸೈಟ್ ಕೊಡುತ್ತೀರಿ; ಶೇ.40 ಸೈಟ್ ಕೊಡಬೇಕೆಂದರೆ, ಶೇ.40 develop ಮಾಡಿಯೇ ಕೊಡಬೇಕು. ಅಲ್ಲಿ ಯಾರೋ ಬಂದು ಮನೆ ಕಟ್ಟಿದವನು ಎಲ್ಲಿ ರಸ್ತೆ ಮಾಡುತ್ತೀರಿ, ಎಲ್ಲಿ ಕರೆಂಟ್ ಕೊಡುತ್ತೀರಿ, ಎಲ್ಲಿ ನೀರನ್ನು ಕೊಡುತ್ತೀರಿ ಎಂದು ಆಘಾತಕ್ಕೆ ಸಿಕ್ಕಿಹಾಕಿಕೊಳ್ಳುವ ಪದ್ಧತಿಯನ್ನು ದಯವಿಟ್ಟು ತರಬೇಡಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಲಿಲ್ಲ, ತಾವು ಹೇಳಿದ್ದು infrastructure ಅನ್ನು ಸಂಪೂರ್ಣವಾಗಿ ಶೇ.40 ಕೊಡುವಾಗ ತೆಗೆದುಕೊಳ್ಳಿ. ಆದರೆ ಶೇ.40 ರಷ್ಟನ್ನು ಒಂದೇ ಜಾಗದಲ್ಲಿ ಎಂದಿರುವುದನ್ನು entire area ಎಂದು change ಮಾಡಿ ಎಂದು ಹೇಳುತ್ತಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಆಗುವುದಿಲ್ಲ.

**ಶ್ರೀ ಕೆ.ಸಿ. ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (3ನೇ ತಿದ್ದುಪಡಿ) ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ನಾನು ಕೂಡ Bellary Urban Development Authority ಯಲ್ಲಿ ಸದಸ್ಯನಾಗಿದ್ದೇನೆ. 2015ರಲ್ಲಿ ನಾನು ಸದಸ್ಯನಾಗಿದ್ದಾಗ ಶೇ.100 ರಷ್ಟು ಅವರು develop ಮಾಡಬೇಕಾಗಿತ್ತು. ಮಾಲೀಕನು joint development ಮಾಡಿಕೊಂಡು ಒಮ್ಮೆಲೇ investment ಮಾಡುವುದಕ್ಕೆ ಆಗುವುದಿಲ್ಲ ಎಂಬ ಉದ್ದೇಶದಿಂದ ನಾವು ಹಳೆಯ ಪದ್ಧತಿ ತರಬಾರದೆಂದು ಸರ್ಕಾರಕ್ಕೆ represent ಮಾಡಿದ್ದೇವೆ. ಇವತ್ತು ಇದನ್ನು ತಾವು ಸ್ಪಷ್ಟವಾಗಿ ತಂದಿದ್ದೀರಿ. ಶೇ.40 ಏನಾಗಬೇಕು? ಇದು ಸರಿಯಾಗಿದೆ. ಇದನ್ನು ಮಾಡಲಿಲ್ಲವಾದರೆ, ಶೇ.40 ರಷ್ಟಲ್ಲಿ ಸೈಟುಗಳನ್ನು ಮಾಡಿ ಟ್ಯಾಂಕುಗಳನ್ನು ಕಟ್ಟುವುದಿಲ್ಲ, drainage ಇಲ್ಲ, ರಸ್ತೆಯನ್ನು ಅರ್ಧ ಮಾಡಿ ಹೋದರೆ ಯಾರು ತೆಗೆದುಕೊಳ್ಳುತ್ತಾರೆ? Beneficiary ಡೆವಲಪರ್ ಅನ್ನು ಹುಡುಕಿಕೊಂಡು ಹೋಗುವುದಕ್ಕೆ ಬರುವುದಿಲ್ಲ. ಅಂದ ಮೇಲೆ Urban Development Authority ಅವರ ಹಿಂದೆ ಬೀಳುವುದಿಲ್ಲ. ಇದನ್ನು 1st Phase ಕೊಟ್ಟಿರುವುದು ಸರಿಯಾಗಿದೆ. ಈಗಾಗಲೇ ನಮ್ಮಲ್ಲಿಯೂ ಈ ರೀತಿಯಾಗಿ clear ಮಾಡಿಕೊಟ್ಟಿದ್ದಾರೆ. ಆದಕಾರಣ ಈ ಬಿಲ್ಲನ್ನು ನಾನು ಸ್ವಾಗತಿಸುತ್ತಾ major infrastructure ಇದರಲ್ಲಿ ಮಾಡಿದರೆ ಅವನು ಸೈಟ್ ಆದಮೇಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರಿಕೊಳ್ಳುತ್ತಾನೋ ಯಾವಾಗ ಮನೆ ಕಟ್ಟಿಕೊಳ್ಳುತ್ತಾನೋ ಅದು ಬೇರೆ. ಈ ಬಿಲ್ಲಿಗೆ ಸ್ವಾಗತ ಇದೆ, ಇದನ್ನು ಅನುಷ್ಠಾನ ಮಾಡಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು. Infrastructure ಬಿಟ್ಟು Phase by Phase ಮಾಡುವುದಕ್ಕೆ ಬರುವುದಿಲ್ಲ. ನನ್ನದು ಒಂದೇ ಸಲಹೆ ಏನೆಂದರೆ, ಏನಾದರೂ ಶೇಕಡಾವಾರು ಅಭಿವೃದ್ಧಿ ಮಾಡಿದರೆ ಶೇ.50ರಷ್ಟು ಅಭಿವೃದ್ಧಿಯಾದಾಗ ಶೇ.40ಕ್ಕೆ release ಮಾಡಿ. ಶೇ.75ರಷ್ಟು ಇದ್ದಾಗ ಶೇ.30ರಷ್ಟು release ಮಾಡಿ. ಶೇ.100ರಷ್ಟು ಇದ್ದಾಗ ಶೇ.30ರಷ್ಟು release ಮಾಡಬಹುದು ಆ ರೀತಿ ಯೋಜನೆ ಮಾಡಬಹುದು ಎನ್ನುವುದು ನನ್ನ ಸಲಹೆಯಾಗಿದೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020 ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**<u>ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>**

**<u>ಖಂಡ 2</u>**

**ಸಭಾಪತಿಯವರು:-** "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

(ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

**<u>ಖಂಡ 1 ಇತ್ಯಾದಿ</u>**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ವಿಧೇಯಕ, 2020ನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**10.ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕವಿಪ:–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

1. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ ನಿರಸನಗೊಳಿಸುವ ವಿಧೇಯಕ, 2020 .
2. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ ನಿರಸನಗೊಳಿಸುವ ವಿಧೇಯಕ, 2020.
3. ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕ, 2020.
4. ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2020.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. ಕರ್ನಾಟಕ ಭೂ ಕಂದಾಯ (2ನೇ ತಿದ್ದುಪಡಿ) ವಿಧೇಯಕ, 2020.
6. ಕರ್ನಾಟಕ ವಿವಾದಗಳು ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2020.
7. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2020.

**11.ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ)ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2020**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಕೆ.ಎಸ್. ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**(ಪ್ರಸ್ತಾವವನ್ನು ಮಂಡಿಸಲಾಯಿತು)**

**(ಮುಂದು)**

**(918) 26-09-2020/ 05-10/ ಕೆಹೆಚ್-ವಿಕೆ**

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಕಾಯಿದೆಯ ಅನುಷ್ಠಾನದಲ್ಲಿ ಕಂಡು ಬರುತ್ತಿರುವ ಸಮಸ್ಯೆಗಳ ಬಗ್ಗೆ ರಾಜ್ಯ ಚುನಾವಣಾ ಆಯೋಗವು ಮಾಡಿರುವ ಶಿಫಾರಸ್ಸು ಮತ್ತು ರಾಜ್ಯ ಉಚ್ಚ ನ್ಯಾಯಾಲಯ ಕೆಲವು ಪ್ರಕರಣಗಳಲ್ಲಿ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಅಡ್ವೋಕೇಟ್ ಜನರಲ್‌ರವರ ಕಾರ್ಯಾಲಯವು ಕೆಲವೊಂದು ಪ್ರಕರಣಗಳಲ್ಲಿ ತಿದ್ದುಪಡಿ ಮಾಡಲು ಸೂಚಿಸಿರುತ್ತದೆ. ರಾಜ್ಯದ ಆರ್ಥಿಕ ಇಲಾಖೆಯು ಸಹ ಒಂದೆರಡು ಪ್ರಕರಣಗಳಲ್ಲಿ ತಿದ್ದುಪಡಿ ಮಾಡಲು ಕೋರಿರುವ ಕಾರಣ ಮತ್ತು ರಾಜ್ಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ತಿದ್ದುಪಡಿ ವಿಧೇಯಕವನ್ನು ಮಂಡಿಸುತ್ತಿದ್ದೇನೆ. ಈ ಮೂಲಕ ಎಲ್ಲಾ ವರ್ಗದ ಜನರಿಗೆ ನ್ಯಾಯ ದೊರಕಿಸಿ ಕೊಡಲು ಸಾಧ್ಯವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಧೇಯಕದ ಬಗ್ಗೆ ವಿವರಣೆಯನ್ನು ಕೊಡಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಸ್.ಆರ್.ಪಾಟೀಲ್‌ರವರೇ, ಮಾನ್ಯ ಸಚಿವರು ಈಗಾಗಲೇ ವಿವರಣೆಯನ್ನು ಕೊಟ್ಟಿದ್ದಾರೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಮೊದಲೇ ಕೊಡಬೇಕಾಗಿತ್ತು. ಏಕೆಂದರೆ, ನಾವೆಲ್ಲಾ ಮಾನ್ಯ ಸದಸ್ಯರುಗಳು ಸ್ಥಳೀಯ ಸಂಸ್ಥೆಗಳ ಕ್ಷೇತ್ರವನ್ನು ಪ್ರತಿನಿಧಿಸುತ್ತೇವೆ. ಈ ವಿಧೇಯಕವನ್ನು ಯಾವ ಕಾರಣಕ್ಕಾಗಿ ತರಲಾಗಿದೆ ಎನ್ನುವ ಬಗ್ಗೆ ವಿವರಣೆಯನ್ನು ಕೊಡಬೇಕಲ್ಲವೇ? ಪ್ರಾಥಮಿಕ ಶಿಕ್ಷಣ ಸಚಿವರು ಮತ್ತು ಉನ್ನತ ಶಿಕ್ಷಣ ಸಚಿವರು ಯಾವುದೇ ವಿಧೇಯಕವನ್ನು ತರಬೇಕಾದರೆ ಸಭೆಯನ್ನು ಕರೆದು ಚರ್ಚೆ ಮಾಡುತ್ತಾರೆ. ಹಾಗೆ ತಾವು ಸ್ಥಳೀಯ ಸಂಸ್ಥೆಗಳ ಕ್ಷೇತ್ರವನ್ನು ಪ್ರತಿನಿಧಿಸುವಂತಹ ನಮ್ಮೆಲ್ಲರನ್ನು ಕರೆದು ಚರ್ಚೆ ಮಾಡಬೇಕಾಗಿತ್ತು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು intension of the Legislation ಬಗ್ಗೆ ಹೇಳಿದ್ದಾರೆ. Why this Bill is brought ಎನ್ನುವುದಕ್ಕೆ ಯಾವುದೇ ಹಿನ್ನೆಲೆಯಾಗಲಿ, ಚುನಾವಣಾ ಕಮೀಷನರ್ ಆಗಲಿ, ಆರ್ಥಿಕ ಇಲಾಖೆಯಾಗಲಿ, ನ್ಯಾಯಾಲಯದ ನಿರ್ಣಯಗಳಾಗಲಿ, ಇವೆಲ್ಲವುಗಳ ಹಿನ್ನಲೆಯನ್ನು ಹೇಳಿದ್ದಾರೆ. ಈ ವಿಧೇಯಕದಲ್ಲಿ ಏನೇನು ಇದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ವಿವರಣೆ ಕೊಡಬೇಕು.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಚಿವರಿಗೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ನಿನ್ನೆಯ ದಿವಸವು ಕೂಡ ಈ ವಿಚಾರವಾಗಿ ಅರಿಕೆ ಮಾಡಿಕೊಂಡಿದ್ದೇನೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹಾಗೂ ಉನ್ನತ ಶಿಕ್ಷಣ ಸಚಿವರು ಆಯಾಯ ಭಾಗದ ಮಾನ್ಯ ಸದಸ್ಯರನ್ನು ಕರೆದು ಸಭೆ ಮಾಡುತ್ತಾರೆ. ಹಾಗೆಯೇ ಹಿಂದಿನ ಸರ್ಕಾರದಲ್ಲಿ ಮಾನ್ಯ ಕೆ.ಎಸ್.ಈಶ್ವರಪ್ಪನವರು ವಿರೋಧಪಕ್ಷದ ನಾಯಕರಾಗಿದ್ದಾಗ, ಮಾನ್ಯ ಹೆಚ್.ಕೆ.ಪಾಟೀಲ್‌ರವರು ಮತ್ತು ಶ್ರೀ ಕೃಷ್ಣಭೈರೇಗೌಡರು ಇದ್ದಾಗ ಆಯಾಯ ಭಾಗದ ಶಾಸಕರನ್ನು ಕರೆದು ಸಭೆ ಮಾಡಿದರು. ತಾವು ಸಚಿವರಾಗಿ ಒಂದೂವರೆ ವರ್ಷವಾಯಿತು, ಸೌಜನ್ಯಕ್ಕಾದರೂ ಕೂಡ ಒಂದು ಬಾರಿ ನಮ್ಮೆಲ್ಲರನ್ನೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರೆದು ಸಭೆ ಮಾಡಲಿಲ್ಲ. ಸ್ಥಳೀಯ ಸಂಸ್ಥೆಗಳ ಕ್ಷೇತ್ರಕ್ಕೆ ಸೇರಿದ ಮಾನ್ಯ ಸದಸ್ಯರುಗಳು 25 ಜನ ಇದ್ದೇವೆ. 14 ಜನರು ಇರುವ ಪದವೀಧರರ ಕ್ಷೇತ್ರ ಮತ್ತು ಶಿಕ್ಷಕರ ಕ್ಷೇತ್ರದ ಮಾನ್ಯ ಸದಸ್ಯರುಗಳನ್ನು ಕರೆದು ಪ್ರತಿ ಬಾರಿಯೂ ಸಭೆಯನ್ನು ಮಾಡುತ್ತಾರೆ. ತಾವು ಸೌಜನ್ಯಕ್ಕಾದರೂ ಕೂಡ ನಮ್ಮನ್ನು ಭೇಟಿ ಮಾಡಲಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಒಂದು ನಿಮಿಷ. ಮಾನ್ಯ ಸದಸ್ಯರಾದ ಎನ್.ಅಪ್ಪಾಜಿಗೌಡರವರು ಹೇಳಿರುವ ವಿಚಾರದ ಬಗ್ಗೆ ನಾನು ಸ್ಪಷ್ಟಪಡಿಸುತ್ತೇನೆ. ಇವತ್ತಿನ ದಿವಸ ಅಧಿವೇಶನ ಮುಕ್ತಾಯಗೊಳ್ಳುತ್ತದೆ. ಮುಂದಿನ ವಾರದಲ್ಲಿ ಎಲ್ಲಾ ವಿಧಾನ ಪರಿಷತ್ತಿನ ಸ್ಥಳೀಯ ಸಂಸ್ಥೆಗಳ ಸದಸ್ಯರಗಳನ್ನು ಕರೆದು ಸಭೆ ಮಾಡುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಚಿವರಾದ ಕೆ.ಎಸ್.ಈಶ್ವರಪ್ಪನವರೇ, ನಾವು ಅತ್ತು ಕರೆದು ಸನ್ಮಾನ ಮಾಡಿಸಿಕೊಳ್ಳುವಂತಹ ಅಸಹ್ಯ ಕೆಲಸ ಯಾವುದು ಇಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎನ್.ಅಪ್ಪಾಜಿಗೌಡರವರೇ, ಆಯಿತು.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎನ್.ಅಪ್ಪಾಜಿಗೌಡರವರು ಇದರ ಬಗ್ಗೆ ಈಗಾಗಲೇ ಹೇಳಿದ್ದಾರೆ. ಈಗ ಕೋವಿಡ್-19 ಮತ್ತು ಬೇರೆ ಬೇರೆ ಸಮಸ್ಯೆಗಳು ಬಂದಿರುವುದರಿಂದ ಸಭೆಗೆ ಕರೆಯುವುದಕ್ಕೆ ಆಗಲಿಲ್ಲ. ಅದಕ್ಕೋಸ್ಕರ ಈಗ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮುಂದಿನ ವಾರದಲ್ಲಿ ತಮ್ಮನ್ನು ಸಭೆಗೆ ಕರೆಯುವಂತಹ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕ ಅತ್ಯಂತ ಪ್ರಮುಖವಾದ ವಿಧೇಯಕವಾಗಿದೆ. ತಮ್ಮ portfolio ಎಷ್ಟು? ಇದರ ಬಗ್ಗೆ ರಾಜ್ಯದ ಉದ್ದಗಲ್ಲಕ್ಕೂ 25 ಜನ ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುವಂತಹ ಮಾನ್ಯ ಸದಸ್ಯರುಗಳು ಈ ಸದನದಲ್ಲಿದ್ದಾರೆ. ಈ ವಿಧೇಯಕವನ್ನು ತರುವ ಮುನ್ನಾ ಅವರ ಜೊತೆಯಲ್ಲಿ ಈ ವಿಧೇಯಕದ ಬಗ್ಗೆ ಚರ್ಚೆ ಮಾಡಬೇಕಾಗಿತ್ತು. ತಾವು ಹೇಳಿದ ಹಾಗೆ ನ್ಯಾಯಾಲಯದ ಆದೇಶಗಳು ಮತ್ತು ಚುನಾವಣಾ ಆಯೋಗದ ನಿರ್ದೇಶನಗಳು, ಇವೆಲ್ಲವುಗಳು ಕೂಡ ಇಂತಹ ಕಡೆಗಳಲ್ಲಿ ಈ ರೀತಿ ಇದೆ. ಇದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಎಂದು ಕೇಳಿದ್ದರೆ, ಈ ವಿಧೇಯಕ ಇನ್ನು ಉತ್ತಮವಾಗಿ ಬರುತ್ತಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಈಗ ತಾನೇ ಈ ವಿಧೇಯಕವನ್ನು ನಮಗೆ ಕೊಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈ ವಿಧೇಯಕವನ್ನು ಮತ್ತೆ ಇನ್ಯಾವಾಗ ಕೊಡಬೇಕಾಗಿತ್ತು? ಈಗ ತಾನೇ ಈ ವಿಧೇಯಕ ಬಂದಿದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ನಮಗೆ ಕೊಟ್ಟು, ಇನ್ನು 20 ನಿಮಿಷ ಆಗಿಲ್ಲ. ಕೇವಲ 5 ನಿಮಿಷಗಳಾಗಿದೆ. ಇಂತಹ ಪ್ರಮುಖವಾದ ವಿಧೇಯಕವನ್ನು ಕೊಟ್ಟು, ಇದರ ಬಗ್ಗೆ ಹೇಳಿ ಎಂದರೆ ಏನು ಹೇಳುವುದು?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಕಳೆದ ಬಾರಿ ಬಂದಿರುವ ವಿಧೇಯಕ ಇದೆಯಲ್ಲವೇ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಕೆ.ಎಸ್.ಈಶ್ವರಪ್ಪನವರೇ, ತಾವು ಬೇಸರ ಮಾಡಿಕೊಳ್ಳಬೇಡಿ. ತಾವು ಹೇಗೆ ಎಂದರೆ, ನೀರನ್ನು ಇಟ್ಟು ಉಪ್ಪು ಹಾಕಿದ ಹಾಗೆ. ಇದು ಆ ರೀತಿಯಲ್ಲಿದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಕಳೆದ ಬಾರಿ ಬಂದಿರುವುದು ಇದೇ ವಿಧೇಯಕವಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಈ ವಿಧೇಯಕ ಬಂದಿತ್ತು. ಆದರೆ, ಮಂಡನೆ ಆಗಿರಲಿಲ್ಲ. ಈಗ ಮಂಡನೆ ಮಾಡಲಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮುಂದಿನ ಅಧಿವೇಶನದಲ್ಲಿ ಈ ವಿಧೇಯಕವನ್ನು ಹಾಕಿಕೊಳ್ಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಈ ವಿಧೇಯಕ ಬಂದಿತ್ತು. ಆದರೆ, ಮಂಡನೆ ಮಾಡುವುದಕ್ಕೆ ಆಗಲಿಲ್ಲ ಎನ್ನುವ ಕಾರಣಕ್ಕೆ ಈ ಬಾರಿ ಈ ವಿಧೇಯಕ ಸದನಕ್ಕೆ ಬಂದಿದೆ. ಈ ವಿಧೇಯಕದಲ್ಲಿ ಎರಡು ಅಂಶಗಳು ಇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, 6 ತಿಂಗಳ ಹಿಂದೆ ಇದೇ ವಿಧೇಯಕ ಸದನಕ್ಕೆ ಬಂದಿತ್ತು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದಂತಹ ವಿಧೇಯಕವಾಗಿದ್ದು, ಸುಮಾರು 25 ಜನರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿ ಬಂದಂತಹವರು. ಇದರ ಬಗ್ಗೆ ಸಂಪೂರ್ಣವಾಗಿ ನಾವೆಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಬೇಕಾಗುತ್ತದೆ. ಇವತ್ತು ಕೊನೆಯ ಅಧಿವೇಶನವಾಗಿದ್ದು, ಇವತ್ತು ಇದರ ಬಗ್ಗೆ ಮಾತನಾಡಿ ಎಂದು ಹೇಳಿದರೆ, ಇದನ್ನು ಯಾವ ರೀತಿ ಮಾತನಾಡುವುದಕ್ಕೆ ಆಗುತ್ತದೆ. ಇದಕ್ಕೆ ಅಂತಹ ಅವಸರ ಏನಿದೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರೇ, ಇದರ ಬಗ್ಗೆ ತಮ್ಮ ವಿರೋಧ ಪಕ್ಷದ ನಾಯಕರನ್ನು ಕೇಳಿ. ಹಾಗೆಯೇ ಈ ವಿಧೇಯಕದಲ್ಲಿ ಇರುವಂತಹ ಮುಖ್ಯವಾದ ಅಂಶಗಳನ್ನು ಕೇಳಿ. ಈ ವಿಧೇಯಕ ಅವಸರ ಇದೆ ಎಂದು ನಾನು ತಮಗೆ ಹೇಳಲಿಲ್ಲ. **(ಗೊಂದಲ)** ಈ ವಿಧೇಯಕದಲ್ಲಿ 2 ಮುಖ್ಯವಾದ ಅಂಶಗಳು ಇವೆ ಎಂದು ಹೇಳಿದ್ದೇನೆ. 10 ವರ್ಷಗಳಿಗೆ ಇರುವ ಮೀಸಲಾತಿಯನ್ನು 5 ವರ್ಷಗಳಿಗೆ ನಿಗದಿಪಡಿಸಲಾಗಿದೆ. ಇನ್ನೊಂದು, ಅಧ್ಯಕ್ಷರು ಉಪಾಧ್ಯಕ್ಷರ ಅವಧಿಯನ್ನು 30 ತಿಂಗಳಿಗೆ ಸೀಮಿತಗೊಳಿಸಲಾಗಿದೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಮ್ಮ ಜಾಗದಲ್ಲಿ ಅವರು ಇದ್ದಿದರೆ ಏನು ಮಾಡುತ್ತಿದ್ದರು?

**(ಗೊಂದಲ)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸೌಜನ್ಯಕ್ಕಾದರೂ ನಮ್ಮನ್ನು ಸಭೆಗೆ ಕರೆಯಬೇಕಾಗಿತ್ತು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರೇ, ಈ ವಿಧೇಯಕದಲ್ಲಿರುವ ಅಂಶಗಳನ್ನು ಕೇಳಿ. 10 ವರ್ಷಗಳಿಗೆ ಇರುವ ಮೀಸಲಾತಿಯನ್ನು 5 ವರ್ಷಕ್ಕೆ ಸೀಮಿತಗೊಳಿಸಲಾಗಿದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಅವಧಿಯನ್ನು 30 ತಿಂಗಳಿಗೆ ಸೀಮಿತಗೊಳಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ ವಿವರಣೆ ಕೊಡಬೇಕಲ್ಲವೇ? 10 ವರ್ಷಗಳಿಗೆ ಇರುವ ಮೀಸಲಾತಿಯನ್ನು 5 ವರ್ಷಕ್ಕೆ ಸೀಮಿತಗೊಳಿಸಲಾಗಿದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಅವಧಿಯನ್ನು 30 ತಿಂಗಳಿಗೆ ಸೀಮಿತಗೊಳಿಸಲಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರಣೆಯನ್ನು ಕೊಡಬೇಕು. ಮಾನ್ಯ ಅಪ್ಪಾಜಿಗೌಡರು ಏನು ಹೇಳಿದ್ದಾರೆ ಎಂದರೆ, ಈ ವಿಧೇಯಕಕ್ಕೆ ಸೀಮಿತವಾಗಿ ಹೇಳಲಿಲ್ಲ. ಈಗ ಪದವೀಧರರ ಕ್ಷೇತ್ರದ ಸದಸ್ಯರುಗಳಾಗಲಿ, ಶಿಕ್ಷಕರ ಕ್ಷೇತ್ರದ ಸದಸ್ಯರುಗಳಾಗಲಿ, ಆ ಶಿಕ್ಷಣ ಸಚಿವರು ಮೇಲಿಂದ ಮೇಲೆ ಮಾನ್ಯ ಸದಸ್ಯರುಗಳನ್ನು ಕರೆದು ಚರ್ಚೆ ಮಾಡುತ್ತಾರೆ. ಕೆಲವು ಇಲಾಖೆಗಳಲ್ಲಿರುವ ಸಮಸ್ಯೆಗಳ ಬಗ್ಗೆ ಕೇಳುತ್ತಾರೆ. ಆದರೆ ಇಲ್ಲಿ 25 ಜನ ಮಾನ್ಯ ಸದಸ್ಯರುಗಳು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆ ಮಾಡಿದ ಮೇಲೆ, ಮೇಲಿನ ಪೀಠದಲ್ಲಿ ಕುಳಿತವರು, ನನ್ನ ಎದುರಿನಲ್ಲಿ ಸಭಾನಾಯಕರಾಗಿ ಕುಳಿತವರು, ನಾನು ಎಲ್ಲರೂ ಸೇರಿ, 25 Members across the Party line. ಇದು ಬಹಳ ಮಹತ್ವದ್ದು. ನಾನು ಹೇಳುವುದೇನೆಂದರೆ, "ಗ್ರಾಮಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ" ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ 25 ಜನ ಮಾನ್ಯ ಶಾಸಕರು ಮೇಲ್ಮನೆಯಲ್ಲಿ ಇದ್ದೇವೆ. ಕೆಲವು ವಿಚಾರಗಳಲ್ಲಿ ತಾವು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ನಾವು ತಮಗೆ ಸಹಕಾರವನ್ನು ಕೊಡುತ್ತೇವೆ. ನಾವು ವಿರೋಧ ಪಕ್ಷದಲ್ಲಿದ್ದರೂ ಕೂಡಾ ಆಡಳಿತ ಸುಲಲಿತವಾಗಿ ನಡೆಯಲಿ. ಜಿಲ್ಲೆ ಮತ್ತು ಕ್ಷೇತ್ರದ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತರುತ್ತೇವೆ. ಆ ದೃಷ್ಟಿಯಿಂದ ಅವರು ಹೇಗೆ ಸಭೆಗೆ ಕರೆಯುತ್ತಾರೆ ಎಂಬುದನ್ನು ತಾವು ನೋಡಿ. ಶಿಕ್ಷಣ ಸಚಿವರು ಮೇಲಿಂದ ಮೇಲೆ ಸಭೆಗೆ ಕರೆದು, ಸಂಬಂಧಪಟ್ಟ ವಿಷಯದ ಬಗ್ಗೆ ಚರ್ಚೆ ಮಾಡುತ್ತಾರೆ. ಆದರೆ, 25 ಜನ ಮಾನ್ಯ ಸದಸ್ಯರುಗಳು ಲೆಕ್ಕಕ್ಕೆ ಇಲ್ಲದೆ ಹಾಗೆ ಆಗಿದ್ದೇವೆ. ಅಂದರೆ, 'ಆಟಕ್ಕುಂಟು ಲೆಕ್ಕಕ್ಕೆ ಇಲ್ಲದ ಹಾಗೆ' ಆಗಿದ್ದೇವೆ. ಮಾನ್ಯ ಅಪ್ಪಾಜಿಗೌಡರವರು ವಿಧೇಯಕಕ್ಕೆ ಸೀಮಿತವಾಗಿ ಮಾತನಾಡಲಿಲ್ಲ. ಮೇಲಿಂದ ಮೇಲೆ ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾದಂತಹ 25 ಜನ ಮಾನ್ಯ ಶಾಸಕರನ್ನು ತಾವು ಕರೆದು, ಕೆಲವು ವಿಷಯಗಳ ಚರ್ಚೆ ಮಾಡಿ. ಮಾನ್ಯ ಸಚಿವರು ಕೂಡ ಬಹಳ ಅನುಭವಸ್ಥರಿದ್ದಾರೆ. ಅದರ ಬಗ್ಗೆ ಪ್ರಶ್ನಾತೀತ. ಆದರೆ, ಅದರ ಜೊತೆಗೆ ನಮ್ಮ ಕೆಲವು ವಿಚಾರಗಳನ್ನು ತಾವು ಕೇಳಿದರೆ ಒಳ್ಳೆಯದು ಎನ್ನುವ ಸಲುವಾಗಿ ನಾವು ಹೇಳಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಉಳಿದಂತಹ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಗೆದ್ದು ಬಂದಂತಹ ಎಲ್ಲಾ ಸದಸ್ಯರು ಸ್ಪಷ್ಟವಾಗಿ ಹೇಳಿದ್ದಾರೆ. ಅವರವರ ಕ್ಷೇತ್ರದಲ್ಲಿ ಆಗಿರುವಂತಹ ಕೆಲಸಗಳು ಮತ್ತು ಬೇರೆ ಬೇರೆ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮುಂದಿನ ಬುಧವಾರ ಬೆಳಗ್ಗೆ 11–00 ಗಂಟೆಗೆ ಸಭೆ ಕರೆಯುತ್ತೇನೆ. ಇವತ್ತು ಶನಿವಾರ, ಮುಂದಿನ ಬುಧವಾರ ಸಭೆಯನ್ನು ಮಾಡಬಹುದಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಚಿವರಾದ ಕೆ.ಎಸ್.ಈಶ್ವರಪ್ಪನವರೇ, ನಾವು ಕೋವಿಡ್–19ಗೆ ಅಂಜಿದ್ದೇವೆ. ನಾವು ಒಂದು ವಾರ ಇಲ್ಲಿದ್ದೇವೆ ಎಂದರೆ, ನಮಗೆ ನೂರಾರು ಮಂದಿ ಹಿತೈಷಿಗಳು, ಅಭಿಮಾನಿಗಳು ಕಾಯುತ್ತಿರುತ್ತಾರೆ. ಇದಕ್ಕೆ ಸ್ವಲ್ಪ ನಮಗೆ ಸಮಯವನ್ನು ಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಈ ಬುಧವಾರ ಬೇಡ, ಅದರ ಮುಂದಿನ ಬುಧವಾರ ಬೇಕಾದರೆ ಕರೆಯೋಣ. ತಾವು ಹೇಳಿದ ದಿನಾಂಕದಂದೇ ಸಭೆಯನ್ನು ಕರೆಯುತ್ತೇನೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಈ ದಿನಾಂಕ ತಮಗೆ ಆಗಬಹುದಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಬರುವ ಬುಧವಾರ ಬಿಟ್ಟು, ಮುಂದಿನ ಬುಧವಾರ ಸಭೆಯನ್ನು ಕರೆಯಬಹುದು. ಅದಕ್ಕೆ ನಮ್ಮ ಒಪ್ಪಿಗೆ ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ಬುಧವಾರ ಬಿಟ್ಟು, ಮುಂದಿನ ಬುಧವಾರ ಸಭೆಯನ್ನು ಕರೆಯುತ್ತೇನೆ. ಸಭೆಯನ್ನು ಮಾಡಿ, ಒಳ್ಳೆಯ ಊಟವನ್ನು ಕೂಡ ಹಾಕಿಸುತ್ತೇನೆ. ನಾನು ಕೊಡಿಸುವ ಊಟವನ್ನು ತಾವು ತಿಂದುಕೊಂಡು ಹೋಗಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಚಿವರೇ, ಆಯಿತು. ನಮ್ಮ ಒಪ್ಪಿಗೆ ಇದೆ. ಈ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ಮಾಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಳ್ಳೆಯ ಸಭೆಯನ್ನು ಸಹ ಮಾಡೋಣ. ನಾನು ಏನು ಊಟವನ್ನು ಕೊಡಿಸುತ್ತೀನೋ, ಅದನ್ನೇ ತಾವೆಲ್ಲರೂ ಊಟ ಮಾಡಬೇಕು. ತಾವು ಹೇಳಿರುವುದನ್ನು ನಾನು ಕೇಳಿದ್ದೇನೆ. ನಾನು ಹೇಳುವುದನ್ನು ತಾವು ಕೇಳಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೇ, ಆಯಿತು. ತಾವು ಏನು ಊಟ ಕೊಡಿಸುತ್ತೀರೋ, ಅದನ್ನೇ ನಾವೆಲ್ಲರೂ ಊಟ ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನೀವೇ ಸಾಕ್ಷಿ.

**ಶ್ರೀ ಬಸವರಾಜ ಎಸ್.ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರೇ, ಕುರಿ ತಿನ್ನುವವರಿಗೆ ಊಟ ಹಾಕಿಸಿದರೆ . . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಮಾಧುಸ್ವಾಮಿಯವರಿಗೆ, ನಮಗೂ, ಅವರಿಗೂ ಬಹಳ ದೋಸ್ತಿ ಇದೆ. ಒಮ್ಮೆ ಅಲ್ಲಿ, ಒಮ್ಮೆ ಇಲ್ಲಿ ಎಂದು ಅದಲಿ ಬದಲಿ ಮಾಡಿಕೊಂಡಿದ್ದೇವೆ.

**ಶ್ರೀ ಕೆ.ಸಿಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರೇ, ಈ ಮುಂದಿನ 30ನೇ ತಾರೀಖು ಬೇಡ. ಅದರ ಮುಂದಿನ ವಾರ 7ನೇ ತಾರೀಖಿಗೆ ಸಭೆಯನ್ನು ಕರೆಯಿರಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸದಸ್ಯರಾದ ಕೆ.ಸಿ.ಕೊಂಡಯ್ಯನವರೇ, ಆಗಬಹುದು.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಇಲಾಖೆ):-** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಆದ ಮೇಲೆ ಈ ವಿಧೇಯಕವನ್ನು ಪರ್ಯಾಲೋಚನೆ ಮಾಡಿ, ಇದನ್ನು ಪಾಸ್ ಮಾಡಿಕೊಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಚಿವರಾದ ಜೆ.ಸಿ.ಮಾಧುಸ್ವಾಮಿಯವರೇ, ಈ ವಿಧೇಯಕವನ್ನು ಪಾಸ್ ಮಾಡಿಕೊಡುವುದಿಲ್ಲ. ಇದರ ಬಗ್ಗೆ ಚರ್ಚೆಯಾಗಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಕಳೆದ ಬಾರಿ ಈ ವಿಧೇಯಕ ಮಂಡನೆಯಾಗಿರುವುದೇ ಇಲ್ಲವೇ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಜಿಲ್ಲಾ ಯೋಜನಾ ಸಮಿತಿ ಎಂದು ಮಾಡಿದ್ದಾರೆ. ಆ ಸಮಿತಿಯಲ್ಲಿ ಯಾರ್‍ಯಾರು ಇರಬೇಕು ಎನ್ನುವುದನ್ನು ಸಹ ಕೊಟ್ಟಿದ್ದಾರೆ. ಸ್ಥಳೀಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾದಂತಹವರನ್ನು, ನಮ್ಮನ್ನೂ ಯಾರು ಕೂಡ ಹೆಸರಿಸುತ್ತಿಲ್ಲ. ದಯಮಾಡಿ, ಇಂತಹ ಮಹತ್ವದ ವಿಧೇಯಕವನ್ನು ಆತುರವಾಗಿ ಪಾಸ್ ಮಾಡುವುದು ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಯಾರ್‍ಯಾರು ಏನೇನು ಸಲಹೆಗಳನ್ನು ಕೊಡುತ್ತಾರೋ, ಅವರು ಸಲಹೆಗಳನ್ನು ಕೊಡಲಿ. ಒಬ್ಬೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಮಾತನಾಡಲಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ ಸ್ವಲ್ಪ ಸಂಕ್ಷಿಪ್ತವಾಗಿ ವಿವರಣೆ ನೀಡಬೇಕು.

**(ಮುಂದು)**

**(919)/26-9-2020/ಎಲ್‌ಎಂ/ಜಿಆರ್/5-20**

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಗಳೆ, ಹಿಂದೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಇಳಿಸಲು 30 ತಿಂಗಳವರೆಗೆ ಅವಿಶ್ವಾಸ ಗೊತ್ತುವಳಿಯನ್ನು ತರುವಂತೆ ಇರಲಿಲ್ಲ. ಈಗ ಈ ವಿಧೇಯಕದ ಮೂಲಕ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು 15 ತಿಂಗಳು ಮಾಡಲಾಗಿದೆ. ಹಿಂದೆ ಮೀಸಲಾತಿಯನ್ನು 10ವರ್ಷಕ್ಕೆ ನಿಗದಿಪಡಿಸಲಾಗಿತ್ತು. ಈಗ ಅದನ್ನು 5ವರ್ಷಕ್ಕೆ ಇಳಿಸಲಾಗಿದೆ. ತಾಲ್ಲೂಕು ಪಂಚಾಯಿತಿಯಲ್ಲಿ ಅವಿಶ್ವಾಸ ಗೊತ್ತುವಳಿಯನ್ನು ಪರಿಗಣಿಸುವಾಗ Deputy Commissioner ಮತ್ತು ಜಿಲ್ಲಾಪಂಚಾಯಿತಿಯಲ್ಲಿ ಅವಿಶ್ವಾಸ ಗೊತ್ತುವಳಿಯನ್ನು ಪರಿಗಣಿಸುವಾಗ ಪ್ರಾದೇಶಿಕ ಆಯುಕ್ತರು ಅಧ್ಯಕ್ಷತೆಯನ್ನು ವಹಿಸುವುದಕ್ಕಾಗಿ. ಕೆಲವು ಚುನಾವಣಾ ಸುಧಾರಣೆಗಳನ್ನು ಕಲ್ಪಿಸುವುದಕ್ಕಾಗಿ. ಪಂಚಾಯಿತಿಗಳ ಚುನಾವಣೆಯಲ್ಲಿ ಮತದಾನವು ಮುಕ್ತಾಯವಾಗುವುದಕ್ಕಿಂತ ಮೊದಲು 48 ಗಂಟೆಗಳ ಅವಧಿಯಲ್ಲಿ ಮದ್ಯದ ಅಂಗಡಿಗಳನ್ನು ಮುಚ್ಚುವುದಕ್ಕಾಗಿ, ಕಾರ್ಖಾನೆಗಳ ಖಾಲಿ ಭೂಮಿಗಳ ಸಂಬಂಧದಲ್ಲಿ ಆಸ್ತಿ ತೆರಿಗೆಯನ್ನು ಸಮರ್ಪಕವಾಗಿ ಮರುಹಂಚಿಕೆ ಮಾಡುವುದಕ್ಕಾಗಿ. ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ಕೆಲವು ಅನುವಂಶಿಕ ತಿದ್ದುಪಡಿಗಳಿಗಾಗಿ ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡುವುದು ಅವಶ್ಯಕ ಎಂದು ಪರಿಗಣಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳೆದ ಬಾರಿ ನಾನು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕನಾದ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಲೆಕ್ಕದಲ್ಲಿಯೇ ಇಟ್ಟುಕೊಳ್ಳುವುದಿಲ್ಲ ಎನ್ನುವ ಮಾತು ಇತ್ತು. ಈಗ ವಿಧಾನ ಪರಿಷತ್ತಿನ ಸದಸ್ಯರನ್ನು ಉಪಾಧ್ಯಕ್ಷರನ್ನಾಗಿ ಮೊದಲ ಬಾರಿಗೆ ಈ ರಾಜ್ಯದಲ್ಲಿ ನಾವು ಮಾಡುತ್ತಿದ್ದೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಚಿವರೇ, District Planning Commission ನಲ್ಲಿ ಇಲ್ಲ Taluk Planning Commission ನಲ್ಲಿ ಮಾಡಿದ್ದೀರಿ. ನಾವು ಎರಡು ಜಿಲ್ಲೆಗಳನ್ನು ಪ್ರತಿನಿಧಿಸುತ್ತೇವೆ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಗಳೆ, ಸರ್ಕಾರ ಜಿಲ್ಲಾ ಯೋಜನಾ ಸಮಿತಿಯನ್ನು ಮಾಡಲು ಹೊರಟಿದೆ. ಆ ಸಮಿತಿಗೆ ಅಧ್ಯಕ್ಷರನ್ನಾಗಿ ಆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನು ಅಥವಾ ಬೇರೆಯವರನ್ನು ಮಾಡುವುದನ್ನು ಬಿಟ್ಟು, ಆ ಜಿಲ್ಲಾ ಉಸ್ತುವಾರಿ ಸಚಿವರನ್ನು ಮಾಡಿದ್ದೀರಿ, ಇಡೀ ಜಿಲ್ಲಾ ಪಂಚಾಯಿತಿ ವ್ಯವಸ್ಥೆಯನ್ನು ಮತ್ತೆ ಶಾಸಕರೇ ತೆಗೆದುಕೊಳ್ಳುವುದಾದರೆ ಜಿಲ್ಲಾ ಪಂಚಾಯಿತಿ ವ್ಯವಸ್ಥೆ ಏಕೆ ಬೇಕು? ಅಧಿಕಾರ ವಿಕೇಂದ್ರಿಕರಣ ಮಾಡುವುದನ್ನು ಬಿಟ್ಟು..

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಜಿಲ್ಲಾ ಯೋಜನಾ ಸಮಿತಿಯಲ್ಲಿ ಪುರಸಭೆ, ನಗರಪಾಲಿಕೆಗಳು ಒಳಗೊಂಡಿರುತ್ತದೆ. ಅಧ್ಯಕ್ಷರು ಆ ಭಾಗಕ್ಕೆ authority ಯನ್ನು ಹೊಂದಿರುವುದಿಲ್ಲ. ಹಳೆಯ ಬಿಲ್‌ನಲ್ಲಿ ಅಧ್ಯಕ್ಷರು ಅಥವಾ ಉಸ್ತುವಾರಿ ಸಚಿವರನ್ನು ಆಯ್ಕೆಯಾಗುವುದು ಎಂದು ಇತ್ತು. ಅವಕಾಶವಿಲ್ಲ ಎಂದು ಇರಲಿಲ್ಲ. ಇದನ್ನು pilot ಮಾಡುವಾಗ ಜಿಲ್ಲಾ ಉಸ್ತುವಾರಿ ಸಚಿವರು ಅಥವಾ ಜಿಲ್ಲಾ ಪರಿಷತ್ ಅಧ್ಯಕ್ಷರು ಆಗುವಂತೆ ಮಾಡಿ ಎಂದು ನಾನೇ ಹೇಳಿದೆ. As per the Act, 'anybody can be elected' ಎಂದು ಇರುವುದನ್ನು, ಅಧ್ಯಕ್ಷರು ಅಥವಾ ಉಸ್ತುವಾರಿ ಸಚಿವರು ಎಂದು ಮಾಡಲಾಗಿದೆ. ಪ್ರಶ್ನೆ ಏನು ಉದ್ಭವವಾಯಿತು ಎಂದರೆ, legally speaking, ನಮ್ಮದೇನು ತಕರಾರು, ನಾವು ಹೋಗಿ ಅಲ್ಲಿ ಕುಳಿತುಕೊಳ್ಳಬೇಕು ಎಂದು ನಮ್ಮ ಉದ್ದೇಶವಿಲ್ಲ. ಪುರಸಭೆಗಳ ಸ್ಥಿತಿ-ಗತಿ ಏನು, ಅಲ್ಲಿಯ ಮೇಯರ್ ಕೇಳಿದರೆ ಏನು ಹೇಳುವುದು, ಅಲ್ಲಿಯ ಪುರಸಭೆ ಅಧ್ಯಕ್ಷರು ಕೇಳಿದರೆ ಏನು ಉತ್ತರ ಹೇಳುವುದು ಎಂದು ಇದನ್ನು ಮಾಡಲಾಗಿದೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಅದು ಆ ಅಥಾರಿಟಿಗೆ ಸೇರಿರುವುದರಿಂದ ಎರಡಕ್ಕೂ ಸಂಬಂಧಪಟ್ಟ ಹಾಗೆ ಇರಲಿ ಎನ್ನುವುದನ್ನು ಬಿಟ್ಟರೆ ಬೇರೆ ಏನು ಇಲ್ಲ. ದಯಮಾಡಿ ದೊಡ್ಡದಾಗಿ ಏನು ಆಲೋಚನೆ ಮಾಡಬಾರದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ.ತಿಮ್ಮಾಪೂರ:–** ಜಿಲ್ಲಾ ಉಸ್ತುವಾರಿ ಸಚಿವರನ್ನೆ ಯೋಜನಾ ಸಮಿತಿಯನ್ನು ಅಧ್ಯಕ್ಷರನ್ನಾಗಿ ಮಾಡಿದರೆ..

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಗಳೆ, ಪುರಸಭೆ, ನಗರಸಭಗಳಿಂದ ಅವರು ಹೊರತಾಗಿರುತ್ತಾರೆ. ಎಲ್ಲವು ಇದರಲ್ಲಿ ಸೇರುವುದರಿಂದ ಜಿಲ್ಲಾ ಮಂತ್ರಿಗಳೆ ಅಧ್ಯಕ್ಷರಾಗಲಿ ಎಂದು ಮಾಡಲಾಗಿದೆ. ಯಾವಾಗಲೂ ನಾವೇ ಇರುತ್ತೇವೆಯೇ ಅಲ್ಲಿ. ಕಾಲಕ್ಕೆ ತಕ್ಕ ಹಾಗೆ ಬದಲಾವಣೆಯಾಗುತ್ತಾ ಹೋಗುತ್ತದೆ. But, the authority vests in the Minister. ಕಾರ್ಪೋರೇಷನ್‌ದವರನ್ನು ಇಟ್ಟರೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮಸಭೆಗಳಿಗೆ ಅವಮಾನವಾಗುತ್ತದೆ. ಅಲ್ಲಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಮುನ್ಸಿಪಾಲಿಟಿ ವ್ಯವಸ್ಥೆಯಲ್ಲಿ ಏರುಪೇರಾಗುತ್ತದೆ ಎಂದು ಮಂತ್ರಿಗಳನ್ನು ಮಾಡಲಾಗುತ್ತದೆ ಅಷ್ಟೆ, ದಯಮಾಡಿ ತಪ್ಪು ಮಾಡಿಕೊಳ್ಳಬೇಡಿ.

**ಶ್ರೀ ಬಸವರಾಜ ಪಾಟೀಲ್.ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿಯನ್ನು fix ಮಾಡಲಾಗಿದೆ. ಸದಸ್ಯರ ಅವಧಿಯನ್ನು ಆಗ ನಿಗದಿಪಡಿಸಲಾಗಿತ್ತು. ಉದಾಹರಣೆಗೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಸ್ಥಾನ ಎಸ್‌ಸಿ ಮಹಿಳೆಗೆ ಮೀಸಲಾಗಿದ್ದರೆ ಅದನ್ನು 10ವರ್ಷದವರೆಗೂ ಹಾಗೆ ಇಡಲಾಗಿತ್ತು. ಆದರೆ ಈಗ ಅದನ್ನು 5 ವರ್ಷ ಮಾಡಲಾಗಿದೆ. 5 ವರ್ಷ ಇರುವುದನ್ನು 30 ತಿಂಗಳು ಎಂದರು, ಅವಿಶ್ವಾಸ ಗೊತ್ತುವಳಿ ತರಲು 15 ತಿಂಗಳಿಗೆ ತರಬಹುದು ಎಂದು ಮಾಡಿದ್ದಾರೆ. ಇದರಿಂದ ಅಲ್ಲಿ ಬರಿ ಕುದುರೆ ವ್ಯಾಪಾರ ನಡೆಯುತ್ತದೆ. ಏನು ಕೆಲಸಗಳು ಆಗುವುದಿಲ್ಲ. ಈಗ ಒಬ್ಬ ಅಧ್ಯಕ್ಷನಾಗಿರುತ್ತಾನೆ, ಎರಡು–ಮೂರು ತಿಂಗಳಿಗೆ ಇನ್ನೊಬ್ಬ ನಾನು ಅಧ್ಯಕ್ಷನಾಗಬೇಕೆಂದು ಹಾಲಿ ಅಧ್ಯಕ್ಷರನ್ನು ಇಳಿಸಲು ಪ್ರಯತ್ನಗಳು ಪ್ರಾರಂಭವಾಗುತ್ತವೆ. 10 ತಿಂಗಳಲ್ಲಿ ಒಬ್ಬರನ್ನು ಇಳಿಸುವುದು ಇನ್ನೊಬ್ಬರು ಅಧ್ಯಕ್ಷರಾಗುವುದು ಇದೇ ಕೆಲಸವಾಗುತ್ತದೆ. ಜಿಲ್ಲಾ ಪಂಚಾಯಿತಿಯಲ್ಲಿ, ತಾಲ್ಲೂಕು ಪಂಚಾಯಿತಿಯಲ್ಲಿ, ಗ್ರಾಮ ಪಂಚಾಯಿತಿಯಲ್ಲಿ ಇದೆ ಕೆಲಸ ನಡೆಯುತ್ತದೆ. ಕೆಲಸ ಮಾಡುವ ಕಡೆಗೆ ಅವರ ಗಮನ ಇರುವುದೇ ಇಲ್ಲ. ಅವನನ್ನು ಇಳಿಸುವುದು ಹೇಗೆ, ನಾನು ಅಧ್ಯಕ್ಷನಾಗುವುದು ಹೇಗೆ ಎನ್ನುವುದೇ ಅವರ ಯೋಚನೆಯಾಗಿರುತ್ತದೆ. ಮೊದಲು 10 ವರ್ಷ ಇದ್ದಾಗ, ಒಬ್ಬ ಅಧ್ಯಕ್ಷನಾದರೆ ಅವನು ನಾನು ಒಳ್ಳೆಯ ಕೆಲಸವನ್ನು ಮಾಡಬೇಕು, ಮತ್ತೊಮ್ಮೆ ನಾನು ಆಯ್ಕೆಯಾಗಿ ಬರಬೇಕು ಎನ್ನುವ ಭಾವನೆ ಇತ್ತು. ಆಗ ಸ್ವಲ್ಪ ಕೆಲಸವನ್ನು ಮಾಡುತ್ತಿದ್ದರು. ತಾಲ್ಲೂಕು ಯೋಜನಾ ಸಮಿತಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ನೇಮಿಸಲಾಗಿದೆ. ಇದನ್ನು ಜಿಲ್ಲಾ ಯೋಜನಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಿತಿಯಲ್ಲಿ ತರಬೇಕು. ಏಕೆಂದರೆ ನಾವು ಎರಡು ಜಿಲ್ಲೆಗಳನ್ನು ಪ್ರತಿನಿಧಿಸುತ್ತೇವೆ. ದಯಮಾಡಿ ಅದನ್ನು ಬಿಲ್‌ನಲ್ಲಿ ಸೇರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು, ನಾನು ಕೇವಲ ಚುನಾವಣೆ ಬಗ್ಗೆ ಮಾತ್ರ ಹೇಳುತ್ತೇನೆ. ನಮ್ಮ ಸರ್ಕಾರ ಇದ್ದಾಗ ಮೀಸಲಾತಿಯನ್ನು 10 ವರ್ಷಕ್ಕೆ ಏಕೆ ಮಾಡಿದರು ಎಂದರೆ, ಒಬ್ಬ ಅಧಕ್ಷನಾಗಿ ಆಯ್ಕೆಯಾದಾಗ ಆತ ನಾನು ಕೆಲಸ ಮಾಡಬೇಕು ಮತ್ತೆ ಮುಂದಿನ ಸಾರಿ ಈ ಮೀಸಲಾತಿ ಮುಂದಿನಂತರ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎನ್ನುವ ಭಾವನೆ ಇರುತ್ತಿತ್ತು. ಈಗ 5 ವರ್ಷ ಮಾಡಿರುವುದರಿಂದ, ಮುಂದೆ ನಾನು ಆಯ್ಕೆಯಾಗುವುದಿಲ್ಲ ಬಿಡು ಎಂದು ಆತ ಕೆಲಸ ಮಾಡದೆ ಬೇರೆಯೇ ಮಾಡಲು ಪ್ರಾರಂಭ ಮಾಡುತ್ತಾರೆ. ಹಿಂದೆ 30 ತಿಂಗಳ ನಂತರ ಅವಿಶ್ವಾಸ ನಿರ್ಣಯವನ್ನು ತರಬೇಕು ಎಂದು ಇತ್ತು. ಈಗ ಅದನ್ನು ನೀವು 15 ತಿಂಗಳು ಮಾಡಿದ್ದೀರಿ. ಇಲ್ಲಿ ಎಂ.ಎಲ್.ಎ ಮತ್ತು ಎಂ.ಎಲ್.ಸಿ ಗಳಿಗೆ ಇರುವಷ್ಟು understanding ಹಳ್ಳಿಗಳಲ್ಲಿ ಇರುವುದಿಲ್ಲ. ಹಳ್ಳಿಗಳಲ್ಲಿ ತುಂಬಾ ಜಿದ್ದಾಜಿದ್ದಿ ನಡೆಯುತ್ತದೆ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿಯೂ 400– 500 ಮತಗಳಿಗಾಗಿ 50 ರಿಂದ 60 ಲಕ್ಷ ರೂ.ಗಳನ್ನು ಖರ್ಚು ಮಾಡುತ್ತಾರೆ. ಏಕೆಂದರೆ ಈ ಓಣಿಯಲ್ಲಿ ನಾನು ಗೆಲ್ಲಬೇಕು ಎನ್ನುವ prestige ಇರುತ್ತದೆ. ತಾವು ಈ ವಿಧೇಯಕವನ್ನು ತಂದರೆ ಅಭಿವೃದ್ಧಿ ಕೆಲಸಗಳೇ ಕುಂಠಿತವಾಗುತ್ತವೆ. ಇದನ್ನು ಪುನರ್ ಆಲೋಚನೆ ಮಾಡಬೇಕು. ಈಗ ವಿಧಾನಸಭಾ ಚುನಾವಣೆಯಲ್ಲಿ 5 ವರ್ಷಗಳಿಗೆ ಒಮ್ಮೆ ಮೀಸಲಾತಿಯನ್ನು ಬದಲಾಯಿಸುತ್ತಾ ಹೋದರೆ ಏನು ಗತಿಯಾಗುತ್ತದೆ ಹೇಳಿ? ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಿ, ಈ ವಿಧೇಯಕವನ್ನು ವಾಪಸ್ ತೆಗೆದುಕೊಂಡು ಹಿಂದೆ ಇರುವುದನ್ನು ಮುಂದುವರಿಸಿ. ಇವತ್ತು ಗ್ರಾಮಪಂಚಾಯಿತಿ ಚುನಾವಣೆಗಳು ಪಕ್ಷಾತೀತವಾಗಿ ನಡೆಯುತ್ತಿವೆ ಏಕೆಂದರೆ ಅಲ್ಲಿ ದ್ವೇಷಗಳು ಬರದ ಹಾಗೆ ಮಾಡಿದ್ದಾರೆ. ಆದ್ದರಿಂದ ಮೀಸಲಾತಿಯನ್ನು 10 ವರ್ಷದವರೆಗೆ ಮುಂದುವರಿಸಿ. ಅಧ್ಯಕ್ಷರ, ಉಪಾಧ್ಯಕ್ಷರ ಮೀಸಲಾತಿ ಹಿಂದೆ ಹೇಗೆ ಇತ್ತು ಹಾಗೆ ಮುಂದುವರೆಸಿ. ಇದರ ಬಗ್ಗೆ ಮತ್ತೊಮ್ಮೆ ಆಲೋಚನೆ ಮಾಡಿ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಮಾನ್ಯ ಸಭಾಪತಿಗಳೆ, "ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯಿತಿ ರಾಜ್(ತಿದ್ದುಪಡಿ) ವಿಧೇಯಕ, 2020" ಇದರಲ್ಲಿ ನನಗೆ ಒಂದು ಕ್ಲಾರಿಫಿಕೇಶನ್ ಬೇಕು. ಈಗ 5 ವರ್ಷಗಳಿಂದ ಜಿಲ್ಲಾ ಪಂಚಾಯಿತಿಯಲ್ಲಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಅಧ್ಯಕ್ಷರು ಇದ್ದಾರೆ. ಇವರ resignation ಯಾವಾಗ ಆಗುತ್ತದೆ? ಈ ವಿಧೇಯಕ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದ ಮೇಲೆ ಆಗುತ್ತದೆಯೇ? ಈಗಾಗಲೇ ಈ ವಿಧೇಯಕ ಜಾರಿಯಲ್ಲಿ ಇದ್ದೆಯೇ? ಅಲ್ಲಿಯ ಜಿಲ್ಲಾಧಿಕಾರಿಗಳು ವಿಷಯವನ್ನು deviate ಮಾಡುತ್ತಿದ್ದಾರೆ. ಮಂತ್ರಿಗಳು ಉತ್ತರ ಹೇಳುವಾಗ ಇದರ ಬಗ್ಗೆ ಹೇಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಈಗಾಗಲೆ Ordinance ಆಗಿ ಹೋಗಿದೆ.

**ಶ್ರೀ ಎನ್.ಅಪ್ಪಾಜಿಗೌಡ:–** ಆದರೆ ಜಿಲ್ಲಾಧಿಕಾರಿಗಳು ವಿಷಯವನ್ನು deviate ಮಾಡುತ್ತಿದ್ದಾರೆ. ಇನ್ನೂ ಬಂದಿರುವುದಿಲ್ಲ ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಅದನ್ನು ಕ್ಲಿಯರ್ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ನಮ್ಮ ಸಮಾಜದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಂತರ ವಿಧಾನಸಭೆ ಚುನಾವಣೆಗೆ ನಿಲ್ಲಬೇಕು ಎನ್ನುವವರೆ ಹೆಚ್ಚು ಜನ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಲು ಯಾರು ಆಸಕ್ತರಾಗಿಲ್ಲ. ನರೇಗಾ ಹಣವನ್ನು ಬಳಕೆ ಮಾಡಲು ಗ್ರಾಮ ಪಂಚಾಯಿತಿಗಳಿಗೆ ಯಾವಾಗ ಅಧಿಕಾರ ಬಂತು, ಆಗಿನಿಂದ ಗ್ರಾಮ ಪಂಚಾಯಿತಿಯಲ್ಲಿ ಬಹಳ ಪೈಪೋಟಿ ಪ್ರಾರಂಭವಾಯಿತು. ಈಗ ಮಾನ್ಯ ಈಶ್ವರಪ್ಪನವರು ಮೀಸಲಾತಿಯನ್ನು 5 ವರ್ಷಕ್ಕೆ ಸಿಮೀತ ಮಾಡಿಬಿಟ್ಟಿದ್ದಾರೆ. 10 ವರ್ಷ ಮೀಸಲಾತಿ ಇರುವಾಲೇ ಅವರು ಕೆಲಸ ಮಾಡುತ್ತಿರಲಿಲ್ಲ. ಬರಿ ಲೂಟಿ ಮಾಡುವ ಕೆಲಸವೇ ಆಗುತ್ತಿತ್ತು. ಈಗ 5 ವರ್ಷ ಮಾಡಿದ ಮೇಲೆ, ಇನ್ನು 5 ವರ್ಷವಾದ ಮೇಲೆ ನಾನು ಮತ್ತೆ ಆಯ್ಕೆಯಾಗುವುದೆ ಇಲ್ಲ ಎಂದು ಅಭಿವೃದ್ಧಿ ಕೆಲಸದ ಕಡೆಗೆ ಯಾರು ಗಮನ ಕೊಡುವುದಿಲ್ಲ. ಇದನ್ನು ಮಂತ್ರಿಗಳು ಗಮನಿಸಬೇಕು. ಮಾನ್ಯ ಇಟಗಿಯವರು ಹೇಳಿದ ಹಾಗೆ, ಈಗ ಆ ಪಂಚಾಯಿತಿಗಳಲ್ಲಿ ವರ್ಷಕ್ಕೆ ಒಬ್ಬರನ್ನು ಅಧ್ಯಕ್ಷ, ಉಪಾಧ್ಯಕ್ಷರನ್ನು ತರಲು ಚಿಂತನೆ ಮಾಡುತ್ತಾರೆ. 15 ತಿಂಗಳು ಆಗುತ್ತಿದ ಹಾಗೆಯೇ ಅವಿಶ್ವಾಸವನ್ನು ತರುತ್ತಾರೆ. ಬರಿ ಇಳಿಸುವುದು ಎರಿಸುವುದು ಇದೇ ಕೆಲಸ ಜಿಲ್ಲಾ ಪಂಚಾಯಿತಿಗಳಲ್ಲಿ ನಡೆಯುತ್ತದೆ. ಇದರಿಂದ ಸ್ಥಳೀಯ ಎಂ.ಎಲ್.ಎ ಗಳ, ಜಿಲ್ಲಾ ಉಸ್ತುವಾರಿ ಸಚಿವರಿಗೆ ನಿದ್ರೆ ಇಲ್ಲದ ಹಾಗೆ ಮಾಡಿಬಿಡುತ್ತಾರೆ. ಸರ್, ಆ ಅಧ್ಯಕ್ಷನನ್ನು ಇಳಿಸಬೇಕು, ಪಂಚಾಯಿತಿಯಲ್ಲಿ ಇವರನ್ನು ಎರಿಸಬೇಕು ಎನ್ನುವುದೇ ಅವರ ಕೆಲಸವಾಗುತ್ತದೆ. ಇದು ಅಭಿವೃದ್ಧಿಗೆ ಪೂರಕವಾಗಿಲ್ಲ. ಈ ಎರಡು ವಿಚಾರದಲ್ಲಿ ದಯಮಾಡಿ ದೊಡ್ಡ ಆಲೋಚನೆ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಅಧ್ಯಕ್ಷರು, ಉಪಾಧ್ಯಕ್ಷರನ್ನು ಇಳಿಸುವುದು, ಏರಿಸುವುದು ಇದೇ ರೀತಿ ಹಾವು-ಏಣಿ ಆಟ ಆಡಲು ಮಾಡಿರುವಂತಹ ವಿಧೇಯಕವಾಗಿದೆ ಅಷ್ಟೆ ಇದು. 30 ತಿಂಗಳಿಗೆ ತರುವಂತಹ ಅವಿಶ್ವಾಸ ನಿರ್ಣಯವನ್ನು 15 ತಿಂಗಳಿಗೆ ಮಾಡಿದ್ದಾರೆ. ಇದರಿಂದ ಇನ್ನು 5 ವರ್ಷ ಬರಿ ಅವನನ್ನು ಇಳಿಸುವುದು, ಇವನನ್ನು ಏರಿಸುವುದು ಇದೇ ಹಾವು-ಏಣಿ ಆಟ ನಡೆಯುತ್ತದೆ. ಇನ್ನೊಂದು ವಿಚಾರ ಇದರಲ್ಲಿ 50% reservation ಹಿಂದುಳಿದ ವರ್ಗದವರಿಗೆ, ಶೋಷಿತರಿಗೆ ಸಮಾನವಾದ ಅವಕಾಶವಿದೆ. ಬಾಯಿ ಇಲ್ಲದವರಿಗೆ ಧ್ವನಿ ಕೊಡಬೇಕು ಎನ್ನುವ ಉದ್ದೇಶದಿಂದ ಮೀಸಲಾತಿಯನ್ನು ಕೊಟ್ಟಿರುವುದು. ಅವಿಶ್ವಾಸ ನಿರ್ಣಯಕ್ಕೆ ಬಲಿಯಾಗುವವರು ಶೋಷಿತ ವರ್ಗದವರು. ಎರಡುವರೆ ವರ್ಷಕ್ಕೆ ಕುದುರೆ ವ್ಯಾಪಾರಕ್ಕೆ ಬಲಿ ಆಗುವವರು ಶೋಷಿತ ವರ್ಗದವರು.

**(ಮುಂದು)**

**(920)26-09-2020(05-30)ಬಿಎಸ್‌ಡಿ-ಜಿಆರ್**

**ಶ್ರೀ ಎಸ್. ರವಿ (ಮುಂದು)**

ಕೊನೆಯ ಪಕ್ಷ 5 ವರ್ಷಗಳ ಅಧಿಕಾರ ಇದ್ದರೆ ಕೊನೆಯ ಪಕ್ಷ ಯಾರಾದರೂ ಆಗಿದ್ದರೆ ಅವರನ್ನು ಇಳಿಸುವುದಕ್ಕೆ ಆಗುತ್ತಿರಲಿಲ್ಲ. ಸುಮ್ಮನೆ ಹೇಗೋ adjust ಮಾಡಿಕೊಂಡು ಹೋಗುತ್ತಿದ್ದರು. ಅವರು ಸಹ ಅರಿವು ಮೂಡಿಸಿಕೊಂಡು ಹೋಗುತ್ತಿದ್ದರು. ಈಗ ಎರಡೂವರೆ ವರ್ಷಗಳಲ್ಲಿ ಯಾವ ಕೆಲಸ ಮಾಡುವುದಕ್ಕೆ ಸಾಧ್ಯ? ಪಂಚಾಯಿತಿಯನ್ನು ಅರ್ಥಮಾಡಿಕೊಂಡು, ಕೆಲವು ಉತ್ತಮವಾದ ಕಾರ್ಯಕ್ರಮಗಳನ್ನು ಆ ಭಾಗದ ಜನರಿಗೆ ಕೊಡಲು ಸಾಧ್ಯವೇ? ಒಂದು ವ್ಯವಸ್ಥೆಯನ್ನು ಹಾಳುಗೆಡುವುದಕ್ಕೆ ಆಗಿರುವ ವ್ಯವಸ್ಥೆಯಾಗಿದೆ. ದಯಮಾಡಿ ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕು. ಜೊತೆಗೆ ತಾಲ್ಲೂಕು ಪಂಚಾಯಿತಿಯನ್ನು strengthen ಮಾಡುತ್ತಾರೆಯೇ? ಹಿಂದಿನ ಜೆಡಿ(ಎಸ್) ಅಥವಾ ಕಾಂಗ್ರೆಸ್ ಸರ್ಕಾರ ಇರಬಹುದು. ತಾಲ್ಲೂಕು ಪಂಚಾಯಿತಿ ಎಂದು ತ್ರಿಪಕ್ಷೀಯವಾಗಿ ಇದೆ. ಅದು ಬೇಕು ಎಂದರೆ strenthen ಮಾಡಿ. ಆದರೆ ನಾಮಕಾವಸ್ಥೆಗೆ ತಾಲ್ಲೂಕು ಪಂಚಾಯಿತಿಯನ್ನು ಇಡಬಾರದು. ಇದಲ್ಲದೇ ಜಿಲ್ಲಾ ಪಂಚಾಯಿತಿಗೂ powers ಇಲ್ಲ. ಇವರು ಹೇಳಿದಂತೆ ನರೇಗಾ ಬದಲಾಗಿ ಗ್ರಾಮ ಪಂಚಾಯಿತಿಗೆ ಒಂದಷ್ಟು powers ಇದೆ. ಅದರಲ್ಲಿ ಸ್ವಲ್ಪ ಜನರಿಗೆ ಸಹಾಯ ಮಾಡಬಹುದು. ದಯಮಾಡಿ ತಾಲ್ಲೂಕು ಪಂಚಾಯಿತಿ ಬಗ್ಗೆ ಏನಾದರೂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ. ಚುನಾವಣೆ ನಡೆಯುವುದರ ಬಗ್ಗೆ ಬಹಷ್ಟು ಚರ್ಚೆ ನಡೆಯುತ್ತಿದ್ದು, ಈ ಸರ್ಕಾರದಲ್ಲಿ ಚುನಾವಣೆಯನ್ನು ಮಾಡುತ್ತಾರೋ ಅಥವಾ ಇಲ್ಲವೋ? ಕೋರ್ಟ್ ಚಾಟಿ ಏಟು ಏನಾದರೂ ಹೊಡೆದರೆ ಚುನಾವಣೆ ಮಾಡುತ್ತಾರೋ ಎಂಬುದು ನಮಗೆ ಗೊತ್ತಿಲ್ಲ. ಚುನಾವಣೆ ಮಾಡುವುದಕ್ಕೆ ಮುಂಚೆ ward delimitation ಮಾಡಿ ಮಾಡಬೇಕು. ಇವತ್ತೇ ಆದೇಶ ಕೊಡಿ. 400 ಮತದಾರರು ಇರುವ ಕಡೆ 3 ಜನ members represent ಮಾಡುತ್ತಾರೆ, ಇನ್ನೊಂದು ಕಡೆ 800 ಜನ ಮತದಾರರಿದ್ದಾರೆ, ನನಗೆ ಸಮಯ ನೀಡಿದರೆ ಇದರ ಬಗ್ಗೆ ಒಂದು ಗಂಟೆ ಮಾತನಾಡಿ, 20 ಉದಾಹರಣೆಗಳನ್ನು ಕೊಡುತ್ತೇನೆ. ಈ ಅಸಮತೋಲವನ್ನು ಸರಿಪಡಿಸಲು ಮೊದಲು ward delimitation ಮಾಡಬೇಕು, 400 ಅಥವಾ 500 ಜನ ಇರಬಹುದು, population ಏನು ಬರುತ್ತದೋ, ಅದಕ್ಕೆ ಇಷ್ಟು ಜನ members ಎಂದು ನಿಗದಿ ಮಾಡಿ ಮಾಡಬೇಕು. ಇಲ್ಲದಿದರೆ ಚುನಾವಣೆಯನ್ನು ಮಾಡಬಾರದು, time ತೆಗೆದುಕೊಂಡು ಎಳೆಯುವುದಕ್ಕೆ ಹೋಗಬಾರದು. ಇದಕ್ಕೆ ದಿನಗಳು ಬೇಕಾಗಿಲ್ಲ. ಇದರ ಬಗ್ಗೆ D.C., ಅಥವಾ C.E.O., ಗೆ entrust ಮಾಡಿದರೆ 3 ದಿನದಲ್ಲಿ ಮಾಡುತ್ತಾರೆ. ಹೇಗಿದ್ದರೂ data ಲಭ್ಯವಿರುವುದರಿಂದ ಕೂಡಲೇ ಮಾಡುತ್ತಾರೆ. ದಯಮಾಡಿ ಈ ಕೆಲಸ ಮಾಡಬೇಕು. Meeting ಕರೆಯುವ ಬಗ್ಗೆ ತಿಳಿಸಿದ್ದು ಆ ಸಂದರ್ಭದಲ್ಲಿ ನಮಗೆ ಒಂದಷ್ಟು ಮುಖ್ಯವಾದ ಅವಕಾಶಗಳನ್ನು ಕೊಡಬಹುದು. ಇದನ್ನು ಬಿಲ್‌ಗೆ ಮುಂಚೆ ತಂದಿದ್ದರೆ ಅವರಿಗೂ ಹೆಸರು ಬರುತ್ತಿತ್ತು, ನಾವು ಒಂದಷ್ಟು ಸಲಹೆ ಕೊಟ್ಟಿದ್ದೇನೆ ಎನ್ನುವ ಸಾರ್ಥಕತೆ ಬರುತ್ತಿತ್ತು. ರಾಜ್ಯಕ್ಕೆ ಒಂದು ಉತ್ತಮವಾದ ಬಿಲ್ ಆದರೂ ಬರುತ್ತಿತ್ತು. ಇದು ಏನೇನೂ ಪ್ರಯೋಜನವಿಲ್ಲದೇ ಆಟ ಆಡುವುದಕ್ಕೆ ಒಂದು ಬಿಲ್ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ನಾಯಕತ್ವದಲ್ಲಿ ಇಂತಹ ಬಿಲ್ ತಂದಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2020 ಅನ್ನು ತಂದಿದ್ದು, 1987ರಲ್ಲಿ ಪ್ರಥಮ ಬಾರಿಗೆ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆ ಜಾರಿಗೆ ಬಂದಾಗ ನಾನೂ ಕೂಡ ಜಿಲ್ಲಾ ಪರಿಷತ್ ಸದಸ್ಯನಾಗಿ ರಾಜಕಾರಣ ಪ್ರಾರಂಭ ಮಾಡಿದ್ದೇನೆ. ಆವತ್ತು ಬಾಗಲಕೋಟೆ ಮತ್ತು ಬಿಜಾಪುರ ಎರಡೂ ಸೇರಿ ಅಖಂಡ ಬಿಜಾಪುರ ಜಿಲ್ಲೆಯಾಗಿತ್ತು. ಅಲ್ಲಿಯೂ ಪ್ರತಿಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೆನು. ಅಂದಿನಿಂದ ಈ ಮಟ್ಟದವರೆಗೂ ಮಂತ್ರಿಯಾಗಿ, ಸಭಾನಾಯಕನಾಗಿ, ವಿರೋಧ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷದ ನಾಯಕನಾಗುವ ಅವಕಾಶ ದೊರೆತಿದೆ ಎಂದಿದೆ ಈ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಭಾಗಿಯಾಗಿ ಜಿಲ್ಲಾ ಪರಿಷತ್ತಿನಲ್ಲಿ ನಾನು ಸದಸ್ಯನಾದಾಗ ನನಗೆ ನಾಯಕತ್ವದ ಗುಣಗಳನ್ನು ಕಲಿಸಿಕೊಟ್ಟಿದೆ. ಈಗ 10 ವರ್ಷದ ಅವಧಿಯವರೆಗೆ ಒಂದು category ಇದುದ್ದನ್ನು 5 ವರ್ಷಕ್ಕೆ ಮಾಡಿದ್ದಾರೆ. 5 ವರ್ಷಗಳ ಅವಧಿಯಲ್ಲಿ ಯಾರೋ ಒಬ್ಬರು ಅಧ್ಯಕ್ಷರು ಇದ್ದರು ಅಥವಾ ಯಾರೋ ಒಬ್ಬರು ಉಪಾಧ್ಯಕ್ಷರು ಇದ್ದರು ಎಂದು ಅವರ ಹೆಸರು ಸಹ ಜ್ಞಾಪಕದಲ್ಲಿ ಉಳಿಯುವುದಿಲ್ಲ. ಈಗ ನನ್ನ ಒಂದು ಕ್ಷೇತ್ರದಲ್ಲಿ ಅದು ಜಿಲ್ಲಾ ಅಥವಾ ತಾಲ್ಲೂಕು ಪಂಚಾಯಿತಿ ಕ್ಷೇತ್ರ ಇರಬಹುದು, ನಾನು ಮುಂದುವರೆಯುವ ರೀತಿ ನನ್ನ category ಇದ್ದರೆ ಜನರ ವಿಶ್ವಾಸ ಗಳಿಸುವ ಸಲುವಾಗಿ ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ಜನರ ನೋವುಗಳನ್ನು ಹಾಗೂ ಅವರ ಕಷ್ಟ-ಸುಖ, ದುಃಖ-ದುಮ್ಮಾನಗಳಲ್ಲಿ ಬಾಗಿಯಾಗಿ ಮತ್ತೊಮ್ಮೆ ಆರಿಸಿ ಬರುವಂತಹ ವಿಚಾರ ಬರುವುದರಿಂದ ಆ ಕ್ಷೇತ್ರದ ಅಭಿವೃದ್ಧಿಯಾಗಿ ಜನರ ಯೋಗಕ್ಷೇಮವಾಗುತ್ತದೆ. ಮುಂದಿನ ಬಾರಿ ನನ್ನ category ಬರದಿದ್ದರೆ " ರಾಶಿ ಮಾಡಿ ತೂರಿಕೊಂಡು ಹೋಗುವಂತೆ" ಮಾಡಿಕೊಂಡು ಹೋಗುವ ಸಾಧ್ಯತೆ ಇದೆ. ಏಕೆಂದರೆ ಅವರಿಗೆ commitment Pಡಿಮೆಯಾಗುತ್ತದೆ. ಮುಂದಿನ ಬಾರಿ ಜನರ ಎದುರು ಹೋಗಬೇಕು ಎಂಬ ಪರಿಕಲ್ಪನೆ ಇದ್ದರೆ .......... ಈಗ ಶಾಸಕರು nourish ಮಾಡೇ ಮಾಡುತ್ತಾರೆ, ಆ ಕ್ಷೇತ್ರದ ಜನ ದುಃಖ-ದುಮ್ಮಾನಗಳಿಗೆ ಭಾಗಿಯಾಗುತ್ತಾರೆ, ಸಮಸ್ಯೆಗಳನ್ನು ಪರಿಹರಿಸುವ ಮತ್ತು ಅಭಿವೃದ್ಧಿಪರ ಚಿಂತನೆಗಳನ್ನು ಮಾಡುತ್ತಾರೆ. ಆದರೆ ಆ category ಬರಲಿಲ್ಲವೆಂದಾಗ ಯಾವ category ಬರುತ್ತದೋ, ನನಗೇನಾಗಬೇಕು, ಇಷ್ಟು ಹಣ ವ್ಯಯ ಮಾಡಿದ್ದು, ಏನೋ ಕೆಲಸ ಮಾಡಿಕೊಂಡು ಹೋಗೋಣ ಎನ್ನುವುದರಿಂದ ನಾಯಕತ್ವ ಬೆಳೆಯುವುದಿಲ್ಲ. ಆ ಕ್ಷೇತ್ರವೂ ಅಭಿವೃದ್ಧಿಯಾಗುವುದಿಲ್ಲ. ಒಟ್ಟಾರೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸಿನಂತೆ " ಗ್ರಾಮಗಳ ಅಭಿವೃದ್ಧಿ ದೇಶದ ಅಭಿವೃದ್ಧಿ" ಎನ್ನುವ ಚಿಂತನೆಗೂ ಧಕ್ಕೆಯಾಗುತ್ತದೆ ಎಂದು ನನ್ನ ಅಭಿಪ್ರಾಯ. ಮಾನ್ಯ ಸಚಿವರು ಬಹಳಷ್ಟು ಅನುಭವಿಗಳಾಗಿದ್ದು, ಧೀರ್ಘಕಾಲದಿಂದ ಸಾರ್ವಜನಿಕ ಬದುಕಿನಲ್ಲಿದ್ದಾರೆ, ಗ್ರಾಮದ ಕಷ್ಟ-ಸುಖ, ನೋವು-ನಲಿವು ಅವರಿಗೂ ಅರ್ಥವಾಗಿದೆ. Category change ಮಾಡುವ ಅವಶ್ಯಕತೆ ಏನಿತ್ತು? 10 ವರ್ಷಗಳವರೆಗೆ ಇತ್ತು. ಆ category ಮುಗಿದ ಮೇಲೆ ಮುಂದಿನ 5 ವರ್ಷ ನಾನೇ ಬರಬೇಕು, ಜನರ ಅವಕೃಪೆಗೆ ಒಳಗಾಗಬಾರದು, ಅಭಿವೃದ್ಧಿ ಕೆಲಸ ಮಾಡದಿದ್ದರೆ ಮನೆಗೆ ಕಳುಹಿಸುತ್ತಾರೆ ಎನ್ನುವ ಭಾವನೆ ಆ ವ್ಯಕ್ತಿಗೆ ಇರುತ್ತದೆ. 10 ವರ್ಷಗಳ ಕಾಲ ಚೆನ್ನಾಗಿ ಕೆಲಸ ಮಾಡುವ ಅವಕಾಶ ಇತ್ತು. ಇವತ್ತು ಚುನಾವಣೆ ವ್ಯವಸ್ಥೆ ಕೆಟ್ಟುಹೋಗಿದೆ. ಹಣ ಇದ್ದವರು ಚುನಾವಣೆಗೆ ನಿಲ್ಲುವ ದುಸ್ಥಿತಿ ಬಂದಿದೆ. ಹಣ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲದವರನ್ನು ಯಾರೂ ಕೇಳಲಾರದ ಸ್ಥಿತಿ ಬಂದಿದೆ. ಖರ್ಚು ಮಾಡುವುದು ಇದೆ. ಇದೊಂದು ರೀತಿ investment. It has become a business. ಈ ಪವಿತ್ರವಾದ ಸದನದಲ್ಲಿ ಆ ಮಾತನ್ನು ಹೇಳಬಾರದು, ನನ್ನ ಬಾಯಿಂದಲೂ ಬರಬಾರದು. ಕೆಲವು ಜನ ಕೇಳುತ್ತಾರೆ. ಮಾನ್ಯ ಸಭಾಪತಿಯವರೇ ಒಂದು ಕೋಟಿ ರೂಪಾಯಿ ಖರ್ಚು ಮಾಡಿ ಜಿಲ್ಲಾ ಪಂಚಾಯಿತಿ ಸದಸ್ಯನಾದರೂ ಆಗಿದ್ದರೂ ಏನೂ ಉಪಯೋಗ ಇಲ್ಲ ಎಂದು ಹೇಳುತ್ತಾರೆ. ಅಂದರೆ ಇದರ ಅರ್ಥ ಏನು? ಜನ ಸೇವೆ ಮಾಡುವುದಕ್ಕೆ ಸಾರ್ವಜನಿಕ ಬದುಕಿನಲ್ಲಿ ಇರಬೇಕೋ ಅಥವಾ ವ್ಯಾಪಾರ-ವಹಿವಾಟು ಮಾಡಲು ಸಾರ್ವಜನಿಕ ಬದುಕಿನಲ್ಲಿ ಇರಬೇಕೋ? ನಾನು ತಮ್ಮ ಮೂಲಕ ಹೇಳುವುದೇನೆಂದರೆ ಇದು ಗ್ರಾಮಗಳ ಅಭಿವೃದ್ಧಿಗೂ ಮಾರಕವಾಗುತ್ತದೆ ಎಂದು ನನ್ನ ಅಭಿಪ್ರಾಯ. ಆ ವ್ಯಕ್ತಿಯ commitment ಮತ್ತು accountability ಕಡಿಮೆಯಾಗುತ್ತದೆ. ಇದರಿಂದ ಅಭಿವೃದ್ಧಿಯಲ್ಲಿ ಹಿಂದೆಳೆದಂತಾಗುತ್ತದೆ. ಗ್ರಾಮಗಳ ಅಭಿವೃದ್ಧಿ ಆಗಬೇಕು ಎಂದು ಇಲಾಖೆಯಿಂದ ಕೆಲಸ ಮಾಡುತ್ತಿದ್ದು, ಇದಕ್ಕೆ ಹಿನ್ನಡೆಯಾಗುತ್ತದೆ ಎನ್ನುವ ಭಾವನೆ ಇದೆ. ಈಗ 30 ತಿಂಗಳು, 15 ತಿಂಗಳು ಎಂದು ಅವಿಶ್ವಾಸ ಮಾಡಿದ್ದಾರೆ, 15 ತಿಂಗಳು ಇದ್ದರೆ 5 ತಿಂಗಳಿಗೆ ಒಬ್ಬೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅವರು ಆ ರೀತಿ ಮಾಡದಿದ್ದರೆ ಆ ಕ್ಷೇತ್ರದ ಶಾಸಕರಿಗೆ, ಆ ಪಕ್ಷಕ್ಕೆ ಮಾರಕವಾಗುವಂತಹ ಚಿಭಿಣುತುಣಥಿ ನಡೆಯುತ್ತದೆ. ಅವನು ಒಂದು ದಿವಸವೂ ಅಲ್ಲಿ ಕುಳಿತುಕೊಳ್ಳುವುದಿಲ್ಲ. ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಎಂದು Board ನಲ್ಲಿ ಬಂದರೆ ಸಾಕು ಎನ್ನುವಂತಹ ಭಾವನೆ ಇದೆ. ಇದೆಲ್ಲವೂ ಅವರಿಗೂ ಗೊತ್ತಿದೆ. ಕೆಲವೊಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ 10 ವರ್ಷದ ಅವಧಿ ಇದ್ದದ್ದು ಬಹಳ ಒಳ್ಳೆಯದಿತ್ತು ಎಂದು ನನ್ನ ಅಭಿಪ್ರಾಯ. ಈ ಮಾತನ್ನು ನಾನು ರಾಜಕೀಯವಾಗಿ ಹೇಳುವುದಿಲ್ಲ. ಅವರಿಗೆ commitment, accountability ಇರುತ್ತದೆ, ಅಭಿವೃದ್ಧಿ ಬಗ್ಗೆ ಚಿಂತನೆ ಇರುತ್ತದೆ. ಜನರ ಪ್ರೀತಿ ವಿಶ್ವಾಸ ಕಳೆದುಕೊಳ್ಳಬಾರದು ಎಂಬ ಭಾವನೆ ಬರುವುದರಿಂದ ಅದು ಚೆನ್ನಾಗಿ ಇತ್ತು. ಅದಕ್ಕೆ ಏಕೆ ಕೈ ಹಾಕಿದರೋ, ನನಗೆ ಅರ್ಥವಾಗುತ್ತಿಲ್ಲ. ಅವರ intention of the legislation ಏನಿದೆ ಎಂದು convince ಮಾಡಿದರೆ ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು Section ಮೇಲೆ ಮಾತನಾಡುತ್ತೇನೆ. Section 123 of the Karnataka Gram Swaraj and

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Panchayath Act ಅನ್ನು amend ಮಾಡಿದ್ದಾರೆ. **'10 ವರ್ಷಗಳು'** ಎಂಬುದನ್ನು **'5 ವರ್ಷಗಳು'** ಎಂದು ಮಾಡಿದ್ದಾರೆ. ನಾನು constitutional provision – 243(C) of the Constitution of India - Composition of Panchayats ಅನ್ನು ಓದುತ್ತೇನೆ. ನಾನು direct ಆಗಿ 243ಅ (2) ಗೆ ಬರುತ್ತೇನೆ. It reads thus:

> "All the seats in a Panchayat shall be filled by persons chosen by direct election from territorial constituencies in the Panchayat area and, for this purpose, each Panchayat area shall be divided into territorial constituencies in such manner that the ratio between the population of each constituency and the number of seats allotted to it shall, so far as practicable, be the same throughout the Panchayat area."

What is population? 10 ವರ್ಷಗಳಿಗೊಮ್ಮೆ census ಆಗಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿಃ–** ಮಾನ್ಯ ಸಭಾಪತಿಯವರೇ, ನಾನು ಜಿಲ್ಲಾ ಪರಿಷತ್ member ಆಗಿದ್ದೆ, ಅವರು ಕೂಡ ಜಿಲ್ಲಾ ಪರಿಷತ್ member ಆಗಿದ್ದರು. Local bodies ನಲ್ಲಿ ನಾವೂ ಇದ್ದಿವಿ. ಪ್ರಶ್ನೆ ಏನೆಂದರೆ, ಕಾಂಗ್ರೆಸ್ ಸರ್ಕಾರ ಇದ್ದಾಗ 10 ವರ್ಷ ಒಂದು ಕ್ಷೇತ್ರ ಮೀಸಲು ಇರುವುದನ್ನು ಹಾಗೆ ಇಡಿ ಎಂದು ಮಾಡಿದ್ದರೂ ಅದಕ್ಕಿಂತ ಮೊದಲು 5 ವರ್ಷಗಳೇ ಇತ್ತು. We have seen lot of difficulties. ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಹಾಸನ ಜಿಲ್ಲಾ ಪರಿಷತ್ ಅಧ್ಯಕ್ಷರು ಕಾರ್ಯ ಮಾಡಲು ಆಗಲಿಲ್ಲ. ಆ ರೀತಿಯ examples ನಮ್ಮ ಮುಂದೆ ಇವೆ. ಅದಕ್ಕೆ ಏನು ಮಾಡುವುದು ಹೇಳಿ? For the entire term five years, she could not function. ಕೆಲವು ಕಡೆ ನಾವು reservation ಇಟ್ಟಿದ್ದೇವೆ. ಹೊಸದುರ್ಗ ತಾಲ್ಲೂಕಿನಲ್ಲಿ for the terms of five years, 3 ಸಾರಿ ಅವಿಶ್ವಾಸ ತೆಗೆದುಕೊಂಡು ಒಂದೇ candidate ನಿಂತುಕೊ, ಒಂದೇ candidate ಗೆಲ್ಲು, ಅದೊಂದೇ ಉದ್ಯೋಗ ಆಗುವ ಬದಲು ಎಲ್ಲಾ ಒಂದೆರಡು ಕಡೆ, ಎರಡೆರಡು ವರ್ಷಗಳಿಗಾದರೂ category change ಆಗಲಿ ಎಂದು ಮಾಡಿರುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಮಾನ್ಯ ಸದಸ್ಯರು ವ್ಯಕ್ತಿ ಯೋಚನೆ ಮಾಡುತ್ತಾರೋ, ವ್ಯವಸ್ಥೆ ಯೋಚನೆ

ಮಾಡುತ್ತಾರೋ ಗೊತ್ತಿಲ್ಲ. Category ಒಂದು ward ಗೆ reserve ಮಾಡಿದರೂ ಅವನೇ ಏಕೆ ನಿಲ್ಲಬೇಕು? ಬೇರೆಯವರು ನಿಲ್ಲಲಿ. ಅವನು ನಿಲ್ಲುವುದಕ್ಕೆ ಮತ್ತು ಪುಷ್ಟಿಕೊಡುವುದಕ್ಕೆ ನಾವು ಏಕೆ ಹೋಗೋಣ?

**(ಮುಂದು)**

**(921) 26.9.2020 5.40 ಪಿಕೆ: ಎಂಡಿ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):-**

ಆತನೇ ನಿಂತುಕೊಳ್ಳಲಿ, ಆತ ಮುಂದುವರೆಯಲಿ, ಆತ ಬೆಳೆಯಲಿ ಎನ್ನುವ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಆಗುತ್ತದೆಯೇ? ಮಾನ್ಯ ಸಭಾಪತಿಯವರೇ, I still live in a village of hundred houses. ಕ್ಯಾಟಗರಿ ಬಂದರೆ, ಹೆಣ್ಣು ಮಕ್ಕಳ ಕ್ಷೇತ್ರಕ್ಕೆ ಬಂದರೆ, ಜನ ಏನೋ ಒಂದು ತರಹ, ಏನ್ರಿ ನಾವೇ reservation ಗೆ ಸಿಕ್ಕಿದ್ದೇವೆಯೇ ಎನ್ನುವ ಭಾವನೆ ಇರುತ್ತದೆ. ಪುರಸಭೆಯಲ್ಲಿ ಮಾಡಿದ ಹಾಗೆಯೇ ಪ್ರತಿ 5 ವರ್ಷಕ್ಕೊಮ್ಮೆ rotation ಮಾಡಬೇಕು ಎನ್ನುವುದು ಬಿಟ್ಟರೆ ಇನ್ನೇನಿಲ್ಲ. ಒಂದು ಸಲ ನಿಂತ ವ್ಯಕ್ತಿಗಳು ಮತ್ತೆ ಅದೇ ಕ್ಷೇತ್ರಕ್ಕೆ ಹೋಗಿ ಜಿಲ್ಲಾ ಪರಿಷತ್ತಿನ ಚುನಾವಣೆಗೆ ನಿಂತು ಗೆಲ್ಲುವವರಿದ್ದಾರೆಯೇ? ಈಗ ನಾವು ಆತನ ಮುಖ ಉಳಿಸುವಂತಹ ಕೆಲಸ ಮಾಡುತ್ತೇವೆ. ಒಂದು ವೇಳೆ ವ್ಯಕ್ತಿಯೊಬ್ಬ ಚುನಾವಣೆಗೆ ನಿಂತಿದ್ದರೆ ಗೆಲ್ಲುತ್ತಿದ್ದನೇನೋ ಎನ್ನುವಂತಹ ಗೌರವ ಉಳಿದ ಹಾಗೆ ಆಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದಕ್ಕೆ ನನ್ನ ಸಹಮತ ಇದೆ. ಆದರೆ, ಕಾನೂನಿನ ಪ್ರಕಾರ ಮುಂದಿನ ಸಲ ನನಗೆ ನಿಲ್ಲುವುದಕ್ಕೆ ಅವಕಾಶವೇ ಇಲ್ಲಾ ಎಂದು ಯೋಚನೆ ಮಾಡಿದಾಗ ಆತನ ಆಸಕ್ತಿ ಯಾವ ಕಡೆ ಇರಬಹುದು ಎಂಬುದನ್ನು ತಿಳಿದುಕೊಳ್ಳಬೇಕು. ಈಗಾಗಲೇ ಮಾನ್ಯ ಸಚಿವರು ಏನೇನು ನಡೆಯುತ್ತಿದೆ ಎನ್ನುವುದರ ಬಗ್ಗೆ ಹೇಳಿದರು. ಕೋವಿಡ್‌ನ ಈ ಸಂದರ್ಭದಲ್ಲಿ ಪಂಚಾಯಿತಿ ಚುನಾವಣೆಗೆ ನಿಲ್ಲುವವರು canvass ಮುಗಿಸಿಕೊಂಡು, ಒಬ್ಬ ಅಥ್ಲೆಟಿಕ್ ಓಡಲು ಶಿಳ್ಳೆ ಹಾಕುವುದನ್ನೇ ಕಾಯುವಂತೆ ಚುನಾವಣಾ notification ಗೆ ಕಾಯುತ್ತಿದ್ದಾರೆ. ವಾತಾವರಣ ಬಹಳ ಕೆಟ್ಟು ಹೋಗಿದೆ. 10 ವರ್ಷ ಅವಧಿ ಇರುವುದನ್ನು 5 ವರ್ಷಕ್ಕೆ ಇಳಿಸಿದರೆ ಪರಿಸ್ಥಿತಿ ಇನ್ನೂ ಕೆಟ್ಟು ಹೋಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಇದರಿಂದ ಒಳ್ಳೆಯದೇ ಆಗುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಇದೇ ವ್ಯವಸ್ಥೆ ಖಾಯಂ ಇರುವುದಿಲ್ಲ. ಮುಂದಿನ ಸಲ ಬರುವ ಸರ್ಕಾರ ಈ ನಿಯಮವನ್ನು ಮತ್ತೆ ಬದಲಾವಣೆ ಮಾಡುತ್ತದೆ. ಇದರಿಂದ ಗ್ರಾಮಗಳಲ್ಲಿ ಯಾವುದೇ ಅಭಿವೃದ್ಧಿ ಆಗುವುದಿಲ್ಲ. ಮಾನ್ಯ ಸಚಿವರೇ ನಮ್ಮ ಜನರ ಮನಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಎಲ್ಲಾ ಕಡೆ ಇವತ್ತು ಎಂಥೆಂಥವರೋ ಆರಿಸಿ ಬರುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಅಪ್ಪಾಜಿಗೌಡರೇ, ಈ ವಿಧೇಯಕ ಬಂದು ಅರ್ಧಗಂಟೆಯಾಗಿದೆ ಎಂದು ಹೇಳಿದಿರಿ. ಆದರೆ 24.3.2020ರಲ್ಲಿ ವಿಧಾನಸಭೆಯಲ್ಲಿ ಪಾಸ್ ಆಗಿ ಅದೇ ದಿವಸ ನಮ್ಮಲ್ಲಿ ಬಂತು. ಆ ದಿವಸ ವಿಧೇಯಕವನ್ನು ಪಾಸ್ ಮಾಡಿಲ್ಲ. ಆದ್ದರಿಂದ ಪುನಃ ಇದನ್ನು ಸಬ್‌ಮಿಟ್ ಮಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಸಾಮಾಜಿಕ ನ್ಯಾಯದ ಬಗ್ಗೆ ಸಾಕಷ್ಟು ಮಾತನಾಡುತ್ತೇವೆ. ಇವತ್ತಲ್ಲ, ರಾಜಕಾರಣಕ್ಕೆ ಬಂದಾಗಿನಿಂದ ಸಾಯುವ ತನಕ, ಸಾಮಾಜಿಕ ನ್ಯಾಯ ಇರಬೇಕು, ಎಲ್ಲಾ ವರ್ಗದವರಿಗೂ ಅವಕಾಶ ಸಿಗಬೇಕು ಎನ್ನುವುದು ಕೇವಲ ಭಾಷಣದಲ್ಲೇ ಉಳಿದಿದೆ. ಎಷ್ಟು ಕ್ಯಾಟಗರಿಗಳಿವೆ? ಎಸ್‌ಸಿ, ಎಸ್‌ಸಿ ಮಹಿಳೆ, ಎಸ್‌ಟಿ, ಎಸ್‌ಟಿ ಮಹಿಳೆ, ಓಬಿಸಿ–ಎ, ಓಬಿಸಿ–ಎ ಮಹಿಳೆ, ಓಬಿಸಿ–ಬಿ, ಓಬಿಸಿ–ಬಿ ಮಹಿಳೆ, ಸಾಮಾನ್ಯ, ಸಾಮಾನ್ಯ ಮಹಿಳೆ, ಹೀಗೆ ಒಟ್ಟು 10 ವಿಭಾಗಗಳಿವೆ. ಯಾರೋ ಒಬ್ಬ ದಲಿತ, ಒಬ್ಬ ಬಡವ, ಒಬ್ಬ ಹಿಂದುಳಿದ ಮಹಿಳೆ ಇವರುಗಳು 10 ವರ್ಷದ ನಂತರ ಮತ್ತೆ ಅವರ ಸ್ಥಾನಕ್ಕೆ ಬರಬೇಕಾದರೆ ಕನಿಷ್ಠ 70 ವರ್ಷ ಬೇಕಾಗುತ್ತದೆ. ಮೊನ್ನೆ ನಿಮ್ಮ ಸರ್ಕಾರ ಬದಲಾವಣೆ ಮಾಡಿರುವುದು ಬಿಟ್ಟರೆ ಅದಕ್ಕೆ ಹಿಂದೆಲ್ಲಾ 5 ವರ್ಷವೇ ಇತ್ತು. ಇಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎನ್ನುವ ಪ್ರಶ್ನೆ ಬರುವುದಿಲ್ಲ. ಈಗಲೂ ಬರುವುದಿಲ್ಲ. ಸಾಮಾಜಿಕ ನ್ಯಾಯ ಸಿಗಬೇಕು, ಎಲ್ಲಾ ವರ್ಗದವರಿಗೂ ಒಂದು ಅವಕಾಶ ಕೊಡಬೇಕು ಎಂಬುದು ಬಿಟ್ಟರೆ ಬೇರೇನು ಉದ್ದೇಶವಿಲ್ಲ. ಮತ್ತೆ, ಯುವಕರಿಗೆ ಸ್ಪರ್ಧೆ ಮಾಡುವ ಆಸಕ್ತಿ ಇರುತ್ತದೆ. ಇದನ್ನು ಸಂವಿಧಾನಬದ್ಧವಾಗಿಯೇ ಮಾಡಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಇಲ್ಲಿ ಕ್ಷೇತ್ರಗಳು ಬದಲಾವಣೆ ಆಗುತ್ತಿರುತ್ತವೆ. ಸಾಮಾಜಿಕ ನ್ಯಾಯ ಕೊಡಲು ಎಷ್ಟು ಎಸ್.ಸಿ., ಗಳಿಗೆ ಅವಕಾಶ ಕೊಡಬೇಕು, ಎಷ್ಟು ಎಸ್.ಟಿ.,ಗಳಿಗೆ ಅವಕಾಶ ಕೊಡಬೇಕು ಅಥವಾ ಎಷ್ಟು ಓಬಿಸಿ ಅವರಿಗೆ ಕೊಡಬೇಕು ಅಥವಾ ಮಹಿಳೆಯರಿಗೆ ಕೊಡಬೇಕೋ ಆ ಸಂಖ್ಯೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚು-ಕಡಿಮೆ ಆಗುವುದಿಲ್ಲ. ಈ ವರ್ಷ ಈ ಕ್ಷೇತ್ರದಲ್ಲಿರುವಂಥದ್ದು ಮುಂದಿನ ವರ್ಷದಲ್ಲಿ ಇರುವುದಿಲ್ಲ. ಮಾನ್ಯ ಸಭಾಪತಿಯವರೇ, ನಾವು ಇವತ್ತಿಗೂ ಕೂಡ ಮಾನ್ಯ ನಜೀರ್ ಸಾಬ್‌ರವರನ್ನು ನೀರ್‌ಸಾಬ್ ಎಂದು ನೆನೆಸಿಕೊಳ್ಳುತ್ತೇವೆ. ಮಾನ್ಯ ರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಅಧಿಕಾರ ವಿಕೇಂದ್ರೀಕರಣ ಮಾಡಿದಾಗ ಪಂಚಾಯಿತಿಗಳು ಬಹಳ ಶಕ್ತಿಯುತವಾಗಿತ್ತು. ಆದರೆ ನಂತರ ನಾವೆಲ್ಲಾ ಪಕ್ಷದವರು, ಒಬ್ಬರು ಕಾಲು ತೆಗೆದರು, ಒಬ್ಬರು ಕೈ ತೆಗೆದರು, ಇನ್ನೊಬ್ಬರು ರುಂಡವನ್ನೇ ತೆಗೆದುಬಿಟ್ಟರು. ಈಗ ಬಹುತೇಕ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಎನ್ನುವುದು ಉಳಿದೇ ಇಲ್ಲ. ಆದರೆ ನಾವು ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತೇವೆ. 900 ವರ್ಷಗಳ ಹಿಂದೆ ಬಸವಾದಿ ಶರಣರು, ವಿಶ್ವಗುರು ಬಸವಣ್ಣನವರು ಸಾಮಾಜಿಕ ನ್ಯಾಯದ ಬಗ್ಗೆ ಪ್ರತಿಪಾದನೆ ಮಾಡಿದ್ದಾರೆ, ನಾವೂ ಕೂಡ ಮಾಡುತ್ತಿದ್ದೇವೆ. ನೀವು ಎಷ್ಟರಮಟ್ಟಿಗೆ ಮಾಡಿದ್ದೀರಿ ಎನ್ನುವುದು ನಿಮಗೆ ಗೊತ್ತಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರೂ ಗ್ರಾಮಗಳಿಂದ ಬಂದಿದ್ದಾರೆ. ಗ್ರಾಮ ಪಂಚಾಯತಿಗಳ ಪರಿಸ್ಥಿತಿ ಏನು ಎನ್ನುವುದನ್ನು ಎಲ್ಲರೂ ನೋಡಿರುತ್ತಾರೆ. 3 ತಿಂಗಳಿಗೆ ಜನರನ್ನು ಟೂರ್‌ಗೆ ಕರೆದುಕೊಂಡು ಹೋಗುತ್ತಾರೆ. ಮಾನ್ಯ ರವಿಯವರು ಮಾತನಾಡುತ್ತಾ, ಇದು ಹಾವು-ಏಣಿ ಆಟ ಇದ್ದಹಾಗೆ ಇರುತ್ತದೆ ಎಂಬ ಮಾತನ್ನು ಹೇಳಿದರು. ಎಲ್ಲಿಯ ತನಕ ರಾಜಕಾರಣ ಇರುತ್ತದೆಯೋ ಅಲ್ಲಿಯ ತನಕ ಹಾವು-ಏಣಿ ಆಟ ಇದ್ದಿದ್ದೆ. ನಮ್ಮ ಸರ್ಕಾರ ಬಂತು, ಯಾವ ಲೆಕ್ಕದಲ್ಲಿ ಬಂತು? ಹಾವು-ಏಣಿ ಆಟದಲ್ಲೇ ಬಂತು. ನಾನು ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಯಾವ ವ್ಯಕ್ತಿಗೆ ಪಕ್ಷದ ಬಗ್ಗೆ, ಸಿದ್ಧಾಂತದ ಬಗ್ಗೆ ಗೌರವ ಇರುವುದಿಲ್ಲವೋ . . . **(ಗೊಂದಲ)** ಗ್ರಾಮ ಪಂಚಾಯತಿಯ ಸದಸ್ಯರುಗಳನ್ನು ಎಷ್ಟು ಬೇಗ ಎತ್ತಿಕೊಂಡು ಹೋಗುತ್ತಾರೆ ಎನ್ನುವುದು ನಿಮಗೆ ಗೊತ್ತಿಲ್ಲವೇ? ಇಲ್ಲಿ 5-10 ವರ್ಷಗಳ ಪ್ರಶ್ನೆಯಲ್ಲ. ಕನಿಷ್ಠ ಎರಡೂವರೆ ವರ್ಷ ವಿದ್ದರೆ, ಸದ್ಯಕ್ಕೆ ನಮ್ಮ ಸುದ್ಧಿಗೆ ಬರಬೇಡಿ, ಮುಂದೆ ನಾನು ನಿಮಗೆ ಸಹಕಾರ ಕೊಡುತ್ತೇನೆ ಎಂದು ಒಬ್ಬರಿಗೊಬ್ಬರು ಹೊಂದಾಣಿಕೆ ಮಾಡಿಕೊಂಡು ಹೋಗುವ ಅವಕಾಶಗಳು ಸಿಗುತ್ತವೆ. ಇದು ಒಂದು ರೀತಿ ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ್ ಆಗಿದೆ, ಇಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಅವಿಶ್ವಾಸ ಮಂಡನೆ ಎನ್ನುವುದನ್ನು ತೆಗೆಯಬೇಕು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವಿಶ್ವಾಸ ಮಂಡನೆ ಮಂಡಿಸುವುದು ತೆಗೆಯಬೇಕು ಹೇಳುತ್ತಿದ್ದೀರಿ. ಮಾನ್ಯ ಸಭಾಪತಿಯವರೇ, ವಿಧಾನಸಭೆಯಲ್ಲಿ ಇವತ್ತು ಅವಿಶ್ವಾಸ ಮಂಡನೆಯಾಗುತ್ತಿದೆ. ಇದಕ್ಕೆ 6 ತಿಂಗಳ ಅವಧಿ ಎಂದು ಏಕೆ ಅವಕಾಶ ಕೊಡುತ್ತಾರೆ? ವಿಧಾನಸಭೆಯಲ್ಲಿ 6 ತಿಂಗಳಿಗೊಮ್ಮೆ ಅವಿಶ್ವಾಸ ಮಂಡನೆ ಮಾಡಬಹುದು ಎಂದು ಹೇಳುವುದಾದರೆ, ಪಾಪ, ಇಲ್ಲೇಕೆ ಈ ಬಡವರಿಗೆ ಅನ್ಯಾಯ ಮಾಡುತ್ತೀರಿ? ದಯವಿಟ್ಟು ಅರ್ಥ ಮಾಡಿಕೊಳ್ಳಿ. ಕನಿಷ್ಠ ಅವರು ಎರಡೂವರೆ ವರ್ಷಗಳ ಕಾಲವಾದರೂ ಕೆಲಸ ಮಾಡುವಂತಾಗಲಿ. ನಮ್ಮ ಹಿರಿಯ ಮಾನ್ಯ ಸದಸ್ಯರೊಬ್ಬರು ಚುನಾವಣೆ ಎನ್ನುವುದು ಒಂದು ವ್ಯಾಪಾರ ಎನ್ನುವ ಮಾತನ್ನು ಹೇಳಿದರು. ನಾನು ಕೂಡ ವ್ಯಾಪಾರ ಮಾಡಿಯೇ ಗೆದ್ದು ಬಂದಿದ್ದೇನೆ; ನೀವೂ ಕೂಡ ವ್ಯಾಪಾರ ಮಾಡಿಯೇ ಗೆದ್ದು ಬಂದಿದ್ದೀರಿ. ನಾನು ಸತ್ಯಹರಿಶ್ಚಂದ್ರ ಎಂದು ಹೇಳಿಕೊಳ್ಳುವಂತಹ ಪರಿಸ್ಥಿತಿ ರಾಜ್ಯದಲ್ಲಿ ಇವತ್ತು ಯಾರಿಗೂ ಇಲ್ಲ. ಮಾನ್ಯ ಸಭಾಪತಿಯವರೇ, ಕೋವಿಡ್‌ನ ಸಂದರ್ಭದಲ್ಲಿ ಮೊನ್ನೆ ಆಸ್ಪತ್ರೆಯಲ್ಲಿದ್ದಾಗ ಪಂಡಿತ ದೀನದಯಾಳ್ ಉಪಾಧ್ಯಾಯರವರ ಒಂದು ಪುಸ್ತಕವನ್ನು ಓದುತ್ತಿದ್ದೆ. ಅವರಿಗೆ ಎಲ್ಲರೂ ಚುನಾವಣೆಗೆ ನಿಂತುಕೊಳ್ಳಿ ಎಂದು ಹೇಳಿದರಂತೆ. ನನಗೆ ಚುನಾವಣೆ ಬೇಡ, ನಾನು ಪಕ್ಷದ ಕೆಲಸವನ್ನೇ ಮಾಡುತ್ತೇನೆ ಎಂದು ಹೇಳಿದರಂತೆ. ಆದರೆ, ಈ ಪರಿಸ್ಥಿತಿಯಲ್ಲಿ ಚುನಾವಣೆಗೆ ನಿಂತುಕೊಳ್ಳುವವರು ಯಾರೂ ಇಲ್ಲ, ನೀವು ನಿಂತುಕೊಳ್ಳಲೇ ಬೇಕು ಎಂದು ಕೇಳಿದರಂತೆ. ಅವರು ಚುನಾವಣೆಗೆ ನಿಂತರು. ಚುನಾವಣೆ ಎಂದ ತಕ್ಷಣ ಇವತ್ತು, ಜಾತಿ, ದುಡ್ಡು ಮತ್ತೆ, ಉಳಿದಿದ್ದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವೆಲ್ಲವೂ ಬಂದುಬಿಡುತ್ತವೆ. ಪಂಡಿತ ದೀನದಯಾಳ್ ಉಪಧ್ಯಾಯರಿಗೆ, ಇಲ್ಲಿ ನಿಮ್ಮ ಸಮಾಜದವರು ಬಹಳ ಜನ ಇದ್ದಾರೆ, ಜಾತಿ ಛಿಚಿಡಿಜ ಠಿಟಚಿಥಿ ಮಾಡಿದರೆ ಗೆಲ್ಲುತ್ತೇವೆ ಎಂದು ಹೇಳಿದರಂತೆ. ಆಗ ಆವತ್ತು, ನಾನು ಗೆಲ್ಲವುದು ಮುಖ್ಯವಲ್ಲ, ರಾಜಕೀಯದಲ್ಲಿ ಒಂದು ನಿರ್ದಿಷ್ಟ ಸಿದ್ಧಾಂತವನ್ನು ಇಟ್ಟುಕೊಂಡು ಮುನ್ನಡೆಯಬೇಕು ಎಂದು ಹೇಳಿದರಂತೆ. ಎಲ್ಲದಕ್ಕೂ ಜಾತಿ ಏಕೆ ಬೇಕು? ಯಾವುದೇ ಕಾರಣದಿಂದ ಇಲ್ಲಿ ಜಾತಿ ಎನ್ನುವುದನ್ನು ತಂದರೆ ನಾನು ಚುನಾವಣೆಯಿಂದ ಹಿಂದೆ ಸರಿಯುತ್ತೇನೆ ಎಂದು ಹೇಳಿದರಂತೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸಿದ್ಧಾಂತ ಹಿನ್ನೆಲೆಯಲ್ಲಿ ರಾಜಕೀಯಕ್ಕೆ ಬಂದಿದ್ದಾರೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಂಥ ಸಂದರ್ಭದಲ್ಲಿ ನೀವು ಹೇಗೆ ಕೆಲಸ ಮಾಡಿದ್ದೀರಿ ಎಂಬುದನ್ನು ನೋಡಿದ್ದೇನೆ. ಅನೇಕ ವಿಚಾರಗಳ ಸಂಬಂಧ ನಾನು-ನೀವು ಜಗಳ ಆಡಿದ್ದೇವೆ. ನಮ್ಮ ಪಕ್ಷ ಬೇರೆ, ನಿಮ್ಮ ಪಕ್ಷ ಬೇರೆಯಾಗಿದ್ದರೂ ಅನೇಕ ವಿಚಾರಗಳಿಗೆ ಸಂಬಂಧಪಟ್ಟಂತೆ ನಾವು-ನೀವು ಒಂದೂ ಕೂಡ ಆಗಿದ್ದೇವೆ. ಸನ್ಮಾನ್ಯ ಹೊರಟ್ಟಿಯವರು ಇಷ್ಟೊಂದು ಸಲ ಏಕೆ ಗೆದ್ದು ಬರುತ್ತಿದ್ದಾರೆ? ಮಾನ್ಯ ಎಸ್.ಆರ್.ಪಾಟೀಲರು ಏಕೆ ಗೆದ್ದುಕೊಂಡೇ ಬರುತ್ತಿದ್ದಾರೆ? ಮಾನ್ಯ ಸಭಾಪತಿಯವರೇ, ರಾಜಕೀಯದಲ್ಲಿ ಪೂರ್ಣವಾಗಿ ವ್ಯಾಪಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವುದೂ ಇಲ್ಲ, ಜಾತಿಯ ಹಿನ್ನೆಲೆಯೂ ಇರುವುದಿಲ್ಲ. ರಾಜಕೀಯದಲ್ಲಿ ಈ ಅಂಶಗಳು ವ್ಯತಿರಿಕ್ತವಾಗಿ ಕೂಡ ಇರುತ್ತದೆ. ಜಾತಿಯನ್ನು, ಹಣವನ್ನು ಮೀರಿ ಸಹ ಚುನಾವಣೆ ಮಾಡುವಂತಹ ದಿನಗಳು ಮುಂದೆ ಬರುವಂತೆ ಮಾಡಬೇಕಿದೆ. ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಅಧಿಕಾರವೇ ಇಲ್ಲ ಎಂಬ ವಿಚಾರ ಬಂದಾಗ, ಅವರನ್ನೂ ಉಪಾಧ್ಯಕ್ಷರನ್ನಾಗಿ ಮಾಡಬೇಕು ಎಂದು ಏಕೆ ತೀರ್ಮಾನ ಮಾಡಿದೆವು? ಇಡೀ ರಾಜ್ಯದಲ್ಲಿ ಎಲ್ಲಾ ಕ್ಷೇತ್ರಗಳಿಂದ ಗೆದ್ದು ಬಂದಿರುವವರು ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಳ್ಳಬೇಕು ಎನ್ನುವ ಕಾರಣಕ್ಕೆ ಉಪಾಧ್ಯಕ್ಷರು ಎಂದು ಮಾಡಲಾಯಿತು.

**ಶ್ರೀ ಕೆ.ಸಿ.ಕೊಂಡಯ್ಯ:- "ಸಹ ಅಧ್ಯಕ್ಷರು"** ಎಂದು ಮಾಡಬೇಕು.

**(ಮುಂದು)**

**(922) 05.50 26.09.2020 ಎಸ್‌ವಿ-ಎಂಡಿ**

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾನು ಮಾನ್ಯ ಎಸ್.ಆರ್.ಪಾಟೀಲರ ಬಳಿ ಹೇಳಿದೆ. ಮಾನ್ಯ ಎಸ್.ರವಿಯವರು ನಮ್ಮನ್ನು ಉಪಾಧ್ಯಕ್ಷರನ್ನಾಗಿ ಮಾಡಿ ಎಂದು ಹೇಳಿದ್ದರು ಎಂದಾಗ ನನಗೆ ನೀವು ಬೆಂಬಲವನ್ನು ಸೂಚಿಸಿದ್ದಿರಿ. ಈಗ ಸಹ ಅಧ್ಯಕ್ಷರನ್ನಾಗಿಯಾದರೂ ಮಾಡಿ, ನಾಳೆ ಗೌರವಾಧ್ಯಕ್ಷರನ್ನಾಗಿಯಾದರೂ ಮಾಡಿ. ನಿಮಗೆ ಒಂದು ಗೌರವ ಬರಬೇಕೆನ್ನುವ ಉದ್ದೇಶದಿಂದ ನಿಮ್ಮ ಅನುಭವ ರಾಜ್ಯಕ್ಕೆ, ದೇಶಕ್ಕೆ ಬೇಕು ಎನ್ನುವ ಉದ್ದೇಶದಿಂದ ಒಂದು position ಕೊಡಲಾಗಿರುವುದನ್ನು ಬಿಟ್ಟರೆ ಇವೆಲ್ಲವನ್ನೂ ಬಿಟ್ಟುಬಿಡಿ.

ಮಾನ್ಯ ಸಭಾಪತಿಯವರೇ, ನಾನು ಹೇಳುವುದಿಷ್ಟೆ. ಇಂದು ಈ ವಿಧೇಯಕವನ್ನು ತಂದಿರುವ ಉದ್ದೇಶವನ್ನು ಮತ್ತೆ ಮತ್ತೆ ಹೇಳುತ್ತೇನೆ. ಎಲ್ಲಾ ವರ್ಗದ ಜನರಿಗೂ 60-70 ವರ್ಷಗಳಾಗುವವರೆವಿಗೂ ಕಾಯ್ದುಕೊಂಡು ಕುಳಿತುಕೊಳ್ಳುವ ಅವಶ್ಯಕತೆಯಿಲ್ಲ. ಎಲ್ಲರಿಗೂ ಕೂಡ ಸಾಮಾಜಿಕ ನ್ಯಾಯ ಸಿಗಬೇಕೆನ್ನುವ ಉದ್ದೇಶದಿಂದ ಇದನ್ನು ತಂದಿದ್ದೇವೆ. ಇದು ಮೊದಲನೆಯ ಅಂಶ. ಎರಡನೆಯದಾಗಿ ಈಗಾಗಲೇ ನಾನು ಹೇಳಿದಂತೆ ಈ ಕುದುರೆ ವ್ಯಾಪಾರ, ಹಾವು ಏಣಿ ಆಟ ಇವೆಲ್ಲಾ ಆಗಬಾರದೆನ್ನುವ ಉದ್ದೇಶದಿಂದ, ಸ್ವಲ್ಪದಿನಗಳಾದರೂ ಕೆಲಸ ಮಾಡಲಿ ಎನ್ನುವ ಉದ್ದೇಶದಿಂದ ತಂದಿದ್ದೇವೆ. ದಯವಿಟ್ಟು ತಾವೆಲ್ಲರೂ ಈ ಒಂದು ವಿಧೇಯಕಕ್ಕೆ ಬೆಂಬಲ ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

**(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.)**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**<u>ಖಂಡ 2ರಿಂದ 37ರವರೆಗೆ</u>**

**ಸಭಾಪತಿಯವರು:–** "ಖಂಡ 2ರಿಂದ 37ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಖಂಡ 2ರಿಂದ 37ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**<u>ಖಂಡ 1 ಇತ್ಯಾದಿ</u>**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ: "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**<u>ಪ್ರಸ್ತಾವದ ಅಂಗೀಕಾರ</u>**

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ **ಒಪ್ಪಿಗೆ** ನೀಡಲಾಯಿತು.</u>

**ಆ) ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವ ಸಬಲೀಕರಣ ಮತ್ತು ಕ್ರೀಡೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, 2020ರ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**(ಪ್ರಸ್ತಾವವನ್ನು ಮಂಡಿಸಲಾಯಿತು)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವ ಸಬಲೀಕರಣ ಮತ್ತು ಕ್ರೀಡೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆಯಲ್ಲಿರುವ ಲಕ್ಕುಂಡಿಯು 'ಲೊಕ್ಕಿ–ಗುಂಡಿ' ಎಂದು ಶಾಸನಗಳಲ್ಲಿ ದಾಖಲಾಗಿದೆ. ಇದೊಂದು ಐತಿಹಾಸಿಕ ಪ್ರದೇಶವಾಗಿದ್ದು, ಇಲ್ಲಿ ಪಾರಂಪರಿಕ ಅವಶೇಷಗಳು, ಪ್ರಾಚೀನ ದೇವಾಲಯಗಳಾದ ಸೋಮೇಶ್ವರ, ಕುಂಬಾರೇಶ್ವರ, ಮಾಣಿಕೇಶ್ವರ, ನಾಗನಾಥ, ನಾಗೇಶ್ವರ, ಕಾಶಿ ವಿಶ್ವೇಶ್ವರ, ಶಂಕರಲಿಂಗ, ಲಕ್ಷ್ಮಿನಾರಾಯಣ, ಗಣಪತಿ, ಲಕ್ಕದ ವೀರಣ್ಣ, ಈಶ್ವರ, ಕಮಲೇಶ್ವರ, ಹಾಲ್ಗುಂಡಿ ಬಸವಣ್ಣ, ವಿರೂಪಾಕ್ಷ, ಮಲ್ಲಿಕಾರ್ಜುನ, ಈರಭದ್ರ, ಚಂದ್ರಮೌಳೇಶ್ವರ, ಜೈನ ಬಸದಿ, ಬ್ರಹ್ಮ, ಜಿನಾಲಯ, ಮಸುಕಿನ ಬಾವಿ, ಫಕೀರ ಸ್ವಾಮಿ ಮಠ, ಶಿವಪ್ಪ ಮಠ, ಕೋಟೆ ಬಾಗಿಲು ದಾರಿ, ಒಳಗಿನ ಕೋಟೆ ಗೋಡೆ, ಪತ್ರಿಬಾವಿ, ಮಲ್ಲೆಬಾವಿ, ಚಬ್ಬೇರ್ ಬಾವಿ, ಕಣ್ಣೀರ ಬಾವಿ, ಕುನ್ನಿಬಾವಿ, ಮಧ್ಯಣ್ಣಬಾವಿ, ಕೊರಗೆರೆ ಬಾವಿ, ಚೌಕಿಬಾವಿ, ಕೋಟೇಶ್ವರ ದೇವಾಲಯದ ಹೊರಕೋಟೆ ಇತ್ಯಾದಿ ಸುಮಾರು 40 ಭೌತಿಕ ಪರಂಪರೆಯ ಸ್ಮಾರಕಗಳ ಸಂಕೀರ್ಣಗಳೊಂದಿಗೆ ಅಸ್ತಿತ್ವದಲ್ಲಿರುವ 16ಕ್ಕೂ ಹೆಚ್ಚು ಕೆರೆಗಳಿಂದ ತುಂಬಿದೆ. ಇವುಗಳನ್ನೊಳಗೊಂಡಂತಹ ಒಂದು ಕಿಲೋಮೀಟರ್ ವ್ಯಾಪ್ತಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಧಿಕಾರವೆಂದು ರಚನೆ ಮಾಡಿ ಅದಕ್ಕೆ ಒಂದು Authority constitute ಮಾಡಿ initial ಆಗಿ ರೂ. 3 ಕೋಟಿ ಅನುದಾನವನ್ನು ನೀಡಲಾಗುವುದು. ಗದಗ್ ಜಿಲ್ಲೆಯ ಲಕ್ಕುಂಡಿಯಲ್ಲಿರುವ ಪಾರಂಪರಿಕ ಪ್ರದೇಶಗಳ ಜೊತೆಗೆ ಅಲ್ಲಿರುವ ಎಲ್ಲಾ ಪುರಾತತ್ವ ಪ್ರದೇಶಗಳ heritage works ಅನ್ನು involve ಮಾಡಿ ಪ್ರಾಧಿಕಾರವನ್ನು ರಚಿಸಲಾಗಿದ್ದು, ದಯಮಾಡಿ ಈ ವಿಧೇಯಕಕ್ಕೆ ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಚಿವರೇ, funding ಹೇಗೆ ವ್ಯವಸ್ಥೆ ಮಾಡಲಾಗಿದೆ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಸರ್ಕಾರ initial ಆಗಿ ರೂ.3 ಕೋಟಿಗಳನ್ನು ನೀಡುತ್ತಿದೆ. ಆಮೇಲೆ ಅವರು ಹೇಗೆ raise ಮಾಡಬಹುದು ಎಂಬುದನ್ನು ಹೇಳುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಚಿವರೇ, ಇದಕ್ಕೆ ನಮ್ಮದೇನೂ ತಕರಾರಿಲ್ಲ. ವಿಧೇಯಕಕ್ಕೆ ನಮ್ಮ ಸಹಮತ ಇದೆ. ಅಷ್ಟು ಚೆನ್ನಾಗಿರುವ ದೇವಸ್ಥಾನಗಳಿದ್ದು, ದೇವಸ್ಥಾನ ರಸ್ತೆಯ ಸುತ್ತ ಮುತ್ತ ಸಾರಾಯಿ ಅಂಗಡಿಗಳಿವೆ. ದಯಮಾಡಿ ಅವುಗಳನ್ನು ತೆಗೆಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಹೊರಟ್ಟಿಯವರೇ, ಅದೇ ಭಾಗದವರಾದ ತಾವೆಲ್ಲಾ ಈ Authority ಯಲ್ಲಿರುತ್ತೀರಿ. ನಿಮಗೆ ಅಧಿಕಾರವನ್ನು ನೀಡುತ್ತೇವೆ. Authority constitute ಮಾಡಿ ಅಲ್ಲಿನ ಜಿಲ್ಲಾಧಿಕಾರಿ ಹಾಗೂ ತಮ್ಮನ್ನೆಲ್ಲಾ ಸದಸ್ಯರನ್ನಾಗಿ ಮಾಡುತ್ತೇವೆಂದು ಈ ವಿಧೇಯಕದಲ್ಲಿ ಹೇಳಲಾಗಿದೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ: "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು."

**(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2ರಿಂದ 36ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 36ರವರೆಗೆ ಎರಡೂ ಸೇರಿದಂತೆ ಅನುಸೂಚಿಯು ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 36ರವರೆಗೆ ಎರಡೂ ಸೇರಿದಂತೆ ಅನುಸೂಚಿಯನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ: "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ನಿಯಮ 330ರ ಅಡಿಯಲ್ಲಿ ಚರ್ಚೆ ಮಾಡಬೇಕಾದ ವಿಷಯಗಳನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇನ್ನೊಂದೆರಡು ವಿಧೇಯಕಗಳಿದ್ದು, ದಯಮಾಡಿ ಅವುಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ನಸೀರ್ ಅಹಮದ್:-** ಮಾನ್ಯ ಸಚಿವರೇ, ನಾವು ಬೆಳಿಗ್ಗೆಯಿಂದ ಕಾದು ಕುಳಿತಿದ್ದೇವೆ. No, no please ನಮ್ಮ ತಾಳ್ಮೆಗೂ ಮಿತಿಯಿರುತ್ತದೆ. Don't test our patience.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ನಸೀರ್ ಅಹ್ಮದ್ ಅವರೇ, ದಯವಿಟ್ಟು ಸಹಕಾರ ನೀಡಿ. ಇದು act ಅನ್ನು repeal ಮಾಡುವುದಾಗಿದ್ದು, ಹೆಚ್ಚಿನದೇನೂ ಇರುವುದಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ಇಂತಹ ಕಷ್ಟದ ದಿನಗಳಲ್ಲಿ ಇಷ್ಟೊಂದು ಬಿಲ್‌ಗಳನ್ನು ಮಂಡಿಸಿ ಅನುಮೋದನೆ ಪಡೆದುಕೊಳ್ಳುವುದು ತಪ್ಪು. ಎಲ್ಲಾ ವಿಧೇಯಕಗಳಿಗೂ ಒಪ್ಪಿಗೆಯನ್ನು ನೀಡಿದ್ದೇವೆ. ನಮ್ಮ ಚರ್ಚೆಗೂ ಅವಕಾಶ ಕೊಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಚಿವರೇ, ಆಯಿತು. ಬೇಗ ಮಾಡಿರಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಈ ಎರಡು ವಿಧೇಯಕಗಳನ್ನು ಅಂಗೀಕರಿಸಿ, ನಾವುಗಳು ಕೆಳಮನೆಗೆ ಹೋಗಲು ಅವಕಾಶ ಮಾಡಿಕೊಡಬೇಕು. ಮಾನ್ಯ ಸದಸ್ಯರು ಸ್ವಲ್ಪ ಸಹಕಾರವನ್ನು ನೀಡಬೇಕು.

**ಸಭಾಪತಿಯವರು:-** ಇದಕ್ಕೆ ಸದನ ಏನು ಹೇಳುತ್ತದೆ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:-** ಮಾನ್ಯ ಸಚಿವರೇ ಒಂದು ನಿಮಿಷ, ಮಾಡಿಸಿಕೊಡುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾವುದಾದರೂ ನಿಯಮ 330ರ ಅಡಿಯಲ್ಲಿ ಚರ್ಚೆಯಾಗುವ ವಿಷಯಗಳು ಅರ್ಧ ಗಂಟೆ ಅಥವಾ ಒಂದು ಗಂಟೆಯಲ್ಲಿ ಮುಗಿಯುವುದೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಇದು ಬೇಗ ಆಗಿ ಹೋಗುತ್ತದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಮರಿತಿಬ್ಬೇಗೌಡರೇ, ದಯವಿಟ್ಟು ಎರಡು ನಿಮಿಷ...

**ಸಭಾಪತಿಯವರು:–** ಅವರು ಪತ್ರವನ್ನು ಕಳುಹಿಸಿದ್ದರು. ಅದಕ್ಕೆ ತೆಗೆದುಕೊಂಡೆನು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ 2020ರ ಸರ್ಕಾರಿ ಸಿವಿಲ್ ಸೇವೆಗಳ ವರ್ಗಾವಣೆ ನಿಯಂತ್ರಣ ನಿರಸನಗೊಳ್ಳುವ ವಿಧೇಯಕವನ್ನು ಮಂಡಿಸುತ್ತಿದ್ದೇನೆ. ನಂತರ ಮುಂದಿನ ವಿಧೇಯಕದಲ್ಲಿ ತಾಂತ್ರಿಕ ಇಲಾಖೆಯಲ್ಲಿ transfers ಗಾಗಿ ಇದ್ದಂತಹ ಕಾಯಿದೆಯನ್ನು repeal ಮಾಡಿ ಕೆ.ಸಿ.ಎಸ್.ಆರ್. ಕೆಳಗೆ ಕಾನೂನು ಮಾಡಿಕೊಳ್ಳುವಂತೆ ಕೇಳಿದ್ದೇವೆ. Act ಅನ್ನು repeal ಮಾಡುತ್ತಿದ್ದೇವೆ. **(ಮುಂದು)**

**(923) 26.09.2020 6.00 ಕೆಜಿ–ಎಕೆ**

**ಇ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಸಚಿವರು) (ಉಪ ಮುಖ್ಯ ಮುಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "2020ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಸಚಿವರು) (ಉಪ ಮುಖ್ಯ ಮುಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಇದರಲ್ಲಿ ತಾಂತ್ರಿಕ ಇಲಾಖೆಯ transfer ಗೆ ಕಾಯ್ದೆ ಇತ್ತು. ನಾವು ಅದನ್ನು repeal ಮಾಡಿಕೊಂಡು ಅದನ್ನು KCSR (Karnataka Civil Services Rules) ನಿಂದ rules ಮಾಡಿಕೊಂಡು ಮಾಡಲಿ ಎಂದು ಈ ಕಾಯ್ದೆಯನ್ನು repeal ಮಾಡಿದ್ದೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ)** ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

**(ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಸ್ತಾವದ ಅಂಗೀಕಾರ

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಸಚಿವರು) (ಉಪ ಮುಖ್ಯ ಮುಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "2020ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ವಿಧೇಯಕ"ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ)** (ನಿರಸನಗೊಳಿಸುವ) ವಿಧೇಯಕವನ್ನು ಅಂಗೀಕರಿಸುವುದು".

## ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

### ಈ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ವಿಧೇಯಕ, 2020

### ಪರ್ಯಾಲೋಚನ ಪ್ರಸ್ತಾವ

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಸಚಿವರು) (ಉಪ ಮುಖ್ಯ ಮುಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "2020ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

## ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಸಚಿವರು) (ಉಪ ಮುಖ್ಯ ಮುಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ,**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗ First Grade College Lecturers transfer ಗೆ ಮತ್ತೊಂದಕ್ಕೆ ಒಂದು ಕಾಯ್ದೆ ಇತ್ತು. ನಾವು ಇದನ್ನು ಬಹಳ ಕೂಲಂಕುಷವಾಗಿ ಪರಿಶೀಲಿಸಿದಾಗ, ಈ ಕಾಯ್ದೆ ಇರುವುದರಿಂದ ಸ್ವಲ್ಪ risk ಆಗುತ್ತದೆ ಎಂದು ಕಾಯ್ದೆಯನ್ನು repeal ಮಾಡಿಕೊಂಡು ಅದು KCSR (Karnataka Civil Services Rules) ನಿಂದ rules ಮಾಡಿಕೊಂಡು ಮಾಡಲಿ ಎಂದು ಈ ಕಾಯ್ದೆಯನ್ನು repeal ಮಾಡಿದ್ದೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ)** ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

**(ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

ಪ್ರಸ್ತಾವದ ಅಂಗೀಕಾರ

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಸಚಿವರು) (ಉಪ ಮುಖ್ಯ ಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ)** ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ)** ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ **ಒಪ್ಪಿಗೆ** ನೀಡಲಾಯಿತು

**ಉ) ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯನಿರ್ಣಯ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸಂದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "2020ನೇ ಸಾಲಿನ ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯನಿರ್ಣಯ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸಂದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, courts regular sitting ಇಲ್ಲದೇ ಇರುವುದರಿಂದ Court Fee ಕಟ್ಟುವುದು, ನ್ಯಾಯಾಲಯದಲ್ಲಿ ಪ್ರಕರಣಗಳು ರಾಜಿಯಾದರೆ, withdraw ಮಾಡಿಕೊಂಡರೆ, lawyer ಆಗಿದ್ದವರು 75% refund ಆಗಬೇಕೆಂದು ಇತ್ತು. Online ಮೂಲಕ Court Fee ಕಟ್ಟುವುದಕ್ಕೆ, compromise case ಗಳಲ್ಲಿ 75% ಬದಲು 100% ಅವರಿಗೆ ವಾಪಸ್ಸು ಕೊಡುವುದಕ್ಕೆ ಒಂದು bill ತಂದಿದ್ದೇವೆ. ಇದನ್ನು ಬಿಟ್ಟರೆ, ಇದರಲ್ಲಿ ಬೇರೆ ಏನಿಲ್ಲ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ **ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯನಿರ್ಣಯ (ತಿದ್ದುಪಡಿ) ವಿಧೇಯಕವನ್ನು** ಪರ್ಯಾಲೋಚಿಸುವುದು"

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 5 ರವರೆಗೆ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 5 ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 5 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

**(ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

<u>ಪ್ರಸ್ತಾವದ ಅಂಗೀಕಾರ</u>

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸಂದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ **ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯನಿರ್ಣಯ (ತಿದ್ದುಪಡಿ)** ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ **ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯನಿರ್ಣಯ (ತಿದ್ದುಪಡಿ)** ವಿಧೇಯಕವನ್ನು ಅಂಗೀಕರಿಸುವುದು".

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ **ಒಪ್ಪಿಗೆ** ನೀಡಲಾಯಿತು</u>

**12.ಪ್ರಕಟಣೆ**

**ಸಭಾಪತಿಯವರು:-** (ಅ) ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 104 ರ ಮೇರೆಗೆ ವಿಧಾನಸಭೆಯು ದಿನಾಂಕ 26.09.2020 ರಂದು ಕರ್ನಾಟಕ ಭೂ-ಸುಧಾರಣೆಗಳ 2ನೇ ತಿದ್ದುಪಡಿ ವಿಧೇಯಕ, 2020 ಅನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿದೆ ಎಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು)**

**(924)26-09-2020(6-10)ಎಂವಿ-ಎಕೆ**

**ಸಭಾಪತಿಯವರು (ಮುಂದು):-**

**(ಆ)** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 104 ರ ಮೇರೆಗೆ ವಿಧಾನಸಭೆಯು ದಿನಾಂಕ 26.09.2020 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ:

1. ಕರ್ನಾಟಕ ಭೂ-ಕಬಳಿಕೆ ನಿಷೇಧ (ತಿದ್ದುಪಡಿ ವಿಧೇಯಕ), 2020.
2. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ (ನಾಲ್ಕನೇ ತಿದ್ದುಪಡಿ) ವಿಧೇಯಕ, 2020.

**13. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆಗೆ ಅವಕಾಶ ಕೋರಿ ಹಕ್ಕೊತ್ತಾಯ**
**ವಿಷಯ:- ಬೆಂಗಳೂರು ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಮತ್ತು ಕಾವಲ್ ಬೈರಸಂದ್ರದಲ್ಲಿ ನಡೆದಿರುವ ಗೋಲಿಬಾರ್ ಬಗ್ಗೆ.**

\- - -

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,...

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ನಿಯಮ 59ರ ಅಡಿಯಲ್ಲಿ ಕೊಟ್ಟಿರುವ ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿಗೆ ಸಂಬಂಧಿಸಿದ ವಿಷಯವನ್ನು ತಾವು ನಿಯಮ 330ರ ಅಡಿಯಲ್ಲಿ convert ಮಾಡಿದ್ದೀರಿ. ಆ ವಿಷಯದ ಬಗ್ಗೆ ಮಾತನಾಡುವುದಕ್ಕೆ ಇನ್ನೂ ಪ್ರಾರಂಭ ಮಾಡಿಲ್ಲ. It is an important subject for us. ನಮಗೆ ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾವು ವಿರೋಧ ಪಕ್ಷದಲ್ಲಿದ್ದಾಗ ಅವರು ವಿಧೇಯಕಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂದು ಹೇಳುತ್ತಿದ್ದರು. ಈಗ ವಿಧೇಯಕವನ್ನು ಪಾಸು ಮಾಡಿಕೊಡಲಿ ನಾವು ಎಷ್ಟು ಹೊತ್ತಾದರೂ ಕುಳಿತುಕೊಳ್ಳುತ್ತೇವೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೆಳಗಿನ ಜಾವ ಐದು ಗಂಟೆ ಅಥವಾ ಆರು ಗಂಟೆಯಾದರೂ ಕುಳಿತುಕೊಂಡಿರುತ್ತೇವೆ. ಈ ಅಧಿವೇಶನಕ್ಕೆ ಸಂಬಂಧಪಟ್ಟ ವಿಧೇಯಕಗಳನ್ನು enactment ಮಾಡುವುದಕ್ಕೆ. ಅವರ ಒಂದೂ ವಿಧೇಯಕಗಳನ್ನು ಬಾಕಿ ಉಳಿಸುವುದಿಲ್ಲ. ಅದು ನನಗೆ ಗೊತ್ತಿದೆ. ನಾನು ಸಹ legislator. ಅದನ್ನು ಈಗಲೇ ಮಾಡಬೇಕು ಎಂದು ಏನಿದೆ. ತಾವು ನಮಗೂ ಆದ್ಯತೆ ನೀಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿಧೇಯಕ ಪಾಸ್ ಆಗಬೇಕು. ಆದುದರಿಂದ ವಿಧೇಯಕವನ್ನು ಪಾಸು ಮಾಡಿಕೊಡಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಬೆಳಗ್ಗೆ ಏನು ಹೇಳಿದರು ಎಂದರೆ, money bill ನ್ನು ಪಾಸು ಮಾಡಿಕೊಂಡು ಹೋಗುತ್ತೇವೆ. ಆಮೇಲೆ ಅವರ ಕಾರ್ಯಚಟುವಟಿಕೆ, transaction ಮತ್ತು business ಮಾಡಿಕೊಳ್ಳಿ ಎಂದು, ಈಗ ಸುಮಾರು ಮೂವತ್ತು ವಿಧೇಯಕಗಳು ಪಾಸ್ ಆಗಿವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದಲ್ಲಿದ್ದಾಗ ಅವರು ವಿಧೇಯಕಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂದು ಹೇಳುತ್ತಿದ್ದರು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನ ಎರಡೂವರೆ ದಶಕದ ಈ ಮೇಲ್ಮನೆಯ ಸದಸ್ಯನ ಅವಧಿಯಲ್ಲಿ, ಒಂದೇ ದಿನ ಇಷ್ಟು ವಿಧೇಯಕಗಳು ಒಂದು ವಾರದ ಅಧಿವೇಶನದಲ್ಲಿ ತಂದಿರುವುದು ಅದು ಇತಿಹಾಸದಲ್ಲಿ ಚರಿತ್ರೆಯಾಗಿದೆ. ಆಡಳಿತ ಪಕ್ಷದವರು ಚರಿತ್ರೆಯನ್ನೇ ಮಾಡಿಬಿಟ್ಟರು. 19 ordinance ಗಳನ್ನು replace ಮಾಡಿದರು. ಎಲ್ಲವೂ ಸಹ ordinance ಗಳೇ ಆಗಿವೆ. Governor ಬಳಿ ಹೋದರು ordinance ಮಾಡಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಜನರ ಪರವಾಗಿ ಎಲ್ಲವನ್ನು ಸಹ ಮಾಡಬೇಕಾಗುತ್ತದೆ. ಅದು ತಮಗೆ ಗೊತ್ತಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

ಶ್ರೀ **ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೆ, ಇಂತಹ ವ್ಯವಸ್ಥೆಯನ್ನು ನಾನು ಎಲ್ಲೂ ನೋಡಿಲ್ಲ.

ಶ್ರೀ **ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇರಬಹುದು. ಸಮಸ್ಯೆಗಳು ಬಂದಾಗ ಆಡಳಿತ ಪಕ್ಷದವರು ಸುಮ್ಮನಿರುವುದಕ್ಕೆ ಸಾಧ್ಯವಿಲ್ಲ.

ಶ್ರೀ **ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಈ ವಿಷಯವನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಅದು ಮುಗಿದ ನಂತರ ವಿಧೇಯಕವನ್ನು ಮಂಡಿಸಲಿ.

ಶ್ರೀ **ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ವಿಧೇಯಕ ತೆಗೆದುಕೊಳ್ಳುವುದು ನ್ಯಾಯ. ವಿಧೇಯಕದ ಮೇಲೆ ಎಷ್ಟು ಬೇಕಾದರೂ ಚರ್ಚೆ ಮಾಡಲಿ.

ಶ್ರೀ **ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಬೆಳಗಿನ ಜಾವ ಆರು ಗಂಟೆಯಾದರೂ ವಿಧೇಯಕಗಳನ್ನು approve ಮಾಡಿಕೊಡುತ್ತೇವೆ. Don't worry.

**(ಗೊಂದಲ)**

ಶ್ರೀ **ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ತಾವು ಬೆಳಗ್ಗೆ ಹೇಳಿದ್ದೀರಿ. ಧನ ವಿಧೇಯಕ ಆದಮೇಲೆ ಈ ವಿಷಯವನ್ನು ತೆಗೆದುಕೊಳ್ಳೋಣವೆಂದು.

ಶ್ರೀ **ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ, ಮಾನ್ಯ ಮರಿತಿಬ್ಬೇಗೌಡರು ಮಂಗಳವಾರದಿಂದ ಪ್ರಸ್ತಾಪ ಮಾಡುತ್ತಿದ್ದಾರೆ. ಈಗಾಗಲೇ ಅದಕ್ಕೆ ನಾಲ್ಕು ದಿವಸವಾಗಿದೆ.

**(ಗೊಂದಲ)**

ಶ್ರೀ **ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ವಿಧೇಯಕವನ್ನು ತೆಗೆದುಕೊಳ್ಳುತ್ತಾರೆಂದರೆ ನಮ್ಮ ಆಕ್ಷೇಪವಿಲ್ಲ. ವಿಧೇಯಕವನ್ನು ಯಾವಾಗ ಮಾಡುತ್ತಾರೆ.

**ಸಭಾಪತಿಯವರು:–** ಆ ರೀತಿ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ ಅಷ್ಟೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ವಿಧೇಯಕವನ್ನು ಯಾವಾಗ ಮಾಡುತ್ತಾರೆ. ಸದನದಲ್ಲಿ ವಿಧೇಯಕಗಳ ಬಗ್ಗೆ ಚರ್ಚೆ ಮಾಡುವಂಥದ್ದು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾಡುವುದಕ್ಕೆ ಆಗುವುದಿಲ್ಲವೆಂದರೆ, ಇಷ್ಟೆಲ್ಲಾ ವಿಷಯಗಳನ್ನು ಏಕೆ ಹಾಕಿಕೊಂಡಿದ್ದಾರೆ. ವಿಧೇಯಕದ ಬಗ್ಗೆ ಎಲ್ಲರಿಗೂ ಸಹ ಗೊತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿಧೇಯಕದ ಬಗ್ಗೆ ಚರ್ಚೆ ಮಾಡಬೇಕು. ವಿಧೇಯಕದಲ್ಲಿ ಏನಾದರೂ ವಿಚಾರಗಳು ಇದ್ದರೆ, ಅದನ್ನು ವಿಮರ್ಶೆ ಮಾಡಬೇಕೆಂದು ಈ ಹಿಂದೆ ವಿರೋಧ ಪಕ್ಷದ ಸದಸ್ಯರೇ ಹೇಳಿದ್ದರು. ಆದರೆ, ಇವತ್ತು ವಿಧೇಯಕ ಬೇಡವೆಂದರೆ ಯಾವ ನ್ಯಾಯ? ವಿರೋಧ ಪಕ್ಷದವರು ಎಷ್ಟು ಹೊತ್ತು ಕುಳಿತುಕೊಳ್ಳುತ್ತಾರೋ ನಾವು ಅಷ್ಟು ಹೊತ್ತು ಕುಳಿತುಕೊಳ್ಳುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರ ಎಲ್ಲಾ ವಿಧೇಯಕಗಳನ್ನು ಪಾಸ್ ಮಾಡಿಕೊಡುತ್ತೇವೆ. Don't worry. It is my commitment. ನಾವು ಏನು ಹೇಳುತ್ತೇವೆ ಆ ರೀತಿಯಾಗಿ ನಡೆದುಕೊಳ್ಳುತ್ತೇವೆ. ನಾವು ಅವರ ಹಾಗೆ ಅಲ್ಲ. ನಾವು ಅವರ ಯಾವುದೇ ವಿಧೇಯಕಗಳನ್ನು ನಿಲ್ಲಿಸುವುದಿಲ್ಲ. ನೋಡಿ ನಿಯಮ 59ರ ಅಡಿಯಲ್ಲಿ ಎಂದು ನಾನು ಮೂರು ದಿವಸದಿಂದ ಅವರ ಹಿಂದೆ ಬಿದ್ದಿದ್ದೇನೆ. ಆ ವಿಷಯವನ್ನು ಮಾನ್ಯ ಸಭಾಪತಿಯವರು ಯಾವ ನಿಯಮದ ಅಡಿಯಲ್ಲಿ convert ಮಾಡಬೇಕೊ ಆ ನಿಯಮದ ಅಡಿಯಲ್ಲಿ convert ಮಾಡಿ ಎಂದು ಹೇಳಿದ್ದೆವು. ಅದನ್ನು ತಾವು convert ಮಾಡಿದ್ದೀರಿ. ಆದರೆ ವಿಷಯವನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಿಲ್ಲವೆಂದರೆ ಹೇಗೆ ಹೇಳಿ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಾವು ವಿಧೇಯಕಗಳ ಬಗ್ಗೆ ಚರ್ಚೆ ಇಲ್ಲದೆ ವಿಧೇಯಕಗಳನ್ನು ಪಾಸು ಮಾಡಿಕೊಟ್ಟಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿಧೇಯಕಗಳು ಜಾಸ್ತಿಯಾಗಿವೆ ಎನ್ನುವ ಕಾರಣಕ್ಕೋಸ್ಕರ ಪ್ರಶ್ನೋತ್ತರವನ್ನು ಮಂಡನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ನಿಮ್ಮ ಎಲ್ಲಾ ವಿಧೇಯಕಗಳು ಪಾಸ್ ಆಗುತ್ತವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಂಡ್ಯ ವೈದ್ಯಕೀಯ ಕಾಲೇಜ್ ಅನ್ನು 2005–06ನೆ ಸಾಲಿನಲ್ಲಿ ಪ್ರಾರಂಭ ಮಾಡಲಾಗಿದೆ. ಈ ವೈದ್ಯಕೀಯ ಕಾಲೇಜ್‌ನಲ್ಲಿ ನೂರು ಎಂ.ಬಿ.ಬಿ.ಎಸ್. ಪದವಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಈಗ ಒಂದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರಿ ಎಂದರೆ ಅದಕ್ಕೆ ನಮ್ಮ ಅಡ್ಡಿಯಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ನಮಗೆ ನೋವಿದೆ. ಈ ಎರಡು ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾವು ತಮಗೆ ಬೆಳಿಗ್ಗೆಯೇ ತಿಳಿಸಿದ್ದೇವೆ. ಎಲ್ಲಾ ವಿಧೇಯಕಗಳನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಈಗ ಇರುವ ವಿಧೇಯಕಗಳನ್ನು ಆಮೇಲೆ ಪಾಸ್ ಮಾಡಿಕೊಳ್ಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರ ವಿಷಯ ಒಂದು ವಿಶೇಷ ಪ್ರಕರಣವೆಂದು ಚರ್ಚೆಗೆ ತೆಗೆದುಕೊಂಡು ಮತ್ತೆ ನಿಯಮ 72ರ ಅಡಿಯಲ್ಲಿ ಮತ್ತು ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ವಿಷಯವನ್ನು ತೆಗೆದುಕೊಂಡರೆ ನಾವು ಏನು ಮಾಡುವುದು. ವಿಧೇಯಕವನ್ನು ಯಾವಾಗ ಮಂಡನೆ ಮಾಡುವುದು.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾವು ಇಲ್ಲಿಯವರೆಗೆ ವಿಧೇಯಕಗಳಿಗೆ ಏನೂ ಮಾಡಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದು ಪ್ರಮುಖವಾದಂತಹ ವಿಚಾರ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಮರಿತಿಬ್ಬೇಗೌಡರ ಒಂದು ವಿಷಯವನ್ನು ತೆಗೆದುಕೊಳ್ಳಿ. ನಮಗೆ ಮೊದಲು ವಿರೋಧ ಪಕ್ಷದವರೆ ವಿಧೇಯಕಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂದು ಹೇಳಿಕೊಟ್ಟವರು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಚರ್ಚೆಯಾಗಬೇಕು ಮತ್ತು ಇಡೀ ರಾಜ್ಯದ ಮಕ್ಕಳ ಭವಿಷ್ಯದ ಬಗ್ಗೆ ಚರ್ಚೆಯಾಗಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಚರ್ಚೆಯಾಗಬೇಕು.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರ ವಿಷಯ ಚರ್ಚೆ ಆದಮೇಲೆ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರಿಗೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇನ್ನು ಮಾನ್ಯ ನಸೀರ್ ಅಹ್ಮದ್‌ರವರು ಚರ್ಚೆ ಮಾಡಬೇಕು. ಆಡಳಿತ ಪಕ್ಷದವರು ಎಲ್ಲಾ ವಿಧೇಯಕಗಳನ್ನು ಮುಗಿಸಿಕೊಂಡುಬಿಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಮರಿತಿಬ್ಬೇಗೌಡರ ಹೆಸರನ್ನು ಕರೆದಿದ್ದೀರಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಇವತ್ತಿನವರೆಗೆ ಸುಮಾರು 32 ವಿಧೇಯಕಗಳು ಪಾಸ್ ಆಗಿವೆ. ಇವತ್ತು 12 ವಿಧೇಯಕಗಳು ಆಗಿವೆ. ನಿನ್ನೆಯ ದಿವಸ 20 ವಿಧೇಯಕಗಳು ಆಗಿವೆ. ಒಟ್ಟು 32 ವಿಧೇಯಕಗಳು ಪಾಸ್ ಆಗಿವೆ. ಆದುದರಿಂದ ಎಲ್ಲಾ ವಿಧೇಯಕಗಳು ಪಾಸ್ ಆಗುತ್ತವೆ. ನೀವು ಗಡಿಬಿಡಿ ಮಾಡಿಕೊಳ್ಳಬೇಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದು ಇರಬಹುದು. ನೀವು ಪೀಠದಿಂದ ಹೇಳಿದ್ದೀರಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಏನು ಹೇಳುತ್ತಾರೆ ಅದಕ್ಕೆಲ್ಲಾ 'yes, yes' ಎಂದು ಹೇಳಿದ್ದೇವೆ. ನಾವು ನಮ್ಮ ತುಟಿ ಬಿಚ್ಚಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಿಂದೆ ಸಭಾನಾಯಕರಾಗಿದ್ದಾಗ, ಪೀಠದಲ್ಲಿದ್ದಂತಹ ಸಾಹೇಬರು ನಮಗೆ ಏನು ಹೇಳಿಕೊಟ್ಟಿದ್ದಾರೆಂದರೆ, ವಿಧೇಯಕಗಳ ಬಗ್ಗೆ ಯಾವುದೇ ಬಗೆಯ ಚರ್ಚೆ ಇಲ್ಲ. ಮೊದಲು ಅದನ್ನು ಪಾಸ್ ಮಾಡಬೇಕೆಂದು ಹೇಳಿಕೊಟ್ಟಿರುವುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಇದ್ದಾಗ ಐದು ವಿಧೇಯಕಗಳು ಬಂದಿಲ್ಲ. ನಾವು ಐದಾರು ವಿಧೇಯಕಗಳನ್ನು ತಂದಿದ್ದೇವೆ. ಒಂದೊಂದು ಅಧಿವೇಶನದಲ್ಲಿ ಗರಿಷ್ಟ ಎಂದರೆ ಹತ್ತು ವಿಧೇಯಕಗಳು ಇರಬಹುದು. ಅದರ ಹಾಗೆ 32 ವಿಧೇಯಕಗಳನ್ನು ತಂದಿಲ್ಲ. ಈಗ ಐವತ್ತು ವಿಧೇಯಕಗಳು ಇದ್ದಾಗ ಕಾಣುತ್ತಿವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇವುಗಳನ್ನು ಕೋವಿಡ್ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತಾಸಕ್ತಿಗೋಸ್ಕರ ತಂದಿರುವುದು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮಗೆ ಮಾನ್ಯ ಸಭಾನಾಯಕರ ಬಗ್ಗೆ ಗೌರವವಿದೆ. ನಾವು ವಿಧೇಯಕಗಳನ್ನು ಪಾಸ್ ಮಾಡಿಕೊಡುತ್ತೇವೆ.

**(ಗೊಂದಲ)**

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಈಗ ವಿಧೇಯಕವನ್ನು ತೆಗೆದುಕೊಂಡು. ನಂತರ ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ಬಗ್ಗೆ ತೆಗೆದುಕೊಳ್ಳಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಒಂದು ವಿಷಯವನ್ನು ತೆಗೆದುಕೊಳ್ಳಿ. ಏಕೆಂದರೆ, ಅವರು ಸದನದ ಹಿರಿಯ ಸದಸ್ಯರು. ಆ ನಂತರ ಒಂದನ್ನು ತೆಗೆದುಕೊಳ್ಳೋಣ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಮಾನ್ಯ ಮರಿತಿಬ್ಬೇಗೌಡರು ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಅದರ ನಂತರ ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಬಗ್ಗೆ ಚರ್ಚೆ ಮಾಡಬೇಕು. ಇನ್ನು ಶಿಕ್ಷಣ ಕ್ಷೇತ್ರದಲ್ಲಿ ಚರ್ಚೆ ಆಗಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ವಿಧೇಯಕವನ್ನು ಪಾಸ್ ಮಾಡಬಾರದು ಎಂದು division ಗೆ ಕೇಳುತ್ತಿದ್ದೇವೆ. I would have pressed for division. We have got a very good majority.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದನ ಇಲ್ಲಿಯವರೆಗೆ ನಡೆದುಕೊಂಡು ಬಂದಿರುವುದು ವಿಧೇಯಕವನ್ನು ಪಾಸ್ ಮಾಡುವುದಕ್ಕೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, division ಗೆ press ಮಾಡಿ, ಅಥವಾ Joint Select Committee ಮಾಡಿ ಎಂದು ಹೇಳುತ್ತಿದ್ದೆವು. ನಾವು ಮೂರು ದಿನದಿಂದ ಕೋ-ಆಪರೇಟ್ ಮಾಡಿದ್ದೇವೆ. ನಾವು ಇಷ್ಟೆಲ್ಲಾ majority ಇದ್ದರು ಸಹ ಅವರಿಗೆ ಕೋ-ಆಪರೇಟ್ ಮಾಡಿದ್ದೇವೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲರಿಗೂ ಕೋ-ಆಪರೇಟ್ ಮಾಡುತ್ತಿದ್ದಾರೆ. ಆದರೆ, ನನಗೆ ಕೋ-ಆಪರೇಟ್ ಮಾಡುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮಗೆ ಅವರ ವಿಧೇಯಕ ಚರ್ಚೆಗೆ ತೆಗೆದುಕೊಳ್ಳಬಾರದು ಎಂದು ಏನಿಲ್ಲ. ಅವರ ವಿಧೇಯಕವೇ ಮೊದಲು ಚರ್ಚೆಗೆ ತೆಗೆದುಕೊಳ್ಳಬೇಕಿತ್ತು.

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ರಾತ್ರಿ ಹತ್ತು ಗಂಟೆಯಾದರೂ ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ವಿಚಾರಗಳು ಏನೆಂದು ನಾವು ಸ್ವಲ್ಪ ತಿಳಿದುಕೊಳ್ಳಬೇಕು. ಅದಕ್ಕೆ ಅವರು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ರಾತ್ರಿ ಎರಡು ಗಂಟೆಗೆ ಅಲ್ಲಿಗೆ ಹೋಗಿರಲಿಲ್ಲವೆಂದರೆ ನಾವು ಈ ವಿಚಾರವನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಇದು ತುಂಬಾ ಗಂಭೀರವಾದ ವಿಚಾರ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ವಿಧೇಯಕವನ್ನು ಪಾಸ್ ಮಾಡಿ ಕೊಡುತ್ತೇವೆ. ಈ ವಿಷಯ ಪ್ರಸ್ತಾಪ ಮಾಡುವುದಕ್ಕೆ ಬೆಳಗಿನಿಂದ ಎಲ್ಲಾ ಮಾನ್ಯ ಸದಸ್ಯರು ಕುಳಿತುಕೊಂಡಿದ್ದಾರೆ. ಮೊದಲು ಇವುಗಳನ್ನು ತೆಗೆದುಕೊಳ್ಳಿ. ಎಷ್ಟು ಹೊತ್ತಾದರೂ ಸರಿ ವಿಧೇಯಕಗಳನ್ನು ಪಾಸ್ ಮಾಡಿಕೊಡುತ್ತೇವೆ. ಅವರು ನಮಗೆ ಏಕೆ ತೊಂದರೆ ಕೊಡುತ್ತಾರೆ?

**(925) 26.09.2020 06.20 LL-RN**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):–**

ವಿಧೇಯಕವನ್ನು ಈಗಲೇ ಯಾವ ಕಾರಣಕ್ಕೆ ತೆಗೆದುಕೊಳ್ಳಬೇಕು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ವಿಧೇಯಕಗಳನ್ನು ತೆಗೆದುಕೊಳ್ಳುವುದಕ್ಕೆ ಯಾವ ಕಾರಣವೂ ಇಲ್ಲ. ಮಾನ್ಯ ಹೊರಟ್ಟಿಯವರು ನಮಗೆ ಯಾವುದೇ ಸದನದಲ್ಲಿ ವಿಧೇಯಕಕ್ಕೆ ಪ್ರಾಶಸ್ತ್ಯ ಕೊಡಬೇಕೆಂದು ಹೇಳಿ ಕೊಟ್ಟಿದ್ದಾರೆ. ಈಗ ಆ ಸ್ಥಾನದಲ್ಲಿ ನಿಂತು ಆ ರೀತಿ ಮಾತನಾಡಬಾರದು.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ಯಾವ ವಿಷಯ ತೆಗೆದುಕೊಳ್ಳಬೇಕೆಂಬ ಬಗ್ಗೆ ಸದನದ ಅಭಿಪ್ರಾಯ ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರ ವಿಧೇಯಕ ಮುಕ್ತಾಯವಾದ ನಂತರ ನಿಯಮ 330 ಅನ್ನು ತೆಗೆದುಕೊಳ್ಳಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಶ್ರೀ ಮರಿತಿಬ್ಬೇಗೌಡರವರ ವಿಷಯ ಮುಕ್ತಾಯವಾದ ನಂತರ ಕೆ.ಜಿ. ಹಳ್ಳಿ ವಿಷಯ ತೆಗೆದುಕೊಳ್ಳಿ. ನಾನು ಬೇಕಾದರೆ ಆಮೇಲೆ ಮಾತನಾಡುತ್ತೇನೆ. This subject is very important.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಈಗಾಗಲೇ 32 ಬಿಲ್ ಪಾಸ್ ಮಾಡಿಕೊಟ್ಟಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮೊದಲು ಬಿಲ್ ಪಾಸ್ ಮಾಡಿಕೊಡಲಿ. ನಂತರ, ಎಷ್ಟು ಹೊತ್ತು ಬೇಕಾದರೂ ಚರ್ಚೆ ಮಾಡಬಹುದಾಗಿದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮರಿತಿಬ್ಬೇಗೌಡರವರು 3 ಬಾರಿ ಎದ್ದು ನಿಂತು ಭಾಷಣ ಮಾಡಿ ಸುಮ್ಮನೆ ಕುಳಿತುಕೊಂಡಿರುತ್ತಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರ ವಿಷಯ ತೆಗೆದುಕೊಳ್ಳೋಣ. ಆದರೆ, ಮೊದಲು ವಿಧೇಯಕವನ್ನು ತೆಗೆದುಕೊಳ್ಳೋಣ. ವಿರೋಧ ಪಕ್ಷದವರು ಏತಕ್ಕೆ ಹೀಗೆ ಮಾಡುತ್ತಿದ್ದಾರೆ?

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರ ವಿಷಯ ಮುಗಿದ ತರುವಾಯ ಕೆ.ಜಿ. ಹಳ್ಳಿ ಮತ್ತು ಡಿ.ಜೆ. ಹಳ್ಳಿ ವಿಷಯ ತೆಗೆದುಕೊಳ್ಳಿ. ಸಭಾನಾಯಕರೇ, ನಾವು ತಮಗೆ ಸಾಕಷ್ಟು ಸಹಕಾರ ಕೊಟ್ಟಿದ್ದೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಮಾನ್ಯ ಹೊರಟ್ಟಿಯವರು ವಿಧೇಯಕಕ್ಕೆ ಮೊದಲು ಪ್ರಾಶಸ್ತ್ಯವನ್ನು ಕೊಡಬೇಕೆಂದು ಹೇಳಿ, ಈಗ ಈ ರೀತಿ ಮಾತನಾಡಿದರೆ ಹೇಗೆ?

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(926) 26-09-2020/ 07-00/ ಕೆಹೆಚ್-ಜಿಆರ್**

**(ಸಂಜೆ 06 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ರಾತ್ರಿ 7 ಗಂಟೆಗೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**14.ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ:26-09-2020 ರಂದು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

**15. ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಅ) ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿ ವಿಧೇಯಕ ಪರಿಸರವನ್ನು ಕಾಪಾಡುವಂತಹ ದೃಷ್ಟಿಯಿಂದ ಮಾಡಿದ್ದೇವೆ. ಈ ಬ್ಯಾಟರಿ ಆಧಾರಿತವಾಗಿ ವಿದ್ಯುತ್ ವಾಹನಗಳಿಂದ ಯಾರು ಫ್ಯಾಕ್ಟರಿಗಳನ್ನು ನಡೆಸುತ್ತಾರೆ ಮತ್ತು ಪರಿಸರವನ್ನು ಕಾಪಾಡುವಂತಹ ದೃಷ್ಟಿಯಿಂದ ಕೈಗಾರಿಕೆಗಳನ್ನು ಯಾರು ಸ್ಥಾಪನೆ ಮಾಡುತ್ತಾರೆ. ಅದಕ್ಕೋಸ್ಕರ ಇದನ್ನು ಖರೀದಿ ಮಾಡುವಂತಹ ಸಂದರ್ಭದಲ್ಲಿ ಅವರಿಗೆ ಶೇಕಡಾ 100 ರಷ್ಟು Stamp duty exemption ಅನ್ನು ಕೊಡಬೇಕೆನ್ನುವುದು. ಈ ತಿದ್ದುಪಡಿ ವಿಧೇಯಕವನ್ನು ಏನು ಮಾಡಿದ್ದೇವೆ. ಬ್ಯಾಟರಿ ಆಧಾರಿತ ಬಸ್ಸುಗಳಿಗೆ ಆ ರೀತಿಗೆ ವಿನಾಯಿತಿ ಕೊಡುವುದು. ಆ ದೃಷ್ಟಿಯಿಂದ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020 ನೇ ಸಾಲಿನ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಪ್ರಮುಖವಾಗಿ ಈ ವಿಧೇಯಕ 'ಬಿ' ಖರಾಬುಗೆ ಸಂಬಂಧಪಟ್ಟ ವಿಚಾರವಾಗಿದೆ. 'ಬಿ' ಖರಾಬು ಎನ್ನುವ ಭೂಮಿಗಳನ್ನು ನಾವು educational institutions ಗಳಿಗೆ ಮತ್ತು ಫ್ಯಾಕ್ಟರಿಗಳಿಗೆ, ಮಠ–ಮಂದಿರಗಳಿಗೆ ಕೊಟ್ಟಿರುತ್ತೇವೆ. ಆ ಜಾಗ ಖರಾಬು ಇರುತ್ತದೆ. ಇನ್ಫೋಸಿಸ್‌ಗೆ ಸಾವಿರಾರು ಎಕರೆ ಜಮೀನನ್ನು ಕೊಟ್ಟಿದ್ದೇವೆ. 2 ಗುಂಟೆ, 5 ಗುಂಟೆ ಅಥವಾ 10 ಗುಂಟೆ ಜಮೀನು ಮಧ್ಯ ಮಧ್ಯ ಹಾಗೆಯೇ ಇರುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ನಾವು ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಅಪ್ರೋಚ್ ರೋಡ್ ಇರುವುದಿಲ್ಲ. ಅದಕ್ಕೆ landlock ಎಂದು ಹೇಳುತ್ತಾರೆ. ಈ ರೀತಿಯ ಬಹಳಷ್ಟು ಜಮೀನುಗಳು ರೈತರ ಜಮೀನುಗಳ ಮಧ್ಯಯೂ ಕೂಡ ಉಳಿದುಕೊಂಡಿದೆ. ಅದ್ದರಿಂದ, ಆ ರೀತಿಯ ಯಾವ ಜಮೀನುಗಳು landlock ಆಗಿದೆ. ಆ ಜಮೀನಿಗೆ ಯಾರು ಹೋಗುವುದಕ್ಕೆ ಸಾಧ್ಯ ಇಲ್ಲವೋ, ಅಂತಹ ಜಮೀನುಗಳನ್ನು Stamp Duty i.e., guidance value ಏನಿದೆ, ಅದಕ್ಕಿಂತ ಇಮ್ಮಡಿ ದುಡ್ಡನ್ನು ಕೊಟ್ಟರೆ, ಯಾರ ಖಾತೆಯಲ್ಲಿ ಇರುತ್ತದೋ, ಯಾರು ಜಮೀನಿನ ಮಾಲೀಕ ಮತ್ತು ರೈತ ಇರುತ್ತಾನೆ. ಇದನ್ನು ಅವನಿಗೆ ಕೊಡುವಂತಹದ್ದು. ಈಗ ಈ ಜಮೀನು ಉಪಯೋಗಕ್ಕೆ ಬಾರದಿರುವ ಸ್ಥಿತಿಯಲ್ಲಿದೆ. ಬೆಂಗಳೂರು ನಗರ ಪ್ರದೇಶಗಳಲ್ಲಿ ಈ ರೀತಿಯ ಜಮೀನು ಹಾಗೆಯೇ ಇದೆ. ಆದ್ದರಿಂದ, ಇದು ಯಾರಿಗೆ ಉಪಯೋಗ ಆಗುತ್ತಿಲ್ಲ. ಇದ್ದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಆದಾಯವೂ ಬರುತ್ತಿಲ್ಲ. ಇದ್ದರಿಂದ ನಾವು ಸರ್ಕಾರಿ ಜಮೀನುಗಳಿಗೆ ಹೋಗುವುದಕ್ಕೂ ಮತ್ತು ಉಪಯೋಗ ಮಾಡುವುದಕ್ಕೂ ಆಗದೇ ಇರುವಂತಹ ಸ್ಥಿತಿ ಇದೆ. ವಿಧಾನಸಭೆಯಲ್ಲಿಯೂ ಕೂಡ ಇದರ ಬಗ್ಗೆ appreciation ಆಗಿದೆ. ಈ ವಿಧೇಯಕ ಬಹಳ ಒಳ್ಳೆಯ ವಿಧೇಯಕ ಎಂದು ವಿಧಾನಸಭೆಯಲ್ಲಿಯೂ ಅನುಮೋದನೆ ಮಾಡಿದ್ದಾರೆ. ಆದ್ದರಿಂದ, ಈ ವಿಧೇಯಕವನ್ನು ತಮ್ಮ ಮುಂದೆ ತರುತ್ತಿದ್ದೇನೆ.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, landlock ಎಂದು ನಿರ್ದಿಷ್ಟಪಡಿಸಲಾಗಿದೆ. ಕೆಲವು landlock ಇರುವುದೇ ಇಲ್ಲ. 'ಬಿ' ಖರಾಬು ಜಮೀನುಗಳು ಇರುತ್ತವೆ. ಆ ರೀತಿಯ ಜಮೀನುಗಳಿಗೆ ತಾವು ಏನು ಮಾಡುತ್ತೀರಿ?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಆ ರೀತಿಯ ಜಮೀನುಗಳನ್ನು ಮಾಡುವುದಿಲ್ಲ, ಯಾವ ಜಮೀನುಗಳಿಗೆ ಅಪ್ರೋಚ್ ಇರುತ್ತದೆ. ನಮ್ಮ ಹತ್ತಿರ 5 ಎಕರೆ ಜಮೀನು ಇದ್ದು, ಕೊನೆಯಲ್ಲಿ 'ಬಿ' ಖರಾಬು ಬಂದರೆ ಅದಕ್ಕೆ ಸರ್ಕಾರದ ದಾರಿ ಇದ್ದರೆ ಅದನ್ನು ನಾವು ಕೊಡುವುದಿಲ್ಲ.

**ಶ್ರೀ ಮಾನೆ ಶ್ರೀನಿವಾಸ್–** ಮಾನ್ಯ ಸಭಾಪತಿಯವರೇ, ಧಾರವಾಡ ಜಿಲ್ಲೆಯಲ್ಲಿ ನೂರಾರು ಎಕರೆ 'ಬಿ' ಖರಾಬು ಜಮೀನುಗಳಿವೆ. ಈ ಜಮೀನುಗಳಿಂದ ಮಾಲೀಕರಿಗೆ ಯಾವುದೇ ಉಪಯೋಗವಿಲ್ಲ. ಇದನ್ನು ಸರ್ಕಾರಿ ಖರಾಬು ಜಮೀನು ಎಂದು ತಾವು ಹೇಳುತ್ತೀರಿ. ಈ ಜಮೀನನ್ನು ಯಾವುದಾದರೂ ಉದ್ದೇಶಕ್ಕೆ ಉಪಯೋಗ ಮಾಡಬೇಕಲ್ಲವೇ? Atleast, ತಾವು landless or homeless ಜನಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡುವುದಕ್ಕೆ Development Authority or

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Housing Board ಗೆ ಕೊಟ್ಟು, ಏನಾದರೂ ಒಂದು ಅಭಿವೃದ್ಧಿಯನ್ನು ಮಾಡಬೇಕಲ್ಲವೇ, ಎಲ್ಲಾ ರೀತಿಯ ಜಮೀನುಗಳು ಅಭಿವೃದ್ಧಿ ಪ್ರದೇಶದಲ್ಲಿಯೇ 'ಬಿ' ಖರಾಬು ಜಮೀನು ಸಾಕಷ್ಟಿವೆ. ಇವತ್ತಿನ ದಿವಸ ಎಷ್ಟೋ ಜನರಿಗೆ ನಿವೇಶನ ಇಲ್ಲ. ಬಾಡಿಗೆ ಮನೆಯಲ್ಲಿ ವಾಸ ಇದ್ದಾರೆ. ಸರ್ಕಾರದಿಂದ ಕಡಿಮೆ ದರದಲ್ಲಿ ಸ್ಕೀಮ್ ಅನ್ನು ಮಾಡಿಕೊಡಬಹುದಲ್ಲವೇ. ಈ ರೀತಿಯ ಜಮೀನನ್ನು ಸರ್ಕಾರದ ವಶಕ್ಕೂ ತೆಗೆದುಕೊಳ್ಳುತ್ತಿಲ್ಲ. ಮಾಲೀಕರು ಉಪಯೋಗ ಮಾಡುವುದಕ್ಕೆ ತಾವು ಬಿಡುತ್ತಿಲ್ಲ. ಸುಮ್ಮನೆ ಈ ಜಮೀನುಗಳು ಹಾಳಾಗುತ್ತಿವೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, 'ಬಿ' ಖರಾಬು ಜಮೀನನ್ನು regularise ಮಾಡಬೇಕು. ಈ ಜಮೀನುಗಳನ್ನು ಎಲ್ಲೆಲ್ಲಿ ಹಂಚಿಕೆ ಮಾಡಲಾಗಿದೆಯೋ, ಅದರಲ್ಲಿ ಇದೆ ಎಂದು ತಾವು ಹೇಳುತ್ತಿರುವುದು.

**ಶ್ರೀ ಎಸ್.ಆರ್.ಪಾಟೀಲ್ (ಮಾನ್ಯ ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದರಿ ಭೂಮಿಯು non-cultivable ಇದ್ದರೆ ಅದನ್ನು cultivable ಮಾಡಿ utilise ಮಾಡುವುದಕ್ಕೆ ಸಮಾಜಾಯಿಷಿ ಕೊಟ್ಟು ದಾಖಲೆಯಲ್ಲಿ entry ಮಾಡಿಕೊಳ್ಳಬಹುದು. Actually, 'B' kharab land belongs to the Government. ವಾಸ್ತವವಾಗಿ 'ಬಿ' ಖರಾಬು ಜಮೀನು ಸರ್ಕಾರದ ಆಸ್ತಿಯಾಗಿದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈಗ phut kharab is also 'B' kharab land. 'Gundu kharab' is also 'B' kharab land. ಈ ರೀತಿಯ classifications ಖರಾಬುನಲ್ಲಿ ಬೇಕಾದಷ್ಟು ಇದೆ. ತಾವು ಈಗ ಇಲ್ಲಿ ಪ್ರಸ್ತಾಪವನ್ನು ತಂದಿರುವುದೇನೆಂದರೆ, " Provided further that, Land locked Government Kharab land in city areas and upto 18 kilometre from the limits of the Bruhat Bengaluru Mahanagarapalike, upto 5 kilometre from the limits of other city corporations after extinguishment of public right under Section 68, may be disposed off by the Government, in such manner, at such rates as may be prescribed but not less than the market value guidelines prevailing." ನಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಂಗಳೂರು ನಗರಕ್ಕೆ 18 ಕಿ.ಮೀ ಗಳನ್ನು ಕೊಟ್ಟಿದ್ದಾರೆ. ಬೇರೆ ನಗರಕ್ಕೆ 5 ಕಿ.ಮೀ. ಅನ್ನು ಕೊಟ್ಟಿದ್ದಾರೆ. ಇದರಲ್ಲಿ ಏನಾಗುತ್ತದೆ ಎಂದರೆ, ಮುಂದಿನ ದಿನಗಳಲ್ಲಿ ತಮ್ಮ ಕ್ಷೇತ್ರದಲ್ಲಿಯೇ ಒಂದು ಖರಾಬು ಎಂದು ಒಂದು ಬೆಟ್ಟ ಇತ್ತು. ಟಾಟಾರವರ ಹೆಸರಿನಲ್ಲಿ ಅವರು ತೆಗೆದುಕೊಳ್ಳಲಿಲ್ಲ.

**(ಮುಂದು)**

**(927)/26–9–2020/ಎಲ್‌ಎಂ/ಜಿಆರ್/7–10**

**ಶ್ರೀ ಪಿ.ಆರ್.ರಮೇಶ್**(ಮುಂದು):–

ಟಾಟಾರವರ ಹೆಸರಿನಲ್ಲಿ ಬೇರೆ ಯಾರೊ third party ತೆಗೆದುಕೊಂಡರು. ಅದರು ಬಹಳ ಕಡಿಮೆ ಬೆಲೆಗೆ ತೆಗೆದುಕೊಂಡರು. ನಮಗೆ ಚೆನ್ನಾಗಿ ಗೊತ್ತಿದೆ ಬಹಳ ಕಡಿಮೆ ಎಂದರೆ pro rata ನಲ್ಲಿ ಬೆಟ್ಟವನ್ನು ತೆಗೆದುಕೊಂಡರು. ಅದು ಪೂರ್ತಿ ಖರಾಬ್, it's a total 'B' Kharab. ಅಲ್ಲಿ ಇವತ್ತು ದೊಡ್ಡ ಬಿಸಿನೆಸ್ ಮಾಡಿಕೊಂಡು ಸಾವಿರ ಕೋಟಿ ರೂಗಳ ಲಾಭವನ್ನು ಪಡೆಯುವಂತಾಗಿದೆ. ಇವತ್ತು ಈ ಬಿಲ್ ತರುವುದರಿಂದ ಮುಂದೆ ಖರಾಬ್ ಜಮೀನಿಗೆ flood gate open ಮಾಡಿದ ಹಾಗೆ ಆಗುತ್ತದೆ. ಬೆಂಗಳೂರು ಸುತ್ತ–ಮುತ್ತ ಇರುವ ಖರಾಬ್ ಭೂಮಿಯನ್ನು ತೆಗೆದುಕೊಳ್ಳಲು ಗೇಟ್ ಓಪನ್ ಮಾಡಿ ಕೊಟ್ಟಹಾಗೆ ಇದೆ.

**ಶ್ರೀ ಆರ್.ಅಶೋಕ(ಕಂದಾಯ ಸಚಿವರು)**:– ಮಾನ್ಯ ಸಭಾಪತಿಗಳೆ, ಮಾನ್ಯ ರಮೇಶ್ ರವರೆ ಹಿಂದೆ ನಿಮ್ಮ ಸರ್ಕಾರ ಮಾಡಿರುವ ರೂಲ್ಸ್‌ನಲ್ಲಿ ಕೊಡಬೇಕೆಂದು ಇದೆ. ಆದರೆ ಕಾಯಿದೆ ರೂಪದಲ್ಲಿ ಇರಲಿಲ್ಲ. ಇವತ್ತು ಇದನ್ನು ನಾನು ಕಾಯಿದೆ ರೂಪದಲ್ಲಿ ತರುತ್ತಿದ್ದೇನೆ. ತಾವು ಹೇಳಿರುವುದನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಆ ಖರಾಬ್ ಬೇರೆ. ಅಲ್ಲಿ landlock ಇರಬೇಕು, ಅದು prove ಆಗಬೇಕು. ಅದನ್ನು ಮಹಜರ್ ಮಾಡಬೇಕು, ಅದಕ್ಕೆ 30 ದಿನ ಸಮಯವನ್ನು ಕೊಡಲಾಗುತ್ತದೆ. ಸಾರ್ವಜನಿಕರು ಯಾರಾದರೂ ಇಲ್ಲಿ ರಸ್ತೆ ಹೋಗಲು ಆಗುವುದಿಲ್ಲ ಇತ್ಯಾದಿ ದೂರುಗಳನ್ನು ತಹಸೀಲ್ದಾರರಿಗೆ ಕೊಟ್ಟರೆ ಅದನ್ನು ಕೊಡಲು ಕಾನೂನಿನಲ್ಲಿಯೇ ಅವಕಾಶವಿಲ್ಲ. ಸುತ್ತ ರೈತನ ಜಮೀನು ಇರಬೇಕು, landlock ಇರಬೇಕು, 5 ಎಕರೆ ಜಮೀನಲ್ಲಿ ಮಧ್ಯೆ ಎರಡು ಗುಂಟೆ ಖರಾಬ್ ಜಮೀನು ಇದ್ದರೆ ಏನು ಮಾಡಲು ಆಗುವುದಿಲ್ಲ. ಅದನ್ನು ಅವನು ಕೊಡುವುದರಿಂದ ನಮಗೆ ಡಬಲ್ ಬೆಲೆ ಬರುತ್ತದೆ. ಸರ್ಕಾರಕ್ಕೆ ಆದಾಯ ಬರುತ್ತದೆ. ಹಿಂದೆ ಯಾವುದೊ ಸಂಸ್ಥೆಗೆ, ಮಠ–ಮಂದಿರಗಳಿಗೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೊ ಕಾಲೇಜಿಗೆ ಈ ತರಹ ಜಮೀನನ್ನ 10%, 20% ಗೆಲ್ಲಾ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಮಾಡಿ ಕೊಡಲಾಗಿದೆ. ಈ ಕಾಯಿದೆ ಬಂದರೆ ಇಂತಹ ಜಮೀನಿಗೆ double the guidance value ಕೊಡಬೇಕಾಗುತ್ತದೆ. ಇನ್ನು ಕೆಲವು ಸದಸ್ಯರು ಖರಾಬ್ ಜಮೀನು 20-30 ಎಕರೆ ಇರುತ್ತದೆ ಅದನ್ನು ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. 'ಬಿ' ಖರಾಬ್‌ನ್ನು 94(ಸಿಸಿ) ಅಡಿಯಲ್ಲಿ ಯಾರ‍್ಯಾರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಅದನ್ನು ಸ್ಮಶಾನ, ಸರ್ಕಾರಿ ಸಂಸ್ಥೆಗಳಿಗೆ ಕೊಡಲು ಸರ್ಕಾರಕ್ಕೆ ಅಧಿಕಾರವಿದೆ. ಇದನ್ನು ಕ್ಯಾಬಿನೆಟ್‌ಗೆ ತಂದು ಕೊಡಬೇಕಾಗುತ್ತದೆ. ಆ ರೀತಿ ವಿಚಾರ ಬಂದಾಗ ಅದನ್ನು ನಾವು ಮಾಡುತ್ತೇವೆ.

**ಶ್ರೀ ಮಾನೆ ಶ್ರೀನಿವಾಸ:-** ಧಾರವಾಡ ಜಿಲ್ಲೆಯಲ್ಲಿ ಈ ರೀತಿಯ ಜಮೀನು ಸಾಕಷ್ಟು ಇವೆ. ಆ ಜಿಲ್ಲೆಯಿಂದ ಅದರ ಮಾಹಿತಿಯನ್ನು ಸರ್ಕಾರ ತರಿಸಿಕೊಂಡು ಉಪಯೋಗ ತೆಗೆದುಕೊಳ್ಳಬೇಕು.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಗಳೆ, ನಾನು ನನ್ನ ಲೋಕಸಭಾ ಎಲ್ಲಾ ಸದಸ್ಯರಿಗೆ ಪತ್ರವನ್ನು ಬರೆಯುತ್ತಿದ್ದೇನೆ, ನಾನು ಯಾವುದೆ ಜಿಲ್ಲೆಗೆ ಹೋಗಲಿ District Review Meeting ಮಾಡುವಾಗ ನನ್ನ ಮೊದಲು ವಿಷಯವೆ ಹಳ್ಳಿಗಳಲ್ಲಿ ಸ್ಮಶಾನಗಳು ಇವೆಯೇ ಎನ್ನುವುದು. ಇನ್ನು ಮುಂದೆ 94(ಸಿ) ನಲ್ಲಿ ಬಡವರಿಗೆ ಕೊಡಲು ಸೈಟ್‌ಗಳನ್ನು ಮಾಡುತ್ತಾರೆ, ಮೊದಲು ಅಲ್ಲಿ ಸ್ಮಶಾನಕ್ಕೆ, ಶಾಲೆಗಳಿಗೆ ಜಮೀನನ್ನು ಮೀಸಲಿಡಬೇಕು, ಉಳಿದ ಜಮೀನನ್ನು ಕೊಡಬೇಕು ಎಂದು ಆದೇಶ ಹೊರಡಿಸುತ್ತೇನೆ ಎಂದು ಮೊನ್ನೆ ವಿಧಾನಸಭೆಯಲ್ಲಿ ಹೇಳಿದ್ದೇನೆ. ಸುಮಾರು 200-300 ಹಳ್ಳಿಗಳಲಿ ಸ್ಮಶಾನಗಳೇ ಇಲ್ಲ, ರಾಜಕಾಲುವೆಗಳು ಅಥವಾ ನದಿಗಳ ಪಕ್ಕದಲ್ಲಿ ಅಂತ್ಯಕ್ರಿಯೆ ಮಾಡುತ್ತಾರೆ. ಸ್ಮಶಾನ ಇಲ್ಲದಿರುವುದರಿಂದ ತುಂಬಾ ಸಮಸ್ಯೆಗಳು ಇವೆ. ಆದ್ದರಿಂದ ಮನೆಗಳನ್ನು, ಸೈಟ್‌ಗಳನ್ನು ಕೊಟ್ಟರೆ ತೆಗೆದುಕೊಂಡು ಹೋಗಿ ಬಿಡುತ್ತಾರೆ. ಆದರೆ ಊರಿಗೆ ಮೊದಲು ಸ್ಮಶಾನ ಇರಬೇಕು ಎನ್ನುವುದು ನಮ್ಮ ಉದ್ದೇಶ. ಆ ದೃಷ್ಟಿಯಿಂದ ನಾವು ಕೆಲಸವನ್ನು ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಮೊನ್ನೆ ದಿವಸ ನಮ್ಮ ಜಿಲ್ಲೆಯಲ್ಲಿ ಒಂದು ಹಳ್ಳಿಯಲ್ಲಿ ಖಬ್ರಸ್ತಾನ ಇಲ್ಲದೆ ಇರುವುದರಿಂದ ಹೆಣವನ್ನು ತಂದು ಜಿಲ್ಲಾಧಿಕಾರಿಗಳ ಕಛೇರಿ ಮುಂದೆಯೇ ಇಟ್ಟುಬಿಟ್ಟರು, ಎಲ್ಲಿ ಹೂಗ್ಗಿಬೇಕು ಹೇಳಿ, ಇಲ್ಲದಿದ್ದರೆ ಇಲ್ಲೇ ಹೂಗ್ಗಿಯುತ್ತೇವೆ ಎಂದು ಗಲಾಟೆ ಮಾಡಿದರು. ಇಂತಹ ಪರಿಸ್ಥಿತಿ ಇವತ್ತು. ಈಗ landlock ಇರುವ 'ಬಿ' ಖರಾಬ್ ಎಂದು ಹೇಳುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಮ್ಮ ಜಿಲ್ಲೆಯಲ್ಲಿ 300-400 ಎಕರೆ 'ಬಿ'

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಖರಾಬ್ ಲ್ಯಾಂಡ್ ಇದೆ. 'ಬಿ' ಖರಾಬ್ ಎಂದರೆ ಅದಕ್ಕೆ assessment ಇಲ್ಲ. When there is no assessment, it will be treated as 'B' Kharab land, in my opinion. ಮಾಲೀಕರ ಹೆಸರು ಇದೆ. ಆದರೆ ಅದಕ್ಕೆ assessment ಇಲ್ಲ. it will be treated as 'B' Kharab. ಅದನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲ. ಅಂತಹ ಜಮೀನನ್ನು ಮಾಲೀಕರಿಗೆ ಕೊಡಬೇಕೆಂದು ಸರ್ಕಾರ ನಿರ್ಣಯ ಮಾಡಿದೆ, 10 ಎಕರೆ ಜಮೀನಿನಲ್ಲಿ 5 ಗುಂಟೆ 'ಬಿ' ಖರಾಬ್ ಜಮೀನು ಇದೆ ಎಂದು ತಿಳಿದುಕೊಳ್ಳಿ, ಅದಕ್ಕೆ double the guidance value ಕೊಟ್ಟು ಮಾಲೀಕನಾಗಬಹುದು. ಸರ್ಕಾರದ ಕೆಲವೊಂದು ಹಳ್ಳಗಳು, ನಾಲಾಗಳು ಇರುತ್ತವೆ, 'ಬಿ' ಖರಾಬ್ ಜಮೀನನ್ನು ಖರೀದಿ ಮಾಡಿದವರು ಈ ನಾಲಾ, ಹಳ್ಳಗಳನ್ನೆ ಬಂದ್ ಮಾಡಿಬಿಡುತ್ತಾರೆ. ನನ್ನ ಜಮೀನಿನಲ್ಲಿ ಒಂದು ನಾಲಾ ಹಾಯ್ದು ಹೋಗಿದೆ, ಅದಕ್ಕೆ ಬರಲು ಜಾಗವಿಲ್ಲ, there is no access to that point ಎಂದಿಟ್ಟುಕೊಳ್ಳಿ. ಒಂದು ಜಮೀನಿನಲ್ಲಿ 30-40 ಗುಂಟೆ ನಾಲಾ ಹಾಯ್ದುಹೋಗಿರುತ್ತದೆ, ಈ ಕಾನೂನಿನ ಪ್ರಕಾರ ಅವರು ನಾಲಾ ಖರೀದಿ ಮಾಡುತ್ತಾರೆ. ನಂತರ ಅವರು ನಾಲಾಕ್ಕೆ ಮಣ್ಣು ಹಾಕಿ ಮುಚ್ಚಿ ಹೋಗುವಂತೆ ಮಾಡುತ್ತಾರೆ ಆಗ ಏನು ಮಾಡುತ್ತೀರಿ ? It is my apprehension. Please clarify that point.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಗಳೆ, ಈ ಕಾಯಿದೆ ವ್ಯಾಪ್ತಿಯಲ್ಲಿ ನಾಲಾಗಳು ಬರುವುದಿಲ್ಲ. ಅದನ್ನು ಬಿಡಲಾಗಿದೆ. It is exempted. ನಾಲಾ ಇರಬಹುದು, ಕೆರೆ ಇರಬಹುದು, ಗುಂಟೆ ಇರಬಹುದು ಇವೆಲ್ಲ ಸಾರ್ವಜನಿಕರ ಉಪಯೋಗಕ್ಕಾಗಿ ಇರುವಂತಹದ್ದು. ನದಿ ಹರಿಯುತ್ತಾ ಎಲ್ಲರ ಹೊಲಗಳಲ್ಲಿ ಹರಿದುಕ್ಕೊಂಡು ಹೋಗಿರುತ್ತದೆ. ಒಬ್ಬರಿಗೆ ಕೊಟ್ಟರೆ ನದಿಯೇ ಲಾಕ್ ಆಗಿ ಹೋಗುತ್ತದೆ. ಅದಕ್ಕೆ ಲಾಕ್ ಎಂದು ಹೇಳುತ್ತಿರುವುದು. ಅಂದರೆ 'ಬಿ' ಖರಾಬ್ ಜಮೀನು ಸುತ್ತ ತೆಗೆದುಕೊಳ್ಳುವವರ ಜಮೀನೆ ಇರಬೇಕು. ಬೇರೆಯವರ ಜಮೀನಿಗೆ ಇಂದು ಟಚ್ ಕೂಡಾ ಆಗಿರಬಾರದು. ಮಧ್ಯೆದಲ್ಲಿ ಇರಬೇಕು. 10 ಎಕರೆ ಜಮೀನಿನಲ್ಲಿ 10ಗುಂಟೆ 'ಬಿ' ಖರಾಬ್ ಜಮೀನು ಇದ್ದರೆ ಅದು ಮಧ್ಯೆದಲ್ಲಿ ಇರಬೇಕು. ಕಾಲುವೆಗಳು ಎಲ್ಲಾ ಕಡೆ ಹರಿದುಕೊಂಡು ಹೋಗುತ್ತವೆ. ಇದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ. ಮತ್ತು ಈ ರೀತಿ ಕಾನೂನು ಮಾಡುವುದರಿಂದ ಈ ಹಿಂದೆ ಯಾರ್ಯಾರಿಗೊ ಉಚಿತವಾಗಿ ಜಮೀನನ್ನು ಕೊಡಲಾಗುತ್ತಿತ್ತು. ಆದರೆ ಈಗ ಇದೇ ಬೆಲೆಯಲ್ಲಿ ಕೊಡಬೇಕೆಂದು ಮಾಡಲಾಗಿದೆ. ಒಳ್ಳೆಯ ಕಾಯಿದೆಯಾಗಿದೆ, ವಿಧಾನಸಭೆಯಲ್ಲಿ ಇದನ್ನು ಸ್ವಾಗತ ಮಾಡಿದ್ದಾರೆ. ಈ ಮನೆಯಲ್ಲಿಯು ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತಗೊಂಡವರು):**-ಮಾನ್ಯ ಸಭಾಪತಿಗಳೆ, 'ಎ' ಖರಾಬ್ ಭೂಮಿಯನ್ನು ಹಸನು ಮಾಡಲು ಆಗುವುದಿಲ್ಲ. 'ಬಿ' ಖರಾಬ್ ಮಾತ್ರ ಮಾಡಲು ಸಾಧ್ಯ ಎಂದು ಹೇಳಿದ್ದೀರಿ. ನನ್ನ ಒಂದೇ ಒಂದು ವಿನಂತಿ ಎಂದರೆ, approach ಇದ್ದರೂ ಕೂಡಾ ಒಂದು viable extent ಹೇಳಿ. Approach ಇದರೂ ಕೂಡಾ 5 ಗುಂಟೆ 10 ಗುಂಟೆ ಇದ್ದರೆ ಅವರಿಗೆ ಕೊಡುವುದು ಒಳ್ಳೆಯದು. 20 ಗುಂಟೆ ಇದ್ದರೆ ಬೇರೆ ಯಾವುದೇ ಸರ್ಕಾರಿ ಸಂಸ್ಥೆಗಳಿಗಾಗಿ ಉಪಯೋಗಿಸುವುದು ಒಳ್ಳೆಯದು. ಏಕೆಂದರೆ approach ಇದೆ ಎಂದರೆ 5 ಗುಂಟೆ 10 ಗುಂಟೆ ರೈತನಿಗೆ ಕೊಡುವುದು ಒಳ್ಳೆಯದು. ಏಕೆಂದರೆ ಅದು viable unit ಆಗುವುದಿಲ್ಲ. ಬೇರೆಯವರಿಗೆ ಕೊಡಲು ಬರುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಗಳೆ, ಅವರ ಜಮೀನಿನಲ್ಲಿ ಲಾಕ್ ಆಗಿದ್ದರೆ ಅರ್ಧ ಎಕರೆ ಇದ್ದರೂ ಕೊಡುತ್ತೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** 5 ಗುಂಟೆ 10 ಗುಂಟೆ ಇದ್ದು approach ಇದ್ದರೆ ರೈತನಿಗೆ ಕೊಡುವುದೆ ಒಳ್ಳೆಯದೆನೊ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಬಾರ್ಡರ್‌ನಲ್ಲಿ 10ಎಕರೆ ಜಮೀನು ಇದ್ದಾಗ ಪಕ್ಕದಲ್ಲಿ 1 ಎಕರೆ 'ಬಿ' ಖರಾಬ್ ಜಮೀನು ಇದ್ದು ಅದನ್ನು ಕೊಟ್ಟರೆ ದೊಡ್ಡ ಅಲಿಗೇಶನ್ ಆಗುತ್ತದೆ. ಅದು ಸಾರ್ವಜನಿಕರಿಗೆ ಉಪಯೋಗವಾಗುತ್ತದೆ. ಅದೇ ಅರ್ಧ ಎಕರೆ ಇದ್ದರೆ ಸ್ಮಶಾನ ಮಾಡಬಹುದು, ಶಾಲೆಗೆ ಕೊಡಬಹುದು, ಅಂಗನವಾಡಿಗೆ ಕೊಡಬಹುದು. ಆದರ ಎಂಟ್ರಿ ಇರಬೇಕು. ಎಂಟ್ರಿ ಪಕ್ಕದಲ್ಲಿರುವುದನ್ನು ಕೊಡಲು ಬರುವುದೇ ಇಲ್ಲ. ಆ ಜಮೀನಿಗೆ ಹೋಗಲು ಸಾಧ್ಯವೆ ಇಲ್ಲ. ಅದನ್ನು ಸರ್ಕಾರ ತನ್ನ ವಶಕ್ಕೂ ತೆಗೆದುಕೊಳ್ಳಲು ಆಗುವುದಿಲ್ಲ ಎಂದಾಗ ಕೊಡಲೇಬೇಕಾಗುತ್ತದೆ. ನಾಲಾಗಳು ಯಾವುದನ್ನು ಮಂಜೂರು ಮಾಡುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಗಳೆ, ಸೊಸೈಟಿಗಳು, ಧಾರ್ಮಿಕ ಸಂಸ್ಥೆ, ಶೈಕ್ಷಣಿಕ ಸಂಸ್ಥೆಗಳ ಜೊತೆಗೆ ಕೃಷಿ ಅಥವಾ ಇತರೆ ಉದ್ದೇಶಗಳಿಗಾಗಿ 15 ವರ್ಷಗಳಿಗಿಂತ ಹೆಚ್ಚಿಗೆ ಗುತ್ತಿಗೆ, ಅಂದರೆ ಗುತ್ತಿಗೆ ನೀಡಿ ಒಂದು ವರ್ಷ ಅಥವಾ ಆರು ತಿಂಗಳಾಗಿರುತ್ತದೆ, ಅಂತವರಿಗೆ ಸಂಪೂರ್ಣವಾಗಿ ಕೊಟ್ಟುಬಿಡುತ್ತೀರಾ, ಇದರ ಎಫೆಕ್ಟ್ ಯಾವಾಗಿನಿಂದ ಆಗುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಗಳೆ, 40-50 ವರ್ಷಗಳಿಂದ ಮಠ-ಮಂದಿರಳಿಗೆ, ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಸಾಕಷ್ಟು ಬಿ ಖರಾಬ್ ಜಮೀನನ್ನು ಕೊಡತ್ತಾ ಬಂದಿದೆ. ಇವತ್ತು ಆ ಜಮೀನು 10ಕೋಟಿ ರೂ.ಗಳ ಬೆಲೆಬಾಳುತ್ತದೆ. ಹಿಂದೆ ಅದನ್ನು ವರ್ಷಕ್ಕೆ 100 ರೂ.ಗಳು ಅಥವಾ 1ಲಕ್ಷ ರೂ.ಗಳನ್ನು ಕಟ್ಟಬೇಕೆಂದು ಕೊಟ್ಟಿರಲಾಗುತ್ತದೆ. ಇದರಿಂದ ಸರ್ಕಾರಕ್ಕೆ ಏನು ಲಾಭವಿಲ್ಲ. ಯಾವುದೊ ಸಂಸ್ಥೆಗೆ ಕೊಟ್ಟಮೇಲೆ ಮತ್ತೆ ಹಿಂದಕ್ಕೆ ಪಡೆಯಲು ಆಗುವುದಿಲ್ಲ. ಏಕೆಂದರೆ ಅವರು ಆ ಜಮೀನಿನ್ನಲ್ಲಿ ಕಟ್ಟಡ ಕಟ್ಟಿರುತ್ತಾರೆ, ಶಿಕ್ಷಣ ಸಂಸ್ಥೆಗಳನ್ನು, ಕಾಲೇಜುಗಳನ್ನು, ಮಠಗಳನ್ನು ನಡೆಸುತ್ತಿರುತ್ತಾರೆ ಅದನ್ನು ವಾಪಸ್ ಪಡೆಯಲು ಯಾವ ಕಾರಣಕ್ಕೂ ಯಾವ ಸರ್ಕಾರಕ್ಕೂ ಆಗುವುದಿಲ್ಲ. ಅವರು Sub-Registrar ರವರ Guidance Value ಏನು ಇದೆ ಅದನ್ನು ಕೊಡಲು ಅವರು ಒಪ್ಪಿದರೆ ಅವರಿಗೆ ಕೊಡುತ್ತೇವೆ. ಇಲ್ಲಿ ಡಬಲ್ ಆಗುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಕೃಷಿ ಎಂದು ಹೇಳಲಾಗಿದೆ.

**ಶ್ರೀ ಆರ್.ಅಶೋಕ್:-** ಅವರು ಬೇರೆ ಉದ್ದೇಶಕ್ಕಾಗಿ ಉಪಯೋಗಿಸುವ ಹಾಗೆ ಇಲ್ಲ. ಶಿಕ್ಷಣಕ್ಕಾಗಿ ಎಂದರೆ ಅಲಾಟ್ ಆಗಿದರೆ ಶಿಕ್ಷಣ ಸಂಸ್ಥೆಯನ್ನೆ ಅಲ್ಲಿ ನಡೆಸಬೇಕು. ಮಠಕ್ಕೆ ಎಂದರೆ ಮಠವನ್ನೆ ಕಟ್ಟಬೇಕು. ಯಾವ ಉದ್ದೇಶಕ್ಕೆ ತೆಗೆದುಕೊಂಡಿರುತ್ತಾರೆ ಅದೇ ಅಲ್ಲಿ ನಡೆಯುಬೇಕು. ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಸಂಸ್ಥೆಗಳಿಗೆ, ಕೃಷಿ ಅಥವಾ ಇತರೆ ಉದ್ದೇಶಗಳಿಗೆ ಎಂದು ಹೇಳಲಾಗಿದೆ. Even agriculture ಮಾಡುವವರಿಗೂ ಕೊಡುತ್ತೀರಾ?

**ಶ್ರೀ ಆರ್.ಅಶೋಕ್:-** ಹಿಂದೆ ಗ್ರಾಂಟ್ ಆಗಿದ್ದರೆ ಕೊಡಲಾಗುತ್ತದೆ.

**ಶ್ರೀ ಎಸ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕರ್ನಾಟಕ ಭೂ ಕಂದಾಯ (ಎರಡನೆ ತಿದ್ದುಪಡಿ) ವಿಧೇಯಕ 2020 ನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಸಚಿವರು ಹೇಳಿದ ಹಾಗೆ, 4 ಎಕರೆ, 5 ಎಕರೆ ಜಮೀನು ಇರುತ್ತದೆ. ಅದರಲ್ಲಿ 5 ಗುಂಟೆ 10 ಗುಂಟೆ ಅಥವಾ 20 ಗುಂಟೆ 'ಬಿ' ಖರಾಬ್ ಜಮೀನು ಇರುತ್ತದೆ. ಅದನ್ನು ಸರ್ಕಾರ ತಮ್ಮ ವಶಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲ, ಅಲ್ಲಿ ಯಾವುದೇ ಉದ್ದೇಶಕ್ಕಾಗಿ ಮಾಡಿದರೂ ಕೂಡಾ ಸರ್ಕಾರದ ಲೆಕ್ಕದಲ್ಲಿ reserve

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಆಗಿಯೇ ಇಟ್ಟಿರುತ್ತಾರೆ. ಹೀಗಾಗಿ ಸರ್ಕಾರ ತೆಗೆದುಕೊಂಡಿರುವ ತೀರ್ಮಾನ ಸರಿಯಾಗಿದೆ. ಇದು ಒಳ್ಳೆಯ ಕಾಯಿದೆಯಾಗಿದೆ. 5 ಎಕರೆ 10 ಎಕರೆ ಜಮೀನಿನ ಮಧ್ಯೆದಲ್ಲಿ ಸಣ್ಣ ಹಳ್ಳ ಬರುತ್ತದೆ.

**(ಮುಂದು)**

**(928)26-09-2020(07-20)ಬಿಎಸ್‌ಡಿ-ಎಂಡಿ**

**ಶ್ರೀ ಎನ್.ಅಪ್ಪಾಜಿಗೌಡ (ಮುಂದು)**

*National Green Tribunal* (NGT) ಇದೆ. ಮಧ್ಯೆ ಹಳ್ಳ ಬರುವುದರಿಂದ ಸುಮಾರು 25 ಮೀಟರ್, 75 ಮೀಟರ್ ಬಿಡಬೇಕಾದ ಅನಿವಾರ್ಯತೆ ಇರುತ್ತದೆ. ನನ್ನ ಮನವಿ ಏನೆಂದರೆ, ಆ ಹಳ್ಳವನ್ನು ಒಂದು ಕಡೆ ಬಿಡಲು ಅವಕಾಶ ಮಾಡಿಕೊಟ್ಟರೆ ಅಲ್ಲಿ ಯಾರಾದರೂ ಮುಂದೆ ಒಳ್ಳೆಯ ಕೆಲಸ ಮಾಡಲು ಅಥವಾ construction ಮಾಡಲು ಅಥವಾ Apartment ಕಟ್ಟಲು ಅಥವಾ ಬೇರೆ ಉದ್ದೇಶಗಳಿಗೆ ಒಳ್ಳೆಯದಾಗುತ್ತದೆ ಎಂದು ನನ್ನ ಭಾವನೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಒಳ್ಳೆಯ ಸಲಹೆಯನ್ನು ಕೊಟ್ಟಿದ್ದು, ಇದನ್ನು ನಾನು ಪರಿಶೀಲನೆ ಮಾಡುತ್ತೇನೆ. ಏಕೆಂದರೆ ಯಾವತ್ತೂ ವಾಪಸ್ಸು ಪಡೆಯದಂತಹ ವಿಚಾರಗಳು ಇದೆ. ಇದನ್ನು ಠಿಡಿಚಿಛಿಣಛಿಚಿಟ ಆಗಿ ನೋಡಬೇಕು. ಹಿಂದೆ ಯಾವುದೋ ಸಂದರ್ಭದಲ್ಲಿ ಕೊಟ್ಟಿದ್ದಾರೆ. ಆದ್ದರಿಂದ ಇನ್ನು ಮುಂದೆಯಾದರೂ ಸರಿಯಾಗಿ ಸರ್ಕಾರಕ್ಕೆ ಆದಾಯ ಬರಬೇಕು, ಸರ್ಕಾರದ ಜಮೀನುಗಳನ್ನು ಕಾಪಾಡುವ ದೃಷ್ಟಿಯಿಂದ ಒಳ್ಳೆಯ ವಿಧೇಯಕವಾಗಿದೆ. ವಿಧಾನ ಸಭೆಯಲ್ಲಿಯೂ ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ.

**ಸಭಾಪತಿಯವರು:** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು "

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2ರಿಂದ 3ರವರೆಗೆ**

ಸಭಾಪತಿಯವರು: " ಖಂಡ 2ರಿಂದ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:** ಪ್ರಸ್ತಾವ ಏನೆಂದರೆ;

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ"

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

ಶ್ರೀ **ಆರ್. ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು***

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**16.ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ(ಕವಿಪ):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತೇನೆ.

1) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೆಯ ತಿದ್ದುಪಡಿ) ವಿಧೇಯಕ, 2020
2) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2020
3) ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020
4) ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ, 2020
5) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020

**ಸಭಾಪತಿಯವರು:–** ಮಂಡಿಸಲಾಯಿತು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಒಂದು ಕತೆ ಹೇಳಬೇಕೆಂದು ಇದ್ದೇನೆ, ದಯಮಾಡಿ ಅವಕಾಶ ಕೊಡಬೇಕು. ಈ ಸದನದಲ್ಲಿ ದಾಖಲೆ Bill ಗಳನ್ನು ಪಾಸ್ ಮಾಡುತ್ತಿದ್ದು, ಅದಕ್ಕೆ ಒಂದು ಸಣ್ಣ ಉಪಕಥೆ ಇದೆ, ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ.

ಪಾಟಿಯಾಲ ಎಂಬ ದೇಶದಲ್ಲಿ ಒಬ್ಬ ರಾಜ ಇದ್ದನು. ಆ ರಾಜ ಬೆಳಗ್ಗೆಯಿಂದ ರಾತ್ರಿಯವರೆಗೂ ಮಲಗಿರುವುದು, ರಾತ್ರಿಯಾದ ಮೇಲೆ ಬೆಳಗ್ಗೆವರೆಗೂ ಈಜುಕೊಳದಲ್ಲಿ ಈಜುವುದು. ರಾಜ ಈಜುಕೊಳಕ್ಕೆ ಬರುವಷ್ಟರಲ್ಲಿ ಊಟ–ತಿಂಡಿ ಎಲ್ಲವನ್ನು ready ಮಾಡಿ ಇಟ್ಟಿರುತ್ತಾರೆ. ಆತ ಎಲ್ಲಾ ದ್ರವ್ಯಗಳನ್ನು ಸಿಂಪಡಿಸಿದ ಈಜುಕೊಳದಲ್ಲಿ ಸುಂದರವಾದ ರಾಣಿಯರ ಜೊತೆ ಬೆಳಗ್ಗೆವರೆಗೂ ಈಜುವುದು. ರಾಜ್ಯದ ಎಲ್ಲಾ ಕೆಲಸಗಳ ಉಸ್ತುವಾರಿಯನ್ನು ಕಾರ್ಯದರ್ಶಿಗೆ ವಹಿಸಿರುತ್ತಾನೆ. ಮತ್ತೆ ಆ ರಾಜ ದಿನಕ್ಕೆ ಒಂದು ಸಾರಿ ಮಾತ್ರ ಕಡತಗಳನ್ನು ನೋಡುತ್ತಿದ್ದ. ಅದು ಯಾವ ರೀತಿ ಅಂದರೆ  ರಾತ್ರಿ ಈಜುಕೊಳಕ್ಕೆ ಇಳಿಯುವ ಮುನ್ನ ಕಾರ್ಯದರ್ಶಿಯವರು ಎರಡು ಗುಂಪುಗಳಾಗಿ file ಗಳನ್ನು ಈಜುಕೊಳದ ಹತ್ತಿರ ಜೋಡಿಸುವುದು. ರಾಜನು ಈಜುಕೊಳಕ್ಕೆ ಇಳಿದು, ಎಲ್ಲಾ ಮಹಾರಾಣಿಯವರ ಜೊತೆ ಒಂದು ರೌಂಡ್ ಈಜು ಹೊಡೆದುಕೊಂಡು ಬಂದು ಒಂದು ದಿನ ಎಡಗೈ  ಎತ್ತಿ ಮುಟ್ಟಿದರೆ ಅದೆಲ್ಲವೂ approved. ಯಾವುದಕ್ಕೆ ಕೈ ಎತ್ತಿ ಮುಟ್ಟಲಿಲ್ಲ ಅದು approved ಇಲ್ಲ. ಮಾರನೇಯ ದಿನ ರಾಜ ತನ್ನ ಇಚ್ಛೆಯಂತೆ ಬಲಗೈ ಅಥವಾ ಎಡಗೈನಲ್ಲಿ ಮುಟ್ಟುವುದು. ಆಗ ಎಲ್ಲಾ file ಗಳು approved.  ಈ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿ ಆಡಳಿತ ನಡೆಸುತ್ತಿದ್ದನು. ಈ ರೀತಿ ಇಲ್ಲಿಯೂ ಆಯಿತು. ವಿಧಾನ ಪರಿಷತ್ತಿನ ಇತಿಹಾಸದಲ್ಲಿ 6 ದಿನಗಳ ಅಧಿವೇಶನದಲ್ಲಿ 35 Bill ಗಳನ್ನು pass ಮಾಡಿರುವುದು ಇದೆಯೇ? ಇದೇನು ಬರೀ Bill ಮಾಡುವ ಸರ್ಕಾರವೇ? ಏನ್ ಸ್ವಾಮಿ ಇದು? ಸುಮ್ಮನೆ ಕೈ ಮುಟ್ಟಿ ಹೋಗಿಬಿಡಬೇಕು.

**(ಗೊಂದಲ)**

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಈಗ ಸ್ನಾನದ ಕೊಳದಲ್ಲಿ ಇಳಿಯುವುದಕ್ಕೆ ಆಗುವುದಿಲ್ಲ. ಕೊರೊನಾ ಬಂದಿರುವುದರಿಂದ ban ಮಾಡಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:–** ರಾಜನ ರೀತಿ ಕೈ ಮುಟ್ಟಿ approve ಮಾಡಿಸಿಕೊಂಡು ಬಿಟ್ಟರೆ ಒಳ್ಳೆಯದು.

**ಶ್ರೀ ಆರ್. ಅಶೋಕ್:–** ಯಾವ ಕೈ ಇಡಲಿ ಗೌಡರೇ, ನಿಮ್ಮ ಮೇಲೆ ಇಡಲಾ ಅಥವಾ ಆ ಕಡೆ ಇಡಲಾ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಐದು ದಿನದಿಂದ ನಾಲ್ಕು ಬಾರಿ ನನ್ನ ಹೆಸರನ್ನು ತಾವು ಕರೆದು ಮತ್ತೆ ಕೂರಿಸಿದ್ದೀರಿ. ನಿಯಮ 330ರಡಿಯಲ್ಲಿ ಅವಕಾಶ ನೀಡಿ.

**ಸಭಾಪತಿಯವರು:–** ಮುಂದಿನ ವಿಧೇಯಕಕ್ಕೆ ಹೋಗೋಣ.

**17. ಶಾಸನ ರಚನೆ**
**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೆಯ ತಿದ್ದುಪಡಿ) ವಿಧೇಯಕ, 2020**

***ಪರ್ಯಾಲೋಚನಾ ಪ್ರಸ್ತಾವ***

**ಶ್ರೀ ಆರ್. ಅಶೋಕ್ (ಕಂದಾಯ ಮಂತ್ರಿಗಳು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, 2020ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಅಶೋಕ್ (ಕಂದಾಯ ಮಂತ್ರಿಗಳು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಯೋಜನಾ ಪ್ರಾಧಿಕಾರಗಳಿಗೆ ಸಂಪನ್ಮೂಲ ಕ್ರೋಡೀಕರಣ ಮಾಡುವ ಐಟಟ ಆಗಿದೆ. Master Plan ವಲಯದಲ್ಲಿ ವಿನಿಮಯದ ಉದ್ದೇಶದಿಂದ ಗುರುತಿಸಲಾದ ಪ್ರದೇಶಗಳಲ್ಲಿ ಹೆಚ್ಚುವರಿ ನೆಲ ವಿಸ್ತೀರ್ಣದ ಅನುಪಾತದ ಮಂಜೂರಾತಿ, premium charge ಗಳನ್ನು ವಿಧಿಸುವುದು ಮತ್ತು ಯೋಜನಾ ಪ್ರಾಧಿಕಾರಗಳಿಗೆ ಸಂಪನ್ಮೂಲಗಳನ್ನು ಕ್ರೋಡೀಕರಿಸುವಂತಹ Bill ಆಗಿದೆ.

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, Premium Floor Area Ratio ಎಂದು ಇದೆ. Concerned Secretaries ಇಲ್ಲ. Urban Development Department Secretary ಸೇರಿದಂತೆ ಯಾರೂ ಕಾಣುತ್ತಿಲ್ಲ.

**ಶ್ರೀ ಮಾನೆ ಶ್ರೀನಿವಾಸ್:–** Violation ಗೆ limit ಇದೆಯೋ ಅಥವಾ is the 'sky is the limit'?

**ಶ್ರೀ ಆರ್. ಅಶೋಕ್:–** ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟರೆ ಸೇರಿಸಿಕೊಳ್ಳುತ್ತೇವೆ. ಆಗಾಗ ಆದಾಯ ಕ್ರೋಡೀಕರಣ ಮಾಡುವುದಕ್ಕೆ ಮಾತ್ರ ಮಾಡಿದ್ದೇವೆ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:–** Ratio ಗೊತ್ತಿಲ್ಲದಿದ್ದರೆ ಏನು ಸಲಹೆ ಕೊಡುವುದು? Premium FAR (Floor Area Ratio) ಏನಾದರೂ ಅರ್ಥ ಮಾಡಿಕೊಳ್ಳಬೇಕು. ಅದರಲ್ಲಿ ಏನೂ ಇಲ್ಲವೇ ಇಲ್ಲ, ಅಂದರೆ floor ಆದರೂ ಕಟ್ಟಿಕೊಳ್ಳಿ ಎಂದು ಅರ್ಥವೇ?

**ಶ್ರೀ ಆರ್. ಅಶೋಕ್:–** ಇಲ್ಲ, ಸರ್ಕಾರದ ನೀತಿ ನಿಯಮಾವಳಿಗಳಂತೆ ಮಾಡುವುದು.

**(ಮುಂದು)**

**(929) 26.9.2020 7.30 ಪಿಕೆ:ಎಂಡಿ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, Premium ಎಂದರೆ ಎಷ್ಟು floor ಕಟ್ಟಬಹುದು, ಅದಕ್ಕಿರುವ ರೀತಿ–ನೀತಿಗಳೇನು ದಯವಿಟ್ಟು ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, Premium ಎಂದರೆ above Government FAR (Floor Area Ratio) ಏನು ನಿಗದಿ ಮಾಡಿರುತ್ತಾರೆಯೋ ಅದನ್ನು ಮೀರಿ ಕಟ್ಟಿದಾಗ, ಎನ್ನುವುದಾದರೆ ಅದು ಎಷ್ಟಿರಬೇಕು? ಇಂತಹ clarification ಗಳನ್ನು ಕೊಡಬೇಕಾಗುತ್ತದೆಯಾದ್ದರಿಂದ ಅವಸರದಲ್ಲಿ ವಿಧೇಯಕಗಳನ್ನು ತರಬಾರದು.

**(ಗೊಂದಲ)**

**ಶ್ರೀ ಆರ್. ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ controversy ಏನಿಲ್ಲ. ನಮ್ಮ ಇಲಾಖೆಯ ಕಾರ್ಯದರ್ಶಿಯವರು, FAR ಏನು ಬರುತ್ತದೆಯೋ ಅದು ನಾರ್ಮಲ್ ಆಗಿ ಇರುವಂಥದ್ದು. Rules frame ಮಾಡುವಾಗ ಹೆಚ್ಚುವರಿಯಾಗಿ ಏನಾದರೂ ಸೇರಿಸುವುದಿದ್ದರೆ ಆ ಕೆಲಸವನ್ನು ಮಾಡಬಹುದು ಎಂದು ಹೇಳಿದ್ದಾರೆ. ಈಗ normal FAR ಗೆ ತಿದ್ದುಪಡಿ ತರಲಾಗಿದೆ.

**ಶ್ರೀ ಮಾನೆ ಶ್ರೀನಿವಾಸ್:-** normal FAR ಎಂದಾದರೆ ಇದು ಅನ್ವಯಿಸುವುದೇ ಇಲ್ಲ. If it is within normal FAR, there is no premium at all. Premium ಈಂಖ ಎನ್ನುವುದು ಮುಂಬೈ ಮತ್ತು ಪುಣೆ ದಲ್ಲಿದೆ. Designated FAR ಮೇಲೆ upto 1 violate ಮಾಡಿದಾಗ premium FAR ಬರುತ್ತದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ? ವಿವರಣೆ ಕೊಡುವುದಕ್ಕೆ ಆಗದೇ ಇರುವಾಗ ಸಲಹೆಗಳನ್ನು ತೆಗೆದುಕೊಂಡು ಏನು ಮಾಡುತ್ತೀರಿ?

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಬೇರೆ ವಿಧೇಯಕವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. Floor Area Ratio 2 or 2.5 ಇದ್ದಾಗ premium ಬರುವುದೇ ಇಲ್ಲ. Proceed ಮಾಡಿದಾಗ premium ಬರಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಷ್ಟೊಂದು ಬೇಜವಾಬ್ದಾರಿಯಿಂದ ವಿಧೇಯಕವನ್ನು ಮಂಡಿಸುವುದು ಸರಿಯೇ? ಮಾನ್ಯ ಸಭಾನಾಯಕರೇ, ನಿಮಗೇನೂ ಅನ್ನಿಸುತ್ತಿಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಈಗಷ್ಟೇ ಈ ವಿಧೇಯಕ ಕೆಳಮನೆಯಿಂದ ಬಂತು. ಏನಾದರೂ ಸಲಹೆಗಳಿದ್ದರೆ ಮಾನ್ಯ ಸದಸ್ಯರು ಕೊಡಬಹುದು, ನಾವು ಸರಿ ಮಾಡಿಕೊಳ್ಳುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ನಿಮಗೆ ನಿರ್ದಿಷ್ಟವಾಗಿ ವಿವರ ಹೇಳುವುದಕ್ಕೆ ಆಗುತ್ತಿಲ್ಲ. ಹಾಗಿರುವಾಗ ನೀವು ಸಲಹೆಗಳನ್ನು ತೆಗೆದುಕೊಂಡು ಏನು ಮಾಡುತ್ತೀರಿ? ದಯವಿಟ್ಟು ಈ ವಿಧೇಯಕವನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮೆಟ್ರೋಗೆ ಸಂಬಂಧಪಟ್ಟಂತೆ ಏನು ಎರಡೂ ಭಾಗದಲ್ಲಿ ಬರುವಂಥದ್ದಕ್ಕೆ ಒಂದೂವರೆ ಪಟ್ಟು FAR ಕೊಡುವುದು ಈ ವಿಧೇಯಕದಲ್ಲಿ ತರಲಾಗಿದೆ. ಟ್ರಾವೆಲ್ ಮಾಡುವಂಥದ್ದಕ್ಕೆ ಜನ ದೂರದಿಂದ ಬಂದರೆ ತೊಂದರೆಯಾಗುತ್ತದೆ, ಟ್ರಾಫಿಕ್ ಜಾಮ್ ಆಗುತ್ತದೆ. ಹೀಗಿರುವಾಗ, ಮೆಟ್ರೋ ಪಕ್ಕದಲ್ಲೇ ಹೆಚ್ಚು floor ಗಳು ಬಂದರೆ ಸುಲಭವಾಗಿ ಜನ ಟ್ರಾವೆಲ್ ಮಾಡಬಹುದು. ಅವರಿಗೆ ಹೆಚ್ಚು ಅನುಕೂಲ ಮಾಡಿಕೊಡಬೇಕು, ಆ ಭಾಗದಲ್ಲಿರುವ ನಿವೇಶನಗಳಿಗೆ ಹೆಚ್ಚು ಅನುಕೂಲ ಮಾಡಿಕೊಡಬೇಕೆನ್ನುವುದು ಇದರ ಉದ್ದೇಶವಾಗಿದೆ.

**ಶ್ರೀ ಎಚ್.ಎಂ.ರಮೇಶಗೌಡ:–**ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಮಾನ್ಯ ಸಚಿವರಿಗೆ ದಾರಿ ತಪ್ಪಿಸುವಂತಹ ಕೆಲಸ ಮಾಡುತ್ತಿದ್ದಾರೆ. ಈ ವಿಧೇಯಕದಲ್ಲಿ ಮೆಟ್ರೋ ಬಗ್ಗೆ ಪ್ರಸ್ತಾಪವೇ ಇಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ನೀವು ಸಲಹೆಗಳನ್ನು ಕೊಡಿ. ನಿಯಮ ಮಾಡುವಾಗ ಅವುಗಳನ್ನು ಅಳವಡಿಸಿಕೊಳ್ಳುತ್ತೇವೆ. **(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, Number of Floors ಬೇರೆ Floor Area Ratio ಹೇಳುತ್ತಿರುವುದೇ ಬೇರೆ. ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಇಲ್ಲಿ ತರಹೊರಟಿರುವ ಕಾಯಿದೆ Number of Floors ವಿಷಯ ಅಲ್ಲ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ನಿಮ್ಮ ಸಲಹೆಗಳಿದ್ದರೆ ಕೊಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-**ದಯವಿಟ್ಟು ಈ ವಿಧೇಯಕವನ್ನು withdraw ಮಾಡಿಕೊಳ್ಳಿ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ದಯಮಾಡಿ ನಿಯಮ 18(ಬಿ) ನೋಡಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, Rules frame ಮಾಡುವ ಸಂದರ್ಭದಲ್ಲಿ, SEZ ಇರಬಹುದು, ಮೆಟ್ರೋ ಇರಬಹುದು ಇಂತಹ ಪ್ರಾಜೆಕ್ಟ್‌ಗಳನ್ನು ಮಾಡುವ ಸಂದರ್ಭದಲ್ಲಿ ಏನು FAR ಇರುತ್ತದೆಯೋ ಅಂದರೆ, ಒಂದು FAR ಇದ್ದರೆ ಒಂದೂವರೆ FAR ಕೊಡುವಂಥದ್ದಕ್ಕೆ ಸಂಬಂಧಪಟ್ಟಂತೆ ಈ ವಿಧೇಯಕವನ್ನು ತರಲಾಗಿದೆ. ನಿಮಗೆ ಇಷ್ಟವಾಗಲಿಲ್ಲ ಎಂದರೆ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಆದರೆ, ಈ ವಿಧೇಯಕದಲ್ಲಿ controversy ಯಾಗುವಂಥದ್ದು ಏನೂ ಇಲ್ಲ. 1 FAR ಇರುವುದು 1.5 ಆಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇದು vague Bill ಆಗಿದೆ, ambiguity ಇದೆ. Clarity ಇಲ್ಲ.

**(ಗೊಂದಲ)**

**ಶ್ರೀ ಆರ್.ಅಶೋಕ್:-** ಆಯಿತು, ನೀವು ಬೇಡ ಎಂದರೆ ಬೇಡ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಬೇಡ ಎಂದು ಹೇಳುತ್ತಿಲ್ಲ. ಈ ವಿಧೇಯಕದಲ್ಲಿ ambiguity ಇದೆ, clarity ಇಲ್ಲ. ಇದು ಇಂಪ್ಲಿಮೆಂಟ್ ಆದರೆ ಜನರಿಗೆ ಅನುಕೂಲವಾಗಬೇಕು ಅಷ್ಟೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇಲ್ಲಿ rules frame ಮಾಡುವಾಗ ನಿಮ್ಮ ಸಲಹೆಗಳನ್ನು ಅಳವಡಿಸಿಕೊಳ್ಳುತ್ತೇವೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಕೊನೆಗೆ ತೆಗೆದುಕೊಳ್ಳೋಣ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನ್ನ ವಿಷಯ ಒಂದಿದೆ. ಆ ಕುರಿತು ಮಾತನಾಡಲು ಅವಕಾಶ ಕೊಡುತ್ತಿರೋ ಇಲ್ಲವೋ?

**ಸಭಾಪತಿಯವರು:- "**ಕರ್ನಾಟಕ ಭೂ ಕಂದಾಯ (ತಿದ್ದುಪಡಿ)ವಿಧೇಯಕ 2020ನ್ನು ಪರ್ಯಾಲೋಚಿಸಲು ಸೂಚಿಸುವುದು.

**ಶ್ರೀ ಆರ್.ಅಶೋಕ್:-**ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ 2020ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಚಿವರೇ ಮಾನ್ಯ ಸಭಾಪತಿಗಳು "ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 2020"ರ ಬಗ್ಗೆ ಹೇಳುತಿದ್ದಾರೆ. ನೀವು "ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕದ ಬಗ್ಗೆ ಹೇಳುತ್ತಿದ್ದೀರಿ. ಯಾವ ವಿಧೇಯಕವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ.

**ಶ್ರೀ ಆರ್.ಅಶೋಕ್:-** ನೀವೆಲ್ಲರೂ ಸೇರಿ ಗೊಂದಲ ಮಾಡಿಬಿಟ್ಟಿರಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾವುದೇ ವಿಧೇಯಕಗಳಾಗಲಿ ಈ ರೀತಿ ತರಾತುರಿಯಲ್ಲಿ ತರುವುದಕ್ಕೆ ಹೋಗಬಾರದು.

**ಆ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರ್.ಅಶೋಕ್(ಕಂದಾಯ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, 2020ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಆರ್.ಅಶೋಕ್(ಕಂದಾಯ ಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು land locked ಜಮೀನಿನ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅದು ಮೊದಲು "90 ದಿನಗಳೊಳಗಾಗಿ" ಎಂದಿತ್ತು. ಈಗ ಅದನ್ನು "30 ದಿನಗಳೊಳಗಾಗಿ" ಎಂದು ಬದಲಾವಣೆ ಮಾಡುವಂಥದ್ದಾಗಿದೆ.

**(930) 07.40 26.09.2020 ಎಸ್‌ವಿ–ಎಕೆ**

**ಶ್ರೀ ಆರ್.ಅಶೋಕ್ (ಮುಂದು):–**

ಅದರ ಜೊತೆಗೆ ಈಗಾಗಲೇ ರಾಜ್ಯದಲ್ಲಿ ಅಕ್ರಮ–ಸಕ್ರಮ ಇದೆ. ರೈತರು ಉಳುಮೆ ಮಾಡುವ ಜಮೀನು ಇದ್ದು, ಅರ್ಜಿ ನಮೂನೆ 50–53 ಈ ರೀತಿಯಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆ ಅರ್ಜಿ ಸ್ವೀಕಾರ ಮಾಡುವುದು ಈಗಾಗಲೇ ದಿನಾಂಕ 26.04.2020ಕ್ಕೆ ಮುಕ್ತಾಯವಾಗಿದೆ. ಆ ದೃಷ್ಟಿಯಿಂದ ಯಾರ್ಯಾರು ಅರ್ಜಿಯನ್ನು ಹಾಕಿದ್ದಾರೆಯೋ ಅವರಿಗೆ ಮತ್ತೊಂದು ಅವಕಾಶವನ್ನು ನೀಡುವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ.

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಚಿವರೇ, ಈಗಾಗಲೇ ಅಕ್ರಮ ಸಕ್ರಮ...

**ಶ್ರೀ ಆರ್.ಅಶೋಕ್:–** ಈಗಾಗಲೇ ರಾಜ್ಯದಲ್ಲಿ ನಮೂನೆ 50 ರ ರೀತ್ಯಾ ಸಲ್ಲಿಸಿರುವ 10572 ಅರ್ಜಿಗಳು ಬಾಕಿ ಇವೆ. ನಮೂನೆ 53ರ ಅಡಿಯಲ್ಲಿ 1,00,780 ಅರ್ಜಿಗಳು ವಿಲೇವಾರಿಯಾಗಬೇಕಾಗಿದೆ. ಒಟ್ಟು ಇಷ್ಟು ಅರ್ಜಿಗಳು ಬಾಕಿ ಇವೆ. ಆದ್ದರಿಂದ ಇದನ್ನು ವಿಸ್ತರಣೆ ಮಾಡಿದರೆ ತಮ್ಮ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿಯನ್ನು ಮಾಡುತ್ತಿದ್ದಾರೆಯೋ ಅವರಿಗೆ ಒಂದು ನೆಮ್ಮದಿಯನ್ನು ಕೊಟ್ಟಂತಾಗುವುದು. ಇದಕ್ಕಾಗಿ ಎರಡು ವರ್ಷ ಅವಧಿಯನ್ನು ವಿಸ್ತರಣೆ ಮಾಡುತ್ತಿದ್ದೇವೆ.

**ಶ್ರೀ ಸಿ.ಎಂ.ಲಿಂಗಪ್ಪ (ನಾಮನಿರ್ದೇಶಿತರು):–** ಮಾನ್ಯ ಸಚಿವರೇ, ಹೊಸದಾಗಿ ಅರ್ಜಿಯನ್ನು ಸಲ್ಲಿಸಲು ಅವಕಾಶ ನೀಡಲಾಗುವುದೇ?

**ಶ್ರೀ ಆರ್.ಅಶೋಕ್:–** ಇಲ್ಲ. ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಮಾತ್ರ ಅವಧಿಯನ್ನು ವಿಸ್ತರಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಾನು ಈ ಬಿಲ್ ಅನ್ನು ಸ್ವಾಗತ ಮಾಡುತ್ತೇನೆ. ಬಗರ್ ಹುಕುಂ ಸಾಗುವಳಿಯ ಅರ್ಜಿಗಳನ್ನು ವಿಲೇವಾರಿ ಮಾಡಲು ಕಾಲಾವಕಾಶವನ್ನು ಇನ್ನೂ ಎರಡು ವರ್ಷಗಳು ವಿಸ್ತರಿಸಲಾಗುವುದು ಎಂದು ಮಾನ್ಯ ಕಂದಾಯ ಸಚಿವರು ಹೇಳುತ್ತಿದ್ದಾರೆ. ಅದನ್ನು ಮಾಡಲಿ. ಸಂತೋಷ. ಭೂಮಿಯನ್ನು ಉಳುಮೆ ಮಾಡುತ್ತಿರುವ ರೈತರನ್ನು ಗುರುತಿಸಿ ಅರ್ಹರಿಗೆ ಜಮೀನನ್ನು ನೀಡುವುದಾದರೆ ಅದು ಸರಿ. ಈಗಾಗಲೇ ಸಾಗುವಳಿ ಚೀಟಿಯನ್ನು ನೀಡಿರುವವರಿಗೆ ಪೈಕಿ ನಂಬರ್ ಎಂದು ಮಾಡಲಾಗಿದೆ. ಅವರಿಗೆ ಖಾತೆಯನ್ನು ಮಾಡದೆ ಅವರು ಅತಂತ್ರ ಪರಿಸ್ಥಿತಿಯಲ್ಲಿದ್ದಾರೆ. ಅವರು ರಿಜಿಸ್ಟರ್ ಮಾಡುವ ಹಾಗಿಲ್ಲ, ಎಲ್ಲಾದರೂ ಸಾಲವನ್ನು ತೆಗೆದುಕೊಳ್ಳುವ ಹಾಗಿಲ್ಲ. ಅವನ ಜಮೀನನ್ನು ಮೊದಲು ಅಭಿವೃದ್ಧಿ ಪಡಿಸುವಂತಿಲ್ಲ. ಮೊದಲು ಅದನ್ನು priority ಮಾಡಬೇಕು. ಒಂದು ಪೈಕಿ ನಂಬರ್‌ಗೆ ಖಾತಾ ಮಾಡಿ ಖಾಯಂ ಸ್ವತ್ತೆಯನ್ನು ನೀಡಬೇಕು. ಅದನ್ನು ಮಾಡದೆ ಇನ್ನೊಂದಷ್ಟು ಪೈಕಿ ನಂಬರ್‌ಗಳನ್ನು ಏಕೆ create ಮಾಡುತ್ತಾರೆ? ಅದೊಂದು ವಸೂಲಿ ದಂಧೆ. Section 79A, Section 79B ಎಂದು ಹೇಳುತ್ತಾರಲ್ಲ, ಅದಕ್ಕಿಂತ ದೊಡ್ಡ ವಸೂಲಿ ದಂಧೆ ಯಾವುದಾದರೂ ಕಂದಾಯ ಇಲಾಖೆಯಲ್ಲಿದ್ದರೆ, ಈ ಪೈಕಿ ನಂಬರ್, ದುರಸ್ತೊ...

**ಸಭಾಪತಿಯವರು:–** ಮಾನ್ಯ ರವಿ ಅವರೇ, ಬಿಲ್ ಮೇಲೆ ಮಾತನಾಡಿ.

**ಶ್ರೀ ಎಸ್.ರವಿ:–** ಅದನ್ನು ಮಾಡುವುದನ್ನು ಬಿಟ್ಟು ಇದನ್ನು ಮಾಡುತ್ತಿದ್ದಾರೆ. ದಯವಿಟ್ಟು ಮೊದಲು ಅದನ್ನು ಮಾಡಲಿ. ಪೈಕಿ ನಂಬರ್ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಮಾನ್ಯ ಸಚಿವರು ಹೇಳಲಿ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಯವರು ಎತ್ತಿರುವ ಪ್ರಶ್ನೆಯು ಈ ವಿಧೇಯಕಕ್ಕೆ ಸಂಬಂಧಪಡದಿದ್ದರೂ ಸಹ 'ಪಿ ನಂಬರ್' ಎಂದು ಘೋಷಣೆ ಮಾಡಲಾಗಿರುವುದಕ್ಕೆ ಈಗಾಗಲೇ ಜಮೀನನ್ನು ಹಂಚಿಕೆ ಮಾಡಿದ್ದೇವೆ. ಅಲ್ಲಿ 100 ಎಕರೆ ಇದ್ದರೆ 150 ಎಕರೆ ಮಾಡಿಬಿಟ್ಟಿರುತ್ತಾರೆ. 200 ಎಕರೆ ಇದ್ದರೆ 400 ಎಕರೆ ಮಾಡಿರುತ್ತಾರೆ. ಸರ್ವೆನಲ್ಲಿ ಅದೆಲ್ಲಾ ಬರುತ್ತಿಲ್ಲ. ಅದಕ್ಕಾಗಿ 1–5 ಮಾಡಬೇಕೆಂದು ಹೇಳಿದ್ದೇವೆ. ಅಂದರೆ ಅವನ ಹತ್ತಿರ ಇರುವ ದಾಖಲೆ ಸರ್ಕಾರದಲ್ಲಿಯೂ ಇರಬೇಕು. ಕೆಲವು ಕಡೆ ರೈತರ ಬಳಿ ದಾಖಲೆಗಳಿರುತ್ತವೆ, ಸರ್ಕಾರದಲ್ಲಿ ದಾಖಲೆಯಿರುವುದಿಲ್ಲ. ಈ ತರಹ ಬೋಗಸ್ ದಾಖಲೆಗಳಿರುತ್ತವೆ. 1–5 ಯಾರದ್ದು clear

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿರುತ್ತದೆಯೋ ಅವರಿಗೆಲ್ಲಾ ಪಿ–ನಂಬರ್ ತೆಗೆದು ಅವರಿಗೆ ಬರಬೇಕಾದ rights ಅನ್ನು ಹಾಗೂ ವ್ಯವಸಾಯಕ್ಕಾಗಿ ಸಾಲವನ್ನು ಪಡೆದುಕೊಳ್ಳಲು ಅನುಕೂಲ ಮಾಡಿಕೊಡಲಾಗುವುದು.

ಮಾನ್ಯ ರವಿಯವರೇ, ವಿಧಾನ ಸಭೆಯಲ್ಲಿ ಕೂಡ ಈ ಪಿ–ನಂಬರ್ ಬಗ್ಗೆ ಚರ್ಚೆಯಾಗಿದೆ. ಅದು ಕೂಡ ನನ್ನ ಗಮನದಲ್ಲಿದೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಚಿವರೇ, ನನಗೊಂದು ಸ್ಪಷ್ಟೀಕರಣವನ್ನು ತಾವು ನೀಡಬೇಕು. ರೈತರ ಬಳಿ ದಾಖಲೆಯಿರುತ್ತದೆ, ಸರ್ಕಾರದಲ್ಲಿ ಇರುವುದಿಲ್ಲ ಎಂಬುದಾಗಿ ತಾವು ಹೇಳಿದಿರಿ. ಅರ್ಜಿಯನ್ನು ಹಾಕಿದಾಗ ನಮ್ಮಲ್ಲಿ ದಾಖಲೆಗಳು ಲಭ್ಯವಿಲ್ಲವೆಂದು endorsement ಅನ್ನು ನೀಡುತ್ತಾರೆ. ಎಷ್ಟೋ ತಾಲ್ಲೂಕು ಕಛೇರಿಗಳಲ್ಲಿ ನಮ್ಮ ಬಳಿ ಕಡತವೇ ಇಲ್ಲವೆಂದು ಹಿಂಬರಹವನ್ನು ನೀಡುತ್ತಾರೆ. ಇದರಿಂದ ರೈತನಿಗೆ ತೊಂದರೆಯಾಗುವುದಿಲ್ಲವೇ? ಸರ್ಕಾರಕ್ಕೆ ಕೊಟ್ಟಿರುವ ದಾಖಲೆಗಳು ಅವನ ಬಳಿಯಿದೆ. ಆದರೆ ಸರ್ಕಾರದವರು ನಮ್ಮ ಬಳಿ ಕಡತವೇ ಇಲ್ಲವೆಂದು endorsement ಅನ್ನು ಕೊಡುತ್ತಾರೆ. ಆಗ ಏನು ಮಾಡಲಾಗುವುದು?

**ಶ್ರೀ ಆರ್.ಅಶೋಕ್:–** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಎತ್ತಿರುವ ಪ್ರಶ್ನೆಗೆ ಬೆಂಗಳೂರಿನಲ್ಲಿ ಇಂತಹ ಐದಾರು ಸಾವಿರ ಎಕರೆ ಜಮೀನು ಸಿಗುತ್ತದೆ. ನಿಮ್ಮ ವಿಷಯಕ್ಕೆ ನಂತರ ಬರುತ್ತೇನೆ. ಅವರ ಕ್ಷೇತ್ರವಾಗಿರುವ ಕೆ.ಆರ್.ಪುರದಲ್ಲಿ 170 ಕೋಟಿ ರೂಪಾಯಿ ಬೆಲೆ ಬಾಳುವ ಜಮೀನಿದೆ. ಅವರ ಹತ್ತಿರವಿರುವ ದಾಖಲೆಗಳೆಲ್ಲಾ ಸರಿಯಾಗಿದೆ. ಸರ್ಕಾರದಲ್ಲಿ ಏನೂ ಇಲ್ಲ. ಈ ತರಹದ ಒಂದು ಲಾಬಿಯೂ ಇದೆ. ಅಂದರೆ ಈ ತರಹ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯದ ಮೆಟ್ಟಿಲನ್ನೂ ಸಹ ಏರುತ್ತಾರೆ. ನ್ಯಾಯಾಲಯಗಳಲ್ಲಿ ಅವರ ಕಡೆ ಬರುವಂತಹವರೆಲ್ಲಾ ದೊಡ್ಡ ದೊಡ್ಡ ವಕೀಲರು. ಸರ್ವೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಎಲ್ಲವನ್ನೂ ನೋಡಿ ಬಂದಂತಹವರು. ನೀವು ನಮಗಿಂತ ಹೆಚ್ಚು ಸರ್ಕಾರ ನಡೆಸಿರುವವರು. ಸರ್ಕಾರದ ಪರವಾಗಿ ಯಾರು ಹೋಗುತ್ತಾರೆಂಬುದು ನಿಮಗೆ ತಿಳಿದಿದೆ. ಸರ್ಕಾರದ ವಕೀಲರು ಅಲ್ಲಿಗೆ ಹೋದ ತಕ್ಷಣ ನಮ್ಮ ಬಳಿ ದಾಖಲೆಯೇ ಇಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯ ತಕ್ಷಣವೇ ಅವರಿಗೆ ಖಾತೆ ಮಾಡಿಕೊಡುವಂತೆ ಆದೇಶ ನೀಡುತ್ತದೆ. ಅದು purely ಸರ್ಕಾರಿ ಜಮೀನಾಗಿರುತ್ತದೆ. ಈ ರೀತಿಯ ಸಮಸ್ಯೆಗಳಿವೆ. ಆದ್ದರಿಂದ ಬೇಕಾಬಿಟ್ಟಿ ಕೊಟ್ಟರೆ ಯಾರ್‍ಯಾರೋ ಕಬಳಿಸಿಬಿಡುತ್ತಾರೆ. ಅದಕ್ಕೆ 1–5 ಮಾಡುವ ದೃಷ್ಟಿಯಿಂದ ದಾಖಲೆಗಳು ಅಲ್ಲಿಯೂ ಇರಬೇಕು, ಇಲ್ಲಿಯೂ ಇರಬೇಕು. ಸರಿಯಾದ ರೀತಿಯಲ್ಲಿ ಸರ್ವೆ ಆಗಿರಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾ ಆದ ನಂತರ ಅವರಿಗೆ ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಈಗಾಗಲೇ ಸರ್ವೆಯರ್ ಅನ್ನು ನೇಮಕ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. 2000 ದಿಂದ 2500 ಸರ್ವೆಯರ್‌ಗಳ ನೇಮಕಾತಿಯನ್ನು ಮಾಡಿ ಅವರ ಮುಖಾಂತರ ಇಂತಹದ್ದೆಲ್ಲಾ ಸರ್ವೆ ಮಾಡಿ ಯಾವ ರೈತರು ನಿಜವಾಗಿ ಹಕ್ಕುಪತ್ರವನ್ನು ಪಡೆದಿರುತ್ತಾರೆಯೋ, ಉಳುಮೆ ಮಾಡುತ್ತಿದ್ದಾರೆಯೋ ಅವರಿಗೆ ಈ ರೀತಿಯ ಪಿ–ನಂಬರ್ ಅನ್ನು ತೆಗೆಯುವಂತಹ ಕೆಲಸವನ್ನು ಅತ್ಯಂತ ಜಾಗರೂಕತೆಯಿಂದ ಮಾಡಲಾಗುವುದು.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಚಿವರೇ, ಇನಾಂ ರದ್ಧತಿ ಕಾಯಿದೆಯು ಬಂದ ಮೇಲೆ ನಮ್ಮ ಜಿಲ್ಲೆಯಲ್ಲಷ್ಟೇ ಅಲ್ಲದೆ ಇಡೀ ರಾಜ್ಯದಲ್ಲಿ ಇನಾಂಗಳು ಅಂದರೆ ಮದ್ರಾಸ್ ಇನಾಂ, ದೇವದಾಯಿ ಇನಾಂ ಈ ರೀತಿ ಬಾಕಿಯಿವೆ. ಫಾರ್ಮ್ ನಂ.1 ಹಾಕಿಲ್ಲ, ಫಾರ್ಮ್ ನಂ.7 ಹಾಕಿಲ್ಲ ಎಂದು ತಿರಸ್ಕರಿಸಿದರು. ಅದಕ್ಕೆ ಕಾಲ ವಿಸ್ತರಣೆ ಮಾಡಿಕೊಡಬೇಕು. ನಾವು ಸರ್ಕಾರಕ್ಕೆ ಈಗಾಗಲೇ ದಾಖಲೆಗಳನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ತಾವು ಗಮನ ಹರಿಸಬೇಕು. The government should extend the time for regularization.

**ಶ್ರೀ ಆರ್.ಅಶೋಕ್:–** ಮಾನ್ಯ ಕೊಂಡಯ್ಯನವರೇ, ತಾವು ಹೇಳಿದಂತೆ ಬಳ್ಳಾರಿಯಲ್ಲಿ ಸುಮಾರು 35,000 ಎಕರೆ ಇನಾಂತಿ ಜಮೀನು ಇದೆ. ಅವರು ಅರ್ಜಿಯನ್ನೂ ಹಾಕಿಲ್ಲ, ಏನೂ ಹಾಕಿಲ್ಲ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಚಿವರೇ, ಇಲ್ಲ. ಅವರ ಹೆಸರಿನಲ್ಲಿದೆ. ಅವರು ತಪ್ಪು ಅರ್ಜಿಯನ್ನು ಹಾಕಿದ್ದಾರೆ. ಅಷ್ಟರ ವೇಳೆಗೆ time expire ಆಗಿ ಹೋಯಿತು.

**ಶ್ರೀ ಆರ್.ಅಶೋಕ್:–** ಮಾನ್ಯ ಕೊಂಡಯ್ಯನವರೇ, ತಾವು ಹೇಳಿದ ಸಮಸ್ಯೆ ಕೇವಲ ನಿಮ್ಮ ಜಿಲ್ಲೆಯಲ್ಲಷ್ಟೇ ಅಲ್ಲ. ಬೆಳಗಾವಿಯಲ್ಲಿದೆ, ಹುಬ್ಬಳ್ಳಿಯಲ್ಲಿದೆ. ಎಲ್ಲಾ ಕಡೆ ಇಂತಹ ಸಮಸ್ಯೆ ಇದೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಚಿವರೇ, ಈ ವಿಷಯವು ಸಚಿವ ಸಂಪುಟದವರೆವಿಗೂ ಹೋಗಿತ್ತು. ಅದು ಒಂದು ವರ್ಷದವರೆವಿಗೂ ವಿಸ್ತರಣೆಯಾಗ ಬೇಕೆಂದು ಇತ್ತು. ದಯಮಾಡಿ ತಾವು ತಮ್ಮ ಇಲಾಖಾಧಿಕಾರಿಗಳಿಗೆ ಹೇಳಿ ಸಂಬಂಧಪಟ್ಟ ಕಡತವನ್ನು ತರಿಸಿಕೊಂಡು ನೋಡಬೇಕು.

**ಶ್ರೀ ಆರ್.ಅಶೋಕ್:–** ಮಾನ್ಯ ಕೊಂಡಯ್ಯನವರೇ, ನಾನು ಇತ್ತೀಚೆಗೆ ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರೊಂದಿಗೂ ಮಾತನಾಡಿದ್ದೇನೆ. ವಿಧಾನ ಸಭೆಯಲ್ಲಿ ಈ ಕುರಿತು ಪ್ರಶ್ನೆ ಬಂದಾಗ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿದ್ದೇನೆ. ಈಗಾಗಲೇ ಈ ವಿಷಯದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕುರಿತು ವಸ್ತ್ರದ್ ಸಮಿತಿಯನ್ನು ರಚಿಸಲಾಗಿದೆ. ಅದರ ವರದಿಯು ಬಂದಿದ್ದು, ಅದನ್ನು ತೆಗೆದುಕೊಂಡು ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಇದು ಬಹಳ ಮುಖ್ಯವಾಗಿದ್ದು, ಇದನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಈಗಾಗಲೇ ಕೇಳಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು “ನಿಮ್ಮ ಇಲಾಖೆಯ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳಿಗೆ ಈಗಲೇ ಕೇಸುಗಳು ಜಾಸ್ತಿಯಾಗಿದ್ದು, ಇದನ್ನೂ ಸೇರಿಸಿದರೆ ಇನ್ನೂ ಹೆಚ್ಚಾಗುತ್ತದೆ, ನೋಡಿ” ಎಂದು ಹೇಳಿದ್ದಾರೆ. ನಾನು ವಸ್ತ್ರದ್ ಸಮಿತಿಯ ವರದಿಯನ್ನು ಪರಿಶೀಲಿಸಿ ನಂತರ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಚಿವರೇ, 1979–80ರ ಸಮಯದಲ್ಲಿ ಜಮೀನುಗಳನ್ನು ಹಂಚಿಕೆ ಮಾಡಬೇಕಾದರೆ ಸರ್ವೆಯರ್‌ಗಳಿಂದ ಒಂದು ಸರ್ವೆ ಸ್ಕೆಚ್ ಅನ್ನು ಮಾಡಿಸಲಾಗುತ್ತಿತ್ತು. ನಂತರ ಅದು ದುರಸ್ತಿಯಾಗುತ್ತಿತ್ತು. ತಾವು ಮಾತನಾಡುತ್ತಾ 30 ಎಕರೆಗೆ 35 ಎಕರೆಯವರೆವಿಗೂ confirmation, regularization ಮಾಡಿಬಿಡುತ್ತಾರೆ, ಗಲಾಟೆಯಾಗುತ್ತದೆ ಎಂದು ಹೇಳಿದಿರಿ. ಬಾಕಿಯಿರುವ ಅರ್ಜಿಗಳಿಗೆ ಸರ್ವೆಯರ್ ಕಡೆಯಿಂದ preliminary sketch ಅನ್ನು ಮಾಡಿಸಿದರೆ ಅನುಕೂಲವಾಗುತ್ತದೆ. ಅದನ್ನು ಸಮಿತಿಯ ಮುಂದಿರಿಸಿ ಅನುಮೋದನೆ ತೆಗೆದುಕೊಂಡ ನಂತರ ಸುಲಭವಾಗುತ್ತದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಚಿವರೇ, ಈಗ 100 ಎಕರೆ ಜಮೀನು grant ಆಗಿರುತ್ತದೆ. ರೈತನ ಬಳಿ grant copy ಇರುತ್ತದೆ. Grant ಆಗಿ ಕಂಪ್ಯೂಟರ್‌ನಲ್ಲಿ ಪಹಣಿ ಸಹ ಬರುತ್ತಿರುತ್ತದೆ. ಪಹಣಿ ಬಂದರೂ ಸಹ ಅಲ್ಲಿರುವ ಪ್ರಭಾವಿಗಳು ಪೋಡಿ ಮಾಡಿಕೊಂಡು ಬಿಡುತ್ತಾರೆ. ಯಾರ ಹೆಸರಿನಲ್ಲಿ ಕಂಪ್ಯೂಟರ್ ಪಹಣಿ ಬರುತ್ತಿರುತ್ತದೆಯೋ ಅವರು ಕಂದಾಯವನ್ನು ಕಟ್ಟುತ್ತಿರುತ್ತಾರೆ. ಅವರು ಹೋಗಿ ತಹಸೀಲ್ದಾರ್ ಬಳಿ ಪೋಡಿಗಾಗಿ ಅರ್ಜಿಯನ್ನು ಹಾಕಿದಾಗ ಪೋಡಿ ಆಗುವುದಿಲ್ಲ. ಇಲ್ಲಿ ಜಾಗವಿರುವುದಿಲ್ಲ, ಪೋಡಿ ಬೇರೆಯವರಿಗೆ ಆಗಿದೆ ಎಂದು ಹೇಳುತ್ತಾರೆ. ಅಂತಹವರಿಗೆ ಏನು accommodate ಮಾಡಲಾಗುವುದು?

**ಶ್ರೀ ಆರ್.ಅಶೋಕ್:–** ಮಾನ್ಯ ರಮೇಶ್‌ಗೌಡ ಅವರೇ, ಅಪೀಲು ಹೋಗುವುದಕ್ಕೆ ಉಪವಿಭಾಗಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ನಾವು ಅವಕಾಶವನ್ನು ಕೊಟ್ಟಿದ್ದೇವೆ. ಯಾವುದೋ possession ನಲ್ಲಿ ಯಾರೋ ಇರುತ್ತಾರೆ. ಪಹಣಿಯಲ್ಲಿ ಇನ್ನಾರದ್ದೋ ಇರುತ್ತದೆ. ಇಂತಹ ಬಹಳಷ್ಟು ಸಮಸ್ಯೆಗಳು ರೆವಿನ್ಯೂ ಇಲಾಖೆಯಲ್ಲಿ ಸರ್ವೆ ಸಾಮಾನ್ಯವಾಗಿಬಿಟ್ಟಿದೆ. ಮಾನ್ಯ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ತಿಪ್ಪೇಸ್ವಾಮಿಯವರು ಹೇಳಿದಂತೆ ಇದೆಲ್ಲಾ ಒಂದು ಬಾರಿ ಸರ್ವೆ ಆಗಿ ಎಷ್ಟು extent ಇದೆ, ಎಷ್ಟು ಹಕ್ಕುಪತ್ರ ಕೊಡಲಾಗಿದೆ, ಯಾರು ಫಲಾನುಭವಿಗಳಿದ್ದಾರೆ ಎಂದು ಸ್ಪಷ್ಟವಾಗದೆ ಹೋದರೆ ಲಕ್ಷಾಂತರ ಎಕರೆ ಜಮೀನು ಸಮಸ್ಯೆಯಾಗುತ್ತದೆ. ಇಡೀ ರಾಜ್ಯದಲ್ಲಿ ಲಕ್ಷಾಂತರ ಎಕರೆಗಿಂತಲೂ ಹೆಚ್ಚು ಎಂದು ಹೇಳಬಹುದು. ಇದಕ್ಕೆ ಒಂದು ಬಾರಿ ಮುಕ್ತಿ ಕೊಡಬೇಕು. ಈಗ ಮಾನ್ಯ ರವಿಯವರು ಹೇಳಿದಂತೆ ಪಿ–ನಂಬರ್‌ಗಳನ್ನು ಕೊಡಲಾಗುತ್ತಿದೆ. ಪಿ–ನಂಬರ್ ಬಂದರೆ ಯಾವುದೇ ಸೌಲಭ್ಯ ಸಿಗುವುದಿಲ್ಲ. ಅವರು ಬ್ಯಾಂಕಿನಲ್ಲಿ ಸಾಲವನ್ನೂ ಪಡೆಯಲು ಸಾಧ್ಯವಿಲ್ಲ. ನಿಮಗೆಲ್ಲರಿಗೂ ತಿಳಿದಂತೆ ಕಂದಾಯ ಇಲಾಖೆಯಲ್ಲಿ ಈ ತರಹದ ಸಮಸ್ಯೆಗಳು ಸಾಕಷ್ಟಿದ್ದು, ಅವುಗಳನ್ನು ಪರಿಶೀಲಿಸಲಾಗುವುದು.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.)**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**<u>ಖಂಡ 2 ಮತ್ತು 3</u>**

**ಸಭಾಪತಿಯವರು:–** "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

**(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**<u>ಖಂಡ 1 ಇತ್ಯಾದಿ</u>**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ: "ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

**(ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಮುಂದು)**

**(931) 26.09.2020 7.50 ಕೆಜಿ–ಎಕೆ**

**ಇ) ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಆರ್.ಅಶೋಕ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "2020ನೇ ಸಾಲಿನ ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಆರ್.ಅಶೋಕ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಹಿಂದೆ ಭೂ ಕಬಳಿಕೆ ನ್ಯಾಯಾಲಯ ಆಗಿದೆ. ಹಳ್ಳಿಗಾಡು ಪ್ರದೇಶಗಳಲ್ಲಿ Section 94C and Section 94CC of the Karnataka Land Revenue Act, 1964 ಅಡಿಯಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. Form 50 and Form 53 ಗಳನ್ನು ಹಾಕಿಕೊಂಡು ಹುಳುವೆ ಮಾಡುವಂತಹ rights ಗಳನ್ನು ಕೇಳುತ್ತಿದ್ದಾರೆ, ಅದರ ಜೊತೆಗೆ forest land ನಲ್ಲಿ ಒತ್ತುವರಿಯಾಗಿ ಅದನ್ನು ಉಳುಮೆ ಮಾಡತಕ್ಕಂಥದ್ದು ಮಲೆನಾಡು ಪ್ರದೇಶದಲ್ಲಿ ಇದೆ. ಈಗ ಭೂಕಬಳಿಕೆ ಕಾಯ್ದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿರುವುದರಿಂದ, ಇದು ತಮ್ಮ ಜಿಲ್ಲೆಗೂ ಬಹಳ ಪ್ರಮುಖವಾದಂಥದ್ದು, ಈ ಭೂ ಕಬಳಿಕೆ ಕಾಯ್ದೆ ಬಂದಿರುವುದರಿಂದ ಸುಮಾರು 5 ರಿಂದ 6 ಸಾವಿರ ಕೇಸ್‌ಗಳು ಆಗಿವೆ. ಹಳ್ಳಿ ರೈತರನ್ನು ಹಿಡಿದುಕೊಂಡು ಬಂದು ಅವರ ವಿರುದ್ಧ ಕೇಸ್‌ಗಳನ್ನು ಹಾಕಿದ್ದಾರೆ, ಹಾಗಾಗಿ, ಅವರು ಬೆಂಗಳೂರಿಗೆ ನ್ಯಾಯಾಲಯಗಳಿಗೆ ಅಲೆಯುತ್ತಿದ್ದಾರೆ. ಇದರ ಬಗ್ಗೆ ಹಾಸನ ಜಿಲ್ಲೆಯ ಶ್ರೀ ಹೆಚ್.ಎಂ.ರೇವಣ್ಣನವರು ಸಹ ಪ್ರತಿ ದಿವಸ ಮೂರು ಬಸ್‌ಗಳನ್ನು ಮಾಡಿ ಬೆಂಗಳೂರಿಗೆ ಕಳುಹಿಸಿ ಕೊಡಬೇಕೆಂದು ಹೇಳುತ್ತಾರೆ. ಈ ತರಹದ ತೊಂದರೆಗಳು ಆಗುತ್ತಿವೆ. ಅದರಿಂದ ಯಾರು Form 53 ಹಾಕಿದ್ದಾರೆ, Section 94C ನಲ್ಲಿ ಅರ್ಜಿ ಹಾಕಿದ್ದಾರೆ ಮತ್ತು forest land ನಲ್ಲಿ ಇದಕ್ಕೆ ಯಾರು ಅರ್ಜಿ ಹಾಕಿಕೊಂಡಿದ್ದಾರೆ, ಅವರನ್ನು ಈ ಕಾನೂನಿನ ವ್ಯಾಪ್ತಿಯಿಂದ ಹೊರಗಡೆ ಇರುವಂಥದ್ದು, ಉಳಿದಿದ್ದು ಕಬಳಿಕೆಯಾಗಿರುವಂಥದ್ದು ಹಾಗೆಯೇ ಇರುತ್ತದೆ. ಯಾರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ, ಅವರ ವಿರುದ್ಧ ಯಾವುದೇ criminal case ಗಳನ್ನು ರೈತರ ಮೇಲೆ ಹಾಕಬಾರದು ಎನ್ನುವುದಕ್ಕೆ.

**ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಪ್ರಕರಣಗಳು ಇರುವುದಕ್ಕೆ ಏನು ಮಾಡುತ್ತಾರೆಂದು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ಈಗ ಈ ಕಾಯ್ದೆಯನ್ನು ತಂದಿರುವುದರಿಂದ ಅದನ್ನು ವಾಪಸ್ ತೆಗೆಯುವಂತಹ ಕೆಲಸ ಮಾಡಬೇಕಾಗುತ್ತದೆ.

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಅವುಗಳ genuine ಅನ್ನು check ಮಾಡಬೇಕಾಗುತ್ತದೆ.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ಇದರಿಂದ ಹೆಚ್ಚಿನ ರೀತಿಯಲ್ಲಿ ಹಳ್ಳಿಗೆ ಒತ್ತು ಬರುತ್ತದೆ. ಇದು ನಗರ ಪ್ರದೇಶಕ್ಕೆ ಸಂಬಂಧಪಡುವುದಿಲ್ಲ. ಬೆಂಗಳೂರು ನಗರದಲ್ಲಿ ಆಗಿರುವಂತಹ ಕಬಳಿಕೆಯ ಪ್ರಕರಣಗಳು ಹಾಗೆಯೇ ಇರುತ್ತವೆ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಕೇಳುವುದಕ್ಕೆ ಪುಟ ಸಂಖ್ಯೆ 2 ಮತ್ತು ಪ್ಯಾರ 4 ರಲ್ಲಿ ನಮೂದಿಸಿರುವಂತೆ "10 ಎ ಮಾಡಿದ್ದಾರೆ, 10 ಬಿ ರಡಿ ಹೊಸ ಪ್ರಕರಣದ ಸೇರ್ಪಡೆ, 10 ಎ ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಕೊಟ್ಟಿದ್ದಾರೆ, 10 ಬಿ ರಡಿ ವಿಶೇಷ ನ್ಯಾಯಾಲಯಗಳು ವ್ಯವಹರಣೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಶೀಘ್ರವಾಗಿ ನಡೆಸುವುದು ಮತ್ತು ತನ್ನ ತೀರ್ಮಾನದ ಪ್ರತಿಗಳನ್ನು ಪಕ್ಷಕಾರರಿಗೆ ಒದಗಿಸುವುದು" ಹೊಸದಾಗಿ ಈ ಎಲ್ಲಾ provision ನ್ನು ಕೊಟ್ಟಿದ್ದಾರೆ. ಆದರೆ, ಇದನ್ನು ತಾಲ್ಲೂಕ್ ಮಟ್ಟದಲ್ಲಿ ಮಾಡುತ್ತಾರೆಯೇ ಅಥವಾ ಜಿಲ್ಲಾ ಮಟ್ಟದಲ್ಲಿ ಮಾಡುತ್ತಾರೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ಇವುಗಳನ್ನು District Level Committee ಗಳಲ್ಲಿ, court ನಲ್ಲಿಯೇ ತೀರ್ಮಾನ ಮಾಡುತ್ತಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಆಯಾ ಜಿಲ್ಲೆಯವರು, ಆ ಜಿಲ್ಲೆಯಲ್ಲಿ ಮಾಡಿಕೊಳ್ಳುವಂತಹ ರೀತಿಯಲ್ಲಿ ಮಾಡಿದ್ದಾರೆ, ಇದು ಬಹಳ ಒಳ್ಳೆಯದು. ಇದು ಬಹಳ ಪ್ರಾಮುಖ್ಯವಾಗಿ ಇದೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ **ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ)** ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

**ಖಂಡ 2 ರಿಂದ 7 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 7 ರವರೆಗೆ ಎರಡೂ ಸೇರಿದಂತೆ ಶೆಡರಡ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 7 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**(ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ **ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕವನ್ನು** ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ **ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ)** ವಿಧೇಯಕವನ್ನು ಅಂಗೀಕರಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಈ) ಕೈಗಾರಿಕಾ ವಿವಾದಗಳು ಮತ್ತು ಇತರ ಕೆಲವು ಕಾನೂನುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಕಾರ್ಮಿಕ ಮತ್ತು ಸಕ್ಕರೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ **ಕೈಗಾರಿಕಾ ವಿವಾದಗಳು ಮತ್ತು ಇತರ ಕೆಲವು ಕಾನೂನುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು** ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಕಾರ್ಮಿಕ ಮತ್ತು ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ, ಕೈಗಾರಿಕೆಗಳ ನಿಯಮ 25 ರಡಿಯಲ್ಲಿ ಒಂದು ಕೈಗಾರಿಕೆಗೆ 100 ಜನ ನೌಕರರನ್ನು ನೇಮಿಸಿಕೊಳ್ಳುವುದಕ್ಕೂ ಮತ್ತು ಕಾರ್ಖಾನೆಗಳನ್ನು ಬಂದ್ ಮಾಡುವುದಕ್ಕೆ ಅನುಮತಿಯನ್ನು ಕೇಳಬೇಕಾಗಿತ್ತು. ಮೊದಲು 100 ಜನರು ಇರುವಂತಹ ಕಾರ್ಖಾನೆಯನ್ನು ಬಂದ್ ಮಾಡುವುದಕ್ಕೆ ಅನುಮತಿಯನ್ನು ಕೇಳಬೇಕಾಗಿತ್ತು. ಈಗ ಅದನ್ನು 300 ಕಾರ್ಮಿಕರ ತನಕ ಅನುಮತಿ ರಹಿತವಾಗಿ ಬಂದ್ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದೇವೆ. ಇದು 1947ರಲ್ಲಿ ಇರುವಂತಹ ಕಾನೂನು. ನಾವು ಇದನ್ನು ಇತ್ತೀಚೆಗೆ ಬದಲಾವಣೆ ಮಾಡಿ ಈ ವಿಧೇಯಕವನ್ನು ತಂದಿದ್ದೇವೆ. ಎರಡನೆಯದಾಗಿ, ಗುತ್ತಿಗೆ ಕಾರ್ಮಿಕರು 1971ರ ಕಾನೂನಿನಲ್ಲಿ 20 ಜನರಿದ್ದು, ಈಗ 50 ಜನರಿಗೆ extend ಮಾಡುವಂತಹದ್ದನ್ನು ತಂದಿದ್ದೇವೆ, 10 ಜನ ಕಾರ್ಮಿಕರು ವಿದ್ಯುತ್ ಸಂಯೋಜನೆ ಮಾಡುವುದಕ್ಕೆ ಇದ್ದು, ಈಗ ಅದನ್ನು 20 ಕಾರ್ಮಿಕರಿಗೆ ಅವಕಾಶ ಕಲ್ಪಿಸಿದ್ದೇವೆ. 20 ಕಾರ್ಮಿಕರು ವಿದ್ಯುತ್ ಸಹಾಯ ಇಲ್ಲದೆ ಕೆಲಸ ಮಾಡುತ್ತಿದ್ದು, ಈಗ ಅದನ್ನು 40 ಕಾರ್ಮಿಕರಿಗೆ ಅವಕಾಶ ಕಲ್ಪಿಸಿದ್ದೇವೆ. OT (Overtime) ಯಲ್ಲಿ 3 ತಿಂಗಳಿಗೆ 75 ಗಂಟೆಗಳು ಎಂದು ಇತ್ತು. ಯಾರಿಗೆ ಅವಶ್ಯಕತೆ ಇದೆ, ಅಂತಹವರು 125 ಗಂಟೆಗಳ ತನಕ ಈಗ ಕೆಲಸವನ್ನು ಮಾಡುವಂತಹ ಅವಕಾಶ ಕೊಟ್ಟಿದ್ದೇವೆ. ಹಾಗಾಗಿ, ಈ ವಿಧೇಯಕವನ್ನು ಪಾಸು ಮಾಡಿಕೊಡಬೇಕೆಂದು ಪ್ರಾರ್ಥನೆಯನ್ನು ಮಾಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 300 ಜನ ಕಾರ್ಮಿಕರನ್ನು ತೆಗೆದರೆ ಇದರಿಂದ ಏನು ಅನುಕೂಲ? ಇದರಿಂದ ಕೆಲಸದವರಿಗೆ ತೊಂದರೆಯಾಗುತ್ತದೆ ಅಲ್ಲವೇ; ಈ ಮೊದಲು ಕಾರ್ಮಿಕರಿಗೆ ಬದ್ಧತೆ ಇತ್ತು, ಹಾಗೆಯೇ ಸರ್ಕಾರದಿಂದ ಅವರಿಗೆ ಒಂದು ರೀತಿಯಲ್ಲಿ ಸಹಾಯ ಇತ್ತು.

**(ಮುಂದು)**

**(932)26-09-2020(8-00)ಎಂವಿ-ಆರ್‌ಎನ್**

**ಶ್ರೀ ಯು.ಬಿ.ವೆಂಕಟೇಶ್ (ಮುಂದು...):-**

ಈಗ 300 ಜನ ಇರುವಂತಹ ಕಂಪನಿ ಸರ್ಕಾರಕ್ಕೆ ಏನೂ ಹೇಳದೆ ಮುಚ್ಚಿಕೊಂಡು ಹೋದರೆ, ಅಲ್ಲಿ ಕೆಲಸ ಮಾಡುವಂತಹ ಕೆಲಸಗಾರರ ಗತಿ ಏನಾಗಬೇಕು?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರಬೈಲ್ ಹೆಬ್ಬಾರ್ ಶಿವರಾಮ್ (ಕಾರ್ಮಿಕ ಮತ್ತು ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ, 100 ಜನರಿಗೆ ಎಂದು ಕಾನೂನಿನಲ್ಲಿ ಇದ್ದರೂ ಕೂಡ. ಕಾರ್ಖಾನೆ ಮಾಲೀಕರು ಒಂದು ವೇಳೆ ಅದನ್ನು ಮುಚ್ಚುತ್ತೇವೆಂದರೆ, ಕಾರ್ಮಿಕರಿಗೆ ಮೂರು ತಿಂಗಳ ವೇತನ ಮತ್ತು ಸಂಬಂಧಪಟ್ಟ ಭತ್ಯೆಯನ್ನು ಕೊಟ್ಟು ಮುಚ್ಚುವುದಕ್ಕೆ ಅವಕಾಶವಿದೆ. ಅದಕ್ಕೆ ಇವತ್ತು ಕೂಡ ಕಾನೂನಿನಲ್ಲಿ ಅವಕಾಶವಿದೆ. ಆದರೆ ಇವತ್ತಿನ ಕೈಗಾರಿಕಾ ಪರಿಸ್ಥಿತಿಯಲ್ಲಿ, 100 ಜನರೂ ಕೆಲಸ ಮಾಡುವುಧಕ್ಕೆ ಬರುತ್ತಿರುವಂತಹ ಸ್ಥಿತಿಯಲ್ಲಿ, ಮೂರು ಶಿಫ್ಟ್‌ನಲ್ಲಿ ಕೆಲಸ ಮಾಡುವಂತಹ ಕಾಲ ಬಂದಿದೆ. ಕೆಲವು ಕಡೆ ಕಾರ್ಖಾನೆಗಳಲ್ಲಿ 100 ಜನರು ಇರುವಂತಹ ಕಡೆ 200 ಜನರು ಎರಡು ಅಥವಾ ಮೂರು ಶಿಫ್ಟ್‌ಗಳಲ್ಲಿ ಕೆಲಸ ಮಾಡುವಂತಹ ಪರಿಸ್ಥಿತಿ ಕೋವಿಡ್-19 ಪರಿಸ್ಥಿತಿಯಲ್ಲಿ ಹಿನ್ನೆಲೆಯಲ್ಲಿ ಬಂದಿದೆ. ಈ ರೀತಿ ಇನ್ನು 3 ರಿಂದ 4 ತಿಂಗಳು ನಡೆಯಬಹುದು ಎಂದು ಉದ್ದಿಮೆದಾರರು ಮಾತನಾಡುತ್ತಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕ ಕೋವಿಡ್ ಇರುವವರೆಗೆ ಮಾತ್ರವೆ?

**ಶ್ರೀ ಆರಬೈಲ್ ಹೆಬ್ಬಾರ್ ಶಿವರಾಮ್:-** ಮಾನ್ಯ ಸಭಾಪತಿಯವರೇ, ಇದು permanent ಆಗಿ ಮುಂದುವರೆಯುತ್ತದೆ. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ಇದನ್ನು ಪ್ರಸ್ತಾಪ ಮಾಡುವಂತಹ ಅನಿವಾರ್ಯತೆ ಬಂದಿದೆ. ಬದಲಾವಣೆ ಮಾಡುವಂತಹ ಕಾಲ ಬಂದಾಗ ಬದಲಾವಣೆ ಮಾಡಬಹುದು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡಿದರೆ ನನ್ನ ಕೆಲಸ ಆಗುತ್ತದೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೂರು ಜನ ಇದ್ದಾಗಲೇ Lockout, Layoff or Closure ಮಾಡಬೇಕಾದರೆ ಸರ್ಕಾರದ ಅನುಮತಿ ತೆಗೆದುಕೊಳ್ಳಬೇಕಾಗಿತ್ತು. ಅದರ ಮೂಲ ಉದ್ದೇಶ ಇದ್ದದ್ದು, ದುಡಿದು ತಿನ್ನುವಂತಹ ಕಾರ್ಮಿಕ ವರ್ಗವನ್ನು ಶೋಷಣೆಯಿಂದ ತಪ್ಪಿಸತಕ್ಕಂಥದ್ದು, ಮಾಲೀಕ ತನಗೆ ಬೇಕಾದಾಗ ಅಂಗಡಿಯನ್ನು ತೆರೆದು, ಬೇಡವಾದಾಗ ಅಂಗಡಿಯನ್ನು ಮುಚ್ಚಿಕೊಂಡು ಹೋಗುವಂತಹ ಕೆಲಸ ಆಗಬಾರದು. ಸುಮಾರು 10 ರಿಂದ 15 ವರ್ಷಗಳ ಕಾಲ ಕೆಲಸ ಮಾಡಿದಂತಹ ಒಂದು ಫ್ಯಾಕ್ಟರಿ ಯಾವುದೋ ಕಾರಣಕ್ಕೆ ಮುಚ್ಚಿದರೆ, ಅದಕ್ಕೆ ಸಮರ್ಥವಾದಂತಹ ಕಾರಣವನ್ನು ಸರ್ಕಾರಕ್ಕೆ ನೀಡಬೇಕಾಗಿತ್ತು ಮತ್ತು Commissioner, Department of Labour ರವರು permission ಕೊಡಬೇಕಾಗಿತ್ತು. ಸುಮಾರು 10

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಿಂದ 15 ವರ್ಷಗಳ ನಂತರ ಕಾರ್ಖಾನೆ ಇದ್ದಕ್ಕಿದ್ದ ಹಾಗೆ closure ಆಗಿ ಬಿಟ್ಟರೆ, ಆ ಕಾರ್ಮಿಕ ಬೀದಿಪಾಲಾದಾಗ ಅವನ ಕುಟುಂಬದ ಮತ್ತು social security ಪ್ರಶ್ನೆ ಇದೆ. ಆದರೆ, ಈಗ ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಬೇಕಾಗಿಲ್ಲ ಎನ್ನುವಂತಹ ಈ ಕಾಯಿದೆ, ಕಾರ್ಮಿಕರ ಹಿತದೃಷ್ಟಿಯಿಂದ ಮಾರಕವಾಗುತ್ತದೆ. ಮುಂಚೆ 100 ಜನರು ಇದ್ದಾಗ ಆಡಳಿತ ವರ್ಗಗಳು ಯಾವೊತ್ತು ಸಹ 90 ಜನರಿಗಿಂತ ಜಾಸ್ತಿ ತೋರಿಸುತ್ತಿರಲಿಲ್ಲ. ಅವರು 90 ಜನರ ಒಳಗೆ ತೋರಿಸುತ್ತಿದ್ದರು. ಅದು ರೆಕಾರ್ಡ್‌ನಲ್ಲೆ ಇರುತ್ತಿರಲಿಲ್ಲ. ಅದು ಕಾನೂನು ಬಿಗಿಯಾಗಿದ್ದಾಗ ನುಸುಳಿ ಹೋಗಿವೆ. ಈಗ ಮ್ಯಾನೇಜ್‌ಮೆಂಟ್‌ಗಳಿಗೆ 300 ಜನರು ಎಂದು ಕೊಟ್ಟಾಗ, ಅದು 290 ಜನರನ್ನು ತೋರಿಸುವುದಿಲ್ಲ. ಅಂದರೆ, 500 ಜನರು ಇದ್ದರು ಕೂಡ. ಬೇರೆ ಬೇರೆ ರೂಪದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇಟ್ಟುಕೊಂಡಿರುತ್ತಾರೆ. ಈ ರೀತಿ ಸರ್ಕಾರ ತನ್ನ ನಿಯಂತ್ರಣವನ್ನು ಕಳೆದುಕೊಂಡು ಬಿಡುತ್ತದೆ. ಆ ಕೈಗಾರಿಕಗಳಿಗೆ ಸರ್ಕಾರ ಹಲವಾರು ಸವಲತ್ತುಗಳನ್ನು ನೀಡಿರುತ್ತದೆ. ಅಂದರೆ, ಜಾಗ, ನೀರು, ರಸ್ತೆ, ವಿದ್ಯುಚ್ಛಕ್ತಿ ಮತ್ತು ಸಬ್ಸಿಡಿ ಕೊಟ್ಟಿರುತ್ತಾರೆ. ಅಂತಹ ಎಲ್ಲಾ ಸಂದರ್ಭದಲ್ಲಿ ಸರ್ಕಾರ ಕೊಟ್ಟಿರುವುದು ಉದ್ಯೋಗದ ಸೃಷ್ಟಿಗೋಸ್ಕರ. ನಿರುದ್ಯೋಗದ ನಿವಾರಣೆಗೋಸ್ಕರ. ಬದುಕಿ ತಿನ್ನುವ ಮಾರ್ಗ ಸೃಷ್ಟಿಯಾಗಲಿ ಎಂದು. ಇದ್ದಕ್ಕಿದ್ದಂತೆ ಮುಚ್ಚುವುದಕ್ಕೆ ಅನುಮತಿಯನ್ನು ಕೊಟ್ಟರೆ, ದೊಡ್ಡ ಸಂಖ್ಯೆಯಲ್ಲಿ 300 ಜನ ಅಂದರೆ ಇದು ಒಂದು ಕೈಗಾರಿಕೆಯದು. ಅಂತಹ ಸಾವಿರಾರು ಕೈಗಾರಿಕೆಗಳು ಇದನ್ನು ದುರ್ಬಳಕೆ ಮಾಡಿಕೊಂಡರೆ, ರಾಜ್ಯದಲ್ಲಿ ನಿರುದ್ಯೋಗದ ಸಮಸ್ಯೆ ಜಾಸ್ತಿಯಾಗುತ್ತದೆ ಮತ್ತು ಕಾರ್ಮಿಕರ ಹೋರಾಟ ಮತ್ತು ಅಶಾಂತಿ ಪ್ರಾರಂಭವಾಗುತ್ತದೆ. ಸರ್ಕಾರ ಇಷ್ಟು ಸುಲಭವಾಗಿ ತನ್ನ ನಿಯಂತ್ರಣವನ್ನು ಕಳೆದುಕೊಳ್ಳಬಾರದು ಎಂದು ನನ್ನ ವ್ಯಕ್ತಿಗತವಾದ ಅಭಿಪ್ರಾಯ. ಈಗ ಮತ್ತೊಂದು working hours ಬಗ್ಗೆ. ಅದು ಕೋವಿಡ್-19 ಅವಧಿಗೆ ಸೀಮಿತವಾದರೆ ಪರವಾಗಿಲ್ಲ. ಆದರೆ, ಮಾನ್ಯ ಸಚಿವರು ಇದು permanent ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಹಾಗಂತ ಜಾಸ್ತಿ ಮಾಡಿದರೆ,...

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅಂತರರಾಷ್ಟ್ರೀಯ ಮಟ್ಟದಲ್ಲಿ International Labour Lawಗಳು, ಅಂತರರಾಷ್ಟ್ರೀಯ ಮಟ್ಟದಲ್ಲಿ ಆಗಿರುವಂತಹ ಒಪ್ಪಂದಗಳು, ಒಬ್ಬ ಮನುಷ್ಯನ ದೈಹಿಕ ಶಕ್ತಿ ನಿರ್ವಹಣೆ ಎಂಟು ಗಂಟೆಗಳ ಕಾಲ ಇರುತ್ತದೆ ಎಂದು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಿದ್ದಾರೆ. ಅದಕ್ಕಿಂತ ಜಾಸ್ತಿ ಮಾಡಿದರೆ, ಅವನ ಆರೋಗ್ಯದ ದೃಷ್ಟಿಯಿಂದ ಅಥವಾ ಅವನ ಕ್ಷಮತೆಯ ದೃಷ್ಟಿಯಿಂದ ಅವನ efficiency ಕಡಿಮೆಯಾಗುತ್ತದೆ. ಆದರೆ, ಆಗತ್ಯ ಬಿದ್ದಾಗ, working hours ಆತ ಇಷ್ಟಪಟ್ಟರೆ, ಮಾಡುವುದಕ್ಕೆ ಅವಕಾಶವಿತ್ತು. ಆದರೆ, ಅದನ್ನು ಕೂಡ ಅವರ ಇಚ್ಚೆ ಬಂದ ಹಾಗೆ ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅಂದರೆ ವಾರಕ್ಕೆ 72 ಗಂಟೆಗಳು ಎಂದು. ಅಂದರೆ, ಸರಾಸರಿ, 10 ರಿಂದ 12 ಗಂಟೆಗಳ ಕಾಲ ಹೆಚ್ಚು ಕೆಲಸವನ್ನು ಮಾಡುವಂತಹ ಅವಕಾಶವನ್ನು ಕೊಟ್ಟಿದ್ದಾರೆ. ಕಾರ್ಮಿಕರು ತಮ್ಮ ಹೊಟ್ಟೆಪಾಡಿಗಾಗಿ, ತಮಗೆ ಬಂದಷ್ಟು ಸಂಬಳ ಜಾಸ್ತಿ ಸಿಗುತ್ತದೆ ಎಂದು ಅವನು ಕೆಲಸ ಮಾಡುವುದಕ್ಕೆ ತಯಾರಾಗುತ್ತಾನೆ. ಆದರೆ, ಆ ರೀತಿಯ ಹಣದ ಆಸೆಗೋಸ್ಕರ ತನ್ನ ದೇಹವನ್ನು ಹಾಗೆ ದಂಡಿಸಬಾರದು ಎನ್ನುವ ಕಾರಣಕ್ಕೋಸ್ಕರ working hours ಅನ್ನು limit ಮಾಡಿರುವಂಥದ್ದು. ಅವರು ಕೆಲಸ ಮಾಡುತ್ತಿದ್ದಾರೆ, ಅದಕ್ಕೆ ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದೇವೆಂದರೆ, ಕೆಲಸವನ್ನು ಮಾಡಿಸಿಕೊಳ್ಳುವುದಕ್ಕೆ ಹೋಗಬಾರದು. ಅದು ಮಾನವೀಯತೆ ವಿರುದ್ಧ, ದೇಶದಲ್ಲಿ ಆರೋಗ್ಯವಂತ ಶ್ರಮಿಕ ಇರಬೇಕು ಎನ್ನತಕ್ಕಂಥ concept ಅನ್ನು ತಂದಿರತಕ್ಕಂಥದ್ದು. ಈ ರೀತಿ ಕೇವಲ ಮಾಲೀಕರನ್ನು ಗಮನದಲ್ಲಿಟ್ಟುಕೊಂಡು ಈ ತಿದ್ದುಪಡಿ ಬಂದುಬಿಟ್ಟಿದೆ. ಅದಕ್ಕೆ ಕಾರ್ಮಿಕರನ್ನು ಗಮನಿಸಲಿ, ಕಾರ್ಖಾನೆಗಳು ಬರಬೇಕು, ಉದ್ಯೋಗ ಸೃಷ್ಟಿಯಾಗಬೇಕು. ನಾನು ಈ ವಿಧೇಯಕವನ್ನು ವಿರೋಧಿಸುತ್ತಿಲ್ಲ. ಆದರೆ, ಸಣ್ಣಪುಟ್ಟ ತಿದ್ದುಪಡಿ ಮಾಡುವುದು ಒಳ್ಳೆಯದು ಎಂದು ನನ್ನ ಸಲಹೆಯನ್ನು ಕೊಡುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿರುವುಕ್ಕೆ ತಮಗೆ ಧನ್ಯವಾದಗಳು. ಸರ್ಕಾರ ಏನು ಕಾರ್ಮಿಕ ಕಾಯ್ದೆಗೆ ಮೂರು ತಿದ್ದುಪಡಿಗಳನ್ನು ತಂದಿದೆ, ಅವು ಕಾರ್ಮಿಕರ ವಿರೋಧಿ ಕಾಯ್ದೆಗಳು. ಕಾರ್ಮಿಕರ ಹಿತಕ್ಕೆ ಧಕ್ಕೆ ತರುವಂತಹ ಕಾಯ್ದೆಗಳು. ಹಿರಿಯ ಸದಸ್ಯರಾದ ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದ ಹಾಗೆ, 100 ಜನರಿಗೆ ಕಡಿಮೆ ಇರುವಂಥದ್ದಕ್ಕೆ inspection ಮತ್ತು ರಿಜಿಸ್ಟ್ರೇಷನ್‌ಗೆ ಅವಶ್ಯಕತೆ ಇರಲಿಲ್ಲ. ಈಗ ಅದನ್ನು 300 ಜನರಿಗೆ ಹೆಚ್ಚಿಸಿದ್ದಾರೆ. ಅಂದರೆ, 300ಕ್ಕಿಂತ ಕಡಿಮೆ ಇರತಕ್ಕಂತಹ ಯಾವುದೇ ಉದ್ಯಮ ಸರ್ಕಾರದ inspection ಮತ್ತು ರಿಜಿಸ್ಟ್ರೇಷನ್‌ಗೆ ಒಳಗಾಗುವುದಿಲ್ಲ. ಈಗ ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದ ಹಾಗೆ ಏನಾಗುತ್ತದೆಂದರೆ, hire and fire, ಯಾವಾಗ ಬೇಕಾದರೂ ಯಾರನ್ನಾದರೂ ನೇಮಿಸಿಕೊಳ್ಳಬಹುದು, ಯಾರನ್ನಾದರೂ ಬೇಕಾದರೆ fire.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬಹುದು. ಅಂತಹ ಒಂದು ಹಂತಕ್ಕೆ ತಂದು ಹಾಕಿದೆ. ಈಗ ಎರಡನೆಯದಾಗಿ, ಕಾರ್ಮಿಕರ ಹಿತರಕ್ಷಣೆಗೋಸ್ಕರ, ಸಾಮಾಜಿಕ ಭದ್ರತೆಯ ಸಲುವಾಗಿ ಇರುವಂತಹ, ಇ.ಎಸ್.ಐ., ಮತ್ತು ಪಿ.ಎಫ್., ಇನ್ಶೂರೆನ್ಸ್ ಸ್ಕೀಮ್ ಆಗಲಿ ಅಥವಾ ಪ್ರಾವಿಡೆಂಟ್ ಫಂಡ್ ಸ್ಕೀಮ್ ಆಗಲಿ, ಅವುಗಳ ಮೇಲೆ inspection ಮಾಡತಕ್ಕಂತಹ ಅಧಿಕಾರ Commissioner of Provident Fund ಅವರಿಗೆ ಇತ್ತು. ಈಗ ಈ ಹತೋಟಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಸಾಮಾಜಿಕ ಭದ್ರತೆ ಬರುವುದಿಲ್ಲ. ಅವರು ಇ.ಎಸ್.ಐ. ಕಟ್ಟಿದ್ದಾರೋ, ಪಿ.ಎಫ್. ವಂತಿಗೆಯನ್ನು ಕಟ್ಟಿದ್ದಾರೋ ಅದನ್ನು ಮಾಲೀಕರ ರಿಕವರಿ ಮಾಡಿಕೊಂಡಿದ್ದಾರೋ ಇಲ್ಲವೋ ಎಂದು ನೋಡುವ ಅಧಿಕಾರ ಸರ್ಕಾರಕ್ಕೆ ಬರುವುದಿಲ್ಲ. ಅದನ್ನು ಏನಿದ್ದರೂ ಕೇಂದ್ರ ಸರ್ಕಾರದವರು ನೋಡಿಕೊಳ್ಳಬೇಕಾಗುತ್ತದೆ. ಈಗ ಇವರು 72 ಗಂಟೆಗಳ over time working hours ಕೊಟ್ಟಿದ್ದಾರೆ. ಅದು ಮೂರು ತಿಂಗಳಿಗೆ ಮಾತ್ರ ಎಂದು ಹೇಳಿದ್ದಾರೆ. ನಮ್ಮ ಹಿರಿಯ ಸದಸ್ಯರು ಹೇಳಿದ ಹಾಗೆ, ಶ್ರಮಿಕ ತನ್ನ ಸಂಪನ್ಮೂಲ ಅಥವಾ ತನಗೆ ಹೆಚ್ಚಿನ ಆದಾಯ ಬರಲಿ ಎಂದು ಹೇಳಿ ಎಲ್ಲಾ over time ಅನ್ನು ಒಂದು ಅಥವಾ ಎರಡು ತಿಂಗಳಿನಲ್ಲಿ ಮುಗಿಸಬಹುದು. ಇದರಿಂದ ಕಾರ್ಮಿಕನ ಆರೋಗ್ಯ ಏನಾಗುತ್ತದೆ, ಅವನ ಕುಟುಂಬದ ಮೇಲೆ ಏನು ಪರಿಣಾಮ ಬೀರುತ್ತದೆ. ಎಂಬುದನ್ನು ಸರ್ಕಾರ ಯೋಚನೆ ಮಾಡಿದ ಹಾಗೆ ಕಾಣುತ್ತಿಲ್ಲ. ಬೇರೆ ಯಾರೋ ಎಂ.ಎನ್.ಸಿ. ಮತ್ತು ಕಾರ್ಪೊರೇಟ್ ಕಂಪನಿಗಳ ಡಿಟೈಲ್ಸ್ ಮೇಲೆ ತಂದಿದ್ದಾರೆ. ಅವರು ಕಾರ್ಮಿಕರ ಬಗ್ಗೆ ಯೋಚನೆ ಮಾಡಿಲ್ಲ. ಇದು ಕಾರ್ಮಿಕರ ವಿರೋಧಿ ನೀತಿ. ದಯಮಾಡಿ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಲಿ. ಈ ವಿಧೇಯಕಕ್ಕೆ ನಮ್ಮ ಪಕ್ಷದ ವತಿಯಿಂದ ವಿರೋಧವಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಕಾರ್ಮಿಕ ಕಾನೂನುಗಳ ಬಗ್ಗೆ ಅಪಾರವಾದ ಅನುಭವ ಹೊಂದಿದ್ದಾರೆ. ಈಗ 100 ಜನರ ಒಳಗೆ ಇರುವಂತಹ ಕಾರ್ಖಾನೆಗಳಲ್ಲಿ, layoff ಮಾಡಬೇಕಾದರೆ, retrench ಮಾಡಬೇಕಾದರೆ, closure ಮಾಡಬೇಕಾದರೆ, ಪರ್ಮಿಷನ್ ಇರಲಿಲ್ಲ. ಈಗ 150 ಜನರು ಇದ್ದರೆ 100 ಜನರು ಎಂದು ಹಾಜರಾತಿ ಪುಸ್ತಕದಲ್ಲಿ ತೋರಿಸುತ್ತಾರೆ. ಬೇರೆ ರೂಪದಿಂದ ಕಾರ್ಮಿಕರ ಕಡೆಯಿಂದ ದುಡಿಮೆ ಮಾಡಿಸಿಕೊಳ್ಳುವುದು, ಯಾವಾಗ ಬೇಕಾದರೂ ಅಂಗಡಿಯನ್ನು ತೆರೆಯುವುದು, ಬೇಡವಾದಾಗ ಬೀಗ ಹಾಕಿ ಕಾರ್ಮಿಕರನ್ನು ಕಳುಹಿಸುವುದು. ಹೀಗಾದರೆ ಮುಂದೆ ಕಾರ್ಮಿಕರ ಜೀವನದ ಗತಿ ಏನು? ಈಗ ಅದನ್ನು 300 ಜನರಿಗೆ ಏರಿಸಿದರೆ, 100 ಜನರು

ಅನಾಥರಾಗುವುದು ಈಗ 300 ಜನರು ಅನಾಥರಾಗುತ್ತಾರೆ. ಈಗ ಯಾವುದೇ ಒಂದು ಉದ್ಯಮ ಕಾರ್ಮಿಕರ ಬೇವರಿನಿಂದ ಬೆಳೆಯುತ್ತದೆ. ಆ ಉದ್ಯಮ ಸೃಷ್ಟಿಯಾದಾಗ employment generation ಆಗುತ್ತದೆ. ದುಡಿಯುವ ಕೈಗಳಿಗೆ ಉದ್ಯೋಗ ಸಿಗುತ್ತದೆ. ಅಂತಹವುದರಲ್ಲಿ ಕಾರ್ಮಿಕರ ಹಿತಾಸಕ್ತಿಗೆ ಧಕ್ಕೆ ತರುವಂತಹ ಕಾನೂನು ಇದು. 100 ಜನ ಕಾರ್ಮಿಕರು ಇದ್ದಾಗ ಅನ್ಯಾಯವಾಗುತ್ತಿತ್ತು. 100 ಜನರಿಗೆ ಅನ್ಯಾಯವಾಗುವುದು ಬೇಡ. ಒಮ್ಮೆ layoff, retrench ಮಾಡಿ 300 ಜನರಿಗೆ ಎಂದರೆ, ಈಗ 500 ಜನರು ಇದ್ದರು ಅವರು 300 ಜನರನ್ನು ತೋರಿಸುತ್ತಾರೆ. ಆಗ ಯಾವಾಗ ಬೇಕು ಆಗ ಅವರನ್ನು ಕೆಲಸದಿಂದ ತೆಗೆಯಬಹುದು. ಅಂದರೆ ಅವರ ಮೇಲೆ ಯಾವಾಗಲೂ ತೂಗುಗತ್ತಿ. ಮ್ಯಾನೇಜ್‌ಮೆಂಟ್‌ನವರು ಅವರನ್ನು ಇಟ್ಟುಕೊಳ್ಳಬಹುದು ಮತ್ತು ಅವರನ್ನು ಯಾವಾಗ ಬೇಕಾದರೂ ತೆಗೆಯಬಹುದು ಮತ್ತು ಅವರಿಗೆ ಮನಸ್ಸೋ ಇಚ್ಛೆ ದುಡಿಮೆಯನ್ನು ಕೊಡುವುದು. ಕಾರ್ಮಿಕರ ಬಗ್ಗೆ ಕಾಳಜಿ ವಹಿಸಬೇಕು. ಅಂದರೆ, ಸರ್ಕಾರವೇ ಕಾರ್ಮಿಕರ ಬಗ್ಗೆ ಕಾಳಜಿ ವಹಿಸಬೇಕು. ಈಗ over time working hours 72 ಗಂಟೆಗಳಿಗೆ ಪರವಾನಿಗೆಯನ್ನು ಕೊಟ್ಟಿದ್ದಾರೆ. ವಾರಕ್ಕೆ 72 ಗಂಟಯಾದರೆ, ದಿವಸಕ್ಕೆ 10 ಗಂಟೆಯಾಗುತ್ತದೆ. ಈಗ 8 ಗಂಟೆ ದುಡಿಮೆ ಮತ್ತೆ 10 ಗಂಟೆ ಎಂದರೆ 18 ಗಂಟೆಯಾಗುತ್ತದೆ.

**ಶ್ರೀ ಆರಬೈಲ್ ಹೆಬ್ಬಾರ್ ಶಿವರಾಮ್:-** ಮಾನ್ಯ ಸಭಾಪತಿಯವರೇ, ಮೂರು ತಿಂಗಳಿಗೆ ಅಂದರೆ 125 ಗಂಟೆಗೆ ಎಂದು ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ ಹಾಗೆ ಅದು ಜಾಸ್ತಿಯಾಯಿತು. ಇಲ್ಲಿ ಬೆಳಗ್ಗೆ 10 ಗಂಟೆಗೆ ಸದನ ಪ್ರಾರಂಭವಾಗಿದೆ. ಈಗ ರಾತ್ರಿ 10 ಗಂಟೆಯಾಗಿದೆ. ಈಗಾಗಲೇ 2 ಗಂಟೆಗಳ ಓವರ್ ಟೈಮ್ ಆಯಿತು. ನಾವು 8 ಗಂಟೆಗಳ ಕಾಲ comfortably ಕುಳಿತು, ಸರಿಯಾಗಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸದನವನ್ನು ನಾಳೆ ಬೆಳಗ್ಗೆವರೆಗೆ ನಡೆಸಿದರೆ, ನಾವು effective ಆಗಿ ಚರ್ಚೆ ಮಾಡುವುದಕ್ಕಾಗುತ್ತದೆಯೇ? ನಾವು ಇಲ್ಲಿ air-conditioned ಹಾಲ್‌ನಲ್ಲಿ ಕುಳಿತುಕೊಂಡು, ಚರ್ಚೆ ಮಾಡುವುದು ಅಷ್ಟೆ. ಆದರೆ, ಕಾರ್ಮಿಕ ಕಾರ್ಖಾನೆಯಲ್ಲಿ ದುಡಿಮೆ ಮಾಡಬೇಕು, ಅವರು ಶ್ರಮಪಡಬೇಕು, ಅವರು ಮೈತುಂಬ ಕಣ್ಣಿಟ್ಟುಕೊಂಡು ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(933) 26.09.2020 08.10 LL-RN**

**ಶ್ರೀ ಎಸ್.ಆರ್. ಪಾಟೀಲ್(ಮುಂದು):-**

ಕಾರ್ಮಿಕ ಕಾರ್ಖಾನೆಯಲ್ಲಿ ದುಡಿಮೆ ಮಾಡಬೇಕು, ಶ್ರಮ ಪಡಬೇಕು, ಮೈ ತುಂಬಾ ಎಚ್ಚರಿಕೆ ವಹಿಸಿ ಕೆಲಸ ಮಾಡಬೇಕು. ಯಂತ್ರಗಳ ಜೊತೆ ಕೆಲಸ ಮಾಡಬೇಕು. ಆತ ಸ್ವಲ್ಪ ಎಚ್ಚರ ತಪ್ಪಿದರೂ ಆ ಕಾರ್ಮಿಕನ ಜೀವವೇ ಹೋಗುತ್ತದೆ. ಏಕೆಂದರೆ, ನಾವು ಕಾರ್ಖಾನೆ ನಡೆಸಿ ನಮಗೆ ಅನುಭವವಿದೆ. ಹಾಗಾಗಿ, ಬಹುತರವಾಗಿ ಈ ಕಾನೂನಿಗೆ ತಿದ್ದುಪಡಿ ತಂದಿರುವುದನ್ನು ನೋಡಿದರೆ, ಕೇಂದ್ರ ಸರ್ಕಾರದವರು ಈ ರೀತಿ ಕಾನೂನು ತರಬೇಕೆಂದು ಹೇಳಿರುವಂತೆ ಕಾಣುತ್ತದೆ. ಅಂದರೆ, ಈ ಕಾನೂನು ತರಬೇಕೆಂದು ನಿರ್ದೇಶನ ಬಂದಿರುತ್ತದೆ. ಹಾಗಾಗಿ, ಅದನ್ನು ಆರ್ಡಿನೆನ್ಸ್ ಮಾಡಿ, ನಮ್ಮ ರಾಜ್ಯದಲ್ಲಿ ಕಾನೂನನ್ನು ಜಾರಿಗೆ ತಂದಿದ್ದಾರೆ. ಇದು ಕಾರ್ಮಿಕರ ಹಿತಾಸಕ್ತಿಗೆ ವಿರುದ್ಧವಾದ ಕಾನೂನಾಗಿದೆ. ಇದರಿಂದ, ಕಾರ್ಮಿಕರ ದಿವ್ಯ ನಿರ್ಲಕ್ಷ್ಯವಾಗುತ್ತದೆ. ಇದು ಕಾರ್ಮಿಕ ವಿರೋಧಿ ಕಾನೂನಾಗಿದೆ. ಓವರ್ ಟೈಮ್‌ನಲ್ಲಿಯೂ ಅದೇ ರೀತಿ ಮಾಡಿದ್ದಾರೆ ಹಾಗೂ ಹೆಚ್ಚು ಸಂಖ್ಯೆಯಲ್ಲಿರುವಂತಹ ಕಾರ್ಮಿಕರು ಇರುವಂತಹ ಕಾರ್ಖಾನೆಯಲ್ಲಿ 300 ಕ್ಕೆ ಹೆಚ್ಚಿಸಿದ್ದಾರೆ.

**ಶ್ರೀ ಯು.ಬಿ. ವೆಂಕಟೇಶ್:-** ಸರ್, ತಮಗೆ ಓವರ್ ಟೈಮ್ ಇರುವುದಿಲ್ಲ. ಶೇಕಡ 30 ರಷ್ಟು ರಿಯಾಯಿತಿ ಮಾತ್ರ ಇರುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾರ್ಮಿಕ ಸಚಿವರು ಕಾರ್ಮಿಕರ ಬಗ್ಗೆ ಚಿಂತನೆ ಮಾಡಬೇಕು. ಕಾರ್ಮಿಕರ ಭವಿಷ್ಯತ್ ಬಗ್ಗೆ, ಕಾರ್ಮಿಕ ಕಲ್ಯಾಣದ ಬಗ್ಗೆ ಚಿಂತನೆ ಮಾಡಬೇಕು. Earning hand ಓವರ್‌ಟೈಮ್ ಕೆಲಸ ಮಾಡಿ, ಅವನ ಆರೋಗ್ಯ ಕೆಡಿಸಿಕೊಂಡು, ಆತನಿಗೆ ಏನಾದರೂ ತೊಂದರೆಯಾದರೆ, ಆತನ ಕುಟುಂಬ ಬೀದಿಗೆ ಬರುತ್ತದೆ. ಇದರಲ್ಲಿ ಕೇವಲ ಕಾರ್ಮಿಕನ ಹಿತಾಸಕ್ತಿ ಅಲ್ಲದೇ, ಆತನ ಕುಟುಂಬ ಅಂದರೆ, ಆತನ ಹೆಂಡತಿ ಮತ್ತು ಮಕ್ಕಳು ಅವರ ಭವಿಷ್ಯತ್ತು ಕೂಡ ಇದರಲ್ಲಿ ಇದೆ. ಹಾಗಾಗಿ, ನಾನು ಹೇಳುವುದೇನೆಂದರೆ, ಈ ವಿಧೇಯಕವನ್ನು ಹಿಂತೆಗೆದುಕೊಳ್ಳಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಯಾವ ಉದ್ದೇಶದಿಂದ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿರುತ್ತಾರೆ ಎಂಬುದನ್ನು ತಿಳಿಸಬೇಕು. ಏಕೆಂದರೆ, ಮಾನ್ಯ ಸಚಿವರು ವಿಧೇಯಕದ ಬಗ್ಗೆ ವಿವರಣೆ ನೀಡುವಾಗ, ಉದ್ದೇಶ ಏನೆಂಬುದನ್ನು ಸರಿಯಾಗಿ ಹೇಳಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದವರು ವ್ಯಾಪಾರಸ್ಥರು ಮತ್ತು ಮಾಲೀಕರ ಪರವಾಗಿ ಈ ವಿಧೇಯಕವನ್ನು ತಂದಿರುತ್ತಾರೆ. ಯಾವಾಗಲೇ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ, ಇದೇ ಉದ್ಯೋಗ. ಅದಕ್ಕೆ ಮಾನ್ಯ ಕಾರ್ಮಿಕ ಸಚಿವರು ಉತ್ತರ ನೀಡಬೇಕು. **(ಗೊಂದಲ)** ಹೌದು, ನಾನು ಹಾಗೇಯೇ ಮಾತನಾಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ರೀತಿ ಮಾತನಾಡಬಾರದು. ಏಕೆಂದರೆ, ಬಿಜೆಪಿ ಪಕ್ಷದವರಾದ ನಾವುಗಳು ಕೂಡ ಇಲ್ಲಿ ಇದ್ದೇವೆ. ಮಾನ್ಯ ಸದಸ್ಯರಿಗಿಂತಲೂ ಹೆಚ್ಚಿನದಾಗಿ ಕಾರ್ಮಿಕರ ಪರವಾಗಿ ಮಾತನಾಡುತ್ತೇವೆ. ನಮ್ಮಗೆ ಪಕ್ಷದ ಮೇಲೆ ಆರೋಪ ಮಾಡಿದರೆ ಹೇಗೆ? ಅದನ್ನು ನಾವುಗಳು ಹೇಗೆ ಸಹಿಸಿಕೊಳ್ಳಬೇಕು?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಹೇಳಿರುವುದಕ್ಕೆ 4-5 ಉದಾಹರಣೆ ನೀಡಲೇ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಇದೇ ಉದ್ಯೋಗ ಎಂದರೆ ಹೇಗೆ? ಆಗ ಮಾನ್ಯ ಹೊರಟ್ಟಿಯವರು ಇಲ್ಲಿ ಇರಲಿಲ್ಲವೇ?

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಇದೊಂದೇ ವಿಧೇಯಕವಲ್ಲ. ಇಂತಹ ಅನೇಕ ವಿಧೇಯಕಗಳು ಬಂದಿರುತ್ತವೆ. ಹಾಗಾಗಿ, ಆ ರೀತಿ ಮಾತನಾಡಿರುತ್ತಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಧೇಯಕದ ಮೇಲೆ ಮಾತನಾಡಲಿ. ಅದರ ಹೊರತಾಗಿ, ಪಕ್ಷದ ಬಗ್ಗೆ ಮಾತನಾಡಿ ನಮ್ಮನ್ನೆಲ್ಲಾ ಏತಕ್ಕೆ ಮೇಲೆ ಏಳಿಸಿ ನಿಲ್ಲಿಸುತ್ತಾರೆ?

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಕಾರ್ಮಿಕರನ್ನು ಬೀದಿಪಾಲು ಮಾಡುವಂತಹ ಉದ್ಯೋಗ ಮಾಡಬಾರದೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ವಿಷಯದ ಬಗ್ಗೆ ಮಾತನಾಡಬಹುದು. ಆದರೆ, ಪಕ್ಷದ ಹೆಸರು ಹೇಳಿ ನಮ್ಮನ್ನು ಏತಕ್ಕೆ ಏಳಿಸುತ್ತಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್(ಕಾರ್ಮಿಕ ಮತ್ತು ಸಕ್ಕರೆ ಸಚಿವರು):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ...

**ಶ್ರೀ ಪಿ.ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮೂಲತಃ ಈ ವಿಧೇಯಕವನ್ನು ತಂದಿರತಕ್ಕಂತಹ ಮೊದಲನೇ ಪ್ಯಾರಾ ಏನೆಂದು ದಯಮಾಡಿ ಓದಬೇಕು. ಅದೇನೆಂದರೆ; "*A Bill further to amend the Industrial Disputes Act, 1947, the Factories Act, 1948 and the Contract Labour (Regulation and Abolition) Act, 1970 to provide measures to boost easy of doing business in the State of Karnataka.*" ಬಿಸಿನೆಸ್ ಮಾಡುವಂಥದ್ದಕ್ಕೆ ಅನುಕೂಲ ಆಗುವಂತಹ ರೀತಿಯಲ್ಲಿ ಈ ಮೂರು ಆಕ್ಟ್‌ಗಳನ್ನು ತಿದ್ದುಪಡಿ ಮಾಡುತ್ತಿದ್ದಾರೆ. ಅಂದರೆ, ಬಂಡವಾಳಶಾಹಿಗಳಿಗೆ ಇಲ್ಲಿ ನೆಲೆ ಮಾಡುವುದಕ್ಕೆ ಈ ವಿಧೇಯಕಕ್ಕೆ ತಿದ್ದುಪಡಿ ತರುತ್ತಿದ್ದಾರೆಯೇ ಹೊರತಾಗಿ, ಇಲ್ಲಿನ ಶ್ರಮಜೀವಿಗಳಿಗೆ ಬೆಂಬಲ ನೀಡದೇ ಇರುವಂಥದ್ದನ್ನು ಈ ವಿಧೇಯಕದಲ್ಲಿ ನೇರವಾಗಿ ಹೇಳುತ್ತಿದ್ದಾರೆ. ಮೊದಲನೆಯದಾಗಿ, Amendment of Industrial Disputes Act, ಅದು Government of India ಗೆ ಸಂಬಂಧಿಸಿದ್ದು, ಅದರಲ್ಲಿ 100 ಇರತಕ್ಕಂತಹ ಕಾರ್ಮಿಕರ ಸಂಖ್ಯೆಯನ್ನು ಇವತ್ತಿನ ದಿವಸ ಗರಿಷ್ಠ 300 ಕ್ಕೆ ಏರಿಸುತ್ತಿದ್ದಾರೆ. ಆ ಬಗ್ಗೆ ಮಾನ್ಯ ಆಯನೂರು ಮಂಜುನಾಥ್‌ರವರು ಚೆನ್ನಾಗಿ ಹೇಳಿದರು. ಅದೇ ರೀತಿ, Factories Act. ಅದರಲ್ಲಿ "ten or more" ಇದ್ದದ್ದನ್ನು "twenty or more" ಮಾಡಿದ್ದಾರೆ. ನಂತರ, "twenty or more" ಇದ್ದದ್ದನ್ನು "forty or more" ಎಂದು ಮಾಡಿದ್ದಾರೆ. ನಂತರ 75 ಗಂಟೆಗಳಿಗೆ 125 ಗಂಟೆ ಎಂದು ಮಾಡಿದ್ದಾರೆ. ತದನಂತರ, ಲೇಬರ್ ಆಕ್ಟ್‌ನಲ್ಲಿ "twenty or more" ಇದ್ದದ್ದನ್ನು "fifty or more" ಎಂದು ಮಾಡಿದ್ದಾರೆ. It is very clear. ಹಾಗಾಗಿ, ಸರ್ಕಾರವು ಕಾರ್ಮಿಕರನ್ನು ಸಂಪೂರ್ಣವಾಗಿ ಐಸೋಲೇಟ್ ಮಾಡುವುದು ಮತ್ತು ಪ್ರಸ್ತುತ ಅವರ ರೈಟ್ಸ್ ಇದೆ ಅದನ್ನು ಕಿತ್ತುಕೊಳ್ಳುವುದಕ್ಕೆ ಏನು ಬೇಕು ಆ ತಿದ್ದುಪಡಿ ಮಾಡಿ, ಬಂಡವಾಳಶಾಹಿಗಳ ಭುಜಗಳನ್ನು ಬಲ ಮಾಡತಕ್ಕಂಥದ್ದು ಮತ್ತು ಅವರನ್ನು ಸದೃಢ ಮಾಡುವಂಥದ್ದಕ್ಕೆ, STATEMENT OF OBJECTS AND REASONS ನಲ್ಲಿ very clear ಆಗಿ ಹೇಳಿದ್ದಾರೆ; "...to provide measures to boost ease of doing business...".

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಕಾರ್ಮಿಕರ ಇರತಕ್ಕಂತಹ ಶಕ್ತಿಯನ್ನು ಕುಗ್ಗಿಸುವಂತಹ ರೀತಿಯಲ್ಲಿ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿರುತ್ತಾರೆ. ಹಾಗಾಗಿ, ಈ ವಿಧೇಯಕವನ್ನು ಜಾರಿಗೆ ತಂದರೆ ದೇವರು ತಮಗೆ ಒಳ್ಳೆಯದನ್ನು ಮಾಡುವುದಿಲ್ಲವೆಂದು ಹೇಳುತ್ತೇನೆ. ಅಲ್ಲದೇ, ಇದರಲ್ಲಿ ಬಂಡವಾಳಶಾಹಿಗಳನ್ನು ಸಾಕುವುದಕ್ಕೆ ಮತ್ತು ಬೆಳೆಸುವುದಕ್ಕೆ ಏನು ಬೇಕೋ ಆ ಕಾನೂನುಗಳನ್ನು ಇವೊತ್ತಿನ ದಿವಸ ಮಾಡುತ್ತಿದ್ದಾರೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ನಮ್ಮೆಲ್ಲರ ವಿರೋಧವಿದೆ. ಈಗಾಗಲೇ ನಮ್ಮ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಹೇಳಿದ ಹಾಗೆ, ಅವರು ಪಕ್ಷದ ಬಗ್ಗೆ ಹೇಳಿದ್ದಾರೆ. ಅದರಂತೆ, ಇದೊಂದು ವಿಧೇಯಕವಲ್ಲ. ಕೇಂದ್ರ ಸರ್ಕಾರದಲ್ಲಿರಬಹುದು ಅಥವಾ ರಾಜ್ಯದಲ್ಲಿ ಸರ್ಕಾರ ತರುವಂತಹ ವಿಧೇಯಕಗಳು ರೈತರಿಗೆ ಮತ್ತು ಕಾರ್ಮಿಕರಿಗೆ ಮಾರಕವಾಗಿದೆ. ಒಟ್ಟಿನಲ್ಲಿ ಇವರೆಲ್ಲರನ್ನೂ ಸರ್ಕಾರ ಸಮಾಧಿ ಮಾಡುವುದಕ್ಕೆ ಹೊರಟಿದೆ. ಆದುದರಿಂದ, ದಯಮಾಡಿ ಈ ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್:–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಮಾನ್ಯ ಬಸವರಾಜ ಹೊರಟ್ಟಿಯವರು, ಶ್ರೀ ಎಸ್.ಆರ್. ಪಾಟೀಲರು ಹಾಗೂ ಇತರ ಅನೇಕ ಸದಸ್ಯರುಗಳು ವಿಧೇಯಕದ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಜೊತೆಗೆ, ಮಾನ್ಯ ಆಯನೂರು ಮಂಜುನಾಥ್‌ರವರು ಸಹ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸದಸ್ಯರ ಗಮನದಲ್ಲಿಟ್ಟುಕೊಂಡು ಬಿಲ್ ವಿತ್‌ಡ್ರಾ ಮಾಡುತ್ತಾರೆಂದು ನಾನು ಭಾವಿಸಿದ್ದೆ. ಆದರೆ, ಮಾನ್ಯ ಕಾರ್ಮಿಕ ಸಚಿವರು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಬಿಲ್ ಪಾಸ್ ಮಾಡಿಕೊಡಬೇಕೆಂದು ಕೇಳುತ್ತಿದ್ದಾರೆ. ಅಂದರೆ. ನಮ್ಮ ಸಲಹೆಗಳನ್ನು ನಾವೇ ಗಮನದಲ್ಲಿಟ್ಟುಕೊಳ್ಳಬೇಕು.

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್:–** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಅಕ್ಕಪಕ್ಕದ ರಾಜ್ಯಗಳ ಪರಿಸ್ಥಿತಿಯನ್ನು ಗಮನಿಸಿ, ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕವನ್ನು ತಿದ್ದುಪಡಿಗೆ ತರುವಾಗ, ಒಂದು ಕಡೆ ಕೇಂದ್ರ ಸರ್ಕಾರದ್ದು, ಮತ್ತೊಂದು ಕಡೆ ನಮ್ಮ ಪಕ್ಕದಲ್ಲಿರುವಂತಹ ರಾಜ್ಯಗಳ ಉದ್ದಿಮೆಗಳು ಅನಿವಾರ್ಯವಾಗಿ ಬರಬೇಕಾಗಿತ್ತು. 500 ಜನಕ್ಕಿಂತಲೂ ಹೆಚ್ಚು ಉದ್ದಿಮೆ ಎಂದರೆ, 100 ಜನ ಎಂದು ಇತ್ತು ಇಷ್ಟು ದಿವಸ. ಆದರೆ, ಮೊನ್ನೆಯ ದಿವಸ ಪೀಣ್ಯದಲ್ಲಿ ನಡೆದಂತಹ ಕೋವಿಡ್–19 ಸಂದರ್ಭದಲ್ಲಿ 7 ಲಕ್ಷ ಹೆಣ್ಣು ಮಕ್ಕಳು ಕೆಲಸ ಮಾಡತಕ್ಕಂತಹ, 300, 400, 500 ಹೆಣ್ಣುಮಕ್ಕಳು ಕೆಲಸ ಮಾಡುವಂತಹ ಕಾರ್ಖಾನೆ ಮಾಲೀಕರು ಕೂಡ ಅನುಮತಿಗಾಗಿ ಅರ್ಜಿ ಕೊಟ್ಟು ಬಂದ್ ಮಾಡಿ ಹೋದರು. ಈಗ 27–28 ಉದ್ದಿಮೆಗಳನ್ನು ಆರಂಭ ಮಾಡಿಸಿದ್ದೇವೆ. ಕಾರ್ಮಿಕರ ಹಿತಾಸಕ್ತಿ ವಿಚಾರದಲ್ಲಿ ಸರ್ಕಾರ ಕಾರ್ಮಿಕರ ಪರವಾಗಿದ್ದೇವೆ. ಈ ಸದನದಲ್ಲಿ ಅನೇಕ ಹಿರಿಯ ಸದಸ್ಯರಿದ್ದಾರೆ. ಹಾಗಾಗಿ, ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೋರುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರದವರು ಮಾಲೀಕರ ಪರವಾಗಿ ಇದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಲ್ಯಾಂಡ್ ರಿಫಾರ್ಮ್ ಬಿಲ್, ಎ.ಪಿ.ಎಂ.ಸಿ. ಬಿಲ್ ಹಾಗೂ ಕಾರ್ಮಿಕರ ಬಿಲ್, ಅಲ್ಲಿ ರೈತರ ವಿರೋಧ, ಇಲ್ಲಿ ಕಾರ್ಮಿಕರ ವಿರೋಧ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ prototype ಏನು ಬರುತ್ತದೆ, ಅಲ್ಲಿಂದ ಅವರು ಹೇಗೆ ಕಳುಹಿಸಿದ್ದಾರೆ ಅದನ್ನು ಆರ್ಡಿನೆನ್ಸ್ ಮಾಡಿ, ಈಗ replace ಮಾಡಿದ್ದಾರೆ. ಈ ವಿಧೇಯಕವನ್ನು ನಾವು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಹಾಗಾಗಿ, ಈ ವಿಧೇಯಕವನ್ನು ಮತಕ್ಕೆ ಹಾಕಬೇಕು. **(ಗೊಂದಲ)** Kindly put this for voting.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ನಮ್ಮ ವಿರೋಧವಿದೆ. ಇದು ವಿತ್‌ಡ್ರಾ ಆಗಲೇಬೇಕು. **(ಗೊಂದಲ)** ಈ ವಿಧೇಯಕ ಕಾರ್ಮಿಕರಿಗೆ ವಿರೋಧವಾಗಿರುವುದರಿಂದ ಈ ವಿಧೇಯಕವನ್ನು ನಾವು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಹಾಗಾಗಿ, ಇದನ್ನು ಹಿಂದಕ್ಕೆ ಪಡೆಯಲೇಬೇಕು.

**(ಈ ಹಂತದಲ್ಲಿ ಪ್ರತಿಪಕ್ಷದವರು ವಿಧೇಯಕವನ್ನು ವಿರೋಧಿಸಿ, ಧಿಕ್ಕಾರಗಳನ್ನು ಕೂಗಿದರು)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದವರು ಯಾರ ವಿರುದ್ಧ ಧಿಕ್ಕಾರ ಎಂದು ಕೂಗುತ್ತಿದ್ದಾರೆಂಬುದು ಗೊತ್ತಿಲ್ಲ. ಹಾಗಾಗಿ, ತಾವು ಅದನ್ನು ಕೇಳಬೇಕು.

**(ಗೊಂದಲ)**

**ಸಭಾಪತಿಯವರು:-** ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ...

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, we will press for division.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಕಾರ್ಮಿಕರಿಗೆ ಮಾರಕವಾದಂತಹ ಕಾನೂನು. ಹಾಗಾಗಿ, ಇದನ್ನು ಮತಕ್ಕೆ ಹಾಕಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಸತ್ಸಂಪ್ರದಾಯ ಅಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು. ಇದು ಕೆಟ್ಟ ಸಂಪ್ರದಾಯವಾಗಲಿ. ನಾವು ಇದುವರೆವಿಗೂ ಎಲ್ಲಾ ವಿಷಯಗಳಲ್ಲಿ ಸಹಕಾರ ಕೊಟ್ಟಿದ್ದೇವೆ. ಆದರೆ, ಈಗ ಕಾರ್ಮಿಕರ ವಿರೋಧಿ ಕಾನೂನು ತಂದಿದ್ದಾರೆ. ಈ ಸರ್ಕಾರ ಕೇಂದ್ರದಿಂದ ಬಂದಿದ್ದನ್ನು ಅಂದರೆ, ಶಂಖದಿಂದ ಬಂದಿದ್ದೇ ತೀರ್ಥ ಎನ್ನುವಂತಹ ರೀತಿಯಲ್ಲಿ ಸರ್ಕಾರ ವರ್ತಿಸುತ್ತಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರ ತಂದಂತಹ ವಿಧೇಯಕಗಳಿಗೆ ನಾವು ಇದೇ ರೀತಿ ಮಾಡಿದ್ದೇವೆಯೇ? ಬಹುಮತ ಇದೆಯೆಂದು ಈ ರೀತಿ ಮಾತನಾಡಬಹುದೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಇಂತಹ ವಿಧೇಯಕಗಳನ್ನು ತಂದಿರುವುದಿಲ್ಲ. (**ಗೊಂದಲ**) ನಾವು ಕಾರ್ಮಿಕರ ಪರ, ರೈತರ ಪರ, ಮಹಿಳೆಯರ ಪರ. We will press this for division. Kindly put this for voting.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕ ಕಾರ್ಮಿಕರ ವಿರೋಧಿಯಾಗಿದ್ದು, ಮಾಲೀಕರಿಗೆ ಸಹಾಯ ಮಾಡುವುದಕ್ಕೋಸ್ಕರ ಈ ವಿಧೇಯಕವನ್ನು ಜಾರಿಗೆ ತರುವುದಾದರೆ ನಾವು ಏತಕ್ಕೆ ಒಪ್ಪಿಕೊಳ್ಳಬೇಕು. ಹಾಗಾಗಿ, ಈ ವಿಧೇಯಕವನ್ನು ಮತಕ್ಕೆ ಹಾಕಬೇಕು.

**(ಗೊಂದಲ)**

**ಶ್ರೀ ಆಯನೂರ್ ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲವೆಂದು ವೈಯಕ್ತಿಕವಾಗಿ ನನಗನ್ನಿಸುತ್ತಿದೆ. **(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ್ದು, ಪ್ರತಿಪಕ್ಷದವರ ಪರವಾಗಿದ್ದು, ಅವರಿಗೆ ಅನುಕೂಲಕರವಾದಾಗ ಅವರು ಚಪ್ಪಾಳೆ ತಟ್ಟುತ್ತಾರೆ.

**(ಗೊಂದಲ)**

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಮಾನ್ಯ ಮಂಜಣ್ಣನವರೇ, ಇಷ್ಟು ಬೇಗ ತಮ್ಮ ಮೇಲೆ ಒತ್ತಡ ತಂದಿದ್ದಾರೆಯೇ?

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಕೊರೊನಾ ಸಂದರ್ಭದಲ್ಲಿ ಕೈಗಾರಿಕಾ ಪರಿಸ್ಥಿತಿ ಇಡೀ ಪ್ರಪಂಚದಲ್ಲಿಯೇ ವ್ಯತ್ಯಾಸವಾಗಿದೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಮಂಜಣ್ಣನವರೇ, ತಾವೊಬ್ಬ ಕಾರ್ಮಿಕ ಮುಖಂಡರಾಗಿ, ಕೇವಲ 5 ನಿಮಿಷದಲ್ಲಿಯೇ ತಮ್ಮ ಮಾತುಗಳನ್ನು ಬದಲಾವಣೆ ಮಾಡಿದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**(ಮುಂದು)**

**(934)26.09.2020/8.20/ವೈಎಲ್-ವಿಕೆ**

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಆತ್ಮ ಸಾಕ್ಷಿಯನ್ನು ಹಾಗ್ಲೂ ವಿರೋಧಪಕ್ಷದವರನ್ನೂ ಸಾಕ್ಷಿಯಾಗಿಟ್ಟುಕೊಂಡು ಹೇಳುತ್ತಿದ್ದೇನೆ. ಏಕೆಂದರೆ, ಆತ್ಮ ಸಾಕ್ಷಿ ಜಾಸ್ತಿ ಇರುವುದರಿಂದ ಅವರ ಸಹಕಾರ ಸಹ ನನಗೆ ಬೇಕು. ಬಹುಶಃ ನಮ್ಮ ದೇಶಕ್ಕೆ ಚೀನಾ ದೇಶದ ಕೈಗಾರಿಕೆಗಳೆಲ್ಲವೂ ಬರುತ್ತದೆ ಎಂಬ ಒಂದು ಭರವಸೆಯಿಂದ, ನಂಬಿಕೆಯಿಂದ, ಉದ್ಯೋಗವನ್ನು ತರುವುದಕ್ಕೆ ಹೊರಟಿದ್ದಾರೆ. ದೇಶದಲ್ಲಾಗಲಿ, ರಾಜ್ಯದಲ್ಲಾಗಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಕೈಗಾರಿಕೆಗಳು, ಘಟಕಗಳು, ಉದ್ದಿಮೆಗಳು ಪ್ರಾರಂಭವಾಗಲೇ ಬೇಕು. ನಾನು ಹೇಳುವುದಕ್ಕೆ ಹೊರಟಿರುವ ಅಂಶ ಯಾವುದೆಂದರೆ, ಕೈಗಾರಿಕೆಯನ್ನು ಮುಚ್ಚುವಾಗ ಒಂದು ಭದ್ರತೆಯನ್ನು ನಮ್ಮ ಸಚಿವರು ನೀಡಬೇಕು. ಅದು ಯಾವುದೆಂದರೆ ಇದಕ್ಕಿದ್ದ ಹಾಗೆ lock and key ಮಾಡಿಕೊಂಡು ಹೋಗಬಾರದು. ಅವರಿಗೆ ಕೊಡಬೇಕಾದಂತಹ ಎಲ್ಲಾ ಸಂಬಳಗಳನ್ನು, ಬರಬೇಕಾದಂತಹ ಎಲ್ಲಾ ಭತ್ಯೆಗಳನ್ನು, ಎಲ್ಲಾ ಸೌಲಭ್ಯಗಳನ್ನು ಕೊಡಲಾಗಿದೆಯೇ? ಜೊತೆಗೆ ಹೇಳದೆ ಕೇಳದೆ factory lock ಮಾಡಬಾರದು. ಅದು negotiate ಆಗಬೇಕು. ಬೇಕಾದವರಿಗೆ ex-gratia ಅನ್ನು ಕೊಡುತ್ತಾ ಕಾರ್ಮಿಕ ಹಿತಾಸಕ್ತಿಯ ನಿಯಮಗಳನ್ನು ಮಾಡಬೇಕು. ದಿನದಲ್ಲಿ 10 ಗಂಟೆಗಳ ಕಾಲಾವಕಾಶವನ್ನು ಮಾಡಲಾಗಿದೆ. ವಾರದಲ್ಲಿ ಒಟ್ಟು 72 ಗಂಟೆಗಳು, ಯಾವುದೇ ವಾರದಲ್ಲಿ ಒಟ್ಟು ಗಂಟೆಗಳ ಸಂಖ್ಯೆ 60ಕ್ಕೆ ಮೀರತಕ್ಕದ್ದಲ್ಲ. ಒಂದು ವಾರ ಅಂದರೆ ಏಳು ದಿನಗಳಲ್ಲ, ಭಾನುವಾರ ಕಡ್ಡಾಯವಾಗಿ ರಜೆ. ಆರು ದಿನಗಳು ಮಾತ್ರ. ಕಾನೂನಿನ ಪ್ರಕಾರ ಭಾನುವಾರವು paid holiday. ಹಾಗೆ ಆರು ದಿನಗಳಲ್ಲಿ 8x6=48 ಗಂಟೆಗಳಾಯಿತು. ಒಂದು ದಿನಕ್ಕೆ ಎರಡು ಗಂಟೆಗಳು ಹೆಚ್ಚು ಮಾಡುವುದಕ್ಕೆ ಅವಕಾಶವನ್ನು ನೀಡಲಾಗಿದೆ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್ (ಕಾರ್ಮಿಕ ಮತ್ತು ಸಕ್ಕರೆ ಸಚಿವರು):-** ಈಗ ಮೂರು ತಿಂಗಳಿಗೆ 125 ಗಂಟೆ ಎಂದು ಮಾಡಿದ್ದೇವೆ. ಪ್ರತಿ ವಾರ 75 ಗಂಟೆ ಇತ್ತು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:-** ಅಲ್ಲಿಗೆ ಪ್ರತಿ ವಾರ 25 ಗಂಟೆ ಜಾಸ್ತಿ ಆಗಿದೆ. ಕಾನೂನಿನಡಿಯಲ್ಲಿ ಅಷ್ಟು ಹೆಚ್ಚು ಮಾಡುವುದಕ್ಕೆ ಅವಕಾಶವನ್ನು ಕೊಡಲಾಗಿದೆ. ಇದರ ದುರುಪಯೋಗವನ್ನು ಮ್ಯಾನೇಜ್‌ಮೆಂಟ್ ಮಾಡಿಕೊಂಡರೆ ಅದಕ್ಕೆ ಏನು ಸುಭದ್ರತೆಗಳನ್ನು ಒದಗಿಸಲಾಗುವುದು? ಕೆಲವು check and measures ಇಡಬೇಕು. ಉದ್ಯಮಗಳು ಬರಬೇಕು. ಉದ್ಯಮಗಳು ಬರದಿದ್ದಲ್ಲಿ ನಮ್ಮ ಕಾರ್ಮಿಕರು ಶಾಶ್ವತ ನಿರುದ್ಯೋಗಿಗಳಾಗುತ್ತಾರೆ. ಕಾರ್ಮಿಕರ ಹಿತದಲ್ಲಿ ಕಾನೂನುಗಳು ಹೇಗೆ ರಕ್ಷಣೆಗೆ ಬರಬೇಕು? ಉದ್ಯಮಗಳು ಮುಚ್ಚಿಹೋಗಬಾರದು. ಜೊತೆಗೆ ಹೊಸ ಉದ್ಯಮಗಳು ಬರಬೇಕು. ಆ ಕಾರಣಕ್ಕೋಸ್ಕರ ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕಾರ್ಮಿಕರ ಹಿತರಕ್ಷಣೆಯ ಒಂದಿಷ್ಟು monitoring ಅಂಶಗಳನ್ನು ಸೇರಿಸಿ ತರಬೇಕು ಎಂಬುದು ನನ್ನ ಒತ್ತಾಯವಾಗಿದೆಯೇ ಹೊರತು ವಾಪಸ್ ತೆಗೆದುಕೊಂಡು ಹೋಗುವ ಅವಶ್ಯಕತೆಯಿಲ್ಲ. ಕೆಳಮನೆಯಲ್ಲಿ ಈಗಾಗಲೇ ಈ ಬಿಲ್ ಪಾಸ್ ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುವುದೇನೆಂದರೆ, ಇವತ್ತು ಕೋವಿಡ್-19 ನಿಂದಾಗಿ ಉದ್ಯೋಗಿಗಳು suffer ಆಗಿದ್ದಾರೆ. ಉದ್ಯಮಗಳಲ್ಲಿ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿದೆ ಹೊರತು ಹೆಚ್ಚು ಆಗಿಲ್ಲ. ಪ್ರತಿ ಕಾರ್ಖಾನೆಯಲ್ಲಿ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿದೆ. ಶೇಕಡಾ 100 ಕ್ಕೆ ಇರುವುದನ್ನು ಶೇಕಡಾ 50 ಕ್ಕೆ ಇಳಿಸಬೇಕಾಗಿತ್ತು. ಆದರೆ, ಅವರು ಶೇಕಡಾ 100 ರಷ್ಟು ಇರುವುದನ್ನು ಶೇಕಡಾ 300 ರಷ್ಟು ಏರಿಸಿದ್ದಾರೆ. ಅದರ ಬಗ್ಗೆ ಯಾರೂ ಸಹ ಮಾತನಾಡುತ್ತಿಲ್ಲ. ಇದರಿಂದಾಗಿ ಇವತ್ತಿನ ದಿವಸ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿದ್ದು, ನಿಜಕ್ಕೂ ಅವರಿಗೆ ಕಾರ್ಮಿಕರ ಬಗ್ಗೆ ಹಿತಾಸಕ್ತಿ ಇದ್ದರೆ ಉದ್ಯಮಕ್ಕೆ ಅನುಗುಣವಾಗಿ ಕಾರ್ಮಿಕರಿಗೆ without information closure ಏನಿದೆ, ಅದನ್ನು 100 ಕ್ಕೆ ಇರುವುದನ್ನು 50 ಕ್ಕೆ ಏರಿಸಬೇಕಾಗಿತ್ತು. ನಮ್ಮ ಬೆಂಗಳೂರಿನಲ್ಲಿ ಕೋವಿಡ್-19 ನಿಂದಾಗಿ 100 ಜನ ಕೆಲಸ ಮಾಡುತ್ತಿದ್ದಂತಹ ಒಂದು ಉದ್ಯಮದಲ್ಲಿ 50 ಜನ ಸಹ ಇಲ್ಲ. ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕರು ಬಂದು ಕೆಲಸ ಮಾಡಲು ತಯಾರಿಲ್ಲ. ಒಬ್ಬರಿಗೆ ಕೋವಿಡ್-19 ಬಂದರೆ, ಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತದೆ. ಇದು ಕಾರ್ಮಿಕರ ಪರವಾಗಿದೆಯೇ ಅಥವಾ ವಿರೋಧವಾಗಿದೆಯೇ? ಸರ್ಕಾರ ಒಪ್ಪಿದ್ದರೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ. ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕಾರ್ಮಿಕರ ಹಿತರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು,...

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಕಾರ್ಮಿಕರ ಹಿತರಕ್ಷಣೆ ಮಾಡುತ್ತಾರೆಯೇ?

**ಸಭಾಪತಿಯವರು:-** ಮಾನ್ಯ ಸಚಿವರು ಮಾತನಾಡಲಿ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಅನೇಕ ಸಲಹೆಯನ್ನು ನೀಡಿದ್ದಾರೆ. ಬಂದ್ ಮಾಡುವ ಪೂರ್ವದಲ್ಲಿ ಅಂತಹ ಪರಿಸ್ಥಿತಿ ನಿರ್ಮಾಣವಾದರೆ, ಕಾರ್ಮಿಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ತಿದ್ದುಪಡಿ ಮಾಡುವಾಗ ಸೇರಿಸಿಕೊಂಡು ಮಾಡುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ತಿದ್ದುಪಡಿ ಮಾಡಲಾಗಿದ್ದು, ಮತ್ತೆ ಹೇಗೆ ತಿದ್ದುಪಡಿ ಮಾಡುತ್ತಾರೆ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್:-** ಮಾನ್ಯ ಸಭಾಪತಿಯವರೇ, ಆ ರೀತಿ ಹೇಳುತ್ತಿಲ್ಲ. ಈ ವಿಧೇಯಕವನ್ನು ಒಪ್ಪಿಕೊಳ್ಳುವಾಗ ಕೆಲವು ತಿದ್ದುಪಡಿಗಳನ್ನು ಸಹಿತ ಒಪ್ಪಿಕೊಂಡು ತಿದ್ದುಪಡಿ ಮಾಡಿಕೊಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದನ್ನು ಬದಲಾವಣೆ ಮಾಡಲಿ, ಇಲ್ಲದಿದ್ದರೆ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಲ್ಲದಿದ್ದರೆ ನಾವು ಹೇಳಿದನ್ನು ಒಪ್ಪಿಕೊಳ್ಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವುದೇನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲರ ಸಲಹೆಯನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರೋಡೀಕರಿಸಿಕೊಂಡು, ಎಲ್ಲಾ ನಿಯಮಗಳನ್ನು ರೂಪಿಸುವಾಗ ಕಾಯ್ದುಕೊಳ್ಳಲಾಗುವುದು ಎಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮಗಳಲ್ಲಿ ನಮ್ಮ ಸಲಹೆಯನ್ನು ಅಳವಡಿಸುತ್ತೇವೆ ಎಂದು ಹೇಳುತ್ತಿದ್ದಾರೆ. ನಿಯಮಗಳನ್ನು ಯಾವ ರೀತಿ ರಚನೆ ಮಾಡಬೇಕೆಂದರೆ, ಮುಖ್ಯವಾದ ಕಾಯ್ದೆ ಏನಿದೆ 'all the rules framed under the Act must be inconformity with the provisions of main Act. It should not be in contravention of the provisions of the main Act.' ಇಲ್ಲಿ ಶೇಕಡಾ 300 ರಷ್ಟು ಇರುವುದನ್ನು ಕಡಿಮೆ ಮಾಡಿ ಎಂದರೆ, ಕಾನೂನು ಬಿಟ್ಟು ಮಾಡಲು ಸಾಧ್ಯವೇ? ಮುಖ್ಯವಾಗಿ ಕಾರ್ಮಿಕರ ಕಾಯ್ದೆ ಏನಿದೆ, ಅದರ provisions ಗೆ ಅನುಗುಣವಾಗಿ ನಿಯಮ ರೂಪಿಸಬೇಕಾಗುತ್ತದೆ. ಆದರೆ, ಕಾಯ್ದೆಯಲ್ಲಿರುವ provisions ಗೆ ವ್ಯತಿರಿಕ್ತವಾಗಿ ನಿಯಮಗಳನ್ನು ರೂಪಿಸಲು ಸಾಧ್ಯವಿಲ್ಲ. ಚಿಕ್ಕ ಮಕ್ಕಳಿಗೆ ಹೇಳುವ ರೀತಿ ಅವರು ನಮಗೆ ಹೇಳುವುದಕ್ಕೆ ಬರುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಿದ್ದುಪಡಿ ಮಾಡುವ ಅಧಿಕಾರ ನಮಗೆ ಇಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ತಿದ್ದುಪಡಿ ಮಾಡಲಿ, ಆದರೆ, ಮೊದಲು ಇದ್ದ ಹಾಗೆ ಇರಲಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಿದ್ದುಪಡಿ ಮಾಡಿ ಹೊಸದಾಗಿ Bill present ಮಾಡಲಿ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೂಲ ಉದ್ದೇಶ. . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ. ವರದಿ ಬಂದ ನಂತರ ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಈ ಕಾಯ್ದೆಯನ್ನು Ordinance ಆಗಿ ತಂದಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾಳೆ ಬೆಳಿಗ್ಗೆ ವಿಧೇಯಕವು replace ಆಗಲಿಲ್ಲವೆಂದರೆ, ಮತ್ತೆ Ordinance ಹೊರಡಿಸುತ್ತಾರೆ. ಕಾರ್ಮಿಕರಿಗೆ, ರೈತರಿಗೆ, weaker sections ಗೆ ಬೆನ್ನು ನಿಲ್ಲದಂತಹ ಜನರು ಏನಿದ್ದಾರೆ, ಅದೇ ರೀತಿ ಈ ಸರ್ಕಾರ ಒಂದು ರೀತಿ ಕಂಪನಿ ಸರ್ಕಾರ ಎಂದು ಅನ್ನಿಸುತ್ತಿದೆ. ಹಿಂದೆ ಬ್ರಿಟಿಷ್‌ರು East India Company ಯನ್ನು ಈ ದೇಶಕ್ಕೆ ತಂದು, ಇಡೀ ದೇಶವನ್ನು ಯಾವ ರೀತಿ ಕಬಳಿಸಿದರು, ಆ ರೀತಿ ಕಂಪನಿಗಳ ಕೈಯಲ್ಲಿ ಈ ದೇಶವನ್ನು ನೀಡುವ ಪರಿಸ್ಥಿತಿ ಉದ್ಭವಿಸುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕಾರ್ಮಿಕರಿಗೆ ಬೆಂಬಲ ನೀಡುವುದು ಸರ್ಕಾರಕ್ಕೂ ಗೊತ್ತಿದೆ. ಕಾರ್ಮಿಕರಿಗೆ ಸರ್ಕಾರ ಬೆಂಬಲವಾಗಿ ನಿಂತಿರುವುದರಿಂದಲೇ ನಾವು ಅಧಿಕಾರಕ್ಕೆ ಬಂದಿರುವುದು.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, Ordinance ಆಗಿ ತಂದಿರುವ ವಿಧೇಯಕವಾಗದೇ ಉದ್ದೇಶಪೂರ್ವಕವಾಗಿ ಬದಲಾವಣೆ ಮಾಡಿರುವುದು ಚೆನ್ನಾಗಿ ಕಾಣುತ್ತಿದೆ. Ordinance ತಂದಿರುವುದು ಗೊತ್ತಾಗುತ್ತಿದೆ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್:–** ಮಾನ್ಯ ಸಭಾಪತಿಯವರೇ, ಎಲ್ಲರೂ ಮೂಲಭೂತ ಉದ್ದೇಶವನ್ನಿಟ್ಟುಕೊಂಡು, ಯಾವ್ಯಾವ ವಿಚಾರದ ಬಗ್ಗೆ ಮಾತನಾಡಿದ್ದಾರೆ. ಎಲ್ಲರ ಭಾವನೆಗಳೇನೆಂದರೆ, ಕಾರ್ಮಿಕರನ್ನು ತೆಗೆದು ಹಾಕುವಂಥ ಕಾಲದಲ್ಲಿ ಅಥವಾ ಕಾರ್ಖಾನೆಗಳು ಅನಿವಾರ್ಯದಿಂದಾಗಿ ಮುಚ್ಚುವಂಥ ಸಂದರ್ಭದಲ್ಲಿ ಕಾರ್ಮಿಕರ ಹಿತಾಸಕ್ತಿಗೆ ತೊಂದರೆಯಾಗದ ರೀತಿ ಎಚ್ಚರಿಕೆಯನ್ನು ವಹಿಸಬೇಕೆಂಬುದು ಎಲ್ಲರ ಆದ್ಯತೆಯಾಗಿದ್ದು, ಸರ್ಕಾರದ ಆದ್ಯತೆ ಸಹ ಅದೇ ಆಗಿದೆ. ಅದರ ಆಧಾರದ ಮೇಲೆ ಎಲ್ಲರೂ ಏನೂ ಸೂಚನೆಯನ್ನು ನೀಡಿದ್ದಾರೆ. ಆ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಅದೇ ರೀತಿ ಮಾಡುತ್ತೇವೆ ಎನ್ನುವ ಭರವಸೆಯನ್ನು ನೀಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಆಯನೂರ್ ಮಂಜುನಾಥ್‌ರವರು 'ಚೈನಾ ದೇಶದ ಕಂಪನಿ ನಮ್ಮ ರಾಜ್ಯಕ್ಕೆ ಬರುವುದರಿಂದ ನಮ್ಮ ರಾಜ್ಯದ ಕಂಪನಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಂದರೆಯಾಗಬಾರದೆಂದು, we doing ease of business ಆಗಬೇಕು ಎನ್ನುವ ಉದ್ದೇಶದಿಂದ ಈ ವಿಧೇಯಕ ತರಲಾಗಿದೆ ಎಂದು ಹೇಳಿದರು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಕಂಪನಿಗಳು ಮುಚ್ಚುತ್ತಿದ್ದು, ಪ್ರಪಂಚದಲ್ಲಿ ವ್ಯತ್ಯಾಸವಾಗುತ್ತಿದೆ. ಬೇರೆ ಉದ್ಯಮಗಳು ಬರಬಹುದೆಂಬ ನಿರೀಕ್ಷೆಯಿಂದ ಹೇಳಿದ್ದೇನೆ ಹೊರತು, ಬಂದೇ ಬರುತ್ತದೆ ಎಂದು How can I declare? ನಾನು ಸರಿಯಾಗಿಯೇ ಹೇಳಿದ್ದೀನಿ. ಪೂರ್ತಿಯಾಗಿ ಕೇಳಿಸಿಕೊಳ್ಳಬೇಕಲ್ಲವೇ? ಪದಗಳು choosy ಆಗಬಾರದಲ್ಲವೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, 21ನೇ ತಾರೀಖಿನಂದು ಲೋಕಸಭೆಯಲ್ಲಿ ಕೇಂದ್ರ ಸಚಿವರು ಉತ್ತರ ನೀಡಿದ್ದು, Most Favoured Nation ಎಂಬ ಪಟ್ಟವನ್ನು ಹೊಂದಿರುವ ಚೀನಾ ದೇಶದಿಂದ ಅದನ್ನು ಹಿಂಪಡೆಯಲಾಗುತ್ತದೆಯೇ ಎಂದು ಪ್ರಶ್ನೆ ಕೇಳಿದ್ದು, ಅದಕ್ಕೆ ಅವರ ಪಕ್ಷದವರೆ ಹಿಂಪಡೆಯುವುದಿಲ್ಲ, China still remains as a Most Favoured Nation ಎಂದು ಉತ್ತರ ನೀಡಿರುತ್ತಾರೆ. ಅದರಿಂದಾಗಿ ಚೈನಾದವರು ಬರುವುದು ಗ್ಯಾರಂಟಿ. ಇಲ್ಲದಿದ್ದರೆ 19 ಸಲ ಮಾನ್ಯ ಪ್ರಧಾನ ಮಂತ್ರಿಗಳು ಅಲ್ಲಿಗೆ ಹೋಗುತ್ತಿರಲಿಲ್ಲ. ಈ ವಿಧೇಯಕದಲ್ಲಿ ಮಾನ್ಯ ಸಚಿವರು ಕಾರ್ಮಿಕರನ್ನು ಸಿಕ್ಕಿ ಹಾಕಿಸಿದ್ದಾರೆ. ಕಾರ್ಮಿಕರ ಹಿತಚಿಂತನೆಗೂ, ease of business ಗೂ ಕಾರ್ಮಿಕರ ರಕ್ಷಣೆಗೂ ಏನೂ ಸಂಬಂಧ? Ease of business ಆದರೆ ಕಾರ್ಮಿಕರ ಹಿತ ರಕ್ಷಣೆ ಆಗುತ್ತದೆಯೇ? ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ 125 ಘಂಟೆ ಆಗುವುದಿಲ್ಲ, 8 ಘಂಟೆಗಳು ಮಾತ್ರ ಸಾಧ್ಯ. ಆ ರೀತಿ ಮಾಡಲು ಸಾಧ್ಯವಿಲ್ಲವೆಂದರೆ, ನಮ್ಮ ವಿರೋಧ ಪಕ್ಷದ ನಾಯಕರ ತೀರ್ಮಾನ ಏನಿದೆ, ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಎಸ್ ಹೊರಟ್ಟಿಯವರ ತೀರ್ಮಾನ ಏನಿದೆ ಅದನ್ನೇ ನಾವು ಅನುಸರಿಸುವುದು. ದಯವಿಟ್ಟು ಈ ವಿಧೇಯಕವು ಕಾರ್ಮಿಕರ ವಿರೋಧಿ ನೀತಿಯಾಗಿದ್ದು, ಈ ವಿಧೇಯಕವನ್ನು ದಯವಿಟ್ಟು ಹಿಂಪಡೆದುಕೊಳ್ಳಬೇಕು.

(ಮುಂದು) . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(935)26.09.2020 8.30 ಟಿಸಿಹೆಚ್–ವಿಕೆ**

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):–**

ಈ ವಿಧೇಯಕವು ಕಾರ್ಮಿಕರ ವಿರೋಧಿ ನೀತಿಯಾಗಿದ್ದು, ದಯವಿಟ್ಟು ಈ ವಿಧೇಯಕವನ್ನು withdraw ಮಾಡಿಕೊಳ್ಳಿ. ಇಲ್ಲವೆಂದರೆ, ಇದನ್ನು Select Committee ಗೆ ಕಳಿಹಿಸಿ. ಅಂದರೆ, ನಮಗೆ ಎಲ್ಲರನ್ನು ಮೂರ್ಖರನ್ನಾಗಿ ಮಾಡುವಂತಹ ಒಂದು ಕಲೆ ಇದೆ. ಸತಃ ನಾವೇ ಮೂರ್ಖರಾಗಿಬಿಟ್ಟರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಆ ಕೆಲಸ ಆಗುವುದು ಬೇಡ, ರೈತರದ್ದು, ಕಾರ್ಮಿಕರದ್ದು ಮತ್ತು ಎಪಿಎಂಸಿಯಲ್ಲಿ ಕೆಲಸ ಮಾಡುವವರು ಇದ್ದಾರೆ, ಇವರನ್ನು ಕಾಪಾಡತಕ್ಕಂಥ ಕೆಲಸವನ್ನು ನಾವೆಲ್ಲರೂ ಮಾಡಬೇಕಾಗಿದೆ. ಆದ್ದರಿಂದ ದಯವಿಟ್ಟು ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ ಮಾಡುವುದೇನೆಂದರೆ, ತಾವು ಕೂಡ ಲೇಬರ್ ಯೂನಿಯನ್ ಎಲ್ಲಾ ನೋಡಿದ್ದೀರಿ. ಇದನ್ನು Select Committee ಗೆ ಕಳುಹಿಸಿ, ಇಲ್ಲವೇ withdraw ಮಾಡಿ. ಇನ್ನೊಂದು redrafted ಬಿಲ್‌ನ್ನು ತರಲಿ ಎಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಾರ್ಖಾನೆಗಳ ಸ್ಥಿತಿ ಹೇಗಿದೆಯೆಂದರೆ, ಆ ಕಾರ್ಮಿಕರ ಪರವಾಗಿಯೇ ಇದೆ. ನಮ್ಮ ವಿರೋಧ ಪಕ್ಷದ ನಾಯಕರು ಕಾರ್ಖಾನೆ ನಡೆಸುತ್ತಿದ್ದೇವೆಂದರು. ಈಗ ಇರತಕ್ಕಂಥ ಅವಧಿಯಲ್ಲಿ ನ್ಯಾಚುರಲ್ ಆಗಿ ಕಾರ್ಖಾನೆಗಳು close ಆಗುವಂತಹ ಸ್ಥಿತಿಗೆ ಬಂದಿದೆ. ಏಕೆಂದರೆ, ಇರತಕ್ಕಂಥ ಕಾರ್ಮಿಕರ ಸಂಖ್ಯೆಯನ್ನು ಕರೋನಾದ ದೃಷ್ಟಿಯಿಂದ ಒಮ್ಮೆಗೆ ತರುವಂತಿಲ್ಲ. ಕಾರ್ಮಿಕರನ್ನು ಮೂರು ಶಿಫ್ಟ್‌ಗಳಲ್ಲಿ ಬಳಕೆ ಮಾಡಿಕೊಳ್ಳಬೇಕಾಗುತ್ತದೆ. ಒಂದು ಶಿಫ್ಟ್‌ನಲ್ಲಿ 100 ಜನ ಇದ್ದರೆ, ಈಗ ಒಂದು ಶಿಫ್ಟ್‌ನಲ್ಲಿ 30–30–30 ರಂತೆ ಮೂರು ಶಿಫ್ಟ್‌ಗಳಲ್ಲಿ ಉಪಯೋಗಿಸಿಕೊಳ್ಳಬೇಕಾಗಿದೆ. ಆ ಕಾರಣಕ್ಕಾಗಿ production ಕಡಿಮೆಯಾಗುತ್ತಿದೆ. ಮಾರ್ಕೆಟ್‌ಗಳಲ್ಲಿ ಖರೀದಾರರು ಇಲ್ಲ. ಕಾರ್ಖಾನೆಗಳು ಲಾಸ್ ಆಗುತ್ತಿವೆ. ಕರೋನಾ ಅವಧಿಯಲ್ಲಿ ಯಾರನ್ನೂ ಕೂಡ ಕೆಲಸದಿಂದ ತೆಗೆಯಬಾರದು ಮತ್ತು ಸಂಬಳದಲ್ಲಿ ಕಡಿತವನ್ನು ಮಾಡಬಾರದೆಂದು ಕಾರ್ಮಿಕ ಇಲಾಖೆ ಸೂಚನೆಯನ್ನು ಕೊಟ್ಟಿತ್ತು. ಅದರಂತೆ ಅವರು ಸಂಬಳವನ್ನು ಕೊಡುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ, ಬಹಳಷ್ಟು ಕಾರ್ಖಾನೆಗಳು ಸಹಜವಾಗಿ ನಷ್ಟಕ್ಕೆ ಒಳಗಾಗಿ ಮುಚ್ಚುವಂತಹ ಸ್ಥಿತಿಗೆ ಬಂದುಬಿಟ್ಟಿವೆ. ಕಾರ್ಮಿಕರ ಹಿತದೃಷ್ಟಿಯಿಂದ ಆ ಕಾರ್ಖಾನೆಗಳನ್ನು ಕೂಡ ಉಳಿಸಿಕೊಳ್ಳಬೇಕು. ಹಾಗಾಗಿ, ಆ ಅವಧಿಯ ನಂಬರ್‌ಗಳಲ್ಲಿ ವ್ಯತ್ಯಾಸವಾಗಬಹುದು. ನಾನು ಮೂಲತಃ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನನ್ನು ಕೇಳುತ್ತಿದ್ದೇನೆಂದರೆ, ಯಾವುದೇ ಕಾರ್ಖಾನೆ ಕ್ಲೋಸ್ ಆಗಬೇಕಾದರೆ, ಸರ್ಕಾರದ ಗಮನಕ್ಕೆ ಬರಲಿ. ಅದು 100 ಜನ ಕಾರ್ಮಿಕರು ಇದ್ದಾಗಾದರೂ ಬರಲಿ ಅಥವಾ 300 ಜನ ಕಾರ್ಮಿಕರು ಇದ್ದಾಗಾದರೂ ಬರಲಿ. ಅದನ್ನು ಕ್ಲೋಸ್ ಮಾಡುವಾಗ ಒಂದು ಅನುಮತಿ ಪತ್ರವನ್ನು ಕಾರ್ಮಿಕ ಇಲಾಖೆ ವತಿಯಿಂದ ಪಡೆಯಬೇಕು. ಆ ಸಮಯದಲ್ಲಿ ಅವರಿಗೆ ಕೊಡಬೇಕಾದ ಸಂಬಳ, ಸಾರಿಗೆ ಭತ್ಯೆ ಮತ್ತು ಅವರಿಗೆ ಸಿಗಬೇಕಾದಂತಹ ಎಲ್ಲಾ ಭತ್ಯೆಗಳನ್ನು ಕೊಟ್ಟಿದ್ದಾರಾ, ಅವರ ಮುಂದಿನ ಬದುಕಿಗೋಸ್ಕರ ಕಾನೂನಿನ ಪ್ರಕಾರ ಕೊಡಬೇಕಾಗಿರುವಂತಹ 3 ತಿಂಗಳಿನದ್ದೊ ಅಥವಾ negotiation ನೊಳಗಿನ ಹಣ ಕೊಡಬೇಕಾಗುತ್ತದೆ. ತಾವು ಕೂಡ ಯೂನಿಯನ್‌ನ್ನು handle ಮಾಡಿದ್ದೀರಿ. ನಮಗೆ alternative ಆಗಿ ಅವರಿಗೆ ಒಂದು ವರ್ಷದ್ದು ಕೊಡಿ ಎಂದು ಕೇಳುತ್ತೇವೆಯೋ ಅಥವಾ ಏನೋ ಒಂದು negotiation ಮಾಡುತ್ತೇವೆ. ಆ ರೀತಿಯ ಭದ್ರತೆಗೊಂದು ಅವಕಾಶವನ್ನು ಇಡಬೇಕೆಂದು ಕೇಳುತ್ತಿದ್ದೇನೆಯೇ ಹೊರತು, ಆ ಕಾರ್ಮಿಕ ತಕ್ಷಣವೇ ಬೀದಿ ಪಾಲು ಆಗುವುದು ಬೇಡ. ಆ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಆ ರಕ್ಷಣೆಯನ್ನು ಕೊಡುವುದಕ್ಕೆ ಸಾಧ್ಯವಾಗುವುದಾದರೆ, ಕಾರ್ಖಾನೆಗಳನ್ನು ಉಳಿಸಿದರೆ, ಕಾರ್ಮಿಕರು ಉಳಿಯುತ್ತಾರೆ. ಕಾರ್ಮಿಕರು ಇದ್ದರೆ, ಕಾರ್ಖಾನೆಗಳು ಉಳಿಯುತ್ತವೆ. ಇದು ಒಂದಕ್ಕೊಂದು ಸಂಬಂಧವಿದೆ. ಕಾರ್ಮಿಕರನ್ನು ಬಿಟ್ಟು, ಕಾರ್ಖಾನೆಗಳಿಲ್ಲ, ಕಾರ್ಖಾನೆಗಳನ್ನು ಬಿಟ್ಟು ಕಾರ್ಮಿಕರೂ ಇಲ್ಲ. ಇವೆರಡನ್ನೂ coordinate ಮಾಡಿ ಉಳಿಸಿದಾಗ ಮಾತ್ರ ಹೆಚ್ಚು ಉತ್ಪಾದನೆ ಮಾಡಿ, ಹೆಚ್ಚು ಆದಾಯಗಳಿಸಿ, ಉತ್ತಮ ಬದುಕನ್ನು ಕಟ್ಟುವುದಕ್ಕೆ ಸಾಧ್ಯತೆ ಇದೆ. ಆ ಹಿನ್ನೆಲೆಯಲ್ಲಿ, ನಾವು ಮಾಲೀಕರ ವಿರೋಧಿಗಳಲ್ಲ, ನಾವು ಕಾರ್ಮಿಕರ ಪರ ಹೌದು. ಹಾಗೆಂದ ಮಾತ್ರಕ್ಕೆ ಕಾರ್ಖಾನೆಗಳನ್ನು ಮುಚ್ಚುವುದಕ್ಕೆ ಹೇಳಿದರೆ, ನಾನು ಕೂಡ ಅಪ್ರತ್ಯಕ್ಷವಾಗಿ ಕಾರ್ಮಿಕರ ವಿರೋಧಿಯಾಗಿ ಬಿಡುತ್ತೇನೆ. ಏಕೆಂದರೆ, ಅವರು ಬೀದಿಗೆ ಬರಲು ಕಾರಣರಾಗುತ್ತೇವೆ. ಆ ಹಿನ್ನೆಲೆಯಲ್ಲಿ, ಸಣ್ಣ-ಪುಟ್ಟ amendmentಗಳನ್ನು ಮಾಡಿ, ನಮ್ಮೆಲ್ಲರ ಭಾವನೆಗಳನ್ನು ಅರ್ಥೈಸಿಕೊಂಡು ಈ ಮಸೂದೆಯನ್ನು ಪಾಸ್ ಮಾಡಲಿ ಎಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಕಾರ್ಖಾನೆಗಳು ಕ್ಲೋಸ್ ಆಗಬಾರದೆಂದು ಹೇಳಿದರು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಕಾರ್ಮಿಕ ಮತ್ತು ಸಕ್ಕರೆ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನಾನು ಒಂದು ಮಾತನ್ನು ಹೇಳಿಬಿಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದ ಮಾತಿಗೆ ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಕಾರ್ಮಿಕರು ಮತ್ತು ಕಾರ್ಖಾನೆ ಮ್ಯಾನೇಜ್‌ಮೆಂಟ್ ಒಂದೇ ನಾಣ್ಯದ ಎರಡು ಮುಖ ಇದ್ದಂತೆ. ಅವರು ಹೇಳಿದಂತೆ, ಕಾರ್ಮಿಕರು ಬಿಟ್ಟು ಕಾರ್ಖಾನೆ ಇಲ್ಲ, ಕಾರ್ಖಾನೆ ಬಿಟ್ಟು ಕಾರ್ಮಿಕರು ಇಲ್ಲ. ನಾನು ಅದನ್ನು ಒಪ್ಪುತ್ತೇನೆ. ಆದರೆ, ಇವತ್ತಿನ ದಿನದಲ್ಲಿ ಸರ್ಕಾರವೇ ಆ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಬೇಕಾಗುತ್ತದೆ. You are in a judiciary position and you have to protect the interest of the labors. ಸರ್ಕಾರವೇ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಲಿಲ್ಲವೆಂದರೆ ಹೇಗೆ? ಈ ವಿಧೇಯಕ ಪಾಸ್ ಆದಲ್ಲಿ, ನಾಳೆ ದಿವಸ ಈ ಸದನಕ್ಕೆ ಎಲ್ಲಾ ಉದ್ಯಮಿಗಳೇ ಬಂದು ಕುಳಿತುಕೊಳ್ಳುತ್ತಾರೆ. ಆ ರೀತಿ ನೀವು ಮಾಡಲು ಹೊರಟಿದ್ದೀರಿ. ನೋಡಿ, ಅವರು ಬೆವರು ಸುರಿಸಿ ದುಡಿಮೆ ಮಾಡಿ ಅದರಿಂದ ಬಂದಹ ಹಣದಿಂದ ತನ್ನ ಹೆಂಡತಿ–ಮಕ್ಕಳನ್ನು ಜೋಪಾನ ಮಾಡತಕ್ಕಂಥ ಕಾರ್ಮಿಕರು. ನಿಜವಾಗಲೂ ಕೂಡ ಆ ಕಾರ್ಮಿಕರ ಶ್ರಮದಿಂದ ಒಂದು ಫ್ಯಾಕ್ಟರಿ ಬೆಳೆಯುತ್ತದೆ. ಕಾರ್ಮಿಕರ ಶ್ರಮದಿಂದ ಈ ದೇಶ ಅಭಿವೃದ್ಧಿಯಾಗುತ್ತದೆ. ಯಾರು ಶ್ರಮಪಟ್ಟು ಬೆವರು ಸುರಿಸಿ ದುಡಿದು ಸಮಾಜ, ಈ ನಾಡು ಮತ್ತು ದೇಶ ಕಟ್ಟುವಂಥ ವಿಚಾರವಿದೆ, ಅವರನ್ನೇ ನೀವು neglect ಮಾಡಿಬಿಟ್ಟಿದ್ದಾರೆ. ಅವರಿಗೆ ಏನು ತೊಂದರೆಯಾಗುತ್ತದೆಂದು ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದರು. ಇವತ್ತಿನ ದಿವಸ ಕಾರ್ಖಾನೆ ನಡೆಸುವುದು ಕಷ್ಟ. ಹಾಗಾದರೆ, ಸರ್ಕಾರದಿಂದ ಆ ಕಾರ್ಖಾನೆಗಳಿಗೆ financial assistance ಕೊಡಿ, ಬೇಕಾದರೆ ನೀವು ಆ ಕಾರ್ಖಾನೆಗಳಿಗೆ ಏನಾದರೂ ಸಾಲ ಕೊಟ್ಟು ಸಹಾಯ ಮಾಡಿ. ಮ್ಯಾನೇಜ್‌ಮೆಂಟ್‌ಗೆ ಸಹಾಯ ಮಾಡಿ, ನಾವೇನು ಬೇಡವೆಂದು ಹೇಳುವುದಿಲ್ಲ. ಆದರೆ ನೀವು ಕಾರ್ಮಿಕರ ಹೊಟ್ಟೆಮೇಲೆ ಮಾತ್ರ ಹೊಡೆಯಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಏಕೆಂದರೆ, ಮಾನ್ಯ ಆಯನೂರು ಮಂಜುನಾಥ್‌ರವರು ಲೇಬರ್ ಮೂವ್‌ಮೆಂಟ್‌ನಲ್ಲಿ ಇದ್ದವರು. ಇವತ್ತಿನ ದಿವಸ ಕೋವಿಡ್–19ನಿಂದಾಗಿ ಕಾರ್ಖಾನೆಗಳನ್ನು ಮುಚ್ಚುತ್ತಿದ್ದಾರೆಂದು ಹೇಳಿದರು. ಈ ಕೋವಿಡ್–19 ಬರುವುದಕ್ಕಿಂತ ಮುಂಚೆ ಕಾರ್ಖಾನೆಗಳನ್ನು ಮುಚ್ಚುತ್ತಿರಲಿಲ್ಲವೇ? ಸರ್ಕಾರ ತಂದಿರತಕ್ಕಂಥ ವಿಧೇಯಕ ಇದೊಂದು ಗುಜರಾತ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡೆಲ್. Ease of Doing Business is a Gujarat model. ಅಲ್ಲಿ ಯಾವುದೇ labor union ಗಳು ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರ ಗುಜರಾತ್ ಮಾದರಿಯಲ್ಲಿ ಮಾಡೇ ಇಲ್ಲ. ಕಾರ್ಮಿಕರ ಹಿತದೃಷ್ಟಿಯಿಂದ ಮಾಡಿರುವುದು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅಲ್ಲಿ ಹೇಳದೇ ಕೇಳದೆ ಕಾರ್ಖಾನೆಗಳನ್ನು ಮುಚ್ಚುತ್ತಿದ್ದಾರೆ. ಅದಕ್ಕೆ ಯಾವುದೇ ಕಾರಣನೂ ಇಲ್ಲ, ಏನೂ ಇಲ್ಲ. ಅದನ್ನು ಅವರು ಉದಾಹರಣೆ ಕೊಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು ಮಾತನಾಡಿದ ನಂತರ, ಅವರ ಹೇಳಿಕೆಯನ್ನು ಕೊಡಲಿ. ನನ್ನ ಮಾತನ್ನು ಅರ್ಧಕ್ಕೆ ನಿಲ್ಲಿಸುವುದಕ್ಕೆ ಬರಬಾರದು. ದಯವಿಟ್ಟು ಅವರು ಸ್ವಲ್ಪ ಕುಳಿತುಕೊಳ್ಳಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಯಾವುದೇ ಒಂದು ಪಕ್ಷದಲ್ಲಿ ಇದ್ದಾಗ, ಆ ಪಕ್ಷದ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಮಾತನಾಡಬೇಕು. ನೀವು ನಿಜವಾಗಲೂ ಕಾರ್ಮಿಕ ಪರವಾಗಿ ಇರಬೇಕು. ಸರ್ಕಾರ ಕಾರ್ಮಿಕರ ವಿರೋಧಿ ಕಾನೂನನ್ನು ಜಾರಿಗೆ ತರುತ್ತಿದ್ದಾರೆ. **(ಗೊಂದಲ)** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನೀವು ಒಬ್ಬರು ಸರ್ಕಾರದಲ್ಲಿ ಸಭಾನಾಯಕರಾಗಿದ್ದೀರಿ ಮತ್ತು ಕ್ಯಾಬಿನೆಟ್ ಸಚಿವರು ಇದ್ದೀರಿ. ನೀವು ನಮಗೆ advice ಮಾಡಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಈ ಕರ್ನಾಟಕ ರಾಜ್ಯದ ಒಬ್ಬ ಸ್ವಾಭಿಮಾನಿ ಕನ್ನಡಿಗ. ನನಗೆ ಕರ್ನಾಟಕದ ಮಾಡೆಲ್ ಮೇಲೆ ಬಹಳ ನಂಬಿಕೆ ಇದೆ. **(ಗೊಂದಲ)** ನಾವು ಗುಜರಾತ್ ಮಾಡೆಲ್ ಮೇಲೆ ನಂಬುವುದಕ್ಕೆ ಸಾಧ್ಯವೇ ಇಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಏನು ಅನಿಸುತ್ತದೆಂದರೆ, ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಅದರ ಬಗ್ಗೆ ಸ್ಪಷ್ಟವಾಗಿ ಹೇಳಿದರು. (**ಗೊಂದಲ**) ನೀವು ನಿಮ್ಮ ಆತ್ಮ ವಂಚನೆ ಮಾಡಿಕೊಂಡು ಮಾತನಾಡುತ್ತಿದ್ದೀರಿ. ನಿಮ್ಮ ನಿಮ್ಮ conscious bite ಆಗಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಮ್ಮ ಅನಿಸಿಕೆಗಳನ್ನು ನಾವು ಹೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಸರ್ಕಾರ ವಿಧೇಯಕವನ್ನು ಏಕೆ ಮಾಡುತ್ತಿದ್ದೀರಿ ಎಂದು ನಮಗೆ ಗೊತ್ತಿದೆ. ಇದು ಎಲ್ಲಿಂದ ಬಂತು ಮತ್ತು ಹೇಗೆ ಬಂತು ಎಂದು ಗೊತ್ತಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನೊಬ್ಬ ಕರ್ನಾಟಕ ರಾಜ್ಯದ ಒಬ್ಬ ಸ್ವಾಭಿಮಾನಿ ನಾಗರೀಕ. ನಮಗೆ ಬೇರೆ ರಾಜ್ಯದ ಯಾವುದೇ ಮಾಡೆಲ್ ಇಲ್ಲಿ ಬೇಕಾಗಿಲ್ಲ. Including Gujarat model. ನಮ್ಮ ಮಾಡೆಲ್‌ನ್ನು ಇಡೀ ದೇಶವೇ ಅನುಸರಿಸಬೇಕೇ ವಿನಃ, ನಾವು ಯಾವುದೇ ರಾಜ್ಯದ ಮಾಡೆಲ್‌ನ್ನು ಅನುಸರಿಸಬೇಕಾಗಿಲ್ಲ. ಕರ್ನಾಟಕ ರಾಜ್ಯದಲ್ಲಿ ಏನು Labor Law ಇತ್ತು, ಅದನ್ನು ಪುನರ್ ಸ್ಥಾಪನೆ ಮಾಡಬೇಕು. ಅದಕ್ಕೆ ದಯವಿಟ್ಟು ಒಪ್ಪಿಕೊಳ್ಳಿ. ಇಲ್ಲವೆಂದರೆ, Select Committee ಗೆ ಹಾಕಿ, ಇಲ್ಲವೆಂದರೆ, voting ಮಾಡಿ ಅದಕ್ಕೆ ನಾವು ತಯಾರಿದ್ದೇವೆ.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಧೇಯಕದ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಮಾನ್ಯ ಆಯನೂರು ಮಂಜುನಾಥ್‌ರವರು ಇದಕ್ಕೆ ಸಣ್ಣ ಪುಟ್ಟ ತಿದ್ದುಪಡಿ ತಂದು ಬಿಲ್ present ಮಾಡಿ ಎಂದು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ಆ ಪ್ರಕಾರ ಮಾಡಿ ಬಿಲ್ present ಮಾಡಿಬಿಡಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, let them present the Bill with amendments.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೇ. . .

**Sri MANE SHRINIVAS:-** As suggested by the Hon'ble Ayanur Manjunath ರವರು ಅದೇನು amendment ಮಾಡಲು ಸಲಹೆ ಕೊಟ್ಟಿದ್ದಾರೋ ಅದರಂತೆ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆಯಿತು ಅಮೆಂಡ್‌ಮೆಂಟ್ ಮಾಡಿಕೊಂಡು ಬರಲಿ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:–** ಅದೇನು ಸಲಹೆ ಕೊಟ್ಟಿದ್ದಾರೆ ಅದನ್ನೆಲ್ಲಾ ನೋಡಿಯೇ ತಾನೆ ಮಾಡುವುದು. ನಮ್ಮೆಲ್ಲರ ಮೂಲಭೂತ ಉದ್ದೇಶವಿರತಕ್ಕಂಥದ್ದು ಒಂದೇ. ಇವತ್ತಿನ ದಿವಸ ಯಾರೆಲ್ಲಾ ಹಿರಿಯ ಸದಸ್ಯರುಗಳು ಈ ವಿಧೇಯಕದ ಬಗ್ಗೆ ಮಾತನಾಡಿದ್ದಾರೆ, ಯಾವ ಕಾರಣಕ್ಕೂ ಕೂಡ ಕರ್ನಾಟಕದಲ್ಲಿ labor ಆಗಿ ಕೆಲಸ ಮಾಡತಕ್ಕಂಥ ಮನುಷ್ಯನ ಜೀವನದ ಮೇಲೆ ಪೆಟ್ಟು ಬೀಳಬಾರದು. ಯಾವುದೇ ಕಾರಣಕ್ಕೂ ಅವನ ಬದುಕಿಗೆ ಹೊರೆಯಾಗತಕ್ಕಂಥ ಕಾನೂನು ಜಾರಿಗೆ ಬರಬಾರದು ಎನ್ನುವುದು ತಮ್ಮೆಲ್ಲರ ಉದ್ದೇಶವಾಗಿದೆ. ಇವತ್ತು ಈ ಕಾನೂನಿನಲ್ಲಿ ...

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್‌ರವರೇ, ನೀವು ಕಾರ್ಮಿಕ ಸಚಿವರು ಇದ್ದೀರಿ. ನೀವು ಉದ್ಯಮ ಸಚಿವರು ಆಗಬಾರದು. ನೀವು ಲೇಬರ್‌ಗಳ ಹಿತಾಸಕ್ತಿಯನ್ನು ಕಾಪಾಡತಕ್ಕಂಥ ಕೆಲಸ ಮಾಡಬೇಕು.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಾರ್ಮಿಕರ ನಾಯಕರಾಗಿದ್ದಂತಹ ಮಾನ್ಯ ಆಯನೂರು ಮಂಜುನಾಥ್‌ರವರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದರ ಪ್ರಕಾರ ಸರ್ಕಾರ ತಿದ್ದುಪಡಿ ತರಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ. ಆರ್.ಬಿ.ತಿಮ್ಮಾಪೂರ್ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನಮಗೆಲ್ಲಾ ಅರ್ಥವಾಗಿದೆ. ನಾವೆಲ್ಲಾ ಈಗಾಗಲೇ ಉತ್ತಮವಾದಂತಹ ಹೇಳಿಕೆಗಳನ್ನು ಕೊಟ್ಟಿದ್ದೇನೆ. ಮೂರು ಬಾರಿ, ನಾಲ್ಕು ಜನ ಮಾನ್ಯ ಹಿರಿಯ ಸದಸ್ಯರೆಲ್ಲಾ ಎದ್ದು ಹೇಳಿಕೆಗಳನ್ನು ಕೊಟ್ಟರೂ ಕೂಡ ನೀವು ಮತ್ತೆ ಅದನ್ನೇ ಹೇಳುತ್ತಿದ್ದಾರೆ. ಇನ್ನೂ ಬೇರೆ ಏನಾದರೂ ವಿಷಯ ಇದ್ದರೆ ಹೇಳಿ. ನೀವು ಅದಕ್ಕೆ ಹೊಸದಾಗಿ ಕೆಲವು ತಿದ್ದುಪಡಿ ಮಾಡಿ ಬಿಲ್ ತರುತ್ತೀರಾ. ಇಲ್ಲವೇ Division ಗೆ ಒಪ್ಪಿಕೊಳ್ಳುತ್ತೀರಾ; ಇಲ್ಲವೇ Select Committee ಗೆ ಒಪ್ಪಿಕೊಳ್ಳುತ್ತೀರಾ ಹೇಳಿ. ಈ ಮೂರರಲ್ಲಿ ಯಾವುದಾದರೂ ಒಂದಕ್ಕೆ ಒಪ್ಪಿಕೊಳ್ಳಲಿ. ನಮ್ಮ ರಾಜ್ಯದ ಮುಧೋಳ ತಾಲ್ಲೂಕಿನ ಸಕ್ಕರೆ ಕಾರ್ಖಾನೆಯಲ್ಲಿ ಸುಮಾರು 6 ತಿಂಗಳಿನಿಂದ ಕಾರ್ಮಿಕರುಗಳಿಗೆ ಸಂಬಳವಿಲ್ಲದೆ ಒದ್ದಾಡುವಂತಹ ಪರಿಸ್ಥಿತಿ ಬಂದಿದೆ. ಪಾಪ, ಅವರ ಮನೆಗಳಲ್ಲಿ ಹೆಂಡತಿ–ಮಕ್ಕಳು ಉಪವಾಸದಿಂದ ಸಾಯುತ್ತಿದ್ದಾರೆ. ಅಂಥವರ ಬಗ್ಗೆ ನೀವು ಯೋಚನೆ ಮಾಡಬೇಕಲ್ಲವೇ?

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇನ್ನು ಯಾವುದೇ ರೀತಿ ಚರ್ಚೆಯಾಗುವುದು ಬೇಡ. ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿದಂತಹ ಸಲಹೆಗೆ ನಾವೆಲ್ಲಾ ಒಪ್ಪಿಕೊಂಡಿದ್ದೇವೆ. Amendment ತಂದು ಬಿಲ್‌ನ್ನು present ಮಾಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ವಿನಂತಿ ಮಾಡುತ್ತೇವೆ. . ..

**(ಗೊಂದಲ)**

**ಸಭಾಪತಿಯವರು:–** ಪ್ರಶ್ನೆ ಏನೆಂದರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕೈಗಾರಿಕಾ ವಿವಾದಗಳು ಮತ್ತು ಇತರ ಕೆಲವು ಕಾನೂನುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ,2020 ಪರ್ಯಾಲೋಚಿಸಬೇಕೆಂದು ಕೋರಲಾಗಿದೆ. ಸರ್ಕಾರದ ಪರವಾಗಿರುವವರು ಹೌದು ಎಂದು ಸೂಚಿಸಬೇಕು. ಸರ್ಕಾರದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳೆಲ್ಲಾ ಎದ್ದುನಿಂತು ಸರ್ಕಾರ ತಂದಿರತಕ್ಕಂಥ ಕೈಗಾರಿಕಾ ವಿವಾದಗಳು ಮತ್ತು ಇತರ ಕೆಲವು ಕಾನೂನುಗಳ (ಕರ್ನಾಟಕ ತಿದ್ದುಪಡಿ)ವಿಧೇಯಕ, 2020ರ ವಿಧೇಯಕವನ್ನು ಅಂಗೀಕರಿಸದಂತೆ ವಿರೋಧಿಸಿದರು)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರತಕ್ಕಂಥ ಬಿಲ್ ಮಂಡನೆಯಾಗಲಿ. **(ಗೊಂದಲ)** ವಿರೋಧ ಪಕ್ಷದವರು ಏನು ಬೇಕಾದರೂ ಮಾತನಾಡಿಕೊಳ್ಳಲಿ. ಸರ್ಕಾರದ ಪರವಾಗಿ ನಾವು ಮಂಡನೆ ಮಾಡುತ್ತಿರುವುದು ತಿದ್ದುಪಡಿಯನ್ನು. ತಾವು ಅಂಗೀಕಾರ ಮಾಡಲು ಅನುಮತಿ ನೀಡಬೇಕೆಂದು ತಮ್ಮಲ್ಲಿ ವಿನಂತಿ. **(ಗೊಂದಲ)** ಯಾವ ಕಾರಣಕ್ಕೂ ನಮ್ಮಲ್ಲಿ ಸೂಚನೆ ಕೊಟ್ಟಂತಹ ಉದಾಹರಣೆಗಳೇ ಇಲ್ಲ. ದಯವಿಟ್ಟು ಈ ಬಿಲ್‌ನ್ನು ಅಂಗೀಕಾರ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, we will press for Division ಗೆ ಒತ್ತಾಯ ಮಾಡಲೇಬೇಕು. ಇಲ್ಲ ಈ ವಿಧೇಯಕ ಪಾಸ್ ಆದರೆ ನಾಳೆ ದಿವಸ ಹೊರಗಡೆ ನಾವು ಜನರಿಗೆ ಮುಖ ತೋರಿಸುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರ ಅಭಿಪ್ರಾಯಗಳನ್ನು ಕ್ರೋಢೀಕರಿಸಿಕೊಂಡು ಈ ತಿದ್ದುಪಡಿಯನ್ನು ಮಂಡನೆ ಮಾಡಿಕೊಡಲಿ.

**(ಗೊಂದಲ)**

**ಸಭಾಪತಿಯವರು:-** ಡಿವಿಜನ್.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(936)26-9-2020/8.40/ಎಂ.ಎಂ-ಜಿ.ಆರ್**

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ (ವಿರೋಧಪಕ್ಷದ ನಾಯಕರು):-** ನಿಮ್ಮ ನಿಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಪೀಠ ಈಗಾಗಲೇ ruling ಮಾಡಿದೆ. ಪೀಠದಿಂದ ಈಗಾಗಲೇ ಘೋಷಣೆಯಾಗಿದೆ . . .

**ಸಭಾಪತಿಯವರು:-** ಬೆಲ್ ಹಾಕಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ನಾವು ವಿರೋಧಪಕ್ಷದಲ್ಲಿದ್ದು ನಾಳೆ ನಾವು ಜನರಿಗೆ ಮುಖ ತೋರಿಸಬೇಕೇ, ಬೇಡವೇ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅವರ ಅಭಿಪ್ರಾಯವನ್ನು ಕ್ರೋಢೀಕರಿಸಿಕೊಂಡು ಈ ತಿದ್ದುಪಡಿಯನ್ನು ಮಂಜೂರು ಮಾಡಬೇಕು.

**Mr. CHAIRMAN**:- Division.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, Joint Select Committee ಮಾಡಲಿ ಅಥವಾ Select Committee ಮಾಡಲಿ ಅದಕ್ಕೆ ಅವರ ಅಭಿಪ್ರಾಯವನ್ನು ಕೇಳಿ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಸರ್ಕಾರದ ಅಭಿಪ್ರಾಯವನ್ನು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, Select Committee ಗೆ ಕೊಡುವ ಪ್ರಶ್ನೆಯೇ ಇಲ್ಲ. ನಾವು ಆಡಳಿತ ಸ್ಥಾನದಲ್ಲಿದ್ದೇವೆ.

(ಗೊಂದಲ)

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ನನ್ನ ಅನುಭವದ ಆಧಾರದ ಮೇಲೆ ಹೇಳುವುದಾದರೆ ಯಾವುದೂ division ಆಗಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಇದೇ ಸದನದಲ್ಲಿ Money Bill division ಆಗಿದೆ. Joint Select Committee ಅಥವಾ Select Committee ಗೆ ಇದನ್ನು ರೆಫರ್ ಮಾಡಿ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಈ ಬಿಲ್‌ನಲ್ಲಿ ಏನಾದರೂ ಅಮೆಂಡ್‌ಮೆಂಟ್, ಅಥವಾ ಸಲಹೆ ಸೂಚನೆಗಳಿದ್ದರೆ ದಯವಿಟ್ಟು ಅವರು ಸಲಹೆಗಳನ್ನು ಕೊಡಲಿ.

**Sri S.R.PATIL:-** The Chair has already given its ruling. He has allowed the division. The Chair has given the ruling for division.

**(ಗೊಂದಲ)**

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** (ಗೊಂದಲ) ತಾವು ಹಿರಿಯ ಶಾಸಕರು. ದಯವಿಟ್ಟು ಈ ಸದನದ ಸತ್ಸಂಪ್ರದಾಯವನ್ನು ಕಾಪಾಡಿಕೊಂಡು ಹೋಗಬೇಕೆಂದು ನನ್ನ ವಿನಂತಿ.

(ಗೊಂದಲ)

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಕಾರ್ಮಿಕರಿಗೆ ವಿರುದ್ಧವಾಗಿರುವ ಕಾಯಿದೆಯನ್ನು ತಂದು ಸಂಪ್ರದಾಯವನ್ನು ಪಾಲಿಸಿ ಎಂದರೆ ಹೇಗಾಗುತ್ತದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಸರ್ಕಾರದ ಪರವಾಗಿ ಒಂದು ವಿನಂತಿ ಮಾಡುತ್ತೇನೆ. ಅನೇಕ ಸಲ ನಾವು ಕೂಡ ವಿರೋಧಪಕ್ಷದಲ್ಲಿದ್ದಾಗ ಇಂತಹ ತಾಂತ್ರಿಕವಾದಂತಹ ಚರ್ಚೆಗಳು ನಮ್ಮ ಮುಂದೆ ಬಂದಿತ್ತು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ . . . **(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಇದಕ್ಕೆ ಒಪ್ಪಿದರೆ ನಮ್ಮ ಪರಿಸ್ಥಿತಿ ಏನು? ಜನರಿಗೆ ನಾವು ಮುಖ ತೋರಿಸುವುದಕ್ಕಾಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಿಮ್ಮಲ್ಲಿರುವಂತಹ ಸಲಹೆ ಸೂಚನೆಗಳನ್ನು ಕೊಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ರವಿ:–** ಸದನದ ಸತ್ಸಂಪ್ರದಾಯವೇ ಕಾರ್ಮಿಕರ ಹಿತರಕ್ಷಣೆಯನ್ನು ಮಾಡುವುದು.

**ಸಭಾಪತಿಯವರು:–** ಸಭಾನಾಯಕರೇ, ಏನಾದರೂ ತಿದ್ದುಪಡಿ ಮಾಡುವುದಕ್ಕೆ ತಾವು ಇಚ್ಛೆ ಪಡುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರು ನಮಗೆ ಸಲಹೆ ಕೊಡಲಿ.

**ಶ್ರೀ ಎಸ್.ಆರ್. ಪಾಟೀಲ್:–** ಆಯ್ಕೆ ಸಮಿತಿಗೆ ರೆಫರ್ ಮಾಡಲಿ.

**ಶ್ರೀ ಮಾನೆ ಶ್ರೀನಿವಾಸ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಸಲಹೆ ಕೊಟ್ಟಿದ್ದಾರಲ್ಲ ಮತ್ಯಾರು ಕೊಡಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಸಲಹೆ ಕೊಡಬೇಕು. ಎಲ್ಲದರಲ್ಲೂ ಬಹುಮತ ಇದೆಯೆಂದು . . .

**ಸಭಾಪತಿಯವರು:–** ನೀವು ತಿದ್ದುಪಡಿ ಮಾಡುವುದಕ್ಕೆ ಇಚ್ಛೆ ಪಡುತ್ತೀರೋ ಇಲ್ಲವೋ ಹೇಳಿ. ಇಲ್ಲದಿದ್ದರೆ Select Committee...

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, division.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, division ಹಾಕುವುದಕ್ಕೆ ಹೇಗಾಗುತ್ತದೆ? (ಗೊಂದಲ)

**Mr.CHAIRMAN**:- Select Committee ಗೆ ಹಾಕುವುದಕ್ಕೆ (ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನೀವು ಕೆಟ್ಟ ಸಂಪ್ರದಾಯವನ್ನು ಸೃಷ್ಟಿ ಮಾಡುತ್ತೀರಾ ಎಂದು ವಿನಂತಿ ಮಾಡುತ್ತಿದ್ದೇನೆ. (ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:–** ತಾವು parliamentary procedure ಗೆ insult ಮಾಡುತ್ತಿದ್ದೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಯಾವುದಕ್ಕೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಅದು ನಮ್ಮ ಹಕ್ಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಿಮ್ಮ ಹಕ್ಕನ್ನು ನಾವು ಪ್ರಶ್ನೆ ಮಾಡುತ್ತಿಲ್ಲ ವಿನಂತಿ ಮಾಡುತ್ತಿದ್ದೇವೆ. ಈ ಸಂಪ್ರದಾಯ ಇಲ್ಲಿಯವರೆಗೂ ನಡೆದಿಲ್ಲ. Division ಮಾಡುತ್ತೀರಾ? ವೋಟ್ ಮಾಡುತ್ತೀರಾ?

**ಸಭಾಪತಿಯವರು:-** ಸಭಾನಾಯಕರೇ, . . .

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿಧೇಯಕವನ್ನು withdraw ಮಾಡಿಕೊಳ್ಳಿ.

(ಗೊಂದಲ)

**ಸಭಾಪತಿಯವರು:-** ಸಭಾನಾಯಕರೇ, Select Committee ಗೆ refer ಮಾಡುತ್ತೀರಾ?

(ಗೊಂದಲ)

**ಸಭಾಪತಿಯವರು:-** ಸರಿ. Division. (ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಕಾರ್ಮಿಕರ ವಿರೋಧಿ ಅಲ್ಲ, ಏನಾದರೂ ತಿದ್ದುಪಡಿ ಇದ್ದರೆ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:-** ವಿಧೇಯಕವನ್ನು ಹಿಂತೆಗೆದುಕೊಂಡರೆ ಕೇಂದ್ರ ಸರ್ಕಾರ ಏನನ್ನೂ ಹೇಳುವುದಿಲ್ಲ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾನಾಯಕರೇ, ಈಗಾಗಲೇ ಪೀಠದಿಂದ Division ಗೆ ರೂಲಿಂಗ್ ಕೊಟ್ಟಾಗಿದೆ. ದಯಮಾಡಿ ಮತಕ್ಕೆ ಹಾಕಿ. (ಗೊಂದಲ) ವಿರೋಧಪಕ್ಷವು ಕಾರ್ಮಿಕರ ಪರವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಸಹ ಕಾರ್ಮಿಕರ ಪರವಾಗಿಯೇ ಇದ್ದೇವೆ. ನಾವು ಕಾರ್ಮಿಕ ವಿರೋಧಿಗಳೇ? (ಗೊಂದಲ) ಕಾರ್ಮಿಕರ ಪರವಾಗಿ ಕೆಲಸ ಮಾಡುತ್ತಿರುವುದರಿಂದಲೇ . . .

**(ಈ ಹಂತದಲ್ಲಿ ಸದನದಲ್ಲಿ ವಿಧೇಯಕವನ್ನು ಮತಕ್ಕೆ ಹಾಕಲು ಬೆಲ್ ಹಾಕಲಾಯಿತು)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರು ರೂಲಿಂಗ್ ಕೊಟ್ಟಿದ್ದಾರೆ. ಆಯ್ಕೆ ಸಮಿತಿಗೆ ಹೋದರೆ ಓ.ಕೆ., ಇಲ್ಲ ರೂಲಿಂಗ್ ಅನ್ನು ನಾವು ಅನುಸಾರ ಮಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿಯಮ 229ರ ಪ್ರಕಾರ ವಿಧೇಯಕವನ್ನು ಪರಿಶೀಲನೆ ಸಮಿತಿಗೆ ಹಾಕಬಹುದು ಅಥವಾ ನಿಯಮ 236 ಪ್ರಕಾರ ಜಂಟಿ ಪರಿಶೀಲನಾ ಸಮಿತಿಗೆ . . .

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಂತಹದ್ದಕ್ಕೆಲ್ಲಾ ಮತದಾನಕ್ಕೆ ಹಾಕಿಬಿಟ್ಟರೆ, ಇಲ್ಲಿಯವರೆಗೂ ಹೆಚ್ಚಿನ ಸಂಪ್ರದಾಯಗಳ ಪ್ರಕಾರ ತಿದ್ದುಪಡಿಯಾಗಿಲ್ಲ. ಎಲ್ಲದಕ್ಕೂ ತಾವು ಈ ಆದೇಶವನ್ನು . . .

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಸಾಮಾನ್ಯವಾಗಿ ವಿಧೇಯಕವನ್ನು ಫೇಲ್ ಮಾಡುವ ಸಂಪ್ರದಾಯವನ್ನು ನೋಡಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಬಹುಮತ ನಿಮಗೇನು ಶಾಶ್ವತವಲ್ಲ. ಈ ರೀತಿ ಮಾಡುವುದು ಒಳ್ಳೆಯದಲ್ಲ. ನಾವು ಕೂಡ ಐದು ವರ್ಷಗಳು ಆ ಸ್ಥಾನದಲ್ಲಿದ್ದೆವು.

**ಶ್ರೀ ಎಸ್.ಆರ್. ಪಾಟೀಲ್:-** ನಾವು ಇಲ್ಲಿಯವರೆಗೂ ಒಂದು ಬಿಲ್ಲನ್ನೂ ಈ ರೀತಿ ಮಾಡಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾವು ಯಾವುದಾದರೂ ಬಿಲ್ಲಿಗೆ ಹೀಗೆ ವಿರೋಧ ಮಾಡಿದ್ದೆವಾ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:–** ಕಾರ್ಮಿಕ ನೀತಿಗೆ ವಿರುದ್ಧ . . . ಕಾರ್ಮಿಕರ ಪರವಾಗಿರುವವರ ಪಕ್ಷ ನಮ್ಮದು. ನೀವು ಬಂಡವಾಳಶಾಹಿಗಳು, ಉದ್ಯಮಿಗಳ ಪರವಾಗಿರುವವರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಐದು ವರ್ಷಗಳ ಕೆಳಗೆ ನಮಗೂ ಬಹುಮತವಿತ್ತು. ತಾವು ಹಿರಿಯರಾಗಿ ಇಂತಹ . . . . ಕೆಳಮನೆಯಲ್ಲಿಯೂ ಕಾರ್ಮಿಕರ ಪ್ರತಿನಿಧಿಗಳಿಲ್ಲವೇ? ಬಹುಮತ ಇದೆ ಎನ್ನುವ ಕಾರಣಕ್ಕೋಸ್ಕರ ಸರ್ಕಾರವನ್ನು ಈ ರೀತಿ ಕಾಡುತ್ತಿದ್ದೀರಿ.

(ಗೊಂದಲ)

ಇದೊಂದು ಕೆಟ್ಟ ಸಂಪ್ರದಾಯವಾಗಿದೆ. ಇದು ಸರಿಯಲ್ಲ. ದಯವಿಟ್ಟು ಇದನ್ನು ಪುನರ್ ಆಲೋಚನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ಬಹುಮತ ಇದೆಯೆಂದು ಏನು ಬೇಕಾದರೂ ಮಾಡಿಸುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ವಿಮರ್ಶೆಗೂ ಅವಕಾಶವಿಲ್ಲವೇ?

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಇಂತಹ ಸಂಪ್ರದಾಯಗಳು . . .

**ಶ್ರೀ ಎಸ್.ಆರ್. ಪಾಟೀಲ್:–** ರಾಜ್ಯಸಭೆಯಲ್ಲಿ ನೀವು ಏನು ಮಾಡಿದಿರಿ? ಎ.ಪಿ.ಎಂ.ಸಿ ಬಿಲ್. . . ಬಹುಮತವಿದೆಯೆಂದು ರಾಜ್ಯಸಭೆಯಲ್ಲಿ ನೀವು ಏನು ಮಾಡಿದಿರಿ? ನಮ್ಮವರನ್ನು 8 ಜನರನ್ನು ಸಸ್ಪೆಂಡ್ ಮಾಡಿದಿರಿ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅಂದರೆ ಇದು ರಾಜ್ಯಸಭೆಯಲ್ಲಿ ನಡೆದ ಘಟನೆಯ ಪುನರಾವರ್ತನೆಯೇ? ಪ್ರತೀಕಾರವೇ ಇದು? ರಾಜ್ಯಸಭೆಯಲ್ಲಿ ನಡೆದ ಘಟನೆಯ ಪ್ರತೀಕಾರವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ತೆಗೆದುಕೊಳ್ಳುತ್ತೀರಾ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದನ್ನು ವೋಟಿಂಗ್‌ಗೆ ಹಾಕಿ. ಕಾರ್ಮಿಕರ ಪರವಾಗಿ, ಕಾರ್ಮಿಕರ ಹಿತಾಸಕ್ತಿ ಕಾಪಾಡುವ ಸಲುವಾಗಿ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಿದ್ದುಪಡಿ ಮಾಡಬೇಕೆಂದು ಹೇಳಿ, ಕಾರ್ಮಿಕರ ಹಿತಾಸಕ್ತಿಗೆ ಧಕ್ಕೆಯಾಗಿದೆ ಎಂದು ಬೇಕಾದರೆ ಹೇಳಿ ಸರಿಯಿದ್ದರೆ ಒಪ್ಪಿಕೊಳ್ಳೋಣ. ರಾಜ್ಯಸಭೆಯಲ್ಲಿ ಸಸ್ಪೆಂಡ್ ಮಾಡಿದ್ದಾರೆ ಎನ್ನುವ ಕಾರಣಕ್ಕೆ ಪ್ರತೀಕಾರಕ್ಕೆ ವಿಧಾನ ಪರಿಷತ್ತಿನಲ್ಲಿ . . . (ಗೊಂದಲ)

**ಡಾ: ವೈ.ಎ. ನಾರಾಯಣಸ್ವಾಮಿ:–** ಈ ಮೇಲ್ಮನೆಯಲ್ಲಿ . . .

**(ಈ ಹಂತದಲ್ಲಿ ಸದನದ ಬಾಗಿಲುಗಳನ್ನು ಮುಚ್ಚಲಾಯಿತು ಹಾಗೂ ಕೋರಂ ಬೆಲ್ಲನ್ನು ನಿಲ್ಲಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕೈಗಾರಿಕಾ ವಿವಾದಗಳು ಮತ್ತು ಇತರೆ ಕೆಲವು ಕಾನೂನುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2020 ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"2020ನೇ ಸಾಲಿನ ಕೈಗಾರಿಕಾ ವಿವಾದಗಳು ಮತ್ತು ಇತರೆ ಕೆಲವು ಕಾನೂನುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

**ಶ್ರೀ ಎಸ್.ಆರ್. ಪಾಟೀಲ್ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ವಿಭಜನೆಗಾಗಿ ಒತ್ತಾಯಿಸುತ್ತೇನೆ.

**(ಸಭೆಯನ್ನು ವಿಭಜಿಸಲಾಯಿತು)**

**ಸಭಾಪತಿಯವರು:–** ವಿಭಜಿಸಿದಾಗ ಫಲಿತಾಂಶ ಹೀಗಿದೆ:

ಹೌದು – 14

ಇಲ್ಲ – 26

ಪ್ರಸ್ತಾವವು 'ಇಲ್ಲ' ಎನ್ನುವವರ ಪರವಾಗಿದೆ ಹಾಗೂ ವಿಧೇಯಕ ತಿರಸ್ಕರಿಸಲ್ಪಟ್ಟಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ವಿಧೇಯಕವು ತಿರಸ್ಕರಿಸಲ್ಪಟ್ಟಿದೆ)

(ಮುಂದು)

**(937) 26-09-2020/ 08-50/ ಕೆಹೆಚ್-ಜಿಆರ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಕೆಟ್ಟ ಸಂಪ್ರದಾಯವನ್ನು ಹುಟ್ಟು ಹಾಕಲಾಗಿದೆಯಲ್ಲವೇ, ಇಡೀ ನಮ್ಮ ಸದನಕ್ಕೆ ಮತ್ತು ವ್ಯವಸ್ಥೆಗೆ ಅಗೌರವವನ್ನು ತಂದು ಕೊಟ್ಟಿದೆ.

**ಉ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೇ ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020 ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು.</u>

**ಶ್ರೀ ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಅಗತ್ಯವಾಗಿರುವ ತಿದ್ದುಪಡಿಯನ್ನು ಈ ವಿಧೇಯಕದಲ್ಲಿ ತರುತ್ತಿದ್ದೇವೆ. ಇದರಲ್ಲಿ 18 (ಬಿ) ಸೆಕ್ಷನ್ ಅನ್ನು ಇದರಲ್ಲಿ ಸೇರಿಸುತ್ತಿದ್ದೇವೆ. ಏಕೆಂದರೆ, ವಿಶೇಷವಾಗಿ ಬೆಂಗಳೂರಿನಲ್ಲಿ Metro track ಹಾಯ್ದು ಹೋಗುತ್ತಿರುವ ಜಾಗದಲ್ಲಿ ಅಕ್ಕ-ಪಕ್ಕ ಹೆಚ್ಚು developmental activities ಆಗಬೇಕು. ಸಾರ್ವಜನಿಕ ಸಾರಿಗೆಯನ್ನು ಹೆಚ್ಚು ಜನರು ಉಪಯೋಗಿಸಬೇಕೆನ್ನುವ ಉದ್ದೇಶದಿಂದ ಈ ಒಂದು ಪ್ರಸ್ತಾವನೆಯು Bangalore Metro Rail Corporation Limited (BMRCL) ನಿಂದ ಬಂದಿದೆ. ಇದರ ಜೊತೆಗೆ ಬಿ.ಡಿ.ಎ., ಯಿಂದಲೂ ಬಂದಿದೆ. ಅಲ್ಲಿರುವ ಕಟ್ಟಡಗಳಿಗೆ ಬೆಂಗಳೂರಿನಲ್ಲಿ ಭೂಮಿಯ ಬೆಲೆ ತುಂಬಾ ಜಾಸ್ತಿಯಾಗುತ್ತಿರುವುದರಿಂದ, ಆ Metro track ನ ಅಕ್ಕ-ಪಕ್ಕ ಮತ್ತು S.E.Z., ನಲ್ಲಿ F.A.R.,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನ್ನು ಜಾಸ್ತಿ ಮಾಡುವುದಕ್ಕೆ ಅವಕಾಶ ಕೊಡುತ್ತೇವೆ. 'Premium F.A.R.,' ಎಂದು ಅದಕ್ಕೆ ಪ್ರೀಮಿಯಮ್ ಬೆಲೆಯನ್ನು ಕೂಡ ರೂಲ್ಸ್ ಮಾಡುವಾಗ ನಿಗದಿಪಡಿಸಲಾಗುತ್ತದೆ.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಚಿವರೇ, ಈ ವಿಧೇಯಕವನ್ನು ಆಗಲೇ ಹಿಂದಕ್ಕೆ ತೆಗೆದುಕೊಳ್ಳಲಾಗಿದೆಯಲ್ಲವೇ?

**ಸಭಾಪತಿಯವರು:–** ಮಾನ್ಯ ಸಚಿವರು .... **(ಗೊಂದಲ)**

**ಶ್ರೀ ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, this is an Ordinance. ಈ ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಂಡು, ಮತ್ತೆ ಈಗ ಈ ವಿಧೇಯಕವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರಾದ ಆರ್. ಅಶೋಕ್‌ರವರು ಅರ್ಧ ತಾಸು ಹಿಂದೆ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ.

**ಶ್ರೀ ಸುರೇಶ್ ಕುಮಾರ್:–** ಮಾನ್ಯ ಮರಿತಿಬ್ಬೇಗೌಡರವರೇ, ಅದರಲ್ಲಿ ಸ್ವಲ್ಪ ತಪ್ಪುಗಳು ಆಗಿರುವುದರಿಂದ, ಈ ವಿಧೇಯಕವನ್ನು ಆ ರೀತಿ ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ನಾನು ಅವರನ್ನು ಕರೆದಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಹಿಂದಕ್ಕೆ ತೆಗೆದುಕೊಂಡಿರುವಂತಹ ವಿಧೇಯಕಕ್ಕೆ ಪೂರಕವಾದ ಮಾಹಿತಿಯನ್ನು ತೆಗೆದುಕೊಂಡು ಬಂದು ಮತ್ತೊಮ್ಮೆ ಹೇಳುತ್ತೇವೆ ಎಂದು ಹೇಳಿದ್ದೇವೆ.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡಿಲ್ಲ ಎಂದು ಮಾನ್ಯ ಸಚಿವರು ಏಕೆ ಹೇಳುತ್ತಿದ್ದಾರೆ? ಕಡತಗಳನ್ನು ಪರಿಶೀಲನೆ ಮಾಡಿ. ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡಿಲ್ಲ ಎಂದು ಹೇಳಬೇಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡಿರುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡಿಲ್ಲ. ಇದಕ್ಕೆ ಪೂರಕವಾದ ಮಾಹಿತಿಯನ್ನು ಒದಗಿಸಿ, ಇದನ್ನು ಮಂಡಿಸುತ್ತೇವೆ ಎಂದು ಹೇಳಿದ್ದೇವೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಥರಿದ್ದಾರೆ. ಅವರು ಉತ್ತರವನ್ನು ಕೊಡಲಿ.

**ಶ್ರೀ ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈ ಕಾರಣದಿಂದ ಈ ಪ್ರಸ್ತಾಪ ಬಂದಿರುವುದು. F.A.R., ಎಂದರೆ, ಈ ಜಾಗಗಳಲ್ಲಿ F.A.R., ಕೊಡುವಾಗ, ಅವರು ಇದಕ್ಕೆ ಪ್ರೀಮಿಯಂ ದರವನ್ನು ನಿಗದಿ ಮಾಡುತ್ತಾರೆ. ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ಆ ಒಂದು ನಿಯಮವನ್ನು ಮಾಡುವಾಗ ಇದನ್ನು ಮಾಡುತ್ತಾರೆ.

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದನ್ನು ಯೋಜನೆ ಇಲಾಖೆ ಅಥವಾ ಬಿ.ಎಂ.ಆರ್.ಸಿ.ಎಲ್., ನವರು ಮಾಡುತ್ತಾರೆಯೇ?

**ಶ್ರೀ ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಇದನ್ನು ಯೋಜನೆ ಇಲಾಖೆಯವರು ಮಾಡುತ್ತಾರೆ. ಇದರ ಹಿನ್ನೆಲೆ ಏನೆಂಬುದನ್ನು ಸ್ವಲ್ಪ ಸದನದ ಗಮನಕ್ಕೆ ತರುತ್ತೇನೆ. The Bangalore Metro Rail Corporation Limited and the Bangalore Development Authority have requested the Government to make a provision for providing premium F.A.R., on either side of the Metro corridor. Since, the land value in the various cities including Bengaluru is very high and there is lack of availability of developed land, there is a demand for higher F.A.r., to go for high density construction. Making a provision for high density developments on either side

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

of mass rapid transit system such as metro encourages the use of public transport. Further, collecting Premium F.A.R., fees as prescribed in rules and permitting additional F.A.R., as in the Zonal Regulations increases the financial resources to take up development works in the concerned authority or the local body. ಇದೇನು ಹೊಸದೇನು ಅಲ್ಲ. In Maharastra Uran and Regional Planning Act, 1966, a provision has been made to provide for Premium F.A.R., by imposing Premium F.A.R., fees for the areas proposed in the Master Plan. ಈ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ. ವಿಶೇಷವಾಗಿ ಬೆಂಗಳೂರಿನಲ್ಲಿ ಇದರ ಅಗತ್ಯವಿದೆ ಎಂದು ಬಹಳ ಜನರಿಗೆ ಗೊತ್ತಿದೆ. ಇದರ ಬಗ್ಗೆ ಮೊದಲಿನಿಂದಲೂ ಬಹಳ ಚರ್ಚೆ ನಡೆಯುತ್ತಿದೆ. ವಿಶೇಷವಾಗಿ 18 (ಬಿ) ಯನ್ನು ಪರಿಚಯ ಮಾಡಿರುವುದು, at the risk of repetition ಹೇಳುತ್ತಿದ್ದೇನೆ, Bangalore Metro Rail Corporation Limited ಮತ್ತು ಬಿ.ಡಿ.ಎ.,ಯಿಂದ ಬಂದಿರುವ ಪ್ರಸ್ತಾಪದ ಹಿನ್ನೆಲೆಯಲ್ಲಿ ಹೆಚ್ಚು ಜನರು ಸಾರ್ವಜನಿಕ ಸಾರಿಗೆಯನ್ನು ಉಪಯೋಗ ಮಾಡಲಿ ಮತ್ತು ಅಲ್ಲಿ ಏನಾಗಿದೆ ಎಂದರೆ, ನಮ್ಮ limited land ಅನ್ನು ಇನ್ನಷ್ಟು ಚೆನ್ನಾಗಿ ಉಪಯೋಗ ಮಾಡುವುದಕ್ಕೋಸ್ಕರ ಈ ವಿಧೇಯಕವನ್ನು ತರಲಾಗಿದೆ, ದಯಮಾಡಿ, ಈ ವಿಧೇಯಕಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ಬೆಂಬಲ ಕೊಡುವುದಕ್ಕೆ ನಮಗೇನೂ ತೊಂದರೆ ಇಲ್ಲ. ನಾವೆಲ್ಲರೂ ಬೆಂಬಲ ಕೊಡುತ್ತೇವೆ. ಆದರೆ ಮಾನ್ಯ ಸಭಾನಾಯಕರಿಗೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಹಿಂದೆ ಈ ವಿಧೇಯಕವನ್ನು ತಂದು ತಪ್ಪು ಮಾಹಿತಿ ಕೊಟ್ಟು ವಾಪಸ್ ತೆಗೆದುಕೊಂಡು ಹೋಗಿದ್ದೀರಿ. ಮತ್ತೆ ಈಗ ಈ ವಿಧೇಯಕವನ್ನು ತೆಗೆದುಕೊಂಡು ಬಂದಿದ್ದೀರಿ. ತಾವು ಈ ಸದನದ ಬಗ್ಗೆ ಇಷ್ಟು ಹೊತ್ತಿನವರೆಗೂ ಮಾತನಾಡಿದ್ದೀರಿ. ಈ ವಿಧೇಯಕವನ್ನು ನಾವೆಲ್ಲರೂ ಪಾಸ್ ಮಾಡಿಕೊಡುತ್ತೇವೆ. ಅದರಲ್ಲಿ ಯಾವುದೇ ಎರಡು ಮಾತಿಲ್ಲ. ಆದರೆ ಇದೇ ವಿಧೇಯಕವನ್ನು ಮಾನ್ಯ ಕಂದಾಯ ಸಚಿವರಾದ ಆರ್. ಅಶೋಕ್‌ರವರು ತಂದು ತಪ್ಪು ಇದೆ ಎಂದು ಹೇಳಿ ವಾಪಸ್ ತೆಗೆದುಕೊಂಡು ಹೋದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದನ್ನು ಮಾನ್ಯ ಸಭಾನಾಯಕರು ಅರ್ಥ ಮಾಡಿಕೊಳ್ಳಬೇಕು. ಸದನದಲ್ಲಿ ಏನಾದರೂ ಹೇಳಿದರೆ ಯಾರೂ ಕೇಳುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ನಾನು ಹೇಳುವುದನ್ನು ತಾವು ಸ್ವಲ್ಪ ಕೇಳಬೇಕಲ್ಲವೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ಸ್ವಲ್ಪ ಸುಮ್ಮನೆ ಇರಿ. ನಾನು ಒಂದು ವಿಚಾರವನ್ನು ಹೇಳುತ್ತೇನೆ. ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡಿರುವ ಬಗ್ಗೆ ಕಡತವನ್ನು ತೆಗೆಸಿ ನೋಡುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡಿದ್ದೇವೆ ಎಂದಾಗಿಲ್ಲ. ಇದರ ಬಗ್ಗೆ ನಾವೇನೂ ಹೇಳಿದ್ದೇವೆ ಎಂದರೆ, . . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನೋಡಿ, ನಮಗೆ ತಿಳಿದಿರುವುದನ್ನು ನಾವು ಹೇಳುತ್ತೇವೆ. ಅದರಿಂದ ಸುಧಾರಿಸಿಕೊಳ್ಳುವುದು, ಬಿಡುವುದು, ತಮಗೆ ಬಿಟ್ಟ ವಿಚಾರ. ಇದು ನನ್ನ ಕರ್ತವ್ಯ ನಾನು ಹೇಳುತ್ತೇನೆ. ಈ ವಿಧೇಯಕ ಸರಿಯಾದ ರೀತಿಯಿಂದ ಬರಬೇಕೆಂದು ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರಾದ ಮಾನೆ ಶ್ರೀನಿವಾಸ್‌ರವರು ಕೇಳಿರುವಂತಹ ಪ್ರಶ್ನೆಗೆ ನಮ್ಮ ಹತ್ತಿರ ಮಾಹಿತಿ ಇರಲಿಲ್ಲ. ಮಾಹಿತಿ ತರುತ್ತೇವೆ ಎಂದು ಹೇಳಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾನಾಯಕರೇ, ಇದರ ಬಗ್ಗೆ ಮಾನ್ಯ ಕಂದಾಯ ಸಚಿವರಾದ ಆರ್.ಅಶೋಕ್‌ರವರು ಏನು ಹೇಳಿದ್ದಾರೆ ಎಂಬುದನ್ನು ಕಡತವನ್ನು ತರಿಸಿ ಪರಿಶೀಲನೆ ಮಾಡಿ. ಹಾಗೆಯೇ ಮಾನ್ಯ ಕಂದಾಯ ಸಚಿವರಾದ ಆರ್. ಅಶೋಕ್‌ರವರು ಈ ವಿಧೇಯಕದ ಬಗ್ಗೆ ಏನು ಮಂಡಿಸಿದರು ಎಂಬುದನ್ನು ಸಹ ನೋಡಿ. ನಂತರ ಈ ವಿಧೇಯಕವನ್ನು ಮಂಡಿಸಿ, ಇದರ ಬಗ್ಗೆ ವಿವರಣೆ ಕೊಡುವುದಕ್ಕೆ ಆಗಲಿಲ್ಲ ಎನ್ನುವ ಬಗ್ಗೆ ಮಾನ್ಯ ಸಚಿವರು ಏನು ಹೇಳಿದ್ದಾರೆ ಎಂಬುದನ್ನು ಕಡತದಲ್ಲಿ ನೋಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿರುವಂತೆ ಇದರ ಬಗ್ಗೆ ತಿಳಿದುಕೊಂಡು ಹೇಳುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ಸದನದ ಬಗ್ಗೆ ಪಾವಿತ್ರ್ಯತೆ ಮತ್ತು ಗೌರವ ಇದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಕಡತವನ್ನು ತೆಗೆಯಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಕಡತದಲ್ಲಿ ಆಗಿದೆಯೋ, ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಎಂಬುದನ್ನು ನೋಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ತಪ್ಪಾಗಿರುವುದನ್ನು ಸುಧಾರಿಸಿಕೊಳ್ಳುವುದಕ್ಕೆ ಎಲ್ಲರಿಗೂ ಅವಕಾಶವಿದೆ. ಆದರೆ, ಅದನ್ನೇ ಪ್ರತಿಷ್ಠೆ ಮಾಡುವುದು ಸರಿಯಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಮಗೆ ಈ ವಿಚಾರದಲ್ಲಿ ಏನು ಪ್ರತಿಷ್ಠೆ ಇಲ್ಲ. ಇದರಲ್ಲಿ ಪ್ರತಿಷ್ಠೆಯ ಪ್ರಶ್ನೆಯೇ ಬರುವುದಿಲ್ಲ. ನನಗೆ ಗೊತ್ತಿರುವ ಹಾಗೆ ನಮ್ಮ ಹತ್ತಿರ ಈ ವಿಧೇಯಕದ ಬಗ್ಗೆ ಪೂರಕವಾದ ಮಾಹಿತಿಗಳು ಇರಲಿಲ್ಲ. ಅದಕ್ಕೋಸ್ಕರ ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತಂದಿದ್ದೇವೆ. ಈಗ ಇದರ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ.

**(ಗೊಂದಲ)**

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(938) 26–09–2020/ 09–00/ ಎಲ್‌ಎಂ (ಕೆಹೆಚ್)–ಎಂಡಿ**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಧೇಯಕದ ಬಗ್ಗೆ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಎಂಬುದನ್ನು ನೋಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿರುವಂತೆ ಈ ವಿಧೇಯಕವನ್ನು ಪೆಂಡಿಂಗ್‌ನಲ್ಲಿ ಇಟ್ಟು ಕಡೆಗೆ ಮಾಡುತ್ತೇವೆ ಎಂದು ಹೇಳಿದ್ದಾರೆ.

**Sri S.R.PATIL:-** Mr Chairman, The Revenue Minister has made a statement. It is in the record; you go through the record and then you allow for this. ನಾನು ಇದನ್ನು withdraw ಮಾಡುತ್ತೇನೆ ಎಂದು ಹೇಳಿದರು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಇದರ ಬಗ್ಗೆ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ದಾಖಲೆಯಲ್ಲಿ ಏನಿದೆ ಎಂಬುದನ್ನು ನೋಡಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಪಾಸ್ ಮಾಡಿಕೊಡುವುದಕ್ಕೆ ಯಾವುದೇ ತೊಂದರೆ ಇಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ನಮಗೆ ಯಾವುದೇ ರೀತಿಯ ಪ್ರತಿಷ್ಠೆ ಇಲ್ಲ. ಪ್ರತಿಷ್ಠೆ ಮಾಡುತ್ತಿರುವುದು ನಾವು. ತಾವುಗಳಲ್ಲ. ಈ ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ಪೂರಕವಾದ ಮಾಹಿತಿಗಳು ಇರಲಿಲ್ಲ. ಅದಕ್ಕೆ ಈ ವಿಧೇಯಕವನ್ನು ಪೆಂಡಿಂಗ್‌ನಲ್ಲಿ ಇಟ್ಟಿರುತ್ತೇವೆ ಎಂದು ಹೇಳಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಎಸ್.ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾವು ಇದರ ಬಗ್ಗೆ ಜಾಸ್ತಿ ಮಾತನಾಡುವುದಿಲ್ಲ. ಮುಂದಿನ ದಿನಗಳಲ್ಲಿ ಇಂತಹ ತಪ್ಪುಗಳು ಆಗಬಾರದು ಎನ್ನುವುದಷ್ಟೆ ನಮ್ಮ ಸಲಹೆ. ಬೇರೆ ಏನು ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಚರ್ಚೆಗೆ ತೆಗೆದುಕೊಂಡಾಗ ನಮ್ಮ ಹತ್ತಿರ ಸರಿಯಾದ ಮಾಹಿತಿ ಇರಲಿಲ್ಲ. ತಾವು ಏಕೆ ಇದರ ಬಗ್ಗೆ ವಾದ ಮಾಡುತ್ತಿದ್ದೀರಾ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ದಾಖಲೆಗಳು ಸರಿ ಇರಬೇಕೆನ್ನುವ ಸಲುವಾಗಿ ಹೇಳುತ್ತಿದ್ದೇವೆ. ವಿಧೇಯಕವನ್ನು ನಾವು ಪಾಸ್ ಮಾಡಿಕೊಡುತ್ತೇವೆ.

**ಶ್ರೀ ಬಸವರಾಜ ಎಸ್.ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ತಾವು ವಾದ ಮಾಡಿದರೆ, ನಮಗೇನೂ ಇಲ್ಲ. ನಾನು ಏನು ಹೇಳುತ್ತೇನೆ ಎಂದರೆ, ಮುಂದಿನ ದಿನಗಳಲ್ಲಿ ಇಂತಹ ತಪ್ಪುಗಳು ಆಗಬಾರದಂತೆ ನೋಡಿಕೊಳ್ಳುತ್ತೇವೆಂದು ತಾವು ಹೇಳಿ. ವಿಧೇಯಕವನ್ನು ಪಾಸ್ ಮಾಡಿಕೊಡಿ ಎಂದರೆ ಆಯಿತು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, It is a caution to the Ruling Party.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಿ.ಡಿ.ಎ., ಮತ್ತು ಮೆಟ್ರೋದವರು ಕೊಟ್ಟಿರುವ ಪ್ರಸ್ತಾವನೆಯನ್ನು ಬಹಳ ವಿಸ್ತಾರವಾಗಿ ಓದಿದರು. ನನ್ನ ಒಂದು ಸಣ್ಣ ಪ್ರಶ್ನೆಯೇನೆಂದರೆ, we all know and understand about the premium FAR (Floor Area Ratio). ಮುಂಬೈ ಮತ್ತು ಪೂನಾದಲ್ಲಿ ಆಗುತ್ತಿದೆ. ಅದನ್ನು ನಾವು ನೋಡುತ್ತಿದ್ದೇವೆ. ಅವರು ನಗರಾಭಿವೃದ್ಧಿ ಸಚಿವರು ಆಗಿದ್ದಾಗ ಹಲವಾರು ಬಾರಿ ನಮ್ಮಲ್ಲಿ ಸಭೆಗಳನ್ನು ಮಾಡಿದಾಗಲೂ ಕೂಡ, ಆ ಸಂದರ್ಭದಲ್ಲಿ ನಾವು ಚರ್ಚೆ ಮಾಡಿದ್ದೇವೆ. There is no clarity about increase of FAR is to what extent? ನಮ್ಮಲ್ಲಿ ಅದೊಂದೇ ಪ್ರಶ್ನೆ. ಈಗ designated ಅಂದರೆ permitted FAR ಕ್ಕಿಂತ what is going to be the increased FAR ಎನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು *Mass Rapid* System ನಲ್ಲಿ BMRCL (Bengaluru Metro Rail Corporation Limited) ಮತ್ತು BDA (Bengaluru Development Authority) ಎಂದು ಹೇಳಿದ್ದಾರೆ. ಇದರ ಬಗ್ಗೆ ಬಿ.ಡಿ.ಎ., ನಲ್ಲಿ PRR (Peripheral Ring Road) ಇರಬಹುದು ಅಥವಾ Ring Roads ಇರಬಹುದು. ಇದು ಅಲ್ಲದೆಯೂ ಕೂಡ Zonal Regulations ನಲ್ಲಿ ಯಾವುದು commercial ಆಗುತ್ತದೆ, *Central Business District* ಅದು ಕೂಡಾ ಇದರಲ್ಲಿ ಒಳಗೊಂಡಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಎರಡು ಕಡೆಗಳಲ್ಲಿ corridor ಎಂದು ಮಾನ್ಯ ಸಚಿವರು ಹೇಳಿದರು. ಇದರಲ್ಲಿ ಎಷ್ಟು ಅಂತರ ಇದೆ. corridor ನಿಂದ ಎರಡು ಕಡೆಯಿಂದಲೂ ಎಷ್ಟು distance define ಮಾಡಿದ್ದೀರಿ. PRR, Ring Road or BMRCL ಇರಬಹುದು. ಇದನ್ನು vertical growth ಗೆ ಅನುಕೂಲವಾಗುವ ರೀತಿಯಲ್ಲಿ ಮಾನ್ಯ ಸಚಿವರು ಮಾಡುತ್ತಿದ್ದಾರೆ ಎಂಬುದು ನನ್ನ ಭಾವನೆ. ಇದರ ಬಗ್ಗೆ ಅವರು ಸ್ಪಷ್ಟೀಕರಣ ಕೊಡಬೇಕೆಂದು ಪೀಠದ ಮುಖಾಂತರ ಮನವಿ ಮಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಈಗ ಸ್ಪಷ್ಟವಾಗಿ ಇರುವಂತಹದ್ದು ನಮ್ಮ ಮುಂದೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೇ ತಿದ್ದುಪಡಿ) ವಿಧೇಯಕ, 2020 ರಲ್ಲಿ 18–'ಬಿ' ಯನ್ನು ತರುವಂತಹದಕ್ಕೆ ಆಗಿದೆ. ಇದರಲ್ಲಿ premium FAR ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಈಗ ಮಾನ್ಯ ಸಚಿವರು ಹೇಳಿರುವ ಹಾಗೆ ಎಲ್ಲಿ Metro Corridors ಇದೆ. ಇದನ್ನು ಅಲ್ಲಿ ಮಾಡಬೇಕು ಎಂದು ಹೇಳಿದ್ದಾರೆ. ಶೇಕಡಾ 50 ರಷ್ಟಕ್ಕಿಂತ ಮೇಲೆ decide ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಶೇಕಡಾ 50 ರಷ್ಟಕ್ಕಿಂತ ಕಡಿಮೆ ಇಲ್ಲದ ಆದರೆ, ಶೇಕಡಾ 25 ರಷ್ಟು, ಶೇಕಡಾ 30 ರಷ್ಟು ಮತ್ತು ಶೇಕಡಾ 40 ರಷ್ಟಕ್ಕೂ ಕೊಡಬಹುದು, ಆದರೆ ಈ ನಿರ್ದಿಷ್ಟವಾದ corridor ನಿಂದ ಎಷ್ಟು ಆಳದವರೆಗೂ ಕೊಡುತ್ತೀರಾ ಎಂಬುದನ್ನು ತಿಳಿಸಬೇಕು. ಇವತ್ತು Zonal Regulations ಅನ್ನು Master Plan ಮೇಲೆ ತಾವು ಮಾಡಬೇಕಾಗುತ್ತದೆ. Zonal Regulations ಅನ್ನು ಮಾಡುವಾಗ ನಿರ್ದಿಷ್ಟವಾಗಿ ಈ corridors ಗಳನ್ನು ಮಾಡಬೇಕಾದರೆ Master Plan ನಲ್ಲಿ ನಿರ್ದಿಷ್ಟವಾಗಿ ತೋರಿಸಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದನ್ನು ತಾವು ಮಾಡುವುದರಿಂದ ಯಾವ ಯಾವ ರೀತಿಯಲ್ಲಿ ಡೆವಲಪರ್ಸ್ ಇದನ್ನು ಉಪಯೋಗಿಸಿಕೊಳ್ಳುತ್ತಾರೆ ಎನ್ನುವುದು ಬಹಳ ಮುಖ್ಯವಾಗಿದೆ. ಶೇಕಡಾ 50 ರಷ್ಟಕ್ಕಿಂತ ಕೆಳಗೆ ಎಂದರೆ ಎಲ್ಲಿ ಈ ಒಂದು ಯೋಜನೆಗಳಿಗೆ ತಾವು ಕೊಡುತ್ತೀರಿ. ಅಂತಹ ಯೋಜನೆಗಳಿಗೆ 2 FAR ಇದ್ದರೆ ತಾವು ಅದರ ಶೇಕಡಾ 50 ರಷ್ಟು ಎಂದರೆ ಒಂದು ಜಾಗದಲ್ಲಿ ತಾವು ಮೂರು ಕೊಡಬಹುದು. ಇದರ ಪ್ರಕಾರ ತಾವು ಮೂರರವರೆಗೂ ಕೊಡಬಹುದು. ಈ ಮೂರರವರೆಗೂ ಕೊಡಬೇಕಾದರೆ ಯಾವ ಆಳಕ್ಕೆ ಹೋಗಬೇಕು ಎನ್ನುವುದರ ಬಗ್ಗೆ ಎಲ್ಲಿಯೂ ನಿರ್ದಿಷ್ಟವಾಗಿ ಇಲ್ಲ. ಆದ್ದರಿಂದ, ತಾವು ಇದರ ಬಗ್ಗೆ ನಿರ್ದಿಷ್ಟವಾಗಿ ಮಾಡಿದರೆ ಆಗ misuse ಆಗದೇ ಇರುವ ಹಾಗೆ ಆಗುತ್ತದೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಒಳ್ಳೆಯ ವಿಧೇಯಕವನ್ನು ತಂದಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರು ಹೇಳಿದ ಹಾಗೆ, Zonal Regulations, ತುಮಕೂರು ರಸ್ತೆಯಲ್ಲಿ ಸುಮಾರು ಅಚ್ಚುಕಟ್ಟು ಪ್ರದೇಶವಿದೆ. Green Belt ಇದೆ. ಅಂತಹ ಪ್ರದೇಶಗಳಲ್ಲಿ ತಾವು ಏನು ಮಾಡುತ್ತೀರಿ? Corridor ನ extent ಎಷ್ಟು? ಅರ್ಧ ಕಿ.ಮೀ, ಒಂದು ಕಿ.ಮೀ, ಎರಡು ಕಿ.ಮೀ ಎಷ್ಟು ಎಂಬುದನ್ನು ತಾವು ಸ್ಪಷ್ಟಪಡಿಸಬೇಕು.

**ಶ್ರೀ ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಅಪ್ಪಾಜಿಗೌಡರವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. In principle, ನಾವು ಒಂದು ಅನುಮೋದನೆಯನ್ನು ಕೊಡುತ್ತಿದ್ದೇವೆ. ಈಗ 500 metres on either side of the Metro ಎಂದು ನಾವು ನಿಗದಿ ಮಾಡಿದ್ದೇವೆ. ಇದೆಲ್ಲವನ್ನೂ ಕೂಡ Zonal Regulations ನಲ್ಲಿ ಇದನ್ನು ನಿಗದಿ ಮಾಡುತ್ತೇವೆ. Rules and Regulations ಮಾಡುವಾಗ ಅದನ್ನು ನಿಗದಿ ಮಾಡುತ್ತೇವೆ. ಏಕೆಂದರೆ, ultimately it depends upon the area. ಯಾವ zone ನಲ್ಲಿ ಎಷ್ಟು ಮಾಡಬೇಕೆಂಬುದನ್ನು Zonal Regulations ನಲ್ಲಿ ನಿಗದಿ ಮಾಡುತ್ತೇವೆ. ಇದನ್ನು ಯಾವ ಉದ್ದೇಶಕ್ಕಾಗಿ ಮಾಡುತ್ತೇವೆ ಎಂದು ಈಗಾಗಲೇ ನಾನು ಹೇಳಿದ್ದೇನೆ. ಇದನ್ನು ಏಕೆ ಮಾಡಬೇಕೆನ್ನುವುದಕ್ಕೂ ಕಾರಣವನ್ನು ಹೇಳಿದ್ದೇನೆ. ಇದು ಇವತ್ತು ಅಗತ್ಯ ಕೂಡ ಇದೆ. ಆ ಒಂದು ಜಾಗಕ್ಕೆ ಹೆಚ್ಚು ಜನರು ಬಂದರೆ ಆದಾಯ ಬರುತ್ತದೆ. ಅದಕ್ಕೋಸ್ಕರ ಇದನ್ನು ನಾವು ಮಾಡುತ್ತಿದ್ದೇವೆ. ದಯಮಾಡಿ, ಈ ವಿಧೇಯಕಕ್ಕೆ ಎಲ್ಲರೂ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. '

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, 500 ಮೀಟರ್ ಎಂದರೆ ಅರ್ಧ ಕಿ.ಮೀ ಆಗುತ್ತದೆ.

**ಶ್ರೀ ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಈಗ ಇದಕ್ಕೆ 500 metres on either side ಎಂದು ಒಂದು idea ಬಂದಿದೆ. ಅಂತಿಮವಾಗಿ ಇದನ್ನು ನಾವು ನಿರ್ಧಾರ ಮಾಡುವುದಿಲ್ಲ. Zonal Regulations ಮಾಡುವಾಗ depending upon that area they will decide.

**ಶ್ರೀ ಶ್ರೀನಿವಾಸ ಮಾನೆ:–** ಮಾನ್ಯ ಸಭಾಪತಿಯವರೇ, Increase in FAR ಎಷ್ಟು?

**ಶ್ರೀ ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಶೇಕಡಾ 50 ರಷ್ಟು ಆಗುತ್ತದೆ.

**Sri MANE SRINIVAS:-** Is it 50 percent of the permitted FAR?

**Sri SURESH KUMAR:-** Yes.

**ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನಾಗುತ್ತದೆ ಎಂದರೆ, Change of Land ವ್ಯವಹಾರ ಪ್ರಾರಂಭವಾಗುತ್ತದೆ. ನಿಯಮವನ್ನು ಸರಿಯಾಗಿ ಮಾಡಿಬಿಡಿ. 500 ಮೀಟರ್ ಅನ್ನು ಮಾಡಬೇಕಾದರೆ ಅದನ್ನು ಮಾಡಿ. Change of Land ಬಗ್ಗೆ ತಮಗೆ ವ್ಯವಹಾರ ಗೊತ್ತಿಲ್ಲ. CDP (Comprehensive Development *Plan)* ಮಾಡಿರುವುದು ದುಡ್ಡು ಮಾಡುವ ಸಲುವಾಗಿ. ಇದು ಆ ರೀತಿ ಆಗುತ್ತದೆ. ತಾವು 500 ಮೀಟರ್ ಮಾಡುತ್ತೀರಾ, ಒಂದು ಕಿ.ಮೀ ಮಾಡುತ್ತೀರಾ, ಎಷ್ಟು ಮಾಡುತ್ತೀರಾ ಎಂಬುದನ್ನು equal ಆಗಿ ಮಾಡಿ.

**ಶ್ರೀ ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸದಸ್ಯರಾದ ಕಾಂತರಾಜ್‌ರವರೇ, ಈ specifics ಎಲ್ಲವೂ ಕೂಡ as per the spirit of this Act. ನಾವು ನಿಯಮವನ್ನು ಮಾಡುವಾಗ ನಾವು ಮಾಡುತ್ತೇವೆ. ತಾವು ಹೇಳಿರುವುದನ್ನು ಕೂಡ ನೆನಪಿನಲ್ಲಿಟ್ಟುಕೊಳ್ಳುತ್ತೇವೆ. ಹೆಚ್ಚು human intervention ಇಲ್ಲದೆ ಇರುವ ಹಾಗೆ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020 ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ಈ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020 ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020 ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಮುಂದು)**

**(939)26–09–2020(09–10)ಬಿಎಸ್‌ಡಿ–ಎಂಡಿ**

**18. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**(ಅ) ವಿಷಯ:–ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿಗೆ ಎಂ.ಸಿ.ಐನವರು ಅನುಮತಿ ನೀಡಿದ್ದು, ಸದರಿ ಕೋರ್ಸುಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ಬೋಧಕ ಸಿಬ್ಬಂದಿಗಳ ಕೊರತೆ ಇರುತ್ತದೆ. ಸರ್ಕಾರ ಪ್ರಸ್ತುತ ಬೋಧಕ ಹುದ್ದೆಗಳನ್ನು ಸೃಜಿಸಲು ಸಾಧ್ಯವಿಲ್ಲವೆಂದು ಕೋರ್ಸುಗಳನ್ನು ಪ್ರಾರಂಭಿಸುವುದನ್ನು ಕೈಬಿಡಲು ತಿಳಿಸಿರುವುದರಿಂದ ಉಂಟಾಗಿರುವ ಸಮಸ್ಯೆ ಕುರಿತು.**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯು 2005–06ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಮೊದಲಿಗೆ 100 ವಿದ್ಯಾರ್ಥಿಗಳಿಗೆ MBBS ಪದವಿ ಅಧ್ಯಯನ ಮಾಡಲು MCI (Medical Council of India) ನಿಂದ ಅನುಮತಿ ಸಿಕ್ಕಿತ್ತು. ಈಗ 2016–17ನೇ ಸಾಲಿನಲ್ಲಿ MCI 150 ವಿದ್ಯಾರ್ಥಿಗಳಿಗೆ MBBS ಅಭ್ಯಾಸ ಮಾಡಲು ಪ್ರವೇಶ ಕಲ್ಪಿಸಿಕೊಟ್ಟಿದೆ. ಇದಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕೊಡುಗೆ ಅಪಾರ. ಅಲ್ಲಿರುವ ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Teaching Faculty, ಅಂದರೆ Director, Principal and Teaching Faculty ಬಹಳ ಉತ್ತಮವಾಗಿ ಕೆಲಸ ಮಾಡಿರುವುದರಿಂದ 100 ವಿದ್ಯಾರ್ಥಿಗಳಿಂದ 150 ವಿದ್ಯಾರ್ಥಿಗಳಿಗೆ ಹೆಚ್ಚು ಮಾಡಿಕೊಳ್ಳಲು ಅವಕಾಶ ಆಯಿತು. ಕೋವಿಡ್‌ನಂತಹ ಸಂದರ್ಭದಲ್ಲಿಯೂ ಸರ್ಕಾರಿ ವೈದ್ಯಕೀಯ ಕಾಲೇಜು ಚೆನ್ನಾಗಿ ಕೆಲಸ ಮಾಡುತ್ತಿದೆ. ಮಾನ್ಯ ಸಭಾಪತಿಯವರೇ, 2016–17ನೇ ಸಾಲಿನಲ್ಲಿ 150 ವಿದ್ಯಾರ್ಥಿಗಳಿಗೆ MCI ಅನುಮತಿ ಕೊಟ್ಟ ಸಂದರ್ಭದಲ್ಲಿ, ಮುಂದಿನ ಶೈಕ್ಷಣಿಕ ವಿದ್ಯಾಭ್ಯಾಸಕ್ಕೋಸ್ಕರ MD/MS ಪದವಿಯನ್ನು ಮಾಡಲು ಸ್ನಾತಕೋತ್ತರ ಪದವಿಗೆ ಕೂಡ ರಾಜ್ಯ ಸರ್ಕಾರ ಮತ್ತು ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯಗಳ ಶಿಫಾರಸ್ಸಿನ ಮೇರೆಗೆ MCI 3 ವರ್ಷದೊಳಗೆ infrastructure ಕೊಡಬೇಕು. ಪೂರ್ಣ ಪ್ರಮಾಣದ Teaching Faculty ನೇಮಕ ಮಾಡಬೇಕು ಎಂಬ ಷರತ್ತಿಗೊಳಪಟ್ಟು ಕೊಟ್ಟಿದೆ. ಮಂಡ್ಯ ವೈದ್ಯಕೀಯ ಕಾಲೇಜಿನಲ್ಲಿ 17 ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಅಂದರೆ MD/MS ಮಾಡಲು 2016–17ನೇ ಸಾಲಿನಿಂದ ಪ್ರವೇಶ ಪ್ರಾರಂಭವಾಗಿದೆ. ಆದರೆ ಈಗಾಗಲೇ 10 ವಿಭಾಗಗಳಿಗೆ MCI ಅನುಮತಿ ಕೊಟ್ಟಿದೆ ಮತ್ತು ರಾಜ್ಯ ಸರ್ಕಾರ ಹಾಗೂ ರಾಜೀವ್ ಗಾಂಧಿ ವಿಶ್ವವಿದ್ಯಾಲಯ full-fledged Teaching Faculty ಸೇರಿದಂತೆ ಎಲ್ಲವನ್ನು ಕೊಟ್ಟಿದೆ. ಆದರೆ ಇತ್ತೀಚೆಗೆ ಹೊಸದಾಗಿ ಪ್ರಾರಂಭಿಸಿರುವ ಸ್ನಾತಕೋತ್ತರದ 7 ವಿಭಾಗಗಳಿಗೆ ಸುಮಾರು 14 Faculty ಗಳು ಬೇಕು ಎಂದು.......... ಮಾನ್ಯ ಸಭಾಪತಿಯವರೇ, ವೈದ್ಯಕೀಯ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರು 2 ಹುದ್ದೆ, ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಸಹ ಪ್ರಾಧ್ಯಾಪಕರು 1 ಹುದ್ದೆ, ಅರಿವಳಿಕೆ ಶಾಸ್ತ್ರ ವಿಭಾಗದಲ್ಲಿ ಸಹ ಪ್ರಾಧ್ಯಾಪಕರು 1 ಮತ್ತು ಸಹಾಯಕ ಪ್ರಾಧ್ಯಾಪಕರು 1 ಹುದ್ದೆ, ಕೀಲು ಮತ್ತು ಮೂಳೆ ವಿಭಾಗದಲ್ಲಿ ಸಹ ಪ್ರಾಧ್ಯಾಪಕರು 1 ಹುದ್ದೆ ಮತ್ತು ಸಹಾಯಕ ಪ್ರಾಧ್ಯಾಪಕರು 2 ಹುದ್ದೆ, ರಕ್ತ ನಿಧಿ ವಿಭಾಗದಲ್ಲಿ ಸಹ ಪ್ರಾಧ್ಯಾಪಕರು 1 ಹುದ್ದೆ, ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗದಲ್ಲಿ ವೈದ್ಯಕೀಯ ಮಹಿಳಾಧಿಕಾರಿ 1 ಹುದ್ದೆ, ಕ್ಷಯ ಮತ್ತು ಎದೆ ರೋಗಗಳ ವಿಭಾಗದಲ್ಲಿ ಸಹ ಪ್ರಾಧ್ಯಾಪಕರು 1 ಹುದ್ದೆ ಸೇರಿದಂತೆ ಒಟ್ಟು 14 ಹುದ್ದೆಗಳ Teaching Faculty ಅನ್ನು ಕೊಡಬೇಕು. ಇದನ್ನು 7 ವಿಭಾಗಗಳ ಪರವಾಗಿ ಕೊಡಬೇಕು. ಎಲ್ಲಾ infrastructures ಕೊಟ್ಟಿದ್ದಾರೆ. ಈ ಕಾಲೇಜಿಗೆ ನಮ್ಮ Medical Education ಸಚಿವರು Governing Council ನ Chairman ಆಗಿದ್ದಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು ಅದರ ಕಾರ್ಯದರ್ಶಿಯಾಗಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ರಾಜೀವ್‌ಗಾಂಧಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯದ ಅನುಮತಿ ಮೇರೆಗೆ ಒಟ್ಟು ಬಹಳ ಉದಾರವಾಗಿ.......... ಸರ್ಕಾರಿ Medical ಕಾಲೇಜುಗಳಿಗೆ MCI ಈ ರೀತಿ ಅನುಮತಿ ಕೊಡುವುದು ಬಹಳ ಅಪರೂಪದ ಪ್ರಸಂಗವಾಗಿದೆ. ಯಾವುದೇ Private Medical College ಗಳಿಗೆ ಕೊಡುತ್ತಾರೆ. ಆದರೆ ಸರ್ಕಾರಿ Medical College ಗಳಿಗೆ ನಿಖರವಾಗಿ 3 ವರ್ಷಗಳ ಕಾಲಾವಕಾಶ ಕೊಟ್ಟು, Teaching Faculty ಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೊಟ್ಟು, PG Course ಕೊಟ್ಟಿರುವುದು ಬಹಳ ಅಪರೂಪದ ಸಂಗತಿ. ನಮ್ಮ ಮಂಡ್ಯ ವೈದ್ಯಕೀಯ ಸಂಸ್ಥೆಗೆ ಉದಾರವಾಗಿ, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹಾಗೂ PG Course ನ ವಿದ್ಯಾರ್ಥಿಗಳ ಅನುಕೂಲತೆಗಾಗಿ ಈ Course ಅನ್ನು ಕೊಟ್ಟಿದೆ. ಈಗಾಗಲೇ ವಿದ್ಯಾರ್ಥಿಗಳೆಲ್ಲರೂ ಪದವಿ ಮುಗಿಸಿಕೊಳ್ಳುತ್ತಿದ್ದಾರೆ. MD/MS Courses ಮುಕ್ತಾಯದ ಹಂತದಲ್ಲಿದೆ. ಆದರೆ ಈ ಸಂದರ್ಭದಲ್ಲಿ ದಿನಾಂಕ 1-7-2020ರಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು ವೈದ್ಯಕೀಯ ಕಾಲೇಜಿನ ನಿರ್ದೇಶಕರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದು ಎಷ್ಟು ಕೆಟ್ಟದಾಗಿದೆ ಎಂದರೆ, ಅದರಲ್ಲಿ ' ವಿಷಯಃ- ಸಹ ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕರ ಹಾಗೂ Lady Medical Officer ಗಳ ಹುದ್ದೆಗಳನ್ನು ಸೃಜಿಸುವ ಬಗ್ಗೆ ಕುರಿತು' ಎಂದಿದೆ. ಮುಂದುವರೆದು, ತಮ್ಮ ಪತ್ರದ ಸಂಖ್ಯೆ ಎಂದು ದಿನಾಂಕವನ್ನು ನಮೂದಿಸಿದ್ದಾರೆ. ದಿನಾಂಕ 15-06-2019 ರಲ್ಲಿ Medical College ನಿರ್ದೇಶಕರಿಂದ ಪತ್ರ ಬಂದಿದೆ. ಅದಕ್ಕೆ ಒಂದು ಪತ್ರವನ್ನು ದಿನಾಂಕ 1-7-2020 ರಲ್ಲಿ ಬರೆದಿದ್ದಾರೆ. ಅದರಲ್ಲಿ " ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಪ್ರಸಕ್ತ ಇರುವ ಆರ್ಥಿಕ ನಿಬಂಧನೆಗಳ ಹಿನ್ನೆಲೆಯಲ್ಲಿ ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಹುದ್ದೆಗಳನ್ನು ಹೊಸದಾಗಿ ಸೃಜಿಸುವ ಪ್ರಸ್ತಾವನೆಯನ್ನು ಒಪ್ಪಲು ಬರುವುದಿಲ್ಲವೆಂದು ತಿಳಿಸುತ್ತಾ, ಸ್ನಾತಕೋತ್ತರ Course ಗಳನ್ನು ಪ್ರಾರಂಭಿಸುವುದನ್ನು ಕೈಬಿಡುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ' ಎಂದು ಬರೆದಿದ್ದಾರೆ. ಮಾನ್ಯ ಸಭಾಪತಿಯವರೇ, ಮೂರು ವರ್ಷಗಳ ಹಿಂದೆ ಇದೇ ವೈದ್ಯಕೀಯ ಸಚಿವರು ಹಾಗೂ ಕಾರ್ಯದರ್ಶಿಯವರು MCI ಗೆ ಇಲ್ಲಿ PG Course ಗಳನ್ನು ಪ್ರಾರಂಭ ಮಾಡಲು ರಾಜೀವ್‌ಗಾಂಧಿ ವಿಶ್ವವಿದ್ಯಾಲಯ ಅನುಮತಿ ಕೊಟ್ಟಿದೆ, ಆದ್ದರಿಂದ ನೀವು ಕೊಡಬೇಕು ಎಂದು ಇವರು ಕೊಟ್ಟ guarantee ಪತ್ರದ ಮೇಲೆ ಇವತ್ತು MCI, PG Course ಪ್ರಾರಂಭ ಮಾಡಲು ಅನುಮತಿ ಕೊಟ್ಟಿದೆ. ಈಗಾಗಲೇ ಅಲ್ಲಿನ ಒಟ್ಟು 85 ವಿದ್ಯಾರ್ಥಿಗಳು PG Course ಅನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಗಿಸುತ್ತಿದ್ದಾರೆ. ಈ 85 ವಿದ್ಯಾರ್ಥಿಗಳು Government Medical College ನಲ್ಲಿ merit students, ಬಡವರ ಮಕ್ಕಳಾಗಿದ್ದು, ಇವರೆಲ್ಲರೂ entrance ಪರೀಕ್ಷೆ ಮೂಲಕ MD/MS Courses ಮಾಡಲು ಬಂದಿದ್ದಾರೆ. ದೇಶದ ನಾನಾ ಭಾಗಗಳಿಂದ ಇವರುಗಳು ಬಂದಿದ್ದು, ಈಗಾಗಲೇ ಛಿಂಣಾಢಿಜ ಅನ್ನು ಮುಗಿಸುತ್ತಿದ್ದಾರೆ. ಇವರಿಗೆ ಈಗ ಅಂದರೆ ದಿನಾಂಕ 1-7-2020 ರಲ್ಲಿ ಪ್ರವೇಶಾವಕಾಶ ಕೊಡಬೇಡಿ ಎಂದು ಕಾರ್ಯದರ್ಶಿಯವರು ಪತ್ರ ಬರೆಯುತ್ತಾರೆಂದರೆ, ಅಲ್ಲಿನ ಸಮಸ್ಯೆ ಕಾರ್ಯದರ್ಶಿಯವರಿಗೆ ಅರ್ಥವಾಗಿದೆಯೇ? ಇಂತಹವರಿಂದ ಸರ್ಕಾರಿ Medical College ಗಳ ಅಸ್ಥಿತ್ವ ಉಳಿಯುತ್ತದೆಯೇ? ಇಷ್ಟೆಲ್ಲಾ ಶ್ರಮ ವಹಿಸಿ ಅಲ್ಲಿನ ನಿರ್ದೇಶಕರು, ಪ್ರಾಂಶುಪಾಲರು, Teaching Faculty ಸೇರಿದಂತೆ ಎಲ್ಲರೂ PG Course ಪ್ರಾರಂಭ ಮಾಡಬೇಕೆಂದು ಬಹಳ ಕಳಕಳಿ ಇಟ್ಟು ಕೆಲಸ ಮಾಡಿದ್ದಾರೆ. ಕೇವಲ 14 post ಕೊಡಲು PG Course ಗಳಿಗೆ ಪ್ರವೇಶಾತಿ ಮಾಡಬೇಡಿ ಎಂದು ಹೇಳುತ್ತಾರೆ. PG Course ಮುಗಿಸಿದ್ದಾರೆ. ಈಗ MCI ಯಾವ ಕ್ಷಣದಲ್ಲಾದರೂ ಬರುತ್ತದೆ. ಏಕೆಂದರೆ ಇಂತಹ ತನಿಖೆ ಮಾಡಲು MCI ಪತ್ರ ಬರೆದು, ದಿನಾಂಕವನ್ನು ಜಿಥ ಮಾಡಿ ಬರುವುದಿಲ್ಲ. ಅದು ಯಾವಾಗ ಬೇಕಾದರೂ ಬರುತ್ತದೆ. ಕೋವಿಡ್ ಇದ್ದದ್ದರಿಂದ ಅವರು ಬಂದಿಲ್ಲ. ಈಗಾಗಲೇ ಬರಬೇಕಾಗಿತ್ತು. ಅವರು ಬಂದು ಏನಾದರೂ ನೋಡಿದ್ದರೆ 85 ವಿದ್ಯಾರ್ಥಿಗಳಿಗೆ Degree ಪ್ರಧಾನ ಆದರೂ ಮಾನ್ಯತೆ ಇರುವುದಿಲ್ಲ. MCI Recognition ಇಲ್ಲವೆಂದರೆ ಮಾನ್ಯತೆ ಸಿಗುವುದಿಲ್ಲ. 3 ವರ್ಷಗಳೊಳಗೆ ಟಿಟಜುಣುಂಟ ಗಳನ್ನು fulfil ಮಾಡಬೇಕಾಗಿತ್ತು. ಅದರಲ್ಲೂ ಯಾವ ಮೂಲಭೂತ ಸೌಲಭ್ಯ ಕೊಟ್ಟರೂ ಈಚಿಛಿಣಟಣಥಿ ಇಲ್ಲವೆಂದರೆ ಒಅಋ ಅನುಮತಿ ಅಥವಾ ಮಾನ್ಯತೆ ಕೊಡುವುದಿಲ್ಲ. Faculty ಬಹಳ ಮುಖ್ಯವಾಗಿದೆ. ಇಲ್ಲಿನ 7 ವಿಭಾಗಗಳಲ್ಲಿ 14 ಹುದ್ದೆಗಳನ್ನು ಮಾತ್ರ ಸೃಜಿಸಲು ಕೇಳಿಕೊಂಡಿದ್ದಾರೆ. ಒಂದು ವರ್ಷದಿಂದ ನಿರ್ದೇಶಕರು, ಪ್ರಾಂಶುಪಾಲರು ಅನೇಕ ಪತ್ರಗಳನ್ನು ಬರೆದಿದ್ದಾರೆ. ದಯಮಾಡಿ ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳುತ್ತೇನೆ. ಈ 14 Faculty ಗಳಿಗೆ ಕೂಡಲೇ ಮಂಜೂರಾತಿ ಕೊಡದಿದ್ದರೆ 85 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ ಮತ್ತು ಅವರ Degree ಗೆ ಮಾನ್ಯತೆ ಇರುವುದಿಲ್ಲ. MCI ನಿಂದ Recognition ಇರುವುದಿಲ್ಲ. ಆದ್ದರಿಂದ ದಯಮಾಡಿ ತಕ್ಷಣ ಇದನ್ನು ದಯವಿಟ್ಟು 14 ಹುದ್ದೆಗಳ ಮಂಜೂರಾತಿಗೆ ಆರ್ಥಿಕ ಇಲಾಖೆಯಿಂದ ಮಂಜೂರಾತಿ ಕೊಡಿಸಲೇಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ **ಅಪ್ಪಾಜಿಗೌಡಃ–** ಮಾನ್ಯ ಸಭಾಪತಿಯವರೇ, ನಾನು ಮಂಡ್ಯ ಜಿಲ್ಲೆಯನ್ನು ಪ್ರತಿನಿಧಿಸುವ..........

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)ಃ–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರ ನಿಯಮ 330ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿ ಲಗತ್ತಿಸಿದೆ)

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(940) 26.9.2020 9.20 ಪಿಕೆ:ಎಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):**-ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಗಂಭೀರವಾದ ವಿಷಯಗಳನ್ನು ಉಲ್ಲೇಖ ಮಾಡಿರುವುದರಿಂದ, 14 ಹುದ್ದೆಗಳನ್ನು ಸೃಜನೆ ಮಾಡಬೇಕಾದ ಅವಶ್ಯಕತೆಗಳು ತುರ್ತಾಗಿ ಆಗಬೇಕಿದೆ ಎಂದು ಸರ್ಕಾರಕ್ಕೆ ಮನವರಿಕೆ ಆದ ಹಿನ್ನೆಲೆಯಲ್ಲಿ, ಆದಷ್ಟು ಶೀಘ್ರದಲ್ಲಿ ಈ ಹುದ್ದೆಗಳನ್ನು ಸೃಜನೆ ಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಕೊಟ್ಟ ಉತ್ತರದಿಂದ ನಮಗೆ ಸ್ವಲ್ಪವೂ ಸಮಾಧಾನವಾಗಲಿಲ್ಲ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದಿಂದ ಯಾವಾಗ ಬೇಕಾದರೂ ಇಲ್ಲಿಗೆ ಬಂದು ತಪಾಸಣೆ ಮಾಡಿ, ಇವರಿಗೆ ಡಿಗ್ರಿಯನ್ನು ಮಾನ್ಯತೆ ಸಿಗದಂತೆ ಮಾಡತಕ್ಕಂತಹ ಅವಕಾಶಗಳು ಉಂಟು. ಹುದ್ದೆಗಳನ್ನು ತುಂಬಲು ಆದಷ್ಟು ಶೀಘ್ರವಾಗಿ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರೆ ಅದು ಆಗದ ಕೆಲಸವಾಗಿದೆ. ಈ ಸಂದರ್ಭದಲ್ಲಿ ಜೆ.ಹೆಚ್.ಪಟೇಲರ ಒಂದು ಮಾತು ನೆನಪು ಬರುತ್ತದೆ. ಅವರು ಮುಖ್ಯಮಂತ್ರಿಗಳಾಗಿ ಚಿತ್ರದುರ್ಗ ಜಿಲ್ಲೆಗೆ ಹೋಗುತ್ತಾರೆ. ಅಲ್ಲಿಗೆ ಹೋದಾಗ ಒಂದು ಕೆಡಿಪಿ ಮೀಟಿಂಗ್ ಮಾಡಿದ ಹಾಗೆ ಮಾಡುತ್ತಾರೆ. ಅಲ್ಲಿ ವಾಣಿವಿಲಾಸ ಸಕ್ಕರೆ ಕಾರ್ಖಾನೆ ಸಂಪೂರ್ಣವಾಗಿ ನಿಂತು ಹೋಗಿರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**-ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವ ಕಥೆ, ವ್ಯಂಗ್ಯ ಇದರ ಯಾವ ಅವಶ್ಯಕತೆಯೂ ಇಲ್ಲ. ಅವಶ್ಯಕ ಹುದ್ದೆಗಳನ್ನು ಆದಷ್ಟು ಶೀಘ್ರದಲ್ಲಿ ಸೃಜಿಸಿ ತುಂಬುವ ಕೆಲಸ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:-** ಒಂದು ನಿಮಿಷ, ನಾನು ಮುಗಿಸುತ್ತೇನೆ. ಮಾನ್ಯ ಸಭಾಪತಿಯವರೇ, ಅಲ್ಲಿನ ಶಾಸಕರಾದ ಡಿ.ಮಂಜುನಾಥ್‌ರವರು ರೈತರ ಪರವಾಗಿ, ಮಾನ್ಯ ಮುಖ್ಯಮಂತ್ರಿಗಳೇ, ಈ ಕಾರ್ಖಾನೆ ಬಹಳ ಜನಪ್ರಿಯವಾಗಿತ್ತು, ರೈತರಿಗೆ ಅನುಕೂಲವಾಗಿತ್ತು, ಈಗ ಇದು ನಿಂತು ಹೋಗಿಬಿಟ್ಟಿದೆ. ಏನಾದರೂ ಮಾಡಿ ಕಾರ್ಖಾನೆಯನ್ನು ಪುನಃ ಪ್ರಾರಂಭ ಮಾಡಬೇಕು, ಈಗ ಇಲ್ಲಿನ ರೈತರು ಕಬ್ಬು ಬೆಳೆಯುವುದಕ್ಕೆ ಮುಂದೆ ಬರುತ್ತಿಲ್ಲ, ಅವರಿಗೆ ನಂಬಿಕೆ-ವಿಶ್ವಾಸ ಹೊರಟು ಹೋಗಿದೆ, ಅವರೆಲ್ಲರಲ್ಲಿ ನಂಬಿಕೆ ವಿಶ್ವಾಸವನ್ನು ಹುಟ್ಟಿಸಿ ಎಲ್ಲಾ ರೈತರಿಗೆ ಸರ್ಕಾರದಿಂದ ಸಾಲ ಕೊಡಬೇಕು ಮತ್ತು ಕಾರ್ಖಾನೆಗೂ ಸಾಲವನ್ನು ಕೊಟ್ಟು ಈ ಕಾರ್ಖಾನೆ ನಡೆಯುವಲ್ಲಿ ಸಹಾಯ ಮಾಡಬೇಕು ಎಂದು ಸಭೆಯಲ್ಲಿ ಮಂಡಿಸುತ್ತಾರೆ. ಸಭೆ ಮುಕ್ತಾಯವಾಗುವ ಘಟ್ಟಕ್ಕೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು, ಅಲ್ರೀ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಂಜುನಾಥ್‌ರವರೇ, ನೀವು ಲಾಳ ಇಟ್ಟುಕೊಂಡು ಕುದುರೆ ಕೇಳಿದರೆ ಸರ್ಕಾರ ಕೊಡುವುದಕ್ಕೆ ಆಗುತ್ತದಯೇ? ಕುದುರೆ ಇಟ್ಟುಕೊಂಡು ಲಾಳ ಕೇಳಿದರೆ ಕೊಡಬಹುದು. ಲಾಳ ಇಟ್ಟುಕೊಂಡು ಕುದುರೆ ಕೇಳುವುದು ಸರಿಯಲ್ಲ. ಏನೋ ಅಲ್ಪಸ್ವಲ್ಪ ಸಹಾಯ ಮಾಡಿ ಎಂದು ಕೇಳಬಹುದು. ಆದರೆ ಸಂಪೂರ್ಣ ಕಾರ್ಖಾನೆಯನ್ನೇ ಪ್ರಾರಂಭಿಸುವ ಬಗ್ಗೆ ಕೇಳುತ್ತಿದ್ದೀರಿ ಎನ್ನುವ ಮಾತನ್ನು ಹೇಳಿದರಂತೆ. ಮಾನ್ಯ ಸಭಾಪತಿಯವರೇ, ಇದೂ ಕೂಡ ಹಾಗೆಯೇ ಆಗಬಹುದೇ? ಕಾರ್ಯದರ್ಶಿಯವರು ಕೊಟ್ಟಿರುವ ಉತ್ತರವೂ ಹಾಗೆ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇದು ಕಾರ್ಯದರ್ಶಿಯವರ ಉತ್ತರವಲ್ಲ, ಸರ್ಕಾರದ ಉತ್ತರ. ಮಾನ್ಯ ಸಭಾಪತಿಯವರೇ, ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ 14 ಹುದ್ದೆಗಳನ್ನು ಸೃಜನೆ ಮಾಡುತ್ತೇವೆ, ಶೀಘ್ರವಾಗಿ ಬೋಧಕ ಹುದ್ದೆಗಳನ್ನು ನೇಮಕ ಮಾಡುತ್ತೇವೆ ಎಂದು ಹೇಳಿದ್ದೇವೆ. ಯಾವುದೋ ಕಥೆ ಹೇಳಿ ವ್ಯಂಗ್ಯ ಮಾಡುತ್ತೀರಾ? ನಿಮ್ಮ ವ್ಯಂಗ್ಯಕ್ಕೂ ಮಿತಿ ಬೇಡವೇ? ಮಾನ್ಯ ಸದಸ್ಯರು ಕೇಳಿದ ವಿಷಯಕ್ಕೆ ನೇರವಾಗಿ, ಅವರ ನಿರೀಕ್ಷೆಗೆತಕ್ಕಂತೆ ಸರ್ಕಾರ ಸ್ಪಂದನೆ ಮಾಡಿದೆ. ಹೀಗಿದ್ದರೂ ಏಕೆ ಇಂತಹ ಕಥೆಗಳನ್ನು ಹೇಳುತ್ತಿದ್ದೀರಿ? ವ್ಯಂಗ್ಯ ಮಾಡುವುದಕ್ಕೂ ಒಂದು ನಿಯಮ ಬೇಕು ಅಲ್ಲವೇ? 14 ಹುದ್ದೆಗಳನ್ನು ಸೃಜನೆ ಮಾಡುತ್ತೇವೆ, ಆದಷ್ಟು ಶೀಘ್ರವಾಗಿ ನೇಮಕ ಮಾಡುತ್ತೇವೆ. ಇದಕ್ಕಿಂತ ಇನ್ನೇನು ಉತ್ತರ ಹೇಳಬೇಕು?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಕೋವಿಡ್‌ನ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಅಲ್ಲಿನ ಫ್ಯಾಕಲ್ಟಿ, ನಿರ್ದೇಶಕರು ಮತ್ತು ಪ್ರಾಂಶುಪಾಲರು ಉತ್ತಮವಾಗಿ ಕೆಲಸ ಮಾಡಿದ್ದಾರೆ. 17 ಕೋರ್ಸುಗಳಿಗೆ ಪಿ.ಜಿ. ಕೋರ್ಸ್ ಬರಬೇಕು ಎಂದರೆ ಅಲ್ಲಿನ ಫ್ಯಾಕಲ್ಟಿಗಳು ಎಷ್ಟು ಆಸಕ್ತಿಯಿಂದ ಕೆಲಸ ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಈ ಕೋರ್ಸುಗಳಿಗೆ ಎಂಸಿಐ ನಿಂದ ಮಾನ್ಯತೆ ಸಿಗದೇ ಇದ್ದರೆ 80 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ. ಇದರ ಗಂಭೀರತೆಯನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಎಷ್ಟು ಸಮಯದ ಒಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುತ್ತದೆ ಎನ್ನುವುದನ್ನು ಸರ್ಕಾರ ಹೇಳಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, 84 ಮಂದಿ ಪಿ.ಜಿ.ಕೋರ್ಸ್ ಮಾಡುತ್ತಿದ್ದಾರೆ. ಎಂಸಿಐ ನವರು ಸರ್ಪ್ರೈಸ್ ಆಗಿ ತಪಾಸಣೆಗೆ ಬರುತ್ತಾರೆ. ಅವರು ಬಂದಾಗ ಈ 14 ಹುದ್ದೆಗಳು ಇಲ್ಲದೇ ಇದ್ದರೆ ಓದುತ್ತಿರುವ ಆ ವಿದ್ಯಾರ್ಥಿಗಳ ಲೈಫ್ ಹೋಗಿಬಿಡುತ್ತದೆ. ಮಾನ್ಯ ಸಭಾನಾಯಕರು, ಸರ್ಕಾರದ ಹಂತದಲ್ಲಿ ಪರಿಶೀಲಿಸುತ್ತೇವೆ ಎಂದು ಹೇಳಿದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆದಷ್ಟು ಶೀಘ್ರದಲ್ಲಿ ಹುದ್ದೆಗಳನ್ನು ಸೃಜನೆ ಮಾಡುತ್ತೇವೆ, ನೇಮಕ ಮಾಡುತ್ತೇವೆ. ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದು ನಿಜ. ಆದರೆ ಈ ಉತ್ತರವನ್ನು ಬದಲಿಸಿ, ವಿಸ್ತರಿಸಿ, ನಿಮಗೆ ಸಮಾಧಾನವಾಗಲಿ ಎಂದು, ಸರ್ಕಾರಕ್ಕೆ ಅಭಿನಂದನೆ ಹೇಳಲಿ ಎಂದು ಸ್ಪಷ್ಟತೆ ಕೊಟ್ಟೆ. ಹೀಗಿದ್ದರೂ ಉತ್ತರ ಸರಿಯಿಲ್ಲ ಎಂದು ಹೇಳುವುದು ಸರಿಯಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಹುದ್ದೆಗಳನ್ನು ತುಂಬುವುದಕ್ಕೆ ಆರ್ಥಿಕ ಇಲಾಖೆಯಿಂದ ಅನುಮತಿ ಸಿಗುವಂತಹ ವ್ಯವಸ್ಥೆ ಮಾಡಿಸುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಶೀಘ್ರವಾಗಿ ಮಾಡುತ್ತೇವೆ, ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ ಎಂದು ಹೇಳಿದ್ದೇನೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಟ್ಟಾಯಿತು, ಮಾನ್ಯ ಹೊರಟ್ಟಿಯವರೂ ಸಹ ಒಪ್ಪಿಕೊಂಡಿದ್ದಾರೆ. ಇನ್ನೂ ಇದರಲ್ಲಿ ಚರ್ಚೆ ಮಾಡುವುದು ಇದೆಯೇ?

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ನಾನು ಪ್ರದೇಶವನ್ನು ಪ್ರತಿನಿಧಿಸುವುದರಿಂದ ಕೆಲವು ವಿಷಯಗಳನ್ನು ಹೇಳಬೇಕಿದೆ. ಮಾನ್ಯ ಮರಿತಿಬ್ಬೇಗೌಡರು ಬಹಳ ಗಂಭೀರವಾದ ಸಮಸ್ಯೆಯನ್ನು ಎತ್ತಿದ್ದಾರೆ. 5 ತಿಂಗಳ ಹಿಂದೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮಂಡ್ಯ ಜಿಲ್ಲೆಗೆ ಬಂದಿದ್ದರು. ಆ ಸಮಯದಲ್ಲಿ ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ನಾರಾಯಣಗೌಡರು ಇದ್ದರು. ಆಗ ಈ ವೈದ್ಯಕೀಯ ಮಹಾವಿದ್ಯಾಲಯದ ಸಮಸ್ಯೆಯನ್ನು ಎಳೆಎಳೆಯಾಗಿ ಬಿಚ್ಚಿಡಲಾಯಿತು. ಆ ಸಮಯದಲ್ಲಿ ಅವರು, ನಾವು ಈ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡುತ್ತೇವೆ ಎನ್ನುವ ಆಶ್ವಾಸನೆ ಕೊಟ್ಟಿದ್ದರು. ಮಾನ್ಯ ಮರಿತಿಬ್ಬೇಗೌಡರು, ಸದನದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರು ಬರುತ್ತಾರೆ, ಈ ವಿಷಯ ಅವರ ಮುಂದೆಯೇ ಪ್ರಸ್ತಾಪವಾಗಬೇಕು, ಇಲ್ಲೇ ಉತ್ತರ ಸಿಗಬೇಕೆಂದು ಕಳೆದ 5 ದಿವಸಗಳಿಂದ ಕಾಯುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಕುರಿತು ಮಾತನಾಡಲು ಎದ್ದು ನಿಂತಾಗ ತಾವು ಅವರಿಗೆ ಕುಳಿತುಕೊಳ್ಳಲು ಹೇಳುತ್ತಿದ್ದಿರಿ. ಆಗೆಲ್ಲಾ ಅವರು ಕುಳಿತುಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ಇವತ್ತೂ ಕೂಡ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಬರಲಿಲ್ಲ. ಇವತ್ತು ಅವರ ಸದನಕ್ಕೆ ಬರುತ್ತಾರೆ ಎಂದು ನಾವು ಆಸೆ ಇಟ್ಟುಕೊಂಡಿದ್ದೆವು. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರ ರೂಲ್ಸ್ ಏನಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ, ಯಾರ್‍ಯಾರು ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಾರೋ ಅವರಿಗೂ ಕೂಡ ಎಂಸಿಐ ಎಷ್ಟು ಸ್ಟ್ರಿಕ್ಟ್ ಆಗಿರುತ್ತದೆ ಎಂದು ಗೊತ್ತಿರುತ್ತದೆ. ಅವರಿಗೆ ಯಾರ ಮುಲಾಜು ಇರುವುದಿಲ್ಲ. ಮೂಲಭೂತ ಸೌಲಭ್ಯ ಮತ್ತು ಫ್ಯಾಕಲ್ಟಿ ಇಲ್ಲದೇ ಇದ್ದರೆ ಅಲ್ಲೇನು ಮಾಡುವುದಿಲ್ಲ. ಮಾನ್ಯ ಸಭಾಪತಿಯವರೇ, ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಓದುವಂತಹ ವಿದ್ಯಾರ್ಥಿಗಳು ಯಾರು? ಎಲ್ಲಾ ಮೆರಿಟೋರಿಯಸ್ ವಿದ್ಯಾರ್ಥಿಗಳು ಬಡತನದ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳಾಗಿರುತ್ತಾರೆ. ಒಂದು ಮೆಡಿಕಲ್ ಕಾಲೇಜು ಪ್ರಾರಂಭವಾಗಿ, 85 ವಿದ್ಯಾರ್ಥಿಗಳು ಎಂ.ಎಸ್., ಎಂ.ಡಿ., ಓದುತ್ತಿದ್ದಾರೆ. ಯಾವುದೇ ಸರ್ಕಾರ ಇರಲಿ ಇಷ್ಟು ದಿವಸ ತಡ ಮಾಡಿರುವುದೇ ತಪ್ಪು. ಇಷ್ಟಾದರೂ, ನಾವು ಪರಿಶೀಲನೆ ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಮಾನ್ಯ ಸಭಾನಾಯಕರು ಪರಿಶೀಲನೆ ಮಾಡುತ್ತೇವೆ ಎನ್ನುವ ಉತ್ತರ ಕೊಟ್ಟಿದ್ದಾರೆ. ಅಲ್ಲಿ ಹೋದರೆ ಜನ ನಮಗೆ ಹೊಡೆಯುತ್ತಾರೆ.

**ಸಭಾಪತಿಯವರು**:- ಮಾನ್ಯ ಸಭಾನಾಯಕರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ.

**ಶ್ರೀ ಸುನೀಲ್ ವಲ್ಯಾಪುರ್**:- ತಪ್ಪು ಮಾಡಿದ್ದರೆ ಎಲ್ಲರೂ ಹೊಡೆಯುತ್ತಾರೆ. ಪದೇ ಪದೇ ಏಕೆ ಪ್ರಶ್ನೆ ಕೇಳುತ್ತಿದ್ದೀರಿ?

**(ಗೊಂದಲ)**

**ಶ್ರೀ ಬಸವರಾಜ್ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾನಾಯಕರು, ಶೀಘ್ರವೇ ಹುದ್ದೆ ತುಂಬಲು ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಮತ್ತು ಮಾನ್ಯ ಹೊರಟ್ಟಿಯವರಿಗೆ ಉತ್ತರ ಕೊಟ್ಟಿದ್ದೇನೆ. ಒಂದು ವಾರದ ಒಳಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಜೊತೆ ಮಾನ್ಯ ಮರಿತಿಬ್ಬೇಗೌಡರನ್ನು ಭೇಟಿ ಮಾಡಿಸುವ ಕೆಲಸ ಮಾಡುತ್ತೇವೆ. ಮುಖ್ಯ ಮಂತ್ರಿಗಳಿಂದ ಸಹಮತವನ್ನು ಪಡೆದು, ಆರ್ಥಿಕ ಇಲಾಖೆಯೊಡನೆ ಚರ್ಚೆ ಮಾಡಿ ಸಮಸ್ಯೆಗಳನ್ನು ಪರಿಹಾರ ಮಾಡುತ್ತೇವೆ. ಹುದ್ದೆಗಳ ಸೃಜನೆ ಮತ್ತು ನೇಮಕಾತಿಯನ್ನು ಆದಷ್ಟು ಶೀಘ್ರವಾಗಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಶ್ರೀ ಮರಿತಿಬ್ಬೇಗೌಡ:- ಧನ್ಯವಾದಗಳು.

**(ಮುಂದು)**

**(941) 09.30 26.09.2020 ಎಸ್‌ವಿ-ಎಕೆ**

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್ ಅವರೇ, ತಾವು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬಿಲ್ ಅನ್ನು ಪರ್ಯಾಲೋಚನೆಗಾಗಿ ತೆಗೆದುಕೊಳ್ಳಬೇಕಾಗಿ ವಿನಂತಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಿಲ್ ಅನ್ನು ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ವಿಧೇಯಕಗಳು ಅಂಗೀಕೃತಗೊಂಡಿದ್ದು, ಮೇಲ್ಮನೆಯಲ್ಲಿಯೂ ಅವುಗಳು ಅಂಗೀಕಾರವಾಗಬೇಕಿದೆ. ವಿರೋಧಪಕ್ಷವು ತನಗಿರುವ ಬಹುಮತದಿಂದಾಗಿ ವಿಧೇಯಕಗಳನ್ನು ಬೀಳಿಸುತ್ತಿದ್ದರೆ ಸರ್ಕಾರ ತನ್ನ ಬಿಲ್‌ಗಳನ್ನು ರಕ್ಷಣೆ ಮಾಡಿಕೊಳ್ಳಬೇಕಾಗಿದೆ. ಬಹುಮತ ಇದೆಯೆಂದು ಬಿಲ್‌ಗಳನ್ನು ಬೀಳಿಸುತ್ತಿದ್ದರೆ, ಸರ್ಕಾರ ನಡೆಸುವುದು ಹೇಗೆ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ನಮ್ಮ ಮುಂದಿರುವ ವಿಷಯ ಬಹಳ ಗಂಭೀರವಾದ ವಿಷಯ. ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಪ್ರಸ್ತಾಪಿಸಲು ನಿಯಮ 330ರ ಅಡಿಯಲ್ಲಿ ನಾನು ಈಗಾಗಲೇ ತಮ್ಮಲ್ಲಿ ಪ್ರಸ್ತಾಪಿಸಿದ್ದು, ಅದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಧನ್ಯವಾದಗಳು. ಈ ಹೊಸ ಶಿಕ್ಷಣ ನೀತಿ ಎಷ್ಟು ಆರೋಗ್ಯಕರವಾಗಿದೆ ಎಂಬುದನ್ನು ನಾನು ಈ ಸದನದ ಗಮನಕ್ಕೆ ತರಬಯಸುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಯಾವುದೇ ಕಾರಣಕ್ಕೂ ಆಗುವುದಿಲ್ಲ. ಸರ್ಕಾರ ನಡೆಸುವುದು ಹೇಗೆ? ಕೆಳಮನೆಯಲ್ಲಿ ಕಾಲಕಾಲಕ್ಕೆ, ಲೋಕಸಭೆಯಲ್ಲಿ, ರಾಜ್ಯಸಭೆಯಲ್ಲಿ ಕಾಲಕಾಲಕ್ಕೆ ಆಳುವವರಿಗೆ ಬಹುಮತ ಸಿಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ. ಇದುವರೆವಿಗೂ ಎಷ್ಟು ವಿಧೇಯಕಗಳು ಅಂಗೀಕೃತಗೊಂಡಿವೆ? ಇಂದು ಬೆಳಗಿನಿಂದ ಎಷ್ಟು ವಿಧೇಯಕಗಳು ಅಂಗೀಕೃತಗೊಂಡಿವೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಬಂದಿರುವ ಎಲ್ಲಾ ವಿಧೇಯಕಗಳು ಅಂಗೀಕೃತಗೊಂಡಿವೆ. ಒಂದು ಬಿಲ್ ಬಿದ್ದು ಹೋಗಿದೆ. ತಾವು ಏನೇ ಸಮಾಧಾನವನ್ನು ಹೇಳಿದರೂ ನಮಗಿರುವ ಆತಂಕವನ್ನು ತಾವು ಕೇಳಬೇಕಲ್ಲವೇ?

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಆತಂಕವೇನಿದೆ? ಬೆಳಗಿನಿಂದ ಇಷ್ಟರವರೆವಿಗೂ ಕುಳಿತವರಿಗೆ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಬಿಲ್ ಬೀಳುವಾಗ ನಮ್ಮ ರಕ್ಷಣೆಗೆ ಯಾರು ಬಂದರು? ಕೆಳಮನೆ ಮುಕ್ತಾಯಗೊಂಡ ನಂತರ ಇಲ್ಲಿ ವಿಧೇಯಕವೇನಾದರೂ ಬಿದ್ದು ಹೋದರೆ ಏನು ಮಾಡಬೇಕು?

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಏನು ಮಾಡುವುದಕ್ಕಾಗುತ್ತದೆ? It's a part of system.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ವಿರೋಧಪಕ್ಷದ ಕಡೆ ಕುಳಿತಿದ್ದಾಗ ನಮಗೂ ಬಹುಮತ ಇತ್ತು. ಆಗ ನಾವು ಈ ರೀತಿಯ ಕೆಲಸವನ್ನು ಮಾಡಿದ್ದೇವಾ? ನೀವು ಬಿಲ್ ಅನ್ನು ಕೈಗೆತ್ತಿಕೊಂಡು ಸರ್ಕಾರದ ರಕ್ಷಣೆಗೆ ಬರಬೇಕು. ಸುದೀರ್ಘ ಸರ್ಕಾರ ನಡೆಸಲು ಅನುವು ಮಾಡಿಕೊಡಬೇಕು.

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೀವು ಸದನವನ್ನು ಮುಂದೂಡುವವರೆವಿಗೂ ನಾವು ಇಲ್ಲಿಯೇ ಇರುತ್ತೇವೆ. ಈಗ ವಿಧೇಯಕಗಳನ್ನು ತೆಗೆದುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ರಾಜ್ಯಸಭೆಯಲ್ಲಿ ಸರ್ಕಾರಗಳಿಗೆ ಬಹುಮತ ಸಿಗುತ್ತದೆ ಎಂದು ಹೇಳಿದರು. ಈಗಾಗಲೇ ರಾಜ್ಯಸಭೆಯಲ್ಲಿ ನಿಮ್ಮ ಸರ್ಕಾರ...

**ಸಭಾಪತಿಯವರು:–** ಇದಕ್ಕೆ ಸಂಬಂಧಿಸಿದ ಸಚಿವರು ಯಾರು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶ ನೀಡದೆ ಬಿಲ್ ಅನ್ನು ಕೈಗೆತ್ತಿಕೊಳ್ಳಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವದಲ್ಲಿ, politics ನಲ್ಲಿ ಇದ್ದು ಸಹಜ. ಈ ಸದನ ಇರುವುದು ಸರ್ಕಾರವನ್ನು ಪ್ರಶ್ನೆ ಮಾಡಲಿಕ್ಕೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸರ್ಕಾರವನ್ನು ಪ್ರಶ್ನೆ ಮಾಡುವಂತೆ ಎಷ್ಟಲು ನಾವು ನಿಮ್ಮನ್ನು ಪ್ರಶ್ನೆ ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅದಕ್ಕೋಸ್ಕರ ನಿಯಮ 330ರ ಅಡಿಯಲ್ಲಿ ಹೊಸ ಶಿಕ್ಷಣ ನೀತಿಯ ಬಗ್ಗೆ ಮಾತನಾಡಲು ಅವಕಾಶ ಕೊಡಬೇಕು. ನೀವು ನಮ್ಮ ರಕ್ಷಣೆಗೆ ಬರಬೇಕು. ಮಾನ್ಯ ಸಭಾನಾಯಕರು ಈ ರೀತಿಯಾಗಿ ಮಾತನಾಡಿದರೆ ಆಗುವುದಿಲ್ಲ. ತಮ್ಮ ಅಪ್ಪಣೆಯ ಮೇರೆಗೆ ನಾನು ಮಾತನಾಡಲು ನಿಂತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿಧೇಯಕಗಳನ್ನು ಕೈಗೆತ್ತಿಕೊಳ್ಳಿ. ಎಷ್ಟೇ ಹೊತ್ತಾದರೂ ಪೀಠ ಆದೇಶವನ್ನು ನೀಡಬೇಕು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಿನ್ನೆ ಹೋಗಬೇಕೆಂದು ಗಡಿಬಿಡಿ ಮಾಡಿದಿರಿ. ಇಂದು ಈ ರೀತಿ ಮಾಡುತ್ತಿದ್ದೀರ. ನೀವು ಹೋದಂತೆಲ್ಲಾ ನಾವೂ ಹೋಗಬೇಕೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಎಲ್ಲಾ ರಾಜಕೀಯ ಪಕ್ಷಗಳು ಶಾಸಕಾಂಗ ಸಭೆಯನ್ನು ಮಾಡುತ್ತಾರೆ. ಕಾಂಗ್ರೆಸ್‌ನವರು ಶಾಸಕಾಂಗ ಪಕ್ಷದ ಸಭೆಯನ್ನು ಮಾಡಿದಾಗ ನಾವು ಬಿಟ್ಟಿರಲಿಲ್ಲವೇ? ನಾನು ತಮ್ಮಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ಈ ರೀತಿ ಮಾಡಿದರೆ ಸರ್ಕಾರ ನಡೆಸುವುದು ಕಷ್ಟವಾಗುತ್ತದೆ. ಬಿಲ್ ಅನ್ನು ಕೈಗೆತ್ತಿಕೊಳ್ಳಬೇಕೆಂದು ಕೋರುತ್ತೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:-** ಸಭೆಯನ್ನು ಐದು ನಿಮಿಷಗಳ ಕಾಲ ಮುಂದೂಡಲಾಗಿದೆ.

**(942) 26.09.2020 10.00 LL-VK**

**(ರಾತ್ರಿ 9 ಗಂಟೆ 33 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ರಾತ್ರಿ 10 ಗಂಟೆ 06 ನಿಮಿಷಕ್ಕೆ ಪ್ರಾರಂಭವಾಯಿತು)**

**(ಸಭಾಪತಿಯವರಾದ ಶ್ರೀ ಕೆ. ಪ್ರತಾಪಚಂದ್ರಶೆಟ್ಟಿಯವರು ಪೀಠದಲ್ಲಿ ಆಸೀನರಾಗಿದ್ದರು)**

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ರಾಷ್ಟ್ರದಲ್ಲಿ ಅಥವಾ ಈ ರಾಜ್ಯದಲ್ಲಿ ಒಂದು ಸಮಾಜಕ್ಕೆ ಇಷ್ಟು ದೊಡ್ಡ ಘಟನೆ ಆದ ಮೇಲೂ ಸಹ, ನಾವು ಆ ವಿಷಯದ ಬಗ್ಗೆ ಸದನದಲ್ಲಿ ಚರ್ಚೆ ಮಾಡಬೇಕೆಂದು ಹೇಳಿ, ನಮ್ಮ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲಾ ಸದಸ್ಯರು ತಮ್ಮ ಬಳಿ ಬಂದು ಕೇಳಿಕೊಂಡಿದ್ದೇವೆ. ಆ ವಿಷಯ ಅಜೆಂಡಾದಲ್ಲಿ ಸಹ ಬಂದಿದೆ. ಅದಕ್ಕಾಗಿ ನಾವು ಬೆಳಗ್ಗೆಯಿಂದ ಕಾಯುತ್ತಿದ್ದೇವೆ. ಆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಕೊಡುತ್ತೇವೆಂದು ತಾವು ನಮಗೆ ಆಶ್ವಾಸನೆ ನೀಡಿದ್ದೀರಿ. ಆ ಸಮಯದಲ್ಲಿ ತಮ್ಮ ಕಛೇರಿಯಲ್ಲಿ ತಮ್ಮ ಸಮ್ಮುಖದಲ್ಲಿ ಶ್ರೀ ಆರ್. ಅಶೋಕ್‌ರವರು ಹಾಗೂ ಶ್ರೀ ಎಸ್.ಟಿ. ಸೋಮಶೇಖರ್‌ರವರು ಇದ್ದರು. ಅಲ್ಲಿ ಮೊದಲನೆಯದಾಗಿ, ಡಿ.ಜೆ. ಹಳ್ಳಿ ಮತ್ತು ಕೆ.ಜಿ.ಹಳ್ಳಿ ಘಟನೆ ಮತ್ತು ಬಿ.ಡಿ.ಎ. ವಿಷಯಗಳ ಬಗ್ಗೆ ಚರ್ಚೆಗೆ ತೆಗೆದುಕೊಂಡು ನಂತರ ವಿಧೇಯಕಗಳ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳುತ್ತೇವೆಂದು ತೀರ್ಮಾನ ಆಗಿರುತ್ತದೆ. ಹಾಗಾಗಿ, ನಮಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೋರುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು, ಸಭಾನಾಯಕರು ಹಾಗೂ ಇತರ ಸದಸ್ಯರೆಲ್ಲರೂ ಕೂಡಿ consolation ಗಾಗಿ ತಮ್ಮ ಕಛೇರಿಗೆ ಬಂದಾಗ, ತಾವು ನಮಗೆ ಒಂದು ನಿರ್ಣಯ ಕೊಟ್ಟಿದ್ದೀರಿ. ಅದೇನೆಂದರೆ, "ಎರಡು ಬಿಲ್‌ಗಳನ್ನು ಹೊರತುಪಡಿಸಿ, ಉಳಿದೆಲ್ಲವನ್ನೂ ನಾವು ಚರ್ಚೆಗೆ ತೆಗೆದುಕೊಳ್ಳೋಣವೆಂದು" ಹೇಳಿರುವುದಕ್ಕೆ ನಾವು ಒಪ್ಪಿದ್ದೇವೆ. Additional Bills, except two Bills ಉಳಿದ ಬಿಲ್‌ಗಳನ್ನು ತೆಗೆದುಕೊಳ್ಳುವುದು. ನಂತರ, ನಿಯಮ 330ಯಲ್ಲಿ ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಘಟನೆ ಮತ್ತು ಬಿ.ಡಿ.ಎ. ಗೆ ಸಂಬಂಧಿಸಿದ 2 ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡ ನಂತರ, ಉಳಿದ 2 ವಿಧೇಯಕಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದರೆ, ಎ.ಪಿ.ಎಂ.ಸಿ. ಬಿಲ್ ಮತ್ತು Land Reforms Bill ಅನ್ನು ತೆಗೆದುಕೊಳ್ಳಬೇಕೆಂಬ ನಿರ್ಣಯ ಆಗಿದೆ. ಏಕೆಂದರೆ, as a Leader of Opposition, I must be true to my conscious. I cannot change my version. Once I have committed, that is my commitment and at your Chairmanship that decision has been taken.

**ಸಭಾಪತಿಯವರು:-** ಹಾಗಾದರೆ, ತಾವು ಚರ್ಚೆ ಪ್ರಾರಂಭ ಮಾಡಬಹುದು.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಶಿಕ್ಷಣ ನೀತಿ ವಿಷಯವನ್ನು ನಾವು withdraw ಮಾಡಿದ್ದೇವೆ.

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಮ್ಮ ಬಳಿ ನಾವೆಲ್ಲರೂ ಕುಳಿತು ಮಾತನಾಡಿದಾಗ...

**ಸಭಾಪತಿಯವರು:-** ತಮ್ಮ ಮಾತಿಗೆ ಆಯಿತು ಎಂದು ಹೇಳಿ, ಚರ್ಚೆ ಪ್ರಾರಂಭ ಮಾಡಿ ಎಂದು ಹೇಳಿದ್ದೇನಲ್ಲವೇ? ಬೇರೆ ಏನು ಹೇಳಬೇಕು?

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ನಾವು ಯಾವ ವಿಷಯದ ಬಗ್ಗೆ ಚರ್ಚೆ ಮಾಡಬೇಕು?

**ಸಭಾಪತಿಯವರು:-** ಯಾವುದು ಎಂದರೆ, ತಾವು ಹೇಳಿದ ವಿಷಯದ ಬಗ್ಗೆಯೇ ಚರ್ಚೆ ಪ್ರಾರಂಭ ಮಾಡಿ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಘಟನೆ ಮತ್ತು ಬಿ.ಡಿ.ಎ. ವಿಷಯದ ಬಗ್ಗೆ ಚರ್ಚೆ ಪ್ರಾರಂಭ ಮಾಡುತ್ತೇವೆ.

**ಸಭಾಪತಿಯವರು:-** ಆಯಿತು, ತೆಗೆದುಕೊಳ್ಳಿ. ಎರಡು ವಿಷಯಗಳನ್ನು ಒಟ್ಟಿಗೆ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ?

**ಶ್ರೀ ಎಂ. ನಾರಾಯಣಸ್ವಾಮಿ:-** ಹೌದು. ಒಂದೇ ವಿಷಯದ ಬಗ್ಗೆ ಚರ್ಚೆ ಆಗುವುದಿಲ್ಲ. ಎರಡು ವಿಷಯಗಳ ಬಗ್ಗೆಯೂ ನಾವು ಚರ್ಚೆ ಮಾಡಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಆ) ವಿಷಯ:-ಬೆಂಗಳೂರಿನ ಪುಲಿಕೇಶಿ ನಗರ ವಿಧಾನಸಭಾ ಕ್ಷೇತ್ರದ ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಮತ್ತು ಕಾವಲ್ ಬೈರಸಂದ್ರದಲ್ಲಿ ದಿನಾಂಕ 11-8-2020ರಂದು ನಡೆದ ಗೋಲಿಬಾರ್ ಬಗ್ಗೆ.**

\- - -

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, 25 ನೇ ತಾರೀಖಿನಂದು ನಿಯಮ 55 ರಡಿಯಲ್ಲಿ ನಿಲುವಳಿ ಸೂಚನೆಯನ್ನು ನಾನು ಮಂಡಿಸಿದ್ದೇನೆ. ನಿಲುವಳಿ ಸೂಚನೆಯಲ್ಲಿ ಬೆಂಗಳೂರಿನ ಪುಲಿಕೇಶಿ ನಗರ ವಿಧಾನಸಭಾ ಕ್ಷೇತ್ರದ ಡಿ.ಜೆ. ಹಳ್ಳಿ ಮತ್ತು ಕೆ.ಜಿ.ಹಳ್ಳಿ ಹಾಗೂ ಕಾವಲ್‌ಬೈರಸಂದ್ರದಲ್ಲಿ ಆಗಸ್ಟ್ 11, 2020ರಂದು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ post ಮಾಡಿದ್ದ ಹಿನ್ನೆಲೆಯಲ್ಲಿ ಆ ಪ್ರದೇಶದ ನೂರಾರು ಜನರು ಸೇರಿ ಪೊಲೀಸ್ ಠಾಣೆಯಲ್ಲಿ post ಮಾಡಿದ ವ್ಯಕ್ತಿಯ ವಿರುದ್ಧ ಪ್ರಕರಣವನ್ನು ದಾಖಲಿಸಿ, ಎಫ್.ಐ.ಆರ್. ಅನ್ನು ಮಾಡದೇ ವಿಳಂಬ ಮಾಡಿದ ಕಾರಣಕ್ಕೆ ಸ್ಥಳೀಯರ ಆಕ್ರೋಶ ಹೆಚ್ಚಾಗಿ ಗಲಭೆ ನಡೆದು, ಆ ಸಂದರ್ಭದಲ್ಲಿ ಪೊಲೀಸರು ನಡೆಸಿದ ಗೋಲಿಬಾರ್‌ನಿಂದ 4 ಜನರು ಮೃತಪಟ್ಟಿದ್ದು, ಈ ಸಂಬಂಧ ಪೊಲೀಸರು ಸರಿಯಾದ ದಾಖಲೆಗಳಿಲ್ಲದೇ ಅನೇಕ ಅಮಾಯಕರನ್ನು ಬಂಧಿಸಿರುವ ಹಾಗೂ ಈ ಸಂಬಂಧ ಸ್ಥಳೀಯ ಜನರ ಆಸ್ತಿ-ಪಾಸ್ತಿಗಳು ಹಾಳಾಗಿದ್ದು, ಕಾನೂನು ವ್ಯವಸ್ಥೆ ಮತ್ತು ಆಸ್ತಿಗೆ ರಕ್ಷಣೆಯನ್ನು ನೀಡುವ ನಿಟ್ಟಿನಲ್ಲಿ ಸರ್ಕಾರ ಯಾವುದೇ ಕ್ರಮವನ್ನು ವಹಿಸದೇ ಇರುವ ಕಾರಣದಿಂದ ಸಾರ್ವಜನಿಕರು ಭಯಭೀತರಾಗಿ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ.

**(ಮುಂದು)**

**(943)26.09.2020/10.10/ವೈಎಲ್-ವಿಕೆ**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಈ ವಿಷಯು ಸಾರ್ವಜನಿಕ ಮಹತ್ವದಾಗಿದೆ ಎಂದು ನಿಲುವಳಿ ಸೂಚನೆ ಮಂಡಿಸಿದಾಗ ತಾವು ಇದನ್ನು ನಿಲುವಳಿ ಸೂಚನೆ ಬದಲಾಗಿ ನಿಯಮ 330 ರಡಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಆ ಪ್ರಕಾರ ಚರ್ಚೆ ಮಾಡಲು ಅವಕಾಶ ಕಲ್ಪಿಸಿದ್ದು, ಅದಕ್ಕೆ ಅಭಿನಂದನೆ ಸಲ್ಲಿಸಿ ಸ್ವಲ್ಪ ವಿಚಾರಗಳನ್ನು ವ್ಯಕ್ತಪಡಿಸುತ್ತೇನೆ. ನಂತರ ಮಾನ್ಯ ಸದಸ್ಯರಾದ ಶ್ರೀ ನಸೀರ್ ಅಹ್ಮದ್‌ರವರು ಸುದೀರ್ಘವಾಗಿ ಮಾತನಾಡುತ್ತಾರೆ. ದಿನಾಂಕ: 11 ಆಗಸ್ಟ್ 2020 ರಂದು ಪುಲಕೇಶಿನಗರದಲ್ಲಿ ಮಾನ್ಯ ಶಾಸಕರಾದ ಶ್ರೀ ಅಖಂಡ ಶ್ರೀನಿವಾಸ ಮೂರ್ತಿಯವರ ಅಕ್ಕನ ಮಗ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿಯಾದ ಪೋಸ್ಟ್ ಹಾಕಿದ್ದಾನೆ ಎಂಬ ಕಾರಣದಿಂದ ಮುಸ್ಲಿಂ ಸಮುದಾಯದ ಕೆಲವು ಜನರು ಗುಂಪು ಕಟ್ಟಿಕೊಂಡು ರಾತ್ರಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

11.30 ಕ್ಕೆ ಕೆ.ಜಿ. ಹಳ್ಳಿ ಮತ್ತು ಡಿ.ಜೆ. ಹಳ್ಳಿ ಪೊಲೀಸ್ ಠಾಣೆಗೆ ದಿಢೀರನೆ ನುಗ್ಗಿ ದಾಂದಲೆ ನಡೆಸಿರುತ್ತಾರೆ. ಇದರಿಂದ ಉದ್ವಿಗ್ನ ಪರಿಸ್ಥಿತಿ ಉಂಟಾಗಿ ಹತೋಟಿಗೆ ತರಲು ಮೊಟ್ಟಮೊದಲು ಪೊಲೀಸರು ಅಶ್ರುವಾಯು ಪ್ರಯೋಗ ಮಾಡಿದರು. ನಂತರ ಗಾಳಿಯಲ್ಲಿ ಗುಂಡು ಹಾರಿಸಿದ್ದು ಅಂತಿಮವಾಗಿ ನಡೆದ ಗೋಲಿಬಾರ್‌ನಿಂದಾಗಿ 4 ಜನ ಯುವಕರು ಬಲಿಯಾಗಿದ್ದಾರೆ. ಇಂತಹ ಅನಾಹುತದಿಂದ ನೂರಾರು ಸಾರ್ವಜನಿಕರು ಗಾಯಗೊಂಡಿರುವುದಷ್ಟೇ ಅಲ್ಲದೇ ಪೊಲೀಸರು ಸಹ ಗಾಯಗೊಂಡಿದ್ದಾರೆ. ಈಶಾನ್ಯ ಭಾಗದ ಪೊಲೀಸರ ಕಾರು ಮತ್ತು ಜೀಪನ್ನು ಸಹ ಧ್ವಂಸಗೊಳಿಸಲಾಗಿದೆ. ಬೆಂಗಳೂರು ನಗರದ ಪೊಲೀಸ್ ಠಾಣೆ ಮೇಲೆ ದಾಳಿಯಾದರೂ ಸಹ ಸರಿಯಾದ ಕ್ರಮ ತೆಗೆದುಕೊಳ್ಳದೇ ಸರ್ಕಾರದ ಹಾಗೂ ಸಾರ್ವಜನಿಕರ ಆಸ್ತಿ–ಪಾಸ್ತಿಯನ್ನು ರಕ್ಷಿಸುವಲ್ಲಿ ಆದ ಅನಾಹುತ ಬಹಳ ಖಂಡನೀಯ. ಹಾಗೂ ಕಾನೂನು ಸುವ್ಯವಸ್ಥೆ ಕುಸಿದಿದೆ ಎನ್ನುವುದಕ್ಕೆ ಇದೊಂದು ಜೀವಂತ ಸ್ಪಷ್ಟವಾದ ಉದಾಹರಣೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟಿಸುತ್ತಿದ್ದ ವೇಳೆಯಲ್ಲಿ ಮತ್ತೊಂದು ಗುಂಪು ಅದೇ ಸಂದರ್ಭದಲ್ಲಿ ಶಾಸಕರ ಮನೆ ಮೇಲೆ ಕಲ್ಲು ತೂರಾಟ ನಡೆಸಿದ್ದಲ್ಲದೇ ಸಾರ್ವಜನಿಕರ ಆಸ್ತಿ–ಪಾಸ್ತಿಗೆ ಹಾನಿ ಉಂಟು ಮಾಡಿ, ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾದ್ದರಿಂದ ಪೊಲೀಸರು ಕಠಿಣವಾದ ಕ್ರಮವನ್ನು ಆ ಹಂತದಲ್ಲಿ ತೆಗೆದುಕೊಳ್ಳಲಿಲ್ಲ. ಮಾನ್ಯ ಸದಸ್ಯರಾದ ಶ್ರೀ ಅಖಂಡ ಶ್ರೀನಿವಾಸ ಮೂರ್ತಿಯವರ ಮನೆ ಮೇಲೆ ದಾಳಿ ನಡೆದಂಥ ಸಂದರ್ಭದಲ್ಲಿ ಪೊಲೀಸರು ಸಮಯಕ್ಕೆ ಸರಿಯಾಗಿ ಬಂದು ಅದನ್ನು prevent ಮಾಡಬಹುದಾಗಿತ್ತು. ಆದರೆ, ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ನನ್ನ ದೃಷ್ಟಿಯಲ್ಲಿ ಇದಕ್ಕೆ ಕಾರಣ ಗೃಹ ಇಲಾಖೆಯ ವೈಫಲ್ಯ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಾನು ಸಹ ನಮ್ಮ ಪಕ್ಷದ ಶಾಸಕರಾದ ಮಾನ್ಯ ಅಖಂಡ ಶ್ರೀನಿವಾಸ ಮೂರ್ತಿಯವರ ಮನೆಗೆ ಭೇಟಿ ನೀಡಿದ್ದೆ. ಅವರು ಅವರ ಮನೆ ಮೇಲೆ ಹಾನಿಯಾಗಿದ್ದೆಲ್ಲವನ್ನು ತೋರಿಸಿದರು. ಜೊತೆಗೆ ಅವರ ತಮ್ಮನ ಮನೆಯನ್ನು ಸಹ ಧ್ವಂಸ ಮಾಡಿದ್ದಾರೆ. ಪೊಲೀಸರ ಮನವಿಗೂ ಬೆಲೆ ಕೊಡದೇ ವ್ಯತಿರಿಕ್ತವಾಗಿದ್ದ ಗುಂಪು ಕಟ್ಟಡದ ಮೇಲೆ ಕಲ್ಲು ತೂರಾಟ ನಡೆಸಿ, ಸ್ಥಳದಲ್ಲಿ ಭಯ ಮತ್ತು ಆತಂಕಕಾರಿಯಾದಂಥ ವಾತಾವರಣವನ್ನು ಸೃಷ್ಟಿಸಿತ್ತು. ಇಷ್ಟೆಲ್ಲಾ ಘಟನೆಗಳು ಏಕಾಏಕಿಯಾಗಿ ಸಂಭವಿಸಲು ಸಾಧ್ಯವಿಲ್ಲ. ಇದೊಂದು ಪೂರ್ವಯೋಜಿತ ಸಂಚು ಎನ್ನುವುದಾದರೆ, ಪೊಲೀಸ್ ಇಲಾಖೆಯವರಿಗೆ ಮುಂದೆ ಆಗುವ ಘಟನೆಗಳ ಬಗ್ಗೆ Intelligence Department ಇರುತ್ತದೆ. ಆ Intelligence Department ಏನು ಮಾಡುತ್ತಿತ್ತು, ಅವರಿಗೆ ಸರಿಯಾದ ಮಾಹಿತಿ ಇದ್ದರೆ, ಅದರ ಬಗ್ಗೆ ಸರಿಯಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನಃಪೂರ್ವಕವಾಗಿ ಕರ್ತವ್ಯ ನಿರ್ವಹಿಸಿದರೆ ಈ ಘಟನೆ ನಡೆಯುತ್ತಿರಲಿಲ್ಲ. ಗುಪ್ತಚರ ಇಲಾಖೆಯ ಸ್ಪಷ್ಟ ವೈಫಲ್ಯವೇ ಇದಕ್ಕೆ ಕಾರಣ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಪೊಲೀಸ್ ಠಾಣೆ ಧ್ವಂಸವಾಗಿರುವುದಲ್ಲದೇ ಹಿರಿಯ ಪೊಲೀಸ್ ಅಧಿಕಾರಿಗಳ ಕಾರುಗಳಿಗೆ ಬೆಂಕಿ ಹಚ್ಚಿದ್ದಾರೆ ಎನ್ನುವುದಾದರೆ, ಪೊಲೀಸ್ ಇಲಾಖೆಯವರಿಂದ ಏನು ನಿರೀಕ್ಷಿಸಲು ಸಾಧ್ಯವಿದೆ? ಪೊಲೀಸ್ ಠಾಣೆಯೇ ಧ್ವಂಸವಾಗುವಂಥ ಸಂದರ್ಭದಲ್ಲಿ ಪೊಲೀಸ್ ಠಾಣೆಯನ್ನೇ ರಕ್ಷಣೆ ಮಾಡುವುದಕ್ಕಾಗಲಿಲ್ಲ.

ಮಾನ್ಯ ಶಾಸಕರಾದ ಶ್ರೀ ಅಖಂಡ ಶ್ರೀನಿವಾಸ ಮೂರ್ತಿರವರ ಮನೆಗೆ ಹೋದಂಥ ಸಂದರ್ಭದಲ್ಲಿ ಅವರೇ ಸ್ವತಃ ನನ್ನ ಹತ್ತಿರ 'ನಾವೇನಾದರೂ ಮನೆಯಲ್ಲಿಯೇ ಇದ್ದಿದ್ದರೆ ನಮ್ಮನ್ನು ಕೊಚ್ಚಿ ಕೊಲ್ಲುತ್ತಿದ್ದರು, ಅಂತಹ ತೀವ್ರವಾಗಿ ಘಟನೆ ನಡೆದಿತ್ತು' ಎನ್ನುವ ಮಾತನ್ನು ಹೇಳಿದರು. ಮನೆಯಲ್ಲಿದ್ದಂಥ ಸರಂಜಾಮುಗಳೆಲ್ಲಾ ಧ್ವಂಸವಾಗಿದೆ. ಮನೆಯ ಮೇಲ್ಛಾವಣಿ ಸಹ ಹಾರಿಹೋಗುವ ಪರಿಸ್ಥಿತಿಯಲ್ಲಿದ್ದು, ಮನೆಯೇ ಸುಟ್ಟ ಬೂದಿಯಾಗುವಂಥ ಪ್ರಸಂಗ ಇತ್ತು. ಜೊತೆಗೆ ಅವರನ್ನು ಜನರು ಭೇಟಿ ಮಾಡುವಂಥ ಕಛೇರಿಗೂ ಸಹ ಭೇಟಿ ನೀಡಿದ್ದು, ಅಲ್ಲಿಯೂ ಸಹ ಏನೂ ಉಳಿಸದೇ ಎಲ್ಲಾ ಪೀಠೋಪಕರಣಗಳನ್ನು ಹೊರಗೆ ತಂದು ಸುಟ್ಟ ಹಾಕಿದ್ದಾರೆ. ಪುಲಕೇಶಿನಗರದ ಮನೆಗೆ ನುಗ್ಗಿ ಧ್ವಂಸ ಮಾಡಿ ಬೆಂಕಿ ಹಚ್ಚಿರುವುದನ್ನು ಇಡೀ ದೇಶದ ಜನರು ದೃಶ್ಯ ಮಾಧ್ಯಮದಲ್ಲಿ ವೀಕ್ಷಣೆ ಮಾಡಿದ್ದಾರೆ. ಆ ಕ್ಷೇತ್ರದ ಪ್ರತಿನಿಧಿ ಮನೆಯನ್ನೇ ಧ್ವಂಸ ಮಾಡಿದ್ದು, ಸರ್ಕಾರ ಏನು ಮಾಡುತ್ತಿದೆ, ಏತಕ್ಕೆ ಕ್ರಮ ಕೈಗೊಳ್ಳಲಿಲ್ಲ, ಶಾಸಕರ ಮನೆಯೇ ಈ ಸ್ಥಿತಿಯಾದರೆ ಹೇಗೆ? ಚುನಾಯಿತ ಪ್ರತಿನಿಧಿಯಾಗಿ, ವಿಧಾನಸಭೆಯ ಸದಸ್ಯರಾಗಿ, ಜನಪ್ರತಿನಿಧಿಯ ಮನೆಗೆ ನುಗ್ಗಿ ಲೂಟಿ ಮಾಡಿ, ಬೆಂಕಿ ಹಚ್ಚಿದ್ದಾರೆ. ದೇವರ ಸುದೈವದಿಂದ ಅವರು ಮನೆಯಿಂದ ಹೊರಗೆ ಹೋಗಿದ್ದರು. ಇಲ್ಲದಿದ್ದರೆ ಅವರನ್ನೆಲ್ಲಾ ಕೊಚ್ಚಿ ಹಾಕುತ್ತಿದ್ದರು. ಇದರ ಮೇಲೆ ಮುಂಜಾಗ್ರತಾ ಕ್ರಮ ಜರುಗಿಸುವ ಬಗ್ಗೆ ಯೋಚನೆ ಮಾಡಬೇಕಾಗಿತ್ತು.

ಶಾಸಕರ ಮನೆ, ಕಛೇರಿ, ಅವರ ತಮ್ಮನ ಮನೆ ಮತ್ತು ಆಯ್ದ ಕೆಲವು ಮನೆಗಳನ್ನು ತೆಗೆದುಕೊಂಡು ಈ ರೀತಿ ಮಾಡಿದ್ದಾರೆ. ಸಾರ್ವಜನಿಕ ಬದುಕಿನಲ್ಲಿ ಇಂತಹ ಘಟನೆಯನ್ನು ನಾನು ನೋಡಿಯೇ ಇಲ್ಲ. ಮುಂಜಾಗ್ರತಾ ಕ್ರಮ ತೆಗೆದುಕೊಂಡು ಗುಪ್ತಚರ ಇಲಾಖೆಯವರು ಮಾಹಿತಿ ನೀಡಿ, ಕ್ರಮ ಜರುಗಿಸಬಹುದಾಗಿತ್ತಲ್ಲವೇ? ಕೆಲವು ಆಯ್ದ ಸಾರ್ವಜನಿಕರ ಮನೆಗೂ ನುಗ್ಗಿ ಗಲಾಟೆ ಮಾಡಿರುವುದಲ್ಲದೇ, ಕಲ್ಲು ತೂರಾಟ ಮಾಡಿದ್ದರಿಂದ ಸಾರ್ವಜನಿಕರು ಭಯ-ಭೀತರಾಗಿರುವುದನ್ನು ದೂರದರ್ಶನದಲ್ಲಿ ತೋರಿಸಿದ್ದಾರೆ. ನಾಗರೀಕರ ಮನಸ್ಸಿನಲ್ಲಿ ಎಂತಹ ಆತಂಕ ಉಂಟಾಗಿದೆ ಎಂಬುದನ್ನು ನೋಡಿಕೊಂಡು ಸರ್ಕಾರ ಉತ್ತರ ನೀಡಬೇಕು. ಈ ಘಟನೆ ಬಳಿಕ ಆಡಳಿತ ಪಕ್ಷ ಮತ್ತು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧ ಪಕ್ಷದ ಎಲ್ಲಾ ಹಿರಿಯ ನಾಗರೀಕರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಶಾಂತಿ, ಸೌಹಾರ್ದತೆ ಕಾಪಾಡಿಕೊಳ್ಳುವಂತೆ ಮನವಿ ಮಾಡಿಕೊಂಡಿದ್ದಾರೆ. ಆದರೆ, ಇವತ್ತಿಗೂ ಬೆಂಕಿ ಆರಿಲ್ಲ ಎಂದು ಹೇಳಬಹುದು. ನಾನು ಸಹ ಅಲ್ಲಿಗೆ ಭೇಟಿ ನೀಡಿ ಎಲ್ಲವನ್ನೂ ವೀಕ್ಷಣೆ ಮಾಡಿದ್ದೆನು. ಹಾಗಾದರೆ, ಈ ಗಲಭೆಯ ಸೂತ್ರಧಾರಿ ಯಾರು? ಶಿವಾಜಿನಗರ, ಗೋರಿಪಾಳ್ಯ ಇನ್ನಿತರ ಬೇರೆ-ಬೇರೆ ಪ್ರದೇಶಗಳಿಂದ ಕಿಡಿಗೇಡಿಗಳು ಬಂದು ಗಲಭೆ ಎಬ್ಬಿಸಿ, ಶಾಂತಿ ಕೆಡವಿದ್ದಾರೆ, ಸಾರ್ವಜನಿಕರ ಆಸ್ತಿ-ಪಾಸ್ತಿಯನ್ನು ನಷ್ಟ ಮಾಡಿದ್ದಾರೆ ಎಂಬ ವರದಿ ಇದೆ. ಸಾರ್ವಜನಿಕರ ಪ್ರಕಾರ ಅಲ್ಲಿನ ಸ್ಥಳೀಯರಿಗಿಂತ ಹೊರಗಿನಿಂದ ಬಂದವರೆ ಬೆಂಕಿ ಹಚ್ಚಿದ್ದರಿಂದ ಪೂರ್ವನಿಯೋಜಿತ ಕೃತ್ಯ ಎಂದು ಅನ್ನಿಸುತ್ತದೆ. ಕಾನೂನು ಸುವ್ಯವಸ್ಥೆ ಹದಗೆಡುವುದಕ್ಕೆ ಕಾರಣವೇನು?

ನಿಶ್ಚಿತವಾಗಿ ಹೇಳುವುದಾದರೆ, ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಕಾನೂನು-ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಮಂಗಳೂರಿನಲ್ಲಿ ಗಲಭೆ ನಡೆದಂತಹ ಸಂದರ್ಭದಲ್ಲಿ ನಾನು ಪ್ರತಿಪಕ್ಷ ನಾಯಕನಾಗಿದ್ದು, ಮಾಜಿ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್, ಮಾಜಿ ಗೃಹ ಸಚಿವರಾಗಿದ್ದ ಶ್ರೀ ಎಂ.ಬಿ.ಪಾಟೀಲ್, ಮಾಜಿ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿ ಎಲ್ಲರೂ ಸಹ ಗೋಲಿಬಾರ್ ಗಲಭೆಯಾಗಿ ಇಬ್ಬರೂ ಮರಣ ಹೊಂದಿದಂಥ ಸಂದರ್ಭದಲ್ಲಿ ನಾವುಗಳೆಲ್ಲಾ ಬೆಂಗಳೂರಿನಿಂದ ಮಂಗಳೂರಿಗೆ ವಿಮಾನದಲ್ಲಿ ಹೋಗಿದಂಥ ಸಂದರ್ಭದಲ್ಲಿ ನಮ್ಮನ್ನು prevent ಮಾಡಿದರು. ನಾನು ಒಬ್ಬ ಪ್ರತಿಪಕ್ಷದ ನಾಯಕನಾಗಿದ್ದು ಶಾಂತಿ-ಸುವ್ಯವಸ್ಥೆ ಕಾಪಾಡಿಕೊಳ್ಳಿ ಎಂದು ಜನರಲ್ಲಿ ಮನವಿ ಮಾಡಲು ಹೋದಂತಹ ಸಂದರ್ಭದಲ್ಲಿ ಅಲ್ಲಿನ ಐ.ಜಿ.ಪಿ., ಪೊಲೀಸ್‌ನವರು ಯಾರೂ ಸಹ ನಮ್ಮ ಬಿಡಲು ತಯಾರಿರಲಿಲ್ಲ. ನಾವು ಅಲ್ಲಿಗೆ ಹೋದದ್ದರಿಂದ law and order problem deteriorate ಆಗಿರಲಿಲ್ಲ. ಆದರೆ, ಅವರ ಸರ್ಕಾರದವರು ನಮ್ಮನ್ನು ವಿಮಾನ ನಿಲ್ದಾಣದಿಂದ ಹೊರಗೆ ಹೋಗಲು ಬಿಡಲಿಲ್ಲ. ನಮ್ಮನ್ನು, you are not allowed to enter the City ಎಂದು ಹೇಳಿ prevent ಮಾಡಿದರು. ನಂತರ ನಾವೂ ಮತ್ತೊಂದು ವಿಮಾನದಿಂದ ವಾಪಸ್ಸು ಬಂದಿದ್ದೆವು. ಒಬ್ಬ ಪ್ರತಿಪಕ್ಷದ ನಾಯಕನಾಗಿ ಹಾಗೂ ನಮ್ಮ ಹಿರಿಯ ಮುಖಂಡರು, ಮಾಜಿ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್, ಮಾಜಿ ಗೃಹ ಸಚಿವರಾಗಿದ್ದ ಶ್ರೀ ಎಂ.ಬಿ.ಪಾಟೀಲ್, ಮಾಜಿ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿಯವರೆಲ್ಲಾ ಹೋಗಿದ್ದಂಥ ಸಂದರ್ಭದಲ್ಲಿ ಅವರ ಸರ್ಕಾರದ ಪೊಲೀಸ್‌ನವರು ವಾಪಸ್ಸು ಹೋಗಿ ಅಲ್ಲಿಗೆ ಹೋಗಬೇಡಿ ಎಂದು ಹೇಳಿದರು. ನಾವೂ ಅಲ್ಲಿಗೆ ಹೋಗಿ ಶಾಂತಿ-ಸುವ್ಯವಸ್ಥೆ ಕಾಪಾಡಿಕೊಳ್ಳಿ ಈ ರೀತಿ ಕಾನೂನನ್ನು ಕೈಗೆತ್ತಿಕೊಳ್ಳಬೇಡಿ ಎಂದು appeal

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುತ್ತಿದ್ದೆವು. ಜೊತೆಗೆ ಯಾರಿಗೆ ತೊಂದರೆಯಾಗಿತ್ತು, ದುಃಖಿತಪ್ತರಾಗಿದ್ದರು ಅವರಿಗೆ ಸಾಂತ್ವನ ಹೇಳಿ, ಮುಂದೆ ಈ ರೀತಿ ಘಟನೆ ನಡೆಯದ ಹಾಗೆ ಶಾಂತಿ-ಸಂಯಮದಿಂದ ವರ್ತನೆ ಮಾಡಿ, you maintain the peace ಎಂದು appeal ಮಾಡಿಕೊಳ್ಳಲು ಹೋಗಿದ್ದೆವು. ನಾವೇನು ಅಲ್ಲಿಗೆ ಬೆಂಕಿ ಹಚ್ಚಲು ಹೋಗಿದ್ದೇವೆಯೇ? ಆದರೆ, ಅವತ್ತಿನ ದಿವಸ ಅವರ ಸರ್ಕಾರವು ನಮ್ಮನ್ನು prevent ಮಾಡಿದರು. ಹಾಗಾಗಿ ನನಗೆ ಅನ್ನಿಸುತ್ತಿರುವುದೇನೆಂದರೆ, ಪುಲಕೇಶಿನಗರದಲ್ಲಿ ಮಾನ್ಯ ಸದಸ್ಯರಾದ ಶ್ರೀ ಅಖಂಡ ಶ್ರೀನಿವಾಸ ಮೂರ್ತಿರವರ ಮನೆಗೆ ನುಗ್ಗಿ ಲೂಟಿ ಮಾಡಿ, ಧ್ವಂಸ ಮಾಡಿ, ಪೊಲೀಸ್ ಠಾಣೆಗಳನ್ನು ಹಾಳು ಮಾಡಿದಾಗ ಸರ್ಕಾರ preventive measures ತೆಗೆದುಕೊಳ್ಳಬಹುದಾಗಿತ್ತು. ಯಾರು ಸಮೀಪ ಬಂದಿರುವುದಿಲ್ಲ. ಇದು ಅವ್ಯಾಹತವಾಗಿ ನಡೆದಿದೆ. ಈ ಘಟನೆ ನಡೆದ ನಂತರ ಯಾರು culprit ಗಳಿದ್ದಾರೆ ಅವರ ಪರವಾಗಿ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. I will never argue and will never give shelter to the real culprits. ಯಾರು ಇದರಲ್ಲಿ ನಿಜವಾಗಿಯೂ ಭಾಗಿಯಾಗಿದ್ದಾರೆ ಅವರ ವಿರುದ್ಧ ಯಾವುದೇ ರೀತಿಯ ಕಾನೂನು ಕ್ರಮತೆಗೆದುಕೊಳ್ಳಿ, ಅದಕ್ಕೆ ನನ್ನ ಅಭ್ಯಂತರವೇನಿಲ್ಲ.

(ಮುಂದು)

**(944)26.09.2020 ರಾತ್ರಿ 10.20 ಟಿಸಿಹೆಚ್-ಜಿಆರ್**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಮಾನ್ಯ ಸಭಾಪತಿಯವ್ವರೇ, ಒಬ್ಬರು ಸಾಫ್ಟ್‌ವೇರ್ ಇಂಜಿನಿಯರ್ ರಾತ್ರಿ ತನ್ನ ಡ್ಯೂಟಿ ಮುಗಿಸಿಕೊಂಡು ಬಂದವರನ್ನು ಅರೆಸ್ಟ್ ಮಾಡಿದ್ದಾರೆ. ಅಂದಾಜು 73 ಎಫ್.ಐಆರ್.,ನ್ನು ದಾಖಲಿಸಿ 400 ಕ್ಕಿಂತಲೂ ಹೆಚ್ಚಿಗೆ ಜನರನ್ನು ಅರೆಸ್ಟ್ ಮಾಡಿದ್ದಾರೆ. ಪ್ರಸ್ತುತ ಅವರು ಜೈಲಿನಲ್ಲಿದ್ದಾರೆ. ತಪ್ಪಿತಸ್ಥರನ್ನು ಅರೆಸ್ಟ್ ಮಾಡಿ ಅವರಿಗೆ ಏನು ಶಿಕ್ಷೆ ಕೊಡುತ್ತೀರೊ ಕೊಡಿ. ಆದರೆ, ಅನೇಕ ಮುಗ್ಧ ಜನರನ್ನು ಈ ರೀತಿಯಾಗಿ ಅರೆಸ್ಟ್ ಮಾಡಿ, harassment ಮಾಡುವುದು ಎಷ್ಟು ಸರಿ. ಮೊದಲನೆಯದಾಗಿ, ಸರ್ಕಾರ ಇದರ ಬಗ್ಗೆ ಪ್ರಿವೆಂಟ್ ಮಾಡಬೇಕಾಗಿತ್ತು. ನನಗೇನು ಅನಿಸುತ್ತದೆಂದರೆ, ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದರಿಂದ, ಅದನ್ನು ತಡೆಗಟ್ಟಲು ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲರಾಗಿದೆ. ಅಷ್ಟೇ ಅಲ್ಲದೇ, ಈ ಒಂದು ಘಟನೆ ನಡೆಯದಂತೆ ನೋಡಿಕೊಳ್ಳುವುದು ಪೊಲೀಸ್‌ನವರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸವಾಗಿತ್ತು. ಅವೊತ್ತು ಅವರು ಅದನ್ನು ಮಾಡಿಲ್ಲ. ಆಮೇಲೆ ಈ ಘಟನೆ ಜರುಗಿದ ನಂತರ, ಮನಸೋ ಇಚ್ಛೆ ಯಾರನ್ನು ಬೇಕೋ ಅವರನ್ನು ಅರೆಸ್ಟ್ ಮಾಡಿ, ಕಾನೂನಿನಲ್ಲಿ ಯಾವ್ಯಾವ ಕಠಿಣವಾದಂತಹ ಐ.ಪಿ.ಸಿ., ಗಳಿವೆ, ಆ ಕಾನೂನಿನಡಿ ಅವರೆಲ್ಲರ ವಿರುದ್ಧ ಎಫ್.ಐ.ಆರ್., ದಾಖಲಿಸಿ, ಅವರೆಲ್ಲರನ್ನೂ ಜೈಲಿಗೆ ಕಳುಹಿಸಿದ್ದಾರೆ. ಅವರು ಬೇಕಾದರೆ ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಲಿ. ಅವರಿಗೆ ಕೋರ್ಟ್ ಬೇಕಾದರೆ ಶಿಕ್ಷೆ ವಿಧಿಸಲಿ. I don't mind. ಏಕೆಂದರೆ, ಲಾ ಅಂಡ್ ಆರ್ಡರ್ ಮೈನ್‌ಟೈನ್ ಮಾಡಬೇಕು. ರಾಜ್ಯದಲ್ಲಿ ಇಂತಹ ಘಟನೆಗಳು ಜರುಗಬಾರದು. ತಪ್ಪಿತಸ್ಥರಿಗೆ ಶಿಕ್ಷೆಯಾಗುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಆದರೆ, ಆ ಘಟನೆಗೆ ಏನೇನೂ ಸಂಬಂಧವಿಲ್ಲದ ಅನೇಕ ಮುಗ್ಧರನ್ನು ಕರೆಸಿ ಅವರನ್ನೂ ಅರೆಸ್ಟ್ ಮಾಡಿದ್ದಾರೆ. ಆ ಘಟನೆಗೆ ಸಂಬಂಧಪಡದವರನ್ನೂ ಕೂಡ ಅರೆಸ್ಟ್ ಮಾಡಿದ್ದಾರೆ. ಆಮೇಲೆ ತಳ್ಳುವ ಗಾಡಿಯಲ್ಲಿ ಇಡ್ಲಿ ಮಾರಾಟ ಮಾಡುವಂತಹ ಒಬ್ಬ ವ್ಯಕ್ತಿ ಬೆಳಗಿನಜಾವ 3 ಗಂಟೆಗೆ ಎದ್ದು ಇಡ್ಲಿ ಪ್ರಿಪರೇಷನ್ ಮಾಡಿ, ಬೆಳಗ್ಗೆ ಅದನ್ನು ಮಾರಾಟ ಮಾಡಬೇಕಾಗಿರುತ್ತದೆ. ಅಂತಹವರನ್ನು ಮತ್ತು ಆ ರಸ್ತೆಯಲ್ಲಿ ಅವರ ಕೈಗೆ ಯಾರ್ಯಾರು ಸಿಗುತ್ತಾರೊ, ಅವರನ್ನೆಲ್ಲಾ ಅರೆಸ್ಟ್ ಮಾಡಿ, ಜೈಲಿಗೆ ಕಳುಹಿಸಿದ್ದಾರೆ. ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಈ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಅಷ್ಟೇ ಅಲ್ಲದೇ, ಇವತ್ತಿನ ದಿವಸ ಮುಗ್ಧರನ್ನು ಈ ರೀತಿಯಾಗಿ ಅನಾವಶ್ಯಕವಾಗಿ ಅರೆಸ್ಟ್ ಮಾಡಿ, ಅನೇಕ ಕಾನೂನುಗಳಡಿ ಕಠಿಣವಾದಂತಹ ಕಾನೂನು ಕ್ರಮ ಕೈಗೊಂಡಿದ್ದಾರೆ. ನಿಜವಾದ ತಪ್ಪಿತಸ್ಥರ ಮೇಲೆ ಅವರು ಏನು ಬೇಕಾದರೂ ಕ್ರಮಕೈಗೊಳ್ಳಲಿ, ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಅದಕ್ಕೆ ಸಂಬಂಧಪಡದವನ್ನು, who are in no way concerned, ಪೂರ್ತಿಯಾಗಿ ಮುಗ್ಧ ಜನರಿಗೆ harassment ಆಗುತ್ತಿದೆ. ಈ ರೀತಿ ಮಾಡಿರುವುದು ಸರಿಯಲ್ಲ. ಆದ್ದರಿಂದ ಸರ್ಕಾರ ತನ್ನ ತಪ್ಪನ್ನು ಸರಿಪಡಿಸಿಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ಇದರ ಬಗ್ಗೆ ಬಹಳಷ್ಟು ಸವಿಸ್ತಾರವಾಗಿ ನಮ್ಮ ಸದಸ್ಯಮಿತ್ರರು ಮಾತನಾಡುತ್ತಾರೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಮ್ಮ ಉರ್ದುವಿನಲ್ಲಿ 'ಅಜೀಬ್ ಬುದ್ದಾಸ್ತಾನ್ ಹೇ ಕಹಾನ್ ಶುರು ಕಹಾ ಕತಂ' ಎಂದು ಒಂದು ಹಾಡಿದೆ. ಇವತ್ತಿನ ದಿವಸ ಡಿ.ಜೆ., ಹಳ್ಳಿ ಮತ್ತು ಕೆ.ಜೆ., ಹಳ್ಳಿಯ ವಿಷಯವು ಆ ರೀತಿ ಒಂದು ದಾಸ್ತಾನು ಆಗಿದೆ. ಆ ಘಟನೆ ಏತಕ್ಕಾಗಿ ಜರುಗಿತು ಎಂಬುದರ ಬಗ್ಗೆ ಯಾರೂ ತನಿಖೆ ಮಾಡುತ್ತಿಲ್ಲ. ಶ್ರೀ ನವೀನ್‌ಗೆ ಒಂದು caricature ಬಂದಿದೆ. ಆ caricature

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ನು ಶ್ರೀ ನವೀನ್‌ರವರು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಶ್ರೀ ನವೀನ್‌ರವರ ಹತ್ತಿರ ಆ ರೀತಿಯ ಅವಕಾಶಗಳಿಲ್ಲ. ಈ caricature ಎಲ್ಲಿಂದ ಬಂದಿರುತ್ತದೆಂದು ನಾನು ಪೊಲೀಸ್ ಆಯುಕ್ತರನ್ನು ಕೇಳಿದಾಗ, ಅವರು ಸೈಬರ್ ಕ್ರೈಂ ಪೊಲೀಸ್‌ನವರು ಈ ಸಂಬಂಧ ತನಿಖೆ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಈಗಾಗಲೇ ಈ ಘಟನೆ ನಡೆದು ಸುಮಾರು ಒಂದೂವರೆ ತಿಂಗಳಾಯಿತು. ಒಂದು ಪೋಸ್ಟರ್ ಯಾರ ಮೊಬೈಲ್‌ಗೆ ಬಂದಿರುತ್ತದೆಂದು ತನಿಖೆ ಮಾಡುವುದಕ್ಕೆ ಒಂದೂವರೆ ತಿಂಗಳು ಬೇಕೆ? ಈ caricature ಶ್ರೀ ನವೀನ್‌ಗೆ ಬಂದಿರತಕ್ಕಂಥದ್ದು. ಶ್ರೀ ನವೀನ್ ಎಂಬುವವರು ಬೇರೆಯವರಿಗೆ ಫಾರ್ವರ್ಡ್ ಮಾಡಿದ್ದಾರೆ. ಮೂಲಭೂತವಾಗಿ ಇದು ಎಲ್ಲಿಂದ ಬಂತು ಎಂದು ಇವತ್ತಿನವರೆಗೂ ತನಿಖೆಯಾಗಿಲ್ಲ. ಈಗಾಗಲೇ ನಮ್ಮ ಕೆಲವು ನಾಯಕರು ಏನು ಹೇಳಿದರೆಂದರೆ, ನಮ್ಮ ಮಾನ್ಯ ಸಚಿವರು ಆಗಿರಬಹುದು, ಪೊಲೀಸ್ ಅಧಿಕಾರಿಗಳು ಆಗಿರಬಹುದು, ಕೆಲವರು ಕೊಟ್ಟಿರತಕ್ಕಂಥ ವರದಿಗಳಾಗಿರಬಹುದು. It's a preplanned attack ಎಂದು ಹೇಳುತ್ತಾರೆ. ಈ ಘಟನೆ ಪೂರ್ವ ನಿಯೋಜಿತ ಯೋಜನೆ ಎಂದು ಹೇಳಿದ್ದಾರೆ. ಹಾಗಾದರೆ, ಪೊಲೀಸ್ ಇಲಾಖೆಯ ಇಂಟಲಿಜೆನ್ಸ್ ನವರು ಏನು ಮಾಡುತ್ತಿದ್ದರು. ಇಂತಹ ಘಟನೆಗಳಾಗುತ್ತದೆಂದು ಮೊದಲೇ ನಿಮ್ಮ ಹತ್ತಿರ ಮಾಹಿತಿಗಳಿದ್ದರೆ, ಕಾನೂನಿನ ಅಡಿಯಲ್ಲಿ preventive arrest ಮಾಡುವುದಕ್ಕೆ ಅವಕಾಶವಿದೆ. ಸಾಕಷ್ಟು ಪೊಲೀಸ್ ಫೋರ್ಸ್‌ಗಳನ್ನು ಆ ವಿಷಯದಲ್ಲಿ ನಿಯೋಜಿಸುವುದಕ್ಕೆ ಅವಕಾಶವಿದೆ. ಅಂತಹ ಸೂಕ್ಷ್ಮ ಪ್ರದೇಶಗಳ ಸ್ಥಳದಲ್ಲಿ ಫೈರ್ ಫೋರ್ಸ್ ವಾಹನಗಳನ್ನು ಹಾಕಲು ಅವಕಾಶವಿದೆ. ಒಂದು ವೇಳೆ, ಪೊಲೀಸ್ ಅಧಿಕಾರಿಗಳು ಯಾವುದೇ ರೀತಿಯ ಒಂದು ಪೂರ್ವಭಾವಿ ಸಭೆ ಮಾಡಿ, ಈ ರೀತಿ ನಮಗೆ ಇಂಟಲಿಜೆನ್ಸ್‌ನಿಂದ ರಿಪೋರ್ಟ್ ಬಂದಿದೆ. ಅಲ್ಲಿ ಈ ರೀತಿ ಗಲಾಟೆಗಳಾಗುವಂತಹ ಅವಕಾಶಗಳಿವೆ, ನಾವು ನಿಮ್ಮನ್ನು ಪ್ರಿವೆಂಟಿವ್ ಆಗಿ ಅರೆಸ್ಟ್ ಮಾಡುತ್ತಿದ್ದೇವೆಂದು ಮಾಡಬಹುದಿತ್ತು. ಸರ್ಕಾರ ಅದನ್ನೆಲ್ಲಾ ಏಕೆ ಮಾಡಲಿಲ್ಲ?

ನಾನು ಆ ವಿಷಯದ ಬಗ್ಗೆ ಹೇಳುವುದಾದರೆ, ಮೊದಲಿಗೆ ಐದು ಗಂಟೆ ನಲವತ್ತೇಳು ನಿಮಿಷಕ್ಕೆ ಪ್ರವಾದಿ ಮೊಹಮದ್‌ರವರ ಬಗ್ಗೆ ಈ ಒಂದು ಪೋಸ್ಟ್ ಫೇಸ್‌ಬುಕ್‌ನಲ್ಲಿ ಬರುತ್ತದೆ. ಅದು ಬಂದ ನಂತರ ಚರ್ಚೆಗಳೆಲ್ಲಾ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಒಂದು ಗುಂಪು 6.45 ಗಂಟೆಗೆ ಪೊಲೀಸ್ ಠಾಣೆಗೆ ಈ ಸಂಬಂಧ ದೂರು ಕೊಡಲು ಹೋಗುತ್ತಾರೆ. ಯಾರು ಆ ಪೋಸ್ಟ್‌ನ್ನು ಫೇಸ್‌ಬುಕ್‌ನಲ್ಲಿ ಹಾಕಿದ್ದಾರೆ, ಅವರ ವಿರುದ್ಧ ಎಫ್.ಐ.ಆರ್., ದಾಖಲಿಸಿ, ಕೂಡಲೇ ಅವರನ್ನು ಹಿಡಿದುಕೊಂಡು ಬನ್ನಿ ಎಂದು ಹೇಳಿ ಕಳುಹಿಸಿದ್ದರೆ, ಈ ಸಮಸ್ಯೆ ಅಲ್ಲೇ ಪೂರ್ತಿ ಕ್ಲೋಸ್ ಆಗುತ್ತಿತ್ತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಇಬ್ಬರೂ ಕೂಡ ನಾವು ಅದರ ಬಗ್ಗೆ ತನಿಖೆ ಮಾಡುತ್ತೇವೆ, ಆ ಪೋಸ್ಟ್ ಎಲ್ಲಿಂದ ಬಂದಿದೆ, ಅದು ಏತಕ್ಕಾಗಿರಬಹುದು, ಅದನ್ನು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ಕಳುಹಿಸಿಕೊಡಬೇಕಾಗುತ್ತದೆ ಎಂದು ಚರ್ಚೆ ನಡೆಯುತ್ತಿತ್ತು. ಅಷ್ಟರಲ್ಲಿ ಇನ್ನೊಂದು ಗುಂಪು ಸುಮಾರು ಏಳೂವರೆ ಗಂಟೆಗೆ ಈ ಮಧ್ಯದಲ್ಲಿ ಅಲ್ಲಿ ಕೆಲವು ಜವಾಬ್ದಾರಿ ಇರತಕ್ಕಂಥ ಇಮಾಮುಗಳು, ಮಸ್ಜಿದ್ ಸಮಿತಿಯವರೆಲ್ಲಾ ಸೇರಿ, ಪೊಲೀಸ್ ಠಾಣೆಗೆ ಬಂದು, ಪೊಲೀಸ್ ಇನ್ಸ್‌ಪೆಕ್ಟರ್‌ರವನ್ನು ಭೇಟಿ ಮಾಡಿ, ಸರ್ ನೀವು immediate ಆಗಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ. ಫೇಸ್‌ಬುಕ್‌ನಲ್ಲಿ ಆ ರೀತಿ ಪೋಸ್ಟ್ ಹಾಕಿದವನನ್ನು ಕೂಡಲೇ ಅರೆಸ್ಟ್ ಮಾಡಿಕೊಂಡು ಬನ್ನಿ ಎಂದು ಹೇಳುತ್ತಾರೆ. ಆಗಲೂ ಸಹ ಯಾವುದೇ ರೀತಿಯ ಕಂಪ್ಲೇಟ್ ರಿಜಿಸ್ಟರ್ ಆಗುವುದಿಲ್ಲ. ನನ್ನ ಹತ್ತಿರ ಈಗ ಸಂಬಂಧ ಎರಡು ದಾಖಲಾತಿಗಳಿವೆ. ಇದನ್ನು ನಾನು ಬರೆದಿರುವುದಿಲ್ಲ. ಈ ವಿಚಾರವಾಗಿ ಕೋರ್ಟ್‌ಗೆ ಕೊಟ್ಟಿರತಕ್ಕಂಥ ಎಫ್.ಐ.ಆರ್., ಇರುತ್ತದೆ. ಒಂದು ಕಡೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರಾದ ಶ್ರೀ ರಾಘವೇಂದ್ರರವರು ಏನು ಹೇಳುತ್ತಾರೆಂದರೆ, ನಮಗೆ ಪೊಲೀಸ್ ಅಧಿಕಾರಿಗಳು ಆದೇಶವನ್ನು ಕೊಟ್ಟಿರುವುದರಿಂದ, ನಾವು ಸುಮಾರು 8 ಗಂಟೆಗೆ ಶ್ರೀ ನವೀನ್‌ರವರ ಮನೆಗೆ ಅವರನ್ನು ಹಿಡಿದುಕೊಂಡು ಬರುವುದಕ್ಕೆ ಹೋಗಿರುತ್ತೇವೆ. ಅಲ್ಲಿ ಅವರು ನಮ್ಮನ್ನು ನೋಡಿ ಓಡಿ ಹೋಗಿದ್ದಾನೆ. ಶ್ರೀ ನವೀನ್‌ರವರು ನಮಗೆ ಸಿಕ್ಕಿಲ್ಲ. ನಾವು ಆ ಸ್ಥಳದಿಂದ ವಾಪಸ್ಸು ಬರುವಾಗ ಅಲ್ಲಿನ ಜನರೆಲ್ಲಾ ಸೇರಿಕೊಂಡು ನಮ್ಮ ಮೇಲೆ ಹತ್ಯೆ ಮಾಡುವುದಕ್ಕೆ ಬಂದರೆಂದು ಎಫ್.ಐ.ಆರ್ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದಾರೆ. ಇನ್ನೊಂದು ಕಡೆ ಪೊಲೀಸ್ ಇನ್ಸ್‌ಪೆಕ್ಟರ್ ರವರು ನಾನು ಕೂಡ ಸುಮಾರು 8 ಗಂಟೆಗೆ ಶ್ರೀ ನವೀನ್‌ರವರ ಮನೆಗೆ ಹೋಗಿದ್ದೆನು. ಶ್ರೀ ನವೀನ್ ಎಂಬುವರನ್ನು ಹಿಡಿದುಕೊಂಡು ಬರುತ್ತಿದ್ದೆನು. ಅಲ್ಲಿಂದ ಬರಬೇಕಾದರೆ ಜನ ನಮ್ಮನ್ನು ಅಟ್ಯಾಕ್ ಮಾಡಿದರೆಂದು ಹೇಳಿಕೆ ಕೊಟ್ಟಿದ್ದಾರೆ. ಈಗ ಇದರಲ್ಲಿ ಯಾವುದು ಸತ್ಯ? ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಆದಂತಹ ಶ್ರೀ ರಾಘವೇಂದ್ರರವರು ಹೇಳಿದ್ದ ಸತ್ಯನಾ? ಪೊಲೀಸ್ ಇನ್ಸ್‌ಪೆಕ್ಟರ್ ಆದಂತಹ ಶ್ರೀ ಕೃಷ್ಣಮೂರ್ತಿಯವರು ಹೇಳಿದ್ದು ಸತ್ಯನಾ? ಆ ಎರಡು ಎಫ್.ಐ.ಆರ್., ಪ್ರತಿಗಳನ್ನು ಅವರೇ ಬರೆದಿರತಕ್ಕಂಥ report ಆಗಿದೆ. ನನ್ನ ಹತ್ತಿರ ಆ report ಇದೆ. ಬೇಕಾದರೆ ನಾನು ಸಚಿವರ ಗಮನಕ್ಕೆ ಕಳುಹಿಸಿಕೊಡುತ್ತೇನೆ ಅವರು ನೋಡಬಹುದು. ಒಬ್ಬರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆದಂತಹ ಶ್ರೀ ರಾಘವೇಂದ್ರರವರು ಕೋರ್ಟ್‌ಗೆ ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್. ಇನ್ನೊಂದು ಪೊಲೀಸ್ ಇನ್ಸ್‌ಪೆಕ್ಟರ್ ಆದಂತಹ ಶ್ರೀ ಕೃಷ್ಣಮೂರ್ತಿಯವರು ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್. ಸುಮಾರು 8 ಗಂಟೆ ಸಮಯದಲ್ಲಿ ಆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ.,ರವರು ಇರುವುದಿಲ್ಲ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್‌ರವರು ಕೂಡ ಇರುವುದಿಲ್ಲ. ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯಾದಲ್ಲಿ ಆ ಠಾಣೆಯಲ್ಲಿ complaint ತೆಗೆದುಕೊಳ್ಳುವವರು ಯಾರು, ಅಲ್ಲಿಗೆ ಜನಗಳು ಬಂದರೆ, ಅವರನ್ನು ಕಂಟ್ರೋಲ್ ಮಾಡುವವರು ಯಾರು; ಇದರ ಬಗ್ಗೆ ತನಿಖೆಯಾಗಬೇಕೋ, ಬೇಡವೋ? ಅಲ್ಲಿ ಅವರಿಬ್ಬರೂ ಇಲ್ಲದಿದ್ದಾಗ ಜನ ಯಾರನ್ನು ಹೋಗಿ ಭೇಟಿ ಮಾಡುವುದು? ಅದರ ಜೊತೆಗೆ ಇದೇ ಇನ್ನೊಂದು ವರದಿಯಲ್ಲಿ ಏನು ಹೇಳುತ್ತಾರೆಂದರೆ, ಶ್ರೀ ಫಿರ್ದೋಶ್ ಪಾಷ ಎಂಬುವವರು ಮಸೀದಿಯಲ್ಲಿರತಕ್ಕಂಥ ಇಮಾಮು. ಅವರನ್ನು ಪೊಲೀಸ್ ಠಾಣೆಗೆ ಬೆಳಗ್ಗೆ 3.30 ಅಥವಾ 4 ಗಂಟೆಗೆ ಕರೆಸಿ, ಅವರಿಗೆ ನೀವು ಒಂದು complaint ಬರೆದುಕೊಡುವಂತೆ ಹೇಳಿ, ಅವರಿಂದ complaint ಬರೆಸಿಕೊಂಡು ಅವರ ಹತ್ತಿರ ಸಹಿಯನ್ನು ಪಡೆದುಕೊಳ್ಳುತ್ತಾರೆ. That is the first complaint. ಬೇರೆಯವರು ಬಂದು ಕೊಟ್ಟಂತಹ complaint ಅನ್ನು ತೆಗೆದುಕೊಂಡಿಲ್ಲ. ಶ್ರೀ ಫಿರ್ದೋಶ್ ಪಾಷರವರದ್ದು ಮೊದಲ complaint ಆಗಿದೆ. ಈಗಾಗಲೇ ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದಂತೆ, 13ನೇ ತಾರೀಖು ರಾತ್ರಿ ನಮ್ಮ ಕೆ.ಪಿ.ಸಿ.ಸಿ., ಅಧ್ಯಕ್ಷರು, ಮಾನ್ಯ ಹರಿಪ್ರಸಾದ್, ಶ್ರೀ ಕೃಷ್ಣಭೈರೇಗೌಡ ನಾವೆಲ್ಲಾ ಸೇರಿ ಒಂದು ಟೀಂ ಮಾಡಿಕೊಂಡು ಮಾನ್ಯ ಶಾಸಕರಾದ ಶ್ರೀ ಅಖಂಡ ಶ್ರೀನಿವಾಸ್‌ರವರ ಮನೆಗೆ ಹೋಗಿದ್ದೆವು. ಡಿ.ಜೆ.ಹಳ್ಳಿ.ಪೊಲೀಸ್ ಠಾಣೆಗೂ ಹೋಗಿದ್ದೆವು. ಕೆ.ಜಿ.ಹಳ್ಳಿ ಪೊಲೀಸ್ ಠಾಣೆಗೆ ಹೋಗಿ ಅವರನ್ನೆಲ್ಲಾ ಭೇಟಿ ಮಾಡಿದೆವು.

**(ಮುಂದು...)**

**(945)26-9-2020/10.30/ಎಂ.ಎಂ-ಜಿ.ಆರ್**

**ಶ್ರೀ ನಸೀರ್ ಅಹಮದ್ (ಮುಂದು):-**

ಅದೇ ರೀತಿ 15ನೇ ತಾರೀಖು ಶ್ರೀ ಪರಮೇಶ್ವರ್‌ರವರ ನೇತೃತ್ವದಲ್ಲಿ Fact Finding Team ಎಂದು ಅಲ್ಲಿಗೆ ಹೋಗಿ ಬರುತ್ತದೆ. ನಂತರ ಶ್ರೀ ಎಸ್.ಆರ್. ಪಾಟೀಲರವರೂ ಹೋಗಿ ಬರುತ್ತಾರೆ. ನಂತರ ಆ ಸಂದರ್ಭದಲ್ಲಿ ನಮ್ಮ ಸಿ.ಎಲ್.ಪಿ., ನಾಯಕರಾದ ಶ್ರೀ ಸಿದ್ದರಾಮಯ್ಯನವರು ಆಸ್ಪತ್ರೆಯಲ್ಲಿದ್ದರು, ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ಮರು ದಿನವೇ ಅವರ ಜೊತೆಗೆ ನಾವೆಲ್ಲಾ ಡಿ.ಜೆ., ಹಳ್ಳಿಗೆ ಹೋದಾಗ ಅಲ್ಲಿ ಡಿ.ಸಿ.ಪಿ., ಎ.ಸಿ.ಪಿ., ಮತ್ತು ಇನ್ಸ್‌ಪೆಕ್ಟರ್ ಕೂಡ ಇರುತ್ತಾರೆ, ನಾವೆಲ್ಲರೂ ಅವರೆಲ್ಲರ ಜೊತೆ ಕುಳಿತುಕೊಂಡು ಮಾತನಾಡುತ್ತೇವೆ. ಆಗ ಸಿ.ಎಲ್.ಪಿ., ನಾಯಕರಾದ ಶ್ರೀ ಸಿದ್ದರಾಮಯ್ಯನವರು ಅವರನ್ನು 'ನೀವು ನವೀನ್‌ನನ್ನು ಎಷ್ಟು ಗಂಟೆಗೆ ಹಿಡಿದಿರಿ' ಎಂದು ಪ್ರಶ್ನೆ ಕೇಳುತ್ತಾರೆ. ಆಗ ಇನ್ಸ್‌ಪೆಕ್ಟರ್‌ರವರು ನವೀನ್‌ನನ್ನು 9 ಗಂಟೆಗೆ ಹಿಡಿದೆವು, ಆದರೆ ಅವನನ್ನು ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರೆದುಕೊಂಡು ಬಂದಿಲ್ಲ, ನಾವು ಕರೆದುಕೊಂಡು ಬಂದರೆ ಎಲ್ಲಾದರೂ ಅವರು lynch ಮಾಡಬಹುದು ಎಂದು ಆತನನ್ನು ಪೊಲೀಸ್ ಸ್ಟೇಷನ್‌ಗೆ ಎಲ್ಲೂ ಕರೆದುಕೊಂಡು ಬಂದಿಲ್ಲ, ಎಲ್ಲೋ ಒಂದು ಕಡೆ ಅವನನ್ನು ಇಟ್ಟಿದ್ದೇವೆ ಎಂದು ಹೇಳಿದರು. ಶ್ರೀ ಸಿದ್ದರಾಮಯ್ಯನವರು ಎಫ್.ಐ.ಆರ್., ಅನ್ನು ಯಾವಾಗ ರಿಜಿಸ್ಟರ್ ಮಾಡಿದ್ದು ಎಂದು ಕೇಳಿದಾಗ official ಆಗಿ ಬೆಳಗಿನ ಜಾವ 3 ಗಂಟೆಗೆ ಎಫ್.ಐ.ಆರ್., ಅನ್ನು ಫೈಲ್ ಮಾಡಿದ್ದೇವೆ ಎಂದು ಉತ್ತರ ಕೊಡುತ್ತಾರೆ. ಇದರ ಹಿಂದೆ ಇರುವ ಕಾಣದ ಕೈ ಯಾವುದು ಎಂದು ಇವತ್ತು ತೀರ್ಮಾನವಾಗಬೇಕು. ಯಾರಿಂದ ಈ ಆದೇಶ ಬಂತು, ಏಕೆ ಎಫ್.ಐ.ಆರ್., ಅನ್ನು ರಿಜಿಸ್ಟರ್ ಮಾಡಲಿಲ್ಲ? ಕೇವಲ 2016ರಲ್ಲಿ ಇದೇ ರೀತಿ ಒಂದು ಪೋಸ್ಟ್ ಬರುತ್ತದೆ. ಅದೇ ಏರಿಯಾದಲ್ಲಿ ಒಬ್ಬ 'ರಾಹುಲ್' ಎಂಬುವವರು ಡಿ.ಸಿ.ಪಿ. ಯಾಗಿರುತ್ತಾರೆ. ಯಾವಾಗ ಆ ಪೋಸ್ಟ್ ಬರುತ್ತದೆ ತಕ್ಷಣವೇ ಒಂದು ಸಭೆ ಮಾಡುತ್ತಾರೆ. ಎಲ್ಲರನ್ನೂ ಕರೆಸಿ ನೋಡಪ್ಪಾ ಈ ರೀತಿ ಬಂದಿರುವುದು ನಿಜ. ಅವನು ಯಾರು ಪೋಸ್ಟ್ ಹಾಕಿರುವುದು ಅವನ ಹೆಸರು ಇಂತಹ ಕಡೆಯಿಂದ ಬಂದಿದೆ, ನಾವು ಈಗಾಗಲೇ ಅದರ ಬಗ್ಗೆ 'ಸೋನು ಸಿಂಗರ್' ಎಂಬುವವನ ಮೊಬೈಲ್‌ನಲ್ಲಿ ಬಂದಿರುವ 'ವಾಟ್ಸಾಪ್ ಮೆಸೇಜ್' ಬಗ್ಗೆ ನಾವು ತನಿಖೆ ಮಾಡುತ್ತಿದ್ದೇವೆ, ಅವನನ್ನು ನಾವು ಅರೆಸ್ಟ್ ಮಾಡುತ್ತೇವೆ ಎಂದು ಕೂಡಲೇ ಎಲ್ಲರಿಗೂ ಸಮಾಧಾನ ಮಾಡಿ ಅಂದು the matter is closed. ನೀವು ನೋಡಿರಬಹುದು, 5ನೇ ತಾರೀಖು 'ರಾಮಜನ್ಮ ಭೂಮಿ' ಯ ಒಂದು ದೊಡ್ಡ ಕಾರ್ಯಕ್ರಮವಾಯಿತು. ಸರ್ಕಾರದ ವತಿಯಿಂದ ಕೋರ್ಟ್ ಆದೇಶ ಇತ್ತು, ಆಗಲೂ ಸಹ ಸಾಕಷ್ಟು ಜನರು ಗಲಾಟೆಯಾಗಬಹುದು ಎಂದು ಯೋಚನೆ ಮಾಡಿರಬಹುದು, ಈ ರಾಷ್ಟ್ರದಲ್ಲಿರುವಂತಹ Supreme Court is supreme and whatever decision, they make, we abide by that, ಎಂದು ಹೇಳಿ ಪ್ರತಿಯೊಬ್ಬರೂ ಹೇಳುತ್ತೇವೆ. 'ಏನಪ್ಪಾ ಇಷ್ಟೊಂದು ದೊಡ್ಡ 20–30 ವರ್ಷದಿಂದ ನಡೆಯುತ್ತಿರುವಂತಹ ಒಂದು ಸಮಸ್ಯೆ ಇಷ್ಟು ಸುಲಭವಾಗಿ ಪರಹಾರವಾಯಿತಲ್ಲ' ಎಂದು ಎಲ್ಲೋ ಒಂದು ಕಡೆ ಇವರಿಗೆ ನಿರಾಶೆಯಾಯಿತು. ಇವತ್ತು ಈ ಅವಕಾಶವನ್ನು ಸೃಷ್ಟಿ ಮಾಡಿ; ನಾನು ಇನ್ನೊಂದನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. 'ಅರುಣ್ ಮೋಹನ್‌ರಾಜ್'ರವರನ್ನು ಹಿಂದೆ ಮೇಯರ್ ಆಗಿದ್ದಂತಹ ಸಂಪತ್ ರಾಜ್‌ರವರ ಪಿ.ಎ., ಎಂದು ಹೇಳುತ್ತಾರೆ. ಅವರು ಈಗ ಪುಲಕೇಶಿ ನಗರ ಕ್ಷೇತ್ರದ ಒಂದು ಕಾರ್ಪೊರೇಟರ್ ಆಗಿದ್ದಾರೆ, ಅವರ ಪಿ.ಎ., ಆಗಿದ್ದರು. ಅವರ Bail Application ಹೋದಾಗ ಸರ್ಕಾರದ ಅಡ್ವೊಕೇಟ್ ಒಬ್ಬರು ಸರ್ಕಾರದಿಂದ ಒಂದು ಹೇಳಿಕೆ ಮಾಡುತ್ತಾರೆ. 'The chief conspirator is Arun Mohanraj. We have

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

found lot of evidence about him. He is the chief conspirator, he is a Class-I Contractor. He has lot of connections with political leaders. He is the chief conspirator.' ಎಂದು ಸರ್ಕಾರವೇ statement ಮಾಡುತ್ತದೆ. When he is the chief conspirator, 425 ಜನರನ್ನು ಹಿಡಿದಿಟ್ಟಿದ್ದೀರಲ್ಲಾ, ಇವರು ಯಾರು? When you know, who is the chief conspirator, ಇವರ ಮೇಲೆಲ್ಲಾ UAPA (Unlawful Activities (Prevention) Act, 1967) ಅಡಿಯಲ್ಲಿ ಕೇಸ್ ಹಾಕಿದ್ದಕ್ಕೆ ಕಾರಣವೇನು? ಅದರ ಜೊತೆಯಲ್ಲಿ ಇವತ್ತಿನ ದಿವಸ ನಾವು ಫೇಸ್‌ಬುಕ್‌ನಲ್ಲಿ ಬಂದ ಪೋಸ್ಟ್ ಬಂದ ಮೇಲೆ ನವೀನ್ ಮೇಲೆ ಹಾಕಿರುವ ಕೇಸ್ ಯಾವುದು? ಅದರ ಬಗ್ಗೆ ಕೂಡ ಸ್ವಲ್ಪ ಗಮನ ಕೊಡಬೇಕು. ನಿಮಗೆ ಜ್ಞಾಪಕ ಇರಬಹುದು, ಎರಡು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಒಂದು P.F., issue ನಲ್ಲಿ ಸಾಕಷ್ಟು ಕಾರ್ಮಿಕರು ರಸ್ತೆಗಿಳಿಯುತ್ತಾರೆ, ಸಾವಿರಾರು ಜನರು procession ಮಾಡುತ್ತಾರೆ. ಆಗ law and order problem ಆಗುತ್ತದೆ. ನಮ್ಮ ಹೊಸೂರು ರಸ್ತೆಯಲ್ಲಿರುವ ಹೆಬ್ಬಗೋಡಿ ಪೊಲೀಸ್ ಸ್ಟೇಷನ್ ಮೇಲೆ ದಾಳಿ ಮಾಡಿ ಫೈರ್ ಮಾಡುತ್ತಾರೆ. ಅಲ್ಲಿದ್ದಂತಹ ಪೊಲೀಸ್ ವಾಹನಗಳೆಲ್ಲಾ ಒಂದಲ್ಲ ಎರಡಲ್ಲ ಹತ್ತಾರು ವಾಹನಗಳು ಜಖಂ ಆಗುತ್ತವೆ. ದಯವಿಟ್ಟು ಅದರಲ್ಲಿ ಎಷ್ಟು ಜನರನ್ನು ಬಂಧಿಸಿದ್ದಾರೆ ಎಂದು ಸರ್ಕಾರ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಎಷ್ಟು ಜನರನ್ನು ಬಂಧಿಸಿದ್ದೀರಾ, ಎಷ್ಟು ಜನರ ಮೇಲೆ ಕೇಸ್ ಹಾಕಿದ್ದೀರಾ ಎಂಬುದನ್ನು ದಯವಿಟ್ಟು ಈ ಸದನಕ್ಕೆ ತಿಳಿಸಬೇಕೆಂದು ನಾನು ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ನಿಮ್ಮ ಪಕ್ಕದಲ್ಲಿರುವ ಕಾರವಾರ ಜಿಲ್ಲೆಯಲ್ಲಿ ಕುಮಟಾ ಪೊಲೀಸ್ ಸ್ಟೇಷನ್ ನಲ್ಲಿಯೂ ಸಹ 'ಪರೇಶ್ ಮೆಸ್ತಾರ್' ಎಂಬುವವರೊಬ್ಬರ ಕೊಲೆಯಾಗುತ್ತದೆ. ಆ ಕೊಲೆಯಲ್ಲಿ ಸುಮಾರು ಜನರು ಅರೆಸ್ಟ್ ಆಗುತ್ತಾರೆ. 'ನಿಂಬಾಳ್ಕರ್'ರವರು ಈಗಲೂ ಸಹ ಎ.ಸಿ.ಪಿ., ಆಗಿ ಬೆಂಗಳೂರಿನಲ್ಲಿದ್ದಾರೆ. ಆಗ I.G., Western Range, ನಲ್ಲಿದ್ದರು. ಅವರು ಅಲ್ಲಿಗೆ ಹೋಗಬೇಕಾದರೆ, ಅವರ ಕಾರಿನ ಸಮೇತ ಹಿಡಿದು ಸುಟ್ಟು ಹಾಕುತ್ತಾರೆ. ಅದರಲ್ಲಿ ತಾವು ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ, ಎಷ್ಟು ಕೇಸ್ ಹಾಕಿದ್ದೀರಿ ಎಂಬುದನ್ನು ದಯವಿಟ್ಟು ಈ ಸದನಕ್ಕೆ ತಿಳಿಸಬೇಕು. ನಿಮ್ಮ ಜಿಲ್ಲೆಯಲ್ಲಿ 'ಸುಳ್ಯ' ಪೊಲೀಸ್ ಸ್ಟೇಷನ್ ನಲ್ಲಿ 18 ಜನ ಪೊಲೀಸರಿಗೆ serious injuries ಆಗುತ್ತದೆ. ಆ ಪೊಲೀಸ್ ಸ್ಟೇಷನ್‌ಗೆ ನುಗ್ಗಿ ಹೊಡೆದು, ಬಡಿದು 18 ಜನರು ಗಾಯಗೊಳ್ಳುತ್ತಾರೆ. ಆ ಘಟನೆಯಲ್ಲಿ ಎಷ್ಟು ಜನರಿಗೆ ತಾವು ಅರೆಸ್ಟ್ ಮಾಡಿದಿರಿ, ಯಾವ್ಯಾವ ಕೇಸ್ ಹಾಕಿದಿರಿ ಎಂದು ದಯವಿಟ್ಟು ತಿಳಿಸಬೇಕು. ನೀವು ದಯವಿಟ್ಟು ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘಟನೆಯಾಗಿರುವ ದೇವರಜೀವನಹಳ್ಳಿ ಆಗಿರಬಹುದು, ಕೆ.ಜಿ. ಹಳ್ಳಿ ಆಗಿರಬಹುದು ಅಥವಾ ಕಾವಲ್ ಭೈರಸಂದ್ರ ಆಗಿರಬಹುದು ಅದರ socio-economic status ಸಹ ತಿಳಿದುಕೊಳ್ಳಬೇಕು. ಈ ಸದನಕ್ಕೆ ಸಹ ಆ ಪ್ರದೇಶದ socio-economic condition ಗೊತ್ತಾಗಬೇಕು. ಅಲ್ಲಿ ವಾಸ ಮಾಡುವಂತಹ ಜನ below poverty line, middle class ಜನರಾಗಿದ್ದಾರೆ. ಅಲ್ಲಿರುವುದು 10–15 ಅಡಿ ಅಳತೆಯ ಮನೆಗಳು, ಒಂದೊಂದು ಮನೆಯಲ್ಲಿ 4–5 ಜನರು ವಾಸ ಮಾಡುವಂತಹ ಜಾಗ. ಕೇವಲ ಅವತ್ತಿನ ದಿವಸ ಹೋಗಿ ಸಂಪಾದನೆ ಮಾಡಿ ಬಂದರೆ ರಾತ್ರಿ ಅವರ ಮನೆಯಲ್ಲಿ ಊಟ ಮಾಡುವ ವ್ಯವಸ್ಥೆಯಾಗಿರುವಂತಹ ಜಾಗವದು. Hawkers ಇರಬಹುದು, footpath vendors ಇರಬಹುದು, labourers ಇರಬಹುದು, ಅಂತಹ ಜನ ವಾಸ ಮಾಡುವಂತಹ ಜಾಗವದು. Covid pandemic ನಲ್ಲಿ ಸುಮಾರು ಆರು ತಿಂಗಳಿನಿಂದ ಕೆಲಸ ಇಲ್ಲ, ಕಾರ್ಯ ಇಲ್ಲ, ಅಲ್ಲಿ ಮನೆಯಲ್ಲಿ ಕುಳಿತಿರುವಂತಹ ಜನರಿದ್ದಾರೆ. ಈಗ ಸುಮಾರು ಒಂದೆರಡು ತಿಂಗಳಿನಿಂದ ಕೆಲಸ ಪ್ರಾರಂಭವಾಯಿತು. ಇವತ್ತಿನ ದಿವಸ 420 ಜನರನ್ನು ತೆಗೆದುಕೊಂಡು ಹೋಗಿ UAPA case ಹಾಕಿದ್ದೀರಿ. UAPA ಅಡಿಯ case ನಲ್ಲಿ ಬೇಲ್ ಕೂಡ ಸಿಗುವುದಿಲ್ಲ. ಅವರ ಮನೆಯವರು ಏನು ಮಾಡಬೇಕು? ಒಂದೊಂದು ಮನೆಯಲ್ಲಿ ಮೂರು ಮೂರು ಜನರನ್ನು ಎತ್ತಿಕೊಂಡು ಹೋಗಿದ್ದೀರಿ, ಒಬ್ಬರೂ ಇಲ್ಲ. ಆ ಮನೆಯಲ್ಲಿ ವಾಸ ಮಾಡುವಂತಹ ಬೇರೆಯವರ ಮಕ್ಕಳನ್ನು ನೋಡಿಕೊಳ್ಳುವುದು ಯಾರು ಎಂದು ಒಂದು ದೊಡ್ಡ social problem ಆಗಿದೆ. ಇನ್ನೊಂದು ವಿಷಯವನ್ನು ತಮ್ಮಲ್ಲಿ ಹಂಚಿಕೊಳ್ಳಲು ಇಚ್ಛೆ ಪಡುತ್ತೇನೆ. ನನ್ನಲ್ಲಿ ಒಂದು ದಾಖಲೆ ಇದೆ. ಇದು ಒಬ್ಬ 'ಮಹಮ್ಮದ್ ಜುನೇದ್' ಎಂಬ ಬಿ.ಟೆಕ್., ಮಾಡಿರುವಂತಹ ಒಬ್ಬ ಇಂಜಿನಿಯರ್, ಅವನು ಕೆಲಸ ಮಾಡುವುದು ECPL ನಲ್ಲಿ. ಅದೊಂದು ಸಾಫ್ಟ್‌ವೇರ್ ಕಂಪನಿಯಾಗಿದೆ. ಅದರಲ್ಲಿ 'actual log in time on 11th August, 2020, is 11.30 p.m.,' and actual log out time on 12th August, 2020, is 2.30 a.m.,' ಅವನು ಹೋಗಿ ಬರುತ್ತಾನೆ, ಅವನನ್ನು ಸಹ ಹಿಡಿದುಕೊಂಡು ಹೋಗುತ್ತಾರೆ. ಅವನು ಎಲ್ಲಿದ್ದ ಎಂಬ ಬಗ್ಗೆ call history ಎಲ್ಲವನ್ನೂ ಕೊಟ್ಟಿದ್ದಾನೆ. How could he be taken in arrest? ಇಂತಹ ಸಾಕಷ್ಟು ಪ್ರಕರಣಗಳಿವೆ. ಇಡ್ಲಿ ದೋಸೆ ಮಾಡುವವನು ಬೆಳಗಿನ ಜಾವ 3 ಗಂಟೆಗೆ ಹೋಗಿ ಕೆಲಸ ಪ್ರಾರಂಭ ಮಾಡುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಹೋಟೆಲ್‌ಗೆ ಹೋಗಿ ಕೆಲಸ ಪ್ರಾರಂಭ ಮಾಡಬೇಕಾದರೆ, ಅವರ ಅಪ್ಪ ಮತ್ತು ಇಬ್ಬರು ಮಕ್ಕಳನ್ನು ಹಿಡಿದುಕೊಂಡು ಹೋದರು.

**(ಮುಂದು)**

**(946) 26-09-2020/ 10-40/ ಕೆಹೆಚ್-ಎಂಡಿ**

**ಶ್ರೀ ನಸೀರ್ ಅಹ್ಮದ್ (ಮುಂದು):-**

ಒಂದೇ ಏರಿಯಾ ಜಫ್ರುಲ್ಲಾ ಲೇಔಟ್‌ಗೆ, ಗಲಾಟೆ ಆದ ಜಾಗಕ್ಕೆ ಯಾವುದೇ ಸಂಬಂಧ ಇಲ್ಲ. ಜಫ್ರುಲ್ಲಾ ಲೇಔಟ್ ಸುಮಾರು 3-4 ಕಿ.ಮೀ ದೂರ ಇದೆ. ಅಲ್ಲಿನ ಮನೆ ಮನೆಗೆ ನುಗ್ಗಿ 36 ಜನರನ್ನು ಕರೆದುಕೊಂಡು ಹೋಗಿದ್ದಾರೆ.

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, . . .

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಭಾರತ್ ಮಾತಾ ಲೇಔಟ್ ಬಗ್ಗೆ ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇದು ಅತ್ಯಂತ ಬಹಳ ಮುಖ್ಯವಾದ ವಿಷಯವಾಗಿದೆ. ಇದರಲ್ಲಿ ಸಾಕಷ್ಟು ವಿಷಯಗಳ ಬಗ್ಗೆ ಮಾತನಾಡುವುದು ಇದೆ. ದಯವಿಟ್ಟು ಮಾತನಾಡುವುದಕ್ಕೆ ಸಮಯಾವಕಾಶ ಕೊಡಬೇಕು. Unlawful Activities (Prevention) *Act* (*UAPA*) ಬರಬೇಕಾದರೆ ಯಾವ provision ಇದೆ ಎನ್ನುವುದನ್ನು ಇವರು ನೋಡಲಿಲ್ಲ. ನಮ್ಮ ಕಾಂಗ್ರೆಸ್ ಸರ್ಕಾರದಲ್ಲಿ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮಾನ್ಯ ಮುಖ್ಯಮಂತ್ರಿಯಾಗಿದ್ದಾಗ Cabinet Sub-Committee ಆಗಿತ್ತು. ಆ Cabinet Sub-Committee ಯಲ್ಲಿ under section 45(1) and (2) of UAPA Act ರಲ್ಲಿ Independent Authority Committee ಮಾಡಬೇಕೆಂದಿದೆ. ಅದರಲ್ಲಿ ನ್ಯಾಯಾಧೀಶರು, ಪೊಲೀಸ್ ಅಧಿಕಾರಿ ಮತ್ತು ನಿರ್ವಾಹಕ ಅಧಿಕಾರಿ 3 ಜನ ಇರಬೇಕು. ಇಂತಹ UAPA cases ಬಂದಾಗ ಆ ಕಮಿಟಿಗೆ ತನಿಖಾ ಅಧಿಕಾರಿಯನ್ನು refer ಮಾಡಬೇಕು. ಆ ಕಮಿಟಿಯು ಅದರ ಬಗ್ಗೆ ಚರ್ಚಿಸಿ prima facie ಏನಾದರೂ ಇದ್ದರೆ, . . .

**ಸಭಾಪತಿಯವರು:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಇನ್ನು ಸಾಕಷ್ಟು ವಿಷಯಗಳು ಇವೆ. ತಾವು ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿ ಈ ರೀತಿ ಮಾಡಿದರೆ ಹೇಗೆ?

**ಸಭಾಪತಿಯವರು:–** ಮಾನ್ಯ ನಸೀರ್ ಅಹ್ಮದ್‌ರವರೇ, ಇನ್ನು ವಿಷಯಗಳು ಇರಲಿ. ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಈ ಸಮಾಜಕ್ಕೆ ತಾವು ನ್ಯಾಯ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನಾನು ಈ ಎಲ್ಲಾ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕು. 420 ಜನರ ಕುಟುಂಬಗಳು ಏನಾಗಬೇಕು? ಇದರಲ್ಲಿ 4 ಜನ ಸತ್ತಿದ್ದಾರೆ.

**ಶ್ರೀ ಸುನೀಲ್ ವಲ್ಯಾಪೂರೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ನಸೀರ್ ಅಹ್ಮದ್‌ರವರು ಏನು ಮಾತನಾಡುತ್ತಿದ್ದಾರೆ. ಅವರು ಮಾತನಾಡಲಿ. ಆದರೆ ಅವರದೇ ಪಕ್ಷದ ಒಬ್ಬ ದಲಿತ ಶಾಸಕನ ಬಗ್ಗೆ ಇವರೇಕೆ ಮಾತನಾಡುತ್ತಿಲ್ಲ? ಅವರಲ್ಲಿಯೇ ಆಂತರಿಕ ಸಮಸ್ಯೆ ಇದೆ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸುನೀಲ್ ವಲ್ಯಾಪೂರೆಯವರೇ, ನಾನು ಅದರ ಬಗ್ಗೆಯೂ ಸಹ ಬರುತ್ತೇನೆ. ಅವರು ನಮ್ಮ ಪಕ್ಷದ ಶಾಸಕ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪೂರೆ:–** ಮಾನ್ಯ ಸಭಾಪತಿಯವರೇ, ಅವರ ಪಕ್ಷದಲ್ಲಿರುವಂತಹ ದಲಿತ ಶಾಸಕನ ಬಗ್ಗೆ ಮಾತನಾಡುವುದಕ್ಕೆ ತಯಾರಿಲ್ಲ. ಇವರು ದಲಿತರ ಬಗ್ಗೆ ಚಿಂತನೆಯನ್ನು ಮಾಡುತ್ತಾರೆಯೇ?

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸುನೀಲ್ ಮಲ್ಯಾಪೂರೆರವರೇ, ತಾವು ದಲಿತರ ಬಗ್ಗೆ ಪ್ರೀತಿ ತೋರಿಸುವ ಅವಶ್ಯಕತೆ ಇಲ್ಲ.

**ಶ್ರೀ ಸುನೀಲ್ ವಲ್ಯಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ನಸೀರ್ ಅಹ್ಮದ್‌ರವರು ದಲಿತ ಶಾಸಕನ ಮೇಲೆ ಚಿಂತನೆ ಮಾಡುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸುನೀಲ್ ವಲ್ಯಾಪೂರೆಯವರೇ, ದಲಿತ ಶಾಸಕನ ಬಗ್ಗೆ ಮಾತನಾಡುವುದಕ್ಕೆ ಬರುತ್ತೇನೆ. ಮಾನ್ಯ ಶಾಸಕರಾದ ಅಖಂಡ ಶ್ರೀನಿವಾಸ್‌ಮೂರ್ತಿಯವರು ನಮ್ಮ ಪಕ್ಷದ ಶಾಸಕರಾಗಿದ್ದಾರೆ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸುನೀಲ್ ವಲ್ಯಾಪೂರೆಯವರೇ, ತಾವು ಹೇಳಿದ್ದು ನಾವು ಮಾತನಾಡಬೇಕೇ, ನಮ್ಮ ಶಾಸಕರ ಬಗ್ಗೆ ನಮಗೂ ಗೌರವ ಇದೆ. ತಾವು ಸರಿಯಾದ ರೀತಿಯಲ್ಲಿ ಹೇಳಬೇಕು.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪೂರೆ:-** ಮಾನ್ಯ ಸಭಾಪತಿಯವರೇ, ದಲಿತ ಶಾಸಕರ ಬಗ್ಗೆ ಚಿಂತನೆ ಮಾಡಬೇಡಿ ಎಂದು ನಾನು ಹೇಳಲಿಲ್ಲ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಬಹಳಷ್ಟು ಸಮಯವನ್ನು ಕೊಟ್ಟಿದ್ದೀರಿ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಶಾಸಕರಾದ ಅಖಂಡ ಶ್ರೀನಿವಾಸ್ ಮೂರ್ತಿಯವರ ಬಗ್ಗೆಯೂ ಸಹ ನಾನು ಮಾತನಾಡುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸುಮಾರು 10 ಗಂಟೆ 45 ನಿಮಿಷಗಳಾಗಿವೆ. ತಾವು ಬಹಳಷ್ಟು ಸಮಯವನ್ನು ಕೊಟ್ಟಿದ್ದೀರಿ. ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡಬೇಕೆಂದಿದ್ದಾರೆ. ಇನ್ನು ಅನೇಕ ಮಾನ್ಯ ಸದಸ್ಯರು ಮಾತನಾಡಬೇಕೆಂದು ಕೈ ಎತ್ತಿದ್ದಾರೆ. ಆದ್ದರಿಂದ, ಈಗಾಗಲೇ ಸಮಯ ಆಗುತ್ತಿದೆ. ಇನ್ನು ನಮ್ಮ ಬಿಲ್ಲು ಇದೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಅಶೋಕ್‌ರವರೇ ಒಂದು ನಿಮಿಷ. ಈಗಾಗಲೇ ಸಮಯ ಆಗುತ್ತಿದೆ. ನಾನು ಮಾತನಾಡಿ ಬೇಗ ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದೆಲ್ಲವನ್ನೂ ನೋಡಿದಾಗ . . .

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ತಾವು ದಲಿತ ಶಾಸಕರಿಗೆ ಏಕೆ ರಕ್ಷಣೆ ಕೊಡುವುದಕ್ಕೆ ಆಗಲಿಲ್ಲ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಬ್ಬ ಶಾಸಕನ ಮನೆಯ ಮೇಲೆ ಬೆಂಕಿ ಹಾಕಿ, ಸುಮ್ಮಸುಮ್ಮನೆ ಏನೇನೋ ಮಾತನಾಡಬೇಡಿ. ಇವರು ಇಡೀ ಸಮಾಜದ ಮೇಲೆ ದುಸ್ಸಾಹಸವನ್ನು ಮಾಡಿಕೊಂಡು . . .

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಇವರಿಗೆ ದಲಿತರನ್ನು ರಕ್ಷಣೆ ಮಾಡುವುದಕ್ಕೆ ಯೋಗ್ಯತೆ ಇಲ್ಲ. ಇವರು ರಕ್ಷಣೆ ಬಗ್ಗೆ ಮಾತನಾಡುತ್ತಾರೆ. (ಗೊಂದಲ) ಬಿ.ಜೆ.ಪಿ ಶಾಸಕರೇ ದಲಿತ ಶಾಸಕರ ಮನೆಯ ಮೇಲೆ ಧಾಳಿ ಮಾಡಿದ್ದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಈ ರೀತಿ ಮಾತನಾಡುವುದಕ್ಕೆ ಬೇಜಾರು ಆಗುವುದಿಲ್ಲವೇ?

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ತಾವು ದಲಿತರನ್ನು ರಕ್ಷಣೆ ಮಾಡುವುದಕ್ಕೆ ತಯಾರಿಲ್ಲ. ದಲಿತ ಶಾಸಕರ ಬಗ್ಗೆ ಮಾತನಾಡುತ್ತೀರಾ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಇಂತಹ ಘಟನೆಗಳಿಗೆ ಮಾನ್ಯ ಅಖಂಡ ಶ್ರೀನಿವಾಸ್ ಮೂರ್ತಿಯವರ ಮನೆ ಕಾವಲ್‌ಭೈರಸಂದ್ರದಲ್ಲಿರುವಂತಹದ್ದು. ಅಲ್ಲಿಂದ ಆರ್.ಟಿ., ನಗರ ಪೊಲೀಸ್ ಠಾಣೆಗೆ ಕೇವಲ 5 ನಿಮಿಷಗಳಾಗುತ್ತದೆ. (ಗೊಂದಲ) ಆದರೆ, ಆ ಪೊಲೀಸ್‌ನವರು ಏಕೆ ಬರಲಿಲ್ಲ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅಲ್ಲಿನ ಪೊಲೀಸ್ ಠಾಣೆ ಮೇಲೆ ಬೆಂಕಿ ಹಾಕಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಬ್ಬ ದಲಿತ ಶಾಸಕನ ಮನೆಗೆ ನುಗ್ಗಿ ಅವರನ್ನು ಸರ್ವ ನಾಶ ಮಾಡಿ ಬಂದಿದ್ದಾರೆ. ಅವರಿಗೆ ಬೇಜಾರು ಆಗುವುದಿಲ್ಲವೇ, ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿ ತಾವು ರಕ್ಷಣೆ ಕೇಳುತ್ತೀರಾ. ಹಿಂದಿನ ಸರ್ಕಾರವನ್ನು 'ರಣಹೇಡಿ' ಸರ್ಕಾರ ಎಂದು ಹೇಳಬಹುದಲ್ಲವೇ?

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಕೇವಲ 5 ನಿಮಿಷಗಳಲ್ಲಿ ಪೊಲೀಸ್‌ನವರು ಘಟನೆ ನಡೆದ ಸ್ಥಳಕ್ಕೆ ಬರಬಹುದು. ಆದರೆ 4 ಗಂಟೆಗಳ ಕಾಲ ಪೊಲೀಸ್ ಠಾಣೆಯಲ್ಲಿ ಕುಳಿತುಕೊಂಡು, ಅವರಿಗೆ ರಕ್ಷಣೆ ಕೊಡದೇ ಅವರ ಮನೆಗೆ ಧಾಳಿ ಮಾಡಿದರು. ಆ ಮನೆಯನ್ನು ಅಷ್ಟೊಂದು ಹಾನಿ ಮಾಡಿ, ಅವರು ಹೋಗಿ ಪೊಲೀಸ್ ರಕ್ಷಣೆ ಕೇಳಿದರೆ, ಯಾವುದೇ ರೀತಿ ರಕ್ಷಣೆ ಕೊಡಲಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪೊಲೀಸ್ ಠಾಣೆಗೆ ಇವರು ಬೆಂಕಿ ಹಾಕಿದರಲ್ಲವೇ? ಇವರಿಗೆ ನಾಚಿಕೆ ಆಗುವುದಿಲ್ಲವೇ?

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಮಗೆ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮ್ಮದು 'ರಣಹೇಡಿ' ಸರ್ಕಾರ ಅಲ್ಲ. ನಮ್ಮದು 'ರಾಜಾ ಹುಲಿ' ಸರ್ಕಾರ. (ಗೊಂದಲ) ನಮ್ಮ ಸರ್ಕಾರದಲ್ಲಿ ಶಾಸಕರ ಮನೆಗೆ ನುಗ್ಗಿದವರನ್ನು ಪೊಲೀಸರು ಒದ್ದು ಒಳಗೆ ಹಾಕುತ್ತಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವರು ದಲಿತ ಪರವಂತೆ. ದಲಿತ ಶಾಸಕನ ಮನೆಗೆ ನುಗ್ಗಿ ಮನೆಯನ್ನು ಸುಟ್ಟು ಹೋಗುತ್ತಾರೆ. (ಗೊಂದಲ) ಇವರಿಗೆ ಬಿ.ಜೆ.ಪಿ., ಸರ್ಕಾರದ ಬಗ್ಗೆ ಮಾತನಾಡುವುದಕ್ಕೆ ಯಾವುದೇ ನೈತಿಕತೆ ಇಲ್ಲ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ರವಿಕುಮಾರ್‌ರವರೇ, ನಿಜ ಹೇಳಿದರೆ ತಮಗೆ ಕೆಟ್ಟ ಕೋಪ ಬರುತ್ತದೆ. ಆಯ್ತಪ್ಪ, ನಾವು ತಪ್ಪು ಮಾಡಿದ್ದೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ನಸೀರ್ ಅಹ್ಮದ್‌ರವರೇ, ಹೌದು ತಾವು ತಪ್ಪು ಮಾಡಿದ್ದೀರಾ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ರವಿಕುಮಾರ್‌ರವರೇ, ನಾವು ತಪ್ಪು ಮಾಡಿದ್ದೇವೆ. ಇದರ ಬಗ್ಗೆ ಹೈಕೋರ್ಟ್ ಕಡೆಯಿಂದ ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡಿ, ಇದನ್ನು ತನಿಖೆ ಮಾಡಿಸಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಯಾರು ಪೊಲೀಸ್ ಠಾಣೆಯನ್ನು ಮತ್ತು ಮನೆಯನ್ನು ಸುಟ್ಟು ಹಾಕಿದ್ದಾರೆಯೇ, ಅವರಿಗೆ ಶಿಕ್ಷೆ ಆಗುವುದಿಲ್ಲವೇ?

**ಶ್ರೀಮತಿ ಭಾರತಿಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ರಾತ್ರಿ ಹೋಗಿ ಕೊತ್ತಂಬರಿ ಸೊಪ್ಪನ್ನು ತರುತ್ತಾರೆ. (ಗೊಂದಲ) ಇವರು ಅಮಾಯಕರಂತೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸದಸ್ಯರೇ, ಆಯಿತು. ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ್:-** ಮಾನ್ಯ ಸಭಾಪತಿಯವರೇ, ದಲಿತರ ಮೇಲೆ ಹಲ್ಲೆ ಮಾಡುವಂತಹದ್ದು. ಇವರು ಅಮಾಯಕರೇ.

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇವರು ಅಮಾಯಕರಂತೆ. ಎಂಜಿನಿಯರಿಂಗ್ ಮಾಡಿರುವವವವರು ಅಮಾಯಕರಲ್ಲ. (ಗೊಂದಲ) ತಪ್ಪು ಮಾಡಿರುವವರಿಗೆ ಶಿಕ್ಷೆಯಾಗಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, (ಗೊಂದಲ) ದಯವಿಟ್ಟು, ನನಗೆ ಮಾತನಾಡುವುದಕ್ಕೆ ರಕ್ಷಣೆ ಕೊಡಬೇಕು. ನಾನು ಬೆಂಗಳೂರು ನಗರದ ನಿವಾಸಿ. ಬೆಂಗಳೂರು ನಗರದಲ್ಲಿ ಹುಟ್ಟಿ ಬೆಳೆದವನು. ಬೆಂಗಳೂರು ನಗರ ಕೋಮು–ಸೌಹಾರ್ದತೆ ಸಾಮರಸ್ಯಕ್ಕೆ ಹೆಸರುವಾಸಿಯಾದಂತಹ ನಗರ. ಇಲ್ಲಿ ಕೆಲವು ದುಷ್ಟಶಕ್ತಿಗಳು ಕೋಮು ದಳ್ಳುರಿಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದಕ್ಕೆ ನಾವ್ಯಾರು ಬಿಡುವುದಿಲ್ಲ. ನಾನು ಭಾಷಣ ಮಾಡುವುದಕ್ಕಿಂತ ಮೊದಲು ಒಂದೇ ಒಂದು ಮಾತನ್ನು ಹೇಳುತ್ತೇನೆ. ಕೇಳಿ. ಮಾನ್ಯ ಅಖಂಡ ಶ್ರೀನಿವಾಸ್ ಮೂರ್ತಿಯವರ ಮನೆ ಮೇಲೆ ಯಾರ್ಯಾರು ಹಲ್ಲೆ ಮಾಡಿದ್ದಾರೆ, ಅವರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕು. ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯ ಮೇಲೆ ಧಾಳಿ ಮಾಡಿದವರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕು. ತಮಗೆ ದಲಿತರ ಮೇಲೆ ಮೊಸಳೆ ಕಣ್ಣೀರು ಬೇಡ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಮಗೆ ಬೇಡ ಎಂದು ಹೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಭಾರತಿ ಶೆಟ್ಟಿಯವರೇ, ನಾನು ಅದೇ ವಿಚಾರ ಮಾತನಾಡುವುದಕ್ಕೆ ಬರುತ್ತಿದ್ದೇನೆ.

**(ಗೊಂದಲ)**

**(ಮುಂದು)**

**(947) 26–09–2020/ 10–50/ ಎಲ್ಎಂ (ಕೆಹೆಚ್)–ಎಂಡಿ**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):–**

ಹೈದರಾಬಾದ್‌ನಲ್ಲಿ Rohith Vemula, PhD ಮಾಡುತ್ತಿದಂತಹ ದಲಿತ ಯುವಕನಿಗೆ ಇವರ ಪಕ್ಷದವರು ಏನು ಮಾಡಿದರು ಎಂಬುದು ನನಗೆ ಗೊತ್ತಿದೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರಿಗೆ, ಮತಗಳು ಬೇಕು. ದಲಿತರು ಬೇಕಾಗಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇವರ ಪಕ್ಷಕ್ಕೆ ಸೇರಿದ ಉತ್ತರ ಪ್ರದೇಶದ ಶಾಸಕರ ಮನೆಗೆ ಆ ಹೆಣ್ಣು ಮಗು ನನಗೆ ಕೆಲಸ ಬೇಕೆಂದು ಹೋದಾಗ, ಆ ಸಣ್ಣ ಬಾಲಕಿಯ ಮೇಲೆ ಆತ್ಯಾಚಾರ ಮಾಡುತ್ತಾರೆ. ಆಗ ಆ ಮಗು ಅಳುತ್ತದೆ. ಆ ಮಗುವಿಗೆ ಸಂತ್ವಾನ ಮಾಡುತ್ತಾರೆ. **(ಗೊಂದಲ)** ಇದರ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಲು ಹೋದವರನ್ನು ಆ ಪೊಲೀಸ್ ಠಾಣೆಯಲ್ಲಿಯೇ ಅವನನ್ನು ಕೊಲೆ ಮಾಡುತ್ತಾರೆ. ಇದು ಇವರ ಸಂಸ್ಕೃತಿ ಮತ್ತು ಗುಜರಾತ್‌ನಲ್ಲಿ ಕುದುರೆ ಮೇಲೆ ಕುಳಿತುಕೊಂಡು ಹೋಗುತ್ತಿದ್ದ ದಲಿತರನ್ನು ಕೊಲೆ ಮಾಡಿದ್ದಾರೆ. ಇವರು ದಲಿತರ ಬಗ್ಗೆ ನಮಗೆ ಹೇಳುತ್ತಾರೆಯೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಮಗೆ ಬೇರೆ ವಿಚಾರದ ಬಗ್ಗೆ ಬೇಕಾಗಿಲ್ಲ. ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿಯ ಬಗ್ಗೆ ಮಾತ್ರ ಮಾತನಾಡಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇವರ ಹತ್ತಿರ ನಾವು ದಲಿತರ ಬಗ್ಗೆ ಏನು ಕಲಿಯುವುದು ಬೇಕಾಗಿಲ್ಲ? ಅದರ ಬಗ್ಗೆ ತಾವು ಮಾತನಾಡುವುದಕ್ಕೆ ಕೊಡಲಿಲ್ಲವಲ್ಲ. ಈಗ ತಾವು ಏನು ಮಾತನಾಡುತ್ತಿದ್ದೀರಾ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಇವರು ಏನು ಮಾತನಾಡುತ್ತಿದ್ದಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಮಾನೆ ಶ್ರೀನಿವಾಸ್‌ರವರೇ, ನಾಟಕ ಸಾಕು. **(ಗೊಂದಲ)** ಪೊಲೀಸ್‌ರವರನ್ನು ಸುಟ್ಟು ಹಾಕಿದರಲ್ಲವೇ, ತಮಗೆ ನಾಚಿಕೆ ಆಗುವುದಿಲ್ಲವೇ. ದಲಿತರ ಬಗ್ಗೆ ಇವರು ಏಕೆ ಮಾತನಾಡುತ್ತಿದ್ದಾರೆ?

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರಿಗೆ ಏನು ನೈತಿಕತೆ ಇದೆ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ರವಿಯವರಿಗೆ ಮಾತನಾಡಲು ಯಾವ ನೈತಿಕತೆ ಇದೆ?

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇವರಿಗೆ ಏನು ಗೊತ್ತಿದೆ. ಸಂವಿಧಾನಕ್ಕೆ ತಿದ್ದುಪಡಿ ತರುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪೊಲೀಸ್ ಠಾಣೆಯನ್ನು ಸುಡುವುದಕ್ಕೆ ಹೋಗಿದ್ದರು.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, *National Crime* Records *Bureau* ಪ್ರಕಾರ ಯಾವ ಯಾವ ರಾಜ್ಯದಲ್ಲಿ ದಲಿತರ ಮೇಲೆ ಹಲ್ಲೆಯಾಗಿದೆ ಎಂಬುದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ನಾನು ತಯಾರು ಇದ್ದೇನೆ. ಕರ್ನಾಟಕಕ್ಕೆ ಸೀಮಿತವಾಗಿ ನಾನು ಮಾತನಾಡುತ್ತೇನೆ. ಬೆಂಗಳೂರು ನಗರಕ್ಕೆ ಸೀಮಿತವಾಗಿ ಇರುತ್ತೇನೆ. ಮಾನ್ಯ ಸಭಾಪತಿಯವರೇ, ದಯವಿಟ್ಟು ಅವರಿಗೆ ಸುಮ್ಮನೆ ಇರುವುದಕ್ಕೆ ತಾವು ಹೇಳಬೇಕು. ನಾನು ನ್ಯಾಷನಲ್ ಲೀಡರ್ ಅಥವಾ ಕಾರ್ಪೋರೇಷನ್ ಲೀಡರ್. ಅವರ ರೀತಿಯಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಇಡೀ ಬೆಂಗಳೂರಿಗೆ ಬೆಂಕಿ ಹಚ್ಚಿದವರು. ಮೊದಲು ತಮ್ಮ ಬಗ್ಗೆ ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಗಸ್ಟ್-11ನೇ ತಾರೀಖು ಘಟನೆ ನಡೆದ ಮೇಲೆ ಮಾನ್ಯ ನಸೀರ್ ಅಹ್ಮದ್‌ರವರು ಈ ಘಟನೆ ನಡೆದು 5 ಗಂಟೆಯಾದರೂ ಸಹ 9

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಗಂಟೆಯವರೆಗೂ FIR ಆಗುವುದಿಲ್ಲ ಎಂದು ಹೇಳಿದರು. ಇದರ ಅರ್ಥ ಸಂಪೂರ್ಣವಾಗಿ ಸರ್ಕಾರ ವಿಫಲವಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಅಖಂಡ ಶ್ರೀನಿವಾಸ್‌ಮೂರ್ತಿಯವರ ಮನೆಗೆ ಬೆಂಕಿ ಹಂಚಿದವರು ಕಾಂಗ್ರೆಸ್‌ನವರು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಘಟನೆ ನಡೆದ ದಿನ ಇಡೀ ದೇಶದಲ್ಲಿ ಆ ಸಂದರ್ಭದಲ್ಲಿ ಸರ್ಕಾರ ಮತ್ತು ಪೊಲೀಸ್‌ನವರು ಎಚ್ಚರ ವಹಿಸಬೇಕಾಗಿತ್ತು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಘಟನೆ ನಡೆದ ದಿನ ದಲಿತ ಶಾಸಕರ ಮನೆಗೆ ಮತ್ತು ತಮ್ಮ ಕಾಂಗ್ರೆಸ್ ಪಕ್ಷದ ಶಾಸಕರ ಮನೆಗೆ ತಾವು ಬೆಂಕಿ ಹಂಚಿದವರು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಇದೊಂದು ಪೂರ್ವ ನಿಯೋಜಿತ ಕೃತ್ಯವಾಗಿದೆ. ಸಾಮಾಜಿಕ ಜಾಲತಾಣದ ಮೂಲಕ ಪೋಸ್ಟ್ ಮಾಡಿರುವುದು ಕೇವಲ ನೆಪವಾಗಿದೆ ಎಂಬುವಂತಹ ಹೇಳಿಕೆಯನ್ನು ಮಾಧ್ಯಮಗಳ ಮುಂದೆ ಹೇಳಿದರು. ಅದಲ್ಲದೇ ಮಾನ್ಯ ಸಚಿವರಾದ ಸಿ.ಸಿ.ಪಾಟೀಲ್‌ರವರು ಮುಸ್ಲಿಂ ಯುವಕರ ಗುಂಪು ಹನುಮನ ಗುಡಿಯನ್ನು ರಕ್ಷಣೆ ಮಾಡಿದರು ಎನ್ನುವುದು ಒಂದು ನಾಟಕ ಎಂದು ಹೇಳಿದರು. ಇವರ ಪಕ್ಷದ ಕಾರ್ಯಾಧ್ಯಕ್ಷರು ದೆಹಲಿಯಲ್ಲಿ ಇದ್ದಾರೆ. ಈಗ ಇವರು ಇಷ್ಟು ಹೊತ್ತು ದಲಿತರು, ಮುಸ್ಲಿಂ ಬಗ್ಗೆ ಏನು ಹೇಳುತ್ತಿದ್ದರೋ, ಅದರ ಬಗ್ಗೆ ಅವರು ದೆಹಲಿಯಿಂದ ಭಾಷಣ ಮಾಡಿದರು. ಸರ್ಕಾರದ ಯಾರಾದರೊಬ್ಬರೂ ವಾತಾವರಣವನ್ನು ತಿಳಿ ಮಾಡುವಂತಹ ಮತ್ತು ಶಾಂತ ಮಾಡುವಂತಹ ಹೇಳಿಕೆಯನ್ನು ಯಾರೂ ಕೊಡಲಿಲ್ಲ. ಒಬ್ಬ ಮಂತ್ರಿಯಾದ ಮೇಲೆ ಒಬ್ಬ ಮಂತ್ರಿ ತದ್ವಿರುದ್ಧವಾದ ಹೇಳಿಕೆ ಕೊಟ್ಟಾಗ, ಅಲ್ಲಿ ಪಕ್ಷದ ವಾತಾವರಣ ಬರುತ್ತದೆ. 2018ನೇ ಸಾಲಿನಲ್ಲಿ ಪುಲಿಕೇಶಿ ನಗರದಲ್ಲಿ ಕೇವಲ 9 ಸಾವಿರ ಮತಗಳನ್ನು ಇವರು ತೆಗೆದುಕೊಂಡಿದ್ದರು. ಇಡೀ ದೇಶವನ್ನು ಸಾಮಾಜಿಕವಾಗಿ ನೋಡಿದಾಗ ದಲಿತರು, ಮುಸಲ್ಮಾನರು ಒಟ್ಟಿಗೆ ಇರುತ್ತಾರೆ. ಇವರಲ್ಲಿ ಹೊಟ್ಟೆಯಲ್ಲಿ ನೋವು. ಬೇರೆ ಇನ್ನೇನೂ ಅಲ್ಲ. ಅವರಿಬ್ಬರೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಒಟ್ಟಿಗೆ ಇದ್ದಾರೆ ಎಂದು ಮಾನ್ಯ ಅಖಂಡ ಶ್ರೀನಿವಾಸ್ ಮೂರ್ತಿ ಎಂಬ ದಲಿತ ಶಾಸಕರ ಹೆಂಡತಿಯ ಸ್ವಂತ ಅಕ್ಕ ಹನುಮಕ್ಕ ಅವರು ಏನು ಹೇಳಿದರು ಎಂದರೆ, . . .

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ದಲಿತ ಶಾಸಕ . . .

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಎನ್.ರವಿಕುಮಾರ್‌ರವರೇ, ಮಾನ್ಯ ಹರಿಪ್ರಸಾದ್‌ರವರು ಮಾತನಾಡಲಿ ಬಿಡಿ. ಮತ್ತೆ ಮತ್ತೆ ತಾವು ಏಕೆ ಮಾತನಾಡುತ್ತೀರಿ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಮ್ಮನ್ನು ಮುಸ್ಲಿಂ ಯುವಕರೇ ರಕ್ಷಣೆ ಮಾಡಿದ್ದು ಎಂದು ಹೇಳಿದರು. ಅದನ್ನೆಲ್ಲಾ ತಾವು ಸಹ ನೋಡಿದ್ದೀರಿ. ಅದಲ್ಲದೇ, ಇದನ್ನು ನೋಡಿದಾಗ ಇದು ಕೋಮು ಸಂಘರ್ಷದ ಗಲಭೆ ಅಲ್ಲ. ಯಾವುದೋ ಒಂದು ಪ್ರಚೋದನಕಾರಿ, ಅವಹೇಳನಕಾರಿ ಪೋಸ್ಟ್‌ನಿಂದ ಒಂದು ರೀತಿಯ ಪರಿಕ್ಷುಬ್ಧ ವಾತಾವರಣ ಸೃಷ್ಟಿಯಾಯಿತು. ಆ ಪೊಲೀಸ್ ಠಾಣೆಯಲ್ಲಿ SHO (Station House Officer) ತಕ್ಷಣ ಆ ನವೀನ್‌ನನ್ನು ಆರೆಸ್ಟ್ ಮಾಡಿದ್ದರೆ, ಯಾವುದೇ ರೀತಿಯ ತೊಂದರೆ ಆಗುತ್ತಿರಲಿಲ್ಲ. ದೂರನ್ನು ಕೊಡುವುದಕ್ಕೆ ಹೋದಾಗ ನಮಗೂ ಇದಕ್ಕೂ ಸಂಬಂಧ ಇಲ್ಲ. ಇದು ಸೈಬರ್ ಕ್ರೈಮ್ ಆಗಿರುವುದರಿಂದ, ಪೊಲೀಸ್ ಆಯುಕ್ತರ ಕಛೇರಿಗೆ ಹೋಗಿ ಎಂದು ಹೇಳಿದರು. ಆ ಠಾಣೆಯಲ್ಲಿಯೇ ಇವರು ಕ್ರಮ ತೆಗೆದುಕೊಂಡಿದ್ದರೆ, ಯಾವುದೇ ರೀತಿಯ ಈ ಒಂದು ಅನಾಹುತ ನಡೆಯುತ್ತಿರಲಿಲ್ಲ. Cyber Crime ನವರು ಮತ್ತು ಘಟನೆ ಸ್ಥಳದಲ್ಲಿ ಇದ್ದವರೆಲ್ಲರಿಗೂ ಯಾವುದೇ ರೀತಿಯ ರಾಜಕೀಯ ಹಿನ್ನಲೆ ಇಲ್ಲ. ಇದರಲ್ಲಿ ಪ್ರಯತ್ನ ಕೆಲವರು ಮಾಡಿದರು. ಆದರೆ ಇದರಲ್ಲಿ ಯಾವುದೇ ಬೆಳೆ ಬೇಯಿಸುವುದಕ್ಕೆ ಆಗಲಿಲ್ಲ. ಪೊಲೀಸ್ ಠಾಣೆಯ ಬಗ್ಗೆ ಪೇಪರ್‌ನಲ್ಲಿ ಬಂದಿದೆ. ಪೊಲೀಸ್‌ನವರಿಗೆ police force ಕಳುಹಿಸಿ ನಮಗೆ ಏನು ಮಾಡುವುದಕ್ಕಾಗುವುದಿಲ್ಲವೆಂದು ಒಂದು wireless message ಬರುತ್ತದೆ. ಅದನ್ನು ಮಾಧ್ಯಮದಲ್ಲಿ tape ಮಾಡುತ್ತಾರೆ. ಆದರೆ ಆ ಪೊಲೀಸ್‌ನವರು ಗುಂಡು ಹಾರಿಸು ಎಂದು ಹೇಳುತ್ತಾರೆ. ಆದರೆ ಅವರ ಹತ್ತಿರ ಬಂದೂಕು ಇರುವುದಿಲ್ಲ. ಬಂದೂಕು ಕೊಟ್ಟರೆ, ಗುಂಡು ಹಾರಿಸುವುದು ನಿಜ. ಅದು ಯಾವ ಸಂದರ್ಭದಲ್ಲಿ ಆಗಬೇಕೆಂದು ತಾವು ನೋಡಬೇಕು. ಅದಲ್ಲದೇ ಗೃಹ ಮಂತ್ರಿಗಳಾದವರು ಆ ರೀತಿಯ ಹೇಳಿಕೆಗಳನ್ನು ಕೊಟ್ಟಾಗ ಏನಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಆ ಒಂದು ರೀತಿಯಲ್ಲಿ ಕೋಮು ಗಲಭೆ ಆಗಿದ್ದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹನುಮನ ಗುಡಿಗೆ ಮುಸ್ಲಿಂರವರು ಹೋಗಿ ರಕ್ಷಣೆ ನೀಡುತ್ತಿರಲಿಲ್ಲ. ಇದರ ಬಗ್ಗೆ ಹೇಳುವುದು ಬಹಳ ಸುಲಭ.

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಹನುಮನ ಗುಡಿಗೆ ಮಾನವ ಸರಪಳಿಯನ್ನು ಮಾಡಿ ರಕ್ಷಣೆ ಮಾಡಿದರು, ಅವರ ಮನೆಯ ಪಕ್ಕದಲ್ಲಿ ಮಾನ್ಯ ಶಾಸಕರ ಮನೆ ಇತ್ತು. ಅವರ ಮನೆಯನ್ನು ಏಕೆ ಮಾನವ ಸರಪಳಿಯನ್ನು ಮಾಡಿ ರಕ್ಷಣೆ ಮಾಡಲಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸುನೀಲ್ ವಲ್ಯಾಪುರ್‌ರವರೇ ಇದರ ಬಗ್ಗೆ ಹೇಳುತ್ತೇನೆ ತಾವು ಕೇಳಿ. "In May 2019 Lok Sabha election, I have voted for BJP..." (**ಗೊಂದಲ**) ಪೋಸ್ಟ್‌ನಲ್ಲಿ ಇರುವಂತಹದ್ದು ನವೀನ್‌ನ ಹೇಳಿಕೆ. ಅವನು ಭಾರತೀಯ ಜನತಾ ಪಕ್ಷದ ಸದಸ್ಯ. ಅವನು ಮಾಡಿರುವಂತಹ ಕೆಲಸಕ್ಕೆ ಇವರು ನಮ್ಮನ್ನು ಎಳೆಯುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಯಾವುದೇ ಪೋಸ್ಟ್ ಅನ್ನು ನೋಡಿದರೆ, ಅದು ಇವರ ಪಕ್ಷದ ಕಡೆಗೆ ಹೋಗುತ್ತದೆ. ಆದ್ದರಿಂದ ಬೆಂಗಳೂರು ನಗರದಲ್ಲಿ ಇರುವಂತಹ ವಾತಾವರಣವನ್ನು ಕೆಡಿಸುವುದಕ್ಕೆ ಪ್ರಯತ್ನ ಮಾಡಬೇಡಿ. ಮಾನ್ಯ ಅಶೋಕ್‌ರವರು ಸಹ ರಾತ್ರಿ 2 ಗಂಟೆ ವೇಳೆಯಲ್ಲಿ ಅಲ್ಲಿಗೆ ಹೋಗಿದ್ದರು. ಅಲ್ಲಿರುವಂತಹ ಯುವಕರು ಹೋಗಿ FIR ಅನ್ನು ಯಾವಾಗ ಮಾಡಲಿಲ್ಲವೋ, ಆ ಮಸೀದಿಯ ಮುಖ್ಯಸ್ಥರೆಲ್ಲಾ ಹೋಗಿ ಕೇಳಿದಾಗಲೂ ಸಹ ಇವರು FIR ಮಾಡುವುದಕ್ಕೆ ತಯಾರು ಇರಲಿಲ್ಲ. ಆದ್ದರಿಂದ ಅಲ್ಲಿ ಸಂಪೂರ್ಣವಾಗಿ ಬಡವರು, ದಲಿತರು, ಅಲ್ಪಸಂಖ್ಯಾತರು, ದುರ್ಬಲ ವರ್ಗದವರು ಇರುವಂತಹ ಜಾಗವಾಗಿದೆ. ರಾತ್ರಿ 2 ಗಂಟೆಗೂ ಸಹ ಡಬ್ಬ ಬಿದ್ದರೆ 2 ಸಾವಿರ ಜನರು ಸೇರುತ್ತಾರೆ. ಇಂತಹ ಗಂಭೀರವಾದ ಪರಿಸ್ಥಿತಿಯಲ್ಲಿ ಇದನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳಬೇಕಾಗಿತ್ತು ಎನ್ನುವುದನ್ನು ಪೊಲೀಸ್ ಇಲಾಖೆ ಮತ್ತು ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದರ ಬಗ್ಗೆ ಸತ್ಯ ಏನಾದರೂ ಹೊರಗಡೆ ಬರಬೇಕಾದರೆ High Court Judge ಯಿಂದ ತನಿಖೆ ಮಾಡಿಸಿ, 'ದೂದ್ ಕಾ ದೂದ್, ಪಾನಿ ಕಾ ಪಾನಿ' ಎಂದು ಹೇಳುತ್ತಾರೆ. ಹಾಲಿನಲ್ಲಿ ಎಷ್ಟು ನೀರು ಇದೆ, ಎಷ್ಟು ಹಾಲು ಇದೆ ಎಂಬುದು ಆಗ ಗೊತ್ತಾಗುತ್ತದೆ. ತಮಗೆ ಧೈರ್ಯ ಇದ್ದರೆ ಹೈಕೋರ್ಟ್ ಜಡ್ಜ್ ಕಡೆಯಿಂದ ತನಿಖೆ ಮಾಡಿಸಿ, ಆಗ ಸತ್ಯ ಹೊರಗಡೆ ಬರುತ್ತದೆ. ಇಷ್ಟು ಮಾತುಗಳನ್ನು ಹೇಳಿ, ನನಗೆ ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬಹುಶಃ ಇದು ನಮ್ಮ ರಾಜ್ಯದಲ್ಲಿ ಮೊದಲ ಬಾರಿಗೆ ನಡೆದಿರುವಂತಹ ಘಟನೆ ಎಂದು ಅನಿಸುತ್ತದೆ. ಬೆಂಗಳೂರು ರಾಜಧಾನಿಯಲ್ಲಿರುವಂತಹ ದಲಿತ ಶಾಸಕನ ಮನೆಯನ್ನು ಸುಟ್ಟು ಹಾಕುತ್ತಾರೆ. ಇಡೀ ಕುಟುಂಬ ದಿಕ್ಕುಪಾಲಾಗುತ್ತದೆ. ಇದರ ಹೊಣೆಯನ್ನು ಯಾರು ಹೊರಬೇಕು? ಪೊಲೀಸ್ ಠಾಣೆಗೆ 6 ಗಂಟೆಗೆ ಒಬ್ಬ ಅಭ್ಯರ್ಥಿ ನವೀನ್ ಎಂಬುವವನ ಮೇಲೆ ದೂರು ಕೊಡುವುಧಕ್ಕೆ ಹೋಗುತ್ತಾರೆ. 9 ಗಂಟೆಯಾದರೂ ದೂರು ದಾಖಲಿಸಲಿಲ್ಲ.

**(ಮುಂದು)**

**(948)26-09-2020(11-10)ಬಿಎಸ್‌ಡಿ-ಎಕೆ**

**ಶ್ರೀ ಎಸ್. ಸುರೇಶ್ ಕುಮಾರ್:-** ಅವರು ವಿಚಾರಗಳನ್ನು ಹೇಳಲಿ, ದಲಿತರಿಗೆ ಅನ್ಯಾಯವಾಗಿದೆ ಎಂದು ನಮಗೂ ಗೊತ್ತು. ನಮಗೂ ಆಕ್ರೋಶ ಬಂದಿದೆ. ಘಟನಾವಳಿಗಳು ಬಂದಿವೆ, ದಯವಿಟ್ಟು ಮಾನ್ಯ ಸದಸ್ಯರು ವಿವರಗಳಿಗೆ ಹೋಗದೇ ವಿಚಾರಗಳನ್ನು ಹೇಳಿದರೆ ಸಾಕು.

**ಶ್ರೀ ಆರ್.ಬಿ. ತಿಮ್ಮಾಪೂರ್:-** ಇದರ ಹೊಣೆಯನ್ನು ಯಾರು ಹೊರುತ್ತಾರೆ?

**ಶ್ರೀ ಎಸ್. ಸುರೇಶ್ ಕುಮಾರ್:-** ಇದು ಅವರಿಗೆ ಗೊತ್ತಿಲ್ಲವೇ?

**ಶ್ರೀ ಆರ್.ಬಿ. ತಿಮ್ಮಾಪೂರ್:-** ಮಾನ್ಯ ಸಭಾಪತಿಯವರೇ, ಒಬ್ಬ ದಲಿತ ಪತ್ರಕರ್ತನಿಗೆ..........

**ಶ್ರೀ ಎಸ್. ಸುರೇಶ್ ಕುಮಾರ್:-** ನಾಳೆ ಅವರನ್ನು ಸುಟ್ಟುಹಾಕುತ್ತಾರೆ. ಮಾನ್ಯ ತಿಮ್ಮಾಪೂರ್ ರವರು ಹುಷಾರಾಗಿರಬೇಕು.

**(ಈ ಹಂತದಲ್ಲಿ ವೈಸ್ ಛೇರ್ಮನ್ ರವರಾದ ಶ್ರೀ ಕೆ.ಸಿ. ಕೊಂಡಯ್ಯನವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಆರ್.ಬಿ. ತಿಮ್ಮಾಪೂರ್:-** ದಲಿತರು ಎಲ್ಲಿರಬೇಕು? ಅವರ ಸರ್ಕಾರ ಏನು ಮಾಡುತ್ತಿದೆ? ಅಷ್ಟೆಲ್ಲಾ ಮನೆ ಸುಟ್ಟು ಹಾಕುವವರೆಗೂ ಅವರು ಎಲ್ಲಿದ್ದರು? 9 ಗಂಟೆಯವರೆಗೆ ಅವರನ್ನು .......... ಹಾಗಾದರೆ ಠಾಣಾ ಮೇಲಾಧಿಕಾರಿ ಯಾವ ಅಧಿಕಾರಿಗೆ ತಿಳಿಸಿದ್ದಾರೆ? ಠಾಣಾಧಿಕಾರಿ ಏನು ಮಾಡುತ್ತಿದ್ದರು? ಜನರು ಸೇರುತ್ತಿರುವಾಗ ಏಕೆ ಬಂದೋಬಸ್ತ್ ಮಾಡಲಿಲ್ಲ? ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

media ಎಲ್ಲಾ ಬಂದರೂ ಪೊಲೀಸರು ಮಾತ್ರ ಮಲಗಿಕೊಂಡಿದ್ದಾರೆ. ಪೊಲೀಸರು ಏನು ಮಾಡುತ್ತಿದ್ದರು? ಹಾಗಾದರೆ ಗುಪ್ತಚರ ಇಲಾಖೆ ಏನು ಮಾಡುತ್ತಿತ್ತು? ಅವರೇ ಪೂರ್ವನಿಯೋಜಿತ ಕೃತ್ಯ ಎಂದು ಹೇಳುತ್ತಾರೆ. ಅಂದರೆ ಪೊಲೀಸರು ಏನು ಮಾಡುತ್ತಿದ್ದರು? ಇನ್ನೊಬ್ಬರು ಆಕಸ್ಮಿಕ ಎಂದು ಹೇಳುತ್ತಾರೆ. Commissioner ನವರು sudden ಆಗಿ ಇಷ್ಟೆಲ್ಲಾ ಬೆಳವಣಿಗೆ ಆಯಿತು ಎಂದು ಹೇಳುತ್ತಾರೆ. ಒಬ್ಬ ದಲಿತ ಶಾಸಕನಿಗೆ ರಕ್ಷಣೆ ಇಲ್ಲವೆಂದರೆ ಸಾಮಾನ್ಯ ದಲಿತರಿಗೆ ಎಲ್ಲಿಂದ ರಕ್ಷಣೆ ಬರುತ್ತದೆ? ಗುಪ್ತಚರ ಇಲಾಖೆ, ಛಿಡಿಟಜ ಸಿಬ್ಬಂದಿ, ಇದರ ಬಗ್ಗೆ ಮಾಹಿತಿ collect ಮಾಡುವುದಕ್ಕೆ ಆಗಲಿಲ್ಲವೇ? ಇವರು ರಾಜಧಾನಿಯಲ್ಲಿದ್ದುಕೊಂಡು ಏನು ಮಾಡುತ್ತಾರೆ? ಕೆಲವರು ಅನೇಕ ವರ್ಷಗಳಿಂದ ಒಂದೇ ್ಣಚಿಣಬಿಂಟ ನಲ್ಲಿರುತ್ತಾರೆ, ಎಷ್ಟು ಮಂದಿ ಪೊಲೀಸರು ಒಂದೇ ಕಡೆ ಕೆಲಸ ಮಾಡುತ್ತಿದ್ದಾರೆ? ಅವರನ್ನು change ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆಯೇ? ಪೊಲೀಸ್ ಠಾಣೆಗೆ ನುಗ್ಗಿ ಬೆಂಕಿ ಹಚ್ಚಿ, ರಸ್ತೆ ಬಂದ್ ಮಾಡಿದ್ದರೂ ಸಹ ಯಾರೂ ಕ್ರಮ ಕೈಗೊಳ್ಳಲಿಲ್ಲ. ಹಾಗಾದರೆ ಪೊಲೀಸರೇ ಇಲ್ಲವೇ? ಬೆಂಗಳೂರು ರಾಜಧಾನಿಯಲ್ಲಿ ಯಾವ ಪೊಲೀಸರು ಇಲ್ಲವೇ? ಪೊಲೀಸರಿಗೆ ಶಾಂತಿ-ಸುವ್ಯವಸ್ಥೆ ಕಾಪಾಡಲು ಯೋಗ್ಯತೆ ಇಲ್ಲವೇ?

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಅವರು ಇವತ್ತು ಸದನದಲ್ಲಿ ಮಾತನಾಡುವ ಕೆಲಸ ಮಾಡುತ್ತಿದ್ದಾರೆ. ಮಾನ್ಯ ತಿಮ್ಮಾಪೂರ್‌ರವರು ಒಬ್ಬ ದಲಿತರಾಗಿ ಈಗ ಇನ್ನೊಬ್ಬ ದಲಿತರ ಬಗ್ಗೆ ಕಾಳಜಿ ಬಂದಿದೆ. ಹೋಗಿ ನೋಡಿಲ್ಲ. ಕಾಂಗ್ರೆಸ್‌ನವರು ಹೋಗಿಲ್ಲ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಬೆಂಕಿ ಹಾಕುವುದಕ್ಕೆ ಹೋಗಿರಲಿಲ್ಲ.

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ್:-** ಪೊಲೀಸ್ ಇಲಾಖೆ ಏನು ಮಾಡುತ್ತಿತ್ತು?

**(ಗೊಂದಲ)**

**DR: Y.A. NARAYANASWAMY:** KFD (Karnataka Forum for Dignity)... ...*(Interruptions)*... Where were you? Where was your leader? ...*(Interruptions)*... Where was your Congress Party when

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

the house of the Congress MLA was burning? ...*(Interruptions)*... SDPI (Social Democratic Party of India)... ...*(Interruptions)*... joint operation...

***(Interruptions)***

**ಶ್ರೀ ರಘುನಾಥರಾವ್ ಮಲ್ಕಾಪೂರೆಃ–** ಮಾನ್ಯ ಸಭಾಪತಿಯವರೇ..........

**(ಗೊಂದಲ)**

**ವೈಸ್ ಚೇರ್ಮನ್ಃ–** ಮಾನ್ಯ ಸದಸ್ಯರೇ.......... ಮಾನ್ಯ ಸಭಾನಾಯಕರೇ..........ಮಾನ್ಯ ತಿಮ್ಮಾಪೂರ್ ರವರೇ, ಮುಕ್ತಾಯ ಮಾಡಿಬಿಡಿ. ಮಾನ್ಯ ಸದಸ್ಯರೇ, ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿಃ–** ಶಾಸಕರ ಮನೆಗೆ ಬೆಂಕಿ ಎಂದು ಬೆಂಗಳೂರಿಗೆ ಬೆಂಕಿ ಹಚ್ಚಲು ಬರುತ್ತಿದ್ದಾರೆ.

**ಶ್ರೀ ಶ್ರೀನಿವಾಸ ಮಾನೆಃ–** ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಬೇಕು.

**ವೈಸ್ ಚೇರ್ಮನ್ಃ–** ಎಲ್ಲರೂ ಕುಳಿತುಕೊಳ್ಳಿ, I am on my legs. ಕುಳಿತುಕೊಳ್ಳಿ. ಅವರು ಮಾತನಾಡುವುದ್ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ಹೇಳಿದಂತೆ ಕೇಳಿ. ಮಾನ್ಯ ಸುನಿಲ್ ವಲ್ಯಾಪೂರೆಯವರೇ, ಕುಳಿತುಕೊಳ್ಳಿ. ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಪೀಠದ ಬಗ್ಗೆ ಗೌರವ ಇಲ್ಲ, ಮಾನ್ಯ ಸಭಾಪತಿಯವರು ನಿಂತುಕೊಂಡರೂ ಯಾರೂ ಕುಳಿತುಕೊಳ್ಳುತ್ತಿಲ್ಲ. ಗೌರವ ಕೊಡಬೇಕಲ್ಲವೇ? ಇದು ಅಕ್ಷಮ್ಯ ಅಪರಾಧ, ಸದನದ ಸತ್ಸಂಪ್ರದಾಯ ಪಾಲನೆಯಾಗುತ್ತಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಚೇರ್ಮನ್:–** ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಲೆ ಒಡೆದವರನ್ನು, ಒಬ್ಬ ಶಾಸಕರ ಮನೆಗೆ ಬೆಂಕಿ ಹಾಕಿದವರನ್ನು ..........

**(ಗೊಂದಲ)**

**ವೈಸ್ ಚೇರ್ಮನ್:–** ಹೀಗಾದರೆ ಏನು ಮಾಡುವುದು? ಮಾನ್ಯ ಸಭಾನಾಯಕರೇ..........

**(ಗೊಂದಲ)**

**(ದಲಿತ ಕಾಂಗ್ರೆಸ್ ಶಾಸಕರ ಮನೆಗೆ ಬೆಂಕಿ ಹಾಕಿದವರಿಗೆ ಧಿಕ್ಕಾರ ಎಂದು ಕಾಂಗ್ರೆಸ್ ಪಕ್ಷದ ಶಾಸಕರು ಘೋಷಣೆಗಳನ್ನು ಕೂಗುತ್ತಿದ್ದರು)**

**(ದಲಿತ ವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ಧಿಕ್ಕಾರ ಎಂದು ಬಿಜೆಪಿ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)**

**ವೈಸ್ ಚೇರ್ಮನ್:–** ಈಗ ಸದನವನ್ನು 10 ನಿಮಿಷಗಳವರೆಗೆ ಮುಂದೂಡುತ್ತೇನೆ.

**(949) 11.20 26.09.2020 ಎಸ್‌ವಿ–ಆರ್‌ಎನ್**

**(ರಾತ್ರಿ 11 ಗಂಟೆ 09 ನಿಮಿಷಗಳಿಗೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ರಾತ್ರಿ 11 ಗಂಟೆ 20 ನಿಮಿಷಗಳಿಗೆ ಸಮಾವೇಶಗೊಂಡಿತು.)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಆರ್.ಬಿ.ತಿಮ್ಮಾಪುರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಲಿತರ ಮನೆ ಧ್ವಂಸವಾಗಿದೆ. ಅದನ್ನು ನಾನು ಪ್ರಸ್ತಾಪ ಮಾಡುತ್ತಿದ್ದಾಗ ಇಲ್ಲಿಯೂ ನನಗೆ ಅವಕಾಶ ಕೊಡಲಿಲ್ಲವೆಂದರೆ ಈ ಸರ್ಕಾರದ ಬಗ್ಗೆ ನಾನು ಏನು ಮಾತನಾಡಬೇಕು? ದಲಿತ ಶಾಸಕನ ಮನೆಯನ್ನು ಸುಟ್ಟು ಹಾಕಿದ್ದಾರೆ. ಅವರ ಕುಟುಂಬ ಬೀದಿ ಪಾಲಾಗಿ ಓಡಾಡುತ್ತಿದ್ದಾರೆ. ಅದನ್ನು ಚರ್ಚೆ ಮಾಡಲಿಕ್ಕೆ ಸರ್ಕಾರಕ್ಕೆ ವ್ಯವಧಾನವಿಲ್ಲವೆಂದರೆ ಯಾವ ರೀತಿಯಲ್ಲಿ ದಲಿತರ ರಕ್ಷಣೆ ಮಾಡುವುದಕ್ಕೆ ಸಾಧ್ಯವಿದೆ? ನಾನು ಒಬ್ಬ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಲಿತನಾಗಿ, ಆ ದಲಿತ ಶಾಸಕನ ಕುಟುಂಬಕ್ಕಾದ ನೋವಿನ ಬಗ್ಗೆ ಚರ್ಚೆ ಮಾಡಲಿಕ್ಕೆ ಸರ್ಕಾರ ಅವಕಾಶ ಕೊಡಲಿಲ್ಲವೆಂದರೆ ಇದು ಎಂತಹ ವಿಪರ್ಯಾಸ?

ಮಾನ್ಯ ಸಭಾಪತಿಯವರೇ, ಆ ದಲಿತ ಶಾಸಕರ ಸಹೋದರಿ ಹೇಳುತ್ತಾರೆ. ನಾವು ಮತ್ತು ಮುಸಲ್ಮಾನರು ಸಹೋದರರಂತಿದ್ದೇವೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಉತ್ತರವನ್ನು ಯಾರು ನೀಡುತ್ತಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಅಶೋಕ್ ಅವರು ಉತ್ತರವನ್ನು ನೀಡುತ್ತಾರೆ. ಉತ್ತರದೊಂದಿಗೆ ನಾವು ಸಿದ್ಧವಿದ್ದೇವೆ. ದಯಮಾಡಿ ನಮಗೆ ಉತ್ತರ ನೀಡಲು ಅವಕಾಶವನ್ನು ಮಾಡಬೇಕೆಂದು ಕೋರುತ್ತೇವೆ.

**ಸಭಾಪತಿಯವರು:–** ಉತ್ತರವನ್ನು ನೀಡಲಿ ಅಲ್ಲವೇ?

**ಶ್ರೀ ಆರ್.ಬಿ.ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ನಾನು ಎರಡು ನಿಮಿಷದೊಳಗೆ ಮುಗಿಸುತ್ತೇನೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿಯಲ್ಲಿ ಗಲಭೆ ಪ್ರಕರಣಗಳಾಗಿದ್ದು.....

**ಶ್ರೀ ಸುನೀಲ್ ವಲ್ಯಾಪುರೆ:–** ನಿಮ್ಮ ಪಕ್ಷದ ದಲಿತರೊಬ್ಬರು ಮಾತನಾಡುತ್ತೇನೆಂದು ಕೇಳುತ್ತಿದ್ದಾರೆ. ಅವರು ಮಾತನಾಡಲಿಕ್ಕೆ ಅವಕಾಶ ಕೊಡಿ. ದಲಿತರಿಗೆ ಕೊಡತಕ್ಕಂತಹ ಗೌರವವನ್ನು ಇಲ್ಲಿಯೇ ತೋರಿಸುತ್ತಿದ್ದಾರೆ.

**ಸಭಾಪತಿಯವರು:–** ಒಂದು ನಿಮಿಷ, ಮಾನ್ಯ ತಿಮ್ಮಾಪುರ ಅವರು ಮುಗಿಸಿಬಿಡಲಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಜನತೆಗೆ ಏನು ಸಂದೇಶ ರವಾನೆಯಾಗುತ್ತಿದೆ? ಒಬ್ಬ ಶಾಸಕನ ಮನೆಯನ್ನು ಧ್ವಂಸ ಮಾಡಿದ್ದಾರೆಂದರೆ ಗ್ರಾಮೀಣ ಭಾಗದಲ್ಲಿ ಭಯ ಹುಟ್ಟಿಕೊಂಡಿದೆ. ಈ ಸರ್ಕಾರದಲ್ಲಿ ನಮ್ಮ ರಕ್ಷಣೆಯನ್ನು ಮಾಡುವವರು ಯಾರು? ದಲಿತ ಶಾಸಕರ ಮನೆಯನ್ನು ಸುಟ್ಟುಹಾಕುತ್ತಿದ್ದಾರೆಂಬ ಭಯದ ವಾತಾವರಣ ಸೃಷ್ಟಿಯಾಗಿದೆ. ಅದಕ್ಕೆ ಪೂರಕವಾಗಿ ಇಂದು ನಾವು ಹಳ್ಳಿಗಾಡಿನಲ್ಲಿ ನೋಡುತ್ತಿದ್ದೇವೆ. ಎಷ್ಟು ಜನ ದಲಿತರ ಮೇಲೆ ಅನ್ಯಾಯವಾಗುತ್ತಿದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಉದಾಹರಣೆಯನ್ನು ಹೇಳುವುದಾದರೆ ಒಬ್ಬ ದಲಿತ ಪತ್ರಕರ್ತನನ್ನು ಜಮಖಂಡಿಯಿಂದ ರಾತ್ರಿ 2 ಗಂಟೆಗೆ ಅರೆಸ್ಟ್ ಮಾಡಿಕೊಂಡು ಬರುತ್ತಾರೆ. ಪೊಲೀಸರೇ ದಲಿತರನ್ನು ಧ್ವಂಸ ಮಾಡಬೇಕೆಂಬ ರೀತಿಯಲ್ಲಿ ನಡೆದುಕೊಂಡರೆ ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಹೇಳಬೇಕಲ್ಲವೆ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅವರೇ ಇರುವುದು. ಯಾವಾಗ ಮಾತನಾಡಬೇಕೋ ಆಗ ಮಾತನಾಡಲಿಲ್ಲ. ಅವರ ಮನೆಗೆ ಬೆಂಕಿ ಹಚ್ಚಿದಾಗ ಮಾತನಾಡಲಿಲ್ಲ. ಅವರ ಮೇಲೆ ಗಲಾಟೆಗಳಾದಾಗ ಮಾತನಾಡಲಿಲ್ಲ.

ಮಾನ್ಯ ತಿಮ್ಮಾಪುರ ಅವರೇ, ಈಗ ಸದನದಲ್ಲಿ ಮಾತನಾಡುತ್ತಿದ್ದೀರಾ? ಈ ನಾಟಕ ಏಕೆ ಬೇಕು? ಮಾನ್ಯ ಅಖಂಡ ಶ್ರೀನಿವಾಸಮೂರ್ತಿಯವರ ಮನೆಗೆ ನೀವು ಹೋಗಿದ್ದೀರಾ? ಆಗ ಮಾತನಾಡಿದ್ದಿರಾ? ಸದನದಲ್ಲಿ ನಾಟಕ ಮಾಡುತ್ತಿದ್ದೀರಾ? ನಾಟಕ ಮಾಡಿಕೊಂಡು ಕಾಲ ಕಳೆಯುತ್ತಿದ್ದೀರಾ? ಏಕೆಂದರೆ ಅಲ್ಲಿಗೆ ಹೋಗಿದ್ದರೆ ನಿಮಗೆ ವೋಟು ಹೋಗುತ್ತಿತ್ತು. ಒಂದು ವೋಟಿಗೋಸ್ಕರ ನಿಮ್ಮ ಪಕ್ಷದ ಶಾಸಕರನ್ನು ನೀವು ರಕ್ಷಣೆ ಮಾಡಲಿಲ್ಲ. ಅತ್ಯಂತ ಹೆಚ್ಚು ದಲಿತ ಶಾಸಕರು ನಮ್ಮ ಪಕ್ಷದಲ್ಲಿದ್ದಾರೆ. ನಿಮ್ಮ ನಾಟಕವನ್ನು ನಿಲ್ಲಿಸಿ. ನಿಮ್ಮ ಮೊಸಳೆ ಕಣ್ಣೀರನ್ನು ನಿಲ್ಲಿಸಿ. ಅವರ ಮೇಲೆ ಹಲ್ಲೆಯಾದಾಗ ಹೋಗಲಿಲ್ಲ. ಈಗ ಇಲ್ಲಿ ಬಂದು ನಾಟಕವಾಡುತ್ತಿದ್ದಾರೆ. ಸುಮ್ಮನೆ ನಾಟಕ ಮಾಡಿಕೊಂಡು ಕಾಲವನ್ನು ಕಳೆಯುತ್ತಾ ಸದನದ ಸಮಯ ವ್ಯರ್ಥ ಪಡಿಸುತ್ತಿದ್ದೀರಾ? ನಾಟಕ ಮಾಡಲು ಮುಖಕ್ಕೆ ಬಣ್ಣ ಹಚ್ಚಿಕೊಳ್ಳುವ ಬದಲು ನಾಲಿಗೆಗೆ ಬಣ್ಣ ಹಚ್ಚಿಕೊಂಡಿದ್ದೀರಾ, ನಾಟಕ ಮಾಡುತ್ತೀರಾ?

**ಶ್ರೀ ಆರ್.ಬಿ.ತಿಮ್ಮಾಪುರ:-** ದಲಿತ ಶಾಸಕರ ಮನೆಯನ್ನು ಸುಟ್ಟು ಹಾಕುತ್ತಾರೆ. ಅವರಿಗೆ ಯಾವ ರಕ್ಷಣೆಯನ್ನೂ ನೀಡಲಾಗಿರುವುದಿಲ್ಲ. ಇದರ ಹೊಣೆ ಯಾರ ಮೇಲಿದೆ? ಕೇವಲ ಕೋಮುವಾದಿಗಳ ಬಗ್ಗೆ ಅಷ್ಟೇ ಮಾತನಾಡುತ್ತಾರೆ. ಇದೆಲ್ಲಾ ನಾಟಕ ನಡೆಯುವುದಿಲ್ಲ. ದಲಿತರಿಗೆ ರಕ್ಷಣೆಯನ್ನು ಕೊಡದ ಈ ಸರ್ಕಾರವೇ ಇದರ ಹೊಣೆಯನ್ನು ಹೊರಬೇಕು. ದಲಿತ ಶಾಸಕರ ರಕ್ಷಣೆ ಮಾಡುವ ಯೋಗ್ಯತೆ ಈ ಸರ್ಕಾರಕ್ಕಿಲ್ಲ. ದಲಿತ ಶಾಸಕರ ಮನೆಯನ್ನು ಧ್ವಂಸ ಮಾಡಿದಂತಹ ಜವಾಬ್ದಾರಿಯನ್ನು ಈ ಸರ್ಕಾರ ಹೊರಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ.ತಿಮ್ಮಾಪುರ:-** ಪೊಲೀಸ್ ಇಲಾಖೆಯನ್ನು ಬಳಸಿಕೊಂಡು ದಲಿತರನ್ನು ಧ್ವಂಸ ಮಾಡಬೇಕೆಂದು ಹೊರಟಿದ್ದೀರಿ. ಇದು ಸಾಧ್ಯವಿಲ್ಲ. ನಿಮ್ಮ ನಾಟಕ ಇಡೀ ರಾಜ್ಯದ ಜನತೆಗೆ ತಿಳಿದಿದೆ. ಇಂತಹ ಸರ್ಕಾರಕ್ಕೆ ನನ್ನ ಧಿಕ್ಕಾರವಿರಲಿ.

**ಸಭಾಪತಿಗಳು:-** ಸಾಕು ನಿಲ್ಲಿಸಿ.

**ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ಗಲಭೆ ಪ್ರಕರಣಗಳು ಸಂಭವಿಸಿದ ಪ್ರದೇಶದಲ್ಲಿಯೇ ನಾನು ವಾಸಿಸುತ್ತಿದ್ದೇನೆ.

**(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆಡಿ(ಎಸ್)ನ ಸದಸ್ಯರು ಗುಂಪುಗೂಡಿ ಮಾತನಾಡುತ್ತಿದ್ದರು.)**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಸದನ ನಡೆಯುತ್ತಿರುವಾಗ ಇವರೆಲ್ಲಾ ಹೀಗೆ ಮಾತನಾಡುತ್ತಿದ್ದರೆ ನಮ್ಮ ಕಥೆಯೇನು?

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ parallel ಆಗಿ ಇನ್ನೊಂದು ಸಭೆ ನಡೆದಿದೆ. ಸದನದಲ್ಲಿ ಮತ್ತೊಂದು ಸದನ! ಎಂತದು ಇದು ಮಾರಾಯ್ರೆ?

**ಶ್ರೀ ಆರ್.ಅಶೋಕ್:-** ದಯವಿಟ್ಟು ಎಲ್ಲಾ ಸದಸ್ಯರು ಕುಳಿತುಕೊಂಡರೆ ನಾವು ಏನಾದರೂ ಉತ್ತರವನ್ನು ಕೊಡಬಹುದು.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಚಿವರೇ, ಒಂದು ನಿಮಿಷ ನಾನು ಮುಗಿಸಿಬಿಡುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ನಾರಾಯಣಸ್ವಾಮಿಯವರೇ, ಅವರಿಗೆ ಪಕ್ಷದ ಹೈಕಮಾಂಡ್ ಇದೆ. ಅವರು ಏನು ಹೇಳಿದರೆ ಹಾಗೆ ಮಾಡುತ್ತಾರೆ ಬಿಡಿ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿಯಲ್ಲಿ ಗಲಭೆ ನಡೆದ ಪ್ರದೇಶವು ಸರ್ವಜ್ಞನಗರ ಮತ್ತು ಪುಲಕೇಶಿನಗರ ವಿಧಾನಸಭಾ ವ್ಯಾಪ್ತಿಗೆ ಬರುತ್ತದೆ. ನಾನೂ ಸಹ ಆ ಪ್ರದೇಶದಲ್ಲಿಯೇ ವಾಸಿಸುತ್ತಿದ್ದೇನೆ. ನನ್ನ ಮನೆಯಿರುವ ಪಕ್ಕದ ರಸ್ತೆಯಲ್ಲಿಯೇ ಈ ಗಲಭೆ ಆಗಿದೆ. ಸರ್ವಜ್ಞ ನಗರ ಮತ್ತು ಪುಲಕೇಶಿನಗರ ವಿಧಾನ ಸಭಾ ಕ್ಷೇತ್ರಗಳೆರಡಕ್ಕೂ ಸಂಬಂಧಿಸಿದಂತೆ ಒಂದು ಪೊಲೀಸ್ ಠಾಣೆ ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರಕ್ಕೆ ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನೊಂದು ಪೊಲೀಸ್ ಠಾಣೆ ಪುಲಕೇಶಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಈ ಭಾಗದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರು ವಾಸಿಸುತ್ತಿದ್ದಾರೆ. ಇಡೀ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ಗಲಭೆ ಪ್ರಕರಣದಲ್ಲಿ ಆದಂತೆ ಪೊಲೀಸ್ ಠಾಣೆಗೆ ಬೆಂಕಿ ಹಚ್ಚುವ ಕೆಲಸ ಯಾವತ್ತೂ ಆಗಿರಲಿಲ್ಲ. ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದ ಅಥವಾ ಅಲ್ಲಿನ ದಲಿತ ಶಾಸಕರ ಮನೆಗೆ ಬೆಂಕಿ ಹಚ್ಚಿದ ಕಿಡಿಗೇಡಿಗಳು ಯಾರೇ ಇರಲಿ, ಕಾನೂನನ್ನು ಕೈಗೆತ್ತಿಕೊಂಡವರು ಯಾರೇ ಆಗಿದ್ದರೂ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ಜರುಗಿಸಬೇಕು. ಅದಕ್ಕೆ ನಮ್ಮ ತಕರಾರು ಏನೂ ಇಲ್ಲ. ಆದರೆ ಇಲ್ಲಿ ಅಪರಾಧಿಗಳೆಂದು ಸುಮಾರು 400ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದ್ದು, ಅದರಲ್ಲಿ ಕೆಲವರು ಅಮಾಯಕರಿದ್ದಾರೆ. ಯಾರು ಆ ಗಲಭೆಯಲ್ಲಿ ಪಾಲುದಾರರಾಗಿದ್ದರು, ಯಾರು ಆಗಿರಲಿಲ್ಲ ಎಂಬುದು ನನಗೂ ಸಹ ಗೊತ್ತಿದೆ. ಅವರ ಹೆಸರನ್ನೂ ಸಹ ಹೇಳುತ್ತೇನೆ.

**ಶ್ರೀ ಸುನಿಲ್ ವಲ್ಯಾಪುರೆ:-** ಮಾನ್ಯ ಶಾಸಕರೇ, ನಿಮಗೆ ತಿಳಿದಿದ್ದರೆ ದಯವಿಟ್ಟು ಹೇಳಿ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು ಹೇಳುವುದನ್ನು ಪೂರ್ಣವಾಗಿ ಕೇಳಬೇಕು. ಆಮೇಲೆ ಮಾತನಾಡಲು ಹೇಳಿ. ಸುಮ್ಮನೆ ಮಧ್ಯದಲ್ಲಿ ಏಕೆ ಸಮಯವನ್ನು ವ್ಯರ್ಥ ಮಾಡುತ್ತಾರೆ. ಪೂರ್ಣವಾಗಿ ಕೇಳಲಿ. ಅಲ್ಲಿ ನಾನು ವಾಸಿಸುತ್ತಿರುವವನು. ಸುಮ್ಮನೆ ಪ್ರತಿಬಾರಿಯೂ ಅಡ್ಡಿಪಡಿಸುತ್ತಾರೆ.

**ಶ್ರೀ ಸುನಿಲ್ ವಲ್ಯಾಪುರೆ:-** ಯಾರು ಅಪರಾಧಿಗಳು, ಯಾರು ನಿರಪರಾಧಿಗಳು ಎಂದು ತಿಳಿದಿದೆ ಎಂದು ಹೇಳಿದಿರಲ್ಲ. ಅದಕ್ಕೆ ಕೇಳಿದೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ನಾವು ಹೇಳುವವರೆವಿಗೂ ಸುಮ್ಮನಿರಬೇಕಲ್ಲ. ಅಲ್ಲಿ ವಾಸ ಮಾಡದಿರುವವರು ಕೆಲವರು ಕಾಕ್ಸ್‌ಟೌನ್‌ನಲ್ಲಿ ಮನೆಯಿರುವವರು, ಅಲ್ಲಿರುವ ಹೆಚ್‌ಕೆಬಿಕೆ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವವರು ವಿಶೇಷ ತರಗತಿಗಳಿಗೆ ಹೋಗುತ್ತಿರುವ ಸಂದರ್ಭದಲ್ಲಿ ಬಂಧಿಸಲ್ಪಟ್ಟಿದ್ದಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(950) 11.30 26.9.2020 KG RN**

**ಶ್ರೀ ಹೆಚ್.ಎಂ.ರಮೇಶ್ ಗೌಡ (ಮುಂದು.,):-**

ಮಾನ್ಯ ಸಭಾಪತಿಯವರೇ, ನೂರು ಜನ ಅಪರಾಧಿಗಳು ತಪ್ಪಿಸಿಕೊಂಡರೂ ಸಹ, ಒಬ್ಬ ನಿರಾಪರಾಧಿಗೆ ಶಿಕ್ಷೆ ಆಗಬಾರದು ಎನ್ನುವಂತಹ ಸಿದ್ಧಾಂತ ಇದೆ. ಪೊಲೀಸ್ ಠಾಣೆಗೆ ಯಾರು ನಿಜವಾಗಲೂ ಬೆಂಕಿ ಹಚ್ಚಿದ್ದಾರೆ, ಅವನ್ನು ಅರೆಸ್ಟ್ ಮಾಡಲಿ. ಆದರೆ, ಬಂಧನ ಮಾಡಿರುವಂತಹ ಅಮಾಯಕ ವಿದ್ಯಾರ್ಥಿಗಳನ್ನು ಬಿಡುಗಡೆಗೊಳಸಬೇಕಾಗಿರುತ್ತದೆ. ಹಾಗಾಗಿ, ನನ್ನ interest ಏನೆಂದರೆ, ತನಿಖೆ ಮಾಡಿರುವಂತಹ ಪೊಲೀಸ್ ಅಧಿಕಾರಿಗಳಲ್ಲಿ ನಿಷ್ಠಾವಂತ ಪೊಲೀಸ್ ಅಧಿಕಾರಿಗಳು ಇದ್ದಾರೆ, ಆದರೆ, ನಿರಾಪರಾಧಿಗಳನ್ನು ಬಂಧನ ಮಾಡಿದ್ದಾರೆಂದು ಏನು ಸುದ್ದಿ ಇದೆ, ಅವನ್ನು sitting High Court Judge ರವರಿಂದ ಈ ಪ್ರಕರಣವನ್ನು ತನಿಖೆ ಮಾಡಬೇಕಾಗುತ್ತದೆ. ನಮ್ಮ ಪಕ್ಷದ ನಿಲುವು ಏನೆಂದರೆ, ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ಗಲಭೆಯ ಪ್ರಕರಣ ಏನಿದೆ, ಅದನ್ನು sitting High Court Judge ರವರಿಂದ ತನಿಖೆ ಮಾಡಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಅಗ್ರಹ ಮಾಡುತ್ತೇನೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ವಿರೋಧ ಪಕ್ಷದ ಬಹಳಷ್ಟು ನಾಯಕರು ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿಯ ಗಲಭೆ ಪ್ರಕರಣದ ಬಗ್ಗೆ ಸವಿಸ್ತಾರವಾಗಿ ಮಾತನಾಡಿದ್ದಾರೆ. ಮೊದಲನೆಯದಾಗಿ, ಸರ್ಕಾರ ಮತ್ತು ಪೊಲೀಸ್ ಇಲಾಖೆ ಈ ಸಂದರ್ಭದಲ್ಲಿ ಸ್ಪಷ್ಟವಾದಂತಹ ನಿಲುವನ್ನು ತೆಗೆದುಕೊಂಡು ಕಾನೂನನ್ನು ರಕ್ಷಣೆ ಮಾಡುವಂತಹ ಕೆಲಸವನ್ನು ಮಾಡಿದೆ. ಕಾನೂನಿನ ವಿರುದ್ಧವಾಗಿ ಯಾರ್ಯಾರು ತಪ್ಪು ಕೆಲಸಗಳನ್ನು ಮಾಡಿದ್ದಾರೆ, ಅವರ ಎಡೆಮುರಿಯನ್ನು ಕಟ್ಟಿ ಜೈಲಿಗೆ ಕಳುಹಿಸುವಂತಹ ಕೆಲಸವನ್ನು ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಹಿಂದೆ ನೋಡಿದ್ದೇವೆ, Nuxel and terrorist ಗಳು ಇವರೆಲ್ಲರೂ ಮೊದಲು ಪೊಲೀಸ್ ಠಾಣೆಗಳನ್ನು ಸುಡುತ್ತಿದ್ದರು. ಅವರು ಮೊದಲು ಪೊಲೀಸ್‌ರನ್ನೇ ಸಾಯಿಸುವುದಕ್ಕೆ ಹೋಗುತ್ತಿದ್ದರು. ಆ ರೀತಿಯ ಒಂದು ಘಟನೆ, ಬೆಂಗಳೂರಿನಲ್ಲಿ ನಡೆದಿದೆ. ನವೀನ್ ಎಂಬ ಹುಡುಗ ಶಾಸಕರ ಬಾಮ್ಮೈದುನ. ಈತ Face Book ನಲ್ಲಿ Mohammed Paigambar ನ ಬಗ್ಗೆ ವಿರುದ್ಧವಾದಂತಹ ಹೇಳಿಕೆಯನ್ನು ಹಾಕಿದ್ದಾನೆ. ಈ ರೀತಿ Face

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Book ನಲ್ಲಿ ಹಾಕಿದ್ದಾರೆಂದು, ಅಂದು ಸಂಜೆ 7.45 ದೂರನ್ನು ನೀಡಿದ್ದಾರೆ. ಅಂದೇ ರಾತ್ರಿ 8.30 ಗಂಟೆಗೆ ಪೊಲೀಸರು ಆ ವ್ಯಕ್ತಿಯನ್ನು ಪತ್ತೆ ಮಾಡಿ ಬಂಧಿಸುವಂತಹ ಕೆಲಸವನ್ನು ಮಾಡಿದ್ದಾರೆ. ಇದರಲ್ಲಿ ಪೊಲೀಸರದ್ದು ತಪ್ಪಾಗಿದೆ ಎನ್ನುವಂಥದ್ದು ಏನಿಲ್ಲ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದಂತಹ ವಿಷಯ ಏನೆಂದರೆ, ಇದನ್ನು Face Book ನಲ್ಲಿ ಹಾಕಿದಂತಹ ತಕ್ಷಣ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನರು ಹೇಗೆ ಸೇರುತ್ತಾರೆ ಎನ್ನುವುದೇ ನಮ್ಮ ಮುಂದೆ ಇರುವಂತಹ ದೊಡ್ಡ ಪ್ರಶ್ನೆ. ಎಷ್ಟು ಬೇಗ ಈ ತರಹದ ಗೂಂಡಾಗಳು, ಮಾಫಿಯಾಗಳು ಅರ್ಧಗಂಟೆಯಲ್ಲಿ ಅಲ್ಲಿಗೆ ಸಾವಿರಾರು ಜನರು ಜಮಾಯಿಸಿ ಒಂದು ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದ್ದಾರೆ. ನಾನು ಸಹ ರಾತ್ರಿ 12.00 ಗಂಟೆಗೆ ಅಲ್ಲಿಗೆ ಹೋಗಿದ್ದೆ. ಇಡೀ ಪೊಲೀಸ್ ಠಾಣೆಯ ಕೆಳಗಡೆ ಇದ್ದಂತಹ ಕಾರು, ಮೋಟಾರ್ ಬೈಕ್‌ಗಳು ಎಲ್ಲವನ್ನು ಸುಟ್ಟು ಹಾಕಿದ್ದಾರೆ. ನಾವು ಇದನ್ನು ಕಾನೂನನ್ನು ಭಂಗ ಮಾಡಿದ್ದಾರೆಂದು ಹೇಳಲಿಲ್ಲವೆಂದರೆ, ಅದು ಬಹಳ ತಪ್ಪಾಗುತ್ತದೆ. ಈ ಘಟನೆಯಲ್ಲಿ ಬಹಳಷ್ಟು ಜನ ಅಮಾಯಕರನ್ನು ಒಳಗೆ ಹಾಕಿದ್ದಾರೆ, ಪಾಪ ಅವರನ್ನು ಬಂಧಿಸಿದ್ದಾರೆಂದು ಬಹಳಷ್ಟು ಜನ ಹೇಳುತ್ತಿದ್ದರು. ಘಟನೆ ನಡೆದ ದಿವಸ ರಾತ್ರಿ ಯಾರೋ ಹೋಗಿ ತರಕಾರಿ ತಂದಿದ್ದಂತಹ ವಿಷಯ ದಿನಪತ್ರಿಕೆಯಲ್ಲಿ ಬಂದಿತ್ತು. ಅಂದು ರಾತ್ರಿ 12.00 ಗಂಟೆಗೆ ಕೊತ್ತಂಬರಿ ಸೊಪ್ಪು ತರುವುದಕ್ಕೆ ಹೋಗಿದ್ದೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಅಂದು ರಾತ್ರಿ 12.00 ಗಂಟೆಗೆ ಕೊತ್ತಂಬರಿ ಸೊಪ್ಪು ತರುವುದಕ್ಕೆ ಹೋಗಿದ್ದೆ ಎಂದು ಹೇಳಿಕೆ ಕೊಟ್ಟಿದ್ದಾರೆಂದರೆ, ಇವರು ಎಷ್ಟು criminal ಗಳಿದ್ದಾರೆ, ಇವರು ಎಷ್ಟು ದೇಶದ್ರೋಹಿಗಳು ಇದ್ದಾರೆ. ಇಂಥವರನ್ನು ಬಿಟ್ಟರೆ, ನಮ್ಮ ದೇಶಕ್ಕೂ ಅಪಾಯ ನಮ್ಮ ರಾಜ್ಯಕ್ಕೂ ಅಪಾಯ. ನಾನು ಇದನ್ನು ತೆಗಳುವುದಕ್ಕೆ ಹೋಗುವುದಿಲ್ಲ,

ಮಾನ್ಯ ಸಭಾಪತಿಯವರೇ, ಮೈಸೂರಿನಲ್ಲಿ ಒಬ್ಬ ಶಾಸಕರ ಮೇಲೆ ಒಂದು ಘಟನೆ ನಡೆದಿತ್ತು. ಅವರನ್ನು ಕೊಲೆ ಮಾಡಬೇಕೆಂದು ಹೊಡೆದಿದ್ದಾರೆ. ಕತ್ತನ್ನು ಕತ್ತರಿಸಬೇಕೆಂದು Popular Front of India, Karnataka Forum for Dignity, ಇವರಿಗೆಲ್ಲರಿಗೂ train up ಮಾಡುತ್ತಾರೆ. ಅವರಿಗೆ ಅರಣ್ಯ ಪ್ರದೇಶಗಳಲ್ಲಿ ನಾಯಿಗಳನ್ನು ಕಟ್ಟುಬಿಟ್ಟು ಅವರು ಬೈಕಿನಲ್ಲಿ ಹೋಗುತ್ತಾ, ಹೋಗುತ್ತಾ ನಾಯಿಯ ಕತ್ತನ್ನು ಕಟ್ ಮಾಡಬೇಕು. ಈ ರೀತಿ ಅವರಿಗೆ ತರಬೇತಿ ಕೊಡುತ್ತಾರೆ. Ditto ಒಬ್ಬ ಮೈಸೂರು ಶಾಸಕರ ಮೇಲೆ ರಾಜಾರೋಷವಾಗಿ attack ಮಾಡುತ್ತಾರೆ. ಶಾಸಕರ ಅಪ್ಪ ಅಮ್ಮನವರ ಪುಣ್ಯದಿಂದ ಸ್ವಲ್ಪದಲ್ಲಿಯೇ ಅವರು ಪ್ರಾಣ ಅಪಾಯದಿಂದ ಉಳಿದುಕೊಳ್ಳುತ್ತಾರೆ. ಇಲ್ಲದಿದ್ದರೆ, ಅವತ್ತು ಆ ಶಾಸಕರು ಸತ್ತು ಹೋಗಬೇಕಾಗಿತ್ತು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಅವರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

target ಒಂದು party. ಆ party ಇದ್ದರೆ, ಎಲ್ಲಿಯವರೆಗೂ ನಾವು majority ಆಗಲ್ಲ ಆ ಕ್ಷೇತ್ರದಲ್ಲಿ, ಒಂದು ಕ್ಷೇತ್ರದಲ್ಲಿ ನಮ್ಮ ಶಕ್ತಿ fulfil ಆದ ತಕ್ಷಣವೇ ನಮಗೆ ಅಲ್ಲಿಂದ ಆ party ಅನ್ನು ಆಚೆ ಹಾಕಬೇಕು. ಆ party ಅನ್ನು ತೆಗೆದು ಹಾಕಿಬಿಡಬೇಕು. ನಾವು ಅಲ್ಲಿ KFD, PFI ನವರು MLA ಆಗಬೇಕು. ನಾವು ಬರುವುದಕ್ಕಿಂತ ಮುಂಚೆ ಅವರೇ ಇರಬೇಕು. ಎರಡನ್ನು ಯಾವ ರೀತಿ select ಮಾಡಿಕೊಂಡಿದ್ದಾರೆ ಎಂದರೆ, ಮೈಸೂರಿನಲ್ಲಿ select ಮಾಡಿಕೊಂಡಿರುವುದು ಒಂದೇ party. ಬೆಂಗಳೂರಿನಲ್ಲಿ select ಮಾಡಿಕೊಂಡಿರುವುದು ಒಂದು party. ಈ ಎರಡೂ ಒಂದೇ party. ಇದು ಹೈದರಾಬಾದ್ ತರಹ, ಹೈದಾರಬಾದ್‌ನಲ್ಲಿ ಇದೇ ತರಹ ಮಾಡಿ ಮಾಡಿ, ಈಗ ಅಲ್ಲಿ ಒಂದು ಸಂಘಟನೆ ಮುಂದೆ ಬಂದಿದೆ. ಅವರ target ಆ ರೀತಿ ಇದೆ. ನಾವು ಬರುವವರೆಗೂ ಇವರು ಇರಬೇಕು, ನಾವು majority ಆದ ತಕ್ಷಣ, ಇವರು ಆಚೆ ಹೋಗಬೇಕು. ನಾವು ಅಲ್ಲಿ ಕುಳಿತುಕೊಳ್ಳಬೇಕು. ಇಲ್ಲಿ ನಡೆದಿರುವುದು ಅಷ್ಟೇ. ಬೇರೆ ಏನಿಲ್ಲ. ಈ ಘಟನೆಯಲ್ಲಿ ಇದನ್ನು ಬಿಟ್ಟರೆ, ಬೇರೆ ಏನಿಲ್ಲ. ಇದು ತಪ್ಪು.

ಮಾನ್ಯ ಸಭಾಪತಿಯವರೇ, ಹಿಂದು ಆಗಲಿ, ಕ್ರಿಶ್ಚಿಯನ್ ಆಗಲಿ, ಮುಸ್ಲಿಂ ಆಗಲಿ ಅಥವಾ ಪಾರ್ಸಿಯಾಗಲಿ ಯಾವುದೇ ಧರ್ಮವಾಗಲಿ, ಅವರವರಿಗೆ ಅವರ ದೇವರೆ ಬಹಳ ಪವಿತ್ರ. ಎಲ್ಲರೂ ultimate ಆಗಿ ತಪ್ಪು ಮಾಡಿದಾಗ, ಒಳ್ಳೆಯದು ಆದಾಗ ದೇವರನ್ನು ನೆನಪು ಮಾಡಿಕೊಳ್ಳುತ್ತಾರೆ. ಅವರವರ ಧರ್ಮವನ್ನು ಪಾಲನೆ ಮಾಡುವುದು ಅವರವರ ಇಷ್ಟ. ಅದು ಮಾಡಿಕೊಳ್ಳುವಂಥದ್ದು ಅವಶ್ಯಕತೆ ಇದೆ. ಅದನ್ನು ಮಾಡಿಕೊಳ್ಳಲಿ. ಈಗ ರಾಮನ ಬಗ್ಗೆಯೂ ಸಹ ನೂರೆಂಟು statement ಗಳು, Whatsup ಗಳಲ್ಲಿ ಬರುತ್ತವೆ. ಲಕ್ಷ್ಮಿಯ ಬಗ್ಗೆ ಸಹ ಬಂದಿದೆ. ಅಮೇರಿಕಾದಲ್ಲಿ ಚಪ್ಪಲಿಯ ಮೇಲೆ ಗಣೇಶನ ಚಿತ್ರವನ್ನು ಹಾಕಿದ್ದರು. Toilet ಗಳ ಮೇಲೆ ಗಣೇಶನ ಚಿತ್ರವನ್ನು ಹಾಕಿದ್ದರು. ಆಗ ಏನು ಆಗಲಿಲ್ಲವಲ್ಲ. ಆ ವ್ಯಕ್ತಿ ಈ ವಿಷಯನ್ನು Face Book ನಲ್ಲಿ ಹಾಕಿರುವುದು ದೊಡ್ಡ ಅಪರಾಧ. ಅದರ ಬಗ್ಗೆ ಪ್ರಶ್ನೆ ಇಲ್ಲ. ಅದರ ಬಗ್ಗೆ ಮಾತನಾಡುವಂತಿಲ್ಲ. ಇದಕ್ಕೆ ಅವರು ಪೊಲೀಸ್ ಠಾಣೆಯನ್ನು ಸುಟ್ಟರು? ಇದರಲ್ಲಿ ಪೊಲೀಸರು ಏನು ತಪ್ಪು ಮಾಡಿದ್ದರು? ಇವತ್ತು ನಮಗೆ gunman ಆಗುವುದಕ್ಕೆ ಪೊಲೀಸರು ಬೇಕು, ನಾವು ಹೋದ ಕಡೆಗೆಲ್ಲಾ security ಕೊಡುವುದಕ್ಕೆ ಪೊಲೀಸರು ಬೇಕು. ಎಲ್ಲದಕ್ಕೂ ಪೊಲೀಸರು ಮುಂದೆ ನಿಂತುಕೊಳ್ಳಬೇಕು. ಆ ಮೇಲೆ ನಾವು ಹೋಗಬೇಕು. ಅಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೊಲೀಸ್ ಠಾಣೆಯನ್ನು ಸುಡುವುದಕ್ಕೆ ಹೋಗುವಂತಹದ್ದು, ಇಲ್ಲಿ ಪೊಲೀಸರು ಏನು ತಪ್ಪು ಮಾಡಿದ್ದಾರೆ? ರಾತ್ರಿ 7.45 ಗಂಟೆಗೆ ದೂರು ಬಂದಿದೆ. ಹಾಗೆಯೇ, ರಾತ್ರಿ 8.30 ಗಂಟೆಗೆ ಸಂಬಂಧಿಸಿದವರನ್ನು ಆರಸ್ಟ್ ಮಾಡಿದ್ದಾರೆ. ಇಷ್ಟು ಬೇಗ ಇದನ್ನು ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ನೀವು ಯೋಚನೆ ಮಾಡಿ. ಅವರು ಸರ್ಕಾರ ಮಾಡಿದ್ದಾರೆ. ನಾವು ಸರ್ಕಾರ ಮಾಡಿದ್ದೀವಿ. Complaint ಕೊಟ್ಟಾಗ ದಿನಗಟ್ಟಲೇ ಮಾಡಿದ್ದಾರೆ. ಅಂತಹದ್ದು ಪೊಲೀಸರು immediate ಆಗಿ action ತೆಗೆದುಕೊಂಡಿದ್ದಾರೆ.

ಮಾನ್ಯ ಹರಿಪ್ರಸಾದ್‌ರವರೇ, ನೋಡಿ ಇತಿಹಾಸದಲ್ಲಿ. ನಮ್ಮ ಬೆಂಗಳೂರು, ನಮ್ಮ ಬೆಂಗಳೂರೇ, ನಾನು ಇಲ್ಲಿ ಹುಟ್ಟಿ ಬೆಳೆದಿದ್ದೇನೆ. ಇಲ್ಲಿ ಬದುಕಿದ್ದೇನೆ, ನಾನು ಇಲ್ಲಿಯೇ ಸಾಯಬೇಕು. ನನಗೆ ಬೇರೆ ದಾರಿಯೇ ಇಲ್ಲ. ಒಬ್ಬ DCP (Deputy Commissioner of Police) ರವರನ್ನು ಪೊಲೀಸ್ ಠಾಣೆಯಲ್ಲಿಯೇ ಒಂದು ಕೊಠಡಿಯಲ್ಲಿ ಕೂಡಿ ಹಾಕಿ ಬೆದರಿಕೆ ಹಾಕುತ್ತಾರೆ ಎಂದರೆ, ಇವರು ಎಷ್ಟು ದೇಶ ದ್ರೋಹಿಗಳು ಇರಬೇಕು ಎನ್ನುವುದನ್ನು ಅರ್ಥ ಮಾಡಿಕೊಳ್ಳಿ. ಅವರು ಇಲ್ಲಿಯೇ ಕುಳಿತಿದ್ದಾರೆ. ಆ ಡಿಸಿಪಿಯವರು Commissioner ರವರಿಗೆ ಪೋನ್ ಮಾಡಿ ಈ ರೀತಿ ಕೂಡಿ ಹಾಕಿದ್ದಾರೆಂದು ಹೇಳಿದ್ದಾರೆ. ಆ ದಿವಸ Commissioner ನವರು Reserve Police ಗೋಸ್ಕರ ಹುಡುಕಾಡಿದ್ದಾರೆ. ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಮಾತನಾಡುವಾಗ, ನಾನು ಏನು ಮಾತನಾಡಲಿಲ್ಲ. ಸುಮ್ಮನೆ ಅವರು ಹೇಳಿದನ್ನೇಲ್ಲಾ ಕೇಳಿದ್ದೇನೆ. ಈಗ ಅವರು ಸುಮ್ಮನೆ ಮಾತನಾಡುತ್ತಿದ್ದಾರೆ.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮನ್ನು ಮಾತನಾಡುವುದಕ್ಕೆ ಬಿಟ್ಟಿಲ್ಲ. ಮಾನ್ಯ ಸಚಿವರು ಅವರು ಮಾತನಾಡಬೇಕಾದರೆ ಸುಮ್ಮನಿದ್ದು, ಈಗ ನಾನು ಏನು ಮಾತನಾಡಿದೆ ಎಂದು ಕೇಳಿದರೆ ಹೇಗೆ? ಮಾನ್ಯ ಸಚಿವರು ಅವರನ್ನು control ಮಾಡಬೇಕಾಗಿತ್ತು.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಈಗ ಅವರು ನನ್ನನ್ನು ಪ್ರಶ್ನೆ ಮಾಡುತ್ತಿದ್ದಾರೆ.

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, party is individual. ಮಾನ್ಯ ಸಚಿವರು ಅವರನ್ನೇ ಏಕೆ ಮಾಡಿದಿರಿ ಎಂದು ಕೇಳಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಆಯಿತು. ಅವರು ಮೂರು ಜನರು ಮಾತನಾಡುವಾಗ ನಾನು ಯಾವುದೇ objection ಮಾಡಿಲ್ಲ.

(ಮುಂದು.,)

(951)26-09-2020(11-40)ಎಂವಿ-ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ದೇಶದ್ರೋಹಿಗಳು ಯಾವುದೋ ಪಕ್ಷ SDPF (Social Democratic Party of India) and PDF (People's Democratic Front) ಎಂದು. ಅವರು ಅವುಗಳನ್ನು ಏಕೆ ban ಮಾಡಿಲ್ಲ. ಯಾರಾದರೂ ಅವರನ್ನು ban ಮಾಡಬಾರದು ಎಂದು ಹೇಳಿದ್ದಾರೆಯೇ? ಅವರನ್ನು ban ಮಾಡಬೇಕೆಂದು ನಾವು ಎಷ್ಟು ದಿವಸದಿಂದ ಕೇಳುತ್ತಿದ್ದೇವೆ. ದೇಶದ್ರೋಹಿ ಎನ್ನುವುದು ಬಹಳ ಗಂಭೀರವಾದ ಆರೋಪ. ಅವರ ಬಳಿ ಪೋಲೀಸ್ ಇಲಾಖೆ ಮತ್ತು ಗುಪ್ತಚಾರ ಇಲಾಖೆಯವರು ಇದ್ದಾರೆ. ಅವುಗಳ ಕಡೆಯಿಂದ ತಪ್ಪಿತಸ್ಥರನ್ನು ಗುರುತಿಸಿ, ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಿ. ಸುಮ್ಮನೆ ದೇಶದ್ರೋಹ, ದೇಶದ್ರೋಹ ಎಂದು ಹೇಳಿದರೆ. ಈಗ ಅವರು ಮಾತ್ರ ದೇಶ ಭಕ್ತರು, ನಾವುಗಳೆಲ್ಲಾ...

**ಡಾ॥ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ರೀತಿ ಯಾರೂ ಹೇಳಿಲ್ಲ. ಈಗ ಅವರು point of order ಹೇಳಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ದೇಶ ಪ್ರೇಮದ ಬಗ್ಗೆ ಚರ್ಚೆ ಮಾಡಲಿ. ಅವರು ಮಹಾತ್ಮ ಗಾಂಧಿಯನ್ನು ಕೊಂದವರು ಮತ್ತು ಸಂವಿಧಾನವನ್ನು ಬದಲಾವಣೆ ಮಾಡುವುದಕ್ಕೆ ನೋಡುತ್ತಿದ್ದಾರೆ. ಅವರು ದೇಶ ಭಕ್ತರಂತೆ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವರು ಕೋಮುಗಲಭೆಯನ್ನು ಬಿಟ್ಟು, ಸರ್ಕಾರದ ಬದ್ಧತೆಯನ್ನು ತೋರಿಸಲಿ. ಅಧಿಕಾರದಲ್ಲಿ ಇರುವಂತಹವರು ಇಂತಹವುಗಳನ್ನು ಮಾಡಿದ್ದಾರೆ. ಅವರು ಇಂತಹವುಗಳನ್ನು ಮಾಡಿದ್ದೇವೆ ಎಂದು ಹೇಳುವುದು ಬಿಟ್ಟು, ಇಲ್ಲಿ ರಾಜಕೀಯದ ಮಾತುಗಳನ್ನು ಮಾತನಾಡುತ್ತಿದ್ದಾರೆ. ಅವರು ಏನಾದರೂ ಸಂಚು ಮಾಡುತ್ತಿದ್ದಾರೆಯೇ? ತಪ್ಪಿತಸ್ಥರನ್ನು ಅರೆಸ್ಟ್ ಮಾಡಿ, ಅವರ ಸರ್ಕಾರದ ಬದ್ಧತೆಯನ್ನು ತೋರಿಸಲಿ.

**(ಗೊಂದಲ)**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಅಲ್ಲಿ ಒಟ್ಟು 72 ಪ್ರಕರಣಗಳು ದಾಖಲಾಗಿವೆ. ಅದರಲ್ಲಿ 421 ಆರೋಪಿಗಳನ್ನು ಬಂಧಿಸಲಾಗಿದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅದರಲ್ಲಿ 21 ಜನ ಅಮಾಯಕರೇ ಇದ್ದಾರೆ. ಅವರ ಹೆಸರು ಸಮೇತ ಮಾಹಿತಿಯನ್ನು ನೀಡುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಠಾಣೆಗೆ ಅಟ್ಯಾಕ್ ಮಾಡಿದ ಎರಡು ಪ್ರಕರಣಗಳನ್ನು ತನಿಖೆಗೆ ಕೈಗೊಳ್ಳಲಾಗಿದೆ. ಪೊಲೀಸರು ಸೂಕ್ತ ಕ್ರಮಗಳನ್ನು ಕೈಗೊಂಡು, ಮೂರು ಗಂಟೆಯ ಒಳಗೆ ಎಲ್ಲರನ್ನು ಹತೋಟಿಗೆ ತರುವಂತಹ ಕೆಲಸವನ್ನು ಮಾಡಿದ್ದಾರೆ. ಈಗಾಗಲೇ ಹೇಳಿರುವಂತೆ 72 ಪ್ರಕರಣಗಳು ದಾಖಲಾಗಿದೆ. ಯಾರ್‍ಯಾರು ಅಪರಾಧಿಗಳು ಇದ್ದಾರೆ, ಅವರಿಗೆ ಕಠಿಣ ಶಿಕ್ಷೆ ಆಗುವಂತೆ ಮಾಡುತ್ತೇವೆ. ಇನ್ನೊಂದು ಬಾರಿ ಪೊಲೀಸ್ ಸ್ಟೇಷನ್ ಮೇಲೆ ಅಟ್ಯಾಕ್ ಮಾಡುವಂಥದ್ದು ಈಗ ಸುಮಾರು ಹತ್ತು ಕೋಟಿಗೂ ಹೆಚ್ಚು ಆಸ್ತಿಗಳನ್ನು loss ಮಾಡಿದ್ದಾರೆ. ಸುಮಾರು 164 ವಾಹನಗಳಿಗೆ damage ಮಾಡಿದ್ದಾರೆ. ಸುಮಾರು 91 ಪೊಲೀಸ್ ಸಿಬ್ಬಂದಿಗಳಿಗೆ ಹೊಡೆದಿದ್ದಾರೆ. ಇಷ್ಟೆಲ್ಲಾ ಆದಮೇಲೂ ಕೂಡ ಅವರನ್ನು ಅಮಾಯಕರು ಮತ್ತು ಪಾಪ ಏನೂ ಗೊತ್ತಿಲ್ಲ ಎನ್ನುವುದು ಎಂದರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, sitting Judge ಅವರಿಂದ ತನಿಖೆ ಆಗಬೇಕು. ಅವರು ಅದರ ಬಗ್ಗೆ ಹೇಳಲಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಅವರು ಅರೆಸ್ಟ್ ಮಾಡಿರುವವರಲ್ಲಿ ಅಮಾಯಕರು ಸಹ ಇದ್ದಾರೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಅಪರಾಧಿಗಳಿಗೆ ಕಠೋರವಾದ ಕಠಿಣ ಶಿಕ್ಷೆ ನೀಡಲಿ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಕೊತ್ತಂಬರಿ ಸೊಪ್ಪು ಖರೀದಿಯ ಬಗ್ಗೆ ಹೇಳಿದ್ದೇನೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ಹಾಳು ಮಾಡಿದ್ದಾರೆ. ಅಲ್ಲಿ ಏನಾಗಿದೆ ಎಂದು ನನಗೆ ಗೊತ್ತು. 400 ಜನ ಅಪರಾಧಿಗಳಲ್ಲಿ 20 ಜನ ನಿರಪರಾಧಿಗಳಿದ್ದಾರೆ. ನಾನು ಅವರ ಹೆಸರುಗಳನ್ನು ಕೊಡುತ್ತೇನೆ. ಆದರೆ, ನಿರಪರಾಧಿಗಳಿಗೆ ಶಿಕ್ಷೆ ಆಗಬಾರದು ಎಂಬುದು ನಮ್ಮ ಅಭಿಪ್ರಾಯ. ಯಾರು ಅಪರಾಧಿಗಳು ಇದ್ದಾರೆ ಅವರಿಗೆ ಏನು ಬೇಕಾದರು ಮಾಡಲಿ.

**(ಗೊಂದಲ)**

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಹೆಚ್.ಎಂ.ರಮೇಶ್‌ಗೌಡರು ನೀಡಿರುವಂತಹ ಸಲಹೆಯನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಪೊಲೀಸ್ ಠಾಣೆಯ ಮೇಲೆ ಅಟ್ಯಾಕ್ ಮಾಡಿದವರ ಮೇಲೆ ಕಠೋರವಾದ ಕ್ರಮಗಳನ್ನು ಕೈಗೊಳ್ಳುತ್ತೇವೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ನಾವು ಪೊಲೀಸ್ ಠಾಣೆಯಲ್ಲಿ ಅಟ್ಯಾಕ್ ಮಾಡಿದವರನ್ನು ರಕ್ಷಣೆ ಮಾಡಿ ಎಂದು ಹೇಳುತ್ತಿಲ್ಲ. ಮುಂದೆ ಯಾವೊತ್ತು ಕೂಡ ಇತಿಹಾಸದಲ್ಲಿ ಇಂತಹ ಘಟನೆ ಆಗಬಾರದು. ಆದರೆ, ಅಮಾಯಕರಿಗೆ ಶಿಕ್ಷೆ ಆಗಬಾರದು ಅಷ್ಟೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**19.ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಭೂ ಸುಧಾರಣಾ ಕಾಯ್ದೆ 1960 ಏನಿದೆ, ಅದಕ್ಕೆ ಬದಲಾವಣೆ ಮಾಡಿ, 79(ಎ) ಮತ್ತು 79(ಬಿ) ಯನ್ನು ತೆಗದು ಹಾಕಬೇಕು ಎನ್ನುವ ಉದ್ದೇಶದಿಂದ ಈ ಕಾಯ್ದೆಯನ್ನು ತಂದಿದ್ದೇವೆ. ಈಗ ಕೃಷಿಯಲ್ಲಿ ಯಾರಿಗೆ ಆಸಕ್ತಿ ಇರುತ್ತದೆ. ಅಂತಹವರು ಕೃಷಿ ಮಾಡುವುದಕ್ಕೆ ಬರಬೇಕು. ಕೃಷಿಯಲ್ಲಿ ಯಾಂತ್ರಿಕತೆಯನ್ನು ಪ್ರೋತ್ಸಾಹ ಮಾಡುವಂತಹ ದೃಷ್ಟಿಯಿಂದ, ಈಗಾಗಲೇ 79(ಎ) ಮತ್ತು 79(ಬಿ) ಅಡಿಯಲ್ಲಿ ಸುಮಾರು 83,171 ಪ್ರಕರಣಗಳು ದಾಖಲಾಗಿವೆ. ಆದರೆ, ಅದರ ಸಾಧನೆ ಏನೂ ಇಲ್ಲ. ಕೇವಲ ಶೂನ್ಯ. ಇಲ್ಲಿಯವರೆಗೆ ಏನೂ ಮಾಡುವುದಕ್ಕೆ ಆಗದೆ. ಸುಮಾರು 45 ವರ್ಷಗಳಿಂದ ಯಾವುದೇ ಜಮೀನುಗಳನ್ನು ಕೂಡ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ರಾಜ್ಯದ ಕನ್ನಡಿಗರು ಯಾರಿದ್ದಾರೆ, ಅವರು ಜಮೀನುಗಳನ್ನು ತೆಗೆದುಕೊಳ್ಳಬೇಕಾದರೆ, ಅವರು ರೈತರೇ ಎಂದು ಕೇಳುತ್ತಾರೆ. ಆದರೆ, ಬೇರೆ ರಾಜ್ಯದವರು ಬಂದಾಗ ಇದನ್ನು ಕೇಳುವುದಿಲ್ಲ. ಈಗ ಇದನ್ನು ತಿದ್ದುಪಡಿ ಮಾಡುವುದರಿಂದ ಕೃಷಿ ವಲಯದಲ್ಲಿ ಉತ್ಪಾದನೆಯನ್ನು ಜಾಸ್ತಿ ಮಾಡಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ಕೃಷಿ ಉತ್ಪನ್ನಗಳನ್ನು ರಫ್ತು ಮಾಡುವುದರಲ್ಲಿ ಮಹಾರಾಷ್ಟ್ರ, ತಮಿಳುನಾಡು ಮತ್ತು ಗುಜರಾತ್ ರಾಜ್ಯಗಳು ಬಹಳ ದೊಡ್ಡ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ರಫ್ತು ಮಾಡುತ್ತಾರೆ. ಅದರಲ್ಲಿ ಗುಜರಾತ್ ರಾಜ್ಯದವರು ಶೇಕಡಾ 17ರಷ್ಟು ಕೃಷಿ ಉತ್ಪನ್ನಗಳನ್ನು ರಫ್ತು ಮಾಡುತ್ತಾರೆ. ಆದರೆ, ಕರ್ನಾಟಕದಲ್ಲಿ ಶೇಕಡಾ 5.16ರಷ್ಟನ್ನು ಮಾತ್ರ ರಫ್ತು ಮಾಡುವುದಕ್ಕೆ ಸಾಧ್ಯವಾಗಿದೆ. ಆದುದರಿಂದ ಆಧುನಿಕ ಕೃಷಿ ಮತ್ತು ಹೆಚ್ಚು ಜನ ಯುವಕರು ಕೃಷಿಗೆ ಬರಬೇಕು. ಈ ಕಾಯ್ದೆ ತಮಿಳುನಾಡು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಎಲ್ಲೂ ಇಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿ ಇಲ್ಲದೇ ಇರತಕ್ಕಂಥ ಕಾಯ್ದೆಯನ್ನು ನಾವು ತೆಗೆದುಕೊಂಡು, ಕೃಷಿಗೆ ಆಧುನಿಕ touch ಕೊಡಬೇಕು ಮತ್ತು ಯುವಕರು ಕೃಷಿಗೆ ಹೆಚ್ಚಿಗೆ ಬರಬೇಕು ಎನ್ನುವ ದೃಷ್ಟಿಯಿಂದ ಈ ಕಾಯ್ದೆಯನ್ನು ತಂದಿದ್ದೇವೆ. ದಯವಿಟ್ಟು ಈ ವಿಧೇಯಕಕ್ಕೆ ಅನುಮತಿ ನೀಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಏನು ಈ ಮಸೂದೆಯನ್ನು ತಂದಿದ್ದಾರೆ. ಈಗ 79(ಎ), 79(ಬಿ) 79(ಸಿ) ಯನ್ನು ರದ್ದು ಮಾಡುವುದರ ಜೊತೆಗೆ, ceiling limit ಕೂಡ ಹೆಚ್ಚಿಸುವಂಥದ್ದು. ಮಾನ್ಯ ಕಂದಾಯ ಸಚಿವರೆ, ceiling limit ಹೆಚ್ಚು ಇದೆ ಅಲ್ಲವೆ. ಈಗ 54 ಎಕರೆ ಇರುವುದು 108 ಎಕರೆಗೆ, ಆಮೇಲೆ 5 ಜನರಿಗಿಂತ ಹೆಚ್ಚಿಗೆ ಇದ್ದರೆ, 216 ಎಕರೆವರೆಗೂ ಇದೆ. ನೋಡಿ 79(ಎ), 79(ಬಿ) 79(ಸಿ) ಯನ್ನು ರದ್ದು ಮಾಡುವುದರ ಪರಿಣಾಮ ಏನಾಗುತ್ತದೆಂದರೆ, ಇವತ್ತು ಕೃಷಿಯೇತರ ಮೂಲದಿಂದ 25 ಲಕ್ಷದವರೆಗೆ ಆದಾಯ ಇರತಕ್ಕಂಥವರಿಗೆ 79(ಎ) ನಲ್ಲಿ ಕೃಷಿ ಜಮೀನು ಎಂದು ಕಾನೂನು ಇತ್ತು. 79(ಬಿ) ಏನನ್ನು ಹೇಳುತ್ತದೆಂದರೆ, ಕೃಷಿ ಮಾಡುವವರೆ ಭೂಮಿಯನ್ನು ಖರೀದಿ ಮಾಡಬೇಕು ಎಂದು ಇತ್ತು. ಈಗ 79(ಎ), 79(ಬಿ) ಮತ್ತು 79(ಸಿ) ಹೋಗುವುದರಿಂದ ಏನು 25 ಲಕ್ಷ ಮಿತಿ ಇತ್ತು, other than agriculture income.

**(ಮುಂದು)**

**(952) 26.09.2020 11.50 LL-VK**

**ಶ್ರೀ ಎಸ್.ಆರ್. ಪಾಟೀಲ್(ಮುಂದು):–**

25 ಲಕ್ಷಕ್ಕಿಂತಲೂ ಹೆಚ್ಚು ಆದಾಯ ಇತ್ತೆಂದರೆ, ಅವರು ಈಗ ಕೃಷಿ ಜಮೀನನ್ನು ಖರೀದಿ ಮಾಡಬಹುದು. ಒಂದು ವೇಳೆ ನಮಗೆ 1000 ಕೋಟಿ ರೂಪಾಯಿ ಆದಾಯ ಇದ್ದರೂ ಇವೊತ್ತಿನ ದಿವಸ ಜಮೀನು ಖರೀದಿ ಮಾಡುವಂತಹ ಅವಕಾಶ ದೊರೆತಿದೆ. ಅದರ ಜೊತೆಗೆ, ಕೃಷಿಕರು ಅಲ್ಲದೇ ಇರುವವರು ಅಂದರೆ, ಕೃಷಿ ಬಗ್ಗೆ ಗಂಧ–ಗಾಳಿ ಏನು ಗೊತ್ತಿಲ್ಲದೇ ಇರುವವರು, ಭೂಮಿ ಅಂದರೆ ಅವರಿಗೆ ಗೊತ್ತಿರುವುದಿಲ್ಲ, ಬೆಳೆ ಎಂದರೆ ಗೊತ್ತಿರುವುದಿಲ್ಲ ಹಾಗೂ cultivation ಬಗ್ಗೆ ಯಾವುದೇ ಮಾಹಿತಿ ಇಲ್ಲದವರು ಜಮೀನು ಖರೀದಿ ಮಾಡುವಂತಹ ಒಂದು ಅವಕಾಶವನ್ನು ಈ ಸರ್ಕಾರ ಕಲ್ಪಿಸಿಕೊಟ್ಟಿದೆ. ಮೊದಲು 'ಉಳುವವನೇ ಭೂಮಿ ಒಡೆಯ' ಎನ್ನುವ ಮಸೂದೆಯನ್ನು ಶ್ರೀಮಾನ್ ದೇವರಾಜು ಅರಸುರವರು ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದಾಗ, tiller of the soil is the

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

owner ಎನ್ನುವಂತಹ ಒಂದು ಕಾನೂನಿನ ಮುಖಾಂತರ ಅತ್ಯಂತ ಕ್ರಾಂತಿಕಾರಿ ಮಸೂದೆಯನ್ನು ಜಾರಿಗೆ ತಂದು, ಇಡೀ ಭಾರತ ದೇಶದಲ್ಲಿ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ tiller of the soil is the owner ಎಂದು ಹೇಳಿ tenants ಗೆ ಮಾಲೀಕತ್ವ ಕೊಟ್ಟಂತಹ ಏಕೈಕ ರಾಜ್ಯ ನಮ್ಮ ಕರ್ನಾಟಕ.

ಮಾನ್ಯ ಕಂದಾಯ ಸಚಿವರು ಮಾತನಾಡುತ್ತಾ, ಬೇರೆ ರಾಜ್ಯಗಳಲ್ಲಿ ಈ ಬಗ್ಗೆ ಕಾನೂನು ಇಲ್ಲವೆಂದು ಹೇಳುತ್ತಾರೆ. ಆದರೆ, ನಾನು ಬೇರೆ ರಾಜ್ಯಗಳನ್ನು ನಾವು ಅನುಸರಿಸದೇ, 'ಕರ್ನಾಟಕ ರಾಜ್ಯವೇ ರೋಲ್ ಮಾಡೆಲ್' ಎಂದು ಹೇಳುತ್ತೇನೆ. 'ಕರ್ನಾಟಕ ಭೂ ಸುಧಾರಣಾ ಕಾನೂನು' 01.03.1974ರಲ್ಲಿ ಜಾರಿಗೆ ಬಂತು. ಇದು ನಿಜವಾಗಿಯೂ ಅತ್ಯಂತ ಮಹತ್ವದ ಕಾನೂನು. ಇಂತಹ ಕಾನೂನಿನಲ್ಲಿ 79 'ಎ', 'ಬಿ', 'ಸಿ', ರದ್ದು ಮಾಡುವುದರಿಂದ ಕೃಷಿಕರಲ್ಲದವರು ಜಮೀನು ಖರೀದಿ ಮಾಡುತ್ತಾರೆ. ಯಾರ್ಯಾರು ಜಮೀನು ಖರೀದಿ ಮಾಡುತ್ತಾರೆಂದರೆ, ಮಲ್ಟಿ ನ್ಯಾಷನಲ್ ಕಂಪನಿಯವರು ಅಂದರೆ, ಬಹು ರಾಷ್ಟ್ರೀಯ ಕಂಪನಿಯ ಮಾಲೀಕರು ಇವತ್ತಿನ ದಿವಸ ಜಮೀನು ಖರೀದಿ ಮಾಡುವುದಕ್ಕೆ flood gate open ಆದ ಆಗಿದೆ. ಅದರ ಜೊತೆಗೆ, real estate ಮಾಡುವಂತಹ ಧಣಿಗಳು, ಆಗರ್ಭ ಶ್ರೀಮಂತರು ಅಂದರೆ, ಕೃಷಿ ಜಮೀನು ಇಲ್ಲದವರು millionaire or billionaire ಗಳು ಕೂಡ ಕೃಷಿ ಜಮೀನನ್ನು ಖರೀದಿ ಮಾಡಬಹುದಾಗಿದೆ. ಅದರ ಜೊತೆಗೆ, ದೊಡ್ಡ ದೊಡ್ಡ ಬಂಡವಾಳಶಾಹಿಗಳು, ಶ್ರೀಮಂತರು ಕೂಡ ಕೃಷಿ ಜಮೀನನ್ನು ಖರೀದಿ ಮಾಡುವಂತಹ ಒಂದು ವ್ಯವಸ್ಥೆಯಾಗಿದೆ. ಇದರ ಜೊತೆಗೆ, who have amassed wealth. ಭ್ರಷ್ಟಾಚಾರದ ಮುಖಾಂತರ ದೊಡ್ಡ ಪ್ರಮಾಣದಲ್ಲಿ ಹಣ ಮಾಡಿದಂತಹವರು ಅಂದರೆ, ಸರ್ಕಾರಿ ಅಧಿಕಾರಿಗಳು ಇರಬಹುದು ಅಥವಾ ರಾಜಕಾರಣಿಗಳು ಇರಬಹುದು ಅವರಿಗೆ ಕೃಷಿ ಜಮೀನು ಖರೀದಿ ಮಾಡುವಂತಹ ಒಂದು ಅವಕಾಶ ದೊರೆತಿದೆ. ಅಷ್ಟೇ ಅಲ್ಲದೇ, ಅಕ್ಕ-ಪಕ್ಕದ ರಾಜ್ಯದ ಶ್ರೀಮಂತರು ನಮ್ಮ ರಾಜ್ಯಕ್ಕೆ ಬರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಜೊತೆಗೆ, ಕಾಳಧನಿಕರು, ಯಾರ ಹತ್ತಿರ ಕಪ್ಪು ಹಣ ಇದೆ, ಅವರು ಕೂಡ ಕೃಷಿ ಜಮೀನು ಖರೀದಿ ಮಾಡುವುದಕ್ಕೆ ಅವಕಾಶ ಸಿಕ್ಕಿದೆ.

ನನಗೆ ಏನು ಅನ್ನಿಸುತ್ತಿದೆಯೆಂದರೆ, ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗ, ಈ ಕಾನೂನು ಯಾವ ರೀತಿ ಸಹಾಯ ಆಗುತ್ತದೆಯೆಂದರೆ, ಯಾರು ಸಾಕಷ್ಟು ಕಪ್ಪು ಹಣ ಇಟ್ಟುಕೊಂಡಿರುತ್ತಾರೆ, ಅದನ್ನು ಬಿಳಿ ಹಣವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಅನುಕೂಲ ಆಗುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಕಾನೂನು ಎಂದು ಹೇಳುವುದಕ್ಕೆ ಇಚ್ಛೆ ಮಾಡುತ್ತೇನೆ. ಇವೊತ್ತಿನ ದಿವಸ ಸರ್ಕಾರದ guidance value ಅಂದರೆ, ಪ್ರತಿ ಎಕರೆ ಜಮೀನಿಗೆ 5 ಲಕ್ಷ ರೂಪಾಯಿ ಇದ್ದರೆ, Sub-Registrar valuation 5 lakhs per acre ಇದ್ದಾಗ, ಅಲ್ಲಿ ಸುಮಾರು 50 ಲಕ್ಷದವರೆಗೆ ಮಾರ್ಕೆಟ್ ವ್ಯಾಲ್ಯೂ ಇರುತ್ತದೆ. ಈಗ 50 ಲಕ್ಷ ರೂಪಾಯಿ ಹಣದಲ್ಲಿ, 5 ಲಕ್ಷ ರೂಪಾಯಿ ಬಿಳಿ ಹಣ, ಇನ್ನುಳಿದ 45 ಲಕ್ಷ ರೂಪಾಯಿ ಕಪ್ಪು ಹಣ ತೋರಿಸುತ್ತಾರೆ. That black money will be converted into white money. ಅಂದರೆ, ಕಪ್ಪು ಹಣವನ್ನು ಬಿಳಿ ಹಣವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಈ ಕಾನೂನು ಬಹಳಷ್ಟು ಸಹಾಯ ಮಾಡುತ್ತದೆ. ಏಕೆಂದರೆ, ಕೃಷಿಕರಲ್ಲದವರು ಜಮೀನು ಖರೀದಿ ಮಾಡಬಹುದು ಮತ್ತು ಕೃಷಿಯೇತರ ಆದಾಯ 25 ಲಕ್ಷಕ್ಕಿಂತಲೂ ಹೆಚ್ಚು ಇದ್ದರೆ ಮೊದಲು ಜಮೀನು ಖರೀದಿ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಆದರೆ, ಇವೊತ್ತಿನ ದಿವಸ ಬೇಕಾದ್ದನ್ನು ಮಾಡಿ ಕೃಷಿ ಜಮೀನು ಮಾಡುವುದಕ್ಕೆ ಅವಕಾಶ ಸಿಕ್ಕಿದೆ. ಇವೆಲ್ಲಕ್ಕಿಂತಲೂ ಮಿಗಿಲಾಗಿ, ಅಕ್ಕ-ಪಕ್ಕದ ರಾಜ್ಯದವರು ಕೂಡ ಇವೊತ್ತಿನ ದಿವಸ ನಮ್ಮ ರಾಜ್ಯಕ್ಕೆ ಬಂದು ಭೂಮಿ ಖರೀದಿ ಮಾಡುವುದಕ್ಕೆ ಅವಕಾಶವಿದೆ. ಟಿ.ಬಿ.ಪಿ. ಏರಿಯಾದಲ್ಲಿ ಅಂದರೆ, ರಾಯಚೂರು ಭಾಗದಲ್ಲಿ ನಾವು ಹೋದರೆ ಇದು ಕರ್ನಾಟಕ ಭಾಗವೇ ಎಂದು ನಮಗೆ ಅನ್ನಿಸುವುದಿಲ್ಲ. ಎಲ್ಲಿ ಹೋದಲ್ಲಿ ಆಂಧ್ರಪ್ರದೇಶ ರಾಜ್ಯದ ಶ್ರೀಮಂತರೇ ಅಲ್ಲಿ ಜಮೀನು ಖರೀದಿ ಮಾಡಿದ್ದಾರೆ. ಅವರು ಅದನ್ನು 'ಆಂಧ್ರ ಕ್ಯಾಂಪ್' ಎಂದು ಕರೆಯುತ್ತಾರೆ. ತುಂಗಭದ್ರಾ ಪ್ರಾಜೆಕ್ಟ್‌ನ ಕಮಾಂಡ್ ಏರಿಯಾದಲ್ಲಿ ಆಂಧ್ರಪ್ರದೇಶ ರಾಜ್ಯದವರು ಜಮೀನು ಖರೀದಿ ಮಾಡಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರ ಹೆಸರನ್ನು ನಾನು ಇಲ್ಲಿ ಹೇಳಬಾರದು. ಆದರೆ, ಆಂಧ್ರಪ್ರದೇಶ ರಾಜ್ಯದ ಒಬ್ಬ ರೈತರು ದೊಡ್ಡ ಪ್ರಮಾಣದಲ್ಲಿ 80 ಎಕರೆ ಜಮೀನಿನಲ್ಲಿ ದಾಳಿಂಬೆ ಬೆಳೆ ಬೆಳೆಯುತ್ತಿದ್ದರು. ನಾನು ಕೂಡ 40 ಎಕರೆ ಜಮೀನಿನಲ್ಲಿ ದಾಳಿಂಬೆ ಹಣ್ಣಿನ ಬೆಳೆ ಬೆಳೆಯುತ್ತಿದ್ದೆನು. ಅವರು ನನಗೆ ಒಂದು ದಿವಸ ಅವರ ತೋಟಕ್ಕೆ ಆಮಂತ್ರಣ ನೀಡಿದರು. ನಾನು ಅವರ ತೋಟಕ್ಕೆ ಹೋಗಿ ಅದನ್ನು ನೋಡಿ, "ತಾವು ಆಂಧ್ರಪ್ರದೇಶ ರಾಜ್ಯದಿಂದ ಇಲ್ಲಿಗೆ ಬಂದು ಇಲ್ಲಿ ಜಮೀನು ಖರೀದಿ ಮಾಡಿದ್ದೀರೆಂದು" ಕೇಳಿದ ಪ್ರಶ್ನೆಗೆ ಅವರು, "500 ರೂಪಾಯಿಗೆ ಒಂದು ಎಕರೆ ಜಮೀನು ಸಿಕ್ಕಿತು, ಅದಕ್ಕೆ 500 ಎಕರೆ ಜಮೀನು ಖರೀದಿ ಮಾಡಿದನೆಂದು" ಹೇಳಿದರು. ಪುನಃ ನಾನು ಅವರಿಗೆ, "labour potentiality ಹೇಗೆ, ಇಷ್ಟು ಏರಿಯಾ ಹೇಗೆ ನಿಯಂತ್ರಣ ಮಾಡುತ್ತೀರೆಂದು" ಕೇಳಿದೆನು. ನಾನು 'ಜವಳಿಗೇರಿ ಫಾರ್ಮ್‌'ನ ವಿಚಾರವನ್ನು ನಾನು ಹೇಳುತ್ತಿದ್ದೆನು. ಆಗ ಅಲ್ಲಿ ಕೆಲವರು ದಾಳಿಂಬೆ ಹಣ್ಣನ್ನು ಬೇರ್ಪಡಿಸಿ, ಬಾಕ್ಸ್‌ಗಳಿಗೆ ತುಂಬುವಂತಹ ಕೆಲಸ ಮಾಡುತ್ತಿರುವವರನ್ನು ತೋರಿಸುತ್ತಾ ಅವರು, "ಇಲ್ಲಿ ನೋಡಿ, ಸಾಕಷ್ಟು ಜನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲೇಬರ್‌ಗಳು ಇದ್ದಾರೆ. ಹಾಗಾಗಿ, ಲೇಬರ್‌ಗಳ ತೊಂದರೆ ನನಗೆ ಇಲ್ಲವೆಂದು" ಹೇಳಿದರು. ನಂತರ ನಾನು, "ಇವರೆಲ್ಲಾ ಯಾರು" ಎಂದು ಕೇಳಿದ ಪ್ರಶ್ನೆಗೆ, ಅವರು, "ಇವರೆಲ್ಲರೂ ನನಗೆ ಜಮೀನು ನೀಡಿದ ಮಾಲೀಕರು. ಇವರೇ ನಮ್ಮ ಹೊಲದಲ್ಲಿ ನೀರು ಹಾಯಿಸುವ ಕೆಲಸ ಹಾಗೂ ಮತ್ತಿತ್ತರ ಕೆಲಸ ಮಾಡುತ್ತಾರೆಂದು" ಹೇಳಿದರು. ಅಂದರೆ, ಜಮೀನು ಮಾರಾಟ ಮಾಡಿದಂತಹ ವ್ಯಕ್ತಿಗಳೇ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಒಬ್ಬ ಮಹಿಳೆ ತನ್ನ ಬಳಿ ಇರುವಂತಹ ಒಂದೇ ಸೀರೆಯನ್ನು ಎರಡು ಬ್ಬಾರಿ ತೊಳೆದುಕೊಳ್ಳುತ್ತಿದ್ದಳು. ಅಂದರೆ, ಅರ್ಧ ಸೀರೆ ಒಂದು ದಿನ ತೊಳೆದುಕೊಳ್ಳುವುದು, ಮತ್ತೊಂದು ದಿನ ಉಳಿದ ಅರ್ಧ ಸೀರೆಯನ್ನು ತೊಳೆದುಕೊಳ್ಳುತ್ತಿದ್ದಾಳೆ. ಅಂದರೆ, ಅಷ್ಟು ಕಡುಬಡತನ ಅಲ್ಲಿ ಇದೆ. ಆ 500 ಎಕರೆ ಜಮೀನಿನ ಫಾರ್ಮ್ ಅನ್ನು ನಾನು ನೋಡಿದೆನು. ಆಗ ಆ ಜಮೀನಿನ ಮಾಲೀಕರು, "ಒಂದು ದಿನ ಇಲ್ಲಿಯೇ ಇರಿ ಪಾಟೀಲರೇ ಎಂದು" ಕೇಳಿದರು. ನಾವಿಬ್ಬರೂ ದಾಳಿಂಬೆ ಬೆಳೆಗಾರರು. ಆದರೆ, ಆ ಪರಿಸ್ಥಿತಿ ನೋಡಿ "ಏನಪ್ಪಾ ನಮ್ಮ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ ಎಂದು" ನನಗೆ ಬಹಳ ನೋವಾಯಿತು. ಮುಂದುವರೆದು ನಾನು, "ನೀವು ಏತಕ್ಕೆ ಇಲ್ಲಿ ಜಮೀನು ಖರೀದಿ ಮಾಡಿದ್ದೀರಿ" ಎಂದು ಕೇಳಿದೆನು. ಅದಕ್ಕೆ ಅವರು, "ನಾನು ಮ್ಯಾಪ್ ನೋಡಿದೆ, 12 ತಿಂಗಳು ತುಂಗಭದ್ರಾ ಜಲಾಶಯದಿಂದ ಕೆನಾಲ್‌ಗೆ ನೀರು ಬರುವುದನ್ನು ನೋಡಿಕೊಂಡು ನಾನು ಇಲ್ಲಿ ಬಂದು ಜಮೀನು ಖರೀದಿ ಮಾಡಿದೆನೆಂದು" ಹೇಳಿದರು. ಆಗ ನಮ್ಮ ಜನ ಜಮೀನು ಮಾರಿದರು. ಕ್ರಮೇಣ ಆ ಹಣ ಕೂಡ ಖಾಲಿಯಾಯಿತು. ಕೊನೆಯದಾಗಿ, ಜೀವನ ಸಾಗಿಸುವುದಕ್ಕಾಗಿ ಅಲ್ಲಿಯೇ ದುಡಿಯುವುದಕ್ಕೆ ಹೋಗುತ್ತಿದ್ದಾರೆ.

ಈ ಹಿಂದೆ ಇದ್ದಂತಹ ಕಾನೂನಿನಲ್ಲಿ ಕೃಷಿಕರೇ ಭೂಮಿ ಖರೀದಿ ಮಾಡಬೇಕು ಎನ್ನುವಂತಹ ಸಂದರ್ಭದಲ್ಲಿ ಬೇನಾಮಿಯಾಗಿ ಕೆಲವು ವ್ಯಕ್ತಿಗಳು ಜಮೀನು ಖರೀದಿ ಮಾಡಿದ್ದಾರೆ. ಆದರೆ, ಇವೊತ್ತಿನ ದಿವಸ ಕೃಷಿಕರಲ್ಲದವರು ಕೂಡ ಜಮೀನು ಖರೀದಿ ಮಾಡಬಹುದು ಎನ್ನುವ ಪರಿಸ್ಥಿತಿ ಬಂದರೆ, ಅಕ್ಕ-ಪಕ್ಕದ ರಾಜ್ಯದವರೆಲ್ಲರೂ ಅಂದರೆ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಿಂದ ಜಮೀನು ಖರೀದಿ ಮಾಡುವುದಕ್ಕೆ ಬರುತ್ತಾರೆ. ಮಹಾರಾಷ್ಟ್ರ ರಾಜ್ಯದವರು ಇವೊತ್ತಿನ ನಮ್ಮ ಕೃಷ್ಣಾ ಮೇಲ್ದಂಡೆ ಯೋಜನೆ ಈಗಾಗಲೇ 32 ಲಕ್ಷ ಎಕರೆ ನೀರಾವರಿ ಆಗುವಂತಹ ಪ್ರದೇಶ command area ದಲ್ಲಿಯೇ ರೈತರು ಬಹಳ ಕಷ್ಟದಲ್ಲಿರುತ್ತಾರೆ. ಈ ದೇಶದ ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲಿಯೇ ಸತ್ತು ಹೋಗುತ್ತಾನೆ. ರೈತನಿಗೆ ಅಡಚಣೆ-ಮುಗ್ಗಟ್ಟುಗಳು ಬಹಳ ಇರುತ್ತವೆ. ಅದರಿಂದಾಗಿ, ರೈತರನ್ನು tempt ಮಾಡಿ 5 ಲಕ್ಷ ರೂಪಾಯಿ ಬೆಲೆ ಬಾಳುವ ಜಮೀನಿಗೆ 10 ಲಕ್ಷ ರೂಪಾಯಿ ಕೊಡುತ್ತೇವೆಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದರೆ, ಎಲ್ಲರೂ ಜಮೀನು ಮಾರಾಟ ಮಾಡುತ್ತಾರೆ. 75 ಲಕ್ಷ ರೈತ ಕುಟುಂಬಗಳು ನಮ್ಮ ರಾಜ್ಯದಲ್ಲಿವೆ. ಅದರಲ್ಲಿ 55 ಲಕ್ಷ ಕುಟುಂಬಗಳು ಸಣ್ಣ ಮತ್ತು ಅತಿ ಸಣ್ಣ ರೈತರಿದ್ದಾರೆ. ಅಂದರೆ, ಸಣ್ಣ ರೈತರು, ಅತಿ ಸಣ್ಣ ರೈತರು 5 ಎಕರೆ ಜಮೀನಿಗಿಂತಲೂ ಕಡಿಮೆ ಜಮೀನು ಇರುವಂತಹವರು. ಅವರು ಯಾವತ್ತಿಗೂ ಕೂಡ ಆರ್ಥಿಕ ಮುಗ್ಗಟ್ಟಿನಲ್ಲಿರುತ್ತಾರೆ.

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ 12–00 ಗಂಟೆ ಆಯಿತು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನಾನು ಏನು ಮಾಡಬೇಕೆಂದು ಹೇಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಮಲ್ಕಾಪೂರೆಯವರೇ, ತಾವು ರೈತ ಕುಟುಂಬದವರಲ್ಲವೇ?

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಎಸ್.ಆರ್. ಪಾಟೀಲ್‌ರವರೇ ನಾವು ಕೂಡ ಉತ್ತರ ಕರ್ನಾಟಕ ಭಾಗದ ರೈತರ ಮಕ್ಕಳೇ. ಆದರೆ, ಈಗ ಸಮಯ 12–00 ಗಂಟೆ ಆಗಿದೆ. ಹಾಗಾಗಿ, ರೈತರಿಗೆ ಬೇರೆ ಸಮಯ, ನಮಗೆ ಬೇರೆ ಸಮಯ ಎಂದು ಇದೆಯೇ? ಎಲ್ಲರಿಗೂ ಒಂದೇ ಸಮಯ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಮಲ್ಕಾಪೂರೆಯವರೇ, ಈ ರಾಜ್ಯದ ಬದುಕಿನ ಪ್ರಶ್ನೆ ಇದ್ದಾಗ, ಸಮಯ ನೋಡಬಾರದು. ಬೆಳಗ್ಗಿನ 06–00 ಗಂಟೆಯವರೆಗೂ ನಾನು ಮಾತನಾಡುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಪಾಟೀಲ್ ಜೀ, ತಾವು ಆಡಿದ ಮಾತುಗಳನ್ನೇ ಮತ್ತೆ ಮತ್ತೆ ಆಡುತ್ತಿದ್ದೀರಿ. ನಿಮ್ಮ ಮಾತುಗಳನ್ನು ನಾನು ಬಹಳ ಕೇಳಿದ್ದೇನೆ. ತಾವು ಕೂಡ ಹಿರಿಯರಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರಿಗೆ ರೈತರ ಬಗ್ಗೆ ಕಾಳಜಿ–ಕಕ್ಕಲಾತಿ, ಗೌರವ, ಪ್ರೀತಿ, ವಿಶ್ವಾಸ ಇಲ್ಲವೇ ಎಂಬ ಬಗ್ಗೆ ನನಗೆ ಸಂಶಯ ಬರುತ್ತಿದೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಪಾಟೀಲ್‌ರವರೇ, ನಮಗೆ ರೈತರ ಬಗ್ಗೆಯೂ ಕಾಳಜಿ ಇದೆ. ಹಾಗೆಯೇ ತಮ್ಮ ಬಗ್ಗೆಯೂ ಸಹ ಕಾಳಜಿ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಸುಮಾರು 75 ಲಕ್ಷ ರೈತ ಕುಟುಂಬಗಳಲ್ಲಿ 55 ಲಕ್ಷ ಕುಟುಂಬಗಳು ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದಾರೆ. ಅವರೆಲ್ಲರೂ ಕಷ್ಟದಲ್ಲಿರುವವರಾಗಿದ್ದಾರೆ. ಈ ಕಾನೂನು ಬಂತೆಂದರೆ, 55 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳಿದ್ದಾರೆ, ಅವರೆಲ್ಲರೂ ತಮ್ಮ ಜಮೀನು ಮಾರಿಕೊಳ್ಳುತ್ತಾರೆ. ಈಗಾಗಲೇ ಕೃಷಿ ಕಾರ್ಮಿಕರ ಸಂಖ್ಯೆ ಶೇಕಡ 25 ರಷ್ಟಿದೆ. ಈ ಕಾನೂನು ಬಂದ ನಂತರ ಪ್ರತಿಶತ ಶೇಕಡ 50 ರಷ್ಟು ರೈತರು ಕೃಷಿ ಕಾರ್ಮಿಕರಾಗುತ್ತಾರೆ. ಇದರ ಜೊತೆಗೆ, ಇನ್ನೊಂದು ಬಹಳ ಅಪಾಯಕಾರಿ ವಿಷಯವಾಗಿದೆ. ಈಗಾಗಲೇ ನಾನು ಹೇಳಿದ ಹಾಗೇ, ಅಕ್ಕ-ಪಕ್ಕದ ರಾಜ್ಯದವರು ನಮ್ಮ command area ದವರು... ಮಹದಾಯಿ ಯೋಜನೆ ಬರುತ್ತದೆ, ಆ ಯೋಜನೆ ಪೂರ್ತಿಯಾದಾಗ ಮಲಪ್ರಭಾ ನದಿ ಎಡದಂಡೆ, ಬಲದಂಡೆಯಲ್ಲಿ ಸಾಕಷ್ಟು ನೀರು ಬರುತ್ತದೆ. ಇವೊತ್ತಿನ ದಿವಸ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪಕ್ಕದ ರಾಜ್ಯದವರೇ ಇಲ್ಲಿ ಜಮೀನು ಖರೀದಿ ಮಾಡಿದ್ದಾರೆ. ಇದು ಈ ರೀತಿಯಾದರೆ, ಯಾರು ಶ್ರೀಮಂತರಿದ್ದಾರೆ ಅಥವಾ ಯಾರ ಹತ್ತಿರ ಹಣ ಇದೆ, ಅವರು ಇಲ್ಲಿ invest ಮಾಡುವುದಕ್ಕೆ ಬರುತ್ತಾರೆ. ಇದರಿಂದ ಏನಾಗುತ್ತದೆಯೆಂದರೆ, ಜಮೀನು ಖರೀದಿ ಮಾಡಿದವರು ಅದನ್ನು ಸಾಗುವಳಿ ಕೂಡ ಮಾಡುವುದಿಲ್ಲ. ಅದು ಹಾಗೆಯೇ ಪಾಳು ಬೀಳುತ್ತದೆ.

**(ಮುಂದು)**

**(953)27.09.2020/12.00 AM/ಪೈವಿಎಲ್-ಜಿಆರ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಅದು ಹಾಗೆ ಪಾಳು ಬಿದ್ದಿದೆ. ಇವತ್ತು ದೇಶಕ್ಕೆ ಸ್ವಾತಂತ್ರ್ಯ ಬಂದಾಗ 50 ಲಕ್ಷ ಮಿಲಿಯನ್ ಟನ್ಸ್ food grains ಇದ್ದದ್ದು, ಇವತ್ತು 280 ಮಿಲಿಯನ್ ಟನ್ಸ್‌ಗಳಷ್ಟು ಸ್ವಾವಲಂಬಿಯಾಗಿದೆ. ನಾಳೆ ದಿವಸ ನಮ್ಮ ರಾಜ್ಯದಲ್ಲಿ ಇಡೀ ಜಮೀನನ್ನು ಖರೀದಿ ಮಾಡಿದರೆ ಶ್ರೀಮಂತರು cultivation ಮಾಡುವುದಿಲ್ಲ. ಜಮೀನು ಖರೀದಿಸಿ cultivation ಮಾಡದೇ ಹಾಗೆಯೇ ಬಿಡುವುದರಿಂದ food grains are born from the earth ಎಂದು ನಾವು ಏನೂ ಮಾತನಾಡುತ್ತೇವೆ, ಅದು ಸಾಗುವಳಿ ಮಾಡಲಿಲ್ಲವೆಂದರೆ ಉತ್ಪನ್ನ ಸಹ ಕಡಿಮೆಯಾಗುತ್ತದೆ. ಆದರೆ, ಸರ್ಕಾರದವರು ನಾಳೆ ದಿವಸ ಸಾಗುವಳಿ ಮಾಡುವ ಉದ್ದೇಶದಿಂದಲೇ ಮಾಡಲಾಗಿದೆ ಎಂದು ಉತ್ತರದಲ್ಲಿ ಹೇಳಬಹುದು. ಆದರೆ, ಸಾಗುವಳಿ ಮಾಡುವುದಾಗಲಿ, ಬಿಡುವುದಾಗಲಿ ಅವರಿಗೆ ಸಂಬಂಧಿಸಿದ್ದು, ಅದನ್ನು ಅವರು ಹೋಗಿ ನೋಡಿ ಅದಕ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

restriction ಮಾಡಲು ಸಾಧ್ಯವೇ? ಪಕ್ಕದ ರಾಜ್ಯದವರೆಲ್ಲಾ ಬಂದು ನಮ್ಮ command area ಜಮೀನನ್ನು ಖರೀದಿ ಮಾಡಿದರೆ, ಈ ರಾಜ್ಯದ ಜನರೆಲ್ಲಾ ಅನಾಥರಾಗುತ್ತಾರೆ. ಜಮೀನು ಖರೀದಿಸುವುದರ ಜೊತೆಗೆ ಡ್ಯಾಂ ನೀರನ್ನು ಸಹ ಉಪಯೋಗ ಮಾಡಿಕೊಳ್ಳುತ್ತಾರೆ. ಪಕ್ಕದ ರಾಜ್ಯದವರು ನಮ್ಮ ರಾಜ್ಯಕ್ಕೆ ಬಂದು ಜಮೀನು ಖರೀದಿಸಿ ಸಾಗುವಳಿ ಮಾಡುವುದರ ಜೊತೆಗೆ ಜಲವನ್ನು ಉಪಯೋಗಿಸುತ್ತಾರೆ. ಇವತ್ತು ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಬಹಳಷ್ಟು ಮಾತನಾಡಿದ್ದು, ನಮ್ಮ ಸರ್ಕಾರ ಬಡವರ ತೆರಿಗೆಯನ್ನು ಉಪಯೋಗ ಮಾಡಿಕೊಂಡು ಸಾವಿರಾರು ಕೋಟಿ ಹಣ ಖರ್ಚು ಮಾಡಿ, ಡ್ಯಾಂ ನಿರ್ಮಿಸಲಾಗುತ್ತಿದೆ. Acquisition ಮಾಡುತ್ತಾರೆ. Command area ಗೆ ಬಂದು ಅವರೆಲ್ಲಾ ಜಮೀನು ಖರೀದಿ ಮಾಡಿದರೆ, ನಮ್ಮ ರಾಜ್ಯದ ಜನರ ಸಲುವಾಗಿ ಏನೂ ಇವತ್ತು ಖುಷ್ಕಿ ಜಮೀನನ್ನು ನೀರಾವರಿ ಜಮೀನನ್ನಾಗಿ ಮಾಡಿ, ಹೆಚ್ಚು ಆದಾಯ ಬಂದು ರೈತರು ಆರ್ಥಿಕವಾಗಿ ಸದ್ಗತಿಯತ್ತ ಮುನ್ನಡೆಯಲಿ ಎಂಬ ಕಾರಣದಿಂದ ಜಲಾಶಯ ನಿರ್ಮಿಸಲಾಗುತ್ತದೆ, ಅಂತಹ ಜಮೀನುಗಳೆಲ್ಲಾ ಪಕ್ಕದ ರಾಜ್ಯದವರ ಪಾಲಾದರೆ ಏನು ಪ್ರಯೋಜನ? ಜಮೀನು ಕಳೆದುಕೊಳ್ಳುವುದರ ಜೊತೆಗೆ ನೀರನ್ನು ಸಹ ಕಳೆದುಕೊಳ್ಳಬೇಕಾಗುತ್ತದೆ. ಬಹುಮುಖ್ಯವಾಗಿ ಈ ನಾಡಿನ ನೆಲ-ಜಲದ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ ನೆಲ-ಜಲ ಪ್ರಶ್ನೆ ಉದ್ಭವಿಸಿದಾಗ ನಾವೆಲ್ಲಾ ಪಕ್ಷಾತೀತವಾಗಿ ಹೋರಾಟ ಮಾಡಿರುವುದನ್ನು ನೆನಪಿಸಿಕೊಳ್ಳುತ್ತೇನೆ. ಇದು ಕೇವಲ ನಮ್ಮ ಪಕ್ಷಕ್ಕೆ ಸೀಮಿತವಾಗಿಲ್ಲ. ಎಲ್ಲರಿಗೂ ಅನ್ವಯಿಸುವುದರಿಂದ ಎಲ್ಲರೂ ಒಂದಾಗಿ ಈ ನಾಡಿನ ನೆಲ-ಜಲವನ್ನು ರಕ್ಷಣೆ ಮಾಡಬೇಕು. ಈ ಮಸೂದೆಯನ್ನು ಜಾರಿಗೆ ತರುವುದರಿಂದ ನಮ್ಮ ನಾಡಿನ ನೆಲ-ಜಲವನ್ನು ಕಳೆದುಕೊಳ್ಳಬೇಕಾಗುತ್ತದೆ. ಪಕ್ಕದ ರಾಜ್ಯದವರ ಪಾಲಾಗುತ್ತದೆ. ಇಂತಹ ಬಹಳಷ್ಟು ಘಟನೆಗಳು ನಡೆದಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಎಸ್.ಆರ್.ಪಾಟೀಲ್‌ರವರೇ ತಾವೂ ಹೇಳುವುದು ಸರಿ. ಆದರೆ, ನೇತೃತ್ವ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನೇತೃತ್ವ ಎಂದರೆ ಏನೆಂದು ಅರ್ಥವಾಗುತ್ತಿಲ್ಲ. ಈ ನಾಡಿನ ನೆಲ-ಜಲವನ್ನು ರಕ್ಷಣೆ ಮಾಡಬೇಕಾದರೆ ನಾವು-ಅವರೆಲ್ಲರೂ ಕೂಡಿ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ನೇತೃತ್ವವಹಿಸಬೇಕು. ಈ ದೇಶದ ಅನ್ನದಾತರಾದ ರೈತರು ಅಹೋರಾತ್ರಿ ನಿದ್ದೆ ಇಲ್ಲದೇ, ತನ್ನ ಕುಟುಂಬ ಸದಸ್ಯರೆಲ್ಲರೂ ಮಣ್ಣಲ್ಲಿ ಮಣ್ಣಾಗಿ ದುಡಿದು ಇವತ್ತು ಈ ದೇಶದ 138 ಕೋಟಿ ಜನರಿಗೆ ಅನ್ನ ನೀಡುತ್ತಿದ್ದಾನೆ. ಇದನ್ನು ಅರ್ಥ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಕೊಳ್ಳಬೇಕು. ಹಗಲು-ರಾತ್ರಿ ಅವಿಶ್ರಾಂತವಾಗಿ ದುಡಿಮೆ ಮಾಡುತ್ತಿರುವುದರಿಂದ 138 ಕೋಟಿ ಜನ ರೈತನಿಂದ ಊಟ ಮಾಡುತ್ತಿದ್ದೇವೆ. ಈಗ ಸದನ ನಡೆಯುತ್ತಿರುವುದರಿಂದ ನೋಡಿ ಯಾರಿಗೂ ಊಟ ಇಲ್ಲದರಿಂದ ಎಲ್ಲರೂ ಚಡಪಡಿಸುತ್ತಿದ್ದೇವೆ ಅಲ್ಲವೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀರು ಕುಡಿಯುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸದಸ್ಯರೇ, ಹಾಗಾದರೆ ನೀರು ಕುಡಿದೇ ಹೊಟ್ಟೆ ತುಂಬಿಸಿಕೊಳ್ಳಿ. ಪರಿಸ್ಥಿತಿ ಯಾವ ರೀತಿ ಇದೆ ಎಂದರೆ,...

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಅವರ ಮಾತನ್ನು ಮುಗಿಸುತ್ತಾರೆಯೇ, ಇಲ್ಲ ನಾನು ನೇರವಾಗಿ ಉತ್ತರ ನೀಡಲೇ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇನ್ನೂ ನನ್ನ ಮಾತು ಮುಗಿಸಿಲ್ಲ. ಸ್ವಲ್ಪ ಮಾತನಾಡಿ ಮುಗಿಸುತ್ತೇನೆ. ನಂತರ ಮಾನ್ಯ ಸಚಿವರು ಉತ್ತರ ನೀಡಲಿ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪುರ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವರಿಗೆ ರೈತರ ಪರವಾಗಿ ಕಾಳಜಿ ಇಲ್ಲ. ಊಟದ ಪರವಾಗಿ ಚಿಂತೆಯಾಗಿದೆ ಅವರು ಹೋಗಲಿ.

**ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 26ನೇ ತಾರೀಖು ಮುಗಿದು 27ನೇ ತಾರೀಖಿನ ಅಧಿವೇಶನ ನಡೆಯುತ್ತಿದೆ. ಏನೂ ಮಾಡಬೇಕೆಂದು ನೀವೇ ತೀರ್ಮ ನೀಡಬೇಕು. 27ನೇ ತಾರೀಖು ಆಗಿದೆ. ಈಗಾಗಲೇ ಸಮಯವೂ 12 ಗಂಟೆ 5 ನಿಮಿಷವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಧೇಯಕವನ್ನು ನಾವು ತರುತ್ತಿದ್ದೇವೆ ಎಂದು ಹೇಳುತ್ತಿದ್ದಾರೆಯೇ? ಮಾನ್ಯ ಬಸವರಾಜ್ ಎಸ್. ಹೊರಟ್ಟಿಯವರೇ ಈ ವಿಧೇಯಕವನ್ನು ನಾವು ತರುತ್ತಿದ್ದೇವೆ ಎಂದು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, Section 79-A, 79-B and 79-C of the Karnataka Land Reforms Act ಬಗ್ಗೆ ಯಾರು ತಂದಿರುವುದು?

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ನಾನು ಈ ವಿಧೇಯಕವನ್ನು ತಂದಿದ್ದೇನೆ ಎಂದು ನನಗೆ ಗೊಂದಲವಾಗುತ್ತಿದೆ. ನಾನು ಈ ವಿಧೇಯಕವನ್ನು ಮೂವ್ ಮಾಡುತ್ತಿಲ್ಲ. ಕಾಂಗ್ರೆಸ್ ಪಕ್ಷದವರು ಮೂವ್ ಮಾಡಿಸುತ್ತಿರುವುದು. ದಿನಾಂಕ 03.11.2014ರ ಯಾವ ಸರ್ಕಾರ ಅಧಿಕಾರದಲ್ಲಿತ್ತು? ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು.

**ಶ್ರೀ ವಿಜಯ ಸಿಂಗ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ತಿರಸ್ಕರಿಸಬಹುದಾಗಿತ್ತಲ್ಲವೇ?

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮೊದಲು ನಾನು ಓದಿ ಹೇಳುತ್ತೇನೆ. ನಂತರ ಅವರೇ ತಿರಸ್ಕರಿಸಲಿ ಅಥವಾ ಒಪ್ಪಿಕೊಳ್ಳಲಿ, ಅವರಿಗೆ ಬಿಟ್ಟು ಬಿಡುತ್ತೇನೆ. ಮಾಜಿ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ Cabinet Sub-Committee ರಚನೆಯಾಗಿತ್ತು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, I don't need such an explanation.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ವಿವರಣೆ ನೀಡುತ್ತಿಲ್ಲ. ಅವರು ತಂದಿರುವ ಕಾಯ್ದೆಯನ್ನೇ ಮುಂದುವರೆಸುತ್ತಿದ್ದೇವೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಯಾವ Karnataka Land Reforms Act ಕಾಯ್ದೆಯನ್ನು ತಂದಿದ್ದೆವು. Section 79-A, 79-B and 79-C of the Karnataka Land Reforms Act ಬಗ್ಗೆ ಯಾರು ವಿಧೇಯಕವನ್ನು ತಂದಿರುವುದು ಎಂಬುದನ್ನು ಅಷ್ಟೇ ಹೇಳಲಿ.

**(ಗೊಂದಲ)**

ಮಾಡುವುದಿಲ್ಲವೆಂದರೆ ಅಲ್ಲಿಗೆ ಮುಗಿದೆ ಹೋಗುತ್ತದೆ. There will be no question of discussion.

**(ಗೊಂದಲ)**

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಕೂಡ ಹೇಳುತ್ತೇನೆ.

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅದು ಅವಶ್ಯಕವಾಗಿಲ್ಲ. ಅವರು ವಿಧೇಯಕವನ್ನು ಮೂವ್ ಮಾಡುವುದಾದರೆ ಮಾಡಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, Section 79-A, 79-B and 79-C ಅನ್ನು ರದ್ದು ಮಾಡುವುದಿಲ್ಲ ceiling limit ಏನಿದೆ 54 ಎಕರೆ ಎಂದು ಇದ್ದದ್ದು 108 ಎಕರೆ ಹಾಗೂ 5 ಕ್ಕಿಂತ ಹೆಚ್ಚು ಜನ ಇದ್ದರೆ 216 ಎಕರೆ ಎನ್ನುವುದನ್ನು ನಾವು ಮಾಡಿಲ್ಲ ಎಂದು ಹೇಳಿಬಿಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಲಿ. ಅದನ್ನು ವಾಪಸ್ಸು ತೆಗೆದುಕೊಂಡರೆ ಚರ್ಚೆಯೇ ಬೇಡ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಕಾಂಗ್ರೆಸ್‌ನವರು ತಂದಿರುವುದು ಎಂದು ಹೇಳಿದ ಮಾತಿಗೆ ನನ್ನ ಮೈಮೇಲೆ ಬೀಳುತ್ತಿದ್ದಾರೆ. ನನಗೆ ಓದಲು ಬಿಡುತ್ತಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, Section 79-A, 79-B and 79-C ಅನ್ನು ರದ್ದು ಮಾಡಿರುವುದನ್ನು ಅನೂರ್ಜಿತ ಮಾಡಿದ್ದೇವೆ ಎಂದು ಹೇಳಿದರೆ, ಅದಕ್ಕೆ ನಮ್ಮದೇನೂ argument ಇಲ್ಲ. That is what our discussion at all. If they agree, I will stop my discussion, I don't want to debate.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಯಾವುದೇ ಸಂದರ್ಭದಲ್ಲಿ ಸದುದ್ದೇಶ ಕಾರ್ಯಕ್ರಮಗಳಿಗೆ ಬೆಂಬಲ ನೀಡಬೇಕೆಂದು ಇದರಲ್ಲಿ ಹೇಳಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದುದ್ದೇಶಕ್ಕೆ ಬೆಂಬಲ ನೀಡಿದ ಹಾಗೆಯೇ ಇದು?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಇದು ಸದುದ್ದೇಶವೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಸುಮಾರು 34 ಸಂಘಟನೆಗಳು ರೈತರಿಗೆ ಬೆಂಬಲ ನೀಡಿ, ಇವತ್ತು ಅಹೋರಾತ್ರಿ ಹೋರಾಟ ಮಾಡಲು ಹೊರಟ್ಟಿದ್ದಾರೆ. ಅಧಿವೇಶನ ಪ್ರಾರಂಭಗೊಂಡಾಗಿನಿಂದ ಇವತ್ತಿನವರೆಗೂ ಹೋರಾಟ ಮಾಡುತ್ತಿದ್ದಾರೆ. ಇಡೀ ರಾಜ್ಯವನ್ನೇ ಬಂದ್ ಮಾಡಿದ್ದರು. ಕರ್ನಾಟಕ ರಾಜ್ಯದಲ್ಲಷ್ಟೇ ಅಲ್ಲದೇ ಇಡೀ ಭಾರತ ದೇಶದುದ್ದಗಲಕ್ಕೂ ಇವತ್ತು ರೈತರು ಬೀದಿಗೆ ಇಳಿದಿದ್ದಾರೆ. ಎಲ್ಲಾ ಕಡೆ ಹೋರಾಟ ನಡೆದಿದೆ. The Karnataka Agriculture Produce Market Committee (Amendment) Bill ಹಾಗೂ The Karnataka Land Reforms (Second Amendment) Bill ತಂದಿರುವ ಸಲುವಾಗಿ ಇವತ್ತು ರಾಜ್ಯದ ಉದ್ದಗಲಕ್ಕೂ ಹೋರಾಟ ನಡೆದಿದೆ. ಸಣ್ಣ ರೈತರು ಹಾಗೂ ಅತೀ ಸಣ್ಣ ರೈತರು ಭೂಮಿ ಕಳೆದುಕೊಂಡ ಕೂಡಲೇ ಅನಾಥರಾಗಿ ನಿರ್ಗತಿಕರಾಗಿದ್ದರಿಂದ ಕೊನೆಗೆ ಆತ್ಮಹತ್ಯೆಗೆ ಶರಣಾಗುವ ಪರಿಸ್ಥಿತಿ ಬಂದಿದೆ. ಆತ್ಮಹತ್ಯೆಗೆ ಶರಣಾಗುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಯಾರೂ ಈ ರಾಜ್ಯದ ಜನರು ಹಣವನ್ನು ಹೊಂದಿರುತ್ತಾರೆ, ಅದನ್ನು ಪಕ್ಕದ ರಾಜ್ಯದವರು ಕಬಳಿಸುತ್ತಾರೆ. ನಮ್ಮ ಜಲ, ಭೂಮಿ ಎಲ್ಲಾ ಅವರದೇ ಆದರೆ ನಮ್ಮ ಪರಿಸ್ಥಿತಿ ಹೇಗೆ? ಕರ್ನಾಟಕ ರಾಜ್ಯದ ನೆಲ-ಜಲದ ಪ್ರಶ್ನೆ ಬರುತ್ತದೆ. ಕಾನೂನು ಯಾವ ರೀತಿ ಇದೆ ಎಂದರೆ, ನನ್ನ ದೃಷ್ಟಿಯಲ್ಲಿ ಭೂಮಿ ಎಂದರೆ ತಾಯಿ ಸಮಾನ. ಅದಕ್ಕಾಗಿಯೇ ಭೂಮಿ ತಾಯಿ ಎಂದು ಕರೆಯುತ್ತೇವೆ. ನಮ್ಮನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆತ್ತು-ಹೊತ್ತು ಸಾಕಿ ಸಲುಕಿದ ತಾಯಿ, ಜೈವಿಕ ತಾಯಿ. ಆದರೆ, ನಿಜವಾಗಿಯು ಕೃಷಿಕನ ತಾಯಿ ಎಂದರೆ, ಅದು ಭೂಮಿ. ಭೂಮಿಯೇ ಕೃಷಿಕನ ತಾಯಿ. ಸಾವಿರಾರು ತಲಾಂತರದಿಂದ ಬಂದಿರುತ್ತದೆ. ನಾನು ಸಹ ಕೃಷಿ ಕುಟುಂಬದಲ್ಲಿ ಹುಟ್ಟಿದ್ದು. ನಮ್ಮ ಕುಟುಂಬದವರೆಲ್ಲರೂ ತಲ-ತಲಾಂತರದಿಂದ ಕೃಷಿ ಕುಟುಂಬದಿಂದ ಬಂದಿದ ಮೇಲೆ ಮಣ್ಣಿನ ಸಂಸ್ಕಾರ ತಿಳಿದಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ದೃಷ್ಟಿಯಲ್ಲಿ ಜೈವಿಕ ತಾಯಿ ಒಂದು ಕಡೆ ಇದ್ದರೆ, ನಮಗೆ ಸಾವಿರಾರು ವರ್ಷಗಳಿಂದ ಅನ್ನ ನೀಡುತ್ತಿರುವ ಭೂಮಿ ಎಂದರೆ ಅದು ನಮ್ಮ ಕೃಷಿಕ ತಾಯಿ. ರೈತರ ತಾಯಿ ಯಾರು ಎಂದರೆ, ಅದು ಭೂಮಿ. ಇವತ್ತಿನ ದಿವಸ ಈ ಕಾನೂನು ಯಾವ ರೀತಿ ಇದೆ ಎಂದರೆ, ಕೃಷಿಕರಲ್ಲದವರಿಗೆ ಭೂಮಿ ಮಾರಾಟ ಮಾಡಿದರೆ, ತಾಯಿಯನ್ನು ಮಕ್ಕಳಿಂದ ಬೇರ್ಪಡಿಸಿದಂತಾಗುತ್ತದೆ. ಕೃಷಿಕರು ಮತ್ತು ಭೂಮಿ ತಾಯಿಯನ್ನು ಬೇರ್ಪಡಿಸಿದಂತಾಗುತ್ತದೆ. ಕೃಷಿಕರಲ್ಲದವರು ಭೂಮಿ ಖರೀದಿಸುವುದರಿಂದ ತಾಯಿಯನ್ನು ಮಕ್ಕಳಿಂದ ಬೇರ್ಪಡಿಸಿ, ಮಕ್ಕಳನ್ನು ಬೀದಿಪಾಲು ಮಾಡುವಂಥ ಕಾನೂನು ಇದಾಗಿದೆ. ಕರಳು ಕಿತ್ತು ಬರುವಂಥ ಕಾನೂನು ಆಗಿದೆ. ಇದೊಂದು ಮರಣ ಶಾಸನ ಎಂದು ಹೇಳುವುದಕ್ಕೆ ಬಯಸುತ್ತೇನೆ. It will be the last nail on the coffin of farmers of the State. ಈ ರಾಜ್ಯದ ರೈತರ ಶವಪೆಟ್ಟಿಗೆ ಮೇಲೆ ಕೊನೆ ಮೊಳೆ ಹೊಡೆಯುವುದಕ್ಕೆ ಹೊರಟ್ಟಿದ್ದಾರೆ.

**(ಮುಂದು)**

**(954)27.09.2020 12.10 AM ಟಿಸಿಹೆಚ್-ಜಿಆರ್**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಕೃಷಿಕರಲ್ಲದವರು ಕೃಷಿ ಭೂಮಿಯನ್ನು ಖರೀದಿ ಮಾಡಬಹುದು ಎಂಬ ಅವಕಾಶ ಮಾಡಿದರೆ, ಈ ನಾಡಿನ ಎಲ್ಲಾ ಭೂಮಿಯು ಹೋಗುತ್ತದೆ. ಅದರಲ್ಲಿರತಕ್ಕಂಥ ಜಲಾಶಯದ ನೀರು ಕೂಡ ಹೋಗುತ್ತದೆ. ನಮ್ಮ ರಾಜ್ಯದ ರೈತರು ಆ ಕಷ್ಟ-ಕಾರ್ಪಣ್ಯದಿಂದಾಗಿ ಸಾಲ ತೀರಿಸುವುದಕ್ಕಾಗಿ ಜಮೀನು ಮಾರಿಕೊಂಡು ಕೃಷಿ ಕಾರ್ಮಿಕರು ಆತ್ಮಹತ್ಯೆಗೆ ಶರಣಾಗತಿಯಾಗುವಂತಹ ಪ್ರಸಂಗ ಬರುತ್ತದೆ. ನಿಜವಾಗಲೂ ಉತ್ತಮ ಹೃದಯ ಇದ್ದಿದ್ದರೆ ನೀವು ಇಂತಹ ಕಾನೂನನ್ನು ತರುತ್ತಿರಲಿಲ್ಲ. ಇವರಿಗೆ ಹೃದಯವೇ ಇಲ್ಲ. ಇವರ ಹೃದಯ ಕಲ್ಲುಬಂಡೆಯಂತಿದೆ. ನನ್ನ ದೃಷ್ಟಿಯಲ್ಲಿ ಇವರು ಹೃದಯ ಹೀನರು. ಮಾನ್ಯ ಸಾರಿಗೆ ಸಚಿವರಾದ ಶ್ರೀ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ್ಮಣ ಸಂಗಪ್ಪ ಸವದಿಯವರು ನಗುತ್ತಿದ್ದಾರೆ, ಅವರು ಒಬ್ಬರು ರೈತರು. ಮತ್ತು ದೊಡ್ಡ ಕಬ್ಬಿನ ಬೆಳೆಗಾರರು ಆಗಿದ್ದಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮಾನ್ಯ ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನೀವು ಕಲ್ಲುಬಂಡೆ ಎಂದು ಹೇಳಿದರಲ್ಲಾ, ಅದಕ್ಕೆ ನಮಗೆ ಖುಷಿ ಏನೆಂದರೆ, ಆಯುಷ್ಯ ವೃದ್ಧಿಯಾಯಿತು ಎಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಬಹುತರವಾಗಿ ನಮ್ಮ ಯುವ ಜನಾಂಗ ಕೃಷಿ ಕ್ಷೇತ್ರಕ್ಕೆ ಬರುವಂತೆ ಮಾಡುತ್ತೇವೆಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿರುವುದನ್ನು ಓದಿದೆನು. ಅದು ಸರಿಯೊ, ತಪ್ಪೊ ಎಂದು ಅವರು ಉತ್ತರದಲ್ಲಿ ಹೇಳಲಿ. ಈ ಕ್ಷೇತ್ರ ಲಾಭದಾಯವಾಗಿಲ್ಲವೆಂದು ನಮ್ಮ ಯುವ ಜನಾಂಗ ಕೃಷಿಯಿಂದ ಇಳಿಮುಖವಾಗುತ್ತಿದ್ದಾರೆ. Information Technology ಜ್ಞಾನ ಇದ್ದವರು ಈ ಜಮೀನು ಖರೀದಿ ಮಾಡಿ ಹೆಚ್ಚು ಉತ್ಪಾದನೆಯನ್ನು ಮಾಡುತ್ತಾರೆಂದು ಹೇಳಿದ್ದಾರೆ. ನಮ್ಮ ರೈತರ ಮಕ್ಕಳು ಕೂಡ ಅಮೆರಿಕಾ, ಕೆನಡ ಮತ್ತು ಇಂಗ್ಲೆಂಡ್‌ನಲ್ಲಿ ಸಾಕಷ್ಟು ಜನ ಇದ್ದಾರೆ. ನಮ್ಮ ರೈತರ ಮಕ್ಕಳು ಸಾಫ್ಟ್‌ವೇರ್ ಇಂಜಿನಿಯರ್ ಆಗಿಲ್ಲವೇ? ಬರೀ ಬೆಂಗಳೂರಿನಲ್ಲಿರುವವರ ಮಕ್ಕಳಷ್ಟೇ ಸಾಫ್ಟ್‌ವೇರ್ ಇಂಜಿನಿಯರ್ ಎಂದು ತಿಳಿದಿದ್ದೀರಾ? ಇವತ್ತಿನ ದಿವಸ ನಮ್ಮ ರೈತರ ಮಕ್ಕಳು ಬಿ.ಇ. ಇನ್‌ಫರ್ಮೇಷನ್ ಸೈನ್ಸ್ ಮಾಡಿಕೊಂಡಿದ್ದಾರೆ. ಕಂಪ್ಯೂಟರ್ ಸೈನ್ಸ್ B.E., (Computer Science) ಮಾಡಿದ್ದಾರೆ. B.E., (Electronics and Communication) ಮಾಡಿಕೊಂಡಿದ್ದಾರೆ. ಈ ರೀತಿ ಅನೇಕ ಲಕ್ಷಾಂತರ ಮಕ್ಕಳು ಇವತ್ತಿನ ದಿವಸ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದಾರೆ. ಈ ರೀತಿ ಇದ್ದರೂ ಕೂಡ ನೀವು ಆ ರೈತರಿಗೆ ಐ.ಟಿ. ಜ್ಞಾನ ಇಲ್ಲವೆಂದರೆ ಹೇಗೆ? ಹಾಗಾದರೆ, ಆ ಜಮೀನನ್ನು ಐ.ಟಿ. ಜ್ಞಾನ ಇದ್ದವರಿಗೆ ಮಾರಿಬಿಡುವುದೇ? ಏನು ಕಾರ್ಪೊರೇಟ್ ಕಂಪನಿಗಳಿವೆ, . . .

**ಸಭಾಪತಿಯವರು:-** ಮರಿತಿಬ್ಬೇಗೌಡರವರು ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ನನಗೆ ಏನು ಅನಿಸುತ್ತದೆಂದರೆ, ಈ ಸರ್ಕಾರ ಕಂಪನಿ ಸರ್ಕಾರವಿದ್ದಂತೆ. ಕಬ್ಬಿಣದ ಸರ್ಕಾರವಾಗಿದೆ. ಏಕೆಂದರೆ, ಕಾರ್ಪೊರೇಟ್ ಸಂಸ್ಥೆಗಳಿಗೆ ಈ ಜಮೀನು ಮಾರಾಟ ಮಾಡುವಂತಹ ಹುನ್ನಾರವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂಗ್ಲೇಂಡ್‌ನಿಂದ ಈಸ್ಟ್ ಇಂಡಿಯಾ ಕಂಪನಿ ನಮ್ಮ ದೇಶಕ್ಕೆ ಬಂತು. ಇಡೀ ದೇಶವನ್ನೇ ಕಬಳಿಸಿದರು. ಇವತ್ತು ಆ ಕಂಪನಿಯವರಿಗೆ . . .

**ಸಭಾಪತಿಯವರು:-** ಮಾನ್ಯ ಹೊರಟ್ಟಿಯವರು...

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನ ಮಾತುಗಳನ್ನು ಮುಗಿಸುತ್ತೇನೆ. I do have some privileges. ನನ್ನನ್ನು ತಡೆಯಬೇಡಿ ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಆಯಿತು ಮಾತನಾಡಿ. ಸಮಯ ಆಯಿತು ಅದಕ್ಕೋಸ್ಕರ ಕೇಳಿದ್ದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತು ಆಗಲೇ ತಾರೀಖು 27.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾಹಿತಿ ತಂತ್ರಜ್ಞಾನ ಇದ್ದವರು ಮಾತ್ರ ಜಮೀನು ಖರೀದಿ ಮಾಡಬೇಕೆಂದು ಹೇಳಿದ್ದಾರೆ. ನಾನು ಮಾಹಿತಿ ತಂತ್ರಜ್ಞಾನ ಸಚಿವರಾಗಿದ್ದಾಗ, ಅಖಂಡ ಬಿಜಾಪುರ ಜಿಲ್ಲೆಯ ಪ್ರತಿಯೊಂದು ರೈತ ಕುಟುಂಬಕ್ಕೆ ಟ್ಯಾಬ್ಲೆಟ್ ವಿತರಣೆ ಮಾಡಿದೆನು. ಕೃಷಿ ಕುರಿತು ಸಾಫ್ಟ್‌ವೇರ್ ಒಂದನ್ನು ಅಳವಡಿಸಿ, ಬಹುತೇಕವಾಗಿ ಎರಡು ಜಿಲ್ಲೆಗಳಿಗೆ ಹಂಚಿಕೆ ಮಾಡಿದೆನು. ನಾನು ಸರ್ಕಾರದ ಬೊಕ್ಕಸದಿಂದ ದುಡ್ಡನ್ನು ಪಡೆದು ಮಾಡಲಿಲ್ಲ. ಇದೇ ಸಾಫ್ಟ್‌ವೇರ್‌ರವರಿಂದ ನಾನು ದಾನವಾಗಿ ಪಡೆದುಕೊಂಡು ಆ ಎರಡೂ ಜಿಲ್ಲೆಗಳಿಗೆ ಟ್ಯಾಬ್ಲೆಟ್‌ಗಳನ್ನು ವಿತರಣೆ ಮಾಡಿದೆವು. ಆಗ ರೈತರೆಲ್ಲರೂ ಅದನ್ನು ಆಪರೇಟ್ ಮಾಡಿದ್ದರು. ಈಗ ಅವರಿಗೆ ಏನು ಐ.ಟಿ. ಜ್ಞಾನ ಇಲ್ಲವೇ? ಅಂದರೆ ಶೀತಕ್ಕೆ ನೆಗಡಿ ಬಂದರೆ, ನೀವು ಮೂಗನ್ನೇ ಕತ್ತರಿಸುವವರೇ? ಆ ಶೀತಕ್ಕೆ ನೀವು treatment ಕೊಡಬೇಕು. ಆ ರೈತರಿಗೆ ನೀವು ತರಬೇತಿ ಕೊಟ್ಟು ಸನ್ನದ್ದರನ್ನಾಗಿ ಮಾಡಿ. ಅವರಿಗೆ ಆಧುನಿಕ ಕೃಷಿ ಜ್ಞಾನವನ್ನು ಕೊಡಿ. ಹೊಸ ಟೆಕ್ನಾಲಜಿ ಬಗ್ಗೆ ಅವರಿಗೆ ತಿಳಿಸಿ. ಆಧುನಿಕ ಕೃಷಿ ಜ್ಞಾನದದಿಂದ ಅವರು ಪ್ರತಿ ಎಕರೆಯಲ್ಲಿ ಹೆಚ್ಚು ಉತ್ಪಾದನೆ ಮಾಡಿ ಹೆಚ್ಚು ಆದಾಯ ಪಡೆಯುವಂತಹ ಒಂದು ತರಬೇತಿಯನ್ನು ಕೊಟ್ಟು, ಸಲಕರಣೆಗಳನ್ನು ಒದಗಿಸಿ ಕೊಡಿ. ಅದನ್ನು ಬಿಟ್ಟು ನೀವು ಅವರಿಗೆ ಏನು ಐ.ಟಿ. ಜ್ಞಾನವಿಲ್ಲ, ಅವರಿಗೆ ಕೃಷಿ ಬಗ್ಗೆ ಏನೂ ಜ್ಞಾನ ಇಲ್ಲವೆಂದು ಹೇಳಿ, ಬಂದವರೇನು ಕೃಷಿ ಮಾಡುತ್ತಾರೆಯೇ? ಅವರೇನು ಜಮೀನಿನಲ್ಲಿ ಕಾಲು ಸಹ ಇಡುವುದಿಲ್ಲ. ನಮ್ಮ ರೈತ ಬರಿಗಾಲಿನಲ್ಲಿ ಹೊಲಕ್ಕೆ ಹೋಗಿ, ಹೊಲಕ್ಕೆ ನೀರನ್ನು ಹಾಯಿಸುತ್ತಾನೆ. ಇವರು ಆ ರೀತಿ ಬರುತ್ತಾರೆಯೇ? ಅವರು shoe and socks

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾಕಿಕೊಂಡು ಬಂದಿರುತ್ತಾರೆ. ಅವರು ಆ shoe ನ್ನು ಕೂಡ ಬಿಚ್ಚುವುದಿಲ್ಲ. ಅವರು ಅಲ್ಲೇ ಹೊಲದ ಹೊರಗಡೆ ನೋಡಿಕೊಂಡು ಹೋಗುತ್ತಾರೆ. ಅವರು ಬರೀ ಮೇಲ್ಭಾಗದಲ್ಲಿ ನೋಡತಕ್ಕಂಥವರು. ಅವರು ಆಕಾಶದಲ್ಲಿ ಹೆಲಿಕಾಪ್ಟರ್‌ನಲ್ಲಿ ಅಡ್ಡಾಡುವ ಜನರು. ಕಾರಿನಲ್ಲಿ ಬಂದು ದಂಡೆಯಲ್ಲಿ ನಿಂತುಕೊಂಡು ಅಲ್ಲಿ ಯಾರನ್ನೋ ಕೇಳಿ ಹಾಗೆಯೇ ಹೋಗತಕ್ಕಂಥವರು. ಆಮೇಲೆ ಇವರು ಏನು ಜಮೀನು ಖರೀದಿ ಮಾಡುತ್ತಾರೆ, ನಾನು ನಿಷಿದ್ಧವಾಗಿ ಹೇಳುವುದಾದರೆ, ಅವರು ಕಲ್ಟಿವೇಷನ್ ಕೂಡ ಮಾಡುವುದಿಲ್ಲ. ಅವರು ರಿಯಲ್ ಎಸ್ಟೇಟ್ ಕುಳಗಳು, ಅವರೇನು ಮಾಡುತ್ತಾರೆ?

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಕಂಪ್ಯೂಟರ್‌ನಲ್ಲಿ ಬೆಳೆ ಬೆಳೆಯುತ್ತಾರೆ ಮತ್ತು ಕಂಪ್ಯೂಟರ್‌ನಲ್ಲೇ ಬಿತ್ತನೆ ಮಾಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ,. . . ಆ ದೃಷ್ಟಿಯಿಂದ ನಾನು ಇಷ್ಟನ್ನೇ ಹೇಳುತ್ತೇನೆ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಪಾಟೀಲ್‌ಜಿಯವರೇ, ನಿನ್ನೆ ಕೂಡ ಭಾಷಣವನ್ನು ಪ್ರಾರಂಭ ಮಾಡಿದ್ದೀರಿ. ನೀವು ಭಾಷಣ ಪ್ರಾರಂಭ ಮಾಡಿ ಒಂದು ದಿವಸ ಆಯಿತು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಏನು ಒಂದು ದಿನ ಆಯಿತು?

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ತಮ್ಮ ಬಾಷಣವನ್ನು ಬೇಗ ಮೊಟಕುಗೊಳಿಸಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ರೈತ ಹಗಲು-ರಾತ್ರಿ ನಿದ್ರೆ ಮತ್ತು ನೀರಡಿಕೆಯಿಲ್ಲದೇ ತಾನು, ತನ್ನ ಹೆಂಡತಿ ಮತ್ತು ಮಕ್ಕಳೆಲ್ಲಾ ಸೇರಿ ಮಣ್ಣಿನಲ್ಲಿ ಮಣ್ಣಾಗಿ ದುಡಿಮೆ ಮಾಡುತ್ತಾರೆ. ಈಗ ಈ ಬಿಲ್‌ನ್ನು ತರುತ್ತಿರುವುದರಿಂದ ತೊಂದರೆಯಾಗುತ್ತದೆ. ಈ ರೀತಿಯಾದಲ್ಲಿ ಅವರ ಪರಿಸ್ಥಿತಿ ಹೇಗೆ? ಆ ರೈತರು ದುಡಿಮೆ ಮಾಡದಿದ್ದರೆ, ಹೊಟ್ಟೆಗೆ ರೊಟ್ಟಿ ತಿನ್ನುವುದಕ್ಕಾಗುವುದಿಲ್ಲ, ನಿಮಗೆ ಅನ್ನ ಕೂಡ ಸಿಗುವುದಿಲ್ಲ. ಹಾಗಾಗಿ, ಅನ್ನದಾತರ ಬಗ್ಗೆ ಕಾಳಜಿ ಕಕ್ಕಲಾಯ್ತಿ ಇರಬೇಕು. ಇಂತಹ ಕಾನೂನನ್ನು ತರುವುದರ ಮುಖಾಂತರ ಕರ್ನಾಟಕ ರಾಜ್ಯದಲ್ಲಿ ಭೂಮಿಯು ಉಳಿಯುವುದಿಲ್ಲ. ಕರ್ನಾಟಕ ರಾಜ್ಯದಲ್ಲಿನ ಜಲಾಶಯದ ನೀರು ಕೂಡ ಉಳಿಯುವುದಿಲ್ಲ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಣ್ಣ–ಪುಟ್ಟ ರೈತರು ತನ್ನ ಸಾಲಕ್ಕಾಗಿ ಜಮೀನನ್ನು ಇಂತಹ ಶ್ರೀಮಂತರಿಗೆ ಮಾರಾಟ ಮಾಡಿಕೊಂಡು ಆತ್ಮಹತ್ಯೆಗೆ ಶರಣಾಗುವಂತಹ ಪರಿಸ್ಥಿತಿ ಬರುತ್ತದೆ. ಅದಕ್ಕೆ ದಯಮಾಡಿ, Section 79-A, 79-B and 79-C of the Karnataka Land Reforms Act ಗಳನ್ನು ನೀವೇನು ರದ್ದುಪಡಿಸಿದ್ದೀರಿ, ಹಿಂದೆ 'ಉಳುವವನೇ ಭೂಮಿಯ ಒಡೆಯ' ಎನ್ನುವಂಥದ್ದು ಇತ್ತು. ಈಗ 'ಉಳ್ಳವನೇ ಭೂಮಿಯ ಒಡೆಯ' ಎಂದು ಮಾಡುವುದಕ್ಕೆ ಹೊರಟಿದ್ದೀರಿ. 'ಉಳುವವನೇ ಭೂಮಿಯ ಒಡೆಯ' ಎಂದು ನಾವು ಮಾಡಿದ್ದೆವು. ಆದರೆ, ನೀವು 'ಉಳ್ಳವನೇ ಭೂಮಿಯ ಒಡೆಯ' ಎನ್ನುವಂಥ ತತ್ವಕ್ಕೆ ಹೋಗಿದ್ದೀರಿ. ನೋಡಿ, ಆ ರೈತರಿಗೆ ಐ.ಟಿ. ಜ್ಞಾನ ಇಲ್ಲವೆಂದು ತಾವೇನು ತಿಳಿದಿದ್ದೀರಿ. it is a wrong perception. ಆ ರೈತರ ಮಕ್ಕಳು ಕೂಡ ಅಷ್ಟೇ ಮುಂದುವರೆದಿದ್ದಾರೆ. ಅದಕ್ಕೆ ಮಾನ್ಯ ಸಭಾಪತಿಯವರೇ, ಈ ಕಾನೂನು ಏನು ತಂದಿದ್ದಾರೆ, ಇದು ರೈತರಿಗೆ ಮಾರಕವಾಗುವಂತಹ ಕಾನೂನು. ಇದು 'ರೈತರ ಮರಣ ಶಾಸನವಾಗುವಂತಹ ಕಾನೂನು' ಆಗಿದೆ. 'ಇವರು ರೈತರ ಶವ ಪಟ್ಟಿಗೆ ಮೇಲೆ ಕೊನೆ ಮಳೆ ಹೊಡೆಯುವುದಕ್ಕೆ ಹೊರಟಿದ್ದಾರೆ'. ಇವರನ್ನಂತು ಆ ದೇವರು ಕ್ಷಮಿಸುವುದಿಲ್ಲ. ಇವರು ಈ ರೈತರ ಶಾಪಕ್ಕೆ ಬಲಿಯಾಗುತ್ತಾರೆ. ಇವರೇನು ಬಹುತರವಾಗಿ ಇನ್ನು ಬಹಳ ದಿವಸ ಬದುಕುವುದಿಲ್ಲ. ಈ ಬಿಲ್‌ನ್ನು ಹಿಂದಕ್ಕೆ ಪಡೆದುಕೊಳ್ಳಬೇಕು ಎಂದು ತಮ್ಮ ಮುಖಾಂತರ ಹೇಳಿ, ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. Section 79-A, 79-B and 79-C of the Karnataka Land Reforms Act ಗಳನ್ನು ರದ್ದುಪಡಿಸುವ ಈ ಬಿಲ್ ಏನಿದೆ, ಇದನ್ನು ಪುನರ್‌ಜ್ಜೀವನ ಮಾಡಬೇಕು. ಈ ಬಿಲ್ ವಾಪಸ್ಸು ಪಡೆದುಕೊಂಡರೆ, ರೈತರ ಏನು ಒಂದು ಶಾಪಕ್ಕೆ ಗುರಿಯಾಗಿದ್ದಾರೆ, ಆ ಶಾಪದಿಂದ ಮುಕ್ತಿಯಾಗಲು ಸಾಧ್ಯವಿದೆ. ಇಲ್ಲವೆಂದರೆ, ಇವರು ಕೇವಲ ಸರ್ಕಾರ ಕಳೆದುಕೊಳ್ಳುವುದಷ್ಟೇ ಅಲ್ಲ, ಮುಂದೆ ಇವರಿಗೆ ಈ ಪಾಪದ ಬಿಸಿ ತಟ್ಟಿ ಇವರೇನಾಗುತ್ತಾರೆ ಎನುವುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ನಾನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಏನು ರೈತರ ವಿರೋಧಿಯಾದಂತಹ ಮರಣ ಶಾಸನವನ್ನು ತರುತ್ತಿದ್ದಾರೆ, ದಯಮಾಡಿ ಅದನ್ನು ಪಾಸ್ ಮಾಡಲು ಬಿಡಬಾರದು. ಈಗೇನು ಸರ್ಕಾರ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದಾರೆ, ಆ ಬಿಲ್ಲನ್ನು ಹಿಂಪಡೆದರೆ ಬಹಳ ಕಲ್ಯಾಣವಾಗುತ್ತದೆ. ರೈತ ಸಮುದಾಯಕ್ಕೆ ಒಳ್ಳೆಯದಾಗುತ್ತದೆ. ನಾವು ಇಲ್ಲಿಗೆ ಬಂದಿರತಕ್ಕಂಥವರು ಎಲ್ಲರೂ ಶೇ.99ರಷ್ಟು ರೈತರ ಮಕ್ಕಳೆ. ಆದರೆ, ರೈತರ ವಿಷಯ ಬಂದಾಗ ಮಾತ್ರ ನಾವು ಬಹಳ ಚರ್ಚೆ ಮಾಡುವುದಿಲ್ಲ. ಇದು ಬಹಳ ನೋವಿನ ಸಂಗತಿ. ಆ ದೃಷ್ಟಿಯಿಂದ ನಾನು ಮತ್ತೊಮ್ಮೆ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇಂತಹ ಮರಣ ಶಾಸನ ಏನಿದೆ, ಇದು ರೈತರಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಘಾತ ತಂದುಕೊಡುವಂತಹ ಹಾಗೂ ರೈತ ಸಂತತಿಯನ್ನೇ ನಾಶ ಮಾಡತಕ್ಕಂಥ ಈ ಶಾಸನವನ್ನು ವಾಪಸ್ಸು ಪಡೆಯಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರ ಇವತ್ತು ತಂದಂಥ ಬಿಲ್ ಏನಿದೆ, ಇದು ಬಹಳ ನೋವಿನ ಸಂಗತಿ. ಪ್ರಗತಿಪರ ಮತ್ತು ದೇಶದ ಪರ ಎಂದು ರೈತರ ಪರ ಕಾಯ್ದೆಯೆಂದು ದೇಶಾದ್ಯಂತ ಹೆಗ್ಗಳಿಕೆಗೆ ಒಳಗಾಗಿರುವ ಕರ್ನಾಟಕ ಭೂ ಸುಧಾರಣೆಗಳ ಕಾಯ್ದೆ 1960ಕ್ಕೆ ರೈತ ಮತ್ತು ಕೃಷಿ ಕಾರ್ಮಿಕರಿಗೆ ಮಾರಕವಾಗುವಂತಹ ಕಾಯ್ದೆಯ ಹೃದಯ ಭಾಗವಾಗಿರುವ ಕಲಂ 79 ಮತ್ತು ಕಲಂ 80 ಗಳನ್ನು ಪೂರ್ವಾನ್ವಯವಾಗುವಂತೆ ರದ್ದುಪಡಿಸಲು ಹಾಗೂ ಸೆಕ್ಷನ್ 63 ಮತ್ತು 109 ಗಳಲ್ಲಿ ವಿಧಿಸಿರುವ ನಿರ್ಬಂಧವನ್ನು ಕಿತ್ತುಹಾಕಿ, ಕೃಷಿಕ ಅಲ್ಲದವರು ರೈತರಿಂದ ಕೃಷಿ ಜಮೀನು ಖರೀದಿಸಲು ಅನುವು ಮಾಡಿಕೊಟ್ಟು, ರೈತಾಪಿ ಕುಟುಂಬಗಳನ್ನು ಒಕ್ಕಲೆಬ್ಬಿಸುವ ಪ್ರಸ್ತುತ ಬಿ.ಜೆ.ಪಿ., ಸರ್ಕಾರ ಹೊರಡಿಸಿರುವ ಭೂ ಸುಧಾರಣೆಗಳ ಕಾಯ್ದೆ ತಿದ್ದುಪಡಿ 2020.

ಮಾನ್ಯ ಕಂದಾಯ ಸಚಿವರಿಗೆ ನಾನು ಹೇಳುವುದೇನೆಂದರೆ, ಇವತ್ತು ನೀವು ಏನು ಕಾನೂನನ್ನು ತಂದಿದ್ದೀರಿ, ಮೊದಲು ಎರಡು ಲಕ್ಷ ಆದಾಯಕ್ಕಿಂತ ಹೆಚ್ಚು ಆದಾಯವನ್ನು ಹೊಂದಿದ್ದಂತವರು ರೈತರ ಭೂಮಿಯನ್ನು ಖರೀದಿ ಮಾಡುವಂತಹ ಕಾಯ್ದೆ ಇತ್ತು. ತದನಂತರ ಅದನ್ನು 25 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದರು. ನಾನು ನನ್ನ ಮಗನ ಹೆಸರಿನಲ್ಲಿ ಜಮೀನು ತೆಗೆದುಕೊಳ್ಳಬೇಕೆಂದಾಗ ನಾವೇ ಜಮೀನನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. 25 ಲಕ್ಷ ರೂಪಾಯಿಗಳು ಮಾಡಿದ್ದರಿಂದ ಜಮೀನನ್ನು ಖರೀದಿ ಮಾಡಲಾಗಲಿಲ್ಲ. ರೈತ ಕುಟುಂಬದಿಂದ ಬಂದವರು ಎನ್ನತಕ್ಕಂಥ ದೃಷ್ಟಿಯಿಂದ ನಾವು ಜಮೀನನ್ನು ಖರೀದಿ ಮಾಡಿದೆವು. ಇವತ್ತು ನಾನು ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ನೀವು ಕರ್ನಾಟಕದ ಎಲ್ಲಾ ಕಡೆಗಳಲ್ಲಿ ಹೋಗಿ ನೋಡಿ, ಮೊದಲು ಎಷ್ಟು ಭೂಮಿ ಇತ್ತು, ಈಗ ಎಷ್ಟು ಲೇಔಟ್‌ಗಳು ಆಗಿವೆ ನೋಡಬೇಕು. ಎಷ್ಟು N.A., ಮಾಡಿದ್ದಾರೆ ನೋಡಿ. ನೀವು ಎಲ್ಲಿ ಬೇಕಾದರೂ ಹೋಗಿ. ಇದು ಒಂದು ರೀತಿಯ ದಂಧೆಯಾಗಿದೆ. ಇಲ್ಲಿಯವರೆಗೆ ರೈತರ ಜಮೀನನ್ನು ತೆಗೆದುಕೊಳ್ಳತಕ್ಕಂಥ ಅಧಿಕಾರ ಇರಲಿಲ್ಲ. Land acquisition ಮಾಡಿ ಬಿ.ಡಿ.ಎ., ಮುಂತಾದ ಡೆವಲಪ್‌ಮೆಂಟ್ ಅಥಾರಿಟಿಯವರೆಲ್ಲಾ ತೆಗೆದುಕೊಳ್ಳುತ್ತಿದ್ದರು. ಈಗ ನೀವು ತಂದಿರುವಂತಹ ಮಸೂದೆಯಲ್ಲಿ ಕೃಷಿ ಭೂಮಿಯನ್ನು ಯಾರು ಬೇಕಾದರೂ ಖರೀದಿ ಮಾಡಬಹುದು. ಇವತ್ತು ನಾನು ಹೇಳುವುದೇನೆಂದರೆ, ನೀವು ಹೇಳಿದ ಮಾರನೇ ದಿವಸವೇ ಸಬ್–ರಿಜಿಸ್ಟ್ರಾರ್ ಆಫೀಸ್ ಬಳಿ ಸಾಕಷ್ಟು ಗಲಾಟೆ ಆಗುತ್ತಿತ್ತು. ಇವತ್ತಿನ ದಿವಸ ಆ ಬಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ರೈತರು ಬದುಕುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿ ನಿರ್ಮಾಣವಾದಾಗ ಅವರು ಏನು ಮಾಡುತ್ತಾರೆಂದರೆ, ಎಕರೆಗೆ 25 ಲಕ್ಷ ರೂಪಾಯಿಗಳು ಕೊಡುತ್ತೇವೆಂದ ಕೂಡಲೇ ಆ 25 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಾಗ ಮುಂದೆ ಅವರ ಪರಿಸ್ಥಿತಿ ಏನಾಗಬೇಕು. ಅವರು 2-3 ವರ್ಷಗಳ ಕಾಲ ಆ ದುಡ್ಡನ್ನು ತಿನ್ನುತ್ತಾರೆ. ಆಮೇಲೆ ಕೂಲಿಗೆ ಹೋಗುತ್ತಾರೆ. ನಮ್ಮ ಮುಂಡಗೋಡದಲ್ಲಿ ಈ ಟಿಬೇಟಿಯನ್ನರಿಗೆ ಜಾಗ ಕೊಟ್ಟರು.

(ಮುಂದು...)

**(955)27-9-2020/12.20 AM/ಎಂ.ಎಂ-ಎಂ.ಡಿ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):-**

ಅಲ್ಲಿ ಎಂಥೆಂಥ ದೊಡ್ಡ ದೊಡ್ಡ ರೈತರು ಜಮೀನು ಕೊಟ್ಟರೂ ಇವತ್ತು ಅಲ್ಲಿಯೇ ಕೂಲಿ ಮಾಡುವುದಕ್ಕೆ ಹೋಗುತ್ತಾರೆ. ಇದನ್ನು ಯಾರು ತೆಗೆದುಕೊಳ್ಳುತ್ತಾರೆ, Real Estate ನವರು, ದುಡ್ಡಿದ್ದವರು, ಬಂಡವಾಳಶಾಹಿಗಳು ಮತ್ತು ಹೊರಗಿನಿಂದ ಬಂದವರು ತೆಗೆದುಕೊಳ್ಳುತ್ತಾರೆ ಎಂದು ತಾವು ಹೇಳಿದಿರಿ. ಇವತ್ತು ಮಾನ್ಯ ಮಲ್ಕಾಪೂರೆಯವರು ಹೇಳಬೇಕು. ರಾಯಚೂರಿನಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ನಿಮ್ಮ ಎಷ್ಟು ಕ್ಯಾಂಪುಗಳಿವೆ? 'ದೇಸಾಯಿ ಕ್ಯಾಂಪ'ನ್ನು ತಾವು ನೋಡಿದ್ದೀರಾ? ಅಲ್ಲಿ ಏನು ಹಣೆಬರಹವಾಗಿದೆ? ಎಲ್ಲಾ ಆಂಧ್ರದವರು ಬಂದು ಭೂಮಿಯಲ್ಲಿ ಭತ್ತ ಬೆಳೆಯುತ್ತಾರೆ. ಈಗ ಅವರು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾಳೆ ಏನು ಮಾಡುತ್ತಾರೆ ಎಂದರೆ ಇದನ್ನು ಖರೀದಿ ಮಾಡುತ್ತಾರೆ. ಈಗ ಅವರಿಗೆ ಬೇಕು ಬೇಕಾದ ಹಾಗೆ ನೀರು ಬಿಟ್ಟು ರೈತರು ಬೆಳೆಯಬಾರದು ಎನ್ನುವ ಸಂದೇಶವನ್ನು ಮಾಡಿದ ಅನೇಕ ಉದಾಹರಣೆಗಳನ್ನು ನೋಡಿದ್ದೇವೆ. ನೀವು ದೇಸಾಯಿ ಕ್ಯಾಂಪನ್ನು ನೋಡಿದ್ದೀರಿ. ಅಲ್ಲಿ ಯಾರಾದರೂ ಒಬ್ಬರು ಕರ್ನಾಟಕದವರು ಇದ್ದಾರಾ? ಎಲ್ಲರೂ ಭೂಮಿಯನ್ನು ಮಾರುತ್ತಾರೆ. ಇಲ್ಲಿಯವರೆಗೆ ರೈತರಾಗಿದ್ದವರೇ ಇದನ್ನು ತೆಗೆದುಕೊಳ್ಳಬೇಕೆಂದು restriction ಇತ್ತು. ನೀವು ಬಿಟ್ಟಾಗ ಇದನ್ನು ತರುವ ಅವಶ್ಯಕತೆ ಏನಿತ್ತು? ಇದೇ ರೀತಿ ಆದರೆ ಮುಂದೆ ರೈತರು ಬೆಳೆ ಬೆಳೆಯುವುದಕ್ಕೆ ಯಾರು ಅನ್ನ ತಿನ್ನುವುದಕ್ಕೆ ಆಗುತ್ತದೆಯೇ, ಯಾರಾದರೂ ಕಾಳು ಬೆಳೆಯುತ್ತಾರಾ? ಇದರ ಬಗ್ಗೆ ಇನ್ನೂ 20-25 ವರ್ಷ ವಿಚಾರ ಮಾಡಿ. ಕಾಂಗ್ರೆಸ್‌ನವರು ತಂದರು ಎಂದು ನೀವು ಹೇಳುತ್ತೀರಿ, ನೀವು ತಂದಿರಿ ಎಂದು ಅವರು ಹೇಳುತ್ತಾರೆ. ಯಾರೇ ತರಲಿ ಯಾರು ತಂದರೂ ಸಹ ಇದು ಸರಿಯಾದುದಲ್ಲ ರೈತರ ಜಮೀನು ರೈತರಿಗೆ ಇರಬೇಕು. ಅದನ್ನು ನೀವು ಯಾರ್ಯಾರೋ ವ್ಯಾಪಾರಸ್ಥರಿಗೆ, ಮತ್ತೊಬ್ಬರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾರುವುದಕ್ಕೆ ಹೋದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಪ್ರಾಯೋಗಿಕವಾಗಿ ವಿಚಾರ ಮಾಡಿ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಯವರಿಗೆ ಒಂದು ಪತ್ರ ಬರೆದಿದ್ದಾರೆ. *‘ಸೆಕ್ಷನ್ 79ಎ ರಡಿಯಲ್ಲಿ ಕೃಷಿಯೇತರ ಭೂಮಿಗಳಿಂದ ವಾರ್ಷಿಕ 25 ಲಕ್ಷಕ್ಕೂ ಹೆಚ್ಚು ಆದಾಯ ಹೊಂದಿರುವ ವ್ಯಕ್ತಿ ಅಥವಾ ಕುಟುಂಬ ಕೃಷಿ ಭೂಮಿಯನ್ನು ಖರೀದಿಸುವ ಅಥವಾ ಹೊಂದಲು ನಿರ್ಧರಿಸಲಾಗಿದೆ. ಅಲ್ಲದೇ ಸೆಕ್ಷನ್ 79ಬಿ ಅಡಿ ಕೃಷಿಕರಲ್ಲದವರು, ಶಿಕ್ಷಣ ಸಂಸ್ಥೆಗಳು, ಮಠ ಮಾನ್ಯಗಳು, ಟ್ರಸ್ಟ್‌ಗಳು, ಸೊಸೈಟಿಗಳು ಮುಂತಾದವರು ರೈತ ಭೂಮಿಯನ್ನು ಹೊಂದಲು ಸಾಧ್ಯವಿಲ್ಲ’.* ಇದನ್ನೆಲ್ಲಾ ಮಾಡಿದರೆ ಇವೆಲ್ಲಾ ತೆಗೆದುಕೊಳ್ಳುತ್ತಾರೆ. ಆಮೇಲೆ ಹೇಳುತ್ತಾರೆ, “ಮಾನ್ಯ ಮುಖ್ಯಮಂತ್ರಿಯವರೇ, ನಿಮ್ಮ ಸರ್ಕಾರ ಭೂ ಸುಧಾರಣೆ ಕಾಯಿದೆಗೆ ತಂದಿರುವ ತಿದ್ದುಪಡಿಯಿಂದ ಮುಂಬರುವ ದಿನಗಳಲ್ಲಿ ರೈತಾಪಿ ಕುಟುಂಬಗಳು ಮತ್ತು ಕೃಷಿ ಕಾರ್ಮಿಕರು ನಿರಂತರವಾಗಿ ಪ್ರತಿದಿನ ಕರಾಳ ಛಾಯೆಯ ದಿನಗಳನ್ನು ಎದುರಿಸಬೇಕಾಗುತ್ತದೆ. ತಿದ್ದುಪಡಿಗಳಿಂದ ರಾಜ್ಯದಲ್ಲಿರುವ ಮತ್ತು ಬೇರೆ ರಾಜ್ಯದಿಂದ ಬಂದ ಬಂಡವಾಳಶಾಹಿಗಳು, Real Estate ದಂಧೆಯಲ್ಲಿ ತೊಡಗಿರುವವರು, ಕಾರ್ಪೊರೇಟ್ ಕೃಷಿಕರು, ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡಂತೆ ಕಪ್ಪು ಹಣ ಹೊಂದಿರುವ ವ್ಯಾಪಾರಸ್ಥರು ಯಾವುದೇ ಅಡೆ ತಡೆ ಇಲ್ಲದೇ ಮನಸೋಯಿಚ್ಛೆ ಮತ್ತು ಸ್ವಇಚ್ಛೆಯಿಂದ ರಾಜ್ಯದ ಅತಿ ಸಣ್ಣ ಅರೆ ಮಧ್ಯಮ ವರ್ಗದ ರೈತರಿಗೆ ಹಣದ ವ್ಯಾಮೋಹ ತೋರಿಸಿ, ಕೃಷಿ ಭೂಮಿಯನ್ನು ಖರೀದಿಸಿ ಅವರನ್ನು ಜಮೀನಿನ ಹಿಂಬದಿಯಿಂದ ಒಕ್ಕಲೆಬ್ಬಿಸಿ ರೈತ ಕುಟುಂಬಗಳನ್ನು ಬೀದಿ ಪಾಲು ಮಾಡುತ್ತಾರೆ. ಈ ಬಗ್ಗೆ ತಮಗೆ ಅರಿವು ಇರಬಹುದೆಂದು ಭಾವಿಸುತ್ತೇನೆ. ತುಂಗಭದ್ರಾ ಜಲಾಶಯ ನಿರ್ಮಾಣದ ನಂತರ ನಮ್ಮ ನೆರೆ ರಾಜ್ಯದವರು ಬಂದು ಸ್ಥಳೀಯರ ಜಮೀನನ್ನು ಖರೀದಿಸಿ ಬೃಹತ್ ಕ್ಯಾಂಪುಗಳನ್ನು ಸ್ಥಾಪಿಸಿ ಅಲ್ಲಿ ರೈತರನ್ನು ಕೃಷಿ ಕಾರ್ಮಿಕರನ್ನಾಗಿ ಮಾಡಿದ ಪ್ರಸಂಗಗಳು ಇನ್ನೂ ಚರ್ಚೆಯಲ್ಲಿ ಉಳಿದಿವೆ”. ಮಾನ್ಯ ಕಂದಾಯ ಸಚಿವರೇ, ನಾನು ಆಗಲೇ ನಿಮಗೆ ಹೇಳಿದೆ ಇದು ಪ್ರಾಯೋಗಿಕವಾಗಿರುವಂತಹದ್ದು. ‘ಪ್ರಜಾವಾಣಿ’ಯವರು ಜೂನ್ 15, 20, 22, 23, 25 ಮತ್ತು 30 ಈ ದಿನಾಂಕಗಳಂದು ರಾಜ್ಯದಲ್ಲಿರುವಂತಹ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡರು ರೈತಸಂಘದವರದ್ದು, ಅದರಲ್ಲಿ ನಿಮ್ಮ ಅಭಿಪ್ರಾಯ ಸಹ ಇತ್ತು. ‘ರೈತರ ಆತ್ಮಹತ್ಯೆಗೆ ಹೊಸ ದಾರಿ’ ಇದನ್ನು ಮಾಡುವುದರಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಬಗ್ಗೆ ಸಂಪೂರ್ಣ ವಿವರ ಇದೆ. ತಿದ್ದುಪಡಿ ಪ್ರಸ್ತಾವದ ಪ್ರಕಾರ 5 ವರ್ಷದ ಹಿಂದೆ ಹೆಚ್ಚಿನ ಜಮೀನನ್ನು ಪ್ರತಿ ಕುಟುಂಬ 716 ಎಕರೆ ನೀರಾವರಿ ಭೂಮಿಯನ್ನು ಖರೀದಿಸಲು ಇಂತಹ ಒಂದು ವಿವರ ಇದೆ. ಆಮೇಲೆ ಕಾನೂನಿನಲ್ಲಿ ಏನು ಬದಲಾವಣೆಯಾಗಿದೆ? ರಾಜ್ಯ ಸರ್ಕಾರವು ಭೂ ಸುಧಾರಣೆ ಕಾಯಿದೆಗೆ ತಿದ್ದುಪಡಿ ತರುವ ಮೂಲಕ ಹಲವು ಸೆಕ್ಷನ್‌ಗಳನ್ನು ತೆಗೆದು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹಾಕಲು ನಿರ್ಧರಿಸಿದೆ. ಈ ಸೆಕ್ಷನ್‌ನಲ್ಲಿ ಕೃಷಿ ರೈತರನ್ನು ಭೂಮಿ ಖರೀದಿಗೆ ಆಸ್ಪದ ನೀಡುತ್ತಿರಲಿಲ್ಲ. ಕಾಯಿದೆಯಡಿ 79ಎ, ಬಿ ಹಾಗೂ ಸೆಕ್ಷನ್ 80 ಕೃಷಿ ಭೂಮಿ ಖರೀದಿಗೆ ಕೆಲವು ಷರತ್ತುಗಳನ್ನು ಒಡ್ಡಿದವು. ಸೆಕ್ಷನ್ 79ಎ ಪ್ರಕಾರ 25 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ವರಮಾನ ಹೊಂದಿರುವವರು ಕೃಷಿ ಭೂಮಿ ಖರೀದಿಸಲು ನಿರ್ಬಂಧ ವಿಧಿಸಿತ್ತು. ಸೆಕ್ಷನ್ 79ಬಿ ರೈತರಲ್ಲದವರು ಕೃಷಿ ಭೂಮಿಯನ್ನು ಖರೀದಿಸಲು ನಿಷೇಧಿಸಿತು. 79ಸಿ ಖರೀದಿಯನ್ನು ಘೋಷಿಸದೇ ಇದ್ದರೆ ದಂಡ ವಿಧಿಸುವ ಅವಕಾಶವಿತ್ತು. ಇದು 'ಪ್ರಜಾವಾಣಿ'ಯಲ್ಲಿ ಬಂದಿದ್ದ ವಿಷಯಗಳು. ಎರಡನೆಯದಾಗಿ 'ದಿಕ್ಕು ತಪ್ಪಿದ ಭೂ ಸುಧಾರಣೆ ಹಾದಿ'. ಆಮೇಲೆ ಇಡೀ ರಾಜ್ಯದ ಜನರೆಲ್ಲರ ಅಭಿಪ್ರಾಯವನ್ನು ತೆಗೆದುಕೊಂಡಿದ್ದಾರೆ. ಕೇವಲ ಅವರದ್ದಷ್ಟೇ ಅಲ್ಲ. 'ಕೃಷಿ ಆಸಕ್ತರಿಗೆ ಭೂಮಿ ಕೊಡಬಾರದೇಕೆ' ಎಂದು ಕೆಲವರು ಹೇಳಿದ್ದಾರೆ. ಆದರೆ ಇಲ್ಲಿ ದುಡ್ಡಿದ್ದವರಿಗೆ ಜಮೀನು. ಮಾನ್ಯ ಕೃಷಿ ಸಚಿವರು ಹೇಳುತ್ತಾರೆ, ಅವರು ಕೂಡ ರೈತರು, 'ಹಣದ ಆಸೆಗೆ ಭೂಮಿಯನ್ನು ಮಾರುವುದಿಲ್ಲ' ಎಂದು ಹೇಳುತ್ತಾರೆ. ಅವರ ಊರಿನಲ್ಲಿಯೇ ಭೂಮಿಯನ್ನು ಮಾರಿದ್ದಾರೆ. ಹಣದ ಆಸೆಗೆ ಯಾರೋ ಹೇಳಿದರು, 20 ಲಕ್ಷ ಕೊಟ್ಟರೆ ಯಾರು ತೆಗೆದುಕೊಳ್ಳುವುದಿಲ್ಲ ಹೇಳಿ ನೋಡೋಣ? '70 ವರ್ಷದ ಗಳಿಕೆ ಕಸಿಯುವ ಕೆಲಸ'. ಪ್ರತಿಯೊಬ್ಬರೂ ಯಾರ್ಯಾರು experts ಇದ್ದಾರೆ ಇಡೀ ರಾಜ್ಯದಲ್ಲಿ 'ಪ್ರಜಾವಾಣಿ' ಅವರೆಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ಇಡೀ ರಾಜ್ಯದ ರೈತರು, ಬೇರೆ ಬೇರೆಯವರನ್ನು ತೆಗೆದುಕೊಂಡು ಮಾಡಿದ್ದಾರೆ. ಇದರ ಜೊತೆಗೆ ದೇವರಾಜ ಅರಸುರವರು ಭೂ ಸುಧಾರಣೆ ಕಾಯಿದೆ ತಂದರು.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಎಂ. ನಾರಾಯಣಸ್ವಾಮಿಯವರು ಸದನದಲ್ಲಿ campaign ಮಾಡುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಅವರೇನು campaign ಮಾಡುತ್ತಾರೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಕಂದಾಯ ಸಚಿವರೇ, . . .

**ಶ್ರೀ ಆರ್. ಅಶೋಕ್:–** (ಗೊಂದಲ) ಸಪೋರ್ಟ್ ಮಾಡಿ ಎಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ನಿಮಗೆ ಒಳ್ಳೆಯದಾಯಿತಲ್ಲವೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಚಿವರೇ, ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಏನೇ ಇರಲಿ ನಾವು ಮಾಡಿದ್ದು, ನೀವು ಅಥವಾ ಅವರು ಮಾಡಿದ್ದು ಎಂದರೆ ತಪ್ಪು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದು ಒಳ್ಳೆಯದಲ್ಲ. ಮಾನ್ಯ ದೇವರಾಜ ಅರಸುರವರು ತಂದಂತಹ ಕಾನೂನನ್ನು ಎಷ್ಟು ಉತ್ತಮವಾದಂತಹ ರೀತಿಯಲ್ಲಿ, ಇಡೀ ನಮ್ಮ ದೇಶದಲ್ಲಿ ಮಾದರಿಯಾದಂತಹ ಕಾನೂನು ಮಾಡಿದರು. 'ಶೋಷಿತ ಸಮುದಾಯಗಳ ಭೂ ಹಕ್ಕಿಗೆ ಸರ್ಕಾರವೇ ರೆಕ್ಕೆಯಾಗಲಿ' ಸರ್ಕಾರ ರೆಕ್ಕೆಯಾದರೆ ನೀವು ಆ ರೆಕ್ಕೆಯನ್ನೇ ಕಡಿದು ಹಾಕಿಬಿಡುತ್ತೀರಿ. ಇಂತಹ ಪರಿಸ್ಥಿತಿಯಲ್ಲಿ ನೀವು ಹೇಳಬೇಕು. ಈ ಎಲ್ಲ ಪರಿಸ್ಥಿತಿಗಳಲ್ಲಿ ಪ್ರಾಮಾಣಿಕವಾಗಿ ನೀವು ಹೇಳಿ. ಸಾಫ್ಟ್‌ವೇರ್ ಜನರು ಬಂದು ಒಕ್ಕಲುತನ ಮಾಡುತ್ತಾರೆ ಎಂದು ಹೇಳುತ್ತೀರಿ. ಆ ರೀತಿ ನೀವೇ ಹೇಳಿರುವುದು ಹೌದಲ್ಲವೇ?

**ಶ್ರೀ ಆರ್. ಅಶೋಕ್:-** ಹೌದು. ಕೋವಿಡ್ ಬಂದಾಗ ಸಾಫ್ಟ್‌ವೇರ್ ಜನರು ಹಳ್ಳಿಗೆ ಹೋಗಿ ಕೆಲಸ ಮಾಡಿದ್ದಾರೆ ಎಂದು ಹೇಳಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಒಂದು ದೊಡ್ಡ Article ಬಂದಿತ್ತು. ನೀವು ಹೇಳಿದ್ದು ತಪ್ಪು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ನೀವು ನೋಡಬೇಕಲ್ಲವೇ. ತಾವು ಏನನ್ನು ಹೇಳಿದಿರಿ ಎಂದರೆ 'ಉಳ್ಳವರಿಗಲ್ಲ, ಉಳುವ ಆಸಕ್ತರಿಗೆ ಜಮೀನು' ಎಂದಿದೆ. ಆ ಆಸಕ್ತರು ಯಾರು ಹೇಳಿ ನೋಡೋಣ? ವ್ಯಾಪಾರಸ್ಥರು, ಮಾರ್ವಾಡಿಗಳು, ಶೇಠ್‌ಜೀಗಳು ಬಂದು ಒಕ್ಕಲುತನ ಮಾಡುತ್ತಾರಾ? ನಮ್ಮಲ್ಲಿ ಲೇಔಟ್‌ಗಳಿವೆ. ಅಲ್ಲೆಲ್ಲಾ ಮಾರ್ವಾಡಿ ಜನರಿದ್ದಾರೆ ಬೇರೆ ಯಾರೂ ಇಲ್ಲ. ಹುಬ್ಬಳ್ಳಿಯ ತುಂಬಾ ಕಟಾರಿಯಾ ಅವರು ಇವರು ಅಂತಹ ಲೇಔಟ್‌ಗಳಿವೆ. ಇಲ್ಲಿಯವರೆಗೆ ಅವರಿಗೆ ನಿರ್ಬಂಧವಿತ್ತು. ಅವರು ಏನು ಮಾಡುತ್ತಿದ್ದರು ಎಂದರೆ Development Authority ಗೆ ಕೊಟ್ಟು ಅಲ್ಲಿಂದ ಭೂಮಿ ತೆಗೆದುಕೊಂಡು ಲೇಔಟ್ ಮಾಡುತ್ತಿದ್ದರು. ಈಗ ನೇರವಾಗಿ ಖರೀದಿ ಮಾಡುತ್ತಾರೆ. ಯಾವ ರೈತನೂ ಇಷ್ಟಪಡುವುದಿಲ್ಲ, ಯಾವ ರೈತನಲ್ಲಿ ದುಡ್ಡು ಇದ್ದಾಗ, ಇಲ್ಲದಿದ್ದಾಗ ಕೆಲವು ಶ್ರೀಮಂತ ರೈತರು ಮಾಡಬಹುದು. ರೈತನು ಇದರ ಮೇಲೆ ಬದುಕುತ್ತಾನೆ. ಅವನಿಗೆ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದವರು ನಾವೇ. ಆ ಹಿನ್ನೆಲೆಯಲ್ಲಿ ದೊಡ್ಡ ದೊಡ್ಡ ರೈತರಿಗೆ ಏನೂ ಆಗುವುದಿಲ್ಲ. ಬಡ ರೈತರು 5 ಎಕರೆ, 6 ಎಕರೆ ಅಥವಾ 10 ಎಕರೆಯ ಒಳಗಿನವರು ಈ ಭೂಮಿಯನ್ನು ದುಡ್ಡು ಬಂದಾಗ ಬೇಕು ಬೇಕಾದವರಿಗೆ ಮಾರುತ್ತಾರೆ. ಆ ಹಿನ್ನೆಲೆಯಲ್ಲಿ ನಾನು ಹೇಳುವುದಿಷ್ಟೇ, ಯಾವ ರೀತಿಯಿಂದ ಈ ಕಾನೂನನ್ನು ತರುವಂತಹ ಅವಶ್ಯಕತೆ ಇತ್ತು, ಇದನ್ನು ಏಕೆ ತಂದಿರಿ? ಕಾನೂನು ತರುವ ಯಾವ ಅವಶ್ಯಕತೆ ಇತ್ತು? ರೈತರ ಭೂಮಿಯನ್ನು ಬೇಕು ಬೇಕಾದವರಿಗೆ ತೆಗೆದುಕೊಳ್ಳುವ ಅವಶ್ಯಕತೆ ಏನಿದೆ? ರೈತರು ಭೂಮಿಯನ್ನು ಉಳುತ್ತಾರೆ, ಕಾಳು ಕಡ್ಡಿ ಬೆಳೆಯುತ್ತಾರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಎಲ್ಲಾ ರೀತಿ ಮಾಡುತ್ತಾರೆ. ನೀವು ಅದನ್ನು ರೈತರಿಗೆ ಇನ್ನಷ್ಟು ಬೇರೆ ಬೇರೆ ಮಾರ್ಗದಿಂದ ಬೆಳೆಯುವುದಕ್ಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ಸಾವಯವ ಗೊಬ್ಬರ ತಯಾರು ಮಾಡುವುದು ಇಂತಹ ಕಾರ್ಯಗಳಿಗೆ ಕೊಡುವ ಬದಲು ಯಾರು ಬೇಕಾದರೂ ಜಮೀನನ್ನು ತೆಗೆದುಕೊಳ್ಳಬಹುದು ಎಂದರೆ ಇವತ್ತು ಜನರು ಕಾರು ತೆಗೆದುಕೊಂಡು, ಕಾರಿನಲ್ಲಿ ದುಡ್ಡು ಇಟ್ಟುಕೊಂಡು ಎಲ್ಲಾ ಕಡೆ ಅಡ್ಡಾಡುತ್ತಾರೆ. ಜನರು ನಮ್ಮ ಹುಬ್ಬಳ್ಳಿಯಿಂದ ಹಾವೇರಿಯವರೆಗೂ ಭೂಮಿ ಕೇಳಿಕೊಂಡು, ಸರ್ವೆ ನಂಬರುಗಳನ್ನು ಕೇಳಿಕೊಂಡು ಅಡ್ಡಾಡುತ್ತಾರೆ. ನಾನು ಹೇಳುತ್ತೇನೆ, ಇನ್ನು 20 ವರ್ಷಕ್ಕೆ ನಮ್ಮ ರಾಜ್ಯದಲ್ಲಿ ಶೇ.70 ಭೂಮಿ ಇರುವುದಿಲ್ಲ ಇದನ್ನು ಬರೆದಿಟ್ಟುಕೊಳ್ಳಿ. ಶ್ರೀಮಂತರಿದ್ದವರು ಭೂಮಿಯನ್ನು ತೆಗೆದುಕೊಳ್ಳುತ್ತಾರೆ, ಬಿತ್ತುವುದಿಲ್ಲ, ಬೆಳೆ ತೆಗೆಯುವುದಿಲ್ಲ. ಹೀಗಾದರೆ ಇಡೀ ಜನರಿಗೆ ಆಹಾರವನ್ನು ಏನು ಕೊಡುತ್ತೀರಿ? ಇಂತಹ ಪರಿಸ್ಥಿತಿ ನಿರ್ಮಾಣವಾಗುವಾಗ ನಾನು ಹೇಳುವುದೇನೆಂದರೆ, ಇದು ಬಹಳ ದೊಡ್ಡದಾದಂತಹ ಷಡ್ಯಂತರವಾಗಿದೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ನೀವು ತಂದಿರಿ, ನಾವು ತಂದೆವು ಎನ್ನುವುದನ್ನು ಆಮೇಲೆ ಚರ್ಚೆ ಮಾಡೋಣ. ಆದರೆ ಬಿಟ್ಟಾರೆ ರೈತರ ಭೂಮಿಯನ್ನು ಈ ರೀತಿ ಕಾನೂನನ್ನು ತಂದು ಬೇಕು ಬೇಕಾದವರಿಗೆ ಖರೀದಿ ಮಾಡುವ ಕಾನೂನನ್ನು ತಂದರೆ ಇದು ಎಲ್ಲಿಗೆ ಹೋಗುತ್ತದೆ ಎನ್ನುವುದನ್ನು ವಿಚಾರ ಮಾಡಿ. ನಾನು ಕೂಡ ಒಬ್ಬ ರೈತನಾಗಿದ್ದೇನೆ, ನಾನು ನೋಡಿದ್ದೇನೆ, ಕೆಲವರು ನೋಡಿಲ್ಲ, ಕೆಲವರು ನೋಡಿದ್ದಾರೆ. ಇಲ್ಲೆಲ್ಲಾ ರೈತರೂ ಇದ್ದಾರೆ, ಅವರು ಸುಮ್ಮನೇ ಕುಳಿತಿದ್ದಾರೆ. ಮಾನ್ಯ ಲಕ್ಷ್ಮಣ ಸವದಿಯವರು ರೈತರಿದ್ದಾರೆ ಅವರು ಪ್ರಾಮಾಣಿಕವಾಗಿ ಹೇಳಬಹುದು. ಅವರಿಗೆ ಪಕ್ಷದ ಕಟ್ಟಳೆಗಳಿರಬಹುದು ಆದರೆ ಅವರ ಆತ್ಮ ಇದು ಸರಿಯಲ್ಲ ಎಂದು ಹೇಳುತ್ತದೆ. ಇವತ್ತು ರೈತರು ಎಷ್ಟು ಕಷ್ಟ ಪಡುತ್ತಾರೆ ಕಬ್ಬು ಬೆಳೆ ಇರಲಿ, ಯಾವುದೇ ಇರಲಿ, ಏನಾದರೂ ಬೆಳೆ ಇರಲಿ ಕಷ್ಟ ಪಟ್ಟು ಇವತ್ತು ಎಲ್ಲವನ್ನೂ ತಂದು ಕೊಡುವಂತಹ ಕೆಲಸವನ್ನು ರೈತರು ಮಾಡುತ್ತಾರೆ. ಆ ಹಿನ್ನೆಲೆಯಲ್ಲಿ ನಾನು ಹೇಳುವುದಿಷ್ಟೇ, ನೀವು ಏನು ಸರ್ಕಾರ ರೈತರ ಮರಣ ಶಾಸನವನ್ನು, ಸುಗ್ರೀವಾಜ್ಞೆಯನ್ನು ಕರ್ನಾಟಕ ಭೂ ಸುಧಾರಣೆ ಕಾಯಿದೆಗೆ ತಂದಿರುವ ತಿದ್ದುಪಡಿಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಮಾನ್ಯ ಕಂದಾಯ ಸಚಿವರು ದಯಮಾಡಿ ಬರೀ defend ಮಾಡಿಕೊಳ್ಳಬೇಡಿ, ನನ್ನ ಮಾತನ್ನು ಕೇಳಿ. ಅವರು defend ಮಾಡಿಕೊಳ್ಳುವುದಕ್ಕೆ ತಯಾರು ಮಾಡಿದ್ದಾರೆ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(956) 27–09–2020/ 12–30 AM / ಕೆಹೆಚ್–ಎಂಡಿ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):–**

ತಾವು ಈ ಕಾಯ್ದೆಯನ್ನು ತಂದಿರುವವರಲ್ಲವೇ, ಇದನ್ನು ಪಾಸ್ ಮಾಡಿಸಿಕೊಳ್ಳಬೇಕಲ್ಲವೇ, ಇದರ ಬಗ್ಗೆ ತಾವು ಏನು ಹೇಳುತ್ತೀರಿ ಎಂಬುದು ನನಗೆ ಗೊತ್ತಿದೆ. ನಾನು ವಿನಂತಿ ಮಾಡುವುದೇನೆಂದ್ದರೆ, ದಯಮಾಡಿ, ತಾವು ಸಹಾ ರೈತರ ಮಕ್ಕಳು. ಇದರ ಬಗ್ಗೆ ವಿಚಾರ ಮಾಡಿ. ಇವತ್ತಿನ ದಿವಸ ಯಾವುದರ ಸಲುವಾಗಿ ಈ ಕಾನೂನನ್ನು ತಂದಿದ್ದೀರಿ. ಈಗ ಇದರ ಅವಶ್ಯಕತೆ ಏನಿದೆ ಎಂದು ಕೇಳುತ್ತಿದ್ದೇನೆ. ತಮ್ಮ ಹತ್ತಿರ ಯಾರಾದರೂ ರೈತರು ಬಂದು ಈ ಕಾಯ್ದೆಯನ್ನು ಮಾಡಿ ಎಂದು ಹೇಳಿದ್ದಾರೆಯೇ, ಎಲ್ಲಾ ಸೇಠ್‌ಜೀಗಳು, ವ್ಯಾಪಾರಸ್ಥರಿಗೆ, ನಂ.2 ದಂಧೆ ಮಾಡುವವರಿಗೆ ಈ ಕಾಯ್ದೆಯನ್ನು ಮಾಡುತ್ತಿದ್ದೀರಿ. ಇಡೀ ಬೆಂಗಳೂರಿನಲ್ಲಿಯೇ ಶೇಕಡಾ 23 ರಷ್ಟು ಕನ್ನಡದವರು ಇದ್ದಾರೆ. ಇಂತಹ ಪರಿಸ್ಥಿತಿ ಇವತ್ತಿನ ದಿವಸ ನಿರ್ಮಾಣವಾಗಿದೆ. ತಾವು ಬೆಳಗಾವಿಗೆ ಹೋದರೆ, ಅಲ್ಲಿ ಇಲ್ಲಿ ಹೋದರೆ ಬೇರೆಯವರು ಇರುತ್ತಾರೆ. ಈಗ ತಾವು ರಾಯಚೂರು ಕಡೆಗೆ ಹೋದರೂ ಅಷ್ಟೇ. ಈಗ ಎಲ್ಲಾ ಕಡೆಯಲ್ಲಿಯೂ ಏನೆಂದರೆ, ಸದನದಲ್ಲಿ ನಮ್ಮ ರಾಯಚೂರು ಮತ್ತು ಗುಲ್ಬರ್ಗಾದ ಸ್ನೇಹಿತರು ರೈತರ ಬಗ್ಗೆ ಹೇಳಲಿ. ರೈತರು ಏಕೆ ಇವರಿಗೆ ಭೂಮಿಯನ್ನು ಕೊಟ್ಟಿದ್ದಾರೆ? ಆಂಧ್ರದವರಿಗೆ 20 ಕ್ಯಾಂಪ್‌ಗಳು ಇವೆ. ಅವರಿಗೆ ಏಕೆ ಕೊಟ್ಟಿದ್ದೀರಿ. ದುಡ್ಡಿಗಾಗಿ tempt ಆಗಿ ಇವರನ್ನು ಏಕೆ ಕೊಟ್ಟರು. ಇದು ಖರೀದಿ ಅಲ್ಲ. ಅವರು ಲಾವಣಿ ಮಾಡಿದ್ದಾರೆ. ಇನ್ನು ಮೇಲೆ ಅವರು ಖರೀದಿಗೆ ತೆಗೆದುಕೊಳ್ಳುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಖರೀದಿಗೆ ಇಳಿದುಬಿಡಿ ಎಂದು ಇವರು ಈ ಕಾನೂನನ್ನು ತಂದಿದ್ದಾರೆ. ತಾವು ಬಹಳ ಒಳ್ಳೆಯದು ಮಾಡಿದ್ದೀರಿ. ಸಾವಿರ ಜನರ ಪುಣ್ಯ ತಮಗೆ ಬರಲಿ, ರೈತರ ಶಾಪಕ್ಕೆ ತಾವು ಭಸ್ಮವಾಗಿ ಬಿಡುತ್ತೀರಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಅಶೋಕ್‌ರವರೇ ನಾನು ಹೇಳುವುದನ್ನು ಕೇಳಿ. ನಾನು ಎಲ್ಲಾ ರೈತರ ಕ್ಯಾಂಪ್‌ಗಳಿಗೆ ಹೋಗಿದ್ದಾಗ ಅಲ್ಲಿ ಏನು ಮಾಡುತ್ತಾರೆಂದರೆ, ಅಲ್ಲಿರುವವರೆಲ್ಲಾ ಆಂಧ್ರದವರು ಸಿಕ್ಕಾಪಟ್ಟೆ ನೀರು ಬಿಟ್ಟು ಹಾಳು ಮಾಡುತ್ತಾರೆ. ರೈತರು ಜಮೀನನ್ನು ಮಾರುವುದಕ್ಕೆ ಹೋಗುತ್ತಾರೆ. ಆದರೆ ಈಗ ಆಂಧ್ರದವರಿಗೆ ತೆಗೆದುಕೊಳ್ಳುವುದಕ್ಕೆ ಮತ್ತು ರೈತರು ಮಾರುವುದಕ್ಕೆ ಈಗ ಇರುವ ಕಾನೂನಿನಲ್ಲಿ ಅಧಿಕಾರ ಇಲ್ಲ. ಆದರೆ ಇವತ್ತು ತಾವು ತಂದಿರುವಂತಹ ಕಾಯ್ದೆಯಿಂದ ಅವರು ಭೂಮಿಯನ್ನು ಖರೀದಿ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೂರಾರು ಕ್ಯಾಂಪ್‌ಗಳಲ್ಲಿ ಸಾವಿರಾರು, ಲಕ್ಷಗಟ್ಟಲೆ ರೈತರು ಇದ್ದು, ಅವರಿಗೆ ಭೂಮಿಯನ್ನು ಏಕೆ ಕೊಡುತ್ತಾರೆ? ಇದನ್ನು ಲಾವಣಿಗೆ ಕೊಟ್ಟಿದ್ದಾರೆ ಎಂದರೆ, ನಾಳೆ ಅವರು ಖರೀದಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದು ಒಳ್ಳೆಯದು ಅಲ್ಲ. ಈ ಹಿನ್ನಲೆಯಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ತಾವು ಮೊನ್ನೆಯ ದಿವಸ ಉತ್ತರವನ್ನು ಕೊಟ್ಟಿದ್ದೀರಿ. ಆಗ ಇನ್ನು ವಿಧೇಯಕ ಮಂಡನೆ ಆಗಿರಲಿಲ್ಲ. ತಾವು ಉತ್ತರ ಕೊಟ್ಟಿರುವುದು ನಮಗೆ ಸ್ವಲ್ಪ ಕೂಡ ಸರಿ ಬರಲಿಲ್ಲ. ಈ ಹಿನ್ನಲೆಯಲ್ಲಿ ಅವರು ಹಾಗೇ ಮಾಡುತ್ತಾರೆ, ಹೀಗೆ ಮಾಡುತ್ತಾರೆ ಎಂದು ತಾವು ಹೇಳಿದ್ದೀರಲ್ಲವೇ, ಈ IT-BT (Information Technology and Bio-Technology) company ಯವರು ಹಳ್ಳಿಗಳಿಗೆ ಬಂದು ಹೊಲಗಳನ್ನು ಊಳುತ್ತಾರೆ ಎಂದು ಹೇಳಿದ್ದೀರಿಯಲ್ಲವೇ, ಅವರಿಗೆ ಏನು ಮಾಡುವುದಕ್ಕೆ ಬರುವುದಿಲ್ಲ ಎಂದು ನಮಗೆ ಗೊತ್ತಿದೆ. ನಮ್ಮ ಮಗ ರಸ್ತೆಯಲ್ಲಿ ನಿಂತುಕೊಂಡು ಹೊಲವನ್ನು ನೋಡಿ ಬರುತ್ತಾನೆ. ಹೊಲದ ಒಳಗೆ ಬರುವುದಿಲ್ಲ. ಅವನು ಅಮೇರಿಕಾದಲ್ಲಿ 11 ವರ್ಷ ಇದ್ದು ಬಂದಿದ್ದಾನೆ. ನಮ್ಮ ಹತ್ತಿರ ಇಷ್ಟು ಭೂಮಿ ಇದೆ, ಏನಾದರೂ ಮಾಡಬೇಕೆಂದರೆ ಬರುತ್ತಾನೆ, goggle ಗೆ ಹಾಕಿಕೊಂಡು ಇರುತ್ತಾನೆ. ರಸ್ತೆಗಳಲ್ಲಿ ಅಡ್ಡಾಡಿ ಹೋಗುತ್ತಾನೆ. ಮುಗಿತು. ನನ್ನ ಮಗ ನಮ್ಮ ಅಪ್ಪನ ತಲೆ ಸರಿಯಿಲ್ಲ ಎಂದು ಹೇಳುತ್ತಾನೆ. ಅವರು ರೈತರ ಮಕ್ಕಳು, ಅವರು ಒಕ್ಕಲುತನ ಮಾಡುವುದಕ್ಕೆ ಸಾಧ್ಯತೆ ಇದೆಯೇ, ಇವತ್ತಿನ ದಿವಸ ನಾವೆಲ್ಲಾ ಭೂಮಿಯನ್ನು ನಡೆಸಿಕೊಂಡು ಬಂದಂತಹವರು, ನಮ್ಮ ತಂದೆ–ತಾಯಿಯಿಂದ ಬಂದಿರುವಂತಹ ಭೂಮಿ ಉಳಿಯುತ್ತದೆಯೇ. ಇಂತಹ ಪರಿಸ್ಥಿತಿಯಲ್ಲಿ ತಾವು ಕಾನೂನನ್ನು ಏನು ತಂದಿದ್ದೀರಿ. ಇದು ಖಂಡಿತವಾಗಿಯೂ ಒಳ್ಳೆಯ ಕಾನೂನು ಅಲ್ಲ. ಇವತ್ತು ತಾವು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿ. ಇದು ನನ್ನ ಅನಿಸಿಕೆ. ತಾವು ಈ ವಿಧೇಯಕವನ್ನು ತರುವುದಕ್ಕೆ ತಯಾರಿರಲಿಲ್ಲ. ಈ ವಿಧೇಯಕ ದೆಹಲಿಯಿಂದ ಬಂದಿತ್ತು. ಈ ವಿಧೇಯಕ ದೆಹಲಿಯಿಂದ ಬಂದ ಕೂಡಲೇ ದೆಹಲಿಯವರ ಮಾತನ್ನು ಕೇಳಿ ತಂದಿದ್ದೀರಿ. ಇದರಲ್ಲಿ ಮತ್ತೇನೂ ಇಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಯವರಾದ ಬಿ.ಎಸ್.ಯಡಿಯೂರಪ್ಪನವರು ಒಪ್ಪುವುದಕ್ಕೆ ಸಾಧ್ಯ ಇಲ್ಲ. ಅವರು ರೈತರ ನಾಯಕರಾಗಿ, ರೈತರ ಸ್ಥಿತಿಗತಿಗಳನ್ನು ನೋಡಿರುವಂತಹವರು ಇದನ್ನು ಮಾಡುವುದಕ್ಕೆ ತಯಾರಿಲ್ಲ. ಈ ಹಿನ್ನಲೆಯಲ್ಲಿ ಇವತ್ತು ನಾನು ತಮಗೆ ಹೇಳುವುದೇನೆಂದರೆ, ದಯಮಾಡಿ ತಾವು ತಂದಿರುವಂತಹ ಕಾನೂನನ್ನು, ರೈತರಿಗೆ ಮಣ್ಣು ಕೊಡುವ ಬದಲು, ಅವರನ್ನು ಉಳಿಸುವುದಕ್ಕೆ ಸ್ವಲ್ಪ ಪ್ರಯತ್ನ ಮಾಡಿ. ಮಾನ್ಯ ಎಸ್.ಆರ್.ಪಾಟೀಲ್‌ರವರು 'ಪಾಪ ಬರುತ್ತದೆ' ಎಂದು ಹೇಳಿದರು. ಆ ಪಾಪವನ್ನು ತಾವು ಏಕೆ ಕಟ್ಟಿಕೊಳ್ಳುತ್ತೀರಿ. ಇದನ್ನು ಯಾರ್‍ಯಾರಿಗೋ ಮಾರಿ, ಅವರ ಕಡೆ ದುಡ್ಡು ತೆಗೆದುಕೊಂಡು ರಾಜಕಾರಣಿಗಳು ದೊಡ್ಡ ದೊಡ್ಡ ಮಾಲ್‌ಗಳನ್ನು ಕಟ್ಟಿಸುವುದು ಅಲ್ಲ. ದಯಮಾಡಿ, ರೈತ ಹೇಗೆ ಇರಲಿ. ಆ ಭೂಮಿಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏನೇ ಬೆಳೆಯಲಿ, ಅವನ ಜಮೀನನ್ನು ಅವನಿಗೆ ಕೊಡಿ. ತಾವು ಈಗ 25 ಲಕ್ಷ ರೂಪಾಯಿಗಳನ್ನು ಮಾಡಿದ್ದೀರಿ. 25 ಲಕ್ಷ ರೂಪಾಯಿಯೊಳಗೆ ಯಾವ ರೈತ ಇರುತ್ತಾನೋ ಅವನು ತೆಗೆದುಕೊಳ್ಳಲಿ. ಶ್ರೀಮಂತ ರೈತರು ಸಹ ಭೂಮಿಯನ್ನು ಊಳುತ್ತಿದ್ದು, ಅವರು ಬಡ ರೈತರ ಜಮೀನನ್ನು ತೆಗೆದುಕೊಂಡರೆ ಅವರು ಆ ಭೂಮಿಯನ್ನು ಊಳಬಹುದು. ತಾವು ವ್ಯಾಪಾರಸ್ಥರಿಗೆ, ನಂ.2 ದಂಧೆ ಮಾಡುವವರಿಗೆ, Real Estate ರವರಿಗೆ ಕೊಟ್ಟರೆ ಈ ರೀತಿ ಪರಿಸ್ಥಿತಿ ಉಂಟಾಗುತ್ತದೆ. ಇದರ ಬಗ್ಗೆ ನಮ್ಮ ಮಾಜಿ ಪ್ರಧಾನ ಮಂತ್ರಿಗಳು ಪತ್ರವನ್ನು ಬರೆದಿದ್ದಾರೆ. ಇದರ ಸಂಪೂರ್ಣವಾದ ಮಾಹಿತಿಯನ್ನು ತಮಗೆ ಕೊಟ್ಟು ಕಳುಹಿಸುತ್ತೇನೆ. ಅದನ್ನು ನೋಡಿ. ದಯಮಾಡಿ, ಇದನ್ನು ಏನಾದರೂ ಮಾಡಿ, ಒಟ್ಟಿನಲ್ಲಿ ರೈತರನ್ನು ಬದುಕಿಸುವುದಕ್ಕೆ ಬಿಡಿ. ತಾವು ಬದುಕಿ, ಅವರನ್ನು ಬದುಕುವುದಕ್ಕೆ ಬಿಡಿ ಎನ್ನುವ ಒತ್ತಾಯವನ್ನು ಮಾಡುತ್ತೇನೆ. ದಯಮಾಡಿ, ಈ ಕಾನೂನನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂಬ ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂತಹದೊಂದು ವಿಧೇಯಕವನ್ನು ಭಾರತೀಯ ಜನತಾ ಪಕ್ಷದವರು ತರುತ್ತಾರೆ ಎಂದು ನಾನು ಅಂದುಕೊಂಡಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು 4 ಬಾರಿ ಪ್ರಮಾಣ ವಚನವನ್ನು ತೆಗೆದುಕೊಂಡರು. ಅವರು ಹಸಿರು ಶಾಲ್ ಅನ್ನು ಹಾಕಿಕೊಂಡು ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಬೋಧನೆ ಮಾಡಿದರು. ಚುನಾವಣೆಯಲ್ಲಿ ಹಸಿರು ಶಾಲ್ ಹಾಕಿಕೊಂಡು ರೈತರನ್ನು ಉಳಿಸುವಂತಹವರು ಭಾರತೀಯ ಜನತಾ ಪಕ್ಷದವರು ಎಂದು ಓಟ್ ಅನ್ನು ಕೇಳಿದರು. ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದರು. ಆದರೆ, ಇವತ್ತಿನ ದಿವಸ ರೈತರ ಕತ್ತು ಹಿಸುಕುವಂತಹ ಕೆಲಸ ಮಾಡುತ್ತಿದ್ದಾರೆ. ಭಾರತ ದೇಶದಲ್ಲಿ ಇವತ್ತಿನ ದಿವಸ ಶೇಕಡಾ 60 ರಷ್ಟು ಮಂದಿ ರೈತರು, ರೈತ ಕಾರ್ಮಿಕರು ಮತ್ತು ರೈತ ಮಹಿಳೆಯರು ಇದ್ದಾರೆ. ಇವತ್ತು ಈ ದೇಶ ನಿಂತಿರುವುದು, ಈ ದೇಶದ ಆರ್ಥಿಕ ಪರಿಸ್ಥಿತಿ ಜಾಗತಿಕ ಮಟ್ಟದಲ್ಲಿ ಏನಾದರೂ ಸವಾಲೊಡ್ಡಿದ್ದೇವೆ ಎಂದರೆ ಹಾಗೂ ನಾವು ತಲೆ ಎತ್ತಿ ನಿಂತಿದ್ದೇವೆ ಎಂದರೆ, ಭಾರತ ದೇಶದ ರೈತರಿಂದ, ರೈತ ಕಾರ್ಮಿಕರಿಂದ ಮತ್ತು ರೈತ ಮಹಿಳೆಯಿಂದ ಎಂದು ಪ್ರಧಾನ ಮಂತ್ರಿಗಳು 10 ಬಾರಿ ಭಾಷಣ ಮಾಡಿ ಹೇಳುತ್ತಿರುತ್ತಾರೆ. ಇವತ್ತು ಮಾನ್ಯ ಸಚಿವರು 79ಎ ಮತ್ತು ಬಿ ಯ limitation ಅನ್ನು ತೆಗೆದು ಹಾಕಿದರೆ, ಯಾರು ಬೇಕಾದರೂ ಈ ಭೂಮಿಯನ್ನು ಖರೀದಿ ಮಾಡಬಹುದು, ಈ ದೃಷ್ಟಿಯಿಂದ ಯುವಕರು ವ್ಯವಸಾಯಕ್ಕೆ ಬಂದು ಬಿಡುತ್ತಾರೆ ಎಂದು ವಿವರಣೆ ಕೊಟ್ಟರು. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮತ್ತು ಮಾನ್ಯ ವಿರೋಧ ಪಕ್ಷದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾಯಕರು ಹೇಳಿದ ಹಾಗೆ ಇಂಥ ಶ್ರೀಮಂತ ವರ್ಗ ಕೆಸರಿನಲ್ಲಿ ಇಳಿದು, ಜಮೀನನ್ನು ಊಳುವುದಕ್ಕೆ ಖಂಡಿತವಾಗಿಯೂ ಸಾಧ್ಯ ಇದೆಯೇ, ಇವತ್ತು ಈ ಸರ್ಕಾರದಲ್ಲಿರುವ ಲೋಕಸಭೆ ಇರಬಹುದು, ಯಾವುದೇ ವಿಧಾನಸಭೆಯಲ್ಲಿ ಇರಬಹುದು. ಕರ್ನಾಟಕ ರಾಜ್ಯದ ವಿಧಾನಮಂಡಲದಲ್ಲಿ ಇರಬಹುದು. ಶೇಕಡಾ 80 ರಷ್ಟು ಮಾನ್ಯ ಶಾಸಕರುಗಳು ರೈತ ಕುಟುಂಬದಿಂದ ಬಂದಂತಹವರು. ಇದುವರೆಗೂ ಕೂಡ ಭಾರತ ದೇಶದಲ್ಲಿ ಸ್ವಾತಂತ್ರ ನಂತರ ಬಂದಂತಹ ಸರ್ಕಾರಗಳೆಲ್ಲಾ ರೈತರನ್ನು ಉದ್ಧಾರ ಮಾಡಬೇಕೆನ್ನುವ ದೃಷ್ಟಿಯಿಂದ ಅನೇಕ ಯೋಜನೆಗಳು, ಕಾರ್ಯಕ್ರಮಗಳನ್ನು ಕೊಡುತ್ತಲೇ ಇದ್ದಾರೆ. ಅದರಿಂದ, ಇವತ್ತು ರೈತರು ಇಷ್ಟೊಂದು ಆಹಾರ ಉತ್ಪಾದನೆಯನ್ನು ಮಾಡುತ್ತಿರುವಂತಹದ್ದು. ಇದರಲ್ಲಿ ಕಾಂಗ್ರೆಸ್ ಪಕ್ಷದ ಕೊಡುಗೆ ಅಪಾರ ಎಂದು ಹೇಳಲೇಬೇಕು. 50 ವರ್ಷಗಳಿಂದ ಅನೇಕ ಕಾರ್ಯಕ್ರಮಗಳನ್ನು ತಂದಿರುವುದರಿಂದ, ಇವತ್ತು ರೈತರು ಜಾಗತಿಕ ಮಟ್ಟದಲ್ಲಿ ಭಾರತ ದೇಶವನ್ನು ಆರ್ಥಿಕವಾಗಿ ಕಟ್ಟಿದ್ದಾರೆ. ಭಾರತೀಯ ಜನತಾ ಪಕ್ಷದವರು 6 ವರ್ಷಗಳಿಂದ ಈ ದೇಶವನ್ನು ಆಳುತ್ತಿದ್ದಾರೆ. ಸಂತೋಷ. ಆದರೆ ಇವತ್ತು ಕೂಡ ರೈತರಿಗೋಸ್ಕರ ಅನೇಕ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಪ್ರಧಾನ ಮಂತ್ರಿಗಳು ಮತ್ತು ರಾಜ್ಯ ಸರ್ಕಾರ ಕೊಡುತ್ತಿದೆ. ಇದನ್ನು ಯಾವ ರೀತಿ ಕೊಡುತ್ತಿದೆ ಎಂದರೆ, ಈ ಕೋವಿಡ್-19 ಸಂದರ್ಭದಲ್ಲಿಯೂ ಕೂಡ ಉಪ್ಪಿನಕಾಯಿ ಉಪ್ಪಿಗೆ ಸಾಲುವ ಆಗಿಲ್ಲ. ಎರಡು ಸಾವಿರ ರೂಪಾಯಿಗಳಂತೆ. ಆದೆಷ್ಟೋ ರೈತರ ಖಾತೆಗೆ ರಾಜ್ಯ ಸರ್ಕಾರ ಎರಡು ಕಂತುಗಳಲ್ಲಿ 4 ಸಾವಿರ ರೂಪಾಯಿಗಳನ್ನು ಕೊಡುತ್ತದೆಯಂತೆ. ಕೇಂದ್ರ ಸರ್ಕಾರ ಮೂರು ಕಂತುಗಳಲ್ಲಿ 6 ಸಾವಿರ ರೂಪಾಯಿಗಳನ್ನು ಕೊಡುತ್ತದೆಯಂತೆ. ಇದು ರೈತರನ್ನು ಬದುಕಿಸುವಂತಹ ಕಾರ್ಯಕ್ರಮವಾಗಿದೆಯೇ, ಇವತ್ತು ಭಾರತ ದೇಶದಲ್ಲಿ **'ರೈತ ದೇಶದ ಬೆನ್ನೆಲುಬು'** ಎಂದು ಮಾನ್ಯ ಪ್ರಧಾನ ಮಂತ್ರಿಗಳು, ಎಲ್ಲಾ ಮುಖ್ಯಮಂತ್ರಿಗಳು ಮಾತನಾಡುತ್ತೇವೆ. ಇವತ್ತು ಬೇರೆ ರಾಜ್ಯಗಳಲ್ಲಿ ಇದೆಲ್ಲಾವನ್ನೂ ತೆಗೆದುಬಿಟ್ಟಿದ್ದೇವೆ. ಯಾವುದೇ limitation ಇಲ್ಲ, ಏನೂ ಇಲ್ಲ ಎಂದು ಹೇಳಿದರು. ನಮ್ಮ ದೇಶದಲ್ಲಿ ಒಂದರಲ್ಲಿಯೇ ಈ ರೀತಿ ಇದೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೇಳಿದ ಹಾಗೆ ಕರ್ನಾಟಕ ರಾಜ್ಯದಲ್ಲಿ ಇತಿಹಾಸ ಬೇರೆ. ಮೊದಲು ಕಾಗೋಡಿನಲ್ಲಿ ರೈತ ಪರ ಚಳುವಳಿ ಪ್ರಾರಂಭವಾಯಿತು. ಈ ಚಳುವಳಿಗೆ ಮಾನ್ಯ ಜಯಪ್ರಕಾಶ್ ನಾರಾಯಣ್ ಲೋಹಿಯವರು ಭಾಗವಹಿಸಿ, ನಂತರ ಇವರು ಜೈಲುವಾಸವನ್ನು ಅನುಭವಿಸುತ್ತಾರೆ. ಮಾನ್ಯ ಶಾಂತವೇರಿ ಗೋಪಾಲಗೌಡರವರು, ಮಾನ್ಯ ಕಡಿದಾಳ್ ಮಂಜಪ್ಪನವರ ನೇತೃತ್ವದಲ್ಲಿ ಈ ರಾಜ್ಯದಲ್ಲಿ ದೊಡ್ಡ ಚಳುವಳಿಯಾಗುತ್ತದೆ. ಇತಿಹಾಸದಲ್ಲಿ ಕೊನೆಗೆ ಕಾಂಗ್ರೆಸ್ ಪಕ್ಷದ ನಾಯಕ, ಹಿಂದುಳಿದ ವರ್ಗಗಳ ನಾಯಕರಾದ ಮಾನ್ಯ ಡಿ.ದೇವರಾಜ್ ಅರಸುರವರು ಕಾಂಗ್ರೆಸ್ ಪ್ರಣಾಳಿಕೆಯಂತೆ ಈ ರಾಜ್ಯದಲ್ಲಿ **'ಉಳುವವನಿಗೆ ಭೂಮಿ'** ಎನ್ನುವಂತಹ ಕಾಯ್ದೆಯನ್ನು ತರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(957) 27-09-2020/ 12-40 AM / ಎಲ್‌ಎಂ (ಕೆಹೆಚ್)-ಎಕೆ

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಅಂದಿನಿಂದ ಇಂದಿನವರೆಗೂ ಕೂಡ ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಈ ಕೆಲಸಕ್ಕೆ ಕೈ ಹಾಕಿರಲಿಲ್ಲ. ಸರ್ಕಾರ ಆಡಳಿತ ನಡೆಸುವುದಕ್ಕೆ ಅನುಕೂಲವಾಗುವಂತೆ ಸುಗ್ರಿವಾಜ್ಞೆಯನ್ನು ತರುವುದಕ್ಕೆ ಸಂವಿಧಾನದಲ್ಲಿ ಅವಕಾಶವನ್ನು ಮಾಡಿಕೊಡಲಾಗಿದೆ. ಸರ್ಕಾರದವರು ಸುಗ್ರೀವಾಜ್ಞೆಯನ್ನು ಯಾವ ಸಂದರ್ಭದಲ್ಲಿ ಬಳಕೆ ಮಾಡಬೇಕು ಎನ್ನುವುದು ಸಹ ಅದರಲ್ಲಿ ಉಲ್ಲೇಖ ಮಾಡಲಾಗಿದೆ. ಆದರೆ, ಇಂತಹ ನೀಚ ಕೆಲಸಕ್ಕೆ, ರೈತರ ಕುತ್ತಿಗೆ ಹಿಸುಕುವಂತಹ ಕೆಲಸಕ್ಕೆ ಈ ಸರ್ಕಾರ ಸುಗ್ರೀವಾಜ್ಞೆಯನ್ನು ತಂದಿದೆ. ಇಡೀ ಪ್ರಪಂಚದಲ್ಲಿ ಕೊರೊನಾದಿಂದ ಬದುಕುಳಿದರೆ ಸಾಕು ಎಂದು ಜನರು ಒದ್ದಾಡುತ್ತಿರುವ ಸಂದರ್ಭದಲ್ಲಿ, ಈ ಸರ್ಕಾರ ಸುಗ್ರೀವಾಜ್ಞೆಯನ್ನು ತರುತ್ತದೆ. ಸುಗ್ರಿವಾಜ್ಞೆಯನ್ನು ಎಂತಹ ಪರಿಸ್ಥಿತಿಯಲ್ಲಿ ತರುತ್ತದೆ ಎಂದರೆ, ಜನರು ರಸ್ತೆಗಿಳಿಯದೇ ಇರುವಂತಹ ಪರಿಸ್ಥಿತಿ ಈ ದೇಶದಲ್ಲಿ ಇದ್ದಾಗ ಈ ಸುಗ್ರಿವಾಜ್ಞೆಯನ್ನು ಸರ್ಕಾರ ತರುತ್ತಿದೆ. ಈ ಸುಗ್ರಿವಾಜ್ಞೆಯನ್ನು ತರುವಂತಹ ಅವಸರವಾದರೂ ಏನಿತ್ತು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಸರ್ಕಾರ ಏನಾದರೂ ಬಿದ್ದು ಹೋಗುತ್ತಿತ್ತೇ ಅಥವಾ ಕೊರೊನಾವನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವೇ? ಈ ಸುಗ್ರೀವಾಜ್ಞೆ ತಂದಿರುವುದರಿಂದ ಕೊರೊನಾವನ್ನು ನಿಯಂತ್ರಣಕ್ಕೆ ತರಲು ಸಾಧ್ಯವಾಗಿದೆಯೇ? ಯಾವ ಕಾರಣಕ್ಕಾಗಿ ಈ ಸರ್ಕಾರ ಸುಗ್ರೀವಾಜ್ಞೆಯನ್ನು ತಂದಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಸುಗ್ರೀವಾಜ್ಞೆ ತರುವುದಕ್ಕೆ ಅವಕಾಶವಿದೆ ಎನ್ನುವ ಹಿನ್ನೆಲೆಯಲ್ಲಿ ಈ ಸರ್ಕಾರ ಸುಮಾರು 8-10 ಕಾಯಿದೆಗಳಿಗೆ ಸುಗ್ರೀವಾಜ್ಞೆಯನ್ನು ತಂದಿದೆ. ಈ ಸರ್ಕಾರ ಜನಪರ ಸರ್ಕಾರವೇ? ಇವತ್ತು ಬಂಡವಾಳಶಾಹಿಗಳ ಪರವಾಗಿ ಸರ್ಕಾರ ಈ ವಿಧೇಯಕವನ್ನು ತಂದಿದೆ. ಈ ಕಾಯಿದೆ ಜಾರಿಗೆ ಬಂದರೆ, ಬಂಡವಾಳಶಾಹಿಗಳು ನಮ್ಮ ದೇಶದ ರೈತರ, ರೈತ ಕಾರ್ಮಿಕರ ಮತ್ತು ರೈತ ಮಹಿಳೆಯರ ರಕ್ತ ಹೀರುವಂತಹ ಕೆಲಸವನ್ನು ಮಾಡುತ್ತಾರೆ. ಯಾರು ಸಹ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಶೇಕಡಾ 60 ರಷ್ಟು ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. ಈ ಕಾಯಿದೆ ಜಾರಿಗೆ ಬಂದರೆ ಮುಂದಿನ 4-5 ವರ್ಷಗಳಲ್ಲಿ ಶೇಕಡ 20 ರಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಮತ್ತು ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಸಣ್ಣ ಪ್ರಮಾಣದ ಹಿಡುವಳಿದಾರರು, ರೈತ ಮಹಿಳೆಯರು ಮತ್ತು ಕಾರ್ಮಿಕ ಮಹಿಳೆಯರು ಒಂದರಿಂದ ಅರ್ಧ ಎಕರೆ ಜಮೀನು ಹೊಂದಿರುವಂತವರು, ಶೇಕಡಾ 50 ರಷ್ಟು ಜನರು ಹೈನುಗಾರಿಕೆ ಮಾಡಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ. ಇವರು ಇವತ್ತಿನ ದಿವಸ ಈ ವಿಧೇಯಕವನ್ನು ತಂದಿದ್ದಾರೆ. ಸರ್ಕಾರ ತಂದಿರುವಂತಹ ಈ ಕಾಯಿದೆಯಿಂದಾಗಿ ಮುಂದಿನ ದಿನಗಳಲ್ಲಿ ಬಂಡವಾಳಶಾಹಿಗಳು ಮತ್ತು ಕಂಪನಿಗಳು ಬಂದ್ ಆಗಿದ್ದು, ರೈತರಿಗೆ, ಸಣ್ಣ ಹಿಡುವಳಿದಾರರಿಗೆ ಹಣದ ಆಮಿಷವನ್ನು ತೋರಿಸಿ ರೈತರ ಸಾವಿರಾರು ಎಕರೆ ಜಮೀನುಗಳನ್ನು ಲೂಟಿ ಮಾಡಿ, ಸಾವಿರ ಎಕರೆ, ಎರಡು ಸಾವಿರ ಎಕರೆ, ಮೂರು ಸಾವಿರ ಎಕರೆಯಂತೆ ಮಾರುತ್ತಾರೆ. ಇವರುಗಳು ವ್ಯವಸಾಯ ಮಾಡುತ್ತಾರೆಯೇ? ಈ ರೀತಿಯಾದರೆ, ಕೂಲಿ ಕಾರ್ಮಿಕರ ಮತ್ತು ರೈತ ಕಾರ್ಮಿಕರ ಕಥೆಯೇನಾಗಬೇಕು?

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನಮಂತ್ರಿಗಳು ಆರು ವರ್ಷಗಳ ಹಿಂದಿನ ಚುನಾವಣೆಯ ಪ್ರಣಾಳಿಕೆಯಲ್ಲಿ ದೇಶದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದು ನನ್ನ ಮುಖ್ಯ ಉದ್ದೇಶವೆಂದು ಘೋಷಣೆ ಮಾಡಿದ್ದರು. ಇವತ್ತಿನವರೆವಿಗೂ ದೇಶದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗಿಲ್ಲ. ಆದರೆ, ಈಗ ದೇಶದಲ್ಲಿರುವ ಶೇಕಡಾ 60ರಷ್ಟು ರೈತರನ್ನು, ಅವರ ಹೆಂಡತಿ ಮಕ್ಕಳನ್ನು ಬೀದಿಪಾಲು ಮಾಡುವಂತಹ ಕಾಯಿದೆಯನ್ನು ತರುತ್ತಿದ್ದಾರೆ. ಅವರು ಏನೋ ಮಾಡಿಕೊಂಡು, ಅವರು ಜೀವನವನ್ನು ಮಾಡುತ್ತಿದ್ದಾರೆ. ಇವತ್ತಿನ ದಿವಸ ದೇಶದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳ ಪ್ರಮಾಣ ಹೆಚ್ಚಿದೆಯೇ ಅಥವಾ ಬಂಡವಾಳಶಾಹಿಗಳ ಆತ್ಮಹತ್ಯೆ ಪ್ರಕರಣಗಳ ಪ್ರಮಾಣ ಹೆಚ್ಚಿದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸರ್ವಜ್ಞ ಕವಿಯ ತ್ರಿಪದಿಯೊಂದನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ;

**'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು,**
**ಮೇಟಿಯಿಂ ರಾಟಿ ನಡೆದುದಲ್ಲದ,**
**ದೇಶ ದಾಟವೇ ಕೆಡಗು ಸರ್ವಜ್ಞ'**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರೋ ಐ.ಟಿ./ಬಿ.ಟಿ.ಯವರು ಬಂದು ಭೂಮಿಯನ್ನು ಖರೀದಿ ಮಾಡಿ ವ್ಯವಸಾಯ ಮಾಡುವುದಕ್ಕೆ ಸಾಧ್ಯವೇ? ರೈತರ ಮೇಟಿ ನಡೆಯದಿದ್ದರೆ, ಈ ದೇಶದಲ್ಲಿ ಬೇರೆ ಯಾವುದೇ ಚಟುವಟಿಕೆಗಳು ನಡೆಯುವುದಿಲ್ಲವೆಂದು ಸರ್ವಜ್ಞ ಹೇಳಿದ್ದಾನೆ. ಸರ್ವಜ್ಞ ಹೇಳಿರುವ ಈ ಮಾತನ್ನು ಸುಳ್ಳು ಮಾಡುವುದಕ್ಕೆ ಭಾರತೀಯ ಜನತಾ ಪಕ್ಷದವರಿಗೆ ಮುಂದಿನ ಹತ್ತು ಶತಮಾನಗಳನ್ನು ಕೊಡುತ್ತೇನೆ ಅವರು ಈ ಮಾತನ್ನು ಸುಳ್ಳೆಂದು ಪ್ರಮಾಣೀಕರಿಸಲಿ ನೋಡೋಣ.

ಸನ್ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಸರ್ವಜ್ಞನ ಮತ್ತೊಂದು ವಚನ ನೆನಪಿಗೆ ಬರುತ್ತಿದೆ. ಅದು ಈ ಮುಂದಿನಂತಿದೆ;

**ಅನ್ನ ದೇವರ ಮುಂದೆ ಅನ್ಯ ದೇವರು ಉಂಟೆ?**
**ಅನ್ನ ಇರುವ ತನಕ ಪ್ರಾಣ**
**ಈ ಜಗದೊಳು ಅನ್ನವೇ ದೇವರು ಸರ್ವಜ್ಞ**

ಎಂದು ಬಹಳ ಹಿಂದೆಯೇ ಸರ್ವಜ್ಞ ಹೇಳಿದ್ದಾನೆ. ಇಂತಹ ಅನ್ನದಾತನ ಬಾಯಿಗೆ ಮಣ್ಣು ಹಾಕುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಈ ನಾಡಿನ ಮುಖ್ಯಮಂತ್ರಿಗಳು ಮತ್ತು ರಾಜ್ಯದ ಕಂದಾಯ ಸಚಿವರು ಇವರುಗಳು ಸಹ ರೈತನ ಮಕ್ಕಳಾಗಿದ್ದಾರೆ. ರೈತನ ಕುಟುಂಬದಲ್ಲಿ ಹುಟ್ಟಿರುವಂತಹ ಇವರುಗಳು ಶ್ರೀಮಂತರ ಪರವಾಗಿ ನಿಂತು ಇಂತಹ ನೀಚ ಕೆಲಸಕ್ಕೆ ಕೈ ಹಾಕಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ತಂದಿರುವಂತಹ ಈ ವಿಧೇಯಕದ ವಿರುದ್ಧ ಇಡೀ ರಾಷ್ಟ್ರದಲ್ಲಿ ಕೂಗು ಕೇಳುತ್ತಿರುವ ಸಂದರ್ಭದಲ್ಲಿ ಕೇಂದ್ರ ಸಚಿವ ಸಂಪುಟದಲ್ಲಿನ ಶ್ರೀಮತಿ ಹರ್‌ಸಿಮ್ರತ್ ಕೌರ್ ಬಾದಲ್ ಎನ್ನುವ ಒಬ್ಬ ಹೆಣ್ಣುಮಗಳು ತನ್ನ ಮಂತ್ರಿಸ್ಥಾನಕ್ಕೆ ರಾಜಿನಾಮೆಯನ್ನು ನೀಡಿ ರೈತರ ಪರವಾಗಿ ನಿಂತಿದ್ದಾಳೆ. ರಾಜೀನಾಮೆ ಕೊಟ್ಟಂಥ ಸಂದರ್ಭದಲ್ಲಿ ಆಕೆ, 'ಈ ವಿಧೇಯಕವನ್ನು ತರಲು ತಯಾರಿ ನಡೆಸುತ್ತಿದ್ದ ಕಾಲದಿಂದಲೂ ನಾನು ಇದನ್ನು ವಿರೋಧಿಸುತ್ತಾ ಬಂದಿದ್ದೇನೆ. ಎಲ್ಲಾ ಸಂದರ್ಭದಲ್ಲಿಯೂ ನಾನು ವಿರೋಧಿಸಿದ್ದೇನೆ. ಆದರೂ ಸಹ ಈ ವಿಧೇಯಕವನ್ನು ತಂದಿದ್ದಾರೆ. ಇದನ್ನು ನಾನು ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವಿಧೇಯಕವನ್ನು ತರುವುದರ ಮೂಲಕ ಈ ದೇಶದಲ್ಲಿ ರೈತರ ಕುತ್ತಿಗೆ ಹಿಸುಕುವಂತಹ ಕೆಲಸ ನಡೆಯುತ್ತಿದೆ. ಈ ಕಾರಣದ ಹಿನ್ನೆಲೆಯಲ್ಲಿ ನಾನು ರಾಜಿನಾಮೆ ನೀಡುತ್ತಿದ್ದೇನೆ' ಎನ್ನುವ ಮಾತನ್ನು ಹೇಳಿದ್ದಾಳೆ. ಇಂತಹ ದಿಟ್ಟ ವೀರ ಮಹಿಳೆಯನ್ನು ನಾವು ಸ್ಮರಿಸಬೇಕೇ ಅಥವಾ ಇಂತಹವರನ್ನು ನಾವು ಸ್ಮರಿಸಬೇಕೇ. ರೈತರಿಗೆ ಅನ್ಯಾಯ ಮಾಡುತ್ತಿರುವವರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂತಹವರ ಜೊತೆಯಲ್ಲಿ ನಾವು ಕೈಜೋಡಿಸಬೇಕೇ. ಯುವಕರು ಬರುತ್ತಾರಂತೆ. ಎಷ್ಟೋ ಸಾವಿರ ಕೇಸ್‌ಗಳು ಇತ್ಯರ್ಥವಾಗದೇ ಉಳಿದಿವೆಯಂತೆ, ಇದರಿಂದ ಯಾವ ಬಡ ರೈತನಿಗೆ ತೊಂದರೆಯಾಗಿದೆ. ಈ ಕೇಸ್‌ಗಳಲ್ಲಿ ಸಿಕ್ಕಿ ಹಾಕಿಕೊಂಡಿರುವವರು ಕಳ್ಳಕುಳಗಳೇ ಹೊರತು ರೈತರಲ್ಲ. ಅವರು ಪರಿಣಾಮವನ್ನು ಅನುಭವಿಸಲಿಬಿಡಿ, ಆದರೆ, ಸರ್ಕಾರ ಕಾಯಿದೆ ಮಾಡಿ ಅಸಿಸ್ಟೆಂಟ್ ಕಮೀಶನರ್‌ಗಳಿಗೆ ಅಧಿಕಾರ ಕೊಟ್ಟುಬಿಟ್ಟರು. ಅಸಿಸ್ಟೆಂಟ್ ಕಮೀಶನರ್‌ಗಳಿಗೆ ಯಾರ್ಯಾರು ಹಿಂಬಾಗಿಲಿನಿಂದ ಕೋಟಿಗಟ್ಟಲೆ ಹಣವನ್ನು ನೀಡಿದರು ಅವರುಗಳಿಗೆ ಒಂದು ಸರ್ಟಿಫಿಕೇಟ್ ನೀಡಿ ಕೇಸ್‌ಗಳನ್ನು ಕ್ಲಿಯರ್ ಮಾಡುತ್ತಿದ್ದರು. ಈಗ ಉಳಿದುಕೊಂಡಿರುವವರು ಕಾಸು ಕೊಡದೇ ಇರುವವರು. ಕಾಸು ಕೊಡದೇ ಇರುವವರು ಯಾರೆಂದರೆ, ಭಾರಿ ಭಾರಿ ಕುಳಗಳು, ಶಿಫಾರಸ್ಸು ಇರುವವರು. ಈಗ ಇತ್ಯರ್ಥವಾಗಿರುವ ಪ್ರಕರಣಗಳ ಬಗ್ಗೆ ತನಿಖೆ ಮಾಡಿಸಲಿ, ಒಂದೇ ಒಂದು ಪ್ರಕರಣವನ್ನು ಅಸಿಸ್ಟೆಂಟ್ ಕಮೀಶನರ್‌ರವರು ಕಾನೂನುಬದ್ಧವಾಗಿ ಇತ್ಯರ್ಥಗೊಳಿಸಿದ್ದರೆ, ಸರ್ಕಾರ ನನ್ನನ್ನು ಜೈಲಿಗೆ ಕಳುಹಿಸಲಿ. ಭ್ರಷ್ಟಾಚಾರದ ಮೂಲಕ ಅಸಿಸ್ಟೆಂಟ್ ಕಮೀಶನರ್‌ಗಳು ಸರ್ಟಿಫಿಕೇಟ್ ನೀಡಿ ಕೇಸ್‌ಗಳನ್ನು ಕ್ಲಿಯರ್ ಮಾಡಿದ್ದಾರೆ. ಯಾರು ಹಣ ಕೊಟ್ಟಿಲ್ಲ ಅವರ ಪ್ರಕರಣಗಳನ್ನು ಇನ್ನೂ ಕೂಡಿಹಾಕಿದ್ದಾರೆ. ಇವುಗಳನ್ನು ಹೊರತರುವುದಕ್ಕೆ ಈ ವಿಧೇಯಕವನ್ನು ತರಲಾಗುತ್ತಿದೆ ಎಂದು ಇವರು ಹೇಳುತ್ತಿದ್ದಾರೆ. ಇವತ್ತು ಬೆಂಗಳೂರು ನಗರದ ಒಂದು ನೂರು ಕಿಲೋಮೀಟರ್ ಸುತ್ತಮುತ್ತ ಇರುವಂತಹ ಬಡವರು ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರ ಬಳಿಯೂ ಭೂಮಿ ಇಲ್ಲ. ಎಲ್ಲ ಜಮೀನು ಶ್ರೀಮಂತರ ಪಾಲಾಗಿವೆ. ಮೈಸೂರು ನಗರದಿಂದ ಸುಮಾರು 40 ಕಿಲೋಮೀಟರ್ ದೂರದವರೆಗೆ ಯಾವ ರೈತರ ಬಳಿಯೂ ಜಮೀನುಗಳು ಉಳಿದಿಲ್ಲ. ಅವರುಗಳು ಜಮೀನುಗಳನ್ನು ಮಾರಾಟ ಮಾಡಿ, ಮೈಸೂರು ನಗರದಲ್ಲಿ ಕೂಲಿ ಕೆಲಸಕ್ಕೆ ಬರುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಒಂದು ದಿನ ಬೆಳಗಿನ ಜಾವ ಮೈಸೂರು ಪಕ್ಕದಲ್ಲಿರುವ ಬಸವನಹಳ್ಳಿ, ಉದ್ದನೂರಿಗೆ ಹೋಗಿ ನೋಡಿ, ಒಂದೇ ಊರಿನಿಂದ ಸುಮಾರು 4–5 ಬಸ್ಸುಗಳಲ್ಲಿ ಕೂಲಿಕಾರ್ಮಿಕರು ಮೈಸೂರಿಗೆ ಬರುತ್ತಿರುತ್ತಾರೆ. ಇವರೆಲ್ಲರೂ ಸುಮಾರು 15–20 ವರ್ಷಗಳ ಹಿಂದೆ ಜಮೀನ್ದಾರರಾಗಿದ್ದವರು. ಇವತ್ತು ಅವರುಗಳು ಭೂಮಿ ಮತ್ತು ಹಣ ಎರಡನ್ನೂ ಕಳೆದುಕೊಂಡು ಮೈಸೂರು ನಗರಕ್ಕೆ ಕೂಲಿ ಮಾಡುವುದಕ್ಕಾಗಿ ಬರುತ್ತಿದ್ದಾರೆ. ಅದೇ ರೀತಿಯಲ್ಲಿ ಲಕ್ಷಾಂತರ ಜನ ಬೆಂಗಳೂರು ನಗರದ ಸುತ್ತಮುತ್ತಲಿರುವ ರೈತರು ತಮ್ಮ ಜಮೀನುಗಳನ್ನು ಕಳೆದುಕೊಂಡು ಭಿಕಾರಿಗಳಾಗಿದ್ದಾರೆ. ಬೆಂಗಳೂರು ನಗರಕ್ಕೆ ಬಂದು ಹೋಟೆಲ್ ಅಥವಾ ಬಾರ್ ಮುಂತಾದ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಈ ಸರ್ಕಾರ ಅರ್ಥ ಮಾಡಿಕೊಂಡಿಲ್ಲ. ಈ ವಿಧೇಯಕದಿಂದ ಯಾರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪಯೋಗವಾಗುತ್ತಿದೆ ಎನ್ನುವುದನ್ನು ಅವರೇ ಹೇಳಬೇಕಾಗಿದೆ. ಈ ವಿಧೇಯಕವನ್ನು ತರುವುದಕ್ಕೂ ಮೊದಲು ಇವರು ಯಾರ ಜೊತೆಗೆ ಚರ್ಚೆ ಮಾಡಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇಡೀ ದೇಶದಲ್ಲಿ ಈ ಕಾಯಿದೆಯ ಬಗ್ಗೆ ವ್ಯಾಪಕವಾದ ವಿರೋಧ ವ್ಯಕ್ತವಾಗುತ್ತಿದೆ. ಈ ವಿಧೇಯಕವನ್ನು ವಿರೋಧಿಸಿ ಸಚಿವ ಸಂಪುಟಕ್ಕೆ ರಾಜಿನಾಮೆ ನೀಡಿರುವಂತಹ ಶ್ರೀಮತಿ ಹರ್‌ಸಿಮ್ರತ್ ಕೌರ್ ಬಾದಲ್ ಪರವಾಗಿ ನಾವೆಲ್ಲರೂ ನಿಲ್ಲಬೇಕಾಗಿದೆ. ಅಂತಹ ಒಂದು ಹೆಣ್ಣು ಮಗಳಿಗೆ ಇಷ್ಟೊಂದು ಹಿಂಸೆ ಈ ವಿಧೇಯಕದಿಂದ ಆಗಿದೆ. ಈ ವಿಧೇಯಕವನ್ನು ಆಕೆ ಅರ್ಥ ಮಾಡಿಕೊಂಡಿರುವಷ್ಟು ಈ ಭಾರತೀಯ ಜನತಾ ಪಕ್ಷದ ಸರ್ಕಾರ ಅರ್ಥ ಮಾಡಿಕೊಂಡಿಲ್ಲ. ಕಳೆದ ಒಂದು ತಿಂಗಳಿನಿಂದ ಈ ನಾಡಿನುದ್ದಕ್ಕೂ ರೈತರು, ಕೂಲಿ ಕಾರ್ಮಿಕರು, ದಲಿತ ಸಂಘಟನೆಗಳು, ಸಾಹಿತಿಗಳು ಮತ್ತು ಎಲ್ಲಾ ಹಿಂದುಳಿದ ವರ್ಗಗಳ ಸಂಘಟನೆಗಳು ಈ ಕಾಯಿದೆಯನ್ನು ಸುಗ್ರಿವಾಜ್ಞೆಯ ಮೂಲಕ ತಂದಿರುವುದರ ವಿರುದ್ಧ ಚಳುವಳಿ ಮಾಡುತ್ತಿದ್ದಾರೆ. ಇವರೆಲ್ಲರೂ ಮೂರ್ಖರೇ? ಇವರೆಲ್ಲರೂ ಶ್ರೀಮಂತರ ಪರವಾಗಿದ್ದಾರೆಯೇ ಅಥವಾ ವಿರೋಧವಾಗಿದ್ದಾರೆಯೇ ಎನ್ನುವುದನ್ನು ಈ ಸರ್ಕಾರ ಅರ್ಥ ಮಾಡಿಕೊಂಡಿಲ್ಲ. ದಯಮಾಡಿ ಈ ದೇಶದಲ್ಲಿ ಇದು ಒಂದು ದೊಡ್ಡ ದುರಂತವಾಗಿದೆ.

**(ಮುಂದು)**

**(958)27-09-2020(12-50AM)ಬಿಎಸ್‌ಡಿ-ಎಕೆ**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಮಾನ್ಯ ಸಭಾಪತಿಯವರೇ, ರೈತನನ್ನು ನಾವು ಯಾವರೀತಿ ಇಟ್ಟಿದ್ದೇವೆ ಎಂದರೆ 2006ನೇ ಸಾಲಿನಲ್ಲಿ ಡಾ:ಎಂ.ಎಸ್. ಸ್ವಾಮಿನಾಥನ್ ವರದಿ ಬಂತು. ಈ ದಿನವವರೆಗೂ ಈ ವರದಿಯನ್ನು ಯಾವ ಸರ್ಕಾರವು ಅನುಷ್ಠಾನಕ್ಕೆ ತರಲಿಲ್ಲ, ಇವತ್ತು ಈ ವರದಿಯನ್ನು ಜಾರಿಗೆ ತಂದಿದ್ದರೆ ನಮ್ಮ ದೇಶದಲ್ಲಿ ಉತ್ಪಾದನೆ ದುಪ್ಪಟ್ಟು ಆಗುತ್ತಿತ್ತು. ರೈತರಿಗೆ ಇನ್ನೂ ಹೆಚ್ಚಿನ ಸವಲತ್ತುಗಳು ಸಿಗುತ್ತಿತ್ತು. ಆದರೆ ಈ ವರದಿಯನ್ನು ಜಾರಿಗೆ ತರಲು ಯಾರೂ ಪ್ರಯತ್ನ ಮಾಡಲಿಲ್ಲ. ರೈತ ಕಾರ್ಮಿಕರ ಬಗ್ಗೆ ಬರೀ ಮೊಸಳೆ ಕಣ್ಣೀರು ಸುರಿಸುತ್ತಾರೆ.

**ಡಾ: ವೈ.ಎ. ನಾರಾಯಣಸ್ವಾಮಿः-** ಮಾನ್ಯ ಸಭಾಪತಿಯವರೇ, ತಾವು ನಮ್ಮ ನೆರವಿಗೆ ಬರಬೇಕು.

**ಸಭಾಪತಿಯವರುः-** ಈಗ ನಾನು ನಿಮ್ಮ ನೆರವಿಗೆ ಬಂದಿದ್ದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ನಮ್ಮ ನೆರವಿಗೆ ಬರಬೇಕು. ಈಗ ರಾತ್ರಿ ಒಂದು ಗಂಟೆಯಾಗಿದೆ, ನಮ್ಮ ನೆರವಿಗೆ ಬರದಿದ್ದರೆ ಹೇಗೆ? ಆ ಹೆಣ್ಣುಮಗಳು ಯಾವಾಗ ಮನೆಗೆ ಹೋಗುವುದು? ಏನು ಕತೆ ಇದು? ನಮಗೆ ಸಾಕಾಗಿ ಹೋಗಿದೆ. 26ನೇ ತಾರೀಖು session ಮುಗಿದುಹೋಗಿದೆ. ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು.

**ಶ್ರೀ ಮರಿತಿಬ್ಬೇಗೌಡ:–** ಈ ರೀತಿ disturb ಮಾಡಿದರೆ ನಾನು ರಾತ್ರಿಯಿಡಿ ಮಾತನಾಡುತ್ತೇನೆ. ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರು ನಾಲ್ಕನೆಯ ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. ನಾವು ಬಹಳ ಸಂತೋಷ ಪಡುತ್ತೇವೆ. ಆದರೆ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು, ರೈತರ ಹಸಿರು shawl ಹಾಕಿಕೊಂಡರು. ರೈತರ vote ಪಡೆದರು, ಎಲ್ಲವನ್ನು ಮಾಡಿದರು. ಆದರೆ ನಾಲ್ಕು ಬಾರಿ ಮುಖ್ಯಮಂತ್ರಿಗಳಾದರೂ ಒಂದೇ ಒಂದು ಬಾರಿ ರೈತರಿಗೆ ಸಾಲ ಮನ್ನಾ ಮಾಡಲಾಗಲಿಲ್ಲ. ಮಾನ್ಯ ಸಿದ್ದರಾಮಯ್ಯ ರೂ.50 ಸಾವಿರದವರೆಗೆ ಸಾಲ ಮನ್ನಾ ಮಾಡಿದರು ಮತ್ತು ಮಾನ್ಯ ಕುಮಾರಸ್ವಾಮಿಯವರು ರೂ. 2 ಲಕ್ಷದವರೆಗೆ ಸಾಲ ಮನ್ನಾ ಮಾಡಿದರು. ಈ ದೇಶದಲ್ಲಿ ಇದೊಂದು ದೊಡ್ಡ ಕೀರ್ತಿ. ಮಾನ್ಯ ಸಿದ್ದರಾಮಯ್ಯನವರು ಒಂದು ಸಾರಿ ಮತ್ತು ಮಾನ್ಯ ಕುಮಾರಸ್ವಾಮಿಯವರು ಎರಡು ಸಾರಿ ಮುಖ್ಯಮಂತ್ರಿಗಳಾಗಿದ್ದರು. ರೈತರ ಪರವಾಗಿ ಬಿಜೆಪಿ ಇದೆಯೇ? ಇವತ್ತು ರೈತರ ಪರವಾಗಿ ಜನತಾದಳ ಅಥವಾ ಕಾಂಗ್ರೆಸ್ ಇದೆಯೇ? ಈ ಮಸೂದೆಯಿಂದ ರೈತರಿಗೆ ಏನೂ ಅನ್ಯಾಯವಾಗುವುದಿಲ್ಲ ಎಂದು ಹೇಳುತ್ತಾರೆ. ಇದರಿಂದ ರೈತರು ಎನ್ನುವವರ್ಯಾರೂ ಉಳಿಯುವುದಿಲ್ಲ. ಸಣ್ಣ ರೈತರ ಕತೆ ಏನು? ಇದು "ಕೊರಮಾರಿ ಸಸಿಲಿಗೆ ಮಿತ್ತಾದಂತೆ" ಎಂಬ ಗಾದೆ ಮಾತಿದೆ. ಅಂದರೆ ದೊಡ್ಡ ದೊಡ್ಡ ಮೀನುಗಳೆಲ್ಲವೂ ಕಚ್ಚಾಡಿ ಸಸಿಲು ಮೀನನ್ನು ತಿಂದುಕೊಂಡಂತೆ ಸಣ್ಣ ರೈತರನ್ನು ಬಿಜೆಪಿಯವರು ತಿಂದುಕೊಳ್ಳುತ್ತಾರೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಅನೇಕ ಸದಸ್ಯರುಗಳಿಗೆ B.P (Blood Pressure), Diabetes ಇದೆ. ಈಗ ರಾತ್ರಿ ಒಂದು ಗಂಟೆಯಾಗುತ್ತಿದೆ, ಇದಲ್ಲದೇ ಕೊರೊನಾ ಕಾಟ ಬೇರೆ ಇದೆ. ಇದು ಸರಿಯೇ? ಅವರು ಮಾತನಾಡಲಿ, ಅವರು ಮಾತನಾಡುತ್ತಾರೆ, ಇಲ್ಲವೆಂದೆನೂ ಇಲ್ಲ, ಆದರೆ ಮಾತನಾಡಿದ್ದನ್ನೇ ಮಾತನಾಡುತ್ತಾರೆ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಅವರು ಬಿಲ್ ಬಗ್ಗೆ ಮಾತನಾಡಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri S.T. SOMASHEKHAR:** Section 79A, Section 79B ಬಗ್ಗೆ ಮಾತನಾಡಲಿ. *...(Interruptions)...* Let the Hon. Member speak about Section 79A and Section 79B. *...(Interruptions)...* Because it is not a political speech. Let him tell whether repealing of Section 79A and Section 79B is correct or not. ಇದು political speech ಅಲ್ಲ. ಇದರ ಬಗ್ಗೆ ಏನಿದೆಯೋ ಮಾತನಾಡಲಿ. ನಾವು ಸಮಾಧಾನದಿಂದ ಕುಳಿತಿದ್ದೇವೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡಃ–** ಮಾನ್ಯ ಸಭಾಪತಿಯವರೇ, ಈ ಬಿಲ್ ಬಗ್ಗೆ ಹೀಗೆ ಮಾತನಾಡಬೇಕು ಎಂದು ನನಗೆ direct ಮಾಡಲು ಯಾರಿಗೂ ಅಧಿಕಾರ ಇಲ್ಲ. ನನಗೂ ಗೊತ್ತಿದೆ, ನಾನು 20 ವರ್ಷಗಳಿಂದ ಇದ್ದೇನೆ. ಮಾನ್ಯ ಸಭಾಪತಿಯವರಿಗೆ ಮಾತ್ರ ಅಧಿಕಾರ ಇದೆ, ಬೇರೆಯವರ್‍ಯಾರಿಗೂ ಅಧಿಕಾರ ಇಲ್ಲ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿಃ–** ಸಹನೆಗೂ ಒಂದು ಲಿಮಿಟ್ ಇದೆ. There is a limit to our patience. ಮಾನ್ಯ ಸಭಾಪತಿಯವರೇ, ನಾಳೆ ಬೆಳಿಗ್ಗೆ.......... ಹೇಳಿದ್ದೇ ಹೇಳುತ್ತಿರುವುದು. ಹಾಡಿದ್ದೇ ಹಾಡು ಕಿಸ್‌ಬಾಯಿ ದಾಸ ಎನ್ನುವಂತೆ ಆಗಿದೆ.

**(ಗೊಂದಲ)**

**ಶ್ರೀ ಎಸ್.ಟಿ. ಸೋಮಶೇಖರ್‌ಃ–** ನಾವು ಸಮಾಧಾನದಿಂದ ಕುಳಿತಿದ್ದೇವೆ. ಅವರೊಬ್ಬರೇ ಮಾತನಾಡುವುದೇ? ಮಾನ್ಯ ಅಶೋಕ್‌ರವರು ಹೇಳುವುದನ್ನು ಹೇಳಿದ್ದಾರೆ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿಃ–** ಈಗ ಸಮಯ ಒಂದು ಗಂಟೆ ಆಗಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್‌ಃ–** ಮಾನ್ಯ ಸಭಾಪತಿಯವರೇ, ಅವರು ಏನು ಮಾತನಾಡುತ್ತಾರೋ, ಮಾತನಾಡಲಿ, ಅವರು correct ಆಗಿ ಮಾತನಾಡುತ್ತಿದ್ದಾರೆ. ಅವರು ಇನ್ನೂ ಸ್ವಲ್ಪ ಮಾತನಾಡಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರಲ್ಲಿ ಏನಿದೆ, ಖರ್ಚು ಆಗುವುದು? ಅದರಲ್ಲಿ ಆತುರ ಏನೂ ಬೇಡ. ಅವರು ಹೇಳಿದಂತೆ ಮಾತನಾಡಬೇಕೇ? ಅವರಿಗೆ ಚುಚ್ಚುತ್ತಿದೆಯೇ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ,..........

20.**ಸಾರಾಂಶ**

**ಸಭಾಪತಿಯವರು:–**

**(ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಕಲಾಪವು ಬೆಳಗಿನ ಜಾವ 12 ಗಂಟೆ 56 ನಿಮಿಷಕ್ಕೆ ಮುಕ್ತಾಯವಾಯಿತು)**

**(ಸದನವನ್ನು ರಾಷ್ಟ್ರಗೀತೆಯೊಂದಿಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)**

<><><>

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”